TIGHT BINDING BOOK

# THE BOOK WAS DRENCHED

**OSMANIA UNIVERSITY**
**LIBRARY**

Call No. K 83 G 29 R

Name of Book [illegible]

Name of Au[illegible] [illegible]

UNIVERSAL LIBRARY
OU_200128
UNIVERSAL LIBRARY

ಡಾಕ್ಟರ ಜಾನಸನ್ ಸಾಹೇಬರ

# ರಾಸೆಲಾಸ್.

ಜೀವಾಜಿ ವಿಷ್ಣು ಗೋರೆ

ಧಾರವಾಡ.

೨ನೆಯ ಆವೃತ್ತಿ.

೧೯೨೩.

ಬೆಲೆ ೧ ರೂ.

ಈ ಪುಸ್ತಕವನ್ನು ರಾ|| ಸದಾಶಿವ ಕೃಷ್ಣ ಜೋಶಿ ಇವರು ಧಾರವಾಡ ಕರ್ನಾಟಕ ಪ್ರಿಂಟಿಂಗ ವರ್ಕ್ಸ ಮುದ್ರಣಾಲಯದಲ್ಲಿ ಮುದ್ರಿಸಿದರು ಮತ್ತು ಜೀವಾಜಿ ವಿಷ್ಣು ಗೋಠೆ ಇವರು ಮಾಳಮಡ್ಡಿಯಲ್ಲಿರುವ ತಮ್ಮ ಮನೆಯಲ್ಲಿ ಪ್ರಸಿದ್ಧಿಸಿದರು.

# ಪ್ರಸ್ತಾವನೆಯು.

" ರಾಸೆಲಾಸ " ಎಂಬ ಈ ಕಾದಂಬರಿಯು ಯಾವ ಮೂಲ ಗ್ರಂಥದಿಂದ ಭಾಷಾಂತರಿಸಲ್ಪಟ್ಟಿರುವದೋ, ಆ ಗ್ರಂಥದ ವಿಷಯಕ್ಕೂ, ಆ ಗ್ರಂಥವನ್ನು ಬರೆದ ಸತ್ಪುರುಷನ ವಿಷಯಕ್ಕೂ, ತುಸು ಬರೆಯುವದು ಅವಶ್ಯವಾಗಿ ತೋರುತ್ತದೆ. ಇಗ್ಲಂಡದಲ್ಲಿ ಒಳ್ಳೇ ಖ್ಯಾತಿಯನ್ನು ಹೊಂದಿದಂಥ, ದೊಡ್ಡ ವಿದ್ವಾಂಸನಾದಂಥ, ಎಲ್ಲಕ್ಕೂ ಮೊದಲು ಇಂಗ್ಲೀಷ ಭಾಷೆಯ ಕೋಶವನ್ನು ರಚಿಸಿದಂಥ ಡಾಕ್ಟರ ಜಾನಸನ್ ಎಂಬ ಪ್ರಸಿದ್ಧ ಪುರುಷನು ಈ ಗ್ರಂಥವನ್ನು ಇಂಗ್ಲೀಷ ಭಾಷೆಯಲ್ಲಿ ಬರೆದನು. ಈ ಜಗದ್ವಿಖ್ಯಾತ ಪುರುಷನು ಇಂಗ್ಲಂಡ ದೇಶದೊಳಗೆ ಸ್ಟ್ಯಾಫರ್ಡ ಶಾಯರದಲ್ಲಿರುವ ಲಿಚ್‌ಫೀಲ್ಡ ಎಂಬ ಊರಲ್ಲಿ ಸನ್ ೧೭೦೯ನೇ ಇಸವಿಯಲ್ಲಿ ಹುಟ್ಟಿದನು. ಈತನ ತಾಯಿತಂದೆಗಳು ಬಡವರಿದ್ದರು. ಆದ್ದರಿಂದ ಈತನ ಪ್ರಾಥಮಿಕ ಶಿಕ್ಷಣವು ಲಿಚ್‌ಫೀಲ್ಡದಲ್ಲಿ ಕೇವಲ ಬಡಬಗ್ಗರಿಗಾಗಿ ಸ್ಥಾಪಿಸಿದ ಶಾಲೆಯಲ್ಲಿ ಆಯಿತು. ಈತನು ಬಹಳ ಚಂಚಲ ಸ್ವಭಾವದವನಾದುದರಿಂದ ಒತ್ತಟ್ಟಿಗೆ ಒಮ್ಮನಸ್ಸಿನಿಂದ ಒಂದು ಕಡೆ ಸಹ ಕೂಡ್ರುತ್ತಿದ್ದಿಲ್ಲ. ಆದರೆ ಈತನ ಸ್ಮರಣಶಕ್ತಿಯು ವಿಲಕ್ಷಣವಾಗಿದ್ದುದರಿಂದ ಒಮ್ಮೆ ಓದಿದ್ದನ್ನು ಈತನು ಎಂದೂ ಮರೆಯುತ್ತಿದ್ದಿಲ್ಲ. ಈತನ ಕುಶಾಗ್ರಬುದ್ಧಿಯ ಬಗ್ಗೆ ಈತನ ಗುರುವಾದ ಡಾಕ್ಟರ ಹಂಟರ್ ಎಂಬವನು ಜಾನಸನ್ನ ಸಾಹೇಬನ ಚರಿತ್ರಕಾರನಾದ ಬಾಸವೆಲ್ಲನಿಗೆ ಒಮ್ಮೆ ಹೀಗೆ ಅಂದು ತೋರಿಸಿದನು. "ನಾನು ಹೆಸರಿಗೆ ಮಾತ್ರ ಜಾನಸನ್ನನ ಗುರುವಾಗಿದ್ದೆನು. ಚನ್ನಾಗಿ ವಿಚಾರಮಾಡಿ ನೋಡಿದರೆ ಆತನು ನನಗಿಂತಲೂ ಹೆಚ್ಚು ಬಲ್ಲವನಿದ್ದನು." ಅವನ ಪ್ರಾಥಮಿಕ ಶಿಕ್ಷಣವಾಗಿನ ಬಳಿಕ ಪೆಂಬ್ರೋಕ ಕಾಲೇಜದಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಹೋದನು. ಈತನ ತಂದೆಯು ಬಡವನಿದ್ದನೆಂದು ಮೇಲೆ ಹೇಳಿರುತ್ತದಷ್ಟೇ ; ಕಾಲೇಜದ ವೆಚ್ಚ ಕೊಡುವದು ಅವನಿಂದ ಆಗುತ್ತಿದ್ದಿಲ್ಲ. ಆದರೆ ಸುದೈವದಿಂದ ಜಾನಸನ್ನನಿಗೆ ಶ್ರೀಮಂತ ಸಹಾಧ್ಯಾಯಿಯು ಸಿಕ್ಕನು. * ಆತನೊಡನೆ ಕೆಲವು ದಿವಸ ಕಾಲೇಜದ ಉಚ್ಚ ಶಿಕ್ಷಣವು ಜಾನಸನ್ನನಿಗೆ ಸಿಕ್ಕಿತು. ಆದರೆ ಶ್ರೀಮಂತರಿಗೆ ವಿದ್ಯದ ಅಭಿರು

---

* ಇಂಗ್ಲಂಡದೊಳಗಿನ ದೈವವುಳ್ಳ ಜನರು ತಮ್ಮ ಮಕ್ಕಳ ಜೋಡಿಗಾಗಿ ಬೇರೊಬ್ಬ ಬಡಹುಡುಗನನ್ನು ಇಟ್ಟು ಆತನ ವೆಚ್ಚವನ್ನು ತಾವೇ ಕೊಡುತ್ತಿರುತ್ತಾರೆ.

ಚಿಯು ಅಷ್ಟಕ್ಕಷ್ಟೇ ಇರುವದರಿಂದ ಆ ಸಹಾಧ್ಯಾಯಿಯು ಕೂಡಲೆ ಕಾಲೇಜದಿಂದ ಸ್ವದೇಶಕ್ಕೆ ತೆರಳಿದನು. ಆಮೇಲೆ ದುಡ್ಡಿನ ಕೊರತೆಯ ಮೂಲಕ ಜಾನಸನ್ನನೂ ಕಾಲೇಜದ ಆಶೆಯನ್ನು ಬಿಡಬೇಕಾಯಿತು.

ಮುಂದೆ ಜಾನಸನ್ ಸಾಹೇಬರಿಗೆ ಗುರುಮುಖದಿಂದ ಆಗತಕ್ಕ ಶಿಕ್ಷಣವು ದೊರೆಯದ ಹಾಗಾಯಿತು. ಆ ಮೇಲೆ ಈತನು ವಾಚನದಿಂದ ತನ್ನ ಜ್ಞಾನವನ್ನು ಬೆಳಿಸಹತ್ತಿದನು. ಈ ಮೇರೆಗೆ ಜ್ಞಾನಾರ್ಜನದ ಸ್ತುತ್ಯವಾದ ಉದ್ಯೋಗದಲ್ಲಿ ತೊಡಗಿರುವಾಗಲೆ ಈತನ ತಂದೆಯು ತೀರಿದನು. ಸಂಸಾರದ ಭಾರವು ಈತನ ಮೇಲೆ ಬಿತ್ತು. ಆದುದರಿಂದ ಈತನು ತನ್ನ ಕುಟುಂಬಸಂರಕ್ಷಣೆಯ ಸಲುವಾಗಿ ಫ್ರೆಂಚ, ಲ್ಯಾಟಿನ್ನ ಮುಂತಾದ ಭಾಷೆಯೊಳಗಿನ ಗ್ರಂಥಗಳ ಭಾಷಾಂತರವನ್ನೂ ಹೊಸ ಹೊಸ ಗ್ರಂಥಗಳ ಮೇಲೆ ಟೀಕೆಯನ್ನೂ, ಪ್ರಸಿದ್ಧ ಪುರುಷರ ಚರಿತ್ರವನ್ನೂ ಬೇರೆಬೇರೆ ವಿಷಯಗಳ ಮೇಲೆ ನಿಬಂಧವನ್ನೂ ನೂತನ ಕವಿತ್ವವನ್ನೂ ಬರೆಯಲಾರಂಭಿಸಿದನು. ಇಷ್ಟು ಶ್ರಮಮಾಡಿದರೂ ಈತನ ಕುಟುಂಬಪೋಷಣವಾಗುವದಕ್ಕೆ ಬಹು ಪ್ರಯಾಸವಾಗುತ್ತಿತ್ತು. ಸರಸ್ವತಿಯು ವಾಸವಿದ್ದಲ್ಲಿ ಲಕ್ಷ್ಮಿಯು ಇರುವದಿಲ್ಲೆಂಬದರ ಪ್ರತ್ಯಕ್ಷ ಪ್ರಮಾಣ ಬೇಕಾದರೆ ಜಾನಸನ್ನ ಸಾಹೇಬರ ಆದ್ಯಂತ ಚರಿತ್ರವನ್ನು ಮನಮುಟ್ಟಿ ಓದಿದರೆ ಚನ್ನಾಗಿ ತಿಳಿಯುವದು. ಈ ಮೇರೆಗೆ ಜಾನಸನ್ನನು ಗ್ರಂಥಲೇಖನವನ್ನು ಕೈಕೊಂಡ ತರುವಾಯ, ಸನ್ನ ೧೭೩೮ನೇ ವರ್ಷ 'ಲಂಡನ್' ಎಂಬ ಗ್ರಂಥವನ್ನೂ, ೧೭೪೯ನೇ ವರ್ಷ 'Vanity of Human Wishes' (ಮಾನವಾಶೆಗಳ ವೈಫಲ್ಯವು) ಎಂಬ ಗ್ರಂಥವನ್ನೂ ಸನ್ನ ೧೭೫೦-೫೨ ವರ್ಷಗಳಲ್ಲಿ ರಾಂಬಲರ ಎಂಬ ಗ್ರಂಥವನ್ನೂ ಬರೆದನು. ರಾಸೇಲಸ ಕಾದಂಬರಿಯನ್ನು ಸನ್ನ ೧೭೫೯ನೇ ಇಸವಿಯಲ್ಲಿ ರಚಿಸಿದನು. ಜಾನಸನ್ನನು ಕೆಲವು ವರ್ಷಗಳ ಹಿಂದೆ ಲೋಬೋ ಎಂಬ ಪೋರ್ತುಗಾಲದ ಪ್ರವಾಶಿಕನು ಬರೆದ "ಅಬಿಸೀನಿಯಾ ಪ್ರವಾಸ" ಎಂಬ ಪುಸ್ತಕವನ್ನು ಓದಿದ್ದನು. ಅಬಿಸೀನಿಯಾ ದೇಶದೊಳಗಿನ ಸೃಷ್ಟಿಚಮತ್ಕಾರಗಳೂ, ಅಲ್ಲಿಯ ಜನರ ನಡೆನುಡಿಗಳೂ ಈತನ ಮನಸ್ಸಿಗೆ ಬಹಳ ಬಂದವು. ಆದುದರಿಂದ ತನ ಕಾದಂಬರಿಯ ಸ್ಥಳವು ಅಬಿಸೀನಿಯಾ ಇರಬೇಕೆಂದು ನಿಶ್ಚಯಿಸಿದನು. ಈ ಕಾದಂಬರಿಯನ್ನು ರಚಿಸಿದ ಕಾಲವಾದರೂ ಒಳ್ಳೇ ನೆನಪಿನಲ್ಲಿಡತಕ್ಕದ್ದಾಗಿರುತ್ತದೆ, ಈ ಕಾಲಕ್ಕೆ ಆತನ ತಾಯಿಯು ಆಸನ್ನಮರಣಳಾಗಿ ಬಿದ್ದಿದ್ದಳು. ಆಕೆ ಮಗನ ಮೋರೆಯನ್ನು ನೋಡಬೇಕೆನ್ನುತ್ತಿದ್ದಳು. ಆದರೆ ಹೊಟ್ಟೆಯ ಉದ್ಯೋಗವನ್ನು ಬಿಟ್ಟು ತಾಯಿಯ ಭೆಟ್ಟಿಗೆ ಸಹ ಇವನಿಗೆ ಹೋಗುವದಾಗಲಿಲ್ಲ. ವಾಚ

ಕರೆ ! ನೋಡಿರಿ ದಾರಿದ್ರ್ಯವು ಎಂಥ ಭಯಂಕರವಾದ ವಿಪತ್ತು ಇರುತ್ತದೆ! ತನ್ನ ತಾಯಿಯ ಉತ್ತರಕಾರ್ಯದ ವೆಚ್ಚಕ್ಕಾಗಿಯೇ ಜಾನಸನ್ನನು ಈ ಕಾದಂಬರಿಯನ್ನು ಬರೆದನು. ಇದರಿಂದ ಅವನಿಗೆ ೧೦೦ ಪೌಂಡುಗಳೂ, ಎರಡನೇ ಆವೃತ್ತಿಯ ಕಾಲಕ್ಕೆ ಮತ್ತೆ ೨೫ ಪೌಂಡುಗಳೂ ದೊರೆದವು. ಈ ಕಾದಂಬರಿಯನ್ನು ರಚಿಸಲಿಕ್ಕೆ ಜಾನಸನ್ನನಿಗೆ ಬರೇ ೨೫ ತಾಸುಗಳು ಮಾತ್ರ ಸಾಕಾದವು. ೨೫ ತಾಸು ಒಂದೇ ಸವನೇ ಕೂತು ಬರೆದಿಲ್ಲ; ಆದರೆ ಒಂದು ವಾರದೊಳಗೆ ದಿನಾಗಲು ಸಂಜೆಯ ಮುಂದೆ ಸಿಕ್ಕಷ್ಟು ವೇಳೆಯಲ್ಲಿ ಮಾತ್ರ ಬರೆಯುತ್ತಿದ್ದನು. ಇನ್ನು ಈ ಕಾದಂಬರಿಯ ಯೋಗ್ಯತೆಯು ಇಷ್ಟು ವರ್ಣಿಸುವಷ್ಟು ಏನದೆ ಎಂದು ಯಾರಾದರೂ ಕೇಳಬಹುದು. ಸಂವಿಧಾನಕ ಇಲ್ಲವೆ ರಸಪರಿಪಾಕದಿಂದ ಇದಕ್ಕೆ ಅಷ್ಟು ಯೋಗ್ಯತೆ ಬಂದಿಲ್ಲ. ಯಾಕಂದರೆ, ಸಂವಿದಾನಕವು ತೀರ ಸಣ್ಣದು ಹಾಗು ಸರಳವಾದದ್ದಿರುತ್ತದೆ. ಅಬಿಸೀನಿಯಾ ದೇಶದ ಬಾದಶಹನ ನಾಲ್ಕನೇ ಮಗನಾದ ರಾಸೆಲಸ ರಾಜಕುಮಾರನನ್ನು ಆ ದೇಶದ ವಂಶಪರಂಪರಾಗತವಾದ ಸಾಂಪ್ರದಾಯಕ್ಕನುಸರಿಸಿ ಒಂದು ಭದ್ರವಾದ ಏಕಾಂತಸ್ಥಾನದಲ್ಲಿ ಟ್ಟಿರಲು, ಆತನು ಒಳ್ಳೆ ವ್ಯವಹಾರಚತುರನಾದ ಇಮ್ಲಾಕನೆಂಬ ಕವಿಯೊಡನೆ ಆ ಏಕಾಂತಸ್ಥಾನದಿಂದ ಹೊರಬಿದ್ದನು. ಆ ಏಕಾಂತವಾಸದಲ್ಲಿ ಅನೇಕ ಸುಖೋಪಭೋಗದ ಒಡವೆಗಳಿದ್ದರೂ, ಅಲ್ಲಿ ವೈಚಿತ್ರ್ಯವಿಲ್ಲದ್ದರಿಂದ ಆ ಏಕಾಂತವಾಸವು ಅವನಿಗೆ ಬೇಸರಾಯಿತು. ಪೃಥ್ವಿಯೊಳಗೆ ಎಲ್ಲಕಡೆಗೂ ತಿರುಗಾಡಿ ಜನರ ನಡೆನುಡಿಗಳನ್ನೂ, ದೇಶಕೋಶಗಳನ್ನೂ ನೋಡಿ, ಸಂಸಾರದೊಳಗೆ ಉತ್ತಮತರವಾದ ಸ್ಥಿತಿಯನ್ನು ಹುಡುಕಿ ತೆಗೆಯುವದೇ ಆತನ ಮುಖ್ಯ ಉದ್ದೇಶವಾಗಿತ್ತು. ಆ ಮೇರೆಗೆ ಆತನು ಇಮ್ಲಾಕನ ಸಹಾಯದಿಂದ ಹೊರಗೆ ಬರಲು, ಆತನ ಹಿಂದೆ ಆತನ ತಂಗಿಯೂ ಆಕೆಯ ದಾಸಿಯೂ ಬಂದರು. ಈ ಮೇರೆಗೆ ಆ ನಾಲ್ವರು ಅಲ್ಲಿಂದ ಹೊರಬಿದ್ದು, ಇಜಿಪ್ತದೇಶದೊಳಗೆಲ್ಲ ಅಡ್ಡಾಡಿ, ಕೇರೋ ಪಟ್ಟಣಕ್ಕೆ ಬಂದು ಅನೇಕ ದಿವಸಗಳ ವರೆಗೆ ಅಲ್ಲಿ ವಾಸಮಾಡಿ, ಹಲವು ತರದ ಜನರ ಕೂಡ ಸಂಭಾಷಣಮಾಡಿ, ಬಗೆಬಗೆಯ ಸಂಸಾರಸ್ಥಿತಿಗಳನ್ನು ಪರೀಕ್ಷಿಸಿ, ಉತ್ತಮವಾದ ಸ್ಥಿತಿಯನ್ನು ಹುಡುಕುವದಕ್ಕೆ ಬೇಕಾದಷ್ಟು ಯತ್ನಮಾಡಿದರೂ ದುಃಖಮಿಶ್ರಿತವಲ್ಲದಂಥ— ಅಕ್ಷಯವಾದ ಶಾಶ್ವತಸುಖದ ಸ್ಥಿತಿಯು ದೊರೆಯಲಿಲ್ಲ, ಇಷ್ಟೇ ಅಲ್ಲ, ನಾನಾತರದ ವಿಪತ್ತುಗಳಿಗೆ ಅವರು ಗುರಿಯಾದರು; ಇದೇ ಈ ಕಾದಂಬರಿಯ ಸಂವಿಧಾನಕವು. ಈ ಕಾದಂಬರಿಯ

ಪ್ರಧಾನವಾದ ರಸವೂ ಹೇಳುವ ಹಾಗೆ ಯಾವದೂ ಇಲ್ಲ. ಆದಾಗ್ಯೂ ಈ ಕಾದಂಬರಿಯೊಳಗೆ ಸಂಸಾರದೊಳಗಿನ ಬೇರೆಬೇರೆ ಸ್ಥಿತಿಗಳ ವರ್ಣನವು ಬಹು ಮನೋಹರವಾಗಿಯೂ, ವರ್ಣನಶೈಲಿಯು ಗ್ರಂಥಕರ್ತನ ವಾಂಪಿಕೆಗಳಾದ ಚಾತುರ್ಯಕ್ಕನುಸರಿಸಿ ಬಹಳ ರಮಣೀಯವಾಗಿಯೂ, ಇರುವದರಿಂದ ಇದು ಅಚ್ಚಿನ ಕೂಟದೊಳಗಿಂದ ಹೊರಬೀಳುವದೊಂದೇ ತಡ; ಯುರೋಪದೊಳಗಿನ ಎಲ್ಲ ಭಾಷೆಗಳಲ್ಲಿಯೂ ಇದರ ಭಾಷಾಂತರವಾಗಿ ಹೋಯಿತು. ಮತ್ತು ಈ ಪುಸ್ತಕವನ್ನು ಮಾರತೆಗೆದುಕೊಂಡವನಿಗೆ ಬಹಳ ಹಣ ಸಿಕ್ಕಿತು.

ಈ ಮೇರೆಗೆ ಹಲವು ಭಾಷೆಗಳಲ್ಲಿ ಈ ಗ್ರಂಥದ ಭಾಷಾಂತರವಾಗಿದ್ದರೂ ಕನ್ನಡದಲ್ಲಿ ಇದುವರೆಗೆ ಭಾಷಾಂತರವಾಗಿದ್ದಿಲ್ಲ. ಆದರೆ ಈ ನ್ಯೂನತೆಯನ್ನು ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದವರು ತೆಗೆದು ಹಾಕಿದರೆಂದು ನಾನು ಹೇಳಬಹುದು. ಸಂಘದ ಈ ಉಪಕಾರವನ್ನು ಕನ್ನಡಿಗರು ಯಾವಾಗಲೂ ಸ್ಮರಿಸತಕ್ಕದ್ದು; ಉಪಕಾರ ಸ್ಮರಿಸಿ ಸುಮ್ಮನೆ ಕೂಡ್ರದೆ, ಹಿಂದಕ್ಕೆ ಬಿದ್ದ ಕನ್ನಡ ನುಡಿಯನ್ನು ಸಂಘದ ಸಹಾಯದಿಂದ ಮುಂದುವರಿಸಿ ಶ್ರೇಯಸ್ಸನ್ನು ಪಡೆಯತಕ್ಕದ್ದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವು.

ಇನ್ನು ಈ ಗ್ರಂಥವನ್ನು ಭಾಷಾಂತರಿಸುವಾಗ ನನಗೆ ಮನಮುಟ್ಟಿ ನೆರವಾದ ಸದ್ಗೃಹಸ್ಥರ ಉಪಕಾರವನ್ನು ನೆನೆದು, ಈ ಪೀಠಿಕೆಯನ್ನು ಮುಗಿಸುತ್ತೇನೆ. ಇದನ್ನು ಭಾಷಾಂತರಿಸಲಿಕ್ಕೆ ಉತ್ತೇಜನವನ್ನು ಕೊಟ್ಟಂಥ ಕನ್ನಡ ನುಡಿಯ ಏಳ್ಗೆಗಾಗಿ ಅಶ್ರಾಂತ ಶ್ರಮಪಡುವಂಥ ಕರ್ನಾಟಕ ವಿದ್ಯಾವರ್ಧಕ ಸಂಘದ ಉತ್ಪಾದಕರಾದ ಶ್ರೀಯುತ ರಾಮಚಂದ್ರರಾವ ದೇಶಪಾಂಡೆ ಇವರ ಉಪಕಾರವನ್ನು ಮೊದಲು ನೆನಸುತ್ತೇನೆ. ತರುವಾಯ ಭಾಷಾಂತರದ ಕೆಲವು ಭಾಗ ಮಾತ್ರ ಆದಕೂಡಲೆ ಅದನ್ನು ಶ್ರೀಯುತ ಕೃಷ್ಣರಾವ ಹುನಗುಂದ ಇವರು ಓದಿನೋಡಿ, ಯೋಗ್ಯವಾದ ಸೂಚನೆಗಳನ್ನು ಮಾಡಿದ್ದರಿಂದ ಅವರಿಗೆ ನಾನು ಋಣಿಯಾಗಿದ್ದೇನೆ. ಅನಂತರ ನನಗೆ ನೆರವಾದ ಇನ್ನೇ ಸದ್ಗೃಹಸ್ಥರ ಉಪಕಾರವನ್ನು ಮರೆಯುವದು ಸುಲಭವಲ್ಲ. ಈ ಗೃಹಸ್ಥರ , ಯಾವಾಗಲೂ, ಸಮೀಪದಲ್ಲಿದ್ದುದರಿಂದಲೂ, ನಾನು ಅವರ ಬಳಿಗೆ ಹೋದಹೋದಾಗ ತಮ್ಮ ಅಮೂಲ್ಯವಾದ ವೇಳೆಯನ್ನು ವೆಚ್ಚಮಾಡಿ, ಭಾಷೆ, ವ್ಯಾಕರಣ, ವ್ಯಾಕರಣಪದ್ಧತಿ, ಮುಂತಾದವುಗಳ ಬಗ್ಗೆ ಯೋಗ್ಯವಾದ ಸೂಚನೆಗಳನ್ನು ಮಾಡಿ, ಅತಿಶಯ ಕಠಿಣವಾದ ವಾಕ್ಯವನ್ನು ಸುಲಭವಾಗಿ ಹೇಗೆ ಭಾಷಾಂತರಿಸಬೇಕೆಂಬದನ್ನು

ತಿಳಿಸಿಕೊಟ್ಟು, ಅನಂತವಾದ ಉಪಕಾರಗಳನ್ನು ಮಾಡಿದ ಶ್ರೀಯುತ ವಿನಾಯಕರಾವ ಜೋಶಿ ಇವರಿಗೆ ನಾನು ತುಂಬಾ ಉಪಕೃತನಾಗಿದ್ದೇನೆ.

ಈ ಗ್ರಂಥವನ್ನು ವಾಗ್ಭೂಷಣದಲ್ಲಿ ಮುದ್ರಿಸಿದ್ದಕ್ಕಾಗಿ ಸಂಘದ ಕಾರ್ಯದರ್ಶಿಗಳಾದ ಮ. ರಾ. ನಾರಾಯಣರಾವ ಕರಗುದರಿಯವರಿಗೂ ಈ ಪುಸ್ತಕಕ್ಕೆ ಬಹುಮಾನ ದೊರೆಯುವಂತೆ ಶಿಫಾರಸಮಾಡಿದ್ದಕ್ಕಾಗಿ ಸಂಘದ ಪುಸ್ತಕಕಮಿಟಿಯವರಿಗೂ, ಅದನ್ನು ಮಂಜೂರಮಾಡಿ ಮುಂದೆ ಇಂಥ ಗ್ರಂಥರಚನೆಗೆ ಉತ್ತೇಜನ ಕೊಟ್ಟ ಮೆ. ಡಾಯರೆಕ್ಟರ ಸಾಹೇಬರಿಗೂ, ಈ ಚಿಕ್ಕ ಪುಸ್ತಕವನ್ನು ಸಂಘದವರು ಕಾಣಿಕೆಯಾಗಿ ಅರ್ಪಿಸಿದ್ದನ್ನು ಆದರದಿಂದ ಸ್ವೀಕರಿಸಲೊಪ್ಪಿದ ಧಾರವಾಡದ ಲೋಕಪ್ರಿಯ ಕಲೆಕ್ಟರರಾದ ಮೆ. ಗಿಬ್ಸ ಸಾಹೇಬರಿಗೂ ನಾನು ತುಂಬಾ ಉಪಕೃತನಾಗಿದ್ದೇನೆ.

ಇದು ನನ್ನ ಮೊದಲನೆಯ ಪ್ರಯತ್ನವಿರುವದರಿಂದ ಇದರಲ್ಲಿ ಅನೇಕ ದೋಷಗಳಿರಬಹುದು. ಸೂಜ್ಞ ವಾಚಕರು ಹಂಸಕ್ಷೀರ ನ್ಯಾಯದಿಂದ ದೋಷಗಳನ್ನು ಬಿಟ್ಟು, ಗುಣವನ್ನು ಮಾತ್ರ ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಕಡೆಗೆ ಕೈಯಲ್ಲಿ ಹಿಡಿದ ಈ ಕೆಲಸವನ್ನು ಅನೇಕ ವಿಘ್ನಗಳು ಮಧ್ಯಂತರದಲ್ಲಿ ಬಂದಾಗ್ಯೂ ಬಿಡದೆ ನೆರವೇರಿಸಲಿಕ್ಕೆ ಬುದ್ಧಿಯನ್ನು ಕೊಟ್ಟಂಥ ಓಂಕಾರ ರೂಪಿಯಾದ ಪರಮೇಶ್ವರನನ್ನು ಅನನ್ಯಭಾವದಿಂದ ನೆನೆದು, ಈ ಅತ್ಯಲ್ಪ ಪ್ರಸ್ತಾವನೆಯನ್ನು ಮುಗಿಸುತ್ತೇನೆ.

ತಾ|| ೧-೭-೧೯೮೦ನೇ ಇಸ್ವಿ
ಕಾರವಾರ

ಜೀವಾಜಿ ವಿಷ್ಣು ಗೋಕೆ.

TO

**Malcolm Couper Gibb** Esq. I. C. S.

*Collector of Dharwar.*

THIS BOOK IS RESPECTFULLY DEDICATED

( WITH HIS KIND PERMISSION )

*OUT OF DEEP REGARD*

*FOR*

**the interest he takes in the welfare of the**

**Kannad people and their**

**Language,**

*BY*

**THE**

**Karnatak Vidya Vardhak Sangha,**

DHARWAR

ಕನ್ನಡ ಜನರ ಹಿತಕ್ಕಾಗಿ

ವಿಶೇಷ ಶ್ರಮಬಡುತ್ತಿರುವ

**ಧಾರವಾಡದ ಕಲೆಕ್ಟರಾದ**

**ಮೆಹರ್ಬಾನ ಮಾಲ್ಕಮ್ ಕೂಪರ ಗಿಬ್ಬ ದೊರೆಗಳಿಗೆ**

ಅವರ ಅಪ್ಪಣೆಯನ್ನು ಪಡೆದು

**ಕರ್ನಾಟಕ ವಿದ್ಯಾವರ್ಧಕ ಸಂಘದವರು**

ಕೃತಜ್ಞತಾಪೂರ್ವಕವಾಗಿ

ಕಾಣಿಕೆಯಾಗಿ ಅರ್ಪಿಸಿರುವರು.

# ವಿಷಯಾನುಕ್ರಮಣಿಕೆಯು.


೧ ರಾಸೆಲಾಸನ ಚರಿತ್ರೆ, ವಿಶ್ರಾಂತವಾಸ ಮುಂತಾದ್ದು ... ೧—೫

೨ ರಾಸೆಲಾಸನಿಗೆ ಆನಂದಭೂಮಿಯಲ್ಲಿರುವದು ಬೇಸರವಾಯಿತು ೫—೯

೩ ಯಾರಿಗೆ ಯಾವ ವಿಷಯದಲ್ಲೂ ಕೊರತೆ ಇರುವದಿಲ್ಲವೋ ಅಂಥವನ ಕೊರತೆಗಳು ... ... ... ೧೦—೧೨

೪ ರಾಜಪುತ್ರನ ಖೇದವೂ ಬುದ್ಧಿಯೂ ... ... ೧೩—೧೯

೫ ಆನಂದಭೂಮಿಯೊಳಗಿಂದ ಪಾರಾಗಿಹೋಗುವ ಬಗ್ಗೆ ಅರಸುಕುಮಾರನ ವಿಚಾರಗಳು ... ... ... ೧೯—೨೧

೬ ಕೃತ್ರಿಮ ರೆಕ್ಕೆಗಳನ್ನು ಹಚ್ಚಿಕೊಂಡು ಹಾರುವ ಕಲೆಯೂ ಅದರ ಬಗ್ಗೆ ವಾದವಿವಾದವೂ ... ... ... ೨೧—೨೭

೭ ರಾಜಪುತ್ರನಿಗೆ ಒಬ್ಬ ವಿದ್ವಾಂಸನು ದೊರಕಿದ್ದು ... ೨೮—೩೦

೮ ಇಮ್ಲಾಕನ ಜೀವಿತ ವೃತ್ತಾಂತವು ... ... ೩೦—೩೬

೯ ಇಮ್ಲಾಕನ ಚರಿತ್ರವು ಮುಂದೆ ಸಾಗಿದ್ದು ... ... ೩೬—೪೧

೧೦ „ ಕವಿತ್ವದ ಬಗ್ಗೆ ಸಾಮಾನ್ಯ ವಿಚಾರವು ... ೪೧—೪೬

೧೧ „ ಯಾತ್ರೆಯ ಬಗ್ಗೆ ವಿಚಾರವು ... ... ೪೬—೫೨

೧೨ ಇಮ್ಲಾಕನ ಚರಿತ್ರವು ಮುಂದೆ ಸಾಗಿದ್ದು ... ... ೫೨—೬೦

೧೩ ರಾಸೆಲಾಸನಿಗೆ ಗವಿಯೊಳಗಿಂದ ಪಾರಾಗಿಹೋಗುವ ಹಂಚಿಕೆಯು ಗೊತ್ತಾಯಿತು .. ... ... ೬೦—೬೪

೧೪ ರಾಸೆಲಾಸನಿಗೂ ಇಮ್ಲಾಕನಿಗೂ ಅಕಸ್ಮಾತ್ತಾಗಿ ಮೂರನೆಯವರ ಭೆಟ್ಟಿಯಾದದ್ದು ... ... .... ೬೪—೬೭

೧೫ ರಾಜಪುತ್ರನೂ ರಾಜಕನ್ನಿಕೆಯೂ ಆನಂದಗುಹೆಯೊಳಗಿಂದ ಹೊರಬಿದ್ದು ಅನೇಕ ಸೋಜಿಗದ ಸಂಗತಿಗಳನ್ನು ನೋಡಿದ್ದು ೬೭—೭೧

೧೬ ಅವರು ಕೇರೋ ಪಟ್ಟಣವನ್ನು ಸೇರಿ ನೋಡಲು ಅಲ್ಲಿಯ ಪ್ರತಿ ಯೊಬ್ಬ ಮನುಷ್ಯನು ಸುಖಿಯಾಗಿದ್ದಂತೆ ಅವರಿಗೆ ತೋರಿತು ೭೧—೭೭

೧೭ ರಾಜಪುತ್ರನೂ ಆನಂದವೂ ಉಲ್ಹಾಸವೂ ಉಳ್ಳ ತರುಣ ಜನರ ಸಮಾಜವೂ ... ... ... ... ೭೭—೮೦

೧೮ ರಾಜಪುತ್ರನು ಒಬ್ಬ ಸಜ್ಜನನೂ ಸುಖಿಯೂ ಆದ ಮನುಷ್ಯ ನನ್ನು ಕಂಡುಕೊಂಡದ್ದು ... ... ... ೮೦—೮೫

೧೯ ಅಡವಿಗಳಲ್ಲಿ ವಾಸಿಸುವ ಕುರುಬರ ಸ್ಥಿತಿಯ ಅಲ್ಪ ವರ್ಣನವು ೮೫—೮೭

೨೦ ಸಂಪತ್ತಿಯಿಂದುಂಟಾಗುವ ಸಂಕಟವು ... ... ೮೭—೯೦

೨೧ ಏಕಾಂತವಾಸದ ಸುಖವು-- ಜೋಗಿಯ ಜೀವನವೃತ್ತಾಂತವು ೯೦—೯೫

೨೨ ಸೃಷ್ಟಿಯ ನಿಯಮದಂತೆ ನಡೆಯುವವನ ಸುಖವು ... ೯೫—೧೦೦

೨೩ ಲೋಕಸ್ಥಿತಿಯ ಪರೀಕ್ಷಣಮಾಡುವ ಕೆಲಸವನ್ನು ರಾಜಪುತ್ರ ನೂ ರಾಜಕನ್ನಿಕೆಯೂ ತಮ್ಮತಮ್ಮೊಳಗೆ ಹಂಚಿಕೊಂಡದ್ದು ೧೦೦—೧೦೧

೨೪ ರಾಜಪುತ್ರನು ದೊಡ್ಡ ಸ್ಥಿತಿವಂತರಿಗಾಗುವ ಸುಖಗಳ ಪರೀಕ್ಷೆ ಮಾಡಿದ್ದು ... ... .... ... ೧೦೨—೧೦೪

೨೫ ೨೬ ರಾಜಕನ್ನಿಕೆಯು ತಾನು ಕೈಕೊಂಡ ಶೋಧವನ್ನು ಒಳ್ಳೇ ಪರಿಶ್ರಮದಿಂದ ಮಾಡಿದಳು ಆದರೆ ಇಷ್ಟಪ್ರಾಪ್ತಿಯಾಗಲಿಲ್ಲ ೧೦೪—೧೦೮

೨೬ ರಾಜಕನ್ನಿಕೆಯು ತನ್ನ ಭಾಷಣವನ್ನು ಮುಂದೆ ಸಾಗಿಸಿದ್ದು ೧೦೮—೧೧೩

೨೭ ದೊಡ್ಡಿಸ್ತನದ ಬಗ್ಗೆ ವಿಚಾರ ... ... ೧೧೩—೧೧೭

೨೮ ರಾಸೆಲಾಸ, ನಿಕಾಯಾ ಇವರ ಭಾಷಣವು ಮುಂದೆಸಾಗಿದ್ದು ೧೧೭—೧೨೨

೨೯ ಲಗ್ನವಿಷಯದ ವಾದವು ಮುಂದೆ ಸಾಗಿದ್ದು ... ೧೨೨—೧೨೯

೩೦ ಇಮ್ಲಾಕನು ಒಂದು ಹೊಸ ವಿಷಯದ ಬಗ್ಗೆ ವಿಚಾರ ಮಾಡಹತ್ತಿದ್ದು. ... ... ... ೧೨೯—೧೩೫

೩೧ ನೆಲಗೋಪುರಗಳನ್ನು ನೋಡಲಿಕ್ಕೆ ಹೋದದ್ದು ... ೧೩೫—೧೩೮

೩೨ ಅವರು ನೆಲಗೋಪುರದೊಳಗೆ ಹೋದರು ... ೧೩೯—೧೪೧

೩೩ ರಾಜಕನ್ನಿಕೆಗೆ ಆಕಸ್ಮಿಕವಾದ ಸಂಕಟವು ಒದಗಿತು. ೧೪೧—೧೪೩

೩೪ ಅವರೆಲ್ಲರೂ ಪೇಕ್ಯೂಆ ಇಲ್ಲದೆ ಕೇರೋ ಪಟ್ಟಣಕ್ಕೆ ಬಂದರು ... ... ... ... ೧೪೩—೧೪೭

೩೫ ಪೇಕ್ಯೂಆ ಇವಳ ವಿಯೋಗದಿಂದ ಉಂಟಾದ ರಾಜಕನ್ನಿಕೆಯ ಶೋಕವು ... ... ... ... ೧೪೮—೧೫೪

೩೬ ರಾಜಪುತ್ರಿಗೆ ಸಖಿಯ ವಿಯೋಗದುಃಖವು ಹೆಚ್ಚೆಚ್ಚು ಆಗ ಹತ್ತಿತು ... .... ... ... ೧೫೪—೧೫೫

೩೭ ರಾಜಪುತ್ರಿಯು ಸಖಿಯು ಶೋಧದ ಸುದ್ದಿಯು ... ೧೫೫—೧೫೮

೩೮ ಪೇಕ್ಯೂಆ ದಾಸಿಯು ಸಾಹಸಕೃತ್ಯಗಳು ... ೧೫೮—೧೬೫

೩೯ ಪೇಕ್ಯೂಆ ಇವಳ ಮಾತು ಮುಂದೆ ಸಾಗಿದ್ದು ... ೧೬೫—೧೭೪

೪೦ ಒಬ್ಬ ವಿದ್ವಾಂಸನ ಚರಿತ್ರವು. ... ... ೧೭೪—೧೭೮

೪೧ ಜ್ಯೋತಿಷಿಯ ದುಃಖದ ಗುಪ್ತಕಾರಣವು ... ೧೭೮—೧೭೯

೪೨ ಜ್ಯೋತಿಷಿಯು ತನ್ನ ತಿಳಿವಳಿಕೆಯನ್ನು ವಿಸ್ತರಿಸಿಹೇಳಿದ್ದು ೧೭೯—೧೮೨

೪೩ ಜ್ಯೋತಿಷಿಯು ತನ್ನ ರಹಸ್ಯವನ್ನು ಇಮ್ಲಾಕನಿಗೆ ಹೇಳಿದ್ದು ೧೮೨—೧೮೪

೪೪ ಮನಃಪೂತ ಕಲ್ಪನೆಗಳ ಭಯಂಕರ ಪರಿಣಾಮವು ೧೮೪—೧೮೮

೪೫ ಒಬ್ಬ ವೃದ್ಧ ಮನುಷ್ಯನ ಕೂಡ ಆದ ಅವರ ಸಂಭಾಷಣವು ೧೮೮—೧೯೩

೪೬ ರಾಜಕನ್ನಿಕೆಯೂ ಪೇಕ್ಯೂಆ ದಾಸಿಯೂ ಜ್ಯೋತಿಷಿಯು ಬಳಿಗೆ ಹೋದದ್ದು ... ... ... ೧೯೩—೨೦೧

೪೭ ರಾಜಪುತ್ರನು ಒಂದು ಬೇರೊಂದು ವಿಷಯದ ಬಗ್ಗೆ ಸಂಭಾಷಣ ಮಾಡಿದ್ದು ... ... ... ೨೦೧—೨೦೬

೪೮ ಆತ್ಮಸ್ವರೂಪದ ಬಗ್ಗೆ ಇಮ್ಲಾಕನ ಸಂಭಾಷಣವು ೨೦೭—೨೧೪

# ರಾಸೆಲಾಸ.

## ಮೊದಲನೆಯ ಭಾಗವು

ಮನಸ್ಸಿನಲ್ಲಿ ಹುಟ್ಟುವ ಬಗೆಬಗೆಯ ಕಲ್ಪನಾತರಂಗಗಳ ಮೇಲೆ ವಿಶ್ವಾಸ ವನ್ನಿಡುವಂಥ, ಆಶೆಯೆಂಬ ಬಿಸಲ್ಗುದುರೆಯನ್ನು ಅತ್ಯುತ್ಕಟದಿಂದ ಬೆನ್ನಟ್ಟುವಂಥ, ಚಿಕ್ಕಂದಿನ ಆಶೆಗಳು ಕಾಲಕ್ರಮದಲ್ಲಿ ಕೊನೆಗಾಣುವವೆಂದು ಎಣಿಸುವಂಥ, ಈ ಹೊತ್ತಿನ ಕೊರತೆಗಳು ನಾಳೆಗೆ ಪೂರ್ಣವಾಗುವವೆಂದು ತಿಳಿಯುವಂಥ, ಜನರು ಗಳಿರಾ ! ಆಫ್ರಿಕಾಖಂಡದೊಳಗಿನ ಅಬಿಸೀನಿಯಾ ದೇಶದ ರಾಸೆಲಾಸ ರಾಜ ಕುಮಾರನ ಚರಿತ್ರವನ್ನು ಮನಸುಗೊಟ್ಟು ಕೇಳಿರಿ.

ರಾಸೆಲಾಸ ಕುಮಾರನು ಬಹು ಪರಾಕ್ರಮಿಯಾದ ಅಬಿಸೀನಿಯಾ ಬಾದ ಶಹನ ನಾಲ್ಕನೇ ಮಗನು. ಜಗತ್ಪ್ರಸಿದ್ಧವಾದಂಥ, ತನ್ನ ಒಡಲಲ್ಲಿ ಬೆಳೆಯುವ ಸಮೃದ್ಧವಾದ ಧಾನ್ಯಗಳನ್ನು ದಿಗ್ದೇಶಗಳಿಗೆ ಕಳುಹುವಂಥ, ಯಾವತ್ತು ಜಲರಾಶಿ ಗಳಿಗೆ ತಂದೆಯಂತಿರುವಂಥ, ನೀಲನದಿಯು ಈ ದೇಶದಲ್ಲಿಯೇ ಹುಟ್ಟಿರುತ್ತದೆ. ಹಿಂದಕ್ಕೆ ಪ್ರಾಚ್ಯದೇಶಗಳಲ್ಲಿ ( ಉಷ್ಣಕಟಿಬಂಧದೊಳಗಿನ ದೇಶಗಳಲ್ಲಿ ) ಅರಸರು ಜಾಣ್ಮೆಯಿಂದಲೋ, ಇಲ್ಲವೆ ಯಾವದಾದರೊಂದು ರಾಜಕೀಯ ಕಾರಣದಿಂದಲೋ, ರಾಜಪುತ್ರರನ್ನು, ಅವರು ಪಟ್ಟವೇರುವ ಸಮಯ ಬರುವವರೆಗೆ, ಏಕಾಂತಸ್ಥಾನ ದಲ್ಲಿಡುವದು ಪರಂಪರಾಗತವಾದ ಸಂಪ್ರದಾಯವಾಗಿತ್ತು. ಈ ಸಂಪ್ರದಾಯವ ನ್ನನುಸರಿಸಿ ಯುವರಾಜನಾದ ರಾಸೆಲಾಸನು ಪಟ್ಟವೇರುವ ಸಮಯವು ಒದಗುವ ವರೆಗೆ ಅವನನ್ನೂ, ಅಬಿಸೀನಿಯದ ರಾಜಕುಟುಂಬದ ಬೇರೆ ಕುಮಾರರನ್ನೂ, ಕುವರಿಯರನ್ನೂ ಒಂದು ಏಕಾಂತವಾದ ಅರಮನೆಯಲ್ಲಿ ಇಟ್ಟಿದ್ದರು. ಈ ಏಕಾಂತ ಸ್ಥಾನವು ಅಮ್ಹಾರಾ ಪ್ರಾಂತದಲ್ಲಿ ಸುತ್ತಲು ಪರ್ವತಗಳುಳ್ಳ ಒಂದು ವಿಶಾಲವಾದ ಕಂದರದಲ್ಲಿತ್ತು. ಆ ಎತ್ತರವಾದ ಪರ್ವತಗಳ ಶಿಖರಗಳು ಈ ಕಂದರದ ಮೇಲೆ ಹಾಯ್ದಿದ್ದವು. ಆ ಬೆಟ್ಟಗಳೊಳಗೆ ಒಂದು ಬೆಟ್ಟದ ಬಂಡೆಗಲ್ಲಿನ ಬುಡದಲ್ಲಿ ಒಂದು ಇಕ್ಕಟ್ಟಾದ ದ್ವಾರವಿತ್ತು. ಆ ಏಕಾಂತಸ್ಥಾನದೊಳಗೆ ಹೋಗಲಿಕ್ಕೆ ಇದೊಂದೇ ಮಾರ್ಗವಾಗಿತ್ತು. ಈ ದ್ವಾರವು ಮೊದಲಿನಿಂದಲೇ ಇತ್ತೋ, ಇಲ್ಲವೆ ಮನುಷ್ಯಕೃತಿ ಯಿಂದ ಮಾಡಲ್ಪಟ್ಟಿತ್ತೋ ಎಂಬ ಬಗ್ಗೆ ನಿಶ್ಚಯವಾಗಿ ಹೇಳಲಿಕ್ಕೆ ಬರುವಂತಿದ್ದಿಲ್ಲ. ಈ ಮಾರ್ಗದ ಹೊರಮಗ್ಗಲಿನಲ್ಲಿ ವೃಕ್ಷಗಳು ಕಿಷ್ಕಿಂಧವಾಗಿಬೆಳೆದಿದ್ದವು. ಆದ್ದರಿಂದ ಅದರ ಬಾಯಿಯು ಮುಚ್ಚಿಹೋಗಿತ್ತು. ಅದರ ಒಳಮಗ್ಗಲಿಗೆ ಪೂರ್ವಕಾಲದ ಶಿಲ್ಪಿಗಳು ಮಾಡಿದ ಒಂದು ಕಬ್ಬಿಣದ ದೊಡ್ಡ ಬಾಗಿಲನ್ನು ಹಚ್ಚಿದ್ದರು. ಯಂತ್ರ

ಸಹಾಯುವ ಹೊರತು ಆ ಕದವನ್ನು ಇಕ್ಕಲಿಕ್ಕೂ, ತೆಗೆಯಲಿಕ್ಕೂ ಬರುತ್ತಿದ್ದಿಲ್ಲ.

ನಾಲ್ಕೂ ಕಡೆಯಲ್ಲಿರುವ ಬೆಟ್ಟಗಳ ಮೇಲಿಂದ ಸಣ್ಣ ಸಣ್ಣ ಹೊಳೆಗಳು ಹರಿಯುತ್ತಿದ್ದವಾದದರಿಂದ ಆ ಏಕಾಂತಸ್ಥಾನದ ಸುತ್ತಮುತ್ತಲು ಎತ್ತ ನೋಡಿದರತ್ತ ಹಸರೇ ಕಾಣುತ್ತಿತ್ತು. ಮತ್ತು ಅಲ್ಲಿಯ ಭೂಮಿಯು ಬಹಳ ಫಲವತ್ತಾಗಿತ್ತು. ನಾಲ್ಕು ಬದಿಯಿಂದ ಹರಿದು ಬರುವ ನೀರು ಒಟ್ಟುಗೂಡಿ ಆ ಏಕಾಂತಸ್ಥಾನದ ಮಧ್ಯಭಾಗದಲ್ಲಿ ಒಂದು ದೊಡ್ಡ ಕೆರೆಯಾಗಿತ್ತು. ಆ ಕೆರೆಯ ನೀರೊಳಗೆ ಬಗೆ ಬಗೆಯ ಮೀನಗಳೂ, ಹಂಸ ಮುಂತಾದ ಜಲಪಕ್ಷಿಗಳೂ ವಾಸಮಾಡುತ್ತಿದ್ದವು. ಕೆರೆಯು ತುಂಬಿ ಹೆಚ್ಚಾದ ನೀರು ನದಿಯಾಗಿ ಆ ಬೆಟ್ಟದ ಉತ್ತರಕ್ಕಿರುವದೊಂದು ಕೊಳ್ಳಕ್ಕೆ ಹೋಗಿ ಕೂಡಿ, ಮುಂದಕ್ಕೆ ಒಂದು ಬಂಡೆಗಲ್ಲಿನ ಮೇಲಿಂದ ಮತ್ತೊಂದು ಬಂಡೆಗಲ್ಲಿನ ಮೇಲೆ ಹಾಯ್ದು ಹೋಗುವಾಗ ಭಯಂಕರವಾದ ಸಪ್ಪಳವನ್ನುಂಟು ಮಾಡುತ್ತ ಬಹಳ ದೂರದವರೆಗೆ ಹರಿದು ಹೋಗುತ್ತಿತ್ತು.

ಬೆಟ್ಟಗಳ ಸುತ್ತುಮುತ್ತಲು ವೃಕ್ಷಗಳು ದಟ್ಟಾಗಿ ಬೆಳೆದಿದ್ದವು. ನದಿಗಳ ದಂಡೆಗಳ ಇಕ್ಕಡೆಗಳಲ್ಲಿ ಪುಷ್ಪವೃಕ್ಷಗಳೂ, ಲತೆಗಳೂ ಬೆಳೆದಿದ್ದವಾದ್ದರಿಂದ ಆ ದಂಡೆಗಳು ಚಿತ್ರವಿಚಿತ್ರವಾಗಿ ಕಂಗೊಳಿಸುತ್ತಿದ್ದವು. ಆ ಪ್ರದೇಶದಲ್ಲಿ ಬೀಸುವ ಗಾಳಿಯು ಯಾವಾಗಲೂ ಸುಗಂಧವನ್ನು ಬೀರುತ್ತಿತ್ತು. ಆಯಾ ಋತುಗಳಿಗೆ ಸರಿಯಾಗಿ ಆಗತಕ್ಕಂಥ ಪುಷ್ಪಫಲಗಳಿಂದ ವೃಕ್ಷಗಳು ಬಾಗಿರುತ್ತಿದ್ದವು. ಹುಲ್ಲನ್ನೂ ಗಿಡದ ತೊಪ್ಪಲವನ್ನೂ ತಿಂದು ಬದುಕುವಂಥ ಸಾಕಪಶುಗಳೂ, ಕಾಡಪಶುಗಳೂ ಆ ವಿಸ್ತೀರ್ಣವಾದ ಏಕಾಂತಸ್ಥಾನದಲ್ಲಿ ನಿರ್ಭೀತವಾಗಿ ಅತ್ತಿತ್ತ ತಿರುಗಾಡುತ್ತಿದ್ದವು. ಆ ಏಕಾಂತಸ್ಥಾನದ ಒಂದು ಭಾಗದಲ್ಲಿ ಆಡು ಕುರಿಗಳ ಹಿಂಡುಗಳೂ, ದನಗಳ ಗುಂಪುಗಳೂ ಹುಲ್ಲು ಮೇಯುತ್ತಿದ್ದವು ; ಮತ್ತೊಂದು ಕಡೆಯಲ್ಲಿ ಚಿಗರೆ, ಮೊಲ, ಸಾರಂಗ ಮುಂತಾದ ಬೇಟೆಯ ಮೃಗಗಳು ಬಹಳ ಆನಂದದಿಂದ ಹಾರಾಡಿಕೊಂಡು ಆಡುತ್ತಿದ್ದವು ; ಕೆಲವೆಡೆಗಳಲ್ಲಿ ಚಪಲವಾದ ಕುರಿಮರಿಗಳು ಈ ಗುಡ್ಡದಿಂದ ಆ ಗುಡ್ಡಕ್ಕೆ ಆ ಗುಡ್ಡದಿಂದ ಈ ಗುಡ್ಡಕ್ಕೆ ಹಾರಾಡುತ್ತಿದ್ದವು ; ಹಲವು ಕಡೆಯಲ್ಲಿ ಶಾಖಾಮೃಗಗಳು ತಮ್ಮ ತಮ್ಮ ಜಾತಿಗೆ ಅನುರೂಪವಾದ ಚೇಷ್ಟೆಗಳನ್ನು ಮಾಡುತ್ತಿದ್ದವು ; ಮತ್ತೊಂದು ಕಡೆಯಲ್ಲಿ ಗಂಭೀರಮುದ್ರೆಯನ್ನು ತಾಳಿದ ಆನೆಗಳು ಶೀತಳವಾದ ನೆರಳಿನಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದವು ; ಪೃಥ್ವಿಯೊಳಗಿನ ಯಾವತ್ತು ತರದ ಒಡವೆಗಳೂ ಇಲ್ಲಿ ಒಟ್ಟುಗೂಡಿದ್ದವು, ಮತ್ತು ಸೃಷ್ಟಿಯೊಳಗಿನ ಯಾವತ್ತು ಸೌಖ್ಯಗಳೂ ಆ ಏಕಾಂತಸ್ಥಳದಲ್ಲೇ ಏಕತ್ರವಾಗಿದ್ದದರಿಂದ ಅಲ್ಲಿ ದುಃಖವು ಹೇಳಹೆಸರಿಲ್ಲದಂತಾಗಿತ್ತು

ಆ ಏಕಾಂತಸ್ಥಾನವು ಬಹಳೇ ವಿಸ್ತಾರವಾದದ್ದಿದ್ದು ಅಲ್ಲಿಯ ಭೂಮಿಯು ಬಹಳೇ ಫಲದಾಯಕವಾಗಿದ್ದುದರಿಂದ, ಅಲ್ಲಿ ವಾಸಿಸುವ ಯಾವತ್ತೂ ಜನರ ನಿರ್ವಾಹಕ್ಕೆ ಬೇಕಾಗುವ ಎಲ್ಲ ಪದಾರ್ಥಗಳೂ ಅಲ್ಲಿಯ ನೆಲದಲ್ಲೇ ಬೆಳೆಯುತ್ತಿದ್ದುವು. ಮನಸ್ಸಮಾಧಾನಕ್ಕೂ, ಸುಖೋಪಭೋಗಕ್ಕೂ ಬೇಕಾಗುವ ಒಡವೆಗಳನ್ನು ಮಾತ್ರ ಬಾದಶಹನು ವರ್ಷಕ್ಕೊಮ್ಮೆ ತನ್ನ ಮಕ್ಕಳನ್ನು ನೋಡುವ ಸಲುವಾಗಿ ಅಲ್ಲಿಗೆ ಬರುವಾಗ ತಂದುಕೊಡುತ್ತಿದ್ದನು. ಬಾದಶಹನು ಬರುವಾಗ ವಾದ್ಯಗಳನ್ನು ಊದಿಸುತ್ತಲೂ ಬಾರಿಸುತ್ತಲೂ ಬರುತ್ತಿದ್ದನು. ಅವನು ಬಂದಕೂಡಲೆ ಆ ಸ್ಥಳದ ಕಬ್ಬಿಣದ ಬಾಗಿಲು ತೆರೆಯಲ್ಪಡುತ್ತಿತ್ತು. ಬಾದಶಹನು ಆ ಸ್ಥಳದಲ್ಲಿ ಎಂಟು ದಿವಸಗಳವರೆಗೆ ನಿಲ್ಲುತ್ತಿದ್ದನು. ಆ ಅವಧಿಯೊಳಗೆ ಆ ಏಕಾಂತವಾಸವು ಅಲ್ಲಿಯ ಯಾವತ್ತೂ ಜನರಿಗೆ ಆನಂದದಾಯಕವಾಗುವದಕ್ಕೆ ಯಾರಿಗೆ ಯಾವ ಯುಕ್ತಿಯು ಸರಿದೋರುತ್ತದೋ, ಅದನ್ನು ತನಗೆ ತಿಳಿಸಬೇಕು; ಮತ್ತು ಅಲ್ಲಿರುವ ಎಲ್ಲ ಜನರ ಮನೋರಂಜನವಾಗಿ ಅವರು ಸುಖದಿಂದ ಕಾಲಕಳೆಯುವ ಹಂಚಿಕೆಯನ್ನು ತನಗೆ ಹೇಳಬೇಕೆಂದು ಆ ಬಾದಶಹನು ಅಪ್ಪಣೆ ಮಾಡುತ್ತಿದ್ದನು. ಆ ಪ್ರಸಂಗದಲ್ಲಿ ಯಾರು ಏನು ಬೇಡಿದರೂ ಅದು ಅವರಿಗೆ ಆಗಲೇ ಸಿಕ್ಕುತ್ತಿತ್ತು. ಈ ಉತ್ಸವದ ದಿವಸವು ಸಂತೋಷಕರವಾಗಬೇಕೆಂದು, ಮನೋರಂಜನ ಮಾಡತಕ್ಕ ಕಲಾಕುಶಲರಾದ ಜನರನ್ನು ಕರೆಯಿಸುತ್ತಿದ್ದರು. ಪ್ರಖ್ಯಾತ ಗಾಯಕರೂ, ವಾದನ ಕಲಾನಿಪುಣರೂ, ರಾಜಪುತ್ರರ ಮುಂದೆ ಬಂದು ತಮ್ಮ ಗಾಯನವಾದನಕೃತಿಗಳನ್ನು ತೋರಿಸುತ್ತಿದ್ದರು. ನರ್ತಕಿಯರು ನೃತ್ಯಕಲೆಯನ್ನು ಎಲ್ಲರಿಗೂ ಸಂತೋಷವಾಗುವಂತೆ ತೋರಿಸುವರು. ತಮ್ಮ ಕಲೆಯು ರಾಜಪುತ್ರರ ಮನಸಿಗೆ ಬಂತೆಂದರೆ ತಮ್ಮನ್ನು ನಿರ್ಬಂಧದಲ್ಲಿ, ಅಂದರೆ ಸೌಖ್ಯದ ನಿಧಿಯಾದ ಆ ಏಕಾಂತಸ್ಥಳದಲ್ಲಿ, ಇಟ್ಟಾರೆಂಬ ಹವಣಿಕೆಯು ಅವರೆಲ್ಲರಿಗೂ ಇರುತ್ತಿತ್ತು. ವಿಧವಿಧದ ಕಲೆಗಳಲ್ಲಿ ನಿಪುಣರಿದ್ದು ಹೊಸ ಹೊಸ ಚಮತ್ಕೃತಿಗಳನ್ನು ತೋರಿಸುವ ಚಾತುರ್ಯವಿದ್ದ ಜನರಿಗೆ ಮಾತ್ರ, ಆ ಸ್ಥಳದೊಳಗೆ ಪ್ರವೇಶಮಾಡಲಿಕ್ಕೆ ಅಪ್ಪಣೆ ದೊರೆಯುತ್ತಿತ್ತು. ಅಂಥಿಂಥವರಿಗೆ ಒಳಸೇರಲಿಕ್ಕೆ ಮಾರ್ಗವಿದ್ದಿಲ್ಲ. ಆ ಸ್ಥಳದಲ್ಲಿರುವವರಿಗೆ ಸುಖವೂ, ನಿರ್ಭೀತಿಯೂ, ಬೇಕಾದಷ್ಟು ದೊರೆಯುತ್ತಿರುವದರಿಂದ ಹೊಸದಾಗಿ ಆ ಸ್ಥಳಕ್ಕೆ ಬಂದವರು ಅದೇ ಸ್ಥಿತಿಯು ತಮ್ಮ . ಜೀವತನಕ ಇರಲೆಂದು ಬಯಸುತ್ತಿದ್ದರು. ಆದರೆ ಆ ಸ್ಥಳದೊಳಗೆ ಒಮ್ಮೆ ಹೊಕ್ಕವರನ್ನು ತಿರುಗಿ ಹೊರಗೆ ಎಂದೂ ಬಿಡುತ್ತಿದ್ದಿಲ್ಲಾದ್ದರಿಂದ, ಬಹಳ ದಿವಸ ಅದೇ ಸ್ಥಳದಲ್ಲಿರುವದರಿಂದ ಅವರ ಮನಸ್ಸಿನ ಸ್ಥಿತಿಯು ಹ್ಯಾಗೆ ಆಗುತ್ತದೆಂಬ ಕಲ್ಪನೆಯು ಸಹ ಹೊರಗಿನವರಿಗೆ ಆಗುವದು ಅಸಾ

ಧ್ಯವಾಗಿತ್ತು. ಆದ್ದರಿಂದ ಪ್ರತಿವರ್ಷವು ಮನೋರಂಜನದ ಹೊಸ ಹೊಸ ಯುಕ್ತಿಗಳನ್ನು ಹುಟ್ಟಿಸಿ, ಹೊಸ ಹೊಸ ಜನರು ಒಳ್ಳೇ ಸಂತೋಷದಿಂದ ಆ ನಿರ್ಬಂಧದೊಳಗೆ ಬಂದು ಬೀಳುವದಕ್ಕೆ ಯತ್ನಿಸುತ್ತಿದ್ದರು.

ರಾಜಪುತ್ರರು ಇರುವ ಅರಮನೆಯು ಮೇಲೆ ಹೇಳಿದ ಕೆರೆಯ ಪೃಷ್ಠಭಾಗದಿಂದ ಸುಮಾರು ೩೦ ಮೊಳ ಎತ್ತರವಾದ ಒಂದು ಕಟ್ಟೆಯಮೇಲೆ ಕಟ್ಟಲ್ಪಟ್ಟಿತ್ತು. ಆ ಅರಮನೆಯಲ್ಲಿ ಅನೇಕ ಕೊಠಡಿಗಳಿದ್ದವು; ಮತ್ತು ಯಾವ ಯಾವ ಕೋಠಡಿಗಳನ್ನು ಯಾರ ಯಾರ ಸಲುವಾಗಿ ಕಟ್ಟಿದ್ದರೊ ಆಯಾ ಕೊಠಡಿಗಳನ್ನು ಅವರವರ ಯೋಗ್ಯತಾನುಸಾರವಾಗಿ ಹೆಚ್ಚು ಕಡಿಮೆ ಸುಶೋಭಿತ ಮಾಡಿದ್ದರು. ಎಲ್ಲ ಕೊಠಡಿಗಳ ಮೇಲ್ಭಾಗದಲ್ಲೂ ಒಂದೊಂದು ಕಲ್ಲಿನ ಕಮಾನು ಇತ್ತು. ಆ ಕಮಾನಿಗೆ ಗಚ್ಚು ಹಚ್ಚಿ ಬಹಳ ದಿವಸವಾದದರಿಂದ ಅದು ಕಲ್ಲಿನೋಪಾದಿ ಗಟ್ಟಿಯಾಗಿತ್ತು. ಅರಮನೆಯನ್ನು ಕಟ್ಟಿ ನೂರಾರು ವರ್ಷಗಳಾಗಿದ್ದರೂ, ದೊಡ್ಡ ದೊಡ್ಡ ಮಳೆಗಳಿಂದಲೂ, ಬಿರುಗಾಳಿಗಳಿಂದಲೂ, ಅದಕ್ಕೆ ಯಾವತರದ ಅಪಾಯವೂ ಆಗಿದ್ದಿಲ್ಲ; ಮತ್ತು ಪ್ರತಿವರ್ಷವೂ ಸರಿಮಾಡಿಸಬೇಕಾದ ಅವಶ್ಯಕತೆಯೂ ಇರಲಿಲ್ಲ.

ಆ ಅರಮನೆಯ ವಿಶಾಲತ್ವದ ಕಲ್ಪನೆಯು ತೀರ ತುಸು ಜನರಿಗೆ ಮಾತ್ರ ಇತ್ತು. ಹಳಬರಾದ ಕೆಲವರು ರಾಜಕೀಯಾಧಿಕಾರಿಗಳ ಹೊರತು ಇತರರಿಗೆ ಅದರ ವಿಷಯಕ್ಕೆ ಏನೂ ಗೊತ್ತಿದ್ದಿಲ್ಲ. ಆ ಅಧಿಕಾರಿಗಳಿಗಾದರೂ ವಂಶಪರಂಪರೆಯಿಂದ (ಅಂದರೆ ತಂದೆಯು ಮಗನಿಗೆ ಹೇಳುವನು ಅತನು ತನ್ನ ಮಗನಿಗೆ ಹೇಳುವನು ಈ ರೀತಿ) ಆ ಜ್ಞಾನವು ಒಳ್ಳೇ ಗುಪ್ತವಾದ ಮಾತಿನೋಪಾದಿಯಲ್ಲಿ ಪ್ರಾಪ್ತವಾಗುತ್ತಿತ್ತು. ಮೂರ್ತಿಮಂತ ರಹಸ್ಯವೇ ಪ್ರತ್ಯಕ್ಷ ಬಂದು ನಿಂತು, ಆ ಅರಮನೆಯ ಮಾದರಿಯ ನಕಾಶವನ್ನು ತೆಗೆದುಕೊಟ್ಟಿತೋ! ಆ ನಕಾಶದಂತೆ ಆ ಅರಮನೆಯು ಕಟ್ಟಲ್ಪಟ್ಟಿತೋ ಏನೋ! ಎಂಬುವಂತೆ, ಅದರ ಕಟ್ಟಣೆಯೂ ರಚನೆಯೂ ಯಾರಿಗೂ ತಿಳಿಯದಷ್ಟು ಗುಪ್ತವಾಗಿದ್ದವು. ಪ್ರತಿಯೊಂದು ಸ್ಥಳಕ್ಕೆ ಎರಡೆರಡು ಮಾರ್ಗಗಳಿದ್ದವು. ಒಂದು ಎಲ್ಲರಿಗೂ ಗೊತ್ತಿದ್ದ ದಾರಿ, ಎರಡನೆಯದು ಗುಪ್ತವಾದ ದಾರಿ; ಒಂದು ಕೊಠಡಿಯಿಂದ ಮತ್ತೊಂದಕ್ಕೆ ಹೋಗಲಿಕ್ಕೆ ಮಾರ್ಗವಿತ್ತು. ಆ ಮಾರ್ಗವು ಕೆಲವುಕಡೆ ಮೇಲ್ಮಾಳಿಗೆಯಲ್ಲಿ, ಕೆಲವುಕಡೆ ನೆಲದಲ್ಲಿ ಇರುತ್ತಿತ್ತು. ಆ ಅರಮನೆಯೊಳಗಿನ ಕೆಲಕೆಲವು ಕಂಬಗಳು ಪೊಳ್ಳಿದ್ದವು. ಆದರೆ ಪೊಳ್ಳು ಇದ್ದದ್ದು ಅಲ್ಲಿಯ ರಹಸ್ಯವನ್ನರಿಯದವರಿಗೆ ಏನೂ ತಿಳಿಯುವಂತೆ ಇದ್ದಿಲ್ಲ. ಆ ಪೊಳ್ಳಿನಲ್ಲಿ ಅರಸರು ವಂಶಪರಂಪರೆಯಿಂದ ದ್ರವ್ಯಸಂಚಯ ಮಾಡಿಟ್ಟಿದ್ದರು. ಮತ್ತು ಆ ಕಂಬಗಳ ಬಾಯಿಗೆ ಕಲ್ಲು ಜೋಡಿಸಿ ಯಾರಿಗೂ ತಿಳಿಯದಂತೆ ಆ ಬಾಯಿಯನ್ನು ಮುಚ್ಚಿಬಿ

ಟ್ಟಿದ್ದರು. ರಾಜ್ಯಕ್ಕೆ ಅನಿವಾರ್ಯ ಸಂಕಟ ಬಂದಹೊರತು ಆ ದುಡ್ಡಿಗೆ ಕೈ ಹಚ್ಚು ತ್ತಿದ್ದಿಲ್ಲ. ಅಲ್ಲಿದ್ದ ಹಣದಬಗ್ಗೆ ಒಂದು ಲೆಕ್ಕದ ಪಟ್ಟಿ ಇರುವದು. ಅದನ್ನೂ ಒಂದು ಬಾರುಜಿನಲ್ಲಿ ಮುಚ್ಚಿಡುತ್ತಿದ್ದರು. ಆ ಬಾರುಜಿನೊಳಗೆ ಬಾದಶಹನ ಇಲ್ಲವೆ ಯುವರಾಜನ ಹೊರತು ಉಳಿದವರಿಗೆ ಪ್ರವೇಶವೇ ಇಲ್ಲ.

---

## ಎರಡನೆಯ ಭಾಗವು.

### ರಾಸೆಲಾಸನಿಗೆ ಆನಂದಭೂಮಿಯಲ್ಲಿರುವದು ಬೇಸರಾಯಿತು

ಹಿಂದಿನ ಭಾಗದಲ್ಲಿ ವರ್ಣಿಸಿದ ಏಕಾಂತಸ್ಥಾನಕ್ಕೆ "ಆನಂದಭೂಮಿ" ಎಂಬ ಹೆಸರಿತ್ತು. ಅಲ್ಲಿರುವ ರಾಜಪುತ್ರರಿಗೂ, ರಾಜಕನ್ನಿಕೆಯರಿಗೂ ಸೌಖ್ಯಗಳ ಅನುಭವವು ಚನ್ನಾಗಿ ಬರುತ್ತಿತ್ತು. ಸಂಸಾರಸಾಗರದಲ್ಲಿ ಮುಳುಗಿ ತೇಲಾಡುವ ವರಿಗೆ ಸಂಭವಿಸುವ ದುಃಖ ಹಾಗು ಸಂಕಟದ ಕಠಿಣ ಪ್ರಸಂಗಗಳು ಅವರಿಗೆ (ಆನಂದಭೂಮಿಯಲ್ಲಿರುವವರಿಗೆ) ಸ್ವಪ್ನದಲ್ಲಿ ಸಹ ಬರುತ್ತಿದ್ದಿಲ್ಲ. ಮನೋರಂ ಜನ ಮಾಡುವದರಲ್ಲಿ ಚತುರರಾದ ಸೇವಕರು ಅಲ್ಲಿ ಯಾವಾಗಲು ಸಿದ್ಧರಾಗಿರು ತ್ತಿದ್ದರು. ಇಂದ್ರಿಯಗಳನ್ನು ತೃಪ್ತಿಪಡಿಸುವ ಯಾವತ್ತು ಒಡವೆಗಳೂ ಅಲ್ಲಿದ್ದವು. ಸುಗಂಧಮಯವಾದ ತೋಟದಲ್ಲಿ ಬೇಕಾದಕಡೆಗೆ ಬೇಕಾದಷ್ಟು ಹೊತ್ತು ಅಡ್ಡಾಡ ಬೇಕು, ಅಡ್ಡಾಡುವದಕ್ಕೆ ಬೇಸರ ಬಂದರೆ ಯಾವತರದ ಅಂಜಿಕೆಯೂ ಇಲ್ಲದೆ ಕೋಟೆಯೋಪಾದಿಯಲ್ಲಿರುವ ಅರಮನೆಯೊಳಗೆ ವಿಶ್ರಾಂತಿಯನ್ನು ತೆಗೆದುಕೊಳ್ಳ ಬೇಕು. ಹೀಗೆ ಅಲ್ಲಿರುವವರಿಗೆ ಸುಖವಾಗುವದಕ್ಕೋಸ್ಕರ ಎಲ್ಲಾ ವಿಷಯ ದಲ್ಲೂ ಯೋಗ್ಯವ್ಯವಸ್ಥೆಯು ಮಾಡಲ್ಪಟ್ಟಿತು. ಅವರಿಗೆ ಕಲಿಸಲಿಕ್ಕೆ ಇಟ್ಟ ದೊಡ್ಡ ದೊಡ್ಡ ವಿದ್ವಾಂಸರು ಲೌಕಿಕದಲ್ಲಿ ವರ್ತಿಸುವ ಜನರಿಗುಂಟಾಗುವ ದುಃಖ ಗಳ ವರ್ಣನೆಯನ್ನೇ ಯಾವಾಗಲೂ ಅವರ ಮುಂದೆ ವರ್ಣಿಸುತ್ತಿದ್ದರು. ಮತ್ತು ಆನಂದಭೂಮಿಯ ಹೊರಗೆ ಎಲ್ಲಕಡೆಯಲ್ಲಿಯೂ ಸಂಕಟಗಳೇ ಇರುವವೆಂತಲೂ, ಜನರು ಯಾವಾಗಲೂ ಒಬ್ಬರೊಬ್ಬರ ಕೂಡ ಜಗಳಾಡುತ್ತಾರೆಂತಲೂ, ಪ್ರಸಂಗ ಬಂದರೆ ಒಬ್ಬರೊಬ್ಬರ ಜೀವ ಸಹ ತೆಗೆದುಕೊಳ್ಳುವದಕ್ಕೆ ಹೇಸುವದಿಲ್ಲೆಂತಲೂ ಹೇಳುತ್ತಿದ್ದರು. ಅಲ್ಲಿ ವಾಸಿಸುವ ರಾಜಪುತ್ರರೇ ಒಳ್ಳೇ ಸುಖವುಳ್ಳ ಪ್ರಾಣಿಗಳು, ಉಳಿದವರಿಗೆ ಸುಖದ ಕಲ್ಪನೆಯು ಸಹ ಇರುವದಿಲ್ಲೆಂದು ಅವರಿಗೆ ತೋರಿಸುವದ

ಕ್ಕಾಗಿ ಆನಂದಭೂಮಿಯ ವಿಷಯವಾಗಿ ಸುಂದರವಾದ ಕವನಗಳನ್ನು ರಚಿಸಿ ಅವುಗಳನ್ನು ಅವರ ಮುಂದೆ ಅಂದು ತೋರಿಸುತ್ತಿದ್ದರು. ಇದೇ ಮೇರೆಗೆ ತರತರದ ಸುಖಗಳನ್ನು ಅವರ ಮುಂದೆ ವರ್ಣಿಸಿ ಆ ಸುಖಗಳನ್ನನುಭೋಗಿಸಬೇಕೆಂಬ ಉತ್ಕಟೇಚ್ಛೆಯನ್ನು ಅವರ ಮನಸ್ಸಿನಲ್ಲಿ ಹುಟ್ಟಿಸುತ್ತಿದ್ದರು. ಸಾರಾಂಶ:— ಮುಂಜಾನೆಯಿಂದ ಸಂಜೆಯವರೆಗೆ ವಿಧವಿಧದ ಸುಖಾನುಭವಗಳಲ್ಲಿಯೇ ಅವರ ವೇಳೆಯು ಹೋಗುತ್ತಿತ್ತು.

ಆನಂದಭೂಮಿಯಲ್ಲಿ ಮೇಲೆ ವಿವರಿಸಿದ ವ್ಯವಸ್ಥೆಗಳನ್ನು ಯಾವ ಉದ್ದೇಶದಿಂದ ಮಾಡಿದ್ದರೋ ಆ ಉದ್ದೇಶವು ಬಹುಶಃ ಸಿದ್ಧಿಸಿತ್ತೆಂದೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ಯಾಕೆಂದರೆ ಆ ಸ್ಥಳದಲ್ಲಿರುವ ರಾಜಪುತ್ರರೊಳಗೆ ಯಾರಿಗೇ ಆಗಲೀ ಆ ನಿರ್ಬಂಧದೆಡೆಯಿಂದ ಹೊರಬೀಳಬೇಕೆಂಬ ಇಚ್ಛೆಯೇ ಬರುತ್ತಿದ್ದಿಲ್ಲ. ಅಲ್ಲಿದ್ದ ರಾಜಪುತ್ರರೆಲ್ಲರೂ ಸೃಷ್ಟಿಯಲ್ಲಿ ದೇವರಿಂದ ನಿರ್ಮಿತವಾದಂಥ ಮತ್ತು ಮನುಷ್ಯಕೃತಿಯಿಂದ ಉಂಟಾದಂಥ ಎಲ್ಲ ತರದ ಸೌಖ್ಯಗಳೂ ತಮಗೆ ಉಂಟೆಂತಲೂ, ದುರ್ದೈವದಿಂದ ಆ ಆನಂದಭೂಮಿಯಲ್ಲಿ ಪ್ರವೇಶಿಸದ ಜನರು ಯಾವಾಗಲು ಅನೇಕ ದುಃಖಗಳಿಂದ ಪೀಡಿತರಾಗಿರಬಹುದೆಂತಲೂ, ಅವರು ಸುಖವೆಂಬ ಶಬ್ದವನ್ನು ಸಹ ಕೇಳಿರಲಿಕ್ಕಿಲ್ಲೆಂತಲೂ, ಒಂದುವೇಳೆ ಕಿಂಚಿತ್ ಸುಖವಾದಾಗ್ಯೂ ಅದು ಸ್ಥಿರವಾದದ್ದಿರುವದಿಲ್ಲಾದ್ದರಿಂದ ಇಂದು ಏನಾದೀತು, ನಾಳೆ ಏನಾದೀತು ಎಂಬ ಯೋಚನೆಯಲ್ಲೇ ಅವರ ಹೊತ್ತೆಲ್ಲ ಕಳೆದುಹೋಗುತ್ತಿರಬಹುದೆಂತಲೂ ತಿಳಿದುಕೊಳ್ಳುತ್ತಿದ್ದರು.

ಈ ಮೇರೆಗೆ ಅಲ್ಲಿರುವ ರಾಜಪುತ್ರರೆಲ್ಲರು ಮುಂಜಾನೆಯಿಂದ ಸಂಜೆಯವರೆಗೆ ಯಾವಾಗಲೂ ಆನಂದವೃತ್ತಿಯಲ್ಲಿಯೇ ಇರುತ್ತ ಒಬ್ಬರೊಬ್ಬರ ಮೇಲೆ ಒಳ್ಳೇ ಪ್ರೀತಿ ಮಾಡುತ್ತಿದ್ದರು. ಆದರೆ ನಮ್ಮ ಚರಿತ್ರನಾಯಕನಾದ ರಾಸೆಲಾಸನ ಸ್ಥಿತಿಮಾತ್ರ ಮೇಲೆ ವಿವರಿಸಿದ ರಾಜಪುತ್ರರ ಸ್ಥಿತಿಯಿಂದ ತೀರ ಭಿನ್ನವಾಗಿತ್ತು. ಮೊದಮೊದಲು ಅವನಾದರೂ ಉಳಿದ ರಾಜಪುತ್ರರಂತೆಯೇ ಆನಂದದಲ್ಲಿದ್ದನು. ಆದರೆ ಆತನು ೧೬ ವರ್ಷದವನಾದ ಮೇಲೆ ಆತನ ಸ್ಥಿತಿಯಲ್ಲಿ ಹೆಚ್ಚುಕಡಿಮೆಯಾಯಿತು. ಅಂದಿನಿಂದ ಆತನು ಉಳಿದ ರಾಜಪುತ್ರರೊಡನೆ ಕೂಡಿಕೊಂಡು ಅವರು ಆನಂದಪಟ್ಟಂತೆ ಆನಂದಪಡುತ್ತಿರಲಿಲ್ಲ. ಆತನು ಒಬ್ಬನೇ ಅರಣ್ಯದಲ್ಲಿ ಇಲ್ಲವೆ ತೋಟದಲ್ಲಿ ಅಡ್ಡಾಡುತ್ತಿರುವನು, ಇಲ್ಲವೆ ಏಕಾಂತದಲ್ಲಿ ಕೂತುಕೊಂಡು ತನ್ನೊಳಗೆ ತಾನೇ ವಿಚಾರ ಮಾಡುತ್ತಿರುವನು; ಉಳಿದ ರಾಜಪುತ್ರರೊಡಗೂಡಿ ಆತನು ಊಟಕ್ಕೆ ಕುಳಿತಾಗ್ಗೆ, ತನ್ನ ಮುಂದಿಟ್ಟ ಪಾತ್ರೆಯೊಳಗಿನ ಉತ್ತಮೋತ್ತಮವಾದ ಪಕ್ವಾನ್ನಗಳನ್ನು ಬಾಯಿಯೊಳಗೆ ಹಾಕಿಕೊಳ್ಳುವಷ್ಟು ಸ್ಮೃತಿಯೂ ಆತನಿಗೆ ಇರುತ್ತಿದ್ದಿಲ್ಲ. ಗಾಯನವನ್ನು

ಕೇಳುತ್ತ ಕುಳಿತಾಗ ಅರ್ಧಗಾಯನವಾದ ಕೂಡಲೆ ಒಮ್ಮಿಂದೊಮ್ಮೆ ಜನರೊಳಗಿಂದ ಎದ್ದು, ಗಾಯನವು ಕೇಳಬಾರದಷ್ಟು ದೂರ ಹೋಗಿ ಕೂತುಕೊಳ್ಳುತ್ತಿದ್ದನು. ಈ ಮೇರೆಗೆ ರಾಸೆಲಾಸನ ಮನಸ್ಸಿನಲ್ಲಿ ಆದ ಸ್ಥಿತ್ಯಂತರವು ಆತನ ಸೇವಕರಿಗೆ ಕಂಡುಬಂದು ಅವರು ಪುನಃ ಆತನ ಮನಸ್ಸನ್ನು ಸುಖಾನುಭವದ ಕಡೆಗೆ ಎಳೆಯಲಿಕ್ಕೆ ಯತ್ನಿಸಿದರು. ಆದರೆ ಅವರ ಪ್ರಯತ್ನವು ಕೈಗೂಡಿ ಬರಲಿಲ್ಲ. ಆತನಿಗೆ ಸಂತೋಷವಾಗಬೇಕೆಂದು ಅವರು ಮುಂದೆ ಮುಂದೆ ಬಂದು ಏನಾದರೂ ಮಾಡಹತ್ತಿದರೆ, ಆತನು ಅವರ ಕಡೆಗೆ ದುರ್ಲಕ್ಷ ಮಾಡುತ್ತಿದ್ದನು; ಮನೋರಂಜನ ಮಾಡಿಕೊಳ್ಳಬೇಕೆಂದು ಬೇಡಿಕೊಂಡವರ ಮಾತನ್ನೇ ಆಲಿಸುತ್ತಿದ್ದಿಲ್ಲ. ಹಳ್ಳದ ದಂಡೆಯಲ್ಲಿ ಗಿಡಗಳು ದಟ್ಟಾಗಿ ಬೆಳೆದಿದ್ದ ಸ್ಥಳದಲ್ಲಿ ಹೋಗಿ ಕೂತುಕೊಳ್ಳುತ್ತಿದ್ದನು. ಅಲ್ಲಿ ಕೆಲಕಾಲ ಗಿಡಗಳ ಮೇಲೆ ಕುಳಿತು ಹಾಡುವ ಹಕ್ಕಿಗಳ ಇಂಚರಗಳನ್ನು ಕೇಳುತ್ತಲೂ, ಒಮ್ಮೊಮ್ಮೆ ಹಳ್ಳದಲ್ಲಿ ನಿರ್ಭೀತಿಯಿಂದ ಆಡುತ್ತಿರುವ ಮೀನಗಳನ್ನು ನೋಡುತ್ತಲೂ, ಹಲವು ವೇಳೆ ಗುಡ್ಡಗಳ ಮೇಲೆಯೂ ಹುಲ್ಲುಗದ್ದೆಗಳಲ್ಲಿಯೂ ಮೇದು ಮರಗಳ ತಣ್ಣೆರಳಲ್ಲಿ ಮಲಗಿದಂಥ ದನಗಳ ಗುಂಪುಗಳನ್ನು ನೋಡುತ್ತಲೂ, ಇಡೀ ದಿವಸವನ್ನು ಕಳೆಯುತ್ತಿದ್ದನು. ಮೇಲೆ ವಿವರಿಸಿದಂತೆ ರಾಸೆಲಾಸನ ವೃತ್ತಿಯಲ್ಲಿ ಒಮ್ಮಿಂದೊಮ್ಮೆ ಉಂಟಾದ ವೈಲಕ್ಷಣ್ಯವನ್ನು ನೋಡಿ, ಎಲ್ಲರೂ ಆತನನ್ನು ವಿಶೇಷ ಲಕ್ಷಗೊಟ್ಟು ನೋಡಹತ್ತಿದರು. ರಾಜಪುತ್ರರಿಗೆ ವಿದ್ಯೆಯನ್ನು ಕಲಿಸುವದಕ್ಕಾಗಿ ಇಟ್ಟಿದ್ದ ಪಂಡಿತರಲ್ಲಿ ಒಬ್ಬನ ಸಂಭಾಷಣೆಗೆ ರಾಸೆಲಾಸನು ಮೊದಲು ಬಹಳ ಮೆಚ್ಚಿದ್ದನು. ಆ ಪಂಡಿತನು ರಾಜಪುತ್ರನ ಅಂತಃಕರಣದಲ್ಲಿ ಉಂಟಾದ ಅಸಮಾಧಾನದ ಕಾರಣವನ್ನು ಗೊತ್ತುಹಚ್ಚಬೇಕೆಂಬ ಉದ್ದೇಶದಿಂದ ಒಂದು ದಿನ ರಾಸೆಲಾಸನಿಗೆ ತಿಳಿಯಗೊಡದೆ ಆತನ ಹಿಂದೆ ಹಿಂದೆ ಹೋದನು. ರಾಸೆಲಾಸನು ತನ್ನ ಹತ್ತರ ಯಾರೂ ಇಲ್ಲೆಂದು ತಿಳಿದುಕೊಂಡು, ಗುಡ್ಡದ ತುದಿಯಲ್ಲಿ ಆನಂದದಿಂದ ಮೇಯುತ್ತಿದ್ದ ಆಡುಗಳನ್ನು ಚೆನ್ನಾಗಿ ದಿಟ್ಟಿಸಿ ನೋಡಿ, ಅವುಗಳ ಸ್ಥಿತಿಯನ್ನೂ ತನ್ನ ಸ್ಥಿತಿಯನ್ನೂ ಸರಿಹಚ್ಚಿನೋಡಿ ಕೆಳಗೆಬರೆದಂತೆ ತನ್ನೊಳಗೆತಾನೇ ಮಾತಾಡಹತ್ತಿದನು.

“ಮನುಷ್ಯನಿಗೂ, ಇತರ ಪ್ರಾಣಿಗಳಿಗೂ ಏನು ಭೇದವಿರಬಹುದು? ಈಗ ನನ್ನ ಸುತ್ತಲು ಇರುವ ಎಲ್ಲಾ ಪಶುಗಳೂ ಪ್ರಾಣಿಧರ್ಮದಿಂದ ನನಗೆ ಸರಿಯಾಗಿರುತ್ತವೆ. ಅವು ಹಸಿವು ಆಯಿತೆಂದರೆ ಹುಲ್ಲು ತಿನ್ನುತ್ತವೆ; ನೀರಡಿಸಿದವೆಂದರೆ ಹಳ್ಳಕ್ಕೆ ಹೋಗಿ ನೀರು ಕುಡಿಯುತ್ತವೆ; ಈ ಮೇರೆಗೆ ಹಸಿವು-ನೀರಡಿಕೆಗಳು ಹಿಂಗಿದ ತರುವಾಯ ಅವು ಸ್ವಸ್ಥ ಕೂತುಕೊಳ್ಳುತ್ತವೆ, ಇಲ್ಲವೆ ಮಲಗುತ್ತವೆ. ನಿದ್ದೆ ತಿಳಿದು ಎಚ್ಚತ್ತ ತುಸು ಹೊತ್ತಿನನಂತರ, ಅವು ತಿರುಗಿ ಹಸಿದು ಮತ್ತೆ ಹುಲ್ಲು

ತಿನ್ನುತ್ತವೆ, ಹಾಗು ವಿಶ್ರಾಂತಿ ತೆಗೆದುಕೊಳ್ಳುತ್ತವೆ; ಈ ಕ್ರಮವು ಎಡೆಬಿಡದೆ ಸಾಗುತ್ತದೆ. ಇದರಂತೆಯೇ ನನಗೂ ಹಸಿವುನೀರಡಿಕೆಗಳಾಗುತ್ತವೆ; ಆದರೆ ಹಸಿವು ನೀರಡಿಕೆಗಳು ಅಡಗಿದ ಬಳಿಕ ಪಶುಗಳಿಗೆ ಆಗುವ ಆನಂದವು ಮಾತ್ರ ನನಗೆ ಆಗುವದಿಲ್ಲ. ಅನ್ನನೀರು ಸಿಕ್ಕದಿದ್ದರೆ ಪಶುಗಳಿಗೆ ಹ್ಯಾಗೆ ಕಷ್ಟವಾಗುತ್ತದೋ ಹಾಗೆ ಯೇ ನನಗೂ ಆಗುತ್ತದೆ. ಆದರೆ ಆ ಪದಾರ್ಥಗಳು ಸಿಕ್ಕರೆ ಪಶುಗಳಿಗೆ ಆನಂದ ವಾಗುವಂತೆ ನನಗೆ ಆನಂದವಾಗುವದಿಲ್ಲ. ಎರಡು ಊಟಗಳ ನಡುವಿನ ವೇಳೆಯು ನನಗೆ ಬೇಸರವನ್ನುಂಟು ಮಾಡುತ್ತದೆ. ತೀವ್ರ ಹೊಟ್ಟೆ ಹಸಿಯಬೇಕೆಂದು ನನಗೆ ಇಚ್ಛೆಹುಟ್ಟುತ್ತದೆ. ಯಾಕಂದರೆ ಹಸಿವಾಯಿತೆಂದರೆ ಮನಸ್ಸಿನಕೆಲವು ವ್ಯಾಪಾರಗಳು ನಡೆದು ವೇಳೆ ಹೋದೀತೆಂದು ಅನ್ನಿಸುತ್ತದೆ. ನೋಡಿರಿ! ಈ ಪಕ್ಷಿಗಳು ಈ ಹಣ್ಣು ಗಳನ್ನು ತಿಂದು ತೋಪುಗಳೊಳಕ್ಕೆ ಹಾರಿಹೋಗುತ್ತವೆ; ಮತ್ತು ಅಲ್ಲಿ ಗಿಡಗಳ ಮೇಲೆ ಬಹಳ ಆನಂದದಿಂದ ಕುಳಿತುಕೊಂಡು ಇಡೀ ದಿವಸವೆಲ್ಲ ಒಂದೇ ತರವಾಗಿ ಸ್ವರಗೈಯುತ್ತವೆ. ಆದರೆ ಆ ಸ್ವರದಿಂದ ಅವುಗಳಿಗೆ ಬೇಸರ ಬರುವಂತೆ ಕಾಣುವ ದಿಲ್ಲ. ಸತಾರ ಬಾರಿಸುವವನನ್ನಾಗಲಿ ಇಲ್ಲವೆ ಹಾಡುವವನನ್ನಾಗಲಿ ಕರೆಯಿಸಬೇ ಕೆಂದು ನನಗೆ ಇಚ್ಛೆಯುಂಟಾದರೆ, ಆ ಪ್ರಕಾರ ಮಾಡುವದಕ್ಕೆ ನನಗೆ ಅನುಕೂಲತೆ ಇರುತ್ತದೆ. ಆದರೆ ಯಾವ ರಾಗವನ್ನು ಕೇಳಿ ನಿನ್ನೆ ಆನಂದವಾಯಿತೋ ಆ ರಾಗವನ್ನು ಈ ಹೊತ್ತೂ ಕೇಳಿದರೆ ಮನಸ್ಸಿಗೆ ಆನಂದವಾಗುವದಿಲ್ಲ. ಅದೇ ರಾಗ ವನ್ನು ನಾಳೆ ಕೇಳಬೇಕೆಂದರಂತೂ ತೀರೇ ಹೋಯಿತು ಬಹಳೇ ಬೇಸರಬರುವದು. ಇಂದ್ರಿಯಗಳಿಗೆ ತೃಪ್ತಿಯನ್ನುಂಟು ಮಾಡುವ ಯಾವತ್ತು ವಿಷಯಗಳನ್ನು ಬೇಸರ ಬರುವವರೆಗೆ ನಾನು ಅನುಭೋಗಿಸಿದ್ದೇನೆ; ಆದಾಗ್ಯೂ ಇನ್ನೂ ನನ್ನ ಮನಸ್ಸಿಗೆ ತೃಪ್ತಿಯಾಗಿಲ್ಲ. ಹೀಗೆ ಯಾಕೆ ಆಗಬೇಕು!! ಸುಖಕ್ಕೆ ಸಾಧನ–ಭೂತವಾದಂಥ ಇಂದ್ರಿಯಗಳೆಷ್ಟು ಮನುಷ್ಯನಿಗೆ ಗೊತ್ತಾಗಿವೆ. ಆದರೆ ಈಗ ಗೊತ್ತಾದ ಇಂದ್ರಿ ಯಗಳ ಹೊರತಾಗಿ ಹೆಚ್ಚಿನ ಸುಖವನ್ನೀಯುವಂಥ ಮತ್ತೊಂದು ಯಾವದಾದರೂ ಇಂದ್ರಿಯವಿರಬೇಕೆಂದು ನನಗೆ ತೋರುತ್ತದೆ. ಆದರೆ ಆ ಇಂದ್ರಿಯವನ್ನು ತೃಪ್ತಿ ಪಡಿಸುವಂಥ ವಿಷಯವು ಈ ಸ್ಥಳದಲ್ಲಿಲ್ಲದ ಕಾರಣ ಆ ಇಂದ್ರಿಯಶಕ್ತಿಯ ಅನು ಭವವು ನಮಗೆ ಬರುವದಿಲ್ಲ; ಇಲ್ಲವೆ ಮನುಷ್ಯನಿಗೆ ಇಂದ್ರಿಯದಿಂದ ತೀರ ಭಿನ್ನ ವಾದಂಥ ಒಂದು ಪ್ರಬಲವಾದ ಇಚ್ಛೆ ಇರಬಹುದೆಂತಲೂ, ಆ ಇಚ್ಛೆಯು ಪೂರ್ಣ ವಾಗದ ಹೊರತು ಮನುಷ್ಯನ ಮನಸ್ಸಿಗೆ ಎಂದೂ ಸಮಾಧಾನವಾಗುವದಿಲ್ಲವೆಂತ ಲೂ, ನನಗೆ ತೋರುತ್ತದೆ. ”

ಈ ಮೇರೆಗೆ ವಿಚಾರ ಮಾಡುತ್ತ ಮೇಲೆ ನೋಡಲು ಚಂದ್ರೋದಯವಾಗಿ ಬಹಳ ಹೊತ್ತಾಗಿದೆಯೆಂದು ಅವನಿಗೆ ತಿಳಿದು ಬಂತು. ಆಗ ಅವನು ಆ ಸ್ಥಳದಿಂದೆದ್ದು ಅರಮನೆಯ ದಾರೀ ಹಿಡಿದು ಬರುತ್ತ ಅಡವಿಯಲ್ಲಿ ಮೇಯುತ್ತಿರುವ ಹಲವು ದನಕರುಗಳನ್ನು ನೋಡಿ ಅವುಗಳನ್ನು ಉದ್ದೇಶಿಸಿ ಹೇಳಿದ್ದೇನಂದರೆ “ ಎಲೈ ನೀವು ನನಗಿಂತಲು ಹೆಚ್ಚು ಸುಖವುಳ್ಳವರಿದ್ದೀರಿ. ನಿಮ್ಮ ಬಳಿಯಿಂದ ಹಾಯ್ದು ಹೋಗುವಂಥ ಹಾಗು ತನ್ನ ಜೀವಕ್ಕೆ ತಾನೇ ಬೇಸತ್ತಂಥ ನನ್ನನ್ನು ನೋಡಿ ನೀವು ಅಸೂಯಪಡಬೇಡಿರಿ; ನಿಮ್ಮ ಸುಖವನ್ನು ನೋಡಿ ನಾನು ಅಸೂಯಪಡುವದಿಲ್ಲ, ಯಾಕಂದರೆ, ನಿಮಗೆ ಇರುವ ಸುಖವು ಮನುಷ್ಯನದಲ್ಲ. ನಾನು ಯಾವ ದುಃಖಗಳನ್ನು ಅನುಭೋಗಿಸಬೇಕಾಗುತ್ತದೋ ಆ ದುಃಖಗಳಿಂದ ನೀವು ಮುಕ್ತರಾಗಿರುವಿರಿ. ಎಂದೂ ಸಂಭವಿಸಲಾರದಂಥ ಸಂಕಟವು ಒಂದುವೇಳೆ ನನ್ನಪಾಲಿಗೆ ಬಂದೀತೆಂಬ ಅಂಜಿಕೆಯು ನನಗೆ ಇರುತ್ತದೆ, ಆದರೆ ನಿಮಗೆ ಆ ತರದ ಭೀತಿಇಲ್ಲ. ಆ ಸಂಕಟವು ನಿಜವಾಗಿ ಸಂಭವಿಸಿದಾಗ ಮಾತ್ರ ನಿಮಗೆ ದುಃಖವಾಗುತ್ತದೆ. ಹಿಂದೆ ಆಗಿ ಹೋದಂಥ ದುಃಖದ ನೆನಪಾದರೆ ಇಲ್ಲವೆ ಆ ತೆರದ ದುಃಖವು ಮುಂದೆ ಸಂಭವಿಸೀತೆಂಬ ಕಲ್ಪನೆಯು ಮನಸ್ಸಿನಲ್ಲಿ ಬಂದರೆ ನನ್ನ ಜೀವವು ಹೆದರುತ್ತದೆ. ಇದರಿಂದ ಸ್ಪಷ್ಟವಾಗಿ ಕಂಡುಬರುವದೇನಂದರೆ ತಾನು ಹುಟ್ಟಿಸಿದ ಯಾವತ್ತು ಪ್ರಾಣಿಗಳನ್ನು ಸಮದೃಷ್ಟಿಯಿಂದ ನೋಡತಕ್ಕ ಸೃಷ್ಟಿಕರ್ತನು ಪಶುಗಳಿಗಿಂತಲೂ ಹೆಚ್ಚಿನ ದುಃಖಗಳನ್ನು ಮನುಷ್ಯನಿಗೆ ಉಂಟುಮಾಡಿದ್ದಾನೆಂದ ಮೇಲೆ ಅದರಂತೆಯೇ ಹೆಚ್ಚಿನ ಸುಖಗಳನ್ನಾದರೂ ಉಂಟುಮಾಡಿರಲಿಕ್ಕೆಬೇಕು. ಇದರಲ್ಲೇನೂ ಸಂಶಯವಿಲ್ಲ. ರಾಜಪುತ್ರನು ಈ ಪ್ರಕಾರ ವಿಚಾರಮಾಡುತ್ತಲೂ, ಆ ವಿಚಾರಗಳನ್ನು ಕರುಣೆಯನ್ನು ಹುಟ್ಟಿಸುವ ಮಂದಸ್ವರದಿಂದ ಉಚ್ಚರಿಸುತ್ತಲೂ ಅರಮನೆಗೆ ತಿರುಗಿ ಬರಹತ್ತಿದನು. ಆದರೆ ಆ ರಾಜಪುತ್ರನನ್ನು ನೋಡುವವರಿಗೆ ಆತನು ತನ್ನ ವಿಚಾರಶಕ್ತಿಯ ಸೂಕ್ಷ್ಮತ್ವವನ್ನು ತಿಳಿದು ಬಹಳ ಸಂತೋಷವುಳ್ಳವನಾಗಿರುವಂತೆ ಆತನ ಮುಖಮುದ್ರೆಯಿಂದ ಕಂಡುಬರುತ್ತಿತ್ತು. ಇದಲ್ಲದೆ ಆತನಿಗೆ ದುಃಖಗಳನ್ನು ಒಳ್ಳೇ ಅಭಿಜ್ಞತೆಯಿಂದ ಅನುಭೋಗಿಸುವ ಶಕ್ತಿಯೂ, ಆ ದುಃಖಗಳನ್ನು ಒಳ್ಳೇ ಚಾತುರ್ಯದಿಂದ ಮಂದಟ್ಟುಮಾಡಿಕೊಳ್ಳುವ ಸಾಮರ್ಥ್ಯವೂ ಇದ್ದು ಆದರಿಂದ ಆತನ ದುಃಖಭಾರವು ತುಸು ಕಡಿಮೆಯಾದಂತೆಯೂ ಆತನ ಮುಖಚಿಹ್ನದಿಂದ ಕಂಡುಬರುತ್ತಿತ್ತು. ಸಾರಾಂಶ,ರಾಜಪುತ್ರನು ಆ ರಾತ್ರಿ ಉಳಿದ ರಾಜಪುತ್ರರೊಡನೆ ಕೂಡಿಕೊಂಡು ಬಹು ಸಂತೋಷದಿಂದ ಇದ್ದನು. ಇದನ್ನು ನೋಡಿ ಅವರೆಲ್ಲರಿಗೂ ಬಹಳ ಆನಂದವಾಯಿತು.

# ಮೂರನೆಯ ಭಾಗವು.

## ಯಾವನಿಗೆ ಯಾವ ವಿಷಯದಲ್ಲೂ ಕೊರತೆ ಇರುವದಿಲ್ಲವೋ ಅಂಥವನ ಕೊರತೆಗಳು.

ರಾಸೆಲಾಸನು ಅರಣ್ಯದೊಳಗಿನ ಏಕಾಂತಸ್ಥಳಕ್ಕೆ ಹೋಗುವಾಗ್ಗೆ ಆತನ ಶಿಕ್ಷಕರಲ್ಲೊಬ್ಬನು ಆತನಿಗೆ ತಿಳಿಯಗೊಡದೆ ಅವನ ಬೆನ್ನ ಹಿಂದೆ ಹೋಗಿದ್ದನೆಂದು ಹಿಂದಿನ ಭಾಗದಲ್ಲಿ ಹೇಳಿರುತ್ತದಷ್ಟೆ? ಆ ಶಿಕ್ಷಕನು ತನಗೆ ರಾಜಪುತ್ರನ ವೃತ್ತಿ ವ್ಯತ್ಯಸ್ತವಾದ ಕಾರಣವು ತಿಳಿದಂತಾಯಿತು, ಇನ್ನು ಆತನಿಗೆ ಉಪದೇಶಮಾಡಿ ಆತನನ್ನು ಹಾದಿಗೆ ತರಬೇಕೆಂದು ಆಲೋಚಿಸಿ, ಉಪದೇಶ ಮಾಡುವ ಸಂಧಿಯನ್ನು ಸಾಧಿಸಲಿಕ್ಕೆ ಪ್ರಯತ್ನ ಮಾಡತೊಡಗಿದನು. ಆದರೆ ಆ ವೃದ್ಧ ಶಿಕ್ಷಕನಿಗೆ ಬುದ್ಧಿಭ್ರಂಶವಾಗಿರುತ್ತದೆಂದು ರಾಜಪುತ್ರನಿಗೆ ಕಂಡುಬಂದುದರಿಂದ ಆತನಕೂಡ ಸಂಭಾಷಣಮಾಡುವದು ರಾಜಪುತ್ರನ ಮನಸ್ಸಿಗೆ ಬರಲಿಲ್ಲ. ಆತನು ತನ್ನೊಳಗೆ ತಾನೇ ಅಂದದ್ದೇನಂದರೆ "ಈ ಮುದುಕನು ಈ ಪರಿ ನನ್ನ ಸುತ್ತು ಯಾಕೆ ಹತ್ತಿದ್ದಾನೆ! ಈತನು ಮೊದಲು ನನಗೆ ಕೆಲವು ಮಾತುಗಳನ್ನು ಹೇಳುತ್ತಿದ್ದನು, ಆ ಮಾತುಗಳು ಹೊಸವು ಇದ್ದುದರಿಂದ ಅವುಗಳನ್ನು ಕೇಳಿ ಆಗ ನನಗೆ ಆನಂದವಾಗುತ್ತಿತ್ತು, ಅವೇ ಮಾತುಗಳನ್ನು ಕೇಳಿ ತಿರುಗಿ ನನಗೆ ಆನಂದವಾಗಬೇಕಾದರೆ ಮೊದಲು ಕೇಳಿದ್ದನ್ನು ನಾನು ಮರೆಯಲಿಕ್ಕೆಬೇಕು, ಅವುಗಳನ್ನು ನಾನು ಮರೆಯಬೇಕೆಂದರೆ ಈತನು ಹಾಗೆ ಮಾಡಗೊಡುವದಿಲ್ಲ." ಈ ಮೇರೆಗೆ ವಿಚಾರಮಾಡಿ ವಾಡಿಕೆಯಂತೆ ಆತನು ಅರಣ್ಯದೊಳಗೆ ತಿರುಗಾಡಲಿಕ್ಕೆ ಹೋಗಿ, ಏಕಾಂತಸ್ಥಳದಲ್ಲಿ ಕುಳಿತು, ಚಿತ್ತಸ್ವಾಸ್ಥ್ಯವನ್ನು ಪಡೆದು, ದಿನದಂತೆ ವಿಚಾರಮಾಡಲಿಕ್ಕೆ ಆರಂಭಮಾಡುವಷ್ಟರಲ್ಲಿ ತನ್ನ ಗುರುವು ಹತ್ತರ ಬಂದು ನಿಂತದ್ದು ಆತನಿಗೆ ತಿಳಿಯಿತು. ಆ ಗುರುವನ್ನು ನೋಡಿದ ಕೂಡಲೆ ರಾಜಪುತ್ರನು ಅವನ ಕೂಡ ಏನೂ ಮಾತಾಡದೆ ಅಲ್ಲಿಂದ ಸುಮ್ಮನೆ ಹೊರಟು ಹೋಗಬೇಕೆಂದು ಮೊದಲು ಆಲೋಚಿಸಿದನು. ಆದರೆ ಈತನು ನನ್ನ ಶಿಕ್ಷಕನಾಗಿದ್ದನು, ನಾನು ಮೊದಲು ಈತನಿಗೆ ಬಹಳ ಮಾನಕೊಡುತ್ತಿದ್ದೆನು, ಈತನ ಮೇಲಿನ ಪ್ರೀತಿಯು ಇನ್ನೂ ಕಡಿಮೆಯಾಗಿಲ್ಲ, ಎಂಬ ವಿಚಾರಗಳು ಒಡನೆಯೇ ಆತನ (ರಾಜಪುತ್ರನ) ಮನಸ್ಸಿನಲ್ಲಿ ಬಂದುದರಿಂದ ಆ ಶಿಕ್ಷಕನನ್ನು ತನ್ನ ಹತ್ತರಕ್ಕೆ ಕರೆದು

ಈ ಪ್ರಕಾರ ಉತ್ತೇಜನವನ್ನು ಹೊಂದಿದ ಆ ಮುದುಕನು "ರಾಜಪುತ್ರನೆ ! ಇತ್ತಿತ್ತಲಾಗಿ ನಿನ್ನ ಚಿತ್ತವು ಚಂಚಲವಾದಂತೆ ತೋರುತ್ತದೆ. ಇದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ಅರಮನೆಯಲ್ಲಿ ಬಗೆಬಗೆಯ ಸುಖಸಾಧನಗಳು ಇರುತ್ತವೆ. ಅವುಗಳನ್ನೆಲ್ಲ ಬಿಟ್ಟು ನೀನು ಒಬ್ಬನೇ ಏಕಾಂತವಾದ ಸ್ಥಳದಲ್ಲಿ ಬಂದು ಕುಳಿತುಕೊಳ್ಳುತ್ತಿ, ಇದರ ಕಾರಣವೇನು?" ಎಂದು ಕೇಳಲು, ರಾಜಪುತ್ರನು "ಗುರುಗಳೆ ! ಅರಮನೆಯಲ್ಲಿ ನಡೆಯುವ ಸುಖಭೋಗಗಳಿಂದ ನನಗೆ ಮುಂಚಿನಂತೆ ಆನಂದವಾಗುವದಿಲ್ಲ, ಆದ್ದರಿಂದ ಅವುಗಳನ್ನು ಬಿಟ್ಟುಬಿಟ್ಟಿದ್ದೇನೆ. ಇನ್ನು ಏಕಾಂತ ಸ್ಥಳದಲ್ಲಿ ಬಂದು ಕೂತುಕೊಳ್ಳುವ ಕಾರಣವೇನಂದರೆ-ಚಿಂತೆಯಿಂದ ದುಃಖಿತನಾದ ನನ್ನ ಮುಖವನ್ನು ತೋರಿಸಿ ಅರಮನೆಯಲ್ಲಿರುವ ಉಳಿದ ರಾಜಪುತ್ರರ ಹಾಗು ರಾಜಕನ್ನಿಕೆಯರ ಆನಂದದ ಹಾನಿಯನ್ನು ಮಾಡುವದು ನನ್ನ ಮನಸ್ಸಿಗೆ ಬರುವದಿಲ್ಲ" ಎಂದನು. ರಾಜಪುತ್ರನ ಮಾತುಕೇಳಿ ಆ ವೃದ್ಧ ಪಂಡಿತನು ಹೇಳುತ್ತಾನೆ. "ಆನಂದಭೂಮಿಯಲ್ಲಿ ದುಃಖಿತನಾದ ಮನುಷ್ಯನನ್ನು ನಾನು ಇದುವರೆಗೆ ಯಾರನ್ನೂ ನೋಡಿದ್ದಿಲ್ಲ; ದುಃಖಪಟ್ಟವನನ್ನು ನೋಡಿದ್ದು ಇದೇ ಮೊದಲನೇ ಬಾರಿ. ಆನಂದಭೂಮಿಯಲ್ಲಿರುವವರಿಗೆ ದುಃಖವಾಗುವ ಕಾರಣವೇ ನನಗೆ ಕಂಡು ಬರುವದಿಲ್ಲ. ಬೇಕಾದರೆ ನಾನು ನಿನಗೆ ಈ ಬಗ್ಗೆ ಮನಗಾಣಿಸಿಕೊಡುವೆನು. ಹಬಶೀದೇಶದ ಅರಸನಿಗೆ ಪ್ರಾಪ್ತವಾಗುವಂಥ ಎಲ್ಲ ತರದ ಸೌಖ್ಯಗಳು ಇಲ್ಲಿ ಇರುತ್ತವೆ. ಇಲ್ಲಿ ನಿನಗೆ ಯಾವತೆರದ ಶ್ರಮವನ್ನೂ ಮಾಡುವ ಅವಶ್ಯವಿಲ್ಲ; ಇಲ್ಲವೆ ಯಾವ ತೆರದ ಗಂಡಾಂತರಕ್ಕೂ ಅಂಜುವ ಕಾರಣವಿಲ್ಲ ಮನುಷ್ಯನು ವಿಧವಿಧದ ಕಷ್ಟಗಳನ್ನು ಅನುಭೋಗಿಸಿ ದೊರಕಿಸುವ ಉತ್ತಮೋತ್ತಮ ಪದಾರ್ಥಗಳು ನಿಮ್ಮಂಥ ರಾಜಪುತ್ರರ ಸುಖಕ್ಕಾಗಿ ಇಲ್ಲಿ ಸಿದ್ಧವಾಗಿರುತ್ತವೆ, ಅಂದಬಳಿಕ ನೀವು ಅದೃಷ್ಟವಂತರಲ್ಲವೆ? ನಿನಗೆ ಏನು ಕಡಿಮೆ ಅದೆ? ಏನೂ ಕಡಿಮೆ ಇಲ್ಲದ ಬಳಿಕ ನಿನಗೆ ದುಃಖವು ಯಾಕಾಗಬೇಕು ?"

ರಾಜಪುತ್ರನು-ನನಗೆ ಏನೂ ಕಡಿಮೆ ಇಲ್ಲ, ಇಲ್ಲವೆ ನನಗೆ ಏನು ಕಡಿಮೆ ಇದೆ ಎಂಬುವದು ತಿಳಿಯಲೊಲ್ಲದೆಂಬ ಸಂಗತಿಯೇ ನನ್ನ ದುಃಖದ ಕಾರಣವು. ನನಗೆ ಇಂಥಾದೊಂದು ಪದಾರ್ಥದ ಕೊರತೆಯುಂಟೆಂದು ತಿಳಿದರೆ ಆ ಕೊರತೆಯನ್ನು ಪೂರ್ಣಮಾಡಿಕೊಳ್ಳಬೇಕೆಂಬ ಆಶೆ ಹುಟ್ಟುವದು. ಮತ್ತು ಆ ಪದಾರ್ಥವನ್ನು ದೊರಕಿಸುವ ಬಗ್ಗೆ ನಾನು ಅನೇಕ ವಿಧವಾದ ಪ್ರಯತ್ನಗಳನ್ನು ಮಾಡುವೆನು. ಹೀಗಾದರೆ ಸೂರ್ಯೋದಯವಾದಾಗಿನಿಂದ ಸೂರ್ಯಾಸ್ತದವರೆಗೆ ನಡುವೆ ಇರುವ ವೇಳೆಯು ನನಗೆ ಅಷ್ಟು ಅಸಹ್ಯವಾಗಲಿಕ್ಕಿಲ್ಲ. ಇಲ್ಲವೆ ನಿದ್ದೆ ತಿಳಿದದ್ದುಕೂಡಲೆ ಪುನಃ

ಜೀವಕ್ಕೆ ಉಂಟಾದ ಬೇಸರವನ್ನು ಪರಿಹರಿಸುವಂಥ ನಿದ್ರೆಯಾದರೂ ಯಾವಾಗಲೂ ಯಾಕೆ ಬರುತ್ತಿರಲಿಕ್ಕಿಲ್ಲೆಂಬ ಚಿಂತೆಯು ಅಳಿದುಹೋಗುವದು; ಕುರಿಮರಿಗಳೂ ಆಡುಮರಿಗಳೂ ಒಂದನ್ನೊಂದು ಬೆನ್ನಟ್ಟಿ ಓಡಾಡುವದನ್ನು ನಾನು ನೋಡಿದಾಗ ಇದೇ ಮೇರೆಗೆ ಯಾವಾಗಲೂ ತೊಡಗಿ ಇರುವಂಥ ಉದ್ಯೋಗವು ನನಗೆ ಇದ್ದರೆ ಎಷ್ಟು ಸುಖವಾಗುತ್ತಿತ್ತು! ಎಂಬ ವಿಚಾರವು ನನ್ನ ಮನಸ್ಸಿನಲ್ಲಿ ಬರುತ್ತದೆ. ನನಗೆ ಬೇಕಾಗುವ ಯಾವತ್ತು ಪದಾರ್ಥಗಳೂ ಶ್ರಮಮಾಡದೆ ಇಲ್ಲಿ ದೊರೆಯುವ ಕಾರಣ ಎಲ್ಲ ದಿವಸಗಳೂ, ಎಲ್ಲ ತಾಸುಗಳೂ ನನಗೆ ಒಂದೇಸವನೇ ಇದ್ದಂತೆ (ವೈಚಿತ್ರ್ಯವಿಹೀನ) ತೋರುತ್ತವೆ. ಹೆಚ್ಚಿನ ಸಂಗತಿಯೇನಂದರೆ, ಇವತ್ತಿನ ದಿವಸವು ನಿನ್ನಿಗಿಂತ ಹೆಚ್ಚು ಬೇಸರವನ್ನುಂಟು ಮಾಡುತ್ತದೆ. ಇದೇ ಹೆಚ್ಚು ಕಡಿಮೆಯಲ್ಲದೆ ಬೇರೆ ಯಾವತರದ ಮನೋರಂಜನೆಯೂ ಆಗುವದಿಲ್ಲ. ಗುರುಗಳೆ! ತಾವು ಅನುಭವವುಳ್ಳವರಾದ ಕಾರಣ ತಮ್ಮನ್ನು ಬೇಡಿಕೊಳ್ಳುವದೇನಂದರೆ, ನಾನು ಚಿಕ್ಕವನಿದ್ದಾಗ ಜಗತ್ತು ನನಗೆ ಹೊಸದಾಗಿತ್ತು, (ಕ್ಷಣಕ್ಷಣಕ್ಕೆ ಹೊಸ ಹೊಸ ಪದಾರ್ಥವು ನನ್ನ ದೃಷ್ಟಿಗೆ ಬೀಳುತ್ತಿತ್ತು) ಆದ್ದರಿಂದ ದಿವಸವು ನನಗೆ ಬಹಳ ಸಣ್ಣದಾಗಿದ್ದಂತೆ ತೋರುತ್ತಿತ್ತು. ಅದೇ ಮೇರೆಗೆ ಈಗಲೂ ದಿವಸವು ಸಣ್ಣದಾಗಿ ತೋರುವ ಹೊಸ ಯುಕ್ತಿಯೇನಾದರೂ ಇದ್ದರೆ ದಯಮಾಡಿ ಹೇಳಬೇಕು. ಭೋಗಗಳನ್ನು ಭೋಗಿಸಿ ನಾನು ತೀರ ಬೇಸತ್ತೆನು. ಆದರೆ ಈಗ ಯಾವ ವಸ್ತುವಿನ ಇಚ್ಛೆಯು ನನಗೆ ಉಂಟಾಗಿ ಅದನ್ನು ಸಂಪಾದಿಸಬೇಕೆಂಬ ಕುತೂಹಲವುಂಟಾದೀತೋ ಅಂಥ ವಸ್ತುವನ್ನು ಹೇಳಿರಿ" ಅಂದನು. ಹೀಗೆ ಹೇಳಿದ ರಾಜಪುತ್ರನ ದುಃಖದ ಅಪೂರ್ವ ಕಾರಣವನ್ನು ಕೇಳಿ ಆ ವೃದ್ಧ ಪಂಡಿತನಿಗೆ ಬಹಳ ಆಶ್ಚರ್ಯವಾಯಿತು. ಏನು ಉತ್ತರಕೊಡಬೇಕೆಂಬುದು ಆತನಿಗೆ ತಿಳಿಯಲೊಲ್ಲದು. ಆದರೂ ಉತ್ತರಕೊಡದೆ ಸುಮ್ಮನೆ ಕುಳಿತುಕೊಳ್ಳುವದು ನೆಟ್ಟಗಲ್ಲೆಂದು—"ಬಾಲಕನೇ! ಜಗತ್ತಿನೊಳಗೆ ಜನರಿಗೆ ಆಗುವ ದುಃಖಗಳು ಮಾತ್ರ ನಿನಗೆ ಗೊತ್ತಿದ್ದರೆ ನಿನ್ನ ಈಗಿನ ಸೌಖ್ಯದ ನಿಜವಾದ ಬೆಲೆಯು ನಿನಗೆ ತಿಳಿಯುತ್ತಿತ್ತು" ಅಂದನು. ರಾಜಪುತ್ರನು —"ಸರಿ, ಯಾವದರ ಬಗ್ಗೆ ಇಚ್ಛಿಸಬೇಕೋ ಅಂಥ ವಿಷಯವನ್ನು ನೀವು ನನಗೆ ಹೇಳಿದಿರಿ. ಇನ್ನು ಜಗತ್ತಿನೊಳಗಿನ ಜನರ ದುಃಖವನ್ನು ತಿಳಿಯಬೇಕೆಂಬ ಇಚ್ಛೆಯು ಈಗ ನನಗೆ ಹುಟ್ಟಿತು, ಆ ಇಚ್ಛೆಯನ್ನು ಪೂರ್ಣಮಾಡಿಕೊಳ್ಳದ ಹೊರತು ಅಂದರೆ ಜನರ ದುಃಖಗಳನ್ನು ಪ್ರತ್ಯಕ್ಷ ತಿಳಿದ ಹೊರತು ನನ್ನ ಈಗಿನ ದೊಡ್ಡಸ್ತಿಕೆಯ ಮತ್ತು ಸೌಖ್ಯದ ನಿಜವಾದ ಬೆಲೆಯು ತಿಳಿಯಬರುವದಿಲ್ಲ."

# ನಾಲ್ಕನೆಯ ಭಾಗವು.

## ರಾಜಪುತ್ರನ ಖೇದವೂ, ಚಿಂತೆಯೂ.

ಅಷ್ಟರಲ್ಲಿ ಊಟದ ಹೊತ್ತಾದಕಾರಣ ಅರಮನೆಯ ಗಂಟೆಯು ಬಾರಿಸಿತು ಅವರು ತಮ್ಮ ಭಾಷಣವನ್ನು ಮುಗಿಸಿ ಅರಮನೆಯ ದಾರಿಯನ್ನು ಹಿಡಿದರು.

ರಾಸೆಲಾಸನ ಮನಸ್ಸಿನಲ್ಲಿ ಯಾವ ವಿಚಾರವು ಬರಬಾರದೆಂದು ಆ ವೃದ್ಧಪಂಡಿತನು ಪ್ರಯತ್ನಮಾಡುತ್ತಿದ್ದನೋ, ಅದೇ ವಿಚಾರವು ತನ್ನ ಭಾಷಣದ ಯೋಗದಿಂದ ಆತನ ಮನಸ್ಸಿನಲ್ಲಿ ಬಂದದ್ದು ನೋಡಿ ಪಂಡಿತನಿಗೆ ಖೇದವಾಯಿತು. ಆದರೆ ಅದು ಆತನ ಮನಸ್ಸಿನಲ್ಲಿ ಬಹಳ ಹೊತ್ತು ನಿಲ್ಲಲಿಲ್ಲ. ಯಾಕಂದರೆ, ಮನುಷ್ಯರು ಯಾವ ದುಃಖವನ್ನು ತಾವು ಬಹುಕಾಲದಿಂದ ಕಷ್ಟಪಟ್ಟು ಸಹನಮಾಡಿಕೊಳ್ಳುತ್ತ ಬಂದಿರುತ್ತಾರೋ ಆ ದುಃಖವನ್ನು ಮುಪ್ಪಿನಲ್ಲಿ ತಾಳಿಕೊಳ್ಳುವದು ಬಹು ಸುಲಭವಾಗಿರುತ್ತದೆಂಬ ಕಾರಣದಿಂದಲೋ, ಇಲ್ಲವೆ ಜನರು ತಮ್ಮನ್ನು ಅಲಕ್ಷಿಸುತ್ತಾರೆ, ತಾವೂ ಅವರನ್ನು ದುರ್ಲಕ್ಷಿಸಬೇಕೆಂಬ ಭಾವದಿಂದಲೊ, ಇಲ್ಲವೆ ಯಾವತ್ತು ದುಃಖಗಳ ಅಂತ್ಯವನ್ನು ಮಾಡುವಂಥ ಮಹಾಮೃತ್ಯುವಿನ ಕೈಯು ತಮ್ಮ ಹತ್ತರ ಬಂದಿರುತ್ತದಾದದರಿಂದ ಸದ್ಯದ ದುಃಖವು ಕೇವಲತೃಣಸಮವಾದದ್ದೆಂಬ ವಿಚಾರದಿಂದಲೊ, ಏನೊ, ಮುಪ್ಪಿನಲ್ಲಿ ಮನುಷ್ಯನ ನಾಚಿಕೆ ಹಾಗು ಖೇದ ಇವು ಬಹಳ ಹೊತ್ತು ನಿಲ್ಲುವದಿಲ್ಲ.

ರಾಜಪುತ್ರನ ವಿಚಾರಗಳಾದರೂ ಪಂಡಿತನ ವಿಚಾರಕ್ಕಿಂತ ವಿಶೇಷ ಪ್ರಗಲ್ಭವಾದಂಥವು ( ಮುಂದೆ ಹೋಗತಕ್ಕವು ) ಇದ್ದದರಿಂದ ಆತನಿಗೆ ತೀವ್ರ ಚಿತ್ತಸ್ವಾಸ್ಥ್ಯವುಂಟಾಗಲಿಲ್ಲ. ದೇವರು ತನಗೆ ಬಹಳ ಆಯುಷ್ಯವನ್ನು ಕೊಟ್ಟಿದ್ದಾನೆ, ಮತ್ತು ತಾನು ಇನ್ನೂ ಚಿಕ್ಕವನಿರುವದರಿಂದ ತನ್ನ ಆಯುಷ್ಯ ತೀರುವವರೆಗೆ ಮಿತಿಮೀರಿ ದುಃಖವಾಗುವದೆಂಬ ಅಂಜಿಕೆಯು ಮೊದಲು ಅವನಿಗಿತ್ತು. ಆದರೆ ಈಗ ಆತನ ಅಂಜಿಕೆಯು ಇಲ್ಲದಂತಾಯಿತು. ಯಾಕಂದರೆ—ದೇವರ ದಯದಿಂದ ತಾನು ಇನ್ನೂ ಬಹಳ ದಿವಸ ಬದುಕುವವನಾದದರಿಂದ, ತನ್ನ ಕೈಯಿಂದ ಅನೇಕ ಸತ್ಕೃತ್ಯಗಳಾಗುವವೆಂಬ ವಿಚಾರವು ಆತನ ಮನಸ್ಸಿನಲ್ಲಿ ಹುಟ್ಟಿ ಅವನಿಗೆ ಬಹಳ ಆನಂದವಾಯಿತು. ಇಷ್ಟು ದಿವಸಗಳ ಅವಧಿಯಲ್ಲಿ ಅವನಿಗೆ ಈ ತೆರದ ಸಂತೋಷವಾದದ್ದು ಇದೇ ಮೊದಲನೆಯ ಸಾರಿ. ಆತನ ಮುಖಚಿಹ್ನವು ಬೇರೆಯಾಯಿತು. ತಾರುಣ್ಯದ ಲಕ್ಷಣವು ಆತನ ಮುಖದಲ್ಲಿ ಕಂಗೊಳಿಸಹತ್ತಿತು ಕಣ್ಣುಗಳ ಕಾಂತಿ

ಯು ಹೆಚ್ಚಾಯಿತು. ಯಾವದೋ ಒಂದು ಮಹಾಕೃತ್ಯವು ತನ್ನಿಂದಾಗತಕ್ಕದ್ದು ದೆಂಬ ವಿಚಾರವು ಆತನ ಮನಸಿನಲ್ಲಿ ಬಂದದರಿಂದಲೇ ಅವನಿಗೆ ಆ ರೀತಿಯಾದ ಆವೇಶವುಂಟಾಯಿತು. ಆದರೆ ಆ ಮಹಾಕೃತ್ಯವು ಯಾವದು ? ಅದನ್ನು ಹ್ಯಾಗೆ ಮಾಡಬೇಕು ? ಅವನ್ನು ನೆರವೇರಿಸತಕ್ಕ ಉಪಾಯುಗಳು ಯಾವವು ? ಇವುಗಳ ವಿಷಯುಕ್ಕೆ ಖಂಡಿತವಾದ ಜ್ಞಾನವು ಆತನಿಗೆ ಇನ್ನೂ ಆಗಿದ್ದಿಲ್ಲ. ಆದರೆ ಈ ಹೊತ್ತಿನಿಂದ ಆತನ ಔದಾಸೀನ್ಯವೂ, ಏಕಾಂತವಾಸವೂ ಇಲ್ಲದಂತಾದವು. ಬಳಿಕ ಆತನು ತನಗೆ ಸೌಖ್ಯದ ನಿಧಿಯು ಸಿಕ್ಕಿತು; ಆ ಸೌಖ್ಯದ ಉಪಭೋಗವನ್ನು ಮಾಡಬೇಕಾದರೆ ಅವನ್ನು ಯಾರಿಗೂ ತಿಳಿಯುಗೊಡಬಾರದು ಎಂದು ವಿಚಾರ ಮಾಡಿ ಅಂದಿನಿಂದ ಉಳಿದ ರಾಜಪುತ್ರರೊಡನೆ ಕೂಡಿಕೊಂಡು ಸುಖಗಳನ್ನು ಅನುಭೋಗಿಸುವವನಂತೆ ತೋರಿಸಹತ್ತಿದನು. ಈ ಮೇರೆಗೆ ರಾಜಪುತ್ರನು ಯಾವ ಸ್ಥಿತಿಯು ತನಗೆ ತೀರ ಬೇಸರವಾಗಿತ್ತೋ ಅದೇ ಸ್ಥಿತಿಯು ಅತ್ಯುತ್ತಮವಾದದ್ದೆಂದು ಎರಡನೆಯವರಿಗೆ ತಿಳಿಸುವ ಪ್ರಯತ್ನ ನಡಿಸಿದನು. ಸಾರಾಂಶ–ಭೋಗಗಳಲ್ಲಿಯೇ ಅವನು ಹಗಲಿರುಳು ಕಳೆಯುವವನಂತೆ ಜನರಿಗೆ ತೋರಿಸಹತ್ತಿದನು. ಆದರೆ ಮನುಷ್ಯನ ಯಾವತ್ತು ವೇಳೆಯು ಸುಖಭೋಗಗಳಲ್ಲಿಯೇ ವೆಚ್ಚವಾಗಬೇಕಾದರೆ, ಸುಖಭೋಗಗಳ ಪ್ರಕಾರಗಳನ್ನಾದರೂ ಎಷ್ಟರ ಮಟ್ಟಿಗೆ ಹೆಚ್ಚಿಸಲಾದೀತು ! ಅನುಭವಿಸುವ ಮನುಷ್ಯನ ವೇಳೆಯು ಸ್ವಲ್ಪವಾದರೂ ಉಳಿದೇ ಉಳಿಯುತ್ತದೆ. ಇದೇ ಮೇರೆಗೆ ರಾಸೆಲಾಸನಿಗೂ ಕೂಡ ಹಗಲಿನಲ್ಲಿಯೂ, ರಾತ್ರಿಯಲ್ಲಿಯೂ ಎಷ್ಟೋ ತಾಸು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತಿತ್ತು. ಆಗ ಆತನು ಯಾರಿಗೂ ಸಂಶಯು ಬಾರದಂತೆ ಏಕಾಂತದಲ್ಲಿ ಕುಳಿತುಕೊಂಡು ವಿಚಾರ ಮಾಡುತ್ತಿದ್ದನು. ಆತನಿಗೆ ಮೊದಲು ತನ್ನಜೀವದ ಬಗ್ಗೆ ಬಂದ ಬೇಸರವು ಈಗ ಅಳಿದುಹೋಯಿತು. ಉಳಿದ ರಾಜಪುತ್ರರ ಬಳಿಗೆ ಆತನು ಆಗಾಗ್ಗೆ ಹೋಗಹತ್ತಿದನು ಹಾಗೆ ಮಾಡದಿದ್ದರೆ ತನ್ನ ಮನಃಕಲ್ಪನೆಯು ಸಿದ್ಧಿಸಲಿಕ್ಕಿಲ್ಲೆಂದು ಆತನು ತಿಳಿದುಕೊಂಡಿದ್ದನು. ಅವರ ಕೂಡ ವಿನೋದದ ಮಾತುಗಳನ್ನಾಡಿ ಸಂತೋಷಪಟ್ಟವನಂತೆ ತೋರಿಸುತ್ತಿದ್ದನು. ಆ ರಾಜಪುತ್ರರೆಲ್ಲರೂ ಎದ್ದು ತಮ್ಮ ತಮ್ಮ ಕೆಲಸಕ್ಕೆ ಹೋದರೂ ಕೂಡ ರಾಸೆಲಾಸನಿಗೆ ಆನಂದವೇ ಆಗುತ್ತಿತ್ತು. ಯಾಕಂದರೆ–ಯಾರೂ ಇಲ್ಲದಂತಾದ ಕೂಡಲೆ ಏಕಾಂತದಲ್ಲಿ ವಿಚಾರಮಾಡಲಿಕ್ಕೆ ಅವನಿಗೆ ವೇಳೆ ಸಿಗುತ್ತಿತ್ತು. ಸಾರಾಂಶ–ರಾಜಪುತ್ರರ ಸಹವಾಸದಲ್ಲಿಯೂ ಅವನಿಗೆ ಒಂದು ತೆರದ ಸುಖವಾಗುತ್ತಿತ್ತು, ಒಬ್ಬನೇ ಇದ್ದರೂ ಬೇರೆ ತರದ ಸುಖವಾಗುತ್ತಿತ್ತು. ಏಕಾಂತಸ್ಥಳದಲ್ಲಿ ಕುಳಿತನೆಂದರೆ ಆತನು ಬಹಳಮಾಡಿ ಜಗತ್ತು ಹ್ಯಾಗಿ

ರಬಹುದು ? ಅದರಲ್ಲಿ ಯಾವ ಯಾವ ಕೃತ್ಯಗಳು ಹ್ಯಾಗೆ ಹ್ಯಾಗೆ ನಡೆಯುತ್ತಿರಬಹುದೆಂಬ ಬಗ್ಗೆ ವಿಚಾರ ಮಾಡುತ್ತಿದ್ದನು. ಜಗತ್ತಿನ ವಿಷಯದಲ್ಲಿ ಏನೂ ಅರಿಯದಂಥ ಆ ರಾಜಪುತ್ರನು ಅದರ ವಿಷಯವಾಗಿ ಒಂದು ಮನಃಕಲ್ಪಿತವಾದ ಸೃಷ್ಟಿಯನ್ನೇ ಮಾಡುತ್ತಿದ್ದನು. ಹ್ಯಾಗಂದರೆ—ಜಗತ್ತಿನ ಜನರೊಳಗೆ ತಾನೂ ಒಬ್ಬನು ಸೇರಿ ಇರುವೆನೆಂದು ತಿಳಿದು, ಒಮ್ಮೆ ತಾನು ತೀರ ಬಡ ಮನುಷ್ಯನಿರುವೆನೆಂತಲೂ, ಮತ್ತೊಮ್ಮೆ ತಾನು ಅರಸನಿರುವೆನೆಂತಲೂ, ಒಮ್ಮೊಮ್ಮೆ ತಾನು ಒಳ್ಳೇ ದುರ್ಧರವಾದ ಪ್ರಸಂಗದಲ್ಲಿ ಸಿಕ್ಕಿರುವೆನೆಂತಲೂ, ಇಲ್ಲವೆ ಪರಿಹರಿಸಲಸಾಧ್ಯವಾದ ಸಂಕಟದೊಳಗೆ ಬಿದ್ದಿರುವೆನೆಂತಲೂ, ಹೀಗೆ ಬೇರೆ ಬೇರೆ ತರದ ಅವಸ್ಥೆಗಳನ್ನು ತನ್ನಲ್ಲಿ ಕಲ್ಪಿಸುವನು; ಆತನು ಪರೋಪಕಾರ ಮಾಡುವ ಸ್ವಭಾವವುಳ್ಳವನಾದ್ದರಿಂದ ಆತನ ಆ ಕಲ್ಪನೆಗಳ ಪರಿಣಾಮವು ಸುಖಕರವಾಗುತ್ತಿತ್ತು. ಉದಾಹರಣೆ- ತಾನು ಒಮ್ಮೊಮ್ಮೆ ಎರಡನೆಯವರ ಸಂಕಟಗಳನ್ನು ದೂರಮಾಡುವನು, ಒಮ್ಮೆ ದುಷ್ಟ ಜನರ ಕಪಟಕೃತ್ಯಗಳನ್ನು ಬೈಲಿಗೆ ಹಾಕುವನು, ಬಡಪ್ರಾಣಿಗಳಿಗೆ ಉಪದ್ರವಾಗುತ್ತಿದ್ದರೆ ಅದನ್ನು ಪರಿಹರಿಸುವನು, ಹಾಗೂ ಬಹು ಜನರ ಸುಖವನ್ನು ಹೆಚ್ಚಿಸುವನು.

ಈ ತೆರನ ವಿಚಾರಗಳನ್ನು ಮಾಡುವುದರಲ್ಲಿಯೇ ರಾಸೆಲಾಸನು ಆ ಆನಂದ ಭೂಮಿಯಲ್ಲಿ ೨೦ ತಿಂಗಳು ಕಾಲಕಳೆದನು. ಕಲ್ಪಿತ ಕೃತ್ಯಗಳ ಗೊಂದಲದಲ್ಲಿ ಅವನು ಎಷ್ಟು ನಿಮಗ್ನನಾಗುವನೆಂದರೆ, ತಾನು ಏಕಾಂತಸ್ಥಳದಲ್ಲಿ ಕುಳಿತಿರುವೆನೆಂಬ ಸ್ಮೃತಿಯು ಸಹ ಅವನ ಮೈಮೇಲೆ ಉಳಿಯುತ್ತಿದ್ದಿಲ್ಲ. ಪ್ರಪಂಚದಲ್ಲಿ ಮನುಷ್ಯನಿಗೆ ಒದಗುವ ಸಂಕಟಗಳನ್ನು ಪರಿಹರಿಸುವ ಯುಕ್ತಿ ಪ್ರಯುಕ್ತಿಗಳನ್ನು ಯೋಚಿಸುವದರಲ್ಲಿಯೇ ಯಾವಾಗಲೂ ತೊಡಗಿರುವನಾದದರಿಂದ, ಸಂಸಾರ ಸಾಗರದಲ್ಲಿ ತಾನು ಪ್ರವೇಶ ಮಾಡಬೇಕಾದರೆ ಯಾವ ಹಂಚಿಕೆಗಳನ್ನು ಹಾಕಬೇಕೆಂಬ ವಿಚಾರವು ಸಹ ಆತನ ಮನಸ್ಸಿನೊಳಗೆ ಇಲ್ಲದಂತಾಯಿತು.

ಒಂದಾನೊಂದು ದಿವಸ ರಾಸೆಲಾಸನು ಹಳ್ಳದ ದಂಡೆಯ ಮೇಲೆ ಕುಳಿತಾಗ, ಯಾವನೋ ಒಬ್ಬ ದುಷ್ಟನೂ, ಕಪಟಿಯೂ ಆದ ಮನುಷ್ಯನು ಒಬ್ಬ ತರುಣಳೂ ಅನಾಥಳೂ ಆದ ಕನ್ನಿಕೆಯ ಮೇಲೆ ತನ್ನ ಪ್ರೀತಿ ಇರುವದೆಂತಲೂ ಆಕೆಯನ್ನು ತಾನು ಲಗ್ನ ಮಾಡಿಕೊಳ್ಳುವೆನೆಂತಲೂ ಆಕೆಗೆ ಸುಳ್ಳೇ ನೆವತೋರಿಸಿ, ಆಕೆಯ ಹತ್ತಿರಿದ್ದ ಅಲ್ಪಸ್ವಲ್ಪ ಧನವನ್ನು ತೆಗೆದುಕೊಂಡು ಓಡಿಹೋಗಲು ಆ ಹುಡುಗೆಯು ತನ್ನ ಹಣವನ್ನು ತಿರುಗಿ ತನಗೆ ಕೊಡಬೇಕೆಂದು ಅಳುತ್ತಳುತ್ತ ಆತನ ಬೆನ್ನುಹತ್ತಿ ಹೋದಳೆಂಬ ಕಲ್ಪನೆಯು ರಾಜಪುತ್ರನ ಮನಸ್ಸಿನಲ್ಲಿ ಬಂತು. ಕಲ್ಪಿತಸೃಷ್ಟಿಯೊಳ

ಗಿನ ಈ ವಿಶ್ವಾಸಘಾತವನ್ನು ನೋಡಿ ರಾಸೆಲಾಸನಿಗೆ ದಯೆಹುಟ್ಟಿತು. ಆದರೆ ಅದೆಲ್ಲ ಕೇವಲ ಕಲ್ಪನೆಯೇ ಹೊರತು ನಿಜವಾದ ಸಂಗತಿಯಲ್ಲೆಂಬದನ್ನು ತೀರ ಮರೆತು ಬಿಟ್ಟು, ಆತನು ತನ್ನ ಸ್ಥಳದಿಂದೆದ್ದು ಆ ವಿಶ್ವಾಸಘಾತಮಾಡಿದ ಮನುಷ್ಯನನ್ನು ಹಿಡಿಯಬೇಕೆಂದು ಆತನ ಬೆನ್ನು ಹತ್ತಿದವನಂತೆ ಓಡಲಾರಂಭಿಸಿದನು. ಮತ್ತು "ಅಪರಾಧ ಮಾಡಿದ ಮನುಷ್ಯನಿಗೆ ತನ್ನನ್ನು ಯಾರಾದರೂ ಕಂಡಾರು, ಇಲ್ಲವೆ ಹಿಡಿದಾರೆಂಬ ಅಂಜಿಕೆಯು ಬಹಳ ಇರುವದರಿಂದ ಬಹಳ ತೀವ್ರದಿಂದ ಓಡುತ್ತಿರುತ್ತಾನೆ, ಆದಕಾರಣ ಆ ಕಳ್ಳನು ನನ್ನ ಕೈಗೆ ಸಿಕ್ಕುವದಿಲ್ಲ, ಅವನು ಓಡಿ ಓಡಿ ದಣಿದ ಮೇಲೆ ಸಿಕ್ಕುವನೆಂ"ದು ನಿಶ್ಚಯಿಸಿ, ರಾಜಪುತ್ರನು ಬಹು ಪ್ರಯತ್ನದಿಂದ ಓಡುತ್ತೋಡುತ್ತ ಕಟ್ಟಕಡೆಗೆ ಒಂದು ಪರ್ವತದ ಬುಡಕ್ಕೆ ಬಂದು ಮುಟ್ಟಿದನು. ಅಲ್ಲಿಗೆ ಆತನ ಓಟವು ಕಟ್ಟಾಯಿತು.

ಆಗ ಆತನಿಗೆ ಮೈಮೇಲೆ ಎಚ್ಚರವುಂಟಾಗಿ, ತನ್ನ ನಿರರ್ಥಕವಾದ ಆವೇಶದ ಬಗ್ಗೆ ನಗೆ ಬಂತು. ಆ ಮೇಲೆ ಆ ಪರ್ವತದ ಕಡೆಗೆ ನೋಡಿ ಅಂದನು " ನನ್ನ ಸುಖಕ್ಕೂ ಮತ್ತು ನನ್ನ ಕೈಯಿಂದಾಗುವ ಪರೋಪಕಾರಕ್ಕೂ ಅಡ್ಡಬಂದದ್ದು ಈ ಪರ್ವತವೇ, ಈ ಪರ್ವತವನ್ನು ದಾಟಿ ಆಚೆಗೆ ಹೋಗಬೇಕೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಬಂದು ಎಷ್ಟು ದಿವಸಗಳಾದವು! ಆ ಇಚ್ಛೆಯನ್ನು ಪೂರ್ಣ ಮಾಡುವ ದಕ್ಕಾಗಿ ಇದು ವರೆಗೆ ನಾನು ಏನೂ ಪ್ರಯತ್ನವನ್ನೂ ವಿಚಾರವನ್ನೂ ಮಾಡಿಲ್ಲ"

ಈ ತರದ ಆಲೋಚನೆಯು ಆತನ ಮನಸ್ಸಿನಲ್ಲಿ ಬಂದು ಆತನು ಅಲ್ಲಿಯೇ ಕೂತು ವಿಚಾರಮಾಡಹತ್ತಿದನು. ಸೆರೆಮನೆಯೊಳಗಿಂದ ಪಾರಾಗಿ ಹೋಗಬೇಕೆಂದು ನಾನು ನಿಶ್ಚಯ ಮಾಡಿದಮೇಲೆ ಸೂರ್ಯನು ತನ್ನ ಎರಡು ವಾರ್ಷಿಕ ಪ್ರದಕ್ಷಿಣೆಗಳನ್ನು ಮಾಡಿದನು. (೨ ವರ್ಷಗಳಾದವು) ಎಂಬ ವಿಷಯವು ನೆನಪಾದದರಿಂದ ಆತನಿಗೆ ಬಹಳ ದುಃಖವಾಯಿತು- ಅಷ್ಟು ದುಃಖವೂ ಖೇದವೂ ಅದಕ್ಕೂ ಪೂರ್ವದಲ್ಲಿ ಅವನಿಗೆ ಎಂದೂ ಆಗಿದ್ದಿಲ್ಲ- ಇಷ್ಟು ದಿವಸಗಳ (೨೦ ತಿಂಗಳ) ಅವಧಿಯಲ್ಲಿ ಏನಾದರೊಂದು ಉದ್ಯೋಗ ಮಾಡಿದ್ದರೆ ಬೇಕಾದ್ದು ಆಗುತ್ತಿತ್ತು. ಆದರೆ ತನ್ನ ಮೂರ್ಖತನದಿಂದ ಅಷ್ಟು ಕಾಲವೂ ವ್ಯರ್ಥವಾಗಿ ಹೋಯಿತೆಂದು ಆತನು ಚಡಪಡಿಸಿದನು- ೨೦ ತಿಂಗಳು ಮನುಷ್ಯನ ಇಡೀ ಆಯುಷ್ಯದ ಎಷ್ಟನೇ ಭಾಗವಿರುತ್ತದೆಂಬದನ್ನು ವಿಚಾರಮಾಡಿ ನೋಡಿ ಅವನು ಹೇಳಿದುದೇನಂದರೆ:— " ಮನುಷ್ಯನ ಆಯುಷ್ಯನ ಲೆಕ್ಕವನ್ನು ಮಾಡುವಾಗ ಅವನ ಅಜ್ಞಾನಕಾಲ, ಬಾಲ್ಯ, ವಾರ್ಧಕ್ಯ ಇವುಗಳನ್ನು ಹಿಡಿಯಬಾರದು, ಮನುಷ್ಯನು ಹುಟ್ಟಿ ಎಷ್ಟೋ ದಿವಸಗಳಾದನಂತರ ಆತನಲ್ಲಿ ವಿಚಾರಶಕ್ತಿಯು ಅಂಕುರಿಸುತ್ತದೆ, ಮತ್ತು ಮುಂದೆ ತುಸು ದಿವಸಗಳ

ಲ್ಲಿಯೇ ಉದ್ಯೋಗ ಮಾಡುವ ಶಕ್ತಿಯು ಕುಂದುತ್ತದೆ, ಇದರ ಮೇಲಿಂದ ನೋಡಲಾಗಿ ಮನುಷ್ಯನ ನಿಜವಾದ ಆಯುಷ್ಯವೆಂದರೆ ಬರೀ ನಾಲ್ವತ್ತು ವರ್ಷಗಳ , ಅಂದಮೇಲೆ ನಾನು ಆ ನಾಲ್ವತ್ತು ವರ್ಷಗಳ ೧/೨೪ ನೇ ಭಾಗವನ್ನು ಅಂದರೆ ೨೦ ತಿಂಗಳುಗಳನ್ನು ಕೇವಲ ಮನನದಲ್ಲಿಯೇ ಕಳೆದೆನು; ಕಳೆದು ಹೋದ ೨೦ ತಿಂಗಳು ನಿಜವಾಗಿ ನನ್ನ ವೇಳೆಯಿತ್ತು. ಅದರ ಉಪಯೋಗವನ್ನು ಮಾಡಿಕೊಂಡಿದ್ದರೆ ಏನಾದರೊಂದು ಬೆಲೆಯುಳ್ಳ ಕೆಲಸವಾಗುತ್ತಿತ್ತು, ಮುಂದೆ ಇನ್ನೂ ಕೆಲವು ಕಾಲವಿರುವದು ನಿಜ, ಆದರೆ ಅದರ ನಂಬಿಗೆಯು ನನಗೆ ಇಲ್ಲ, ಯಾಕಂದರೆ ಮನುಷ್ಯನ ಆಯುಷ್ಯವು ಕ್ಷಣಭಂಗುರವಾದುದು"

ತಾನು ವ್ಯರ್ಥವಾಗಿ ೨೦ ತಿಂಗಳುಗಳನ್ನು ಕಳೆದೆನೆಂಬ ಮಾತು ಅವನ ಮನಸ್ಸಿಗೆ ಬಹಳ ಹತ್ತಿತು. ತನ್ನ ಈ ಮೂರ್ಖತನದ ಬಗ್ಗೆ ಅವನಿಗೆ ಕಡುದುಗುಡವಾಯಿತು. ಮತ್ತು ಈ ದುಗುಡವು ಅಳಿದು ಹೋಗಿ ಚಿತ್ತಸ್ಥಿರವಾಗಬೇಕಾದರೆ ಅವನಿಗೆ ಎಷ್ಟೋ ದಿವಸಗಳು ಬೇಕಾದವು. ಅವನು—"೨೦ ತಿಂಗಳುಗಳ ಪೂರ್ವದಲ್ಲಿಯು ನನ್ನ ಯಾವತ್ತು ವೇಳೆಯು ವ್ಯರ್ಥವಾಗಿ ಹೋಗುವದಕ್ಕೆ ನನ್ನ ಪೂರ್ವಜರ ಕೆಟ್ಟನಡತೆಗಳು, ಇಲ್ಲವೆ ಅವರ ಮೂರ್ಖತನವು, ಅಥವಾ ಈ ದೇಶದೊಳಗಿನ ಹುಚ್ಚು ನಡತೆಗಳು, ಇವೇ ಮುಖ್ಯಕಾರಣಗಳು, ನನ್ನ ಆಯುಷ್ಯದೊಳಗೆ ಇಷ್ಟು ದಿವಸಗಳು ವ್ಯರ್ಥವಾಗಿ ಹೋದವೆಂಬ ವಿಚಾರವು ಮನಸ್ಸಿನಲ್ಲಿ ಬಂತೆಂದರೆ ನನಗೆ ಬಹಳ ವಿಷಾದವಾಗುತ್ತದೆ, ಆದರೆ ಆ ಮಾತು ನನ್ನ ಮನಸ್ಸಿಗೆ ಹತ್ತುವದಿಲ್ಲ. ಯಾಕಂದರೆ ಕೇವಲ ಒತ್ತಾಯದಿಂದ ಮತ್ತು ನನ್ನ ಅಜ್ಞಾನದ ಮೂಲಕ ಅಷ್ಟು ಕಾಲವು ವ್ಯರ್ಥವಾಗಿ ಹೋಯಿತು, ಆದರೆ ನನಗೆ ಹೊಸಜ್ಞಾನ ಪ್ರಾಪ್ತವಾದಂದಿನಿಂದಲೂ ಮತ್ತು ಸೆರೆಮನೆಯೊಳಗಿಂದ ಪಾರಾಗಿ ಹೋಗಬೇಕೆಂಬ ಯೋಚನೆಯನ್ನು ಮಾಡಿದಂದಿನಿಂದಲೂ ನಾನು ಏನು ೨೦ ತಿಂಗಳುಗಳನ್ನು ವ್ಯರ್ಥವಾಗಿ ಕಳೆದೆನೋ ಅದು ಮಾತ್ರ ಕೇವಲ ನನ್ನ ಮೂರ್ಖತನವೇ ಎಂದು ನನ್ನ ಮನಸ್ಸಿಗೆ ಬಹಳ ಹತ್ತಿರುತ್ತದೆ. ೨೦ ತಿಂಗಳುಗಳನ್ನೆಲ್ಲ ಕೇವಲ ಆಲಸ್ಯದಲ್ಲಿಯೇ ಕಳೆದು ಬಿಟ್ಟೆನಲ್ಲ! ಇಷ್ಟು ಅವಧಿಯಲ್ಲಿ ಚಿಕ್ಕ ಪಕ್ಷಿಗಳು ತಮ್ಮ ತಾಯಿತಂದೆಗಳ ಹಂಬಲ ಬಿಟ್ಟು, ವನದೊಳಗೂ, ಆಕಾಶದೊಳಗೂ ಸ್ವತಂತ್ರವಾಗಿ ತಿರುಗಾಡಲಿಕ್ಕೆ ಕಲಿತವು. ಇಷ್ಟು ವೇಳೆಯಲ್ಲಿ ಕುರಿಮರಿಗಳು ತಾಯಿಯ ಮೊಲೆಯುಣ್ಣುವದನ್ನು ಬಿಟ್ಟು, ಆನಂದದಿಂದ ಗುಡ್ಡಗಳನ್ನೇರಿ, ಸ್ವೇಚ್ಛೆಯಿಂದ ತಮ್ಮ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಕಲಿತವು. ಇಷ್ಟು ಅವಧಿಯಲ್ಲಿ ನಾನು ಮಾತ್ರ ಹೊಸದು ಏನೂ ಕಲಿಯಲಿಲ್ಲ. ೨೦ ತಿಂಗಳ ಮುಂಚೆ ಇದ್ದಂತೆಯೇ ಅಜ್ಞಾನಿಯೂ, ಪರತಂತ್ರನೂ ಆಗಿರುವೆನು. ಇಷ್ಟು ಅವಧಿಯಲ್ಲಿ ಚಂದ್ರನು ಇಪ್ಪ

ತ್ತು ಶಶಿ ತನ್ನ ಬಿಂಬದಲ್ಲಿ ಹೆಚ್ಚುಕಡಿಮೆಗಳನ್ನು ಮಾಡಿ, "ವೇಳೆಯು ಕಳೆಯುತ್ತಹೋಗುತ್ತದೆ, ಸ್ಥಿರವಾಗಿ ನಿಲ್ಲುವದಿಲ್ಲ" ಎಂದು ಸೂಚಿಸಿದನು. ನದಿಗಳೂ, ಹೊಳೆಗಳೂ ಒಂದೇ ಸಮನೆ ಮುಂದೆ ಹರಿಯುವಂಥ ತಮ್ಮ ಪ್ರವಾಹಗಳ ವೇಗದಿಂದ, ಸುಮ್ಮನೆ ಕೂಡ್ರಬೇಡೆಂದು ನನಗೆ ಉಪದೇಶ ಮಾಡಿದವು. ಆದರೆ ನಾನು ಯಾವದಕ್ಕೂ ಲಕ್ಷಕೊಡದೆ, ಕೇವಲ ಮನನ ಮಾಡುವದರಲ್ಲಿಯೇ ವೇಳೆಯನ್ನು ಕಳೆದೆನು. ಪೃಥ್ವಿಯೂ, ಗ್ರಹಗಳೂ ನನಗೆ ಹೇಳಿದ ಬುದ್ಧಿವಾದವನ್ನು ನಾನು ಕೇಳಲಿಲ್ಲ. ಅಲ್ಪಸ್ವಲ್ಪವಲ್ಲ, ಇಪ್ಪತ್ತು! ತಿಂಗಳುಗಳನ್ನು ವ್ಯರ್ಥ ಕಳೆದೆನು. ಇಷ್ಟು ವೇಳೆಯನ್ನು ನನಗೆ ತಿರುಗಿ ಯಾರು ತಂದುಕೊಡುವರು ? ಎಂದು ಚಿಂತಿಸಿದನು !

ಈ ದುಃಖದಾಯಕ ವಿಚಾರಗಳು ಆತನ ಮನಸ್ಸಿನಲ್ಲಿ ನಟ್ಟುಹೋದವು; ಏನು ಮಾಡಿದಾಗ್ಯೂ ಆ ವಿಚಾರಗಳು ಅವನ ಮನಸ್ಸಿನೊಳಗಿಂದ ಹೋಗಲೊಲ್ಲವು. ಇನ್ನು ಮುಂದೆ ಬರೇ ವ್ಯರ್ಥವಾದ ಹುಚಿಕೆಗಳನ್ನು ಹಾಕುವದರಲ್ಲಿ ವೇಳೆ ಕಳೆಯಬಾರದೆಂದು ಗೊತ್ತು ಮಾಡಿದನಂತರ ಸಹ ನಾಲ್ಕು ತಿಂಗಳುಗಳು ಕಳೆದುಹೋದವು. ಕಡೆಗೆ ಈ ವ್ಯರ್ಥವಾದ ವಿಚಾರಗಳನ್ನು ಬಿಟ್ಟು, ನಿಜವಾದ ಉದ್ಯೋಗವನ್ನು ಮಾಡ ಲಾರಂಭಿಸಲಿಕ್ಕೆ ಕೆಳಗೆ ಹೇಳುವ ಸಂಗತಿಯು ಕಾರಣವಾಯಿತು, ಒಂದುದಿನ ಒಬ್ಬ ಕೆಲಸದವಳ ಕೈಯೊಳಗಿಂದ ಚಿನಾಯಿ ಮಣ್ಣಿನಿಂದ ಮಾಡಿದ ಒಂದು ಗಡಿಗೆ ನೆಲಕ್ಕೆ ಬಿದ್ದು ಒಡೆಯಿತು. ಆಗ ಅವಳು "ಯಾವದು ಪುನಃ ನೆಟ್ಟಗೆ ಮಾಡಲಿಕ್ಕೆ ಬರುವದಿಲ್ಲವೋ ಅದರ ಬಗ್ಗೆ ಸುಮ್ಮನೆ ಖೇದಪಟ್ಟರೆ ಏನು ಪ್ರಯೋಜನ?" ಎಂದು ಅಂದಳು. ಈ ಮಾತು ರಾಜಪುತ್ರನ ಕಿವಿಗೆ ಬಿತ್ತು. ಅದನ್ನು ಕೇಳಿ ಆತನಿಗೆ ಬಹಳ ಖೇದವಾಯಿತು. ಈ ಒಕ್ಕಲಗಿತ್ತಿಗೆ ಇದ್ದಷ್ಟು ಬುದ್ಧಿ ತನಗೆ ಇಲ್ಲವಲ್ಲ? ಗಡಿಗೆ ನೆಲಕ್ಕೆ ಬಿದ್ದು ಒಡೆದ ಕೂಡಲೆ ಪುನಃ ಅದನ್ನು ನೆಟ್ಟಗೆ ಮಾಡಲಿಕ್ಕೆ ಬರುವದಿಲ್ಲೆಂದು ಅವಳು ತಟ್ಟನೆ ತಿಳಿದುಕೊಂಡಳು. ಕಳೆದುಹೋದ ೨೦ ತಿಂಗಳುಗಳು ಎಷ್ಟು ಚಿಂತಿಸಿದರೂ ತಿರುಗಿ ಬಾರವೆಂಬುದು ನನಗೆ ತಿಳಿಯಬಾರದೇ? ನನ್ನ ಬುದ್ಧಿಗೆ ಧಿಕ್ಕಾರವಿರಲಿ ! ಎಂದು ತನ್ನನ್ನು ತಾನೇ ತಿರಸ್ಕರಿಸಿಕೊಂಡನು. ಆದರೆ ಎಷ್ಟೋ ಉಪಯುಕ್ತವಾದ ಸಂಗತಿಗಳು ತೀರ ಸ್ಪಷ್ಟವಿದ್ದಾಗ್ಯೂ ಅವು ಕೇವಲ ಕಾಕತಾಲೀಯ ನ್ಯಾಯದಿಂದಲೇ ಮನುಷ್ಯನಿಗೆ ತಿಳಿದುಬಂದಿರುತ್ತವೆಂಬ ಸರ್ವಸಾಧಾರಣವಾದ ನಿಯಮವು ಆ ಬಡ ಪ್ರಾಣಿಗೆ ಗೊತ್ತಿದ್ದಿಲ್ಲ. ಯಾಕಂದರೆ ಮನಸ್ಸು ದೂರದಲ್ಲಿದ್ದಂಥ, ಮತ್ತು ಗಹನವಾದಂಥ ವಿಷಯದ ಬಗ್ಗೆ ಬಳ್ಳೇ ಆವೇಶದಿಂದ ವಿಚಾರ ಮಾಡುತ್ತಿರುವಾಗ, ತೀರ ಹತ್ತಿರಿದ್ದ ಒಡವೆಯು ಕೇವಲ ಸ್ಪಷ್ಟವಿದ್ದಾಗ್ಯೂ ಲಕ್ಷದಲ್ಲಿ ಬರುವದಿಲ್ಲ. ಹೀಗೆ ಹಲವು ಬಾರಿ ಸಂಭವಿಸುತ್ತದೆ. ರಾಜಪುತ್ರನು

ಕಾಸು ವ್ಯರ್ಥವಾದ ಮಾತಿನ ಬಗ್ಗೆ ಖೇದಪಟ್ಟದ್ದು ತನ್ನ ದಡ್ಡತನವೆಂದು ತಿಳಿದು, ಇಂದಿನಿಂದ ದುಃಖಪಡುವದನ್ನು ಬಿಟ್ಟು, ಆನಂದಭೂಮಿಯೊಳಗಿಂದ ಪಾರಾಗುವ ಉಪಾಯವನ್ನು ಹುಡುಕುವವರ ಕಡೆಗೇ ತನ್ನ ಮನಸ್ಸನ್ನು ಹಚ್ಚಿದನು.

## ಐದನೆಯ ಭಾಗ.

——(೦)——

### ಆನಂದಭೂಮಿಯೊಳಗಿಂದ ಪಾರಾಗಿಹೋಗುವ ಬಗ್ಗೆ ಅರಸು ಕುಮಾರನ ವಿಚಾರಗಳು.

ಏಕಾಂತಸ್ಥಾನದೊಳಗಿಂದ ಪಾರಾಗಿ ಹೋಗಬೇಕೆಂದು ನಿಶ್ಚಯಿಸಿ, ಅದರ ಬಗ್ಗೆ ನಿಜವಾದ ಯತ್ನ ಮಾಡಹತ್ತಿದಾಗ ಮಾತ್ರ, ಕೇವಲ ಕಲ್ಪನೆಯಿಂದಲೇ ಸಿದ್ಧವಾದಂತೆ ತೋರುವ ಸಂಗತಿಯನ್ನು ನಿಜವಾಗಿ ಕೃತಿಯಿಂದ ಸಿದ್ಧಮಾಡಿ ತೋರಿಸುವದು ಬಹಳ ಕಠಿಣವಿರುತ್ತದೆಂದು ರಾಸೆಲಾಸನಿಗೆ ಗೊತ್ತಾಯಿತು. ಬಿಡುಗಡೆ ಹೊಂದಬೇಕಾದರೆ ಏಕಾಂತಸ್ಥಾನದೊಳಗಿಂದ ಹೊರಬೀಳುವದಕ್ಕೆ ಮಾರ್ಗವು ಎಲ್ಲಿರುತ್ತದೆಂದು ನಾಲ್ಕೂ ಕಡೆಗೆ ನೋಡಲು, ಎತ್ತ ನೋಡಿದರತ್ತ ಗುಡ್ಡಗಳೇ ಕಾಣಹತ್ತಿದವು. ಆ ಗುಡ್ಡಗಳು ಆ ಆನಂದಭೂಮಿಗೆ ಕೋಟೆಯ ಗೋಡೆಗಳಂತೆ ಒಪ್ಪುತ್ತ ಅಭಂಗವಾಗಿದ್ದವು. ಆ ಸ್ಥಳಕ್ಕೆ ಒಂದೇ ದ್ವಾರವಿತ್ತು, ಅದು ಯಾವದೆಂದರೆ ಕಬ್ಬಿಣದ ಬಾಗಿಲನ್ನು ಹಚ್ಚಿದ ವಿವರವು. ಒಮ್ಮೆ ಆ ದ್ವಾರದಿಂದ ಆನಂದಭೂಮಿಯನ್ನು ಪ್ರವೇಶಿಸಿದವನು ತಿರುಗಿ ಅದನ್ನು ಎಂದೂ ನೋಡುತ್ತಿದ್ದಿಲ್ಲ. ಈ ಮೇರೆಗೆ ಯಾವ ಕಡೆಗೂ ದಾರಿಯಿಲ್ಲದೆ ಒಳ್ಳೇ ಇಕ್ಕಟ್ಟಿನೊಳಗೆ ಸಿಕ್ಕಿದ್ದು ನೋಡಿ, ಆಕಾಶದಲ್ಲಿ ಸ್ವೇಚ್ಛೆಯಿಂದ ತಿರುಗಾಡುವ ಪಕ್ಷಿಯನ್ನು ಹಿಡಿದು ಪಂಜರದೊಳಗೆ ಹಾಕಿಟ್ಟರೆ, ಹೊರಬೀಳುವದಕ್ಕೆ ಅದು ಹ್ಯಾಗೆ ಚಡಪಡಿಸುತ್ತದೋ, ಹಾಗೆ ರಾಸೆಲಾಸನಿಗೆ ಹೊರಗೆ ಹೋಗುವಬಗ್ಗೆ ಚಡಪಡಿಕೆ ಹತ್ತಿತು. ಗಿಡಗಳ ಗುಂಪಿನೊಳಗೆ ಮುಚ್ಚಲ್ಪಟ್ಟ ಮಾರ್ಗವೇನಾದರೂ ಅದಯೋ ಏನೋ ನೋಡಬೇಕೆಂದು, ಆತನು ಗುಡ್ಡಗಳ ಮೇರೆ ಹತ್ತಲು ಯತ್ನಿಸಿದನು. ಆದರೆ ಗಿಡಗಳ ಶಾಖೆಗಳು ಎತ್ತ ನೋಡಿದರತ್ತ ಮುಂದೆ ಹಾಯ್ದು ಬಂದು, ಮಾರ್ಗಗಳೇ ಕಟ್ಟಾಗಿದ್ದದರಿಂದ ಗುಡ್ಡಗಳನ್ನೇರುವದಕ್ಕೆ ಅವನಿಗೆ ಆಸ್ಪದವೇ ಸಿಕ್ಕಲಿಲ್ಲ. ಕಬ್ಬಿಣದಬಾಗಿಲು ಹಚ್ಚಿದ ದ್ವಾರವನ್ನು ಅನೇಕ ಯುಕ್ತಿಪ್ರಯುಕ್ತಿಗಳಿಂದ ಬಹಳ ಗಟ್ಟಿ ಮಾಡಿದ್ದರಲ್ಲದೆ, ಕಾವಲುಗಾರರು ಯಾವಾಗಲೂ ಸರತಿಯಿಂದ ಕಾಯುತ್ತಿದ್ದರು. ಇದಲ್ಲದೆ ಆ ಏಕಾಂತಸ್ಥಳದ ಎಲ್ಲ ಜನರ ಬಳಕೆಯು ಯಾವಾಗಲೂ ಆ ಬಾಗಿಲ ಹತ್ತರ ಇರುತ್ತಿತ್ತು.

ಇದರಿಂದ ಆ ಮಾರ್ಗವಾಗಿ ಹೊರಬೀಳುವದಕ್ಕೂ ಅವಕಾಶವಿರಲಿಲ್ಲ. ಗುಡ್ಡಗಳ ಮೇಲಿಂದ ಹರಿದು ಬರುವ ನೀರು ಒಟ್ಟುಗೂಡಿ ಒಂದು ಕೆರೆಯಾಗಿತ್ತೆಂದು ಹಿಂದೆ ಹೇಳಿದೆಯಷ್ಟೇ ? ಆ ಕೆರೆಯು ತುಂಬಿ ಹೆಚ್ಚಾದ ನೀರು ಯಾವ ಮಾರ್ಗದಿಂದ ಹೊರಗೆ ಹೋಗುತ್ತಿತ್ತೋ ಆ ಮಾರ್ಗದಿಂದೇನಾದರೂ ಹೊರಬಿದ್ದು ಹೋಗಲಿಕ್ಕೆ ಬರುವಂತದೆಯೋ ಹ್ಯಾಗೋ ನೋಡಬೇಕೆಂದು ರಾಜಪುತ್ರನು ಯೋಚಿಸಿ, ಒಂದು ದಿವಸ ಮಧ್ಯಾಹ್ನದಲ್ಲಿ ಸ್ವಚ್ಛವಾದ ಬಿಸಿಲು ಆ ಮಾರ್ಗದ ಮೇಲೆ ಬಿದ್ದಿರಲು, ಆ ದ್ವಾರದಲ್ಲಿ ಹಣಿಕಿ ನೋಡಿದನು. ಅದರಲ್ಲಿ ಚಿಕ್ಕ ದೊಡ್ಡ ಬಂಡೆಗಲ್ಲುಗಳು ತುಂಬಿದ್ದವು; ಆದರೂ ಸಂದುಗಳೊಳಗಿಂದ ನೀರು ಹೋಗುವದಕ್ಕೆ ಮಾರ್ಗವಿತ್ತು. ಆದರೆ ಘನಪದಾರ್ಥಗಳು ಆಚೆಗೆ ಪಾರಾಗಿ ಹೋಗುವಂತಿದ್ದಿಲ್ಲವೆಂದು ಆತನಿಗೆ ಕಂಡು ಬಂತು. ಈ ಮೇರೆಗೆ ಎಲ್ಲಿಯೂ ಪಾರಾಗುವದಕ್ಕೆ ಮಾರ್ಗವು ಸಿಕ್ಕದಿರುವದನ್ನು ಕಂಡು, ಅವನು ಎದೆಗುಂದಿ, ಉದಾಸೀನನಾಗಿ ಮನೆಗೆ ಬಂದನು. ಆದರೆ ಮನುಷ್ಯನಿಗೆ ಆಶೆಯೊಂದಿದ್ದರೆ ಬೇಕಾದದ್ದು ಆಗುತ್ತದೆಂಬ ಸಂಗತಿಯು ಅವನಿಗೆ ಚನ್ನಾಗಿ ಗೊತ್ತಾಗಿದ್ದದರಿಂದ ನಿರಾಶೆಯುಳ್ಳವನು ಎಂದೂ ಆಗಬಾರದೆಂದು ಅವನು ನಿಶ್ಚಯಿಸಿದನು.

ಈ ಪ್ರಕಾರ ವ್ಯರ್ಥವಾದ ಪ್ರಯತ್ನಗಳನ್ನು ಮಾಡುವದರಲ್ಲಿ ಅವನು ಮತ್ತೆ ೧೦ ತಿಂಗಳುಗಳನ್ನು ಕಳೆದನು. ಆದರೂ ಆ ದಿವಸಗಳು ಒಳ್ಳೇ ಆನಂದದಿಂದ ಹೋದವು. ಮುಂಜಾನೆ ಎದ್ದಕೂಡಲೆ ರಾತ್ರಿಯಲ್ಲಿ ಯೋಚಿಸಿ ಇಟ್ಟ ಉಪಾಯಗಳನ್ನು ಪರೀಕ್ಷಿಸಿ ನೋಡಬೇಕೆಂಬ ಹುರುಪು ಅವನಿಗೆ ಹುಟ್ಟುತ್ತಿತ್ತು; “ನಾನು ನನ್ನ ಕೈಲಾದ ಮಟ್ಟಿಗೆ ಉದ್ಯೋಗವನ್ನು ಮಾಡಿದೆನು, ವೇಳೆಯನ್ನು ವ್ಯರ್ಥವಾಗಿ ಕಳೆಯಲಿಲ್ಲೆಂಬ” ಸಂತೋಷವು ಸಂಜೆಯಲ್ಲಿ ಉಂಟಾಗುತ್ತಿತ್ತು; ಹಗಲೆಲ್ಲ ಶ್ರಮಪಡುತ್ತಿದ್ದದರಿಂದ ರಾತ್ರಿ ಅವನಿಗೆ ಗಾಢನಿದ್ರೆ ಹತ್ತುತ್ತಿತ್ತು. ಹಗಲು ಆತನು ಗುಡ್ಡದ ಮೇಲೆ ಅಡ್ಡಾಡುತ್ತಿರುವಾಗ ತರತರದ ಚಮತ್ಕಾರಗಳು ಅವನ ದೃಷ್ಟಿಗೆ ಬೀಳುತ್ತಿದ್ದವು. ಅದರಿಂದ ಆತನಿಗೆ ದುಃಖದ ನೆನಪಾಗುತ್ತಿದ್ದಿಲ್ಲ. ಆತನ ಜ್ಞಾನವು ಮುಂದುಮುಂದಕ್ಕೆ ಬೆಳೆಯುತ್ತಿತ್ತು. ದನಗಳ ಬಗೆಬಗೆಯ ಸ್ವಭಾವಗಳನ್ನೂ, ವನಸ್ಪತಿಗಳ ಅನೇಕ ಗುಣಗಳನ್ನೂ ನೋಡಿ ಆನಂದವಾಗುತ್ತಿತ್ತು. ಇದರಿಂದ ಆತನು ಆನಂದಭೂಮಿಯು ತರತರದ ಆಶ್ಚರ್ಯಗಳಿಂದ ತುಂಬಿರುತ್ತದೆಂದು ತಿಳಿದುಕೊಂಡು, ಆ ಸ್ಥಳದಿಂದ ಪಾರಾಗಿ ಹೋಗಲಿಕ್ಕೆ ಒಂದು ವೇಳೆ ಕಡೆಗೂ ಮಾರ್ಗವು ಸಿಕ್ಕದಿದ್ದರೆ ಅಲ್ಲಿಯ ಚಮತ್ಕಾರಗಳನ್ನು ನೋಡಿ, ಅವುಗಳ ಬಗ್ಗೆ ವಿಚಾರ ಮಾಡುವದರಲ್ಲಿಯೇ ಹೊತ್ತುಗಳೆಯಬೇಕೆಂದು ನಿಶ್ಚಯಿಸಿದನು. ಮತ್ತು

ತನ್ನ ಉದ್ಯೋಗದಿಂದ ಇಷ್ಟೋದ್ದೇಶವು ಸಿದ್ಧಿಸದಿದ್ದರೂ, ತನ್ನ ಜ್ಞಾನವು ಹೆಚ್ಚಾಗಿ ವಿಚಾರ ಮಾಡುವದಕ್ಕೆ ಅಕ್ಷಯವಾದ ವಿಷಯಗಳು ದೊರೆತವು; ಇದೇ ಉತ್ತಮವಾದ ಲಾಭವೆಂದು ಆತನು ತನ್ನ ಮನಸ್ಸಿಗೆ ಸಮಾಧಾನ ಮಾಡಿಕೊಂಡನು.

ಈ ಮೇರೆಗೆ ಅನೇಕ ಯತ್ನಗಳು ನಿಷ್ಫಲವಾದಾಗ್ಯೂ ರಾಜಪುತ್ರನು ತನ್ನ ಮುಖ್ಯೋದ್ದೇಶವನ್ನು ಬಿಡಲಿಲ್ಲ. ತ್ಯಾಗಾದರೂ ಮಾಡಿ ಸಂಸಾರದೊಳಗೆ ಜನರು ಯಾವ ಯಾವ ರೀತಿಯಿಂದ ನಡೆಯುತ್ತಾರೆಂಬದನ್ನು ತಿಳಕೊಳ್ಳಬೇಕೆಂದು ಅವನು ನಿಶ್ಚಯಿಸಿದನು. ಈ ಬಗ್ಗೆ ಆತನ ಇಚ್ಛೆ ತುಸು ಸಹ ಕಡಿಮೆ ಆಗಲಿಲ್ಲ; ಆದರೆ ಆ ಇಚ್ಛೆಯು ಸಿದ್ಧಿಸುವ ಸುಭವವು ಮಾತ್ರ ಕಡಿಮೆ ಕಡಿಮೆಯಾಗಿ ಕಾಣಿಸಹತ್ತಿತು. ಗುಡ್ಡ ಗಸ್ನೇರಿ ಮಾರ್ಗಗಳನ್ನು ಹುಡುಕುವ ಭ್ರಮೆಯು ಕಡಿಮೆಯಾಯಿತು. ಈ ಬಗ್ಗೆ ಶ್ರಮ ಮಾಡುವದು ಕೇವಲ ನಿಷ್ಫಲವಾದದ್ದೆಂದು ಅತನಿಗೆ ತಿಳಿಯಿತು. ಆದರೂ ತನ್ನ ಮುಖ್ಯೋದ್ದೇಶವನ್ನು ಮರೆಯದೆ, ಅದು ಕೈಗೂಡುವ ಹೊತ್ತು ಯಾವಾಗ ಬಂದಾಗ್ಯಾದರೂ, ಅದರ ಉಪಯೋಗವನ್ನು ಮಾಡಿಕೊಳ್ಳದೆ ಬಿಡಲಿಕ್ಕಿಲ್ಲವೆಂದು ಅತನು ದೃಢನಿಶ್ಚಯವನ್ನು ಮಾಡಿದನು.

## ಆರನೆಯ ಭಾಗವು.

—(೦)—

### ಕೃತ್ರಿಮ ರೆಕ್ಕೆಗಳನ್ನು ಹಚ್ಚಿಕೊಂಡು ಹಾರುವ ಕಲೆಯೂ ಅದರ ಬಗ್ಗೆ ವಾದವಿವಾದವೂ:—

ಆನಂದಭೂಮಿಯಲ್ಲಿರುವ ಜನರ ಉಪಯೋಗಕ್ಕಾಗಿಯೂ ಮನೋರಂಜನೆಗಾಗಿಯೂ, ಬೇಕಾಗುವ ಕೆಲಸಗಳನ್ನು ಮಾಡಿ, ದುಡ್ಡು ದೊರಕಿಸಬೇಕೆಂಬ ಲೋಭದಿಂದ ವಿಧವಿಧದ ಕಲೆಗಳಲ್ಲಿ ಚತುರರಾದ ಶಿಲ್ಪಿಗರು, ಎಷ್ಟೋ ಮಂದಿ ಆ ಸೆರೆಮನೆಯಲ್ಲಿ ಬಂದು ಬಿದ್ದಿದ್ದರು. ಅವರಲ್ಲೊಬ್ಬನು ತನ್ನ ಶಿಲ್ಪಕಲೆಯ ಬಗ್ಗೆ ಒಳ್ಳೇ ಖ್ಯಾತಿಯನ್ನು ಪಡೆದವನಿದ್ದನು. ಆತನು ಅಲ್ಲಿ ತನ್ನ ಬುದ್ಧಿಕೌಶಲ್ಯದಿಂದ ಅಲ್ಲಿಯ ಜನರ ಉಪಯೋಗಕ್ಕಾಗಿಯೂ, ಮನೋರಂಜನೆಗಾಗಿಯೂ ಅನೇಕ ಯಂತ್ರಗಳನ್ನು ಮಾಡಿದ್ದನು. ನೀರಿನ ಪ್ರವಾಹದ ಬಲದಿಂದ ನಡೆಯುವ ಒಂದು ಯಂತ್ರವನ್ನು ಮಾಡಿ, ಆ ಯಂತ್ರದ ಸಹಾಯದಿಂದ ಒಂದು ಗುರುತಿನೊಳಕ್ಕೆ ನೀರನ್ನು ಒಯ್ದು ಆ ನೀರು ಅರಮನೆಯೊಳಗೆ ಎಲ್ಲ ಕಡೆಯಲ್ಲಿಯೂ ಬರುವಂತೆ ಮಾಡಿದ್ದನು. ಆತನು ಆನಂದಭೂಮಿಯ ಹೊರ ಸಗ್ಗಲಲ್ಲಿರುವ ತೋಟದೊಳಗೆ ಒಂದು ವಿಶ್ರಾಂತಿಗೃಹವನ್ನು ಕಟ್ಟಿದ್ದನು. ಅದರಲ್ಲೊಂದು ಮುಖ್ಯಸೂತ್ರವಿತ್ತು. ಆ ಸೂತ್ರವನ್ನು ತಿರುವಿದ

ಕೂಡಲೆ ಆ ಗೃಹದಲ್ಲೆಲ್ಲಕಡೆಗೂ ಕಾರಂಜಿಗಳು ಪುಟಿಯುತ್ತಿದ್ದವು. ಆದದರಿಂದ ಅಲ್ಲಿ ಯಾವ ಕಾಲದಲ್ಲಿಯೂ ಶೆಕೆಯಾಗುತ್ತಿದ್ದಿಲ್ಲ. ಇದೇ ಮೇರೆಗೆ ಸ್ತ್ರೀಜನರ ವಿಹಾರಕ್ಕೋಸ್ಕರ ಒಂದು ಕುಂಜವನ್ನು ರಚಿಸಿ, ಅದರಲ್ಲಿ ಸುಂದರವಾದ ಬೀಸಣಿಕೆಗಳನ್ನು ಹಚ್ಚಿದ್ದನು. ಆ ಬೀಸಣಿಕೆಗಳು ನೀರಿನ ಬಲದಿಂದ ತಿರುಗುತ್ತಿರುವದರಿಂದ ಅಲ್ಲಿ ಉತ್ತಮವಾದಂಥ, ಆಹ್ಲಾದಕರವಾದ ಗಾಳಿಯು ಯಾವಾಗಲೂ ಬೀಸುತ್ತಿತ್ತು. ಇದಲ್ಲದೆ ಮಂಜುಳತರವಾದ ಸ್ವರವನ್ನು ಗೈಯುವ ವಾದ್ಯಗಳನ್ನು ಮಾಡಿ ಅವುಗಳನ್ನು ಯೋಗ್ಯವಾದ ಅಂತರದ ಮೇಲಿಟ್ಟಿದ್ದನು. ಅವುಗಳಲ್ಲಿಷ್ಟೋ ವಾದ್ಯಗಳು ಗಾಳಿಯ ಬಲದಿಂದಲೂ, ನೀರಿನ ಬಲದಿಂದಲೂ ಧ್ವನಿಗೊಡುತ್ತಿದ್ದವು.

ರಾಸೆಲಾಸನಿಗೆ ಯಾವತ್ತು ವಿದ್ಯೆಗಳ ಮತ್ತು ಕಲೆಗಳ ಬಗ್ಗೆ ಒಳ್ಳೇ ಆಸಕ್ತಿ ಇತ್ತು. ಆತನು ಒಮ್ಮೊಮ್ಮೆ ಮೇಲೆ ಹೇಳಿದ ಶಿಲ್ಪಿಗನ ಕಡೆಗೆ ಹೋಗುತ್ತಿದ್ದನು ಆ ಶಿಲ್ಪಿಗನು ಮಾಡುವ ಕೆಲಸವನ್ನು ಲಕ್ಷಗೊಟ್ಟು ನೋಡಿ, ಆದಷ್ಟು ಮಟ್ಟಿಗೆ ಜ್ಞಾನ ಸಂಪಾದನ ಮಾಡಿಕೊಳ್ಳುತ್ತಿದ್ದನು. ತಾನು ಸೆರೆಮನೆಯೊಳಗಿಂದ ಪಾರಾಗಿ ಹೊರಬಿದ್ದಾಗ ಆ ಶಿಲ್ಪಿಗನಿಂದ ಕಲಿತ ಜ್ಞಾನವು ತನಗೆ ಒಳ್ಳೇ ಉಪಯೋಗವುಳ್ಳದ್ದಾದೀತೆಂದು ಆತನಿಗೆ ದೃಢವಾದ ನಂಬಿಗೆಯಿತ್ತು. ಆತನು ಒಂದುದಿನ ವಾಡಿಕೆಯಂತೆ ತುಸು ಮನೋರಂಜನೆಗಾಗಿ ಆ ಶಿಲ್ಪಿಗನ ಬಳಿಗೆ ಹೋದನು. ಆಗ ಅವನು ನಿಶಾನಿಗಳ ಸಹಾಯದಿಂದ ಸಮುದ್ರದ ಮೇಲೆ ಹಡಗಗಳು ಹ್ಯಾಗೆ ನಡೆಯುತ್ತವೆಯೋ ಹಾಗೇ, ನೆಲದ ಮೇಲೆ ನಡಿಯುವಂಥ ಒಂದು ರಥವನ್ನು ಮಾಡುವದರಲ್ಲಿ ತೊಡಗಿದ್ದನು. ಆ ರಥದ ರಚನೆಯು ಹಾಗೂ ಸೂತ್ರಗಳ ಬಗ್ಗೆ ಯಾವತ್ತು ಸಂಗತಿಯನ್ನು ರಾಜಪುತ್ರನಿಗೆ ತಿಳಿಸಲು, ಗಾಳಿಯ ಸಹಾಯದಿಂದ ಆ ರಥವು ಸಪಾಟ ನೆಲದ ಮೇಲೆ ನಡೆಯಬಹುದೆಂದು ರಾಜಪುತ್ರನು ಮನಗಂಡನು. ಬಳಿಕ ಅವನು ಶಿಲ್ಪಿಗನನ್ನು ಬಹಳ ಹೊಗಳಿ ಆ ರಥದ ಕೆಲಸವನ್ನು ಪೂರ್ಣಮಾಡಬೇಕೆಂದು ಆಗ್ರಹಪೂರ್ವಕವಾಗಿ ಅವನಿಗೆ ಹೇಳಿದನು. ರಾಜಪುತ್ರನು ತನ್ನ ಸ್ತುತಿ ಮಾಡಿದ್ದು ನೋಡಿ ಆ ಶಿಲ್ಪಿಗನಿಗೆ ಆನಂದವಾಯಿತು, ಮತ್ತು ಹೆಚ್ಚಿನ ಪ್ರತಿಷ್ಠೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಆತನು “ರಾಜಪುತ್ರರೇ, ತಾವು ಈಗ ನೋಡಿದ್ದು ಏನೂ ಅಲ್ಲ; ಇದಕ್ಕಿಂತಲೂ ದೊಡ್ಡ ದೊಡ್ಡ ಚಮತ್ಕಾರಗಳನ್ನು ಶಿಲ್ಪವಿದ್ಯೆದಿಂದ ಮಾಡಬಹುದು. ಮನುಷ್ಯರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಾದರೆ ರಥಗಳಲ್ಲಾಗಲಿ, ಹಡಗಗಳಲ್ಲಾಗಲಿ ಕುಳಿತು ಪ್ರವಾಸ ಮಾಡುತ್ತಾರೆ. ಆದರೆ ಈ ವಾಹನಗಳು ಬಹಳ ಸಾವಕಾಶ ಹೋಗುವಂಥವಿರುತ್ತವೆ. ಅವುಗಳನ್ನು ಬಿಟ್ಟುಬಿಟ್ಟು ಶಿಲ್ಪವಿದ್ಯದ ಸಹಾಯದಿಂದ ಮನುಷ್ಯನಿಗೆ ರೆಕ್ಕೆಗಳನ್ನು ಹಚ್ಚಿದರೆ ಅವನು ಬಹು

ತ್ವರೆಯಿಂದ ಬೇಕಾದಲ್ಲಿಗೆ ಗಮನ ಮಾಡಬಹುದು. ಈ ತರದ ರೆಕ್ಕೆಗಳನ್ನು ಮಾಡ ಬೇಕೆಂಬ ಬಹಳ ದಿವಸದಿಂದ ನನ್ನ ಮನಸ್ಸಿನಲ್ಲಿ ಅದೆ. ಪ್ರೈಗಳ್ಳೂ ಅಜ್ಞಾನಿ ಗಳೂ, ಬೇಕಾದರೆ ನೆಲದ ಮೇಲೆ ಮಂದಗತಿಯಿಂದ ಅಡ್ಡಾಡಬಲ್ಲರು; ಆದರೆ ವಿದ್ಯೆಬಲ್ಲಂಥವರು ಆ ವಿದ್ಯೆಯ ಬಲದಿಂದ ಆಕಾಶದಲ್ಲಿ ಬೇಕಾದ ಹಾಗೆ ಸಂಚರಿಸ ಬಹುದು" ಅಂದನು.

ಈ ಮಾತನ್ನು ಕೇಳಿ ತಾನು ಇದ್ದ ಅರಮನೆಯ ಸುತ್ತಲಿರುವ ಗುಡ್ಡಗಳನ್ನು ದಾಟಿ ಹೋಗಬೇಕೆಂಬ ಇಚ್ಛೆಯು ರಾಜಪುತ್ರನ ಮನಸ್ಸಿನಲ್ಲಿ ಪುನಃ ಹುಟ್ಟಿತು. ಆ ಶಿಲ್ಪಿಗನು ಮಾಡಿದಂಥ ಎಷ್ಟೋ ಚಲೋ ಕಸಬುಗಳನ್ನು ರಾಜಪುತ್ರನು ನೋಡಿ ದ್ದನು. ಆದದರಿಂದ ಒಂದು ವೇಳೆ ರೆಕ್ಕೆಗಳನ್ನಾದರೂ ಮಾಡಬಹುದೇದು ಅವ ನಿಗೆ ತೋರಿ ಬಹಳ ಆನಂದವಾಯಿತು. ಆದರೂ ಪೂರ್ಣ ವಿಚಾರ ಮಾಡದ ಹೊರ ತು ಈ ತರದ ಸಾಹಸದ ಕೆಲಸಕ್ಕೆ ಕೈ ಹಾಕಬಾರದೆಂದು ವಿವೇಕ ಮಾಡಿದನು ಯಾಕಂದರೆ ಶಿಲ್ಪಿಗನು ಅಂದಂತೆ ಒಂದು ವೇಳೆ ಆಗದಿದ್ದರೆ ನಿರಾಶೆಯಾಗಿ ಪುನಃ ಇ ಷ್ಟುಮಿಡುಕಿ ಮಾಡಬೇಕೆಂದು ನಿಶ್ಚಯಿಸಿ ಆತನು "ಶಿಲ್ಪಿಗರೇ! ಮನುಷ್ಯನಿಗೆ ರೆಕ್ಕೆಗಳನ್ನು ಹಚ್ಚಿ ಅವನಲ್ಲಿ ಹಾರಲಿಕ್ಕೆ ಬರುವ ಶಕ್ತಿಯನ್ನುಂಟು ಮಾಡಬಹುದೆಂದು ನೀವು ತಿಳಿ ದುಕೊಂಡಿರುವಿರಿ; ಅದು ಕೇವಲ ಭ್ರಾಂತಿ ಇರುತ್ತದೆಂದು ನನಗೆ ತೋರುತ್ತದೆ. ರೆಕ್ಕೆಗಳನ್ನು ಮಾಡಬೇಕೆಂಬ ಉತ್ಕಟೇಚ್ಛೆ ಮಾತ್ರ ನಿಮಗುಂಟು. ಆದರೆ ನೀವು ಶಿಲ್ಪವಿದ್ಯೆಯನ್ನು ವಿಚಾರಿಸಿ (ಅಂದರೆ ಆ ವಿದ್ಯೆಯ ಬಲದಿಂದ ಹೀಗೆ ಮಾಡಲಿಕ್ಕೆ ಬರ ಬಹುದೋ ಇಲ್ಲವೋ ಎಂಬದನ್ನು ವಿಚಾರಿಸಿ) ಮಾತಾಡುವಂತೆ ಕಾಣುವದಿಲ್ಲ ಅಂದ ರೆ ನೀವು ನಿಮ್ಮ ಯೋಗ್ಯತೆ ಮೀರಿದ ಕೆಲಸಕ್ಕೆ ಕೈ ಹಾಕುವಂತೆ ತೋರುತ್ತದೆ. ನೋಡಿರಿ! ದೇವರು ಬೇರೆ ಬೇರೆ ಪ್ರಾಣಿಗಳಿಗೆ ಬೇರೆ ಬೇರೆ ಸ್ಥಾನಗಳನ್ನು ಕಲ್ಪಿಸಿ ದ್ದಾನೆ. ಮನುಷ್ಯನೂ ಪಶುಗಳೂ ಭೂಮಿಯ ಮೇಲೆ ಅಡ್ಡಾಡಬೇಕು, ಪಕ್ಷಿಗಳು ಆಕಾಶದಲ್ಲಿ ಹಾರಾಡಬೇಕೆಂದು ಆ ಸೃಷ್ಟಿಕರ್ತನ ಸಂಕಲ್ಪವು ಸ್ಪಷ್ಟವಿದ್ದಂತೆ ತೋರು ತ್ತದೆ." ಅಂದನು. ಶಿಲ್ಪಿಗನು "ರಾಜಪುತ್ರರೇ! ತಮ್ಮ ಹೇಳಿಕೆಯಂತೆ ಆದರೆ ಮೀನ ಮುಂತಾದ ಜಲಚರಗಳಿಗೆ ಮಾತ್ರ ನೀರಿನಲ್ಲಿ ಈಸಲಿಕ್ಕೆ ಬರಬೇಕು. ಆದರೆ ವಸ್ತುಸ್ಥಿತಿಯು ಹಾಗೆ ಇದ್ದಂತೆ ತೋರುವದಿಲ್ಲ. ಪಶುಗಳಿಗೆ ಸ್ವಭಾವತಃ ಮತ್ತು ಮನುಷ್ಯನಿಗೆ ಕಲಿತರೆ ಈಸಲಿಕ್ಕೆ ಬರುತ್ತದೆ; ಮತ್ತು ಯಾರಿಗೆ ನೀರಿನಲ್ಲಿ ಈಸಲಿಕ್ಕೆ ಬರುತ್ತದೋ ಅವರಿಗೆ ಆಕಾಶದಲ್ಲಿ ಹಾರಲಿಕ್ಕೆ ಬರುವದು ಅಸಂಭವವಲ್ಲ. ಯಾ ಕಂದರೆ ಈಸುವದು ಮತ್ತು ಹಾರುವದು ಇವುಗಳಲ್ಲಿ ವಿಶೇಷ ಭೇದವಿಲ್ಲ. ಈಸೋ ಣವೆಂದರೆ ದ್ರವ್ಯದ್ರವ್ಯದಲ್ಲಿ ಅಂದರೆ ನೀರಿನಲ್ಲಿ ಹಾರೋಣವೇ ಇರುತ್ತದೆ; ಮತ್ತು

ಹಾರೋಣವೆಂದರೆ ವಿಶೇಷ ವಿರಲವಾದಂಥ ದ್ರವ್ಯದಲ್ಲಿ ಅಂದರೆ ಗಾಳಿಯಲ್ಲಿ ಈಸೋಣವಿರುತ್ತದೆ. ನಮಗೆ ಯಾವ ದ್ರವ್ಯದೊಳಗಿಂದ ಸಂಚಾರ ಮಾಡತಕ್ಕದ್ದಿರುತ್ತದೋ ಆ ದ್ರವ್ಯವು ಹೆಚ್ಚೆಚ್ಚು ಘನ (ಗಟ್ಟಿಯಾದದ್ದು) ಇಲ್ಲವೆ ವಿರಲವಿದ್ದ ಹಾಗೆ ಹೆಚ್ಚು ಅಥವಾ ಕಡಿಮೆ ಶಕ್ತಿಯಿಂದ ಆ ದ್ರವ್ಯವನ್ನು ನಿರೋಧಿಸಬೇಕಾಗುತ್ತದೆ. ( ಅದನ್ನು ಒತ್ತಬೇಕಾಗುತ್ತದೆ.) ಅಂದರೆ ಆಯಿತು. ಗಾಳಿಯನ್ನು ಒತ್ತಿದರೆ ಅದು ತನ್ನ ಸ್ವಾಭಾವಿಕವಾದ ವಿರಲತನದ ಮೂಲಕ ಎಷ್ಟು ತೀವ್ರ ಆ ಒತ್ತುವಿಕೆಯೊಳಗಿಂದ ಪಾರಾಗಿ ಹೋಗುತ್ತದೋ ಅದಕ್ಕಿಂತಲೂ ಹೆಚ್ಚು ತೀವ್ರವಾಗಿ ಅದನ್ನು ( ಆ ಗಾಳಿಯನ್ನು ) ಪುನಃ ಒತ್ತುವದಕ್ಕೆ ಬಂತೆಂದರೆ ಮನುಷ್ಯನು ಗಾಳಿಯಲ್ಲಿ ತೇಲುವನೆಂಬುವದು ಸ್ಪಷ್ಟವದೆ. ”

ರಾಜಪುತ್ರನು—“ ಈಸುವ ಮನುಷ್ಯನಿಗೆ ಶಕ್ತಿಯು ಬಹಳ ಬೇಕಾಗುತ್ತದೆ. ಅತಿಶಯ ಬಲವುಳ್ಳ ಮನುಷ್ಯನು ಸಹ ಈಸುವಾಗ ದಣಿಯುತ್ತಾನೆ, ಇದರ ಮೇಲಿಂದ ನೋಡಲಾಗಿ ಈಸುವದಕ್ಕಿಂತಲೂ ಹಾರುವದಕ್ಕೆ ಹೆಚ್ಚು ಶಕ್ತಿಬೇಕಾದೀತೆಂದು ನನಗೆ ತೋರುತ್ತದೆ. ಈಸುವವನಗಿಂತಲೂ ಹಾರುವವನು ಹೆಚ್ಚು ದೂರ ಹೋಗದಿದ್ದರೆ ಆತನಿಗೆ ರೆಕ್ಕೆಗಳನ್ನು ಹಚ್ಚುವದರಲ್ಲಿ ಏನೂ ಅರ್ಥವಿದ್ದಂತೆ ತೋರುವದಿಲ್ಲ. ” ಎಂದು ಹೇಳಿದನು.

ಶಿಲ್ಪಿಗನು— “ ಮೊದಲು ನೆಲಬಿಟ್ಟು ಮೇಲಕ್ಕೇಳುವದಕ್ಕಾಗಿಯೇ ಬಹಳ ಶಕ್ತಿಯು ಬೇಕಾಗುವದೆಂಬುವದು ನಿಜವು. ಯಾಕಂದರೆ ಕೋಳಿ, ಬಾತಗೋಳಿ, ಹಂಸಪಕ್ಷಿ ಇವುಗಳ ಹಾರೋಣವನ್ನು ನೋಡಿದರೆ ಈ ಮಾತು ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಮನುಷ್ಯನು ಮೇಲೆ ಮೇಲೆ ಹೋದ ಹಾಗೆ ಪೃಥ್ವಿಯ ಆಕರ್ಷಣವು ಕಡಿಮೆ ಕಡಿಮೆಯಾಗುತ್ತ ಹೋಗಿ ಹಾರುವವನ ತೂಕವು ಕಡಿಮೆಯಾಗುತ್ತದೆ. ಮುಂದೆ ಬರಬರುತ್ತ ಬೀಳುವ ಅಂಜಿಕೆ ಇಲ್ಲದೆ ಬೇಕಾದಷ್ಟು ಮೇಲಕ್ಕೆ ಹೋಗಿ ವಾತಾವರಣದಲ್ಲಿ ಅವನು ತೇಲಬಹುದು ಆ ಮೇಲೆ ಮುಂದೆ ಸರಿಯುವದಕ್ಕಾಗಿ ಯತ್ನಮಾಡಿದರೆ ಸಾಕು ; ಮತ್ತು ಆ ಯತ್ನವನ್ನು ಸಹಜವಾಗಿಯೂ ಸುಖಕರವಾಗಿಯೂ ಮಾಡಬಹುದು. ಜ್ಞಾನಿಯೂ, ವಿದ್ವಾಂಸನೂ ಆದ ಮನುಷ್ಯನು ರೆಕ್ಕೆಗಳ ಸಹಾಯದಿಂದ ವಾತಾವರಣದಲ್ಲಿ ಸೇರಿ ಆಕಾಶದೊಳಗೆ ಸಂಚಾರ ಮಾಡುತ್ತಿರುವಾಗ ಒಂದೇ ಸರಳರೇಷೆಯಲ್ಲಿರುವ ಪೃಥ್ವಿ, ಅದರ ಮೇಲಿನ ದೇಶ, ದೇಶದೊಳಗಿನ ಜನ ಮುಂತಾದವರು ಪೃಥ್ವಿಯ ದೈನಂದಿನ ಭ್ರಮಣದಿಂದ ಒಂದರ ಹಿಂದೊಂದು ಕೆಳಗೆ ಮೇಲೆ ಹೋಗಿ ಬರುವದನ್ನು ನೋಡಿ ಆತನಿಗೆ ಎಷ್ಟು ಆನಂದವಾಗುತ್ತಿರಬಹುದೆಂಬ ಕಲ್ಪನೆಯು ವಿದ್ಯದ ಸದಭಿರುಚಿ ಇದ್ದ ತಮ್ಮಂಥ ಮಹಾ

ರಾಯರ ಮನಸ್ಸಿನಲ್ಲಿ ಸಹಜ ಬರಬಹುದು; ಇದರಲ್ಲೇನೂ ಸಂದೇಹವಿಲ್ಲ. ಬಾಂದಳದ ಮಧ್ಯಕ್ಕೆ ಹೋಗಿ, ಅಲ್ಲಿಂದ ಕೆಳಗಿರುವ ದ್ವೀಪ, ಮಹಾದ್ವೀಪ, ಸಮುದ್ರ, ದೊಡ ದೊಡ್ಡ ಪಟ್ಟಣಗಳು, ವಿಸ್ತಾರವಾದ ಅರಣ್ಯ ಇವುಗಳು ಚಕ್ರಾಕಾರವಾಗಿ ತಿರುಗುತ್ತ ಒಂದರ ಹಿಂದೊಂದು ಬರುವದನ್ನು ನೋಡಿದರೆ ಮನುಷ್ಯನಿಗೆ ಎಷ್ಟು ಸಂತೋಷವಾಗಬಹುದು? ಎಲ್ಲ ತರದ ಸಮೃದ್ಧಿಯುಳ್ಳದ್ದಾಗಿ, ಕೊಲೆಸುಲಿಗೆಗಳಿಲ್ಲದ್ದರಿಂದ ಭೋಗಾಸಕ್ತರಾದ ಜನಗಳ ದೇಶಗಳನ್ನೂ, ದೊಡ್ಡ ವ್ಯಾಪಾರ ಸಾಗುವ ಹೆಸರಾದ ಪಟ್ಟಣಗಳನ್ನೂ, ಕ್ರೂರರಾದ ಕಾಡ ಜನರು ತಿರುಗಾಡುವ ಗುಡ್ಡಗಳನ್ನೂ, ಒಬ್ಬರ ಜೀವವನ್ನೊಬ್ಬರು ತೆಗೆದುಕೊಳ್ಳಲು ಯತ್ನಿಸುತ್ತಿರುವದರಿಂದ ಭಯಂಕರವಾಗಿ ತೋರುವಂಥ ಸಮರಭೂಮಿಗಳನ್ನೂ, ನಿರ್ಭೀತವಾದ ಸ್ಥಳದಿಂದ ನೋಡುವ ಮನುಷ್ಯನಿಗೆ ಎಷ್ಟು ಸೋಜಿಗವಾಗುತ್ತಿರಬಹುದು? ಮಹಾರಾಯರೇ! ಮೇಘಮಂಡಲದಲ್ಲಿ ಹೋಗಿ ಕಾಳಿತು ನೀಲನದಿಯು ಉಗಮವೆಲ್ಲಿರುತ್ತದೆ? ಅದು ಯಾವಯಾವ ದೇಶಗಳಲ್ಲಿ ಹ್ಯಾಗೆ ಹ್ಯಾಗೆ ಹರಿಯುತ್ತ ಹೋಗಿದೆ? ಎಂಬವನ್ನು ನಾವು ನೋಡಬಹುದು. ನಾವು ನಮಗಿಷ್ಟ ದೇಶಗಳನ್ನು ಹಾರುತ್ತ ಹಾರುತ್ತ ಪೃಥ್ವಿಯನ್ನು ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಸಮಗ್ರವಾಗಿ ನೋಡಬಹುದು" ಅಂದನು.

ರಾಜಪುತ್ರನು — "ನೀನು ಅನ್ನುವಂತೆ ಸಂಭವಿಸಿದರೆ, ಬಹಳೇ ಚಲೋ ಆದೀತು, ಇದರಲ್ಲೇನೂ ಸಂಶಯವಿಲ್ಲ. ಆದರೆ ಹಾಗೆ ಆಗುವದೇ ಕಠಿಣವಾಗಿ ತೋರುತ್ತದೆ. ಯಾವ ಎತ್ತರವಾದ ಸ್ಥಾನದಿಂದ ಮನುಷ್ಯನು ಪೃಥ್ವಿಯ ಮೇಲಿನ ಯಾವತ್ತು ಚಮತ್ಕಾರಗಳನ್ನು ನಿರ್ಭೀತಿಯಿಂದಲೂ, ಸ್ವಸ್ಥಚಿತ್ತದಿಂದಲೂ ನೋಡಬಹುದೋ ಅಂಥ ಸ್ಥಳದಲ್ಲಿಯ ಗಾಳಿಯು, ಬಹಳ ವಿರಳವಾದದ್ದಿರುವದರಿಂದ ಅಲ್ಲಿ ಮನುಷ್ಯನಿಗೆ ಶ್ವಾಸೋಚ್ಛ್ವಾಸ ಮಾಡಲಿಕ್ಕೆ ಬರಲಿಕ್ಕಿಲ್ಲೆಂದು ನನಗೆ ತೋರುತ್ತದೆ. ಎತ್ತರವಾದ ಪರ್ವತಶಿಖರಗಳ ಮೇಲೆ ಹೋದ ಹೋದ ಹಾಗೆ ಶ್ವಾಸೋಚ್ಛ್ವಾಸ ಮಾಡಲಿಕ್ಕೆ ಹೆಚ್ಚೆಚ್ಚು ಕಠಿಣವಾಗುತ್ತದೆಂದು ನಾನು ಕೇಳಿದ್ದೇನೆ. ಈ ಶಿಖರಗಳ ಮೇಲಿನ ಗಾಳಿಯು ಇಷ್ಟು ವಿರಳವಾದದ್ದಿದ್ದಾಗ್ಯೂ ಅವುಗಳ ಮೇಲಿನ ಪದಾರ್ಥಗಳು ಸಹಜವಾಗಿ ಕೆಳಗೆ ಬೀಳುತ್ತವೆ. ಅಂದಮೇಲೆ ಎಷ್ಟು ಎತ್ತರದ ಮೇಲೆ ಮನುಷ್ಯನು ಶ್ವಾಸೋಚ್ಛ್ವಾಸ ಮಾಡಬಲ್ಲನೋ ಅಷ್ಟು ಎತ್ತರದ ಮೇಲಿಂದ ಅವನು ಬೀಳುವ ಅಂಜಿಕೆಯು ಯಾವಾಗಲೂ ಇದ್ದೇ ಇರುತ್ತದೆನ್ನಬಹುದು" ಎಂದನು.

ಶಿಲ್ಪಿಗನು — "ಯಾವತ್ತು ಸಂಶಯಗಳ ನಿವೃತ್ತಿಯನ್ನು ಮೊದಲೇ ಮಾಡಿಕೊಂಡು, ಅನಂತರ ಒಂದು ಕಾರ್ಯವನ್ನು ಮಾಡಬೇಕೆಂದು ನಿಯಮವನ್ನು ಮಾಡಿ

ದರೆ, ಯಾವ ವಿಷಯದಲ್ಲಿಯೂ ಯಾವನೂ ಎಂಥ ಯತ್ನಸಹ ಮಾಡಲಾರನು- ನನ್ನ ಈ ಹಂಚಿಕೆಗೆ ತಾವು ತಮ್ಮ ಉದಾರಾಶ್ರಯವನ್ನು ಕೊಟ್ಟರೆ ಹಾರಿಹೋಗುವ ಪ್ರಯತ್ನವನ್ನು ಮೊದಲು ನಾನೇ ಮಾಡುವೆನು. ಏನಾದರೂ ಅಪಾಯ ಸಂಭವಿಸಿದರೆ ಅದು ನನಗೇ ಸಂಭವಿಸಲಿ. ಆಕಾಶದಲ್ಲಿ ಹಾರುವ ಯಾವತ್ತು ಪ್ರಾಣಿಗಳ ಶರೀರ ರಚನೆಯ ವಿಷಯಕ್ಕೆ ನಾನು ವಿಚಾರ ಮಾಡಿದ್ದೇನೆ. ಯಾವತ್ತು ಪ್ರಾಣಿಗಳಲ್ಲಿ ಕಣ್ಣುಕಪ್ಪಡೆಯ ರೆಕ್ಕೆಗಳು ಅಖಂಡವಾಗಿರುವದರಿಂದ ಉಳಿದ ರೆಕ್ಕೆಗಳಿಗಿಂತ ಅವೇ ಮನುಷ್ಯನಿಗೆ ಹೆಚ್ಚು ಉಪಯೋಗವುಳ್ಳವುಗಳಾದಾವೆಂದು ನನಗೆ ತೋರುತ್ತದೆ. ಅದೇ ಮಾದರಿಯ ರೆಕ್ಕೆಗಳನ್ನು ಮಾಡುವ ಕೆಲಸಕ್ಕೆ ನಾನು ನಾಳಿನಿಂದ ಆರಂಭಿಸುತ್ತೇನೆ. ಮತ್ತು ಒಂದು ವರ್ಷದೊಳಗೆ ರೆಕ್ಕೆಗಳು ಸಿದ್ಧವಾಗುವವು. ಆಮೇಲೆ ಕೆಳಗಿದ್ದ ಮನುಷ್ಯರ ಕಾಟವು ಆಗದಷ್ಟು ಎತ್ತರ, ಆಕಾಶದಲ್ಲಿ ನಾನು ಹಾರಿ ಹೋಗುವೆನು. ಆದರೆ ಆ ಕೆಲಸಕ್ಕೆ ಆರಂಭಮಾಡುವ ಪೂರ್ವದಲ್ಲಿ ತಾವು ನನಗೊಂದು ಅಭಯವಚನವನ್ನು ಕೊಡಬೇಕು. ಅದೇನಂದರೆ- ಈ ನನ್ನ ಯುಕ್ತಿಯನ್ನು ತಾವು ಯಾರಿಗೂ ತಿಳಿಯಗೊಡಬಾರದು; ಮತ್ತು ನಮ್ಮಿಬ್ಬರ ಹೊರತು ಅನ್ಯರಿಗೆ ರೆಕ್ಕೆಗಳನ್ನು ಮಾಡಿಕೊಡಬೇಕೆಂದು ತಾವು ನನಗೆ ಹೇಳಬಾರದು" ಅಂದನು,

ರಾಜಪುತ್ರನು—" ಇಂಥ ಅಪೂರ್ವಶಕ್ತಿಯು ಎರಡನೇ ಮನುಷ್ಯನಿಗೆ ಪ್ರಾಪ್ತವಾದರೆ ನಿನಗೇನು ಹಾನಿಯಾಗುವದು? ನೀನು ಅಸೂಯೆ ಯಾಕೆ ಪಡಬೇಕು? ನಮಗೆ ಗೊತ್ತಾದ ಹೊಸ ಯುಕ್ತಿಯ ಉಪಯೋಗವು ಯಾವತ್ತೂ ಜನರಿಗೆ ಆಗುವಂತೆ ಪ್ರಯತ್ನಿಸುವದು ನಮ್ಮ ಕರ್ತವ್ಯವಿರುತ್ತದೆ. ನೋಡಿರಿ, ಪ್ರತಿಯೊಬ್ಬ ಮನುಷ್ಯನಿಗೆ ಎರಡನೇಯವರಿಂದ ಎಷ್ಟೋ ಹಿತವಾಗಿದೆ. ಅಂದ ಮೇಲೆ ಅವರು ನಮ್ಮ ಮೇಲೆ ಮಾಡಿದ ಉಪಕಾರವನ್ನು ಸ್ಮರಿಸಿ ಆ ಬಗ್ಗೆ ಅವರಿಗೆ ನಾವು ಪ್ರತ್ಯುಪಕಾರವನ್ನು ಮಾಡಲಿಕ್ಕೆ ಬೇಡವೆ ?" ಎಂದು ಉತ್ತರಕೊಟ್ಟನು.

ಅದಕ್ಕೆ ಶಿಲ್ಪಿಗನು--"ಜಗತ್ತಿನೊಳಗಿನ ಯಾವತ್ತು ಜನರು ಸದ್ಗುಣಿಗಳಾಗಿದ್ದರೆ ನಾನು ಒಳ್ಳೇ ಆನಂದದಿಂದ ಎಲ್ಲರಿಗೂ ಆಕಾಶದಲ್ಲಿ ಹಾರಿಹೋಗುವ ಕಲೆಯನ್ನು ಕಲಿಸುತ್ತಿದ್ದೆನು. ಆದರೆ ಜಗತ್ತಿನ ಸ್ಥಿತಿಯು ಹಾಗೆ ಇಲ್ಲ. ದುಷ್ಟ ಜನರು ಆಕಾಶದಿಂದ ಕೆಳಗಿಳಿದು ಬಂದು ಸಜ್ಜನರನ್ನು ಮುತ್ತಿದರೆ ಆ ಸಜ್ಜನರ ಸಂರಕ್ಷಣೆಯು ಹ್ಯಾಗಾಗಬೇಕು? ಗಟ್ಟಿಯಾದ ಗೋಡೆಗಳು ಇಲ್ಲವೆ ಪರ್ವತಗಳು ಅಥವಾ ಸಮುದ್ರಗಳು ಆಕಾಶಮಾರ್ಗದಿಂದ ಬರುವ ದಂಡನ್ನು ಅಡ್ಡಗಟ್ಟಲಾರವು. ಉತ್ತರದೇಶದ ಕಾಡಿನ ಕ್ರೂರ ಜನರ ದಂಡು ಆಕಾಶದಿಂದ ಹಾರಿಬಂದು, ಒಂದು ಸಮೃದ್ಧವಾದ ದೇಶದ ರಾಜಧಾನಿಯನ್ನು ಒಮ್ಮಿಂದೊಮ್ಮೆ ಮುತ್ತಿ ಅದನ್ನು ನೆಲಸಮ

ಮಾಡಿದರೆ ಅವರಿಗೆ ಯಾರು ಏನು ಮಾಡುವರು? ಬಹಳ ಹೇಳುವದರಿಂದೇನು? ದಕ್ಷಿಣಸಮುದ್ರ ದಂಡೆಯ ಮೇಲೆ ದಟ್ಟವಾಗಿ ವಾಸಿಸುವ ಕಾಡು ಜನರು ಆನಂದನಿಧಿಯಾದಂಥ, ರಾಜಪುತ್ರರ ವಸತಿಸ್ಥಾನವಾದಂಥ, ಈ ಆನಂದಭೂಮಿಯ ಮೇಲೆ ಸಹ ಏರಿ ಬರಬಹುದು” ಎಂದು ಹೇಳಿದನು.

ಆಮೇಲೆ ರಾಜಪುತ್ರನು ಆ ಯುಕ್ತಿಯನ್ನು ಗುಪ್ತವಾಗಿ ಇಡುವಬಗ್ಗೆ ವಚನ ಕೊಟ್ಟ ತರುವಾಯ ಮರುದಿವಸವೇ ಆ ಶಿಲ್ಪಿಗನು ರೆಕ್ಕೆಗಳನ್ನು ಮಾಡುವ ಕೆಲಸವನ್ನು ಆರಂಭಿಸಿದನು. ಆ ಕೆಲಸವು ನಿಶ್ಚಯವಾಗಿ ಕೊನೆಗಾಣುವದೋ ಇಲ್ಲವೋ ಎಂಬ ಬಗ್ಗೆ ರಾಜಪುತ್ರನಿಗೆ ಸಂಶಯವಿತ್ತು. ಅದು ಸಿದ್ಧಿಸೀತೆಂದು ಒಮ್ಮೆ ಅವನು ಮನಗಾಣುವನು; ಒಮ್ಮೆ ಕೈಗೂಡಲಾರದೆಂದು ನಿರಾಶೆಯುಳ್ಳವನಾಗುವನು. ಅದು ಹ್ಯಾಗೇ ಇರಲಿ, ಅತನು ಆ ಕೆಲಸವು ಹ್ಯಾಗೆನಡೆದದೆಂಬುವದನ್ನು ನೋಡುವದಕ್ಕಾಗಿ ಮೇಲಿಂದ ಮೇಲೆ ಆ ಶಿಲ್ಪಿಗನ ಬಳಿಗೆ ಹೋಗುತ್ತಿದ್ದನು. ಆ ರೆಕ್ಕೆಗಳು ಹಗುರಾಗಿದ್ದು ಗಟ್ಟಿಯಾಗಿರಬೇಕೆಂಬ ವಿಷಯದಲ್ಲೂ ಅವುಗಳನ್ನು ಸಹಜವಾಗಿ ಅಲ್ಲಾಡಿಸಲಿಕ್ಕೆ ಬರಬೇಕೆಂಬ ವಿಷಯದಲ್ಲೂ ಯಾವ ಯಾವ ಚಮತ್ಕಾರದ ಯುಕ್ತಿಗಳನ್ನು ಆ ಶಿಲ್ಪಿಗನು ಯೋಚಿಸುತ್ತಿದ್ದನೋ ಆ ಎಲ್ಲ ಯುಕ್ತಿಗಳನ್ನು ಲಕ್ಷವಿಟ್ಟು ನೋಡುತ್ತಿದ್ದನು. ಆ ಶಿಲ್ಪಿಗನು ತನ್ನ ಕೆಲಸವು ಚನ್ನಾಗಿ ಆಗಿ ತನ್ನ ಉದ್ದೇಶವು ಕೈಗೂಡುವದೆಂತಲೂ ಮತ್ತು ತಾನು ತನ್ನ ರೆಕ್ಕೆಗಳ ಬಲದಿಂದ ಹದ್ದು ಮುಂತಾದ ಪಕ್ಷಿಗಳಿಗಿಂತಲೂ ಆಕಾಶದಲ್ಲಿ ಬಹಳ ಎತ್ತರ ಹಾರುವೆನೆಂತಲೂ ತಿಳಿದುಕೊಂಡಿದ್ದನು. ರೆಕ್ಕೆಗಳ ಕೆಲಸವು ಮುಗಿಯುತ್ತ ಬಂದ ಬಂದ ಹಾಗೆ ಅವನಿಗೆ ಹೆಚ್ಚು ಹೆಚ್ಚು ಆನಂದವಾಗಹತ್ತಿತು ರಾಜಪುತ್ರನಿಗೂ ಶಿಲ್ಪಿಗನ ಉದ್ದೇಶವು ಕೊನೆಗಂಡೀತೆಂದು ತೋರಿತು. ಒಂದು ವರ್ಷದೊಳಗೆ ರೆಕ್ಕೆಗಳು ಸಿದ್ಧವಾದವು. ಮತ್ತು ಪೂರ್ವ ಸಂಕೇತದಂತೆ ಕೆರೆಯ ದಂಡೆಯ ಮೇಲೆ ಹಾರುವ ಸಿದ್ಧತೆಯನ್ನು ಮಾಡಿಟ್ಟು ಶಿಲ್ಪಿಗನು ರಾಜಪುತ್ರನ ಬಳಿಗೆ ಬಂದನು. ಬಳಿಕ ನಿಯಮಿತ ಸ್ಥಳಕ್ಕೆ ಇಬ್ಬರೂ ಹೋದ ಮೇಲೆ ಕೆಲವು ವೇಳೆ ಗಾಳಿಯನ್ನು ತುಂಬಿಕೊಳ್ಳುವದಕ್ಕಾಗಿ ಆ ಶಿಲ್ಪಿಗನು ತನ್ನ ರೆಕ್ಕೆಗಳನ್ನು ಅಲ್ಲಾಡಿಸಿ, ದಂಡೆಯಿಂದ ಮೇಲಕ್ಕೆ ಹಾರಿದನು. ಆದರೆ ಮೇಲೆ ಹಾರಿ ಹೋಗುವದರ ಬದಲಾಗಿ ಕೆಳಗೆ ನೀರೊಳಗೆ ಬಿದ್ದನು. ಗಾಳಿಯೊಳಗೆ ಹಾರುವದಕ್ಕಾಗಿ ಆ ರೆಕ್ಕೆಗಳ ಉಪಯೋಗವಾಗಲೇ ಇಲ್ಲ. ಆದರೆ ಆ ಬಡಪ್ರಾಣಿಯನ್ನು ನೀರಿನಿಂದ ಹೊರಗೆ ತಂದು ಉಳಿಸಲಿಕ್ಕೆ ಮಾತ್ರ ಉಪಯೋಗವುಳ್ಳವುಗಳಾದವು. ಅಂದರೆ ಆ ರೆಕ್ಕೆಗಳಿದ್ದ ಕಾರಣ ಆತನು ಮುಳುಗಲಿಲ್ಲ. ಆ ಮೇಲೆ ನಾಚಿಕೆಯಿಂದಲೂ, ಅಂಜಿಕೆಯಿಂದಲೂ ಅರ್ಧಜೀವಿಯಾದ ಅವನನ್ನು ರಾಜಪುತ್ರನು ದಂಡೆಯ ಮೇಲಕ್ಕೆ ಎಳೆದುಕೊಂಡನು.

# ಏಳನೆಯ ಭಾಗ.

## ರಾಜಪುತ್ರನಿಗೆ ಒಬ್ಬ ವಿದ್ವಾಂಸನು ದೊರಕಿದ್ದು.

---

ಆ ಶಿಲ್ಪಿಯ ಗತಿಯು ಹೀಗಾದುದನ್ನು ನೋಡಿ ರಾಜಪುತ್ರನಿಗೇನೂ ವಿಶೇಷ ದುಃಖವಾಗಲಿಲ್ಲ. ಯಾಕಂದರೆ ರೆಕ್ಕೆಗಳನ್ನು ಹಚ್ಚಿಕೊಂಡು ಹಾರುವ ಯುಕ್ತಿಯು ಎಂದಿಗೂ ಸಿದ್ಧಿಸಲಾರದೆಂಬುವದು ಆತನಿಗೆ ಗೊತ್ತಿತ್ತು. ಆದರೆ ಆ ಸೆರೆಮನೆಯೊಳಗಿಂದ ಪಾರಾಗಿ ಹೋಗಲಿಕ್ಕೆ ಎರಡನೆಯ ಹಂಚಿಕೆಯೇ ದೊರೆಯದಿದ್ದುದರಿಂದ ಶಿಲ್ಪಿಯ ಯುಕ್ತಿಯಾದರೂ ಸಹಾಯವಾಗುತ್ತದೋ ಏನೋ ನೋಡಬೇಕೆಂಬ ಭ್ರಾಂತಿಯು ರಾಜಪುತ್ರನಿಗಿತ್ತು. ಅದರ ಪರಿಣಾಮವೇನಾಯಿತೆಂಬುವದು ಹಿಂದಿನ ಭಾಗದಲ್ಲಿ ವಿವರಿಸಲ್ಪಟ್ಟಿದೆ. ಆದಾಗ್ಯೂ ಸಂಧಿ ಸಂಧಿಸಿದ ಕೂಡಲೆ ಆ ಆನಂದಭೂಮಿಯಿಂದ ಹೊರಬಿದ್ದು ಹೋಗುವದು ನಿಶ್ಚಯವೆಂದು ಒಮ್ಮೆ ಮಾಡಿದ ಅವನ ಸಂಕಲ್ಪವು ಅಚಳವಾಗಿತ್ತು.

ಆದರೆ ಆತನ ಉದ್ವೇಗವು ಕೊನೆಗಾಣುವ ಸಂಭವವು ತೀರ ಕಡಿಮೆಯಾಗುತ್ತ ಬಂದುದಲ್ಲದೆ ಹೊರಗಿನ ಜಗತ್ತನ್ನು ನೋಡುವದು ಅಸಂಭವವಾಗಿಯೇ ತೋರಿತು. ಆದದರಿಂದ ಆತನು ತನ್ನ ಉತ್ಸಾಹಶಕ್ತಿಯು ಕಡಿಮೆಯಾಗಬಾರದೆಂದು ಬೇಕಾದಷ್ಟು ಪ್ರಯತ್ನ ಮಾಡಿದರೂ ಕೂಡ ಅಸ್ವಾಸ್ಥ್ಯವು ದಿನದಿನಕ್ಕೆ ಹೆಚ್ಚಾಗಿ ಆತನ ಚಿತ್ತವೃತ್ತಿಯಲ್ಲಿ ಖಿನ್ನತೆಯೂ, ಔದಾಸೀನ್ಯವೂ ತಲೆದೋರಹತ್ತಿದವು. ಅಷ್ಟರೊಳಗೆ ಮಳೆಗಾಲವೂ ಬಂತು. ಅದರಿಂದ ಹೊರಗೆ ಅಡವಿಯಲ್ಲಿ ಅಡ್ಡಾಡುವದು ಕಷ್ಟಾಯಿತು.

ಆ ವರ್ಷ ಮಳೆಗಾಲವು ವಾಡಿಕೆಗಿಂತ ಹೆಚ್ಚು ದಿವಸ ಇದ್ದು ಮಳೆಯು ಬಹಳ ಬಲವಾಗಿ ಆಯಿತು. ಸುತ್ತಲಿನ ಗುಡ್ಡಗಳ ಮೇಲೆ ಮೋಡಗಳು ಮುಸುಕಿ ಮಳೆಯು ಧಾರಾಳವಾಗಿ ಬೀಳುವದು. ಗುಡ್ಡಗಳ ಮೇಲಿಂದ ಆನೆಗಡುತರವಾದ ನೀರಿನ ಪ್ರವಾಹಗಳು ಹರಿದು ಬಂದು ಎಲ್ಲ ಕಡೆಯಲ್ಲಿಯ ಹಳ್ಳಕೊಳ್ಳಗಳು ತುಂಬಿ ಹೋದವು. ಹೆಚ್ಚಾದ ನೀರು ಕಂದಕದೊಳಗಿಂದ ಹೋಗಲಿಲ್ಲಾದ್ದರಿಂದ ಅರಮನೆಯ ಹತ್ತರಿದ್ದ ಕೆರೆಯು ತುಂಬಿ ತುಳುಕಿತು. ಮತ್ತು ಮಟ್ಟವಾದ (ಸಪಾಟಾದ) ನೆಲದ ಮೇಲೆ ನೋಡಿದತ್ತೆಲ್ಲ ನೀರು ನೀರೇ ಕಾಣಿಸಿತು. ಎತ್ತರವಾದ ಸ್ಥಳಗಳ ಮೇಲೆ ಕಟ್ಟಿದ ಅರಮನೆಯೂ ಬೇರೆ ಕೆಲವು ಪ್ರದೇಶಗಳೂ ಹೊರತಾಗಿ ಉಳಿದ ಕಡೆಯೆಲ್ಲ ಜಲಮಯವಾಗಿ ಹೋಯಿತು. ಆಡು ಕುರಿಗಳ ಹಿಂಡುಗಳೂ, ಎಮ್ಮೆ

ಯಾಕಳುಗಳ ಗುಂಪುಗಳೂ ಅಡವಿಯನ್ನು ಬಿಟ್ಟು ಓಡಿ ಹೋದವು. ಕಾಡುಮೃಗಗಳೂ ಸಾಕಿದ ಮೃಗಗಳೂ ಕೂಡ ತಮ್ಮ ತಮ್ಮ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಗುಡ್ಡಗಳನ್ನು ಸೇರಿದವು.

ಈ ಮೇರೆಗೆ ಹೊರಗೆ ಅಡ್ಡಾಡುವದು ಕಟ್ಟಾದ ಮೂಲಕ ರಾಜಪುತ್ರನು ಮನೆಯೊಳಗೆ ಕುಳಿತು ಆಡತಕ್ಕ ಆಟಗಳನ್ನಾಡಿಯೇ ತನ್ನ ಮನೋರಂಜನೆಯನ್ನು ಮಾಡಿಕೊಳ್ಳಹತ್ತಿದನು ಆ ಆನಂದಭೂಮಿಯಲ್ಲಿ ಇಮ್ಲಾಕನೆಂಬ ಒಬ್ಬ ಕವಿಯು ಇದ್ದನು. ಆತನು ಒಮ್ಮೊಮ್ಮೆ ತಾನು ರಚಿಸಿದ ಕವಿತೆಗಳನ್ನು ಹಂದು ತೋರಿಸಿ ಅಲ್ಲಿದ್ದ ಜನರ ಮನವನ್ನು ರಂಜಿಸುತ್ತಿದ್ದನು. ಅವನ ಕವಿತ್ರೆಗಳಲ್ಲಿ ಮನುಷ್ಯನ ಯಾವತ್ತು ಅವಸ್ಥೆಗಳ ಬಗ್ಗೆ ಸುರಸವಾದ ಬಗ ಬಗೆಯ ವರ್ಣನವಿರುತ್ತಿತ್ತು. ಆ ವರ್ಣನೆಗಳನ್ನು ಕೇಳಿದ ಕೂಡಲೆ ರಾಜಪುತ್ರನಿಗೆ ಆ ಕವಿತೆಗಳನ್ನು ಪುನಃ ಪುನಃ ಕೇಳಬೇಕೆಂಬ ಲವಲವಿಕೆ ಹುಟ್ಟಿತು. ಆದರಿಂದ ಆತನು ಒಂದು ದಿವಸ ಆ ಕವಿಯನ್ನು ತನ್ನ ಮಂದಿರಕ್ಕೆ ಕರೆಯಿಸಿ, ಆ ಕವಿತೆಗಳನ್ನು ತಿರುಗಿ ಅನ್ನಿರೆಂದು ಅವನಿಗೆ ಹೇಳಿ ಆತನೊಡನೆ ಬಹಳ ಹೊತ್ತು ಒಳ್ಳೇ ಸಲಿಗೆಯಿಂದ ಸಂಭಾಷಣ ಮಾಡಿದನು. ಆ ಮನುಷ್ಯನು ಪ್ರಪಂಚದೊಳಗಿನ ಜನರ ಸ್ಥಿತಿಗತಿಯನ್ನು ಚನ್ನಾಗಿ ಅರಿತವನೂ, ಆ ಸ್ಥಿತಿಗತಿಯನ್ನು ಕೇಳುವವನ ಮನಸ್ಸಿನಲ್ಲಿ ಬಿಂಬಿಸುವಂತೆ ವಿವರಿಸುವ ಜಾಣ್ಮೆಯುಳ್ಳವನೂ ಇರುವನೆಂದು ಮನಗಂಡು, ತನಗೆ ಬೇಕಾದ ಮನುಷ್ಯನು ದೊರಕಿದನೆಂದು ಅವನಿಗೆ ಒಳ್ಳೇ ಆನಂದವಾಯಿತು. ಅವನು (ರಾಜಪುತ್ರನು) ಆ ಕವಿಗೆ ಅನೇಕ ಪ್ರಶ್ನಗಳನ್ನು ಕೇಳಿದನು. ಆ ಪ್ರಶ್ನಗಳು ಸಾಧಾರಣ ಪ್ರತಿಯೊಬ್ಬ ಮನುಷ್ಯನಿಗೆ ಸಹಜವಾಗಿ ತಿಳಿಯುವಂಥವು ಇದ್ದರೂ ಅವನು ಚಿಕ್ಕಂದಿನಿಂದ ಒಂದೇ ಕಡೆಯಲ್ಲಿ ಪ್ರತಿಬಂಧದೊಳಗಿದ್ದದರಿಂದ, ಅವುಗಳ ವಿಷಯಕ್ಕೆ ಅವನಿಗೆ ಏನೂ ಗೊತ್ತಿದ್ದಿಲ್ಲ. ಅವನ ಅಜ್ಞಾನವನ್ನು ನೋಡಿ ಆ ಕವಿಗೆ ಬಹಳ ದುಃಖವೂ, ಅವನ ಜ್ಞಾನಸಂಪಾದನೇಚ್ಛೆಯನ್ನು ನೋಡಿ ಅಪರಿಮಿತ ಆನಂದವೂ ಆದವು. ಅಂದಿನಿಂದ ಆ ಕವಿಯು ಅವನಿಗೆ ದಿನಾಲು ಹೊಸ ಹೊಸ ಸಂಗತಿಗಳನ್ನು ಹೇಳಿ, ಸಂಸಾರ ಸಂಬಂಧದ ಹಲವು ವಿಷಯಗಳನ್ನು ತಿಳಿಸಿಕೊಟ್ಟು, ಅವನ ಮನೋರಂಜನೆಯನ್ನು ಮಾಡಲಾರಂಭಿಸಿದನು. ಅವುಗಳನ್ನು ಕೇಳಬೇಕೆಂಬ ಅವನ ಉತ್ಕಟೇಚ್ಛೆಯೂ ಲವಲವಿಕೆಯೂ ಅತಿಶಯ ಹೆಚ್ಚಾಗಿ ಅವನಿಗೆ ನಿದ್ರೆ ಸಹ ಬೇಡಾಯಿತು! ನಿದ್ರೆಯಲ್ಲಿ ಬಹಳ ವೇಳೆಯು ವ್ಯರ್ಥವಾಗಿ ಹೋಗುತ್ತಿರುವದರಿಂದ ದೇವರು ನಿದ್ರೆ ಎಂಬ ವಿಶ್ರಾಂತಿಯನ್ನು ಯಾಕೆ ಮಾಡಿರುವನೋ ಎಂದು ಅವನಿಗೆ ವ್ಯಸನವಾಯಿತು.

ಯಾವಾಗ ಬೆಳಗಾದೀತು ಯಾವಾಗ ನಾನು ಇವಲ್ಲಾಕನ ಬಾಯಿಯಿಂದ ಹೊಸ ಸಂಗತಿಗಳನ್ನು ಕೇಳೇನೆಂಬ ರಾತ್ರಿಯಲ್ಲಿ ಆತನು ಆತುರಪಡುತ್ತಿದ್ದನು!!

ಒಂದು ದಿನ ಇಬ್ಬರೂ ಮಾತಾಡುತ್ತ ಕುಳಿತಾಗ ರಾಜಪುತ್ರನು ಇವಲ್ಲಾಕನನ್ನು ಕುರಿತು—“ಸ್ವಾಮಿ, ತಮ್ಮ ಜೀವಿತದ ವೃತ್ತಾಂತವನ್ನು ಮೊದಲಿನಿಂದ ಕೇಳಬೇಕೆಂಬ ಕಾಂಕ್ಷೆಯು ನನಗೆ ಉಂಟಾಗಿದೆ, ದಯಮಾಡಿ ಅದನ್ನು ನನಗೆ ಹೇಳಬೇಕು. ಮತ್ತು ತಾವು ಈ ಅನುಪಭೂಮಿಗೆ ಬರುವದಕ್ಕೆ ಕಾರಣವೇನು? ಇಲ್ಲವೆ ಯಾವ ಉದ್ದೇಶದಿಂದ ಇಲ್ಲಿ ಬಂದಿರುವಿರೆಂಬುದನ್ನು ಹೇಳಿರಿ” ಎಂದನು. ಇವಲ್ಲಾಕನು ರಾಜಪುತ್ರನ ಮಾತನ್ನು ಕೇಳಿ, ತನ್ನ ಚರಿತ್ರವನ್ನು ಹೇಳುವದಕ್ಕೆ ಇನ್ನು ಆರಂಭ ಮಾಡುವವನಿದ್ದನು, ಇಷ್ಟರಲ್ಲಿ ಅರಮನೆಯವರು ಗಾಯನವನ್ನು ಕೇಳುವದಕ್ಕಾಗಿ ಬರಹೇಳಿದ್ದರಿಂದ ಇಬ್ಬರೂ ಅತ್ತಕಡೆಗೆ ಹೋದರು. ರಾಜಪುತ್ರನು ಆತನ ಚರಿತ್ರವನ್ನು ಕೇಳಬೇಕೆಂಬ ಇಚ್ಛೆಯನ್ನು ಸಂಜೆಯವರೆಗೆ ಬಿಗಿಹಿಡಿಯಬೇಕಾಯಿತು.

## ಎಂಟನೆಯ ಭಾಗ.

### ಇವಲ್ಲಾಕನ ಜೀವಿತ ವೃತ್ತಾಂತವು.

ಉಷ್ಣಕಟಿಬಂಧದೊಳಗಿನ ಪ್ರದೇಶಗಳಲ್ಲಿ, ಮನೋರಂಜನೆಗೆ ಯೋಗ್ಯವಾದ ವೇಳೆಯು ಸೂರ್ಯಾಸ್ತದನಂತರವೆ. ಆದುದರಿಂದ ಅರಮನೆಯೊಳಗಿನ ಗಾಯನವು ಮುಗಿದು, ರಾಜಪುತ್ರನು ತಮ್ಮ ತಮ್ಮ ಸ್ಥಳಕ್ಕೆ ಹೋಗುವಷ್ಟರೊಳಗಂದರೆ, ಮಧ್ಯರಾತ್ರಿಯಾಗಿ ಹೋಯಿತು. ಅನಂತರ ರಾಜಪುತ್ರನು ಇವಲ್ಲಾಕನನ್ನು ಕರೆದು, ಆತನ ಚರಿತ್ರವನ್ನು ಕೇಳಲಿಕ್ಕೆ ಪ್ರಾರಂಭಿಸಿದನು.

ಇವಲ್ಲಾಕನು—“ಮಹಾರಾಯರೇ, ನನ್ನ ಜೀವಿತ ವೃತ್ತಾಂತವು ಬಹಳ ದೊಡ್ಡದಿಲ್ಲ. ಇಡೀ ಜನ್ಮವನ್ನು ಕೇವಲ ವಿದ್ಯಾಭ್ಯಾಸದಲ್ಲೂ, ಜ್ಞಾನಸಂಪಾದನದಲ್ಲೂ, ಕಳೆಯುವ ಮನುಷ್ಯನು ಜನರೊಳಗೆ ಬಹಳ ಪ್ರಸಿದ್ಧಿಗೆ ಬರುವದಿಲ್ಲ. ಮತ್ತು ಅವನ ವೃತ್ತಾಂತವನ್ನು ಕೇಳುವವರ ಮನಸ್ಸನ್ನು ರಂಜದೆ ಮಾಡತಕ್ಕ ಹೊಸ ಹೊಸ ಚಮತ್ಕಾರಗಳಾವವರೂ ಆತನ ಚರಿತ್ರದಲ್ಲಿರುವದಿಲ್ಲ. ಆತನ ಮುಖ್ಯ ಕೆಲಸಗಳೆಂದರೆ, ನಾಲ್ಕು ಜನರು ಕೂಡಿದ ಸಮಾಜದಲ್ಲಿ ಮಾತಾಡುವದು. ಏಕಾಂತದಲ್ಲಿ ಕುಳಿತು ಮನನ ಮಾಡುವದು, ಗ್ರಂಥಗಳನ್ನು ಓದುವದು, ಶ್ರವಣಮಾಡುವದು, ಪ್ರಶ್ನೆಗಳನ್ನು ಕೇಳುವದು, ಮತ್ತು ಕೇಳಿದ ಪ್ರಶ್ನಗಳಿಗೆ ಉತ್ತರ ಕೊಡುವದು. ಆತನು ಎಲ್ಲಿಯಾದರೂ ಹೋದರೆ ಆತನ ಸುತ್ತು ಮುತ್ತು ಸೇವಕರು

ಮುಂತಾದ ಒಡಹೊಲು ಇರುವದಿಲ್ಲ; ಅವನಿಗೆ ಯಾರೂ ಅಂಜುವದಿಲ್ಲ, ತನ್ನಂತೆಯೇ ವಿದ್ಯೆಯ ಅಭಿರುಚಿಯುಳ್ಳ ಕೆಲವು ಜನರಲ್ಲಿ ಅವನ ಪ್ರಸಿದ್ಧಿ ಇರುತ್ತದಲ್ಲದೆ ಉಳಿದವರಿಗೆ ಅವನ ವಿಷಯದಲ್ಲಿ ಏನೂ ಗೊತ್ತಿರುವದಿಲ್ಲ. "

" ನಾಯಿಲನದಿಯ ಉಗಮಸ್ಥಾನದ ಹತ್ತರ ಗೋಯಾಮಾ ಎಂಬದೊಂದು ರಾಜ್ಯವಿದೆ. ಅಲ್ಲಿ ನಾನು ಹುಟ್ಟಿದೆನು. ನನ್ನ ತಂದೆಯು ಒಳ್ಳೇ ಧನಿಕ ವರ್ತಕನಿದ್ದನು. ಅವನು ಅರಬೀ ಸಮುದ್ರದ ದಂಡೆಯಲ್ಲಿರುವ ಬಂದರಗಳಲ್ಲಿಯೂ, ಆಫ್ರಿಕಾಖಂಡದಲ್ಲಿ ಸಮುದ್ರದಿಂದ ದೂರಿರುವ ದೇಶಗಳಲ್ಲಿಯೂ, ವ್ಯಾಪಾರ ಮಾಡುತ್ತಿದ್ದನು. ಅವನು ಪ್ರಾಮಾಣಿಕನೂ, ಮಿತದಿಂದ ವೆಚ್ಚಮಾಡುವವನೂ, ಉದ್ಯೋಗಿಯೂ ಆಗಿದ್ದನು. ಆದರೆ ಆತನು ಕೀಳಮನಸ್ಸಿನವನೂ, ಬಹಳ ಹೇಡಿಯನೂ ಇದ್ದನು. ತಾನು ಶ್ರೀಮಂತನಾಗಬೇಕೆಂಬದೇ ಅವನ ಉತ್ಕಟೇಚ್ಛೆಯು. ಆತನು ತನ್ನ ಸಂಪತ್ತನ್ನು ಯಾವಾಗಲೂ ಮುಚ್ಚಿಟ್ಟು ಯಾರಿಗೂ ತೋರಗೊಡುತ್ತಿದ್ದಿಲ್ಲ. ಯಾಕಂದರೆ ತನ್ನ ಬದುಕನ್ನು ಯಾರಾದರೂ ನೋಡಿದರೆ, ಸರಕಾರದ ಅಧಿಕಾರಿಗಳು ಬಂದು ಅದನ್ನು ತೆಗೆದುಕೊಂಡು ಹೋದಾರೆಂಬ ಅಂಜಿಕೆಯು ಅವನಿಗಿತ್ತು. "

ಈ ಮಾತನ್ನು ಕೇಳಿ ರಾಜಪುತ್ರನು— "ನನ್ನ ತಂದೆಯ ರಾಜ್ಯದಲ್ಲಿ ಒಬ್ಬ ಮನುಷ್ಯನು ಬೇರೊಬ್ಬನ ಸಂಪತ್ತನ್ನು ಅನ್ಯಾಯದಿಂದ ಕಸುಕೊಳ್ಳಲಿಕ್ಕೆ ಪ್ರವೃತ್ತನಾಗುತ್ತಾನೆಂದ ಮೇಲೆ, ಅರಸನು ತನ್ನ ಕಾರ್ಯಭಾರವನ್ನು ಒಳ್ಳೇ ರೀತಿಯಿಂದ ನಡಿಸುವದಿಲ್ಲೆಂಬುವದು ಸ್ಪಷ್ಟವಾಗಿ ಕಂಡುಬರುತ್ತದೆ. ಅರಸನು ತಾನು ಸ್ವತಃ ಅನ್ಯಾಯ ಮಾಡಲಿ, ಇಲ್ಲದೆ ಎರಡನೆಯವರು ಅನ್ಯಾಯ ಮಾಡಿದರೆ ಅದನ್ನು ಲಕ್ಷಿಸದೆ ಇರಲಿ, ಎರಡೂ ಕೃತ್ಯಗಳ ಬಗ್ಗೆ ದೋಷಿಯಾಗಿರುತ್ತಾನೆಂಬ ಮಾತು ಬಾದಶಹನಿಗೆ ಗೊತ್ತಿರುವದಿಲ್ಲವೋ ? ನಾನು ಬಾದಶಹನಾಗಿದ್ದರೆ, ನನ್ನ ರಾಜ್ಯದೊಳಗಿನ ಅತ್ಯಂತ ಕೀಳ ಮನುಷ್ಯನಿಗೂ ಕೂಡ ಯಾವನೂ ಸುಮ್ಮಸುಮ್ಮನೆ ಅಪಾಯಮಾಡಲಾರನು. ಒಂದು ವೇಳೆ ಅಪಾಯವನ್ನು ಮಾಡಿದರೆ ಅವನಿಗೆ ಸರಿಯಾದ ಶಿಕ್ಷೆಯಾಗದೆ ಎಂದಿಗೂ ಇರದು. ಸರಕಾರದ ಅಧಿಕಾರಿಗಳು ತಮ್ಮ ಸಂಪತ್ತನ್ನು ಹರಣಮಾಡ್ಯಾರೆಂಬ ಭೀತಿಯಿಂದ, ಶ್ರೀಮಂತ ಜನರು ಸ್ವಕಷ್ಟಾರ್ಜಿತ ಸಂಪತ್ತಿನ ಉಪಭೋಗವನ್ನು ಮಾಡಲಾರರೆಂಬ ಮಾತನ್ನು ಕೇಳಿ, ನನಗೆ ಬಹಳ ಸಂತಾಪವಾಗುತ್ತದೆ. ಇಂಥ ನೀಚ ಅಧಿಕಾರಿಗಳು ಯಾರಿರುವರು ? ಅವರ ಹೆಸರನ್ನು ನನಗೆ ಒಮ್ಮೆ ಹೇಳಿದರೆ ನಾನು ಸ್ವತಃ ಅವರ ಅಪರಾಧವನ್ನು ಬಾದಶಹನ ಕಿವಿಯ ಮೇಲೆ ಹಾಕುವೆನು " ಎಂದನು.

ಇವಸ್ಲಾಕ ಕವಿ—" ಮಹಾರಾಜರೇ, ತನ್ನ ಸ್ವಭಾವವು ಉತ್ಕೃಷ್ಟವಾದದ್ದು, ವಯಸ್ಸು ಸಣ್ಣದೂ ಇದ್ದು. ಲೌಕಿಕಸ್ಥಿತಿಯು ತಮಗೆ ಗೊತ್ತಿಲ್ಲದ್ದರಿಂದ ತಮಗೆ ಇಷ್ಟು ಸಿಟ್ಟು ಬಂತು. ಕೆಲವು ಕಾಲದನಂತರ ತಾವೇ ತಮ್ಮ ತಂದೆಯವರನ್ನು ದೋಷ ( ಅನ್ಯಾಯ ಮಾಡಿದರೆಂಬ ದೋಷದಿಂದ ) ಮುಕ್ತರನ್ನಾಗಿ ಮಾಡುವಿರಿ ; ಮತ್ತು ಅಧಿಕಾರಿಗಳ ಬಗ್ಗೆ ತಮಗೆ ಇಷ್ಟು ಸಿಟ್ಟು ಬರಲಿಕ್ಕಿಲ್ಲ ವಿಚಾರ ಮಾಡಿ ನೋಡಿದರೆ ಈ ಬಸ್ರೀ ದೇಶದಲ್ಲಿಯ ಜನರ ಮೇಲೆ ಯಾರೂ ಎಂದೂ ಅನ್ಯಾಯಮಾಡುವದಿಲ್ಲ, ಒಂದು ವೇಳೆ ಅನ್ಯಾಯ ಮಾಡಿದರೂ ಅಪರಾಧಿಗೆ ಶಿಕ್ಷೆಯಾಗದೆ ಎಂದೂ ಉಳಿಯುವದಿಲ್ಲ. ಒತ್ತಾಯವೂ, ಅನ್ಯಾಯವೂ, ಕ್ರೌರ್ಯವೂ ಹೇಳಹೆಸರಿಲ್ಲದಂಥ ರಾಜ್ಯವ್ಯವಸ್ಥೆಯು ಮನುಷ್ಯನಿಗೆ ಇನ್ನೂ ಗೊತ್ತಾಗಿಲ್ಲ. ಬೇಕಾದ ರಾಜ್ಯವ್ಯವಸ್ಥೆಯನ್ನು ತೆಗೆದುಕೊಳ್ಳಿರಿ. ಅದರಲ್ಲಿ ಅನ್ಯಾಯವು ಹೆಚ್ಚು ಕಡಿಮೆ ಪ್ರಮಾಣದಿಂದ ಇದ್ದೇ ಇರುತ್ತದೆ. ಅಧಿಕಾರ ನಡಿಸೋಣವೆಂದರೆ, ಒಬ್ಬನು ಆಜ್ಞೆ ಮಾಡಬೇಕು. ಮತ್ತೊಬ್ಬನು ಆ ಅಜ್ಞೆಗೆ ಒಳಗಾಗಿ ನಡೆಯಬೇಕೆಂಬದೇ ಅದರ ಅರ್ಥವು ; ಮತ್ತು ಮನುಷ್ಯನ ಕೈಯಲ್ಲಿ ಅಧಿಕಾರ ಸಿಕ್ಕಿತೆಂದರೆ. ಒಂದಿಲ್ಲೊಂದು ಕೆಲಸದಲ್ಲಿ ಆ ಅಧಿಕಾರದ ದುರುಪಯೋಗವು ಆಗೇ ಆಗುತ್ತದೆ. ಸರ್ವ ಶ್ರೇಷ್ಠಾಧಿಕಾರಿಯಾದ ಅರಸನು ಯಾವಾಗಲೂ ಬಹಳೇ ಎಚ್ಚರಿಕೆಯಿಂದ ಎಲ್ಲ ಕಡೆಯಲ್ಲಿಯೂ ನೋಡುತ್ತ ಇದ್ದರೆ, ಜನರು ಜಾಗರೂಕರಾಗಿದ್ದು ಕೆಟ್ಟ ಕೆಲಸಗಳನ್ನು ಮಾಡಲಿಕ್ಕಿಲ್ಲ; ಆದರೆ ಎಷ್ಟೋ ಸಂಗತಿಗಳು ಆತನಿಗೆ ತಿಳಿಯದೇ ಆಗುತ್ತವೆ. ಆತನ ರಾಜ್ಯದಲ್ಲಿ ಸಂಭವಿಸುವಂಥ ಯಾವತ್ತೂ ಅನ್ಯಾಯಗಳು ಆತನಿಗೆ ತಿಳಿಯುವದು ಅಸಂಭವವದೆ; ಮತ್ತು ಆತನಿಗೆ ತಿಳಿದ ಯಾವತ್ತೂ ಅನ್ಯಾಯಗಳಿಗೆ ತಕ್ಕ ಶಾಸನ ಮಾಡುವದು ಆತನ ಕೈಯಿಂದಾಗುವದೂ ಇಲ್ಲ "

ರಾಜಪುತ್ರನು—"ನೀವು ಅಂದದ್ದು ನನಗೆ ತಿಳಿಯಲೊಲ್ಲದು; ಇರವಲ್ಲದೇಕೆ. ಮೊದಲು ನಾನು ನಿಮ್ಮ ಚರಿತ್ರವನ್ನು ಕೇಳಬೇಕಾಗಿದೆ; ವಾದವಿವಾದ ಮಾಡುವದು ಬೇಕಾಗಿಲ್ಲ, ನಿಮ್ಮ ಚರಿತ್ರವನ್ನು ಹೇಳಿರಿ. "

ಇಮ್ಲಾಕನು ತನ್ನ ಚರಿತ್ರವನ್ನು ಮುಂದೆ ಸಾಗಿಸಿ ಅಂದನು " ಕೇವಲ ವ್ಯಾಪಾರದ ಕೆಲಸಕ್ಕೆ ಅವಶ್ಯವಿದ್ದಷ್ಟು ವಿದ್ಯವನ್ನು ಕಲಿಸಬೇಕಲ್ಲದೆ ಹೆಚ್ಚಿನ ಯಾವ ವಿದ್ಯವನ್ನೂ ನನಗೆ ಕಲಿಸುವ ಕಾರಣವಿಲ್ಲೆಂದು ನಮ್ಮ ತಂದೆಯ ಉದ್ದೇಶವಿತ್ತು. ಚಿಕ್ಕಂದಿನಲ್ಲಿಯ ನನ್ನ ಸ್ಮರಣಶಕ್ತಿಯನ್ನೂ, ತೀವ್ರತರವಾದ ಗ್ರಾಹಕ ಶಕ್ತಿಯನ್ನೂ ನೋಡಿ, ನಾನು ಮುಂದೆ ಇಡೀ ಹಬಸೀ ದೇಶದಲ್ಲಿ ಬಹಳೇ ದೊಡ್ಡ ಶ್ರೀ

ಮಂತ ವರ್ತಕನಾಗುವೆನೆಂದು ನನ್ನ ತಂದೆಯು ಆಶೆಯಿತ್ತು. ಅದನ್ನು ಅವನು ಅನೇಕಾವರ್ತಿ ಜನರ ಮುಂದೆ ಅಂದೂ ತೋರಿಸುತ್ತಿದ್ದನು ”

ರಾಜಪುತ್ರನು— “ ತನ್ನ ಸುಖೋಪಭೋಗಕ್ಕೆ ಸಾಕಾಗಿ ಉಳಿಯುವಷ್ಟು ಮತ್ತು ಜನರಿಗೆ ತೋರಿಸಲಾರದಷ್ಟು ಹೆಚ್ಚು ಸಂಪತ್ತು ನಿಮ್ಮ ತಂದೆಯು ಹತ್ತರ ಮೊದಲೇ ಇತ್ತೆಂದು ನೀವು ಹೇಳುತ್ತೀರಿ; ಅದರ ಮೇಲೆ ಮತ್ತೆ ಹೆಚ್ಚು ಹಣವನ್ನು ಗಳಿಸಬೇಕೆಂಬ ಮನಸ್ಸು ಅವನಿಗೆ ಹ್ಯಾಗೆ ಆಯಿತು? ಇನ್ನು ನೀವು ಹೇಳುವ ಮಾತು ಸುಳ್ಳೆಂದು ನಾನು ಅನ್ನಲಾರೆನು. ಆದರೂ ಪರಸ್ಪರ ವಿರೋಧವಾದ ಎರಡೂ ಮಾತುಗಳು ಸತ್ಯವಿರಲಾರವೆಂಬುವದನ್ನು ನಾನು ಬಲ್ಲೆನು. ”

ಇವ್ಲಾಕ—ಪರಸ್ಪರ ವಿರೋಧವಾದ ಎರಡೂ ಸಂಗತಿಗಳು ನಿಜವಿರಲಾರವು. ಆದರೆ ಮನುಷ್ಯನ ವಿಷಯಕ್ಕೆ ವಿಚಾರ ಮಾಡಿದರೆ ಅಂಥ ಎರಡೂ ಸಂಗತಿಗಳು ನಿಜವಾಗಿರುವವು.

ಮತ್ತೊಂದು ಮಾತೇನಂದರೆ, ಎರಡು ಸಂಗತಿಗಳು ಪರಸ್ಪರ ಭಿನ್ನವಿದ್ದರೂ, ಅವು ನಿಶ್ಚಯವಾಗಿ ಪರಸ್ಪರ ವಿರುದ್ಧವಾದಂಥವು ಇದ್ದೇ ಇರುತ್ತವೆಂದನ್ನಲಾಗದು. ಕೆಲವು ಕಾಲದನಂತರ ರಾಜ್ಯದಲ್ಲಿ ಹೆಚ್ಚಿನ ವ್ಯವಸ್ಥೆಯಾಗಿ ಸ್ವಸ್ಥ ಚಿತ್ತದಿಂದಲೂ, ನಿರ್ಭೀತಿಯಿಂದಲೂ ತನ್ನ ಸಂಪತ್ತಿನ ಉಪಭೋಗವನ್ನು ಮಾಡಿಕೊಳ್ಳಬಹುದೆಂದು ಒಂದು ವೇಳೆ ನಮ್ಮ ತಂದೆಗೆ ತೋರಿರಬಹುದು. ಇನ್ನೊಂದು ಮಾತೇನಂದರೆ—ಮನುಷ್ಯನು ಬದುಕಿರುವ ಮಟ್ಟಿಗೆ ಅವನಿಗೆ ಒಂದಿಲ್ಲೊಂದು ಅಪೇಕ್ಷೆಯು ಇದ್ದೇ ಇರುತ್ತದೆ. ಮತ್ತು ಯಾವನ ಸ್ವಾಭಾವಿಕವಾದಂಥ ಹಾಗು ನಿಜವಾದಂಥ ನ್ಯೂನತೆಗಳು ಪೂರ್ಣವಾಗಿರುತ್ತವೋ ಅವನು ಕಾಲ್ಪನಿಕ ನ್ಯೂನತೆಗಳನ್ನು ಪೂರ್ಣ ಮಾಡುವ ಉದ್ಯೋಗದಲ್ಲಿ ತನ್ನ ವೇಳೆಯನ್ನು ಕಳೆಯುವನು. ”

ರಾಜಪುತ್ರನು— “ ನೀವು ಅನ್ನುವದು ಕೆಲವು ಅಂಶದಿಂದ ನಿಜವಿರುತ್ತದೆಂದು ನನಗೆ ತೋರುತ್ತದೆ. ನಡುವೇ ಸಂಶಯ ತೆಗೆದು ನಿಮಗೆ ಸುಮ್ಮನೆ ವ್ಯತ್ಯಯ ತಂದಬಗ್ಗೆ ನನಗೆ ಪಶ್ಚಾತ್ತಾಪವಾಗುತ್ತದೆ. ”

ಇವ್ಲಾಕನು ತನ್ನ ವೃತ್ತಾಂತವನ್ನು ಮುಂದೆ ಸಾಗಿಸಿ ಅಂದನು “ನಮ್ಮ ತಂದೆಯು ಮೇಲೆ ಹೇಳಿದಂತೆ ಆಶೆಯುಳ್ಳವನಾಗಿ ನನ್ನನ್ನು ಶಾಲೆಗೆ ಹಾಕಿದನು ಶಾಲೆಗೆ ಹೋಗಿ ತುಸು ದಿವಸಗಳಾದನಂತರ ನನಗೆ ಹೊಸ ಹೊಸ ಸಂಗತಿಗಳ ಜ್ಞಾನವಾದದರಿಂದ ಉಂಟಾದ ಆನಂದವೂ ಅಪೂರ್ವ ವಿಷಯದಲ್ಲಿ ಬುದ್ಧಿ ಹಾಕಬೇಕೆಂಬ ಇಚ್ಛೆಯೂ, ಅದರಿಂದುಂಟಾದ ಸಂತೋಷವೂ ಕಲ್ಪಕತನವನ್ನು ಹೆಚ್ಚಿಸಬೇಕೆಂಬ

ಅಭಿಮಾನವೂ ನನ್ನಲ್ಲುಂಟಾದದರಿಂದ ನಾನು ಸಂಪತ್ತನ್ನು ತಿರಸ್ಕರಿಸಹತ್ತಿದೆನು. ಕೇವಲ ಸಂಪತ್ತಿಯನ್ನು ಹೆಚ್ಚಿಸಬೇಕೆಂಬ ನಮ್ಮ ತಂದೆಯ ಉತ್ಕಟೇಚ್ಛೆಯನ್ನು ನೋಡಿ ಆತನ ವಿಷಯಕ್ಕೆ ನನ್ನ ಪೂರ್ವದ ಪೂಜ್ಯಬುದ್ಧಿಯು ಕಡಿಮೆಯಾಯಿತು. ಆದದರಿಂದ ಆತನ ಇಚ್ಛೆಯಮೇರೆಗೆ ಕ್ಷುಲ್ಲಕವಾದ ಹಣವನ್ನು ಗಳಿಸುವದರಲ್ಲಿಯೇ ನನ್ನ ಕಾಲ ಕಳೆಯಲಿಕ್ಕಿಲ್ಲೆಂದು ನಿಶ್ಚಯಿಸಿದೆನು.

ಸಾರಾಂಶ:—ನಮ್ಮ ತಂದೆಯನ್ನು ನಿರಾಶೆಪಡಿಸಬೇಕೆಂದು ನಾನು ಗೊತ್ತು ಮಾಡಿದೆನು. ನಮ್ಮ ತಂದೆಯು ನನ್ನ ಮೇಲೆ ಬಹಳ ಪ್ರೀತಿ ಮಾಡುತ್ತಿದ್ದನಾದದರಿಂದ ನಾನು ೨೦ ವರ್ಷದವನಾಗಿದ್ದರೂ ಮನೆ ಬಿಟ್ಟು ಹೊರಗೆ ಹೋಗಿದ್ದಿಲ್ಲ. ಅದರ ಮೇಲೆ ಪ್ರವಾಸಶ್ರಮದ ಸುದ್ದಿಯೇ ನನಗೆ ಗೊತ್ತಿದ್ದಿಲ್ಲ. ಅಷ್ಟು ಅವಧಿಯಲ್ಲಿ ನಾನು ಬೇರೆಬೇರೆ ಗುರುಗಳ ಸಹಾಯದಿಂದ ನನ್ನ ದೇಶದೊಳಗಿನ ಯಾವತ್ತು ವಿದ್ಯೆಗಳನ್ನು ಕಲಿತೆನು. ದಿನಾಗಲು-ತಾಸುತಾಸಿಗೆ-ನನಗೆ ಹೊಸ ಹೊಸ ಸಂಗತಿಗಳು ತಿಳಿಯುತ್ತಿದ್ದವಾದದರಿಂದ, ನನ್ನ ಯಾವತ್ತು ವೇಳೆಯು ಒಳ್ಳೇ ಆನಂದದಲ್ಲಿ ಹೋಗುತ್ತಿತ್ತು. ಆದರೆ ನಾನು ದೊಡ್ಡವನು ಆದ ಆದ ಹಾಗೆ ನನ್ನ ಗುರುಗಳ ವಿಷಯದಲ್ಲಿ ನನಗಿದ್ದ ಮುಂಚಿನ ಪೂಜ್ಯಬುದ್ಧಿಯು ಬರಬರುತ್ತ ಕಡಿಮೆಯಾಗಹತ್ತಿತು. ಯಾಕಂದರೆ ಅಧ್ಯಯನಪಾಠಗಳು ಮುಗಿದ ತರುವಾಯ, ನಾನು ಅವರ ವಿಷಯಕ್ಕೆ ವಿಚಾರಮಾಡಿ ನೋಡಲು, ಇತರ ಮನುಷ್ಯರಗಿಂತ ಅವರು ಜಾಣತನದಿಂದಾಗಲಿ ಆಚರಣದಿಂದಾಗಲಿ ಶ್ರೇಷ್ಠರಿದ್ದಂತೆ ನನ್ನ ಅನುಭವಕ್ಕೆ ಬರಲಿಲ್ಲ "

"ಕಟ್ಟಕಡೆಗೆ ನನ್ನನ್ನು ವ್ಯಾಪಾರ ಮಾಡುವದಕ್ಕೆ ಹಚ್ಚಬೇಕೆಂದು ನಿಶ್ಚಯಿಸಿ, ನಮ್ಮ ತಂದೆಯು ಒಂದು ದಿವಸ ಹಣದಿಂದ ತುಂಬಿದ ಹಗೆಯೊಳಗಿಂದ ೧೦ ಸಾವಿರ ಹೊನ್ನುಗಳನ್ನು ತೆಗೆದು, ನನ್ನಮುಂದೆ ಎಣಿಸಿಟ್ಟು ಅಂದನು "ಮಗನೇ, ಇಕೋ, ನಾನು ನಿನಗೆ ಇಷ್ಟು ಬಂಡವಲವನ್ನು ಕೊಡುತ್ತೇನೆ. ಇಷ್ಟರ ಮೇಲೆ ನೀನು ವ್ಯಾಪಾರವನ್ನು ಆರಂಭಿಸಬೇಕು. ನಾನು ವ್ಯಾಪಾರ ಮಾಡಲಿಕ್ಕೆ ಆರಂಭ ಮಾಡಿದಾಗ, ನನ್ನಹತ್ತರ ಈ ಹಣದ $\frac{1}{5}$ ಒಂದು ಅಯ್ದಂಶ ಹಣ ಸಹ ಇದ್ದಿಲ್ಲ. ಆದರೆ ನಾನು ನನ್ನ ಉದ್ಯೋಗದಿಂದಲೂ ಮಿತವ್ಯಯದಿಂದಲೂ ಅದನ್ನು ಎಷ್ಟು ಹೆಚ್ಚಿಸಿದ್ದೇನೆಂಬದನ್ನು ನೀನು ಪ್ರತ್ಯಕ್ಷ ನೋಡಿರುತ್ತೀ. ನಾನು ನಿನಗೆ ಈಗ ಕೊಟ್ಟ ೧೦೦೦೦ ಹೊನ್ನುಗಳ ಮೇಲೆ ನಿನ್ನದೇ ಸಂಪೂರ್ಣಾಧಿಕಾರವದೆ. ಬೇಕಾದರೆ ಈ ಹಣವನ್ನು ಹಾಳುಮಾಡು. ಇಲ್ಲವೆ ಅದನ್ನು ಹೆಚ್ಚಿಸು. ನೀನು ನಿರ್ಯೋಚನೆಯಿಂದಾಗಲಿ, ಅಥವಾ ಚಂಚಲತನದಿಂದಾಗಲಿ, ಈ ಹಣವನ್ನು ಹಾಳು ಮಾಡಿದರೆ, ನಾನು ಜೀವಂತನಿರುವ ವರೆಗೆ ನನ್ನ ಹಣದಲ್ಲಿಯು ಒಂದು

ಕಾಸು ಸಹ ನಿನಗೆ ಸಿಕ್ಕಲಾರದು. ನನ್ನಲ್ಲಿಷ್ಟು ಹಣ ಸಿಕ್ಕು ನೀನು ಶ್ರೀಮಂತನಾಗಬೇಕಾದರೆ, ನೀನು ನನ್ನ ಮರಣವದಾರೀ ನೋಡುತ್ತ ಕೂತಿರಬೇಕೇ ಹೊರತು ಬೇರೆ ಉಪಾಯವಿಲ್ಲ. ಆದರೆ ನಾಲ್ಕು ವರ್ಷಗಳಲ್ಲಿ ನಾನು ನಿನಗೆ ಈಗ ಕೊಟ್ಟ ಹಣವನ್ನು ಇಮ್ಮಡಿಮಾಡಿದರೆ, ನನ್ನಲ್ಲಿ ನಿನ್ನಲ್ಲಿರುವ ಹಿರಿತನ ಚಿಕ್ಕತನಗಳನ್ನು ಮರೆತುಬಿಟ್ಟು ನಾನು ನಿನ್ನ ಮಿತ್ರನಾಗಿಯೂ ಪಾಲುಗಾರನಾಗಿಯೂ ನಡೆದು ಕೊಳ್ಳುವೆನು. ಯಾಕಂದರೆ ದುಡ್ಡು ಸಂಪಾದಿಸುವ ಕೆಲಸದಲ್ಲಿ ನನ್ನಷ್ಟೇ ಜಾಣನಿದ್ದ ಮನುಷ್ಯನು ನನ್ನ ಸಮಾನಸ್ಕಂಧನೆಂದು ನಾನು ತಿಳಿಯುತ್ತೇನೆ."

"ಆ ಮೇಲೆ ಕೆಲವು ಅಗ್ಗವಾದ ಸರಕುಗಳನ್ನು ಕೊಂಡು, ಅವುಗಳ ಗಂಟುಕಟ್ಟಿ, ಆ ಗಂಟುಗಳಲ್ಲಿ ನನ್ನ ತಂದೆ ಕೊಟ್ಟ ಹಣವನ್ನು ಬಚ್ಚಿಟ್ಟು, ಆ ಸರಕುಗಳನ್ನು ಒಂಟೆಗಳ ಮೇಲೆ ಹೇರಿಕೊಂಡು, ಕೆಂಪು ಸಮುದ್ರದ ದಂಡೆಗೆ ಪ್ರಯಾಣ ಮಾಡಿದೆವು. ಸಮುದ್ರದ ಅಮರ್ಯಾದಿತವಾದ ವಿಸ್ತಾರವುಳ್ಳ ನೀರನ್ನು ನೋಡಿದಕೂಡಲೆ ಸೆರೆಮನೆಯೊಳಗಿಂದ ಹೊರಗೆ ಬಂದ ಮನುಷ್ಯನಿಗೆ ಆನಂದವಾಗುವಂತೆ, ನನಗೆ ಅತ್ಯಾನಂದವಾಯಿತು. ಮತ್ತೂ ಅನೇಕ ವಿಧವಾದ ಹೊಸ ಹೊಸ ಜ್ಞಾನವನ್ನು ಸಂಪಾದಿಸಬೇಕೆಂಬ ಇಚ್ಛೆಯು ಹುಟ್ಟಿತು. ಆದದರಿಂದ ಪುನಃ ಎಂದೂ ಸಿಕ್ಕದಂಥ ಅಮೂಲ್ಯವಾದ ಈ ಸಂಧಿಯನ್ನು ಸಾಧಿಸಿ, ಪೃಥ್ವಿಯ ಮೇಲಿನ ತರತರದ ಜನರ ವಿಧವಿಧದ ನಡೆನುಡಿಗಳನ್ನು ನೋಡಬೇಕೆಂತಲೂ, ಹಬಶೀ ದೇಶದಲ್ಲಿಯ ಜನರಿಗೆ ಗೊತ್ತಿಲ್ಲದಂಥ ಯಾವತ್ತು ವಿಷಯಗಳನ್ನು ಕಲಿಯಬೇಕೆಂತಲೂ ನಿಶ್ಚಯಿಸಿದೆನು."

ನಾನು ನನ್ನ ಬಂಡವಲವನ್ನು ಹೆಚ್ಚಿಸಬೇಕೆಂತಲೂ, ಹಾಗೆ ಮಾಡದಿದ್ದರೆ ನನಗೆ ಹೆಚ್ಚು ಹಣವು ಸಿಕ್ಕಲಿಕ್ಕಿಲ್ಲೆಂತಲೂ ನಮ್ಮ ತಂದೆಯು ಹೇಳಿದ್ದು ನನಗೆ ಚನ್ನಾಗಿ ನೆನಪಿತ್ತು. ಆದರೆ ಬಂಡವಲನ್ನು ಹೆಚ್ಚಿಸುವೆನೆಂದು ನಾನು ಆತನಿಗೆ ವಚನ ಮಾತ್ರ ಕೊಟ್ಟಿದ್ದಿಲ್ಲ. ಮತ್ತು ಆತನಿಂದ ಹೆಚ್ಚಿನ ಹಣ ದೊರೆಯಬೇಕೆಂಬ ಆಶೆಯೂ ನನಗೆ ಇದ್ದಿಲ್ಲ. ಅಂದಮೇಲೆ ನನಗೆ ಕೊಟ್ಟ ಹಣವನ್ನು ನಾನು ಬೇಕಾದಹಾಗೆ ವೆಚ್ಚ ಮಾಡಬಹುದೆಂದು ವಿಚಾರಿಸಿದೆನು. ವಚನ ಕೊಟ್ಟಿದ್ದರೆ ಮಾತ್ರ ಹಣವನ್ನು ಹೆಚ್ಚಿಸದಿದ್ದರೆ ವಚನಭಂಗ ಮಾಡಿದ ದೋಷವು ಬರುತ್ತಿತ್ತು. ಈ ಮೇರೆಗೆ ವಿಚಾರ ಮಾಡಿ ಅನೇಕ ರಾಷ್ಟ್ರಗಳನ್ನು ನೋಡಬೇಕೆಂಬ ನನ್ನ ಕುತೂಹಲವನ್ನು ಸಂತುಷ್ಟ ಪಡಿಸಿ, ಜ್ಞಾನೋದಧಿಯೊಳಗಿನ ಅಮೃತವನ್ನು ಪಾನಮಾಡಿ, ಹೊಸ ಹೊಸ ಸಂಗತಿಗಳನ್ನು ನೋಡುವ ಕಾಂಕ್ಷೆಯೆಂಬ ತೃಷ್ಣೆಯನ್ನು ಸಮಾಧಾನಪಡಿಸಬೇಕೆಂದು ನಾನು ನಿಶ್ಚಯಿಸಿದೆನು."

"ನಾನು ನಮ್ಮ ತಂದೆಯು ಸಂಬಂಧವಿಲ್ಲದೆ ಸ್ವತಂತ್ರವಾಗಿ ವ್ಯಾಪಾರಕ್ಕೆ ಹೊರಟಿರುವೆನೆಂದು ಎಲ್ಲರಿಗೂ ಗೊತ್ತಿದ್ದದರಿಂದ, ಒಬ್ಬ ಹಡಗದ ಯಜಮಾನನ ಗುರ್ತು ಮಾಡಿಕೊಂಡು, ನನ್ನ ತಂದೆಯು ಹೋಗುವ ದೇಶವನ್ನು ಬಿಟ್ಟು ಬೇರೊಂದು ದೇಶಕ್ಕೆ ಹೋಗುವದಕ್ಕಾಗಿ ನಿಶ್ಚಯಿಸಿ, ಬಾಡಿಗೆ ಮುಂತಾದುದನ್ನು ಗೊತ್ತು ಮಾಡುವದಕ್ಕೆ ನನಗೆ ಸುಲಭವಾಯಿತು. ಇಂಥಾದ್ದೊಂದು ದೇಶಕ್ಕೆ ಹೋಗುವ ಹಡಗದಲ್ಲಿಯೇ ಪ್ರವಾಸ ಮಾಡಬೇಕೆಂಬ ಉದ್ದೇಶವು ನನ್ನದಿದ್ದಿಲ್ಲ. ಯಾಕಂದರೆ ನಾನು ನೋಡದ ಇದ್ದಂಥ ಹೊಸದೇಶವಾದರಾಯಿತು, ಅದನ್ನು ನೋಡಬೇಕೆಂದು ನನ್ನ ಮನಸ್ಸಿತ್ತು. ಆದದರಿಂದ ಸುರತ ಪಟ್ಟಣಕ್ಕೆ ಹೋಗುವ ಹಡಗದೊಳಗೆ ಕುಳಿತು, ನನ್ನ ಉದ್ದೇಶವನ್ನು ನಮ್ಮ ತಂದೆಗೆ ಪತ್ರದ್ವಾರದಿಂದ ತಿಳಿಸಿ ಹೊರಟು ಹೋದೆನು."

## ಒಂಬತ್ತನೆಯ ಭಾಗವು

——:(೦):——

### ಇಮ್ಲಾಕನ ಚರಿತ್ರವು (ಮುಂದೆ ಸಾಗಿದ್ದು.)

ಇಮ್ಲಾಕನು ಹೇಳುತ್ತಾನೆ:—ನಾನು ಸಮುದ್ರದ ಪ್ರವಾಸ ಮಾಡಿದ್ದು ಇದೇ ಮೊದಲನೇ ಸಾರಿಯಾದದರಿಂದ, ಭೂಮಿಯು ಕಣ್ಣ ಮರೆಯಾದಮೇಲೆ, ನನ್ನಸುತ್ತಲೂ ನೋಡಲು, ನನಗೆ ತುಸು ಭೀತಿ ಬೆರೆದ ಆನಂದವಾಯಿತು. ಸುತ್ತಮುತ್ತಲಿನ ಅಮರ್ಯಾದ ವಿಸ್ತಾರವುಳ್ಳ ನೀರನ್ನು ನೋಡಿ, ನನ್ನ ಮನಸ್ಸಾದರೂ ವಿಸ್ತೃತವಾದಂತೆ ತೋರಿತು. ಮತ್ತು ಸಮುದ್ರದ ಕಡೆಗೆ ದಿಟ್ಟಿಸಿ ನೋಡುತ್ತ, ಎಷ್ಟು ದಿವಸ ಕುಳಿತರೂ, ಬೇಸರ ಬರಲಿಕ್ಕಿಲ್ಲೆಂದು ನಾನು ಊಹಿಸಿದೆನು. ಆದರೆ ತುಸು ಹೊತ್ತು ನೋಡುತ್ತ ಕುಳಿತಮೇಲೆ, ಒಂದೇಸವನೆ ಒರೇ ನೀರನ್ನು ನೋಡುವದು ನನಗೆ ಬೇಸರಾಯಿತು, ನೋಡಿದತ್ತಲ್ಲ ನೀರೇ ನೀರು, ಬೇರೆ ಏನೂ ಇರಲಿಲ್ಲ. ಆದದರಿಂದ ನಾನು ಒಳಗಿಳಿದು ನನ್ನಕೋಣೆಯೊಳಗೆ ಹೋಗಿ ಕುಳಿತುಕೊಂಡೆನು. ಸಮುದ್ರದ ನೋಟವು ಎಂದೂ ಬೇಸರವನ್ನುಂಟು ಮಾಡಲಿಕ್ಕಿಲ್ಲೆಂಬ ನನ್ನ ತಿಳಿವಳಿಕೆಯು ಹೋಯಿತು. ಇದೇ ಮೇರೆಗೆ ನಾನು ನೋಡಬೇಕೆಂದು ಇಚ್ಛಿಸಿದ ಭೂಮಿಯ ಮೇಲಿನ ಯಾವತ್ತು ಚಮತ್ಕಾರಗಳ ವಿಷಯಕ್ಕೂ ಬೇಸರವೂ, ನಿರಾಶೆಯೂ, ಉಂಟಾಗುವವೋ ಏನೋ ಎಂದು ಸಂಶಯ ಬಂತು. ಆದರೂ ನಾನು ನನ್ನ ಮನಸ್ಸನ್ನು ಈ ಮೇರೆಗೆ ಸಮಾಧಾನಮಾಡಿಕೊಂಡೆನು ಹ್ಯಾಗಂದರೆ—"ಸಮುದ್ರಕ್ಕೂ ಭೂಮಿಗೂ ಬಹಳ ಅಂತರವುಂಟು. ನೀರಿನಲ್ಲಿ ವೈಚಿತ್ರ್ಯವೇನು? ನೀರು ಚಲನದಲ್ಲಿರಬೇಕು, ಇಲ್ಲವೆ

ಸ್ಥಿರವಾಗಿರಬೇಕು. ಇದಕ್ಕೂ ಹೆಚ್ಚು ಏನೂ ಇಲ್ಲ. ಆದರೆ ಭೂಮಿಯ ನಾಕು ಹೀಗಲ್ಲ. ಭೂಮಿಯು ಮೇಲೆ ಪರ್ವತಗಳೂ, ಕೊಳ್ಳಗಳೂ, ತಪ್ಪಲುಗಳೂ, ಅಡವಿಗಳೂ, ಪಟ್ಟಣಗಳೂ ಮುಂತಾದ ಅನೇಕ ವೈಚಿತ್ರ್ಯಗಳುಂಟು. ನಾನಾ ವಿಧದ ಜನರು ವಾಸಿಸುತ್ತಾರೆ. ಆಯಾ ಜನರ ನಡೆನುಡಿಗಳೂ, ತಿಳುವಳಿಕೆಗಳೂ ತೀರ ಭಿನ್ನವಾಗಿರುತ್ತವೆ. ಇನ್ನು ಒಂದುವೇಳೆ ಭೂಮಿಯು ಮೇಲಿನ ಸೃಷ್ಟಿರಚನೆಯಲ್ಲಿ ಇಲ್ಲವೆ ಆಪರ ಸ್ವರೂಪದಲ್ಲಿ ಏನೂ ಹೆಚ್ಚುಕಡಿಮೆ ಕಂಡು ಬರದೆ ಇದ್ದಾಗ್ಯೂ, ಜನರ ನ್ಯವಹಾರದಲ್ಲಾದರೂ ಬಹಳ ವೈಚಿತ್ರ್ಯವು ಕಂಡುಬರುವ ಸಂಭವವಿರುತ್ತದೆ. ”

ಈ ವಿಚಾರದಿಂದ ನಾನು ನನ್ನ ಮನಸ್ಸಿನ ಸಮಾಧಾನ ಮಾಡಿಕೊಂಡು ಪ್ರವಾಸದ ಕಾಲದಲ್ಲಿ ಒಮ್ಮೊಮ್ಮೆ ನಾವಿಕರಿಂದ ಹಡಗು ನಡಿಸುವ ವಿದ್ಯವನ್ನು ಕಲಿಯುವದರಿಂದಲೂ— ( ನಾನು ಆ ವಿದ್ಯವನ್ನು ಕಲಿತೆನು ಮಾತ್ರ ಆದರೆ ಹಡಗು ನಡಿಸುವ ರೂಢಿಯನ್ನು ಎಂದೂ ಮಾಡಲಿಲ್ಲ )— ಒಮ್ಮೊಮ್ಮೆ ಒಬ್ಬನೇ ಕುಳಿತು ಸಂಸಾರಿಕನ ನಾನಾವಿಧದ ಅವಸ್ಥೆಗಳನ್ನು ನನ್ನಲ್ಲಿ ಕಲ್ಪಿಸಿ, ಆಯಾ ಅವಸ್ಥೆಯಲ್ಲಿ ನಾನು ಯಾವ ಬಗೆಯಿಂದ ನಡಕೊಳ್ಳಬೇಕೆಂಬ ಬಗ್ಗೆ ಆಲೋಚಿಸುವದರಿಂದಲೂ ( ಆದರೆ ಆ ತರದ ಒಂದಾದರೂ ಅವಸ್ಥೆಯು ನನಗೆ ಇನ್ನೂ ಪ್ರಾಪ್ತವಾಗಿಲ್ಲ ) ನನ್ನ ಮನವನ್ನು ರಂಜಿಸಿಕೊಳ್ಳುತ್ತಿದ್ದೆನು ”

“ ಹಡಗಿನೊಳಗೆ ಕುಳಿತು ಇಲ್ಲದ ಸಂಗತಿಗಳಿಂದ ಮನವನ್ನು ರಂಜಿಸಿಕೊಳ್ಳುವದು ನನಗೆ ತೀರ ಬೇಸರಾಯಿತು; ಅಷ್ಟರಲ್ಲಿ ನಾವೆಲ್ಲರೂ ಸುರಕ್ಷತೆಯಿಂದ ಸುರತ ಪಟ್ಟಣಕ್ಕೆ ಬಂದು ಹಡಗ ಇಳಿದೆವು. ಬಳಿಕ ನಾನು ನನ್ನ ಹಣವನ್ನು ತೆಗೆದುಕೊಂಡು ತೋರಿಕೆಗಾಗಿ ಕೆಲವು ಸರಕುಗಳನ್ನು ಕೊಂಡುಕೊಂಡು, ದೂರ ದೇಶಗಳಿಗೆ ವ್ಯಾಪಾರಕ್ಕಾಗಿ ಹೋಗುವ ಒಂದು ಸಂಘದವರಕೂಡ ನಡೆದೆನು. ಯಾವದೋ ಒಂದು ಕಾರಣದಿಂದ ನಾನು ಒಳ್ಳೇ ಶ್ರೀಮಂತನಿರುವೆನೆಂದು ಅವರಿಗೆ ತಿಳಿಯಿತು. ನಾನು ಪ್ರತಿಯೊಂದು ಹೊಸ ವಸ್ತುವನ್ನು ನೋಡಿ ಆಶ್ಚರ್ಯಪಡುತ್ತಿದ್ದೆನು, ಮತ್ತು ಅವರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದೆನು; ಇಷ್ಟರ ಮೇಲಿಂದ ನಾನು ಅಜ್ಞಾನಿಯೂ, ಹೊಸಬನೂ ಇರುವೆನೆಂತಲೂ, ಮತ್ತು ನನ್ನನ್ನು ಮೋಸಗೊಳಿಸುವದಕ್ಕೆ ಏನೂ ಚಿಂತೆ ಇಲ್ಲೆಂತಲೂ, ಅವರು ತಿಳಿದುಕೊಂಡರು. ಪ್ರಪಂಚದಲ್ಲಿ ಮನುಷ್ಯನು ಹ್ಯಾಗೆ ಮೋಸ ಹೋಗುತ್ತಾನೆಂಬುವದನ್ನು ಕಲಿಯುವದಕ್ಕಾಗಿಯೋ ನನ್ನ ಬಹಳ ದುಡ್ಡು ಹಾಳಾಯಿತು. ನನ್ನ ಸೇವಕರು ನನ್ನ ಹಣವನ್ನು ಕದಿಯು

ಹತ್ತಿದರು. ಸರಕಾರದ ಅಧಿಕಾರಿಗಳು ಸುಂಕ ಮುಂತಾದ ಸುಳ್ಳು ನೆವದಿಂದ ನನ್ನ ಕಡೆಯಿಂದ ಹಣವನ್ನು ಎತ್ತಹತ್ತಿದರು. ಇದಕ್ಕೆಲ್ಲ ನನ್ನ ಜತೆಗಾರರೇ ಕಾರಣ. ಅದರಿಂದ ಅವರಿಗೇನೂ ಲಾಭವಾಗಲಿಲ್ಲ; ಆದಾಗ್ಯೂ ತಮ್ಮ ಜಾಣ್ಮೆಯಿಂದ ನಾನು ಈ ಮೇರೆಗೆ ಕೇಡಿಗೊಳಗಾದೆನೆಂಬದೇ ಅವರಿಗೆ ಸಂತೋಷವು. " ಎಂದು ಇಮ್ಲಾಕನು ಹೇಳುತ್ತಿರಲು.

ರಾಜಪುತ್ರನು:— "ತುಸು ನಿಲ್ಲಿರಿ; ಪರರಿಗೆ ಹಾನಿಯುಂಟಾದರೆ ಮನುಷ್ಯನಿಗೆ ಲಾಭವಿಲ್ಲವಷ್ಟೆ?; ಆದರೆ ಪರರಿಗೆ ಹಾನಿಯಾದರೆ ಮನುಷ್ಯನು ಸಂತೋಷಪಡುತ್ತಾನೆಂದು ನೀವು ಹೇಳುತ್ತೀರಿ; ಅಂದ ಮೇಲೆ ಮನುಷ್ಯನು ಒಲು ದುಷ್ಟಪ್ರಾಣಿಯಾಗಿರುತ್ತಾನೆಂದೆನ್ನಬಹುದು. ಹೀಗಿರುವದು ನಿಜವ್ರೊ? ಒಬ್ಬನು ಬೇರೊಬ್ಬನಿಗಿಂತಲೂ ಬುದ್ಧಿಯಲ್ಲಿ, ವಿದ್ಯೆದಲ್ಲಿ, ಇಲ್ಲವೆ ಬೇರೊಂದು ಗುಣದಲ್ಲಿ ಶ್ರೇಷ್ಠನಿದ್ದರೆ ಅವನಿಗೆ ಸಂತೋಷವಾಗುವದು ಸಹಜವು. ಎಲ್ಲರಿಗೂ ಈ ತರದ ಆನಂದವಾಗುತ್ತದೆಂದು ನಾನು ಊಹಿಸುತ್ತೇನೆ, ಆದರೆ ಪ್ರಸಂಗವು ಬಾರದ್ದರಿಂದ ನೀವು ಅಜ್ಞಾನಿಯಾಗಿದ್ದಿರಿ; ಇದರಲ್ಲಿ ನಿಮ್ಮ ತಪ್ಪು ಇಲ್ಲ, ನಿಮ್ಮ ಹೆಡ್ಡತನವೂ ಅಲ್ಲ; ಅಂದ ಮೇಲೆ ನಿಮ್ಮ ಅಜ್ಞಾನವನ್ನು ನೋಡಿ ನಿಮ್ಮ ಜತೆಗಾರರು ತಾವೇ ಪಂಡಿತರು, ತಾವೇ ಶ್ರೇಷ್ಠರು, ತಾವೇ ಜ್ಞಾನಿಗಳೆಂದು ಹೆಮ್ಮೆಬಡುವದಕ್ಕೆ ಏನೂ ಕಾರಣವಿದ್ದಿಲ್ಲ; ಇನ್ನು ತಮ್ಮಲ್ಲಿದ್ದ ಪಾಂಡಿತ್ಯವು, ಶ್ರೇಷ್ಠತೆಯು, ಇಲ್ಲವೆ ಜ್ಞಾನವು, ನಿಮ್ಮಲ್ಲಿಲ್ಲೆಂಬುವದನ್ನು ನಿಮಗೆ ತೋರಿಸುವ ಮನಸ್ಸು ಅವರದು ಇದ್ದರೆ, ನಿಮ್ಮನ್ನು ಮೋಸಗೊಳಿಸದೆ, ನಿಮಗೆ ಬುದ್ಧಿವಾದವನ್ನು ಹೇಳಿ ಅಥವಾ ನಿಮ್ಮನ್ನು ಎಚ್ಚರಿಸಿ ಆ ಗುಣಗಳು ತಮ್ಮಲ್ಲುಂಟೆಂದು ತೋರಿಸುವದಕ್ಕೆ ಅವರಿಗೆ ಬರುವಂತಿತ್ತು. ನಿಮಗೆ ಹಾನಿಯನ್ನುಂಟುಮಾಡುವ ಕಾರಣವಿದ್ದಿಲ್ಲ. ಹೀಗೆ ಮಾಡಿದ್ದು ಕೇವಲ ಅವರ ದುಷ್ಟತನವೇ ಸರಿ" ಎಂದನು.

ಇಮ್ಲಾಕ:— " ಗರ್ವಿಷ್ಠ ಜನರು ಇಷ್ಟು ಸೂಕ್ಷ್ಮ ಭೇದವನ್ನು ಎಲ್ಲಿ ಮನಸ್ಸಿಗೆ ತರುತ್ತಾರೆ? ಗರ್ವಿಷ್ಠ ಜನರು ಕೀಳವಾತಿನಲ್ಲಿ ಸಹ ತುಸು ಮೇಲಾಯಿತಂದರೆ, ಅಷ್ಟರಿಂದಲೇ ಅಪರಿಮಿತ ಆನಂದಪಡುತ್ತಾರೆ. ಮತ್ಸರವುಳ್ಳ ಜನರು ತನ್ನ ಸುಖವನ್ನು ನೋಡಿ ಆನಂದಪಡುವದಿಲ್ಲ. ಆದರೆ ಪರರ ದುಃಖವನ್ನು ನೋಡಿ ಅವರಿಗೆ ಆನಂದವಾಗುತ್ತದೆ. ನಾನು ಶ್ರೀಮಂತನಿದ್ದದ್ದು ನನ್ನ ಜತೆಗಾರರಿಗೆ ಸಹನವಾಗಲಿಲ್ಲಾದ್ದರಿಂದ, ಅವರು ನನ್ನಕೂಡ ಹಗೆ ಮಾಡಹತ್ತಿದರು ಮತ್ತು ನಾನು ದುರ್ಬಲನಿದ್ದದರಿಂದ ನನ್ನ ಮೇಲೆ ಒತ್ತಾಯ ಮಾಡುವವರಿಗೆ ಆನಂದವಾಗುತ್ತಿತ್ತು."

ರಾಜಪುತ್ರನು:—“ ನೀವು ಹೇಳಿದ ಸಂಗತಿಗಳು ನಿಜವಿರಬಹುದು, ಇಲ್ಲೆಂಬು ನಾನು ಅನ್ನುವದಿಲ್ಲ; ಇಲ್ಲವೆ ಅವುಗಳ ಸತ್ಯತೆಯು ಬಗ್ಗೆ ನನಗೆ ಸಂಶಯುವೂ ಬರುವದಿಲ್ಲ. ಆದರೆ ನಿಮ್ಮ ಜತೆಗಾರರು ಯಾವ ಉದ್ದೇಶದಿಂದ ನಿಮಗೆ ತೊಂದರೆ ಕೊಟ್ಟರೋ ಆ ಉದೇಶವು ನೀವು ಹೇಳಿದಂತೆ ಇರುತ್ತಿತ್ತೋ ಇಲ್ಲವೆ ನಿಮ್ಮದೇ ತಪ್ಪು ತಿಳುವಳಿಕೆಯಾಗಿತ್ತೋ ಎಂಬ ಬಗ್ಗೆ ತುಸು ಸಂಶಯುಬರುತ್ತದೆ. ಇರಲಿ ನೀವು ನಿಮ್ಮ ಚರಿತ್ರವನ್ನು ಮುಂದೆ ಸಾಗಿಸಿರಿ”

ಇವನ್ಲಾಕ:—“ ಆ ಮೇಲೆ ಆ ಜನರ ಕೂಡ ಹಿಂದುಸ್ತಾನದ ರಾಜಧಾನಿಯೂ, ಮೊಗಲ ಬಾದಶಹನ ವಾಡಿಕೆಯ ವಾಸಸ್ಥಳವೂ ಆದ ಆಗ್ರಾಪಟ್ಟಣಕ್ಕೆ ಬಂದು ಮುಟ್ಟಿದೆನು. ಬಳಿಕ ಆ ದೇಶದ ಭಾಷೆಯನ್ನು ಮನವುಟ್ಟಿ ಅಭ್ಯಾಸಮಾಡಿ, ತುಸು ದಿವಸಗಳಲ್ಲಿಯೇ, ಅಲ್ಲಿಯ ಪಂಡಿತರಕೂಡ ಸಂಭಾಷಣ ಮಾಡಹತ್ತಿದೆನು. ಆ ಪಂಡಿತರಲ್ಲಿ ಕೆಲವರು ಉದಾಸೀನರೂ, ಹಲವರು ಮಿತಭಾಷಿಗಳೂ, ಮತ್ತೆ ಕೆಲವರು ಆನಂದವೃತ್ತಿಯುಳ್ಳವರೂ, ಕೆಲವರು ಪರರ ಕೂಡ ಔತ್ಸುಕ್ಯದಿಂದ ಮಾತಾಡುವ ಸ್ವಭಾವದವರೂ ಇದ್ದರು, ಮತ್ತೆ ಕೆಲವರು ತಾವು ಅವಿಶ್ರಾಂತ ಶ್ರಮಮಾಡಿ ಕಲಿತ ವಿದ್ಯವನ್ನು ಪರರಿಗೆ ಕಲಿಸಬಾರದೆಂಬ ಅಭಿಪ್ರಾಯುವುಳ್ಳವರಿದ್ದರು, ಇನ್ನು ಕೆಲವರು ತಾವು ಪರಿಶ್ರಮಪಟ್ಟು ಕಲಿತಂಥ ವಿದ್ಯವನ್ನು ಪರರಿಗೆ ಕಲಿಸಿ ಪ್ರಸಿದ್ಧಿಯನ್ನು ಹೊಂದಬೇಕೆಂಬದೇ ವಿದ್ಯಾಭ್ಯಾಸ ಮಾಡುವದರ ನಿಜವಾದ ಉದ್ದೇಶವೆಂದು ತಮ್ಮ ಕೃತ್ಯದಿಂದ ತೋರಿಸುತ್ತಿದ್ದರು. ”

“ ಚಿಕ್ಕ ರಾಜಕುಮಾರರಿಗೆ ಕಲಿಸುವ ಗುರುವಿನ ಗುರುತು ಮಾಡಿಕೊಂಡು ಆತನ ಪ್ರೀತಿ ಸಂಪಾದನ ಮಾಡಿಕೊಂಡೆನು. ಆತನು ನನ್ನಮೇಲೆ ವಿ ತಿಮೀರಿ ಪ್ರೀತಿಮಾಡಹತ್ತಿದನು. ಆತನು ನನ್ನನ್ನು ಒಂದು ದಿನ ಬಾದಶಹನ ಬಳಿಗೆ ಕರೆದುಕೊಂಡು ಹೋಗಿ, ನಾನು ಒಳ್ಳೇ ಜಾಣನಿದ್ದೇನೆಂದು ನನ್ನ ಪ್ರಶಂಸೆಯನ್ನು ಮಾಡಿದನು. ಬಾದಶಹನು ಆ ಮೇಲೆ ಹಬಸೀ ದೇಶದ ವಿಷಯುವಾಗಿ ನನ್ನನ್ನು ಕುರಿತು ಹಲವು ಪ್ರಶ್ನೆಗಳನ್ನು ಕೇಳಿದನು; ಮತ್ತು ನಾನು ಯಾವ ಮಾರ್ಗದಾರಿಯಿಂದ ತನ್ನದೇಶಕ್ಕೆ ಹ್ಯಾಗೆ ಬಂದು ಮುಟ್ಟಿದನೆಂದೂ ವಿಚಾರಿಸಿದನು ಬಾದಶಹನ ಮಾತಿನಲ್ಲಿ ಸಾಧಾರಣ ಜನರಗಿಂತಲೂ ಹೆಚ್ಚಿನ ಚಾತುರ್ಯವೇನೂ ಇದ್ದಿಲ್ಲವೆಂದು ನನಗೆ ಈಗ ನೆನಪಿದ್ದರೂ, ಆಗ ಆತನ ಜಾಣತನವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಮತ್ತು ಆತನ ಸೌಜನ್ಯವನ್ನು ನೋಡಿ ನಾನು ಮೋಹಿತನಾದೆನು”

ಮುಂದೆ ಬಾದಶಹನ ದರ್ಬಾರಿನಲ್ಲಿ ನನ್ನ ಪ್ರತಿಷ್ಠೆಯೂ, ವಿಶ್ವಾಸವೂ ಬಹಳ ಹೆಚ್ಚಾದದ್ದು ನೋಡಿ, ನನ್ನ ಕೂಡ ಬಂದ ವರ್ತಕರು ನನ್ನ ಬಳಿಗೆ ಬಂದು, ಅಂತಃಪುರದ ಸ್ತ್ರೀಜನರ ಗುರುತು ಮಾಡಿಕೊಡಬೇಕೆಂತಲೂ, ತಮ್ಮ ಸರಕುಗಳನ್ನು ವಿಕ್ರಯ ಮಾಡಿಸಬೇಕೆಂತಲೂ, ನನಗೆ ಆಗ್ರಹಪೂರ್ವಕವಾಗಿ ಹೇಳಹತ್ತಿದರು. ಇಷ್ಟು ಸಲಿಗೆಯಿಂದಲೂ, ನಂಬಿಗೆಯಿಂದಲೂ ಆಗ್ರಹ ಮಾಡಿದ್ದನ್ನು ನೋಡಿ, ನನಗೆ ಬಹಳ ಸೋಜಿಗವಾಯಿತು. ಆಗ ನಾನು, ಅವರು ನನಗೆ ದಾರಿಯಲ್ಲಿ ಮಾಡಿದ ಮೋಸವನ್ನು ಅವರ ನೆನಪಿಗೆ ತಂದುಕೊಟ್ಟು, ನನ್ನನ್ನು ವಂಚಿಸಿದ ಬಗ್ಗೆ ಅವರನ್ನು ಚನ್ನಾಗಿ ಹಳಿದೆನು. ಆದರೆ ನಾನು ಆಡಿದ ನಿಂದಾಸ್ಪದವಾದ ನುಡಿಗಳನ್ನು ಕೇಳಿ, ಅವರು ಸುಮ್ಮನಿದ್ದರು; ಇಷ್ಟೇ ಅಲ್ಲ ಆ ಬಗ್ಗೆ ಅವರಿಗೆ ನಾಚಿಕೆ ಇಲ್ಲವೆ ದುಃಖವಾದಂತೆ ಅವರ ಮುಖಮುದ್ರೆಯ ಮೇಲಿಂದ ಏನೂ ಕಂಡು ಬರಲಿಲ್ಲ.

ತರುವಾಯ ಅವರು ಪುನಃ ಪುನಃ ಅದೇ ಮಾತು ನನ್ನ ಮುಂದೆ ತೆಗೆದು, ನಾನು ತಮ್ಮ ಕೆಲಸವನ್ನು ಮಾಡಿದ್ದುಂಟಾದರೆ ನನಗೆ ಹಣ ಕೊಡುತ್ತೇನೆಂದು ಹೇಳಿ ನನಗೆ ಲಂಚ ಕೊಡಬಂದರು. ಪರೋಪಕಾರದ ಸಲುವಾಗಿ ಯಾವ ಕೆಲಸವನ್ನು ಮಾಡಲಿಕ್ಕೆ ನಾನು ಒಪ್ಪಿಕೊಳ್ಳಲಿಲ್ಲವೊ, ಆ ಕೆಲಸವನ್ನು ದುಡ್ಡಿನ ಆಶೆಗಾಗಿ ಮಾಡುವೆನೆ? ನನ್ನಿಂದ ಈ ಕೆಲಸವು ಆಗದೆಂದು ನಾನು ಅವರಿಗೆ ನಿಷ್ಕರ್ಷವಾಗಿ ಹೇಳಿಬಿಟ್ಟೆನು. ದಾರಿಯಲ್ಲಿ ಅವರು ನನ್ನನ್ನು ಮೋಸಗೊಳಿಸಿದರೆಂಬ ಸಿಟ್ಟಿನಿಂದ ನಾನು ಅವರಿಗೆ ಈ ಮೇರೆಗೆ ಹೇಳಲಿಲ್ಲ. ಆದರೆ ಅವರು ನನ್ನನ್ನು ಮೋಸಗೊಳಿಸಿದಂತೆ ಎರಡನೆಯ ಜನರನ್ನೂ ಮೋಸಗೊಳಿಸಬಾರದೆಂಬ ಸದುದ್ದೇಶದಿಂದಲೆ, ಅವರ ಕೆಲಸವನ್ನು ಮಾಡಲಿಕ್ಕೆ ನಾನು ಒಪ್ಪಿಕೊಳ್ಳಲಿಲ್ಲ. ನಾನು ಅವರ ವಿಷಯಕ್ಕೆ ಯಾವ ಮನುಷ್ಯನ ಮುಂದಾದರೂ ತುಸು ಶಿಫಾರಸ ಮಾಡಿದ್ದರೆ, ಅಷ್ಟರಿಂದಲೇ ಅವರು ಆತನನ್ನು ಮೋಸಗೊಳಿಸುತ್ತಿದ್ದರೆಂಬುವದು ನನಗೆ ಚನ್ನಾಗಿ ಗೊತ್ತಿತ್ತು."

"ಆಗ್ರಾ ಪಟ್ಟಣದಲ್ಲಿ ಕಲಿಯತಕ್ಕಂಥಾದ್ದು ಇಲ್ಲವೆ ನೋಡತಕ್ಕಂಥಾದ್ದು ಏನೂ ಉಳಿಯಲಿಲ್ಲೆಂದು ನನಗೆ ಕಂಡು ಬಂದಬಳಿಕ, ನಾನು ಆ ಪಟ್ಟಣವನ್ನು ಬಿಟ್ಟು ಇರಾಣಕ್ಕೆ ಹೋದೆನು. ಅಲ್ಲಿ ಆ ದೇಶದ ಪ್ರಾಚೀನ ಕಾಲದ ವೈಭವದ ಅನೇಕ ಕುರುಹುಗಳನ್ನೂ, ಸಂಸಾರಸುಖಕ್ಕೆ ಸಾಧನೀಭೂತವಾದ ಎಷ್ಟೋ ಒಡವೆಗಳನ್ನೂ ನೋಡಿದೆನು. ಇರಾಣೀ ಜನರ ನಡೆನುಡಿಗಳು ಒಳ್ಳೆಯವಿದ್ದು, ಪರರ ಕೂಡ ಸಂಭಾಷಣ ಮಾಡುವ ಗುಣವು ಅವರಲ್ಲಿ ಚನ್ನಾಗಿ ವಾಸಿಸುತ್ತದೆ.

ನಾನು ಆ ಜನರ ಸಮಾಜದಲ್ಲಿ ಯಾವಾಗಲೂ ಇರುತ್ತಿದ್ದೆನಾದ್ದರಿಂದ, ಅವರ ನಡೆ ನುಡಿಗಳನ್ನೂ, ಸಂಸಾರದ ಬಗೆಬಗೆಯ ಸ್ಥಿತಿಯೊಳಗಿರುವ ಜನರ ಬೇರೆ ಬೇರೆ ಸ್ವಭಾವಗಳನ್ನೂ ಪರೀಕ್ಷಿಸಿ ನೋಡುವ ಸಂಧಿಯು ದಿನಾಗಲೂ ಸಿಕ್ಕುತ್ತಿತು."

"ನಾನು ಇರಾಣದಿಂದ ಅರಬಸ್ತಾನಕ್ಕೆ ಹೋದೆನು. ಅಲ್ಲಿಯ ಜನರು ಅಡವಿಗಳಲ್ಲಿ ವಾಸಮಾಡುವಂಥವರೂ, ಒಳ್ಳೇ ಶೂರರೂ ಇರುತ್ತಾರೆ. ಅವರು ದನಗಳ ಹಿಂಡುಗಳನ್ನು ಸಾಕಿ, ತಮ್ಮ ಜೀವನವನ್ನು ಸಾಗಿಸುತ್ತಾರೆ. ಅವರು ಒಂದೇ ಸ್ಥಳದಲ್ಲಿ ಬಹಳ ದಿವಸ ವಾಸಮಾಡಿಕೊಂಡಿರುವದಿಲ್ಲ. ಆಡು ಕುರಿಗಳ ಹಿಂಡುಗಳೂ, ದನಗಳ ಗುಂಪುಗಳೂ ಇವೇ ಅವರ ಸಂಪತ್ತು. ಎರಡನೆಯ ದೇಶದ ಜನರ ಸಂಪತ್ತಿಯನ್ನು ನೋಡಿ ಅವರು ಅಸೂಯೆಪಡುವದಿಲ್ಲ, ಇಲ್ಲವೆ ಅದರ ಲೋಭವೂ ಅವರಿಗೆ ಇರುವದಿಲ್ಲ. ಹೀಗಿದ್ದಾಗ್ಯೂ ಅವರು ಯಾವಾಗಲೂ (ಸಾವಿರಾರು ವರ್ಷಗಳಿಂದ) ಪರದೇಶದ ಜನರ ಕೂಡ ಜಗಳಾಡುತ್ತಿರುತ್ತಾರೆ."

## ಹತ್ತನೆಯ ಭಾಗವು.

ಇಮ್ಲಾಕನ ಚರಿತ್ರವು ( ಮುಂದೆ ಸಾಗಿದ್ದು)

ಕವಿತ್ವದ ಬಗ್ಗೆ ಸಾಮಾನ್ಯ ವಿಚಾರವು.

ಇಮ್ಲಾಕನುಃ—"ನಾನು ನೋಡಿದ ಯಾವತ್ತು ದೇಶಗಳೊಳಗಿನ ಜನರು ಕಾವ್ಯವೇ ಎಲ್ಲಕ್ಕು ಹೆಚ್ಚಿನದೆಂದು ತಿಳಿಯುತ್ತಾರೆ; ಮತ್ತು ಅದಕ್ಕೆ ದೇವಕೃತಿಗೆ ಎಷ್ಟು ಮಾನಕೊಡುತ್ತಾರೋ ಅದಕ್ಕಿಂತಲೂ ಹೆಚ್ಚು ಆದರವನ್ನು ತೋರಿಸುತ್ತಾರೆ, ಆದರೆ ಯಾವತ್ತು ದೇಶಗಳೊಳಗಿನ ಜನರು ಆಯಾ ದೇಶಗಳಲ್ಲಿ ಆಗಿಹೋದ ಬಹಳ ಪುರಾತನ ಕವಿಗಳ ಕಾವ್ಯಗಳೇ ಉತ್ಕೃಷ್ಟವಾದವುಗಳೆಂದು ಎಣಿಸುತ್ತಾರೆಂಬುವದನ್ನು ನೋಡಿ, ನನಗೆ ಬಹಳ ಸೋಜಿಗವಾಯಿತು. ಉಳಿದ ಯಾವತ್ತೂ ವಿದ್ಯೆಗಳು ಮನುಷ್ಯನಿಗೆ ಮನಮುಟ್ಟಿ ಯತ್ನ ಮಾಡಿದರೆ ಕ್ರಮೇಣ ಸಾಧ್ಯವಾಗುತ್ತವೆ, ಆದರೆ ಕವಿತ್ವವು ಒಮ್ಮೇಲೆ ಬರುತ್ತದೆ, ಅಂದರೆ ಈಶ್ವರ ಪ್ರಸಾದವಾಗಿರುತ್ತ (Gift) ದೆ. ಈ ಕಾರಣದಿಂದ ಪ್ರಾಚೀನ ಕವಿಗಳಿಗೆ ಮಾನಕೊಡುತ್ತಾರೊ, ಇಲ್ಲವೆ ಬೇರೆ ಬೇರೆ ದೇಶಗಳಲ್ಲಿ ಆಗಿ ಹೋದ ಕವಿಗಳ ಕವಿತೆಗಳೇ ಮೊದಲಿನ ಕಾವ್ಯಗಳಾದದ್ದರಿಂದ, ಅವು ಜನರಿಗೆ ಹೊಸವೂ, ಅದ್ಭುತಗಳೂ ಆಗಿ ತೋರಿ ಆ ಕವಿಗಳ ಬಗ್ಗೆ ಜನರೊಳಗೆ ಭಕ್ತಿ ಹುಟ್ಟಿ ಅವರ ಪ್ರಸಿದ್ಧಿಯು ಒಮ್ಮೆ ಆಯಿತು; ಅದೇ ಅಂಧಪರಂಪರೆಯಿಂದ ನಡೆಯುತ್ತ ಬಂದಿರುತ್ತದೆಂಬ ಕಾರಣದಿಂದ ಪ್ರಾಚೀನ

ಕವಿಗಳಿಗೆ ಮಾನಕೊಡುತ್ತಾರೋ, ಅಥವಾ ಮನುಷ್ಯನ ಮನೋವೃತ್ತಿಗಳೂ (ಈ ವೃತ್ತಿಗಳಿಗೆ ಅಲಂಕಾರ ಶಾಸ್ತ್ರದಲ್ಲಿ ರಸಪರಿಪಾಕವೆಂಬ ಹೆಸರುಂಟು) ಮತ್ತು ಸೃಷ್ಟಿಸೌಂದರ್ಯವೂ ಇವೇ ಕಾವ್ಯಗಳ ಮುಖ್ಯ ವಿಷಯಗಳಾಗಿರುವದರಿಂದ, ಮೊದಲಿನ ಕವಿಗಳು ಅತ್ಯಂತ ವರ್ಣನೀಯಗಳಾದ ಆ ವಿಷಯಗಳ ವರ್ಣನೆವನ್ನು ಮಾಡಿಬಿಟ್ಟಿರುವದರಿಂದಲೂ, ಸಂಭವಿಸಬಹುದಾದಂಥ ಯಾವತ್ತು ಸಂವಿಧಾನಕಗಳನ್ನು ರಚಿಸಿಬಿಟ್ಟಿರುವದರಿಂದಲೂ, ಅವರ ತರುವಾಯ ಹುಟ್ಟಿದ ಕವಿಗಳಿಗೆ ಹಿಂದಿನವರು ವರ್ಣಿಸಿದ ವಿಷಯಗಳನ್ನೇ ವರ್ಣಿಸುವ, ಮತ್ತೂ ಅವರ ಗ್ರಂಥದೊಳಗಿನ ವಿಷಯವನ್ನೇ ತೆಗೆದುಕೊಂಡು ಅವುಗಳನ್ನು ಬೇರೆ ರೀತಿಯಿಂದ ರಚಿಸುವ ಪ್ರಸಂಗ ಬಂದದರಿಂದ, ಹೊಸ ಕವಿಗಳು ಹಳೇ ಕವಿಗಳು ಹೇಳಿದ ವಿಷಯಗಳನ್ನೇ ಬಣ್ಣಿಸುತ್ತಾರಲ್ಲದೆ, ಅದರಲ್ಲಿ ಹೊಸ ಕಲ್ಪನೆ ಇಲ್ಲ' ಎಂಬ ಭಾವದಿಂದ ಪ್ರಾಚೀನ ಕವಿಗಳಿಗೆ ಮಾನಕೊಡುತ್ತಾರೋ ಏನೋ ತಿಳಿಯದು. ಅದು ಹ್ಯಾಗೇ ಇರಲಿ, ಮೊದಲು ಆಗಿ ಹೋದ ಕವಿಗಳ ಕಾವ್ಯದಲ್ಲಿ ಸ್ವಭಾವಸಿದ್ಧವಾದ ಸೌಂದರ್ಯವೂ, ಚಾತುರ್ಯವೂ, ಆವೇಶವೂ, ಕಲ್ಪನೆಯೂ, ಶಬ್ದಲಾಲಿತ್ಯವೂ, ಅರ್ಥಲಾಲಿತ್ಯವೂ ಹೆಚ್ಚು ಇರುತ್ತವೆಂದು ಕವಿಯ ಮರ್ಮವನ್ನು ಚನ್ನಾಗಿ ಅರಿತ ವಿದ್ವಾಂಸರ ಅಭಿಪ್ರಾಯವುಂಟು."

"ಪ್ರಸಿದ್ಧಿಯನ್ನು ಹೊಂದಿದ ಕವಿಮಾಲಿಕೆಯಲ್ಲಿ ನನ್ನ ಹೆಸರೂ ಇರಬೇಕೆಂಬ ಉತ್ಕಟೇಚ್ಛೆಯು ನನ್ನಲ್ಲಿ ಹುಟ್ಟಿತು. ಈ ನನ್ನ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುವದಕ್ಕೋಸ್ಕರ ನಾನು ಇರಾಣಿ ಮತ್ತು ಅರಬೀಭಾಷೆಗಳೊಳಗಿನ ಯಾವತ್ತು ಕವಿಗಳ ಕಾವ್ಯಗಳನ್ನು ಓದಿದೆನು. ಮುಸಲ್ಮಾನರ ಪವಿತ್ರ ಸ್ಥಳವಾದ ಮಕ್ಕಾ ಪಟ್ಟಣದ ಮಸೂತಿಯ ಗೋಡೆಗಳ ಮೇಲೆ ಬರೆದಂಥ ಯಾವತ್ತು ಕಾವ್ಯಗಳೂ ನನಗೆ ಮುಖೋದ್ಗತವಾಗಿದ್ದವು. ಆದರೆ ಕೇವಲ ಅನುಕರಣದಿಂದಲೇ ಯಾವನೂ ಎಂದೂ ದೊಡ್ಡ ಕವಿಯಾಗಲಿಕ್ಕಿಲ್ಲೆಂಬ ಮಾತು ನನ್ನ ಲಕ್ಷಕ್ಕೆ ಬಂತು. ಹಿಂದೆ ಆಗಿಹೋದ ಯಾವತ್ತು ಕವಿಗಳ ಕಾವ್ಯಗಳಿಗಿಂತಲೂ ನನ್ನ ಕಾವ್ಯಗಳು ಉತ್ಕೃಷ್ಟವಾಗಬೇಕೆಂಬ ಮಹತ್ವಾಕಾಂಕ್ಷೆಯು ನನ್ನಲ್ಲಿ ಹುಟ್ಟಿದ್ದರಿಂದ, ಸೃಷ್ಟಿಯು ಮತ್ತು ಲೋಕಸ್ಥಿತಿಯ ಮನನ ಮಾಡಿಕೊಳ್ಳಹತ್ತಿದೆನು. ಸೃಷ್ಟಿಯೊಳಗಿನ ಚಮತ್ಕಾರಗಳನ್ನೇ ವಿಷಯವನ್ನಾಗಿಯೂ; ಮನುಷ್ಯರನ್ನೇ ಶ್ರೋತೃಗಳನ್ನಾಗಿಯೂ ಮಾಡಿಕೊಂಡು ಹೊಸಕಾವ್ಯಗಳನ್ನು ರಚಿಸಬೇಕಲ್ಲದೆ, ಮುಂಚಿನ ಕವಿಗಳು ರಚಿಸಿದ ಕಾವ್ಯಗಳ ಅನುಕರಣವನ್ನಾಗಲೀ, ಇಲ್ಲವೆ ನಾನು ನೋಡದೆ ಇದ್ದ ವಿಷಯಗಳ ವರ್ಣನವನ್ನಾಗಲಿ ಮಾಡಲಿಕ್ಕಿಲ್ಲೆಂದು ನಿಶ್ಚಯಿಸಿದೆನು. ಮನುಷ್ಯರ ಹಿತಾಹಿತಗಳನ್ನೂ,

ಅಭಿಪ್ರಾಯಗಳನ್ನೂ, ನಡೆನುಡಿಗಳನ್ನೂ, ಮನೋವಿಕಾರಗಳನ್ನೂ ಚನ್ನಾಗಿ ತಿಳಿದುಕೊಳ್ಳದ ಹೊರತು, ಅವರ ಮನಸ್ಸಿನಲ್ಲಿ ಬೇಕಾದ ರಸವನ್ನು ಬೇಕಾದಾಗ ಬಿಂಬಿಸಿ, ಆನಂದವನ್ನು ಇಲ್ಲವೆ ಭೀತಿಯನ್ನು ಉಂಟುಮಾಡಲಿಕ್ಕೆ ಬರಲಿಕ್ಕಿಲ್ಲೆಂದು ನಾನು ಮನಗಂಡೆನು.''

“ಕವಿಯಾಗಬೇಕೆಂದು ನಿಶ್ಚಯಿಸಿ ಆ ಉದ್ದೇಶದಿಂದ ನಾನು ಸೃಷ್ಟಿಯ ಅವಲೋಕನ ಮಾಡಹತ್ತಿದಾಗ, ಮುಂಚೆ ಒಂದಾವರ್ತಿ ನೋಡಿದ ಸೃಷ್ಟಿಯೇ ಈಗ ತೀರ ಹೊಸದಾಗಿ ಕಾಣಹತ್ತಿತ್ತು. ಮೊದಲು ಕೇವಲ ಅಲಕ್ಷ್ಯಮಾಡಿ ಬಿಟ್ಟಂಥ ಒಡವೆಗಳನ್ನೇ ನಾನು ಈಗ ಲಕ್ಷ್ಯಪೂರ್ವಕವಾಗಿ ನೋಡಹತ್ತಿದೆನು. ಯಾವತ್ತೂ ಸಂಗತಿಗಳ ಜ್ಞಾನವು ಈಗ ಅವಶ್ಯವಾಗಿ ತೋರಹತ್ತಿತು. ದುರ್ಲಕ್ಷ್ಯಮಾಡುವ ವಿಷಯಗಳೇ ತೋರಿಬರಲಿಲ್ಲ. ನಾನಾಪ್ರಕಾರದ ಉಪಮಾದ್ಯಲಂಕಾರಗಳು ಒಮ್ಮೆಲೆ ನನಗೆ ನೆನಪಾಗಬೇಕೆಂತಲೂ, ಮನೋರಂಜಕವಾದ ವರ್ಣನೆಗಳನ್ನು ಮಾಡಲಿಕ್ಕೆ ಬರಬೇಕೆಂತಲೂ, ನಾನು ಪರ್ವತಗಳ ಮೇಲೆಯೂ, ಅರಣ್ಯಗಳಲ್ಲಿಯೂ ತಿರುಗಾಡಿ ವಿಧವಿಧದ ವೃಕ್ಷಗಳ ಮತ್ತು ಪುಷ್ಪಗಳ ಚಿತ್ರಗಳನ್ನು ಸ್ಮೃತಿರೂಪ ಪಟದ ಮೇಲೆ ಬರೆದು ಇಟ್ಟೆನು. ಪರ್ವತಗಳ ಉನ್ನತವಾದ ಬಂಡೆಗಳನ್ನೂ ಬಂಡೆಗಲ್ಲುಗಳ ಬಿರುಕುಗಳನ್ನೂ, ರಾಜಮಂದಿರಗಳ ಎತ್ತರವಾದ ಶಿಖರಗಳನ್ನೂ ಅಚಲದೃಷ್ಟಿಯಿಂದ ಸರಿಯಾಗಿ ನೋಡಹತ್ತಿದೆನು. ಒಮ್ಮೊಮ್ಮೆ ಅಡವಿಯೊಳಗೆ ಅಡ್ಡಾಡುವಾಗ ಸ್ವಚ್ಛವಾಗಿ ಹರಿಯುವ ಹಳ್ಳವು ನನ್ನ ದೃಷ್ಟಿಗೆ ಬಿದ್ದರೆ ಅದರ ಪ್ರವಾಹದಗುಂಟ ಎರಡೂ ದಂಡೆಗಳ ಮೇಲಿನ ವನಶ್ರೀಯನ್ನು ನೋಡುತ್ತ, ಹರಹರದಾರಿ ದೂರ ಹೋಗುವೆನು; ಒಮ್ಮೊಮ್ಮೆ ಸಂಜೆಯ ಕಡೆಗೆ ಪಶ್ಚಿಮ ದಿಕ್ಕಿನಲ್ಲಿ ಚಿತ್ರವಿಚಿತ್ರವಾದ ಬಣ್ಣದ ಮೋಡಗಳನ್ನೂ ಕ್ಷಣಕ್ಷಣಕ್ಕೆ ಬದಲಾಗುವ ಆ ಮೋಡಗಳ ಆಕೃತಿಗಳನ್ನೂ ನೋಡುತ್ತ ನಿಂತುಕೊಳ್ಳುವೆನು. ಕವಿಗೆ ಉಪಯೋಗ ಬೀಳದೆ ಇದ್ದ ಒಡವೆಯೇ ಜಗತ್ತಿನಲ್ಲಿಲ್ಲ. ಸೃಷ್ಟಿಯೊಳಗಿನ ಅತ್ಯಂತ ರಮಣೀಯವಾದಂಥ ಮತ್ತು ಅತಿಶಯ ಭೀಕರವಾದಂಥ ಪ್ರತಿಯೊಂದು ಒಡವೆಯು ಕಲ್ಪನೆಯು ಕವಿಗೆ ಚನ್ನಾಗಿ ಗೊತ್ತಿರಲಿಕ್ಕೆ ಬೇಕು. ಅತಿಶಯ ಪ್ರಚಂಡವಾದ ವಸ್ತು, ಅದೇ ಮೇರೆಗೆ ತೀರ ಸೂಕ್ಷ್ಮವಾದ ಪದಾರ್ಥ, ಇವೆರಡೂ ಅವನಿಗೆ ಪೂರ್ಣಜ್ಞಾತವಾಗಿರಬೇಕು. ತೋಟದೊಳಗಿನ ಗಿಡಗಳು, ಅರಣ್ಯದೊಳಗಿನ ಪಶುಗಳು, ಪೃಥ್ವಿಯು ಹೊಟ್ಟೆಯಲ್ಲಿರುವ ಖನಿಜ ಪದಾರ್ಥಗಳು, ಆಕಾಶದೊಳಗಿನ ಗೃಹಗಳು ನಕ್ಷತ್ರಗಳು ಇವೆಲ್ಲ ಅವನ ಜ್ಞಾನಸಂಗ್ರಹಕ್ಕೂ ಕಲ್ಪನೆಗೂ ಅವಶ್ಯವಾಗಿಬೇಕು. ಇವುಗಳ ವಿಷಯದ ಎಲ್ಲ ಜ್ಞಾನವನ್ನು ಅವನು ಅರಿತವನಾಗಿರಬೇಕು. ಓದುವವರ ಮನಸ್ಸನ್ನು ದುರಾಚರಣದಿಂದ ದೂರ

ಮಾಡಿ, ಸದಾಚರಣಕ್ಕೆ ಪ್ರವರ್ತಿಸುವಂತೆ ಮಾಡುವದು, ನೈತಿಕ ಧಾರ್ಮಿಕ ತತ್ವ ಗಳನ್ನು ಅವರ ಮನಸ್ಸಿನ ಮೇಲೆ ಬಿಂಬಿಸುವದು, ಇವೇ ಕವಿಯ ಮುಖ್ಯ ಉದ್ದೇಶಗಳು. ಈ ಉದ್ದೇಶಗಳು ಕೊನೆಗಾಣಬೇಕಾದರೆ ಅವನ ಉಪದೇಶವು ಮನಸ್ಸಿನಲ್ಲಿ ಒಳಿತಾಗಿ ನಟುವಂಥಾದ್ದಿರಬೇಕು. ಆ ತರದ ಉಪದೇಶವನ್ನು ಮಾಡಲಿಕ್ಕೆ ಬರಬೇಕಾದರೆ ಅವನು ಸೃಷ್ಟಿಯೊಳಗಿನ ಯಾವತ್ತೂ ಒಡವೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಬೇಕು. ಹೆಚ್ಚು ಸಂಗತಿಗಳನ್ನು ಒಲ್ಲಂಥವನು ತನ್ನ ವರ್ಣನದಲ್ಲಿ ವೈಚಿತ್ರ್ಯವನ್ನೂ ಸವಿಕಟ್ಟನ್ನೂ ಹುಟ್ಟಿಸಿ ಅಸಂಬದ್ಧವಾಗಿ ತೋರುವಂಥ ಸಂಗತಿಗಳನ್ನೂ ಸಹ ಸಾದೃಶ್ಯಗಳ ಸಹಾಯದಿಂದ ಸರಿದೋರುವಂತೆ ಮಾಡಿ, ಅಸಾಮಾನ್ಯವಾದ ಸದುಪದೇಶದಿಂದ ವಾಚಕರಿಗೆ ಮನೋರಂಜನವನ್ನುಂಟುಮಾಡುವನೆಂಬ ಮಾತ್ರ ಸ್ಪಷ್ಟವೇ ಸರಿ. ”

“ ಇದನ್ನೆಲ್ಲ ಮನಸ್ಸಿನಲ್ಲಿ ವಿಚಾರಿಸಿ ಸೃಷ್ಟಿಯೊಳಗಿನ ಯಾವತ್ತು ಚಮತ್ಕಾರದ ಒಡವೆಗಳನ್ನು ನಾನು ನೋಡಹತ್ತಿದೆನು. ಮತ್ತು ನಾನು ನೋಡಿದ ಪ್ರತಿಯೊಂದು ದೇಶದಲ್ಲಿ ನನ್ನ ಕವಿತ್ವ ಶಕ್ತಿಯನ್ನು ಹೆಚ್ಚಿಸುವಂಥ ಒಂದಿಲ್ಲೊಂದು ತರದ ಜ್ಞಾನವು ನನಗೆ ಪ್ರಾಪ್ತವಾಯಿತು. ”

ರಾಜಪುತ್ರನುः— “ ನೀವು ಪ್ರವಾಸಮಾಡಿದ ದೇಶಗಳೊಳಗಿನ ಎಷ್ಟೋ ಸಂಗತಿಗಳನ್ನು ನೀವು ನೋಡದೇ ಬಿಟ್ಟಿರಬಹುದು. ನೋಡಿರಿ, ನಾನು ಈ ಗವಿಯೊಳಗೇ ಎಷ್ಟೋ ದಿವಸದಿಂದ ಇದ್ದೇನೆ; ಮತ್ತು ಗವಿಯಾದರೂ ಬಹಳ ದೊಡ್ಡದಲ್ಲ; ಹೀಗಿದ್ದು ನಾನು ಗವಿಯಬಿಟ್ಟು ಹೊರಬಿದ್ದೆನಂದರೆ, ಮೊದಲು ಎಂದೂ ನೋಡದೆ ಇದ್ದಂಥ ಇಲ್ಲವೆ ವಿಶೇಷ ಲಕ್ಷಕೊಡದಂಥ ಒಂದು ಒಡವೆಯಾದರೂ ದಿನಾಲು ನನ್ನ ದೃಷ್ಟಿಗೆ ಬಿದ್ದೇ ಬೀಳುತ್ತದೆ. ಈ ಹೊತ್ತು ಹೊಸ ಒಡವೆಗಳನ್ನು ನೋಡಲಿಲ್ಲ ಹೀಗೆ ಎಂದೂ ಆಗುವದಿಲ್ಲ. ನೀವಂತೂ ಅನೇಕ ವಿಸ್ತಾರವಾದ ದೇಶಗಳಲ್ಲಿ ಸಂಚಾರ ಮಾಡಿರುತ್ತೀರಿ; ಅಂದ ಮೇಲೆ ಅನೇಕ ವಸ್ತುಗಳನ್ನು ನೀವು ನೋಡದೇ ಬಿಟ್ಟಿರಬಹುದೆಂದು ಸ್ಪಷ್ಟವಾಗುತ್ತದೆ. ”

ಇಮ್ಲಾಕः— “ ಕವಿಗೆ ಪ್ರತಿಯೊಂದು ವ್ಯಕ್ತಿಯನ್ನು ನೋಡುವ ಅವಶ್ಯವಿಲ್ಲ; ಅವನಿಗೆ ಜಾತಿಯ ಜ್ಞಾನವಿದ್ದರೆ ಸಾಕು. ವನಸ್ಪತಿ, ಹಾಗು ಪ್ರಾಣಿ ಇವುಗಳ ಬೇರೆ ಬೇರೆ ಜಾತಿಗಳ (ವರ್ಗಗಳ) ಲ್ಲಿರುವ ಸಾಧಾರಣವಾದ ಮತ್ತು ಸಹಜವಾಗಿ ಲಕ್ಷದಲ್ಲಿ ಬರುವಂಥ ಗುಣಧರ್ಮಗಳು ಆತನಿಗೆ ಗೊತ್ತಿದ್ದರೆ ತೀರಿತು. ಗುಲಾಬಿ ಹೂವುಗಳಿಗೆ ಎಷ್ಟು ದಳಗಳಿರುತ್ತವೆ, ಇಲ್ಲವೆ ವನದೊಳಗಿನ ಗಿಡಗಳ ಹಸರು ಬಣ್ಣಗಳಲ್ಲಿ ಯಾವತ್ತ್ಯಾವ ವರ್ಣಗಳ ಛಾಯವಿರುತ್ತದೆಂಬದನ್ನು ಬಣ್ಣಿಸುವ ಅವ

ಶ್ಯವಿರುವದಿಲ್ಲ. ಪರ್ವತ, ಹೊಳೆ, ವೃಕ್ಷ, ವನಸ್ಪತಿ ಮುಂತಾದ ಸೃಷ್ಟಿಯೊಳಗಿನ ವಿಷಯಗಳನ್ನು ವರ್ಣಿಸುವಾಗ, ಕವಿಯು ಆ ವಿಷಯಗಳ ಮುಖ್ಯ ಮುಖ್ಯ ಗುಣಧರ್ಮಗಳನ್ನು ಮಾತ್ರ ಹೇಳುತ್ತಾನೆ; ಅಂದರೆ ಆ ವರ್ಣನವನ್ನು ಓದಿದ ಕೂಡಲೆ ಓದುವವನ ಕಣ್ಣೆದುರಿಗೆ ಆ ಒಡವೆಗಳು ಬಂದು ನಿಂತಂತೆ ಭಾಸವಾದರೆ ತೀರಿತು. ಇನ್ನು ಆ ವಿಷಯಗಳಲ್ಲಿ ಕೆಲವು ಸೂಕ್ಷ್ಮಭೇದಗಳಿರುತ್ತವೆ; ಜಾಗರೂಕರಾಗಿ ನೋಡುವವರಿಗೆ ಆ ಭೇದಗಳು ಗೋಚರವಾಗುತ್ತವೆ. ಎಚ್ಚರದಪ್ಪಿ ನೋಡುವವರಿಗೆ ಅವು ಕಾಣಿಸುವದಿಲ್ಲ; ಅಂಥ ಭೇದಗಳನ್ನು ಕವಿಗಳು ವರ್ಣಿಸುವದಿಲ್ಲ. ”

“ ಆದರೆ ಕವಿಗೆ ಸೃಷ್ಟಿಯೊಳಗಿನ ವಿಷಯಗಳ ಜ್ಞಾನವಾಯಿತೆಂದರೆ ಕವಿತ್ವ ಮಾಡಲಿಕ್ಕೆ ಬೇಕಾದ ಸಾಧನಗಳಲ್ಲಿ ಅರ್ಧ ಸಾಧನವು ಮಾತ್ರ ಸಿಕ್ಕಿದಂತಾಯಿತು; ಇದಲ್ಲದೆ ಲೋಕಸ್ಥಿತಿ ಅಂದರೆ ಜನರು ನಡಕೊಳ್ಳುವ ಬೇರೆ ಬೇರೆ ನಡಾವಳಿಗಳ ಜ್ಞಾನವೂ ಆತನಿಗೆ ಇರಲಿಕ್ಕೆ ಬೇಕು. ಈ ಸಂಸಾರದಲ್ಲಿ ಯಜಮಾನ, ಸೇವಕ, ರಾಜ, ಪ್ರಜೆ, ಗಂಡ, ಹೆಂಡತಿ ದೈವುಳ್ಳತನ, ಬಡತನ ಮುಂತಾದ ಬೇರೆ ಬೇರೆ ಅವಸ್ಥೆಗಳಿರುತ್ತವಷ್ಟೇ ; ಈ ಪ್ರತಿಯೊಂದು ಅವಸ್ಥೆಯಲ್ಲಿರುವ ಜನರಿಗೆ ಸುಖವೆಷ್ಟು ದುಃಖವೆಷ್ಟು ಎಂಬದರ ಜ್ಞಾನವು ಇರಲಿಕ್ಕೆಬೇಕು. ಯಾವತ್ತು ಮನೋವಿಕಾರಗಳು ಭಿನ್ನಭಿನ್ನವಾಗಿದ್ದರೆ ಏನು ಪರಿಣಾಮವಾಗುತ್ತದೆ? ಕೂಡಿದ್ದರೆ ಏನು ಪರಿಣಾಮವಾಗುತ್ತದೆ ? ( ಕಾಮ, ಕ್ರೋಧ, ಲೋಭ ಮುಂತಾದವು ಒಂದೊಂದೇ ಪ್ರತ್ಯೇಕವಾಗಿದ್ದರೆ ಮನುಷ್ಯನಲ್ಲಿ ಅದರಿಂದೇನು ಪರಿಣಾಮವಾಗುತ್ತದೆ. ಒಂದಕ್ಕಿಂತ ಹೆಚ್ಚು ಮನೋವಿಕಾರಗಳಿದ್ದರೆ ಏನು ಪರಿಣಾಮಗಳಾಗುತ್ತವೆ ? ) ಎಂಬ ವಿಷಯವನ್ನು ಸಹ ಕವಿಯು ಅರಿತವನಾಗಿರಬೇಕು. ಇದೇ ಮೇರೆಗೆ ಬೇರೆ ಬೇರೆ ದೇಶಗಳಲ್ಲಿಯ ಭಿನ್ನಭಿನ್ನವಾದ ರಾಜ್ಯವ್ಯವಸ್ಥೆಯು, ಮತ್ತು ಲೋಕಮರ್ಯಾದೆಯು, ಹಾಗೂ ರೀತಿ, ನಡತೆ, ಹವೆ ಮುಂತಾದವುಗಳ ಯೋಗದಿಂದ ಮನುಷ್ಯನ ವೃತ್ತಿಯಲ್ಲಿ ಬಾಲ್ಯದಿಂದ ಮುಪ್ಪಿನ ವರೆಗೂ ಏನೇನು ಹೆಚ್ಚು ಕಡಿಮೆಗಳಾಗುತ್ತವೆಂಬದರ ಜ್ಞಾನವು ಕವಿಗೆ ಇರಲಿಕ್ಕೆಬೇಕು. ಮನುಷ್ಯನಿಗೆ ತಾನು ಹುಟ್ಟಿ ಬೆಳೆದಂಥ ದೇಶದೊಳಗಿನ ರೀತಿ ನಡತೆಗಳು ಚಿಕ್ಕಂದಿನಿಂದ ಚನ್ನಾಗಿ ಗೊತ್ತಿರುವ ಕಾರಣ ಆ ರೀತಿ ಮುಂತಾದವುಗಳು ಆತನ ಮನಸ್ಸಿನಲ್ಲಿ ಬಿಂಬಿಸಿ ಹೋಗಿರುತ್ತವೆ; ಆದದರಿಂದ ತನ್ನ ದೇಶವನ್ನುಳಿದು ಇತರ ದೇಶದೊಳಗಿನ ರೀತಿ ನಡತೆಗಳಿಗೆ ಏನಾದರೊಂದು ಹೆಸರು ಇಟ್ಟುಬಿಡುತ್ತಾನೆ ; ಆದರೆ ಕವಿಯು ಈ ತೆರದ ತಪ್ಪುಗಳನ್ನು ಮಾಡಬಾರದು. ಈ ತರದ ಪಕ್ಷಪಾತವು ಅವನಲ್ಲಿರಬಾರದು ; ಈ ತೆರದ ಏಕಪಕ್ಷೀಯವಾದ ವಿಚಾರಗಳನ್ನೊತ್ತಟ್ಟಿಗಿಟ್ಟು, ಶಾಶ್ವತವಾದ ನೀತಿಯಾವದು ? ಅನೀ

ತಿಯಾವದು ? ಎಂಬವದನ್ನು ಗೊತ್ತುಮಾಡಲಿಕ್ಕೆ ಆತನಿಗೆ ಬರಲಿಕ್ಕೆಬೇಕು. ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದ ಕಾಯುದೆ ಮತ್ತು ಮತಗಳ ಮೇಲೆಯೇ ಸುಳ್ಳು ನಂಬಿಗೆಯನ್ನಿಡದೆ ನಿಷ್ಪಕ್ಷಪಾತದಿಂದ ಅಭಂಗವಾಗಿರುವ ಸತ್ಯವನ್ನೇ ಯಾವಾಗಲೂ ಅವಲಂಬಿಸಿ ನಡೆಯಲಿಕ್ಕೆ ಅವನು ಯತ್ನೈಸಬೇಕು. ಈ ತರದ ಕಾವ್ಯವನ್ನು ರಚಿಸುವ ಕವಿಯು ಕೀರ್ತಿಯು ಬೇಗ ಹಬ್ಬದಿದ್ದರೆ ಆ ಬಗ್ಗೆ ಮನಸ್ಸಿನಲ್ಲಿ ಖೇದಪಡಬಾರದು; ಜನಸ್ತುತಿಗೆ ಮರುಳಾಗಬಾರದು; ಈಗಿನ ಕಾಲದಲ್ಲಿ ತನ್ನ ಹೆಸರು ಮುಂದೆ ಬೀಳದಿದ್ದರೂ, ಮುಂದೆ ನಿಷ್ಪಕ್ಷಪಾತದಿಂದ ವಿಚಾರಮಾಡುವಂಥ ಜಾಣ ಜನರು ತನ್ನನ್ನೂ ತನ್ನ ಕಾವ್ಯಗಳನ್ನೂ ಬಹು ಪರಿಯಿಂದ ಕೊಂಡಾಡುವರೆಂಬು ತಿಳಿದುಕೊಂಡು ಕವಿಯು ತನ್ನ ಮನಸ್ಸಿನ ಸಮಾಧಾನ ಮಾಡಿಕೊಳ್ಳಲಿಕ್ಕೆಬೇಕು. ಕವಿಯು, ತಾನು ಸೃಷ್ಟಿ ಮತ್ತು ಜನರ ದುಭಾಷಿಯೆಂತಲೂ, ಮನುಷ್ಯಮಾತ್ರರ ಕಾಯದೇಪಂಡಿತನೆಂತಲೂ ತಿಳಿದುಕೊಂಡು ತನ್ನ ಕಾವ್ಯದಲ್ಲಿ ಸೃಷ್ಟ ಪದಾರ್ಥಗಳ ನಿಜಸ್ವರೂಪವನ್ನು ಸ್ಪಷ್ಟಮಾಡಿ ತೋರಿಸಲಿಕ್ಕೆಬೇಕು ; ಮತ್ತು ಮನುಷ್ಯರಿಗೆ ಹಿತಕರವಾದ ವರ್ತನಕ್ರಮವನ್ನೇ ಹೇಳಲಿಕ್ಕೆಬೇಕು. ತಾನು ಇರುವಂಥ ದೇಶ ಹಾಗೂ ಕಾಲದೊಳಗಿರುವ ಅವಿಚಾರಗಳಿಗೊಳಗಾಗದೆ ತನ್ನ ಬರಹದ ಬಲದಿಂದ ಮುಂದಿನ ಜನರ ತಿಳುವಳಿಕೆಯನ್ನೂ, ವರ್ತನಕ್ರಮವನ್ನೂ ಬದಲುಮಾಡಿ ಅವರನ್ನು ಒಳ್ಳೇ ಮಾರ್ಗಕ್ಕೆ ಹಚ್ಚುವ ಸಾಮರ್ಥ್ಯವು ಅವನಲ್ಲಿರಲಿಕ್ಕೆಬೇಕು. ಇಷ್ಟಾದರೆ ಎಲ್ಲ ತೀರಿತೆಂದೆನ್ನುವ ಹಾಗಿಲ್ಲ. ಆತನಿಗೆ (ಕವಿಗೆ) ಅನೇಕ ಭಾಷೆಗಳೂ, ಶಾಸ್ತ್ರಗಳೂ ಅವಗತವಾಗಿರಲಿಕ್ಕೆಬೇಕು. ಅದೇ ಮೇರೆಗೆ ತನ್ನ ವಿಚಾರಗಳಿಗೆ ಅನುರೂಪವಾದ ಭಾಷಾಶೈಲಿಯನ್ನು ಸಾಧಿಸಬೇಕಾದರೆ, ಸಂತತವಾದ ರೂಢಿಯ ಬಲದಿಂದ, ಭಾಷೆಯ ಮಾಧುರ್ಯವನ್ನೂ, ಶಬ್ದಾಲಾಲಿತ್ಯದ ಸೌಂದರ್ಯವನ್ನೂ ಅರಿತುಕೊಳ್ಳಲಿಕ್ಕೆಬೇಕು.”

## ಹನ್ನೊಂದನೆಯ ಭಾಗ.

( ಇಮ್ಲಾಕನ ಚರಿತ್ರವು ಮುಂದೆಸಾಗಿದ್ದು. )

### ಯಾತ್ರೆಯ ಬಗ್ಗೆ ವಿಚಾರವು.

ಹಿಂದಿನ ಭಾಗದಲ್ಲಿ ಹೇಳಿದಂತೆ ಇಮ್ಲಾಕನು ಒಳ್ಳೇ ಹುರುಪಿನಿಂದ ತನ್ನ ಕಸಬನ್ನು ( ಕವಿತ್ವ ರಚಿಸುವದನ್ನು ) ಅತಿಶಯೋಕ್ತಿಯಿಂದ ವರ್ಣಿಸಹತ್ತಲು, ರಾಜಪುತ್ರನು ನಡುವೆ “ ಮುಗಿಸಿರಿ, ಮುಗಿಸಿರಿ, ಸಾಕಾಯಿತು. ನೀವು ವರ್ಣಿಸಿದ್ದರ ಮೇಲಿಂದ ನೋಡಲಾಗಿ ಮಾನವ ಪ್ರಾಣಿಯು ಎಂದಿಗೂ ಕವಿಯಾಗಲಾರ

ನೆಂದು ನಾನು ಮನಗಂಡೆನು. ಇರಲಿ, ಇನ್ನು ನಿಮ್ಮ ಚರಿತ್ರವನ್ನು ಮುಂದೆ ಸಾಗಿಸಿರಿ. ”

ಇವಸ್ಲಾಕ: —“ ಕವಿಯಾಗುವದು ನಿಜವಾಗಿ ಬಹಳ ಕಠಿಣವಿರುತ್ತದೆ. ”

ರಾಜಪುತ್ರ: —“ಕಠಿಣವೆಷ್ಟೆಂದು ಹೇಳಲಿ ? ಕವಿಯಾಗಬೇಕಾದರೆ ಅವನು ಏನೇನು ಕಲಿಯಬೇಕು ? ಯಾವ ಪ್ರಕಾರದ ಶ್ರಮ ಮಾಡಬೇಕು ? ಎಂಬದರ ವರ್ಣನೆಯನ್ನೇ ಕೇಳಿ ನನಗೆ ಬೇಸರ ಬಂತು, ಇನ್ನು ಕವಿಯಾಗುವದಕ್ಕೆ ಪ್ರಯತ್ನ ಮಾಡುವದಂತೂ ಒತ್ತಟ್ಟಿಗಿರಲಿ, ಇರಾಣ ದೇಶವನ್ನು ನೋಡಿದ ಬಳಿಕ ಮುಂದೆ ನೀವು ಯಾವದೇಶಕ್ಕೆ ಹೋದಿರಿ ? ಅದನ್ನು ದಯಮಾಡಿ ಹೇಳಿರಿ. ”

ಇವಸ್ಲಾಕ:— “ ಇರಾಣದೇಶದಿಂದ ನಾನು ಸಿರಿಯಾದೇಶಕ್ಕೆ ಹೋದೆನು. (ಸಿರಿಯಾ ಪ್ರಾಂತವು ಏಶಿಯಾಖಂಡದೊಳಗಿನ ತುರ್ಕಸ್ಥಾನದ ಒಂದು ಭಾಗವಾಗಿರುತ್ತದೆ.) ಆ ದೇಶದಲ್ಲಿ ಪಾಲಿಸ್ಟೈನವೆಂಬದೊಂದು ಪ್ರಾಂತವದೆ, ಅಲ್ಲಿಗೆ ಹೋಗಿ ಅಲ್ಲಿ ನಾನು ೩ ವರ್ಷಗಳ ವರೆಗೆ ಇದ್ದೆನು. ಅಲ್ಲಿ ಇದ್ದಾಗ ಯುರೋಪ ಖಂಡದೊಳಗಿನ ಉತ್ತರ ಮತ್ತು ಪಶ್ಚಿಮಕಡೆಯ ಜನಾಂಗದವರು ಎಷ್ಟೋ ಮಂದಿ ಬರುತ್ತಿದ್ದರು. ನಾನು ಅವರ ಕೂಡ ಮೇಲಿಂದ ಮೇಲೆ ಸಂಭಾಷಣ ಮಾಡುತ್ತಿದ್ದೆನು. ಆ ದೇಶಗಳ ಜನರಲ್ಲಿರುವಷ್ಟು ಪರಾಕ್ರಮವೂ, ಜ್ಞಾನವೂ ಪೃಥ್ವಿಯೊಳಗಿನ ಯಾವ ದೇಶದ ಜನರಲ್ಲೂ ಇಲ್ಲ. ಅವರ ಸೈನ್ಯಗಳು ಹೋದ ಹೋದಲ್ಲಿ ವಿಜಯವನ್ನೇ ಹೊಂದುತ್ತವೆ. ಅವರ ಹಡಗಪಡೆಯ ಅಂಜಿಕೆಯು ಮಹಾಸಾಗರದಿಂದ ಅತಿಶಯ ದೂರ ಇದ್ದ ದೇಶಗಳಿಗೂ ಕೂಡ ಇರುತ್ತದೆ. ಅವರಿಗೂ ನಮ್ಮ ದೇಶ ಹಾಗು ನಮ್ಮ ದೇಶದ ಸುತ್ತುಮುತ್ತಲು ಇರುವ ದೇಶದೊಳಗಿನ ಜನ ಇವರಿಗೂ ಸರಿಹಚ್ಚಿ ನೋಡಿದರೆ, ಬೇರೆ ಬೇರೆ ಜಾತಿಯ ಪ್ರಾಣಿಗಳಲ್ಲಿ ಹ್ಯಾಗೆ ಭೇದವು ದೃಷ್ಟಿಗೋಚರವಾಗುತ್ತದೋ ಹಾಗೆ ನಮಗೂ ಅವರಿಗೂ ವಿಲಕ್ಷಣ ಭೇದವಿದ್ದಂತೆ ತೋರುತ್ತದೆ. ಅವರ ದೇಶದಲ್ಲಿ ಬೇಕಾದ ಪದಾರ್ಥವು ಪ್ರಾಪ್ತವಾಗಲಾರದೆಂಬ ಮಾತೇ ಇಲ್ಲ. ಅಂದರೆ ಕಾಮಧೇನುವಿನೋಪಾದಿಯಲ್ಲಿ ಬೇಕಾದ ಪದಾರ್ಥವು ಬೇಕಾದಾಗ ಬೇಕಾದಷ್ಟು ಸಿಕ್ಕುತ್ತದೆ. ಜನರ ಅನುಕೂಲತೆಗಾಗಿಯೂ ಸುಖಕ್ಕಾಗಿಯೂ ಹಗಲಿರುಳು ದುಡಿಯುತ್ತಿರುವ ಕಾರಖಾನೆಗಳ ಮತ್ತು ಸಾವಿರಾರು ಕಲಾಕೌಶಲ್ಯಗಳ ಹೆಸರುಗಳು ಸಹ ನಮ್ಮ ದೇಶದೊಳಗಿನ ಜನರಿಗೆ ಗೊತ್ತಿಲ್ಲ. ಅವರ ದೇಶದಲ್ಲಿ ಬೆಳೆಯದೆ ಇದ್ದ ಪದಾರ್ಥವು ವ್ಯಾಪಾರದ ಯೋಗದಿಂದ ಅವರಿಗೆ ಬೇಕಾದಷ್ಟು ದೊರೆಯುತ್ತದೆ.' ”

ರಾಜಪುತ್ರನ:—"ಯುರೋಪಖಂಡದೊಳಗಿನ ಜನರು ಇಷ್ಟು ಶೂರರಾಗಿರಲಿಕ್ಕೆ ಕಾರಣವೇನು? ಯುರೋಪದ ಜನರು ವ್ಯಾಪಾರಕ್ಕಾಗಿಯೂ ದೇಶಗಳನ್ನು ಸ್ವಾಧೀನ ಮಾಡಿಕೊಳ್ಳುವದಕ್ಕಾಗಿಯೂ, ಏಸಿಯಾಖಂಡಕ್ಕೂ ಆಫ್ರಿಕಾಖಂಡಕ್ಕೂ ಬರುವಂತೆಯೇ, ಏಸಿಯಾ ಮತ್ತು ಆಫ್ರಿಕಾಖಂಡಗಳೊಳಗಿನ ಜನರು ಯುರೋಪಖಂಡದೊಳಗಿನ ದೇಶಗಳ ಮೇಲೆ ಸಾಗಿಹೋಗಿ, ಆ ದೇಶಗಳನ್ನು ಸ್ವಾಧೀನ ಮಾಡಿಕೊಂಡು, ಅಲ್ಲಿ ಹೊಸನಸಾಹತಗಳನ್ನು ಸ್ಥಾಪಿಸಿ, ತಮ್ಮ ಅಧಿಕಾರವನ್ನು ಅವರ ಮೇಲೆ ಯಾಕೆ ನೆಲೆಗೊಳಿಸುವದಿಲ್ಲ? ಹಡಗದಲ್ಲಿ ಕುಳಿತಂಥ ಯುರೋಪದ ಜನರನ್ನು ಮರಳಿ ಅವರ ದೇಶಕ್ಕೆ ಮುಟ್ಟಿಸುವ ಗಾಳಿಯೇ ಏಸಿಯಾದೊಳಗಿನ ಜನರ ಹಡಗಗಳನ್ನೂ ಯುರೋಪಖಂಡಕ್ಕೆ ಒಯ್ಯುವದು; ಅಲ್ಲವೆ?"

ಇಮ್ಲಾಕ:—"ಯುರೋಪದ ಜನರು ನಮಗಿಂತಲೂ ಹೆಚ್ಚು ಜಾಣರಿರುವದರಿಂದಲೇ ಅವರು ನಮಗಿಂತಲೂ ಹೆಚ್ಚು ಪರಾಕ್ರಮವುಳ್ಳವರಾಗಿರುತ್ತಾರೆ; ಯಾಕಂದರೆ ಜ್ಞಾನದ ವರ್ಚಸ್ಸು ಅಜ್ಞಾನದಮೇಲೆ ಯಾವಾಗಲೂ ಇದ್ದೇ ಇರುತ್ತದೆ; ಪಶುಗಳು ಮನುಷ್ಯನ ಅಂಕಿತದಲ್ಲಿರುವವೆಂಬುವದೇ ಜ್ಞಾನದ ವರ್ಚಸ್ಸಿನ ಸಾಕ್ಷಿಯು. ಆದರೆ ಯುರೋಪದ ಜನರಿಗೇ ನಮಗಿಂತಲೂ ಹೆಚ್ಚಿನ ಜ್ಞಾನವು ಯಾಕಿರಬೇಕೆಂಬದರ ಕಾರಣವು ಮಾತ್ರ ನನಗೆ ತಿಳಿಯದು "ಈಶ್ವರೇಚ್ಛಾ ಬಲೀಯಸಿ" ಇಲ್ಲವೆ ಸಚ್ಚಿದಾನಂದ ಪರಮೇಶ್ವರನ ಅಗಾಧವಾದ ಲೀಲೆಯೇ ಕಾರಣವಾಗಿರುತ್ತದೆ. ಎಂದು ಹೇಳಬಹುದು."

ರಾಜಪುತ್ರನು ಬಿಸುಸುಯ್ದು:—" ಪಾಲಿಸ್ಟೈನಕ್ಕೆ ಹೋಗಿ ಅಲ್ಲಿ ನೆರೆದ ಅನೇಕ ದೇಶಗಳ ಜನರ ಸಮೂಹವನ್ನು ನೋಡುವ, ಮತ್ತು ಆ ಸಮೂಹದಲ್ಲಿ ಕೂಡಿಕೊಳ್ಳುವ ಯೋಗವು ನನಗೆ ಎಂದು ಬಂದೀತು? ಆ ಸುದಿನವು ಬರುವ ವರೆಗೆ ನೀವು ಹೇಳುವಂಥ ಸಂಗತಿಗಳನ್ನು ಕೇಳಿ ವೇಳೆಯನ್ನು ಕಳೆಯುತ್ತೇನೆ. ಪಾಲಿಸ್ಟೈನಕ್ಕೆ ಇಷ್ಟು ಜನರು ಯಾಕೆ ಬರುತ್ತಾರೆಂಬದರ ಕಾರಣವು ನನಗೆ ಗೊತ್ತಿಲ್ಲವೆಂದು ನೀವು ತಿಳಿಯಬೇಡಿರಿ. ಆ ಸ್ಥಾನವು ಜ್ಞಾನಕ್ಕೂ, ಧರ್ಮಕ್ಕೂ ಭಕ್ತಿಗೂ ಆಗರವಾಗಿರುವದರಿಂದ ಅಲ್ಲಿಗೆ ದೇಶದೊಳಗಿನ ದೊಡ್ಡ ದೊಡ್ಡ ವಿದ್ವಾಂಸರೂ. ಧರ್ಮಿಷ್ಠರೂ ಯಾವಾಗಲೂ ಬರುತ್ತಿರುತ್ತಾರೆ."

ಇಮ್ಲಾಕ:—"ಕೆಲ ಕೆಲವು ದೇಶದೊಳಗಿನ ಜನರು ಪಾಲಿಸ್ಟೈನಕ್ಕೆ ಬರುವದೇ ಇಲ್ಲ. ಯಾಕಂದರೆ ಯುರೋಪದೊಳಗಿನ ಅಸಂಖ್ಯ ವಿದ್ವಾಂಸರೂ, ಬೇರೆ ಬೇರೆ ಪಂಥದವರೂ ಯಾತ್ರೆಗೆ ಹೋಗುವದು ಅಜ್ಞಾನಮೂಲಕವೆಂದು ತಿಳಿದು ಯಾತ್ರೆಗೆ ಹೋಗುವವರನ್ನು ನಿಂದಿಸುತ್ತಾರೆ; ಕೆಲವರು ಹಾಸ್ಯಮಾಡುತ್ತಾರೆ."

ರಾಜಪುತ್ರನು:—"ನಾನು ಚಿಕ್ಕಂದಿನಿಂದ ಈ ಸೆರೆಮನೆಯಲ್ಲಿಯೇ ಇರುವದರಿಂದ ಭಿನ್ನ ಭಿನ್ನ ಅಭಿಪ್ರಾಯಗಳ ಜ್ಞಾನವು ನನಗಿಲ್ಲೆಂಬುವದು ತಮಗೆ ತಿಳಿದೇ ಇರುತ್ತದೆ; ಯಾತ್ರೆಯ ಒಗ್ಗೆ ಉಭಯ ಪಕ್ಷದ (ಯಾತ್ರೆಮಾಡಬೇಕೆಂದು ಅನ್ನುವವರ ಮಾಡಬಾರದೆಂದೆನ್ನುವವರ) ಸಾಧಕ ಬಾಧಕ ಪ್ರಮಾಣಗಳನ್ನು ಕೇಳುತ್ತ ಕೂಡ್ರುವಷ್ಟು ವೇಳೆಯು ಈಗ ಇಲ್ಲ. ಆದದರಿಂದ ಈ ವಿಷಯದ ಬಗ್ಗೆ ನೀವು ವಿಚಾರಮಾಡಿ ತೆಗೆದ ಸಿದ್ಧಾಂತವನ್ನು ಇಲ್ಲವೆ ನಿಮಗೆ ತೋರಿದ ಪರಿಣಾಮವನ್ನು ನನಗೆ ಹೇಳಿಬಿಡಿರಿ, ಅಂದರಾಯಿತು."

ಇವಸ್ಕಾಕ:—"ಉಳಿದ ಧಾರ್ಮಿಕ ಕೃತ್ಯಗಳಂತೆಯೇ ಯಾತ್ರೆಮಾಡುವದಾದರೂ, ಮನುಷ್ಯನು ಯಾವ ತರದ ಬುದ್ಧಿಯಿಂದ ಅದನ್ನು ಮಾಡುತ್ತಾನೋ, ಆ ಬುದ್ಧಿಗನುಸರಿಸಿ ಸಯುಕ್ತಿಕ ಇಲ್ಲವೆ ಅಜ್ಞಾನಮೂಲಕ ಧರ್ಮಶ್ರದ್ಧೆಯುಳ್ಳದ್ದು ಆಗಿರುತ್ತದೆ. ಸತ್ಯವನ್ನು ಹುಡುಕುವದಕ್ಕಾಗಿ ದೂರ ದೂರ ದೇಶಗಳಿಗೆ ಪ್ರವಾಸ ಮಾಡಬೇಕೆಂದು ಯಾವ ಶಾಸ್ತ್ರದಲ್ಲಿಯೂ ಹೇಳಿಲ್ಲ. ಆಯುಃಕ್ರಮಕ್ಕೆ ಇಲ್ಲವೆ ಒಳ್ಳೆ ಮಾರ್ಗದಿಂದ ನಡೆಯಲಿಕ್ಕೆ ಬೇಕಾಗುವಷ್ಟು ಸತ್ಯವು (ಜ್ಞಾನವು) ಪ್ರಾಮಾಣಿಕತನದಿಂದ ಹುಡುಕಿದರೆ ಎಲ್ಲಿ ಬೇಕಾದಲ್ಲಿ ಸಿಕ್ಕುತ್ತದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋದರೆ ದೇವರ ಮೇಲಿನ ಭಕ್ತಿಯು ಹೆಚ್ಚಾಗುತ್ತದೆಂದು ನಿಶ್ಚಯವಾಗಿ ಹೇಳಲಿಕ್ಕೆ ಬರುವಂತಿಲ್ಲ; ದೇವರ ಮೇಲಿನ ಭಕ್ತಿಯು ಹೆಚ್ಚಾಗುವದರ ಬದಲಾಗಿ ಸುಮ್ಮನೆ ಆ ದೇಶದಿಂದ ಈ ದೇಶಕ್ಕೆ ಈ ದೇಶದಿಂದ ಆ ದೇಶಕ್ಕೆ ತಿರುಗಾಡುವದರಿಂದ ಮನಸ್ಸು ಮಾತ್ರ ಚಂಚಲವಾಗುತ್ತದೆ. ಆದಾಗ್ಯೂ ಅದ್ಭುತ ಕೃತ್ಯಗಳು ಸಂಭವಿಸಿದಂಥ ಸ್ಥಳಗಳನ್ನು ನೋಡುವದಕ್ಕಾಗಿ ಸಾವಿರಾರು ಜನರು ದಿನಾಗಲೂ ಹೋಗುತ್ತಾರೆ; ಮತ್ತು ಆ ಸ್ಥಳಗಳನ್ನು ಪ್ರತ್ಯಕ್ಷ ನೋಡುವದರಿಂದ ಆ ಕೃತ್ಯಗಳ ಮಹತ್ವವು ನೋಡುವವನ ಮನಸ್ಸಿನಲ್ಲಿ ಪೂರ್ಣವಾಗಿ ನೆಲೆಗೊಳ್ಳುತ್ತದೆಂಬುವದು ಅನುಭವಸಿದ್ಧವಾದ ಮಾತಾಗಿರುತ್ತದೆ. ಆದದರಿಂದ ತಮ್ಮ ಧರ್ಮದ ಉಗಮಸ್ಥಾನವಾದ ಪವಿತ್ರಸ್ಥಳವನ್ನು ನೋಡಲಿಕ್ಕೆ ಹೋಗಬೇಕೆಂಬ ಉತ್ಸುಕತೆಯು ಮನುಷ್ಯನಿಗೆ ಉಂಟಾಗುವದು ಕೇವಲ ಸ್ವಾಭಾವಿಕವದೆ. ಯಾವನೊಬ್ಬ ಮನುಷ್ಯನು, ಅಲೌಕಿಕ ಮತ್ತು ಆದರವನ್ನುಂಟು ಮಾಡುವಂಥ ಕೃತ್ಯಗಳು ಸಂಭವಿಸಿದಂಥ ಸ್ಥಳವನ್ನು ಪ್ರತ್ಯಕ್ಷ ನೋಡಿದರೆ, ಆತನ ಧರ್ಮನಿಷ್ಠೆಯು ಹೆಚ್ಚು ದೃಢವಾಗುತ್ತದೆಂದೆನ್ನಲಿಕ್ಕೆ ಏನೂ ಸಂದೇಹವಿಲ್ಲೆಂದು ನನಗೆ ತೋರುತ್ತದೆ. ಒಂದು ಸ್ಥಳಕ್ಕಿಂತ ಎರಡನೇ ಸ್ಥಳದಲ್ಲಿ ಪರಮೇಶ್ವರನ ಪ್ರಸಾದವು ಹೆಚ್ಚು ಸುಲಭವಾಗಿ ದೊರೆಯುತ್ತದೆಂದು ತಿಳುಕೊಳ್ಳುವದು ಕೇವಲ ಭ್ರಾಂತಿಮೂಲಕ

ಧರ್ಮಶ್ರದ್ಧೆಯೇ ಹೊರತು ಬೇರೆ ಏನೂ ಅಲ್ಲ; ಆದರೂ ಕೆಲಕೆಲವು ಸ್ಥಳಗಳ ದರ್ಶನದ ಯೋಗದಿಂದ ಭಕ್ತಿ ಮುಂತಾದ ಭಾವನೆಗಳು ಮನಸ್ಸಿನಲ್ಲಿ ಹೆಚ್ಚಾಗುತ್ತವೆಂಬ ಮಾತು ಅನುಭವಸಿದ್ಧವಾದದ್ದೂ, ನಿರ್ವಿವಾದವಾದದ್ದೂ ಇರುತ್ತದೆ. ಒಬ್ಬ ಮನುಷ್ಯನು ಪಾಲಿಸ್ಟೈನಕ್ಕೆ ತನ್ನ ದುಷ್ಟವಾಸನೆಗಳ ನಿಗ್ರಹವಾಗುವದೆಂದು ತಿಳುಕೊಂಡು ಅಲ್ಲಿಗೆ ಹೋದರೆ, ತೀವ್ರವೇ ತನ್ನ ತಿಳುವಳಿಕೆಯು ಭ್ರಾಂತಿಮೂಲಕವಾಗಿರುವದೆಂದು ಅವನಿಗೆ ಕಂಡು ಬರುವದು; (ಅಂದರೆ ಕೇವಲ ಪಾಲಿಸ್ಟೈನವನ್ನು ನೋಡಿದಾಕ್ಷಣವೇ ದುರ್ಗುಣಗಳು ಓಡಿ ಹೋಗುವದಿಲ್ಲೆಂಬ ಭಾವವು) ಹೀಗಿದ್ದಾಗ್ಯೂ ಆ ಸ್ಥಳವನ್ನು ನೋಡಲಿಕ್ಕೆ ಹೋಗುವದೇ ಮೂರ್ಖತನವೆನ್ನುವದು ಸರಿಯಾದದ್ದಲ್ಲ. (ದರ್ಶನ ಚಮತ್ಕಾರಗಳುಳ್ಳಂಥ ದೇಶಗಳನ್ನು ನೋಡಲಿಕ್ಕೆ ಹೋಗುವದಕ್ಕೇನೂ ತೊಂದರೆ ಇಲ್ಲೆಂಬ ಭಾವವು). ಯಾವನೊಬ್ಬ ಮನುಷ್ಯನು ಇಂಥಾದ್ದೊಂದು ಸ್ಥಳಕ್ಕೆ ಹೋದರೆ ದೇವರು ತನ್ನ ಪಾಪವನ್ನು ತೀವ್ರವಾಗಿಯೂ, ಸಹಜವಾಗಿಯೂ ಕ್ಷಮಿಸುವನೆಂದು ತಿಳಿದುಕೊಂಡು ಆ ಸ್ಥಳಕ್ಕೆ ಹೋಗುವನೋ, ಆತನು ತನ್ನ ಸದಸದ್ವಿವೇಕಶಕ್ತಿಗೂ, ತನ್ನ ಧರ್ಮಕ್ಕೂ ಕುಂದು ತಂದನೆಂದು ಸ್ಪಷ್ಟವಾಗಿ ಅನ್ನಬಹುದು."

ರಾಜಪುತ್ರನು:—"ಯಾತ್ರೆಯ ಸಂಬಂಧವಾಗಿ ಈಗ ನೀವು ಹೇಳಿದ ಈ ತರದ ಸೂಕ್ಷ್ಮಭೇದಗಳು ಯುರೋಪದವರಿಂದ ಹುಟ್ಟಿದವೆಂದು ತೋರುತ್ತದೆ. ಅವುಗಳ ವಿಚಾರವನ್ನು ನಾನು ಮತ್ತೊಮ್ಮೆ ಮಾಡುವೆನು. ಆದರೆ ಜ್ಞಾನದ ಪರಿಣಾಮವು ಯುರೋಪದ ಜನರ ಮೇಲೆ ಹ್ಯಾಗಾಗಿರುತ್ತದೆಂಬವನ್ನು ನನಗೆ ಹೇಳಿರಿ; ನಮಗಿಂತಲೂ ಹೆಚ್ಚಿನ ಜ್ಞಾನವಿದ್ದಂಥ ಆ ಜನಾಂಗದವರು ನಮಗಿಂತಲೂ ಹೆಚ್ಚು ಸುಖವುಳ್ಳವರಿರುವರೋ"

ಇಮ್ಲಾಕ:—"ಈ ಸಂಸಾರದೊಳಗಿನ ಪ್ರತಿಯೊಬ್ಬ ಮನುಷ್ಯನು ಯಾವಾಗಲೂ ತನ್ನ ಚಿಂತೆಯಲ್ಲಿಯೇ ಮುಳುಗಿರುವದರಿಂದ, ಇಂಥವನಿಗೆ ಸುಖವು ಹೆಚ್ಚದೆ, ಇಂಥವನ ಸುಖವು ಕಡಿಮೆ ಅದೆ, ಎಂಬ ವಿಚಾರ ಮಾಡಲಿಕ್ಕೆ ಸಹ ಅವನಿಗೆ ಅವಕಾಶವು ದೊರೆಯುವದಿಲ್ಲ. ಆದರೆ ಜ್ಞಾನವು ಸುಖಕ್ಕೆ ಕಾರಣೀಭೂತವಾದ ಸಾಧನಗಳಲ್ಲೊಂದು ಸಾಧನವಾಗಿರುತ್ತದೆ. ಇದಕ್ಕೆ ಪ್ರಮಾಣವೇನಂದರೆ— ತನ್ನ ಜ್ಞಾನವನ್ನು ಹೆಚ್ಚಿಸಬೇಕೆಂಬ ಇಚ್ಛೆಯು ಪ್ರತಿಯೊಬ್ಬ ಮನುಷ್ಯನ ಅಂತಃಕರಣದಲ್ಲಿ ಸ್ವಾಭಾವಿಕವಾಗಿ ಹುಟ್ಟುತ್ತದೆ. ಅಜ್ಞಾನವು ಕೇವಲ ತಮೋಮಯವಾಗಿರುವ ಕಾರಣ ಅದರಿಂದ ಯಾವ ಕಾರ್ಯವೂ ಆಗುವದಿಲ್ಲ. ಅಜ್ಞಾನವು ನಿವಾತಪ್ರದೇಶದಂತೆ ಇರುತ್ತದೆ. ಅಜ್ಞಾನಿಯಾದ ಮನುಷ್ಯನಿಗೆ ಮನೋರಂಜನದ ಮಾರ್ಗವಿರು

ವದಿಲ್ಲಾದದರಿಂದ ಅವನು ಜಡಭರತನಾಗಿಯೂ ಮಂದನಾಗಿಯೂ ಇದ್ದಂತೆ ತೋರುತ್ತಾನೆ. ಅವನಿಗೇನಾದರೂ ಹೊಸ ಮಾತು ತಿಳಿದರೆ, ಅದು ಹ್ಯಾಗೆ ಸಂಭವಿಸಿತು? ಯಾಕೆ ಸಂಭವಿಸಿತು? ಮುಂತಾದ ಕಾರ್ಯಕಾರಣ ಭಾವವು ತಿಳಿಯದೆ ಇದ್ದರೂ ಕೂಡ, ಅಷ್ಟರಿಂದಲೇ ಅವನಿಗೆ ಅಪರಿಮಿತ ಆನಂದವಾಗುತ್ತದೆ; ಆ ಮಾತನ್ನು ಮರೆತರೆ ಖೇದವಾಗುತ್ತದೆ. ಈ ಎಲ್ಲ ಸಂಗತಿಗಳನ್ನು ವಿಚಾರಿಸಿ ನೋಡಲು, ಮನುಷ್ಯನಿಗೆ ಹೆಚ್ಚು ಹೆಚ್ಚು ಜ್ಞಾನವಿದ್ದಂತೆ ಅವನ ಸುಖವಾದರೂ ಅದೇ ಪ್ರಮಾಣದಿಂದ ಹೆಚ್ಚಾಗುತ್ತದೆಂದು ನನಗೆ ತೋರುತ್ತದೆ. ಇನ್ನು ಜ್ಞಾನದಿಂದ ಸುಖವಾಗಬೇಕಾದರೆ ನಡುವೆ ಕೆಲವು ಆತಂಕಗಳು ಬರುತ್ತವೆ. ಅವು ಬಂದರೆ ಮಾತ್ರ ಒಂದುವೇಳೆ ಸುಖವಾಗಲಿಕ್ಕಿಲ್ಲ; ಈ ಮಾತು ಬೇರೆ. ಆದರೆ ಜ್ಞಾನಿಯಾದ ಮನುಷ್ಯನಿಗೆ ಮೂರ್ಖಕ್ಕಿಂತಲೂ ಬಹಳ ಹೆಚ್ಚು ಸುಖವಾಗುವದು ನಿಶ್ಚಯವೆಂದು ನನ್ನ ಮನೋದೇವತೆಯು ನನಗೆ ಹೇಳುತ್ತದೆ.”

“ಇನ್ನು ಸಂಸಾರದೊಳಗಿನ ವಿಶೇಷ ಸುಖಗಳ ಲೆಕ್ಕವನ್ನು ಮಾಡಹತ್ತಿದರೆ ನಮಗಿಂತಲೂ ಯುರೋಪದ ಜನರಿಗೆ ಹೆಚ್ಚು ಸುಖಗಳಿರುವವೆಂಬ ಮಾತು ಸಹಜವೇ ಲಕ್ಷದಲ್ಲಿ ಬರುವಂತೆ ಅದೆ. ಅವರಿಗೆ ಗಾಯವಾದರೆ, ಇಲ್ಲವೆ ಅವರು ಬೇನೆ ಬಿದ್ದರೆ ನಮ್ಮ ಹಾಗೆ ಕೊಳೆಯುತ್ತ ಬಿದ್ದು ಸಾಯುವದಿಲ್ಲ; ಅವರಿಗೆ ವೈದ್ಯಶಾಸ್ತ್ರವು ಬರುತ್ತಿರುವದರಿಂದ ಅವರು ಕೂಡಲೆ ಆ ರೋಗಗಳನ್ನು ದೂರಮಾಡಿ ಬಿಡುತ್ತಾರೆ, ಅವರಿಗೆ ಶಿಲ್ಪವಿದ್ಯವು ಚನ್ನಾಗಿ ಬರುತ್ತಿರುವದರಿಂದ ನಮ್ಮಂತೆ ಚಳಿ, ಗಾಳಿ, ಬಿಸಿಲು ಮುಂತಾದ ದವುಗಳ ತಾಪವು ಅವರಿಗೆ ಆಗುವದಿಲ್ಲ; ತಮ್ಮ ವಿದ್ಯದ ಬಲದಿಂದ ಅವರು ಆ ತಾಪಗಳ ನಿವಾರಣವನ್ನು ಸುಲಭವಾಗಿ ಮಾಡಿಕೊಳ್ಳುತ್ತಾರೆ. ಶ್ರಮಕರಗಳಾದ ಎಷ್ಟೋ ಕೆಲಸಗಳನ್ನು ನಾವು ಕೈಯಿಂದ ಮಾಡುತ್ತೇವೆ. ಆದದರಿಂದ ನಮಗೆ ಬಹಳ ತೊಂದರೆಯಾಗಿ ಕೆಲಸವೂ ಸಾಗುವದಿಲ್ಲ. ಆದರೆ ಅವರು ಅಂಥ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಸುಲಭವಾಗಿಯೂ ಅಂದವಾಗಿಯೂ ಮಾಡಿಕೊಳ್ಳುತ್ತಾರೆ. ಅಂಚೆಗಳ ಮತ್ತು ತಂತಿಗಳ ಪ್ರಸಾರವು ಅವರ ದೇಶದ ತುಂಬೆಲ್ಲ ಆಗಿರುವದರಿಂದ ಒಬ್ಬ ಮಿತ್ರನ ಸುದ್ದಿಯು ಇನ್ನೊಬ್ಬನಿಗೆ ಕೂಡಲೆ ತಿಳಿಯುತ್ತದೆ; ಅಂದರೆ ಅವರಿಗೆ ಮಿತ್ರವಿಯೋಗವೇ ಆಗಿರುವದಿಲ್ಲೆಂದು ಅಂದರೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅವರ ರಾಜ್ಯಪದ್ಧತಿಯು ಯಾವತ್ತೂ ತರದ ಸಾರ್ವಜನಿಕ ಅನಾನುಕೂಲತೆಯನ್ನು ಇಲ್ಲದಂತೆ ಮಾಡಿ ಬಿಟ್ಟಿರುತ್ತದೆ. ಅವರ ದೇಶದಲ್ಲಿ ಗುಡ್ಡಗಳ ನಡುವೆ ಸಹ ದಾರಿಗಳನ್ನು ಮಾಡಿರುತ್ತಾರೆ ; ಮತ್ತು ಹೊಳೆಗಳಿಗೆ ಸೇತುವೆಗಳನ್ನು (ಪೂಲುಗಳನ್ನು) ಕಟ್ಟಿರುತ್ತಾರೆ. ಇನ್ನು ಅವರ ವಳ

ತಿಯ ಸುಖಗಳ ಬಗ್ಗೆ ವಿಚಾರ ಮಾಡಿದರೆ, ಅವರು ಇರುವ ಮನೆಗಳು ನಮ್ಮ ಮನೆಗಳಿಗಿಂತಲೂ ವಿಶೇಷ ಅನುಕೂಲವಾದಂಥವೂ, ವಿಶಾಲವಾದಂಥವೂ ಇರುವದರಿಂದಲೂ, ಕಳ್ಳಸುಳ್ಳರ ಉಪದ್ರವದ ಅಂಜಿಕೆ ಇಲ್ಲದೆ ಇರುವದರಿಂದಲೂ, ಗೃಹಸುಖವು ಅವರಿಗೆ ನಮಗಿಂತಲೂ ಹೆಚ್ಚಿರುವದೆಂದು ನಾವು ಒಪ್ಪಿಕೊಳ್ಳಬೇಕು "

ರಾಜಪುತ್ರನು :—" ಅವರಿಗೆ ಇಷ್ಟು ಅನುಕೂಲತೆಗಳಿದ್ದ ಮೇಲೆ ಅವರು ನಿಶ್ಚಯವಾಗಿ ಒಳ್ಳೇ ಸುಖವುಳ್ಳವರಿರುವರೆಂಬದು ಸ್ಪಷ್ಟವೇ ಸರಿ. ದೂರದೂರಗಲಿ ಹೋದ ಮಿತ್ರರು ತಮ್ಮ ತಮ್ಮ ವಿಚಾರಗಳನ್ನು ಒಬ್ಬರಿಗೊಬ್ಬರು ತುಸು ವೇಳೆಯಲ್ಲಿ ತಿಳಿಸುವ ಅವರ ಅನುಕೂಲತೆಯು ಅನುಪಮವಾದದ್ದು. ಅದು ಅವರಿಗಿದ್ದ ಬಗ್ಗೆ ನಾನು ಮತ್ಸರಪಡುತ್ತೇನೆ. ( ಅಂದರೆ ಆ ತರದ ಅನುಕೂಲತೆಯು ನಮ್ಮ ದೇಶದಲ್ಲಿಯೂ ಇರಬೇಕೆಂದು ನಾನು ಬಯಸುತ್ತೇನೆ ) ಅವರ ಸುಖಕ್ಕೆ ಸಾಧನೀಭೂತವಾದ ಉಳಿದ ಅನುಕೂಲತೆಗಳು ನನಗೆ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ ; ಅವುಗಳ ಬಗ್ಗೆ ನನಗೆ ಎಳ್ಳಷ್ಟು ಮತ್ಸರ ಬುದ್ಧಿ ಇಲ್ಲ. "

ಇವಮ್ಲಾಕ:—" ಯುರೋಪಖಂಡದೊಳಗಿನ ಜನರಿಗೆ ನಮಗಿಂತಲೂ ದುಃಖಗಳು ಕಡಿಮೆ; ಆದರೂ, ಅವರು ಸುಖಿಪ್ರಾಣಿಗಳೆಂದು ನಾನು ಅನ್ನಲಾರೆನು. ಬೇಕಾದ ದೇಶಗಳಲ್ಲಿ ಬೇಕಾದ ಕಾಲಗಳಲ್ಲಿ ನೋಡಿರಿ, ಮನುಷ್ಯನು ದುಃಖವನ್ನು ಅನುಭೋಗಿಸುವದೇ ಬಹಳ; ಸುಖ ಅನುಭೋಗಿಸುವದು ತುಸು ; ಹೀಗೆ ಕಂಡು ಬರುವದು. "

## ಹನ್ನೆರಡನೆಯ ಭಾಗವು.

### ಇವಮ್ಲಾಕನ ಚರಿತ್ರವು ಮುಂದೆಸಾಗಿದ್ದು.

ರಾಜಪುತ್ರನುಃ—" ಜನರಿಗೆ ಸುಖ ಹಂಚುವದರಲ್ಲಿ ದೇವರು ಒಳ್ಳೇ ಜಿಡಗೈಯವನೂ, ಕೃಪಣನೂ ಆಗಿರುವನೆಂದು ನಿಮ್ಮ ಅಭಿಪ್ರಾಯವಿದ್ದಂತೆ ನನಗೆ ತೋರುತ್ತದೆ. ಆದರೆ ನಿಮ್ಮ ಅಭಿಪ್ರಾಯವು ನಿಜವಿದ್ದಂತೆ ನನಗೆ ಕಾಣುವದಿಲ್ಲ. ನನಗೆ ಸ್ವತಂತ್ರದಿಂದ ನಡೆಯಗೊಟ್ಟರೆ ನನ್ನ ಆಯುಷ್ಯದ ಪ್ರತಿಯೊಂದು ದಿವಸವನ್ನು ಒಳ್ಳೇ ಸುಖದಿಂದ ಕಳೆಯುವೆನೆಂದು ನಾನು ನಿಶ್ಚಯಪೂರ್ವಕವಾಗಿ ನಿಮಗೆ ಹೇಳುತ್ತೇನೆ ; ದುಃಖವನ್ನು ಹೇಳಹೆಸರಿಲ್ಲದಂತೆ ಮಾಡಿಬಿಡುವೆನು. ನಾನು ಸ್ವತಂತ್ರನಾದರೆ ನನ್ನ ನಡತೆ ಹ್ಯಾಗಿರುವದೆಂದರೆ—ನಾನು ಯಾರಿಗೂ ಎಂದೂ ತೊಂದರೆಕೊಡ

ಲಿಕ್ಕಿಲ್ಲ ; ಯಾರಕೂಡಲೂ ದ್ವೇಷಮಾಡಲಿಕ್ಕಿಲ್ಲ ; ದುಃಖದಿಂದ ಪೀಡಿತರಾದ ಜನರು ನನ್ನ ದೃಷ್ಟಿಗೆ ಬಿದ್ದರೆ, ಅವರ ದುಃಖವನ್ನು ದೂರಮಾಡಿ, ಎಲ್ಲ ಜನರೂ ನನ್ನ ಉಪಕಾರ ನೆನೆಸುತ್ತ ಸದಾಸರ್ವಕಾಲ ನನ್ನ ಕಲ್ಯಾಣವನ್ನು ಇಚ್ಛಿಸುವಂತೆ ಮಾಡಿ ಬಿಡುವೆನು. ಪ್ರಾಜ್ಞರೂ ಸಜ್ಜನರೂ ಆದವರನ್ನೇ ನಾನು ಗೆಳೆಯರನ್ನಾಗಿ ಆರಿಸುವೆನು; ಸದ್ಗುಣಿಯಾದಂಥ ಸುಶೀಲಳಾದಂಥ ಸ್ತ್ರೀಯನ್ನೇ ಮದುವೆಮಾಡಿಕೊಳ್ಳುವೆನು ; ಈ ಮೇರೆಗೆ ಸದ್ಗುಣವುಳ್ಳ ಸ್ತ್ರೀಯನ್ನು ಲಗ್ನವಾದಮೇಲೆ, ವಿಶ್ವಾಸಘಾತದ ಇಲ್ಲವೆ ಪ್ರೀತಿಭಂಗದ ಭಯವು ಎಲ್ಲಿಂದ ಬರುವದು ? ನಾನು ಬಹಳ ಆಲೋಚನಪರನಾಗಿ ನನ್ನ ಮಕ್ಕಳಿಗೆ ವಿದ್ಯಾಬುದ್ಧಿಯನ್ನೂ, ಸುನೀತಿಯನ್ನೂ ಕಲಿಸಿ ಅವರು ವಿದ್ವಾಂಸರೂ, ಧಾರ್ಮಿಕರೂ ಆಗುವಂತೆ ಪ್ರಯತ್ನ ಮಾಡುವೆನು. ಅಂದಬಳಿಕ, ಸಹಜವೇ ಅವರು ಚಿಕ್ಕಂದಿನಲ್ಲಿ ನಾನು ಮಾಡಿದ ಉಪಕಾರವನ್ನು ಸ್ಮರಿಸಿ ಪುತ್ರಧರ್ಮಕ್ಕೆ ಸರಿಯಾಗಿ ಮುಪ್ಪಿನಲ್ಲಿ ನನಗೆ ಸುಖಕೊಡುವರು. ಯಾವ ಮನುಷ್ಯನ ಔದಾರ್ಯದಿಂದ ಜನರು ಶ್ರೀಮಂತರಾಗಿರುತ್ತಾರೋ, ಮತ್ತು ಯಾವನ ಸಹಾಯದಿಂದ ಸಂಕಟದೊಳಗಿಂದ ಪಾರಾಗಿರುತ್ತಾರೋ, ಅಂಥ ಮನುಷ್ಯನ ಸಂರಕ್ಷಣಕ್ಕಾಗಿ ಸಾವಿರಾರು ಜನರು ಸಿದ್ಧರಾಗಿದ್ದ ಮೇಲೆ, ಅವನ ಕಡೆಗೆ ದುಷ್ಟ ದೃಷ್ಟಿಯಿಂದ ಯಾರು ತಾನೇ ನೋಡಬಲ್ಲರು ? ದುಷ್ಟ ದೃಷ್ಟಿಯಿಂದ ನೋಡುವಷ್ಟು ಧೈರ್ಯವು ಜನರಿಗೆ ಇಲ್ಲದ ಮೇಲೆ, ಅವನಿಗೆ ಅವರಿಂದ ತೊಂದರೆಯಾಗತಕ್ಕದ್ದು ಎಲ್ಲಿಯ ಮಾತು ? ಈ ಮೇರೆಗೆ ನಾನು ಪರೋಪಕಾರ ಮಾಡಬೇಕು ಮತ್ತು ಪರರು ನನ್ನ ಕಲ್ಯಾಣಕ್ಕೋಸ್ಕರ ಚಿಂತಿಸಬೇಕು ; ಈ ರೀತಿಯಿಂದ ಎಲ್ಲ ಆಯುಷ್ಯವನ್ನು ಆನಂದದಿಂದಲೂ, ಸ್ವಸ್ಥತೆಯಿಂದಲೂ ಕಳೆಯಲಿಕ್ಕೆ ಇಚ್ಛಿಸುವಂಥ ನನ್ನ ಇಚ್ಛೆಯು ಪೂರ್ಣವಾಗುವದು ನನಗೆ ಅಶಕ್ಯವಾಗಿದ್ದಂತೆ ತೋರುವದಿಲ್ಲ. ಈ ಮೇರೆಗೆ ನಡೆಯಲಿಕ್ಕೆ ನೀವು ನನಗೆ ಇಷ್ಟು ಹೊತ್ತಿನವರೆಗೆ ಹೇಳಿದ ಯುರೋಪದ ಸುಧಾರಣೆಗಳ ಅವಶ್ಯಕತೆ ಎಳ್ಳಷ್ಟು ಇಲ್ಲ. ಆ ಸುಧಾರಣೆಗಳು ತೋರಿಕೆಯಲ್ಲಿ ಬಹಳ ಭವ್ಯವಾಗಿ ತೋರುತ್ತವೆ; ಆದರೆ ಅವುಗಳ ನಿಜವಾದ ಉಪಯೋಗವು ಮಾತ್ರ ಶೂನ್ಯ ಇರುತ್ತದೆಂದು ನನಗೆ ಕಾಣುತ್ತದೆ. ಇನ್ನು ಯುರೋಪದ ಜನರ ವರ್ಣನೆಯು ಸಾಕು, ನಿಮ್ಮ ಪ್ರವಾಸದ ವೃತ್ತಾಂತವನ್ನು ಮುಂದೆ ಹೇಳಿರಿ. ”

ಇಸ್ಲಾಕ:—“ ಪಾಲಿಸ್ತೈನದಿಂದ ಹೊರಟು ಏಶಿಯಾಖಂಡದೊಳಗಿನ ಬೇರೆ ಅನೇಕ ಪ್ರದೇಶಗಳೊಳಗಿಂದ ಪ್ರವಾಸ ಮಾಡಿದೆನು. ಸುಧಾರಿಸುವ ದೇಶಗಳೊಳಗೆ ವರ್ತಕನಂತೆಯೂ, ಗುಡ್ಡಗಾಡು ಜನರು ವಾಸಿಸುವ ದೇಶಗಳೊಳಗೆ ಯಾತ್ರಿಕನಂತೆಯೂ, ವೇಷಹಾಕಿಕೊಳ್ಳುತ್ತಿದ್ದೆನು. ಈ ಮೇರೆಗೆ ಅನೇಕ ವರ್ಷಗಳು ಸಂದ

ಬಳಿಕ ಸ್ವದೇಶಕ್ಕೆ ಹೋಗಿ, ಬಾಲ್ಯವನ್ನು ಕಳೆದ ಸ್ಥಳದಲ್ಲಿಯೇ ಉಳಿದ ಆಯುಷ್ಯದ ದಿವಸಗಳನ್ನು ಸ್ವಸ್ಥ ಚಿತ್ತದಿಂದ ಕಳೆಯಬೇಕೆಂತಲೂ, ಪ್ರವಾಸದಲ್ಲಿ ನಾನು ನೋಡಿದಂಥ ಮತ್ತು ಕೇಳಿದಂಥ ಸೋಜಿಗದ ಸಂಗತಿಗಳನ್ನು ಬಾಲ್ಯದ ಗೆಳೆಯರಿಗೆ ಹೇಳಿ, ಅವರನ್ನು ಸಂತೋಷಪಡಿಸಬೇಕೆಂತಲೂ, ಆನಂದದಿಂದ ವೇಳೆಯನ್ನು ವೆಚ್ಚ ಮಾಡಬೇಕೆಂತಲೂ, ಪ್ರವಾಸದಿಂದ ಆದ ಶ್ರಮವನ್ನು ಹೋಗಲಾಡಿಸಿ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂತಲೂ ನನಗೆ ಇಚ್ಛೆಯಾಯಿತು. ನಾನು ನಟ್ಟನಡುವೆ ಕೂತಿರುವೆನು, ನನ್ನ ಸುತ್ತಲು ಚಿಕ್ಕಂದಿನಲ್ಲಿ ಹುಡುಗಾಟವನ್ನು ಆಡಿ ಆನಂದದಿಂದ ಕಾಲ ಕಳೆದಂಥ ಬಾಲ್ಯದ ಗೆಳೆಯರು ಕೂತಿರುವರು, ನಾನು ಅವರಿಗೆ ಹೇಳುವ ಸೋಜಿಗದ ಸಂಗತಿಗಳನ್ನು ಕೇಳಿ ಅವರು ಆಶ್ಚರ್ಯಪಡುತ್ತಿರುವರು, ನಾನು ಮಾಡುವ ಉಪದೇಶವನ್ನು ಚಿತ್ತಗೊಟ್ಟು ಆಲಿಸುವರು ಮುಂತಾದ ಕಲ್ಪನೆಗಳು ಮೇಲೆ ಮೇಲೆ ನನ್ನ ಮನಸ್ಸಿನಲ್ಲಿ ಬರಹತ್ತಿದವು. ”

ಈ ತೆರದ “ ವಿಚಾರಗಳು ನನ್ನ ಮನಸ್ಸಿನಲ್ಲಿ ಬಂದದರಿಂದ ಆದಷ್ಟು ತೀವ್ರ ಸ್ವದೇಶಕ್ಕೆ ಹೋಗಬೇಕೆಂಬ ಕುತೂಹಲವು ಹುಟ್ಟಿತು. ಯಾವದಾದರೊಂದು ಕೆಲಸದಲ್ಲಿ ಒಂದು ಕ್ಷಣಹೊತ್ತು ವೆಚ್ಚವಾಯಿತೆಂದರೆ ಸ್ವದೇಶಕ್ಕೆ ಹೋಗುವದಕ್ಕೆ ಅಷ್ಟು ತಡವಾಯಿತಲ್ಲ ಎಂದು ನನಗೆ ಖೇದವಾಗುತ್ತಿತ್ತು. ತರುವಾಯ ಬಹಳ ತ್ವರೆಯಿಂದ ನಾನು ಈಜಿಪ್ತ ದೇಶಕ್ಕೆ ಬಂದೆನು ; ಮತ್ತು ನನ್ನ ಊರಿಗೆ ಹೋಗಬೇಕೆಂಬ ಆತುರವು ನನಗೆ ಇಷ್ಟು ಇದ್ದಾಗ್ಯೂ, ಈಜಿಪ್ತದೇಶದ ಪ್ರಾಚೀನ ವೈಭವವನ್ನು ನೋಡುವದಕ್ಕಾಗಿಯೂ, ಮತ್ತು ಆ ದೇಶದ ಪ್ರಾಚೀನ ವಿದ್ಯೆಗಳ ಅವಶೇಷವನ್ನು ಪರಿಶೋಧಿಸಿ ಅವುಗಳ ಜ್ಞಾನ ಮಾಡಿಕೊಳ್ಳುವದಕ್ಕಾಗಿಯೂ, ಹತ್ತು ತಿಂಗಳುಗಳ ವರೆಗೆ ನಾನು ಅಲ್ಲಿ ನಿಂತೆನು. ಅಲ್ಲಿಂದ ಆ ದೇಶದ ರಾಜಧಾನಿಯಾದ ಕೇರೋ ಪಟ್ಟಣಕ್ಕೆ ಬಂದೆನು. ಪೃಥ್ವಿಯೊಳಗಿನ ಯಾವತ್ತು ಜನಾಂಗದವರು ಅಲ್ಲಿ ಬಂದು ವಾಸಿಸುತ್ತಾರೆ, ಕೆಲವರು ವಿದ್ಯೆಗಳಿಸುವದಕ್ಕಾಗಿಯೂ, ಹಲವರು ಉದ್ಯೋಗಮಾಡಿ ಹಣದೊರಕಿಸುವದಕ್ಕಾಗಿಯೂ, ಕೆಲವರು ಸ್ವೇಚ್ಛೆಯಿಂದ ನಡೆಯಬೇಕೆಂಬ ಉದ್ದೇಶವನ್ನು ಕೊನೆಗಾಣಿಸುವದಕ್ಕಾಗಿಯೂ, ಹಲವರು ತಾವು ಯಾವ ಬಗೆಯಿಂದ ನಡೆಯುತ್ತಾರೆಂಬುವದು ಜನರಿಗೆ ತಿಳಿಯಬಾರದೆಂಬ ಇಚ್ಛೆಯನ್ನು ಪೂರ್ಣ ಮಾಡುವದಕ್ಕಾಗಿಯೂ, ಆ ಪಟ್ಟಣಕ್ಕೆ ಬರುತ್ತಾರೆ ಕೇರೋವಿನಂಥ ಜನಭರಿತವಾದ ಪಟ್ಟಣದಲ್ಲಿ ನಾಲ್ಕು ಮಂದಿಯು ಸ್ನೇಹ ಸಂಪಾದಿಸಿ, ಆನಂದದಿಂದ ವೇಳೆಗಳೆಯಲಿಕ್ಕೂ ಅನುಕೂಲವಿರುತ್ತದೆ, ಮತ್ತು ಏಕಾಂತವಾಸದಲ್ಲಿ ಕುಳಿತು ಆನಂದಪಡಲಿಕ್ಕೂ ಅನುಕೂಲವಿರುತ್ತದೆ. ”

“ ಕೇರೋ ಪಟ್ಟಣದಿಂದ ನಾನು ಸುಯೇಜಕ್ಕೆ ಬಂದೆನು. ಅಲ್ಲಿಂದ ಹಡಗ ವನ್ನೇರಿ ಕೆಂಪು ಸಮುದ್ರದ ದಂಡೆಗುಂಟ ಪ್ರವಾಸ ಮಾಡುತ್ತ ಇಪ್ಪತ್ತು ವರ್ಷಗಳ ಹಿಂದೆ ಪರದೇಶಗಳನ್ನು ನೋಡಬೇಕೆಂಬ ಉದ್ದೇಶದಿಂದ ಯಾವ ಬಂದರದಿಂದ ಹೊರಟಿದ್ದೆನೋ ಆ ಬಂದರಕ್ಕೆ ಬಂದು ಮುಟ್ಟಿದೆನು. ಅಲ್ಲಿಂದ ನನ್ನ ದೇಶದೊಳಗೆ ಹೋಗುವದೊಂದು ವರ್ತಕರ ತಂಡದೊಳಗೆ ಕೂಡಿಕೊಂಡು ನನ್ನ ದೇಶಕ್ಕೆ ಹೊರಟೆನು. ”

“ನಾನು ಬಹಳ ದಿವಸದ ಮೇಲೆ ಸುಖರೂಪವಾಗಿ ನನ್ನ ಊರಿಗೆ ಬಂದದ ರಿಂದ ನನ್ನನ್ನು ನೋಡಿ, ನನ್ನ ಆಪ್ತ ಇಷ್ಟರಿಗೂ ನನ್ನ ಸ್ನೇಹಿತರಿಗೂ ಪರಮಾ ನಂದವಾಗಬಹುದೆಂದು ನಾನು ತಿಳುಕೊಂಡಿದ್ದೆನು. ಮತ್ತು ನನ್ನ ತಂದೆಯು ಗಂಡ್ಸಿನ ಮೇಲೆ ಒಳ್ಳೇ ಲೋಭವುಳ್ಳವನಿದ್ದಾಗ್ಯೂ, ಹೆಸರು ತರುವಂಥ, ಜನರ ಕಲ್ಯಾಣಕ್ಕೆ ಕಾರಣವಾದಂಥ ವಿದ್ಯವನ್ನು ಸಂಪಾದಿಸಿಕೊಂಡು ಬಂದ, ತನ್ನ ಮಗನಾದ ನನ್ನನ್ನು ಒಳ್ಳೇ ಪ್ರೀತಿಯಿಂದ ಅಪ್ಪಿಕೊಳ್ಳುವನೆಂತಲೂ, ಬಹು ಜನರ ಸುಖಕ್ಕೂ ಸನ್ಮಾ ನಕ್ಕೂ ಸಾಧನವಾದ ನನ್ನ ವಿದ್ಯವನ್ನು ನೋಡಿ ಅವನಿಗೆ ಆನಂದವಾಗುವದೆಂತಲೂ ನಾನು ಆಶೆ ಮಾಡಿದ್ದೆನು. ಆದರೆ ತೀವ್ರವೇ ನನ್ನ ಮನೋರಾಜ್ಯವು ಲಯವಾಯಿತು. ನಾನು ನನ್ನ ಊರಿಗೆ ಹೋಗಿ ಶೋಧಮಾಡಲು, ೧೪ ವರ್ಷಗಳ ಪೂರ್ವದಲ್ಲಿಯೇ ನನ್ನ ತಂದೆಯು ತೀರಿಕೊಂಡನೆಂತಲೂ, ಸಾಯುವಕಾಲಕ್ಕೆ ತನ್ನ ಎಲ್ಲ ಬದುಕನ್ನು ಅವನು ನನ್ನ ಅಣ್ಣತಮ್ಮಂದಿರಿಗೆ ಹಂಚಿಕೊಟ್ಟನೆಂತಲೂ, ಆ ನನ್ನ ಅಣ್ಣ ತಮ್ಮಂದಿರು ಆ ಊರು ಬಿಟ್ಟು ಪರಊರಿಗೆ ಹೋಗಿದ್ದಾರೆಂತಲೂ ನನಗೆ ತಿಳಿ ಯಿತು. ನನ್ನ ಸ್ನೇಹಿತರಲ್ಲಿ ಎಷ್ಟೋ ಮಂದಿ ಸತ್ತು ಹೋಗಿದ್ದರು; ಉಳಿದವರಲ್ಲಿ ಕೆಲವರಿಗೆ ನನ್ನ ಗುರ್ತುಹತ್ತುವದೇ ಬಹಳ ಕಷ್ಟವಾಯಿತು. ಮತ್ತೆ ಕೆಲವರು ಪರ ದೇಶದ ನಡೆನುಡಿಗಳಿಂದ ನಾನು ಭ್ರಷ್ಟನಾಗಿರುವೆನೆಂದು ತಿಳಿದುಕೊಂಡರು. ”

“ ಸುಖದುಃಖಗಳ ಅನೇಕ ಪ್ರಸಂಗಗಳನ್ನು ನೋಡಿದಂಥ ಮನುಷ್ಯನು ಉದಾಸೀನನಾಗುವದಿಲ್ಲ; ಒಮ್ಮೆ ಉದಾಸೀನನಾದರೂ ಅವನ ಔದಾಸೀನ್ಯವು ತೀವ್ರವೇ ಅಳಿದು ಹೋಗುತ್ತದೆ. ಈ ನಿಯಮವನ್ನನುಸರಿಸಿ, ನಿರಾಶೆಯಿಂದಾದ ದುಃಖವನ್ನು ನಾನು ತೀವ್ರವೇ ಮರೆತು ಬಿಟ್ಟೆನು. ಆ ಮೇಲೆ ಊರೊಳಗಿನ ಪ್ರಮುಖ ಜನರ ಸ್ನೇಹ ಸಂಪಾದಿಸಲು ಯತ್ನಿಸಿದೆನು. ಅದರಲ್ಲಿ ನನಗೆ ಯಶ ಬಂತು. ಅವರು ನನ್ನನ್ನು ಊಟಕ್ಕೆ ಕರೆದು ನನ್ನ ಪ್ರವಾಸದ ವೃತ್ತಾಂತವನ್ನು ಮನಮುಟ್ಟಿ ಕೇಳುತ್ತಿದ್ದರು. ಆದರೆ ಕೆಲವು ದಿವಸಗಳ ಮೇಲೆ ಅವರು ನನಗೆ ತುಸು ಅನಾದರ ಮಾಡಹತ್ತಿದ್ದರಿಂದ ಅವರ ಸ್ನೇಹ ಬಿಟ್ಟುಕೊಟ್ಟೆನು. ಅನಂತರ ಆ ಊರಲ್ಲಿ ನಾನು ಒಂದು ಶಾಲೆಯನ್ನು ಹಾಕಿದೆನು. ಆದರೆ ಊರಿನ ಜನರು

ನನಗೆ ಕಲಿಸಲಿಕ್ಕೆ ಪ್ರತಿಬಂಧ ಮಾಡಿದರು. ತರುವಾಯ ಮನೆಯಲ್ಲಿ ಸುಮ್ಮನೆ ಕೂತುಕೊಂಡು ಹೊತ್ತುಗಳೆಯಬೇಕೆಂದು ಯೋಚಿಸಿ, ನನ್ನ ಸಂಭಾಷಣಕ್ಕೆ ಲುಬ್ಧಳಾದ ಒಬ್ಬ ಅವಿವಾಹಿತ ಸ್ತ್ರೀಗೆ ನನ್ನ ಲಗ್ನವಾಗೆಂದು ಕೇಳಲು, ಆಕೆಯು "ನಿನ್ನ ತಂದೆಯು ವರ್ತಕನಾಗಿದ್ದವರಿಂದ ನಾನು ನಿನ್ನನ್ನು ಮದುವೆಮಾಡಿಕೊಳ್ಳುವದಿಲ್ಲೆಂದು." ಅಂದಳು.

"ಕಟ್ಟಕಡೆಗೆ ಆರ್ಜವವನ್ನು ಮಾಡುವದೂ, ಅವರು ನನ್ನನ್ನು ತುಚ್ಛವಮಾಡಿದರೆ ಅದನ್ನು ಸಹನ ಮಾಡಿಕೊಳ್ಳುವದೂ ನನಗೆ ತೀರ ಬೇಡಾಯಿತು. ಜನರು ಪೂರ್ಣ ವಿಚಾರಮಾಡದೆ ಮನಸ್ಸಿಗೆ ಬಂದಂತೆ ಒಬ್ಬರ ವಿಷಯಕ್ಕೆ ತಮ್ಮ ಅಭಿಪ್ರಾಯವನ್ನು ಕೊಡುವದರಿಂದ ಅವರ ಮೇಲೆ ಅವಲಂಬಿಸಿದರೆ ಅಂಥ ಜನರಿರುವ ಜಗತ್ತನ್ನೇ ಬಿಟ್ಟುಕೊಟ್ಟು ಎಲ್ಲಿಯಾದರೂ ಹೋಗಿರಬೇಕೆಂದು ನಾನು ನಿಶ್ಚಯಿಸಿದೆನು. ಆದದರಿಂದ ಆನಂದಗುಹೆಯ ಬಾಗಿಲ ತೆಗೆಯುವ ದಾರಿಯನ್ನು ನಿರೀಕ್ಷಿಸುತ್ತ ಕೂತಿದ್ದೆನು. ಆ ಗುಹೆಯಲ್ಲಿ ಒಮ್ಮೆ ಹೋದೆನೆಂದರೆ ಜನರಿಂದ ನನಗೇನಾದರೂ ಲಾಭವಾದೀತೆಂಬ ಆಶೆಯೂ, ಅವರಿಂದೇನಾದರೂ ಹಾನಿಯಾದೀತೆಂಬ ಅಂಜಿಕೆಯೂ ಇಲ್ಲದಂತಾಗುವವೆಂದು ನಾನು ನಿಶ್ಚಯವಾಗಿ ತಿಳಿದುಕೊಂಡಿದ್ದೆನು. ಕಡೆಗೆ ಒಂದುದಿನ ಆನಂದಗುಹೆಯ ಬಾಗಿಲು ತೆರೆಯಲ್ಪಟ್ಟಿತು; ನನ್ನ ಕೃತ್ಯವು (ಕಾವ್ಯವು) ಬಾದಶಹನ ಮನಸ್ಸಿಗೆ ಬಂತು; ನನ್ನ ವಿಷಯಕ್ಕೆ ಅವನ ಅಭಿಪ್ರಾಯವು ಅನುಕೂಲವಾಗಿತ್ತು; ನನಗೆ ಆನಂದಗುಹೆಯಲ್ಲಿ ಇರಲಪ್ಪಣೆಯನ್ನಿತ್ತರು; ಮತ್ತು ನಾನು ಶಾಶ್ವತವಾದ ಈ ಸೆರೆಮನೆಯಲ್ಲಿ ಸ್ವಸಂತೋಷದಿಂದ ಬಂದು ಬಿದ್ದೆನು."

ರಾಜಪುತ್ರನುः—"ಒಳ್ಳೇದು ಹಾಗಾದರೆ ಇಲ್ಲಿಯಾದರೂ ನಿಮ್ಮ ಮನಸ್ಸಿಗೆ ತಕ್ಕ ಸೌಖ್ಯವು ನಿಮಗುಂಟಾಗುವದೊ? ಗುಹೆಯಲ್ಲಿರುವದು ನಿಮಗೆ ಆನಂದದಾಯಕವೆನಿಸುವದೊ? ಇಲ್ಲವೆ ಇಲ್ಲಿಂದ ಮತ್ತೆ ಹೊರಬಿದ್ದು ಪುನಃ ದೇಶದೇಶ ತಿರುಗಿ ಶೋಧ ಮಾಡುವದು ನಿಮಗೆ ಸಂತೋಷಕರವಾಗುವದೊ ? ಸ್ಪಷ್ಟವಾಗಿ ನಿಮ್ಮ ಮನಸ್ಸಿನಲ್ಲಿ ಏನೂ ಆತಂಕವನ್ನು ತರದೆ ನನಗೆ ಹೇಳಿರಿ. ಇಲ್ಲಿದ್ದ ಯಾವತ್ತು ಜನರು ತಾವು ಒಳ್ಳೇ ಭಾಗ್ಯವಂತರಾದದರಿಂದ ಇಲ್ಲಿ ಬಂದು ಬಿದ್ದೆವೆಂದು ಹೇಳಿ ಈ ಸ್ಥಳವನ್ನು ಬಲು ವರ್ಣಿಸುವದಲ್ಲದೆ, ತಮ್ಮಂತೆ ಸುಖಾನುಭವವನ್ನು ತೆಗೆದುಕೊಳ್ಳುವದಕ್ಕೆ ಎರಡನೆ ಜನರನ್ನು ಒಳಗೆ ಕರೆಯುತ್ತಾರೆ. ಬಾದಶಹನು ವರ್ಷಕ್ಕೊಮ್ಮೆ ಇಲ್ಲಿಗೆ ಬಂದು ಹೊಸ ಜನರನ್ನು ಒಳಗೆ ತೆಗೆದುಕೊಳ್ಳುತ್ತಾನೆ."

ಇಮ್ಲಾಕ:—"ರಾಜಪುತ್ರನೇ, ನಾನು ತಮಗೆ ಸತ್ಯವನ್ನೇ ಹೇಳುತ್ತೇನೆ. ಈ ಕಾರಾಗ್ರುಹದಲ್ಲಿರುವ ಎಲ್ಲ ಜನರು ತಾವು ಅತಿ ಕೆಟ್ಟ ಮುಹೂರ್ತದಿಂದ ಇಲ್ಲಿ

ಬಂದು ಬಿದ್ದೆವೆಂದು ಯಾವಾಗಲೂ ಚಿಂತಿಸುತ್ತಾರೆ. ಚಿಂತೆಮಾಡದೇ ಇರುವ ಮನುಷ್ಯನೇ ಈ ಆನಂದಗುಹೆಯಲ್ಲಿ ಸಿಕ್ಕುವಹಾಗಿಲ್ಲ. ಎಲ್ಲರೂ ತಾವು ಇಲ್ಲಿ ಬಂದ ಬಗ್ಗೆ ಪಶ್ಚಾತ್ತಾಪ ಪಡುತ್ತಾರೆ. ಇಲ್ಲಿರುವ ಯಾವತ್ತು ಜನರಿಗಿಂತಲೂ ನನಗೇ ದುಃಖವು ತುಸು ಕಡಿಮೆ. ಯಾಕಂದರೆ ನಾನು ವಿದ್ಯಾಭ್ಯಾಸವನ್ನು ಮಾಡಿರುವದರಿಂದಲೂ, ಅನೇಕ ದೇಶಗಳನ್ನು ನೋಡಿರುವದರಿಂದಲೂ, ನನ್ನ ಮನಸಿನಲ್ಲಿ ನಾನಾತರದ ಕಲ್ಪನೆಗಳು ತುಂಬಿಹೋಗಿವೆ. ಆ ಕಲ್ಪನೆಗಳನ್ನು ಮನಸ್ಸಿನಲ್ಲಿ ತಂದು ಅವುಗಳನ್ನು ಬೇರೆ ಬೇರೆ ರೀತಿಯಿಂದ ಯೋಚಿಸಿ, ನಾನು ನನ್ನ ವೇಳೆಯನ್ನು ಕಳೆಯುತ್ತೇನೆ. ಬಹುದಿವಸ ವಿಚಾರಮಾಡದೆ ಇದ್ದದರಿಂದ ಮಲಿನವಾದಂಥ ವಿಷಯಗಳನ್ನು ಪುನಃ ಮನನ ಮಾಡಿ ಅವುಗಳನ್ನು ಉಜ್ವಲಿತ ( ನೂತನ ) ಮಾಡುತ್ತೇನೆ. ನಾನು ನನ್ನ ಪ್ರವಾಸವಲ್ಲಿ ಸಂಭವಿಸಿದ ಅನೇಕ ಸಂಗತಿಗಳನ್ನು ನೆನಪಿಗೆ ತಂದು ಅವುಗಳಿಂದ ಮನಸ್ಸನ್ನು ರಂಜಿಸಿಕೊಳ್ಳುತ್ತೇನೆ. ಈ ಮೇರೆಗೆ ನನ್ನ ಮನಸ್ಸಿನ ಸಮಾಧಾನ ಮಾಡಿಕೊಳ್ಳಲಿಕ್ಕೆ ಅನೇಕ ಸಾಧನಗಳಿದ್ದಾಗ್ಯೂ ಕೂಡ, ನನ್ನ ಎಲ್ಲ ವಿದ್ಯವೂ, ಬುದಿಯೂ, ವ್ಯರ್ಥವಾದವಲ್ಲ, ಮತ್ತು ನಾನು ಈ ಪೂರ್ವದಲ್ಲಿ ಅನುಭೋಗಿಸಿದ ಸುಖಗಳನ್ನು ಪುನಃ ಅನುಭೋಗಿಸುವ ಸಂಭವ ಉಳಿಯಲಿಲ್ಲವಲ್ಲ ಎಂಬ ವಿಚಾರಗಳು ಮನಸ್ಸಿನಲ್ಲಿ ಬಂದು ನನಗೆ ಬಹಳ ವಿಷಾದವಾಗುತ್ತದೆ. ನನ್ನಂಥವನ ಅವಸ್ಥೆಯೇ ಹೀಗಾದ ಬಳಿಕ ಉಳಿದವರ ಪಾಡೇನು? ಈಗಿನ ಕ್ಷಣದಲ್ಲಿ ನಡೆದ ಸಂಗತಿಗಳ ಹೊರತು ಎರಡನೇದೇನೂ ಅವರಿಗೆ ಗೊತ್ತಿರುವದಿಲ್ಲ. ಅವರಿಗೆ ಸಂಭವಿಸುವ ಪರಿಣಾಮಗಳು ಎರಡು ವಿಧವಾಗಿರುವವು. ನಾನಾವಿಧದ ದುಷ್ಟ ಕಲ್ಪನೆಗಳು ಬಂದು ಅವರ ಮನಸ್ಸು ಕೆಟ್ಟು ಹೋಗಬೇಕು; ಇಲ್ಲವೆ ಸುಮ್ಮನೆ ಕೂತು ಕೂತು ಮೈಯಲ್ಲಿ ಆಲಸ್ಯವು ಸೇರಿ ಜೀವವು ಬೇಸರಾಗಿರಬೇಕು; ಇವಕ್ಕೂ ಹೆಚ್ಚಿನದೇನೂ ಅವರಿಗೆ ಗೊತ್ತಿರುವದಿಲ್ಲ. ”

ರಾಜಪುತ್ರನು:—“ಅವರೆ ಎದುರಾಳಿಗಳೇ ಇಲ್ಲವ ಮೇಲೆ ಸ್ಪರ್ಧೆಯು ಎಲ್ಲಿಂದ ಬರುವದು? ಸ್ಪರ್ಧೆ ಇಲ್ಲದ ಮೇಲೆ ದುಷ್ಟ ವಿಚಾರಗಳಾದರೂ ಹ್ಯಾಗೆ ಹುಟ್ಟುವವು? ನೋಡಿರಿ. ಈ ಆನಂದಗವಿಯಲ್ಲಿ ಯಾರ ಕೈಯಲ್ಲಿ ಏನೂ ಅಧಿಕಾರವಿಲ್ಲ. ಆದದರಿಂದ ದುಷ್ಟ ಕಲ್ಪನೆಗಳಿಗೆ ಆಸ್ಪದವೇ ಇಲ್ಲ. ಇಲ್ಲಿದ್ದ ಎಲ್ಲ ಜನರಿಗೂ ಒಂದೇತರದ ಸುಖಗಳುಂಟು. ಅಂದಮೇಲೆ ಒಬ್ಬರೊಬ್ಬರು ಮತ್ಸರ ಮಾಡುವ ಕಾರಣವಾದರೂ ಏನು?

ಇಮ್ಲಾಕ:—“ ಜಡಪದಾರ್ಥಾಧೀನವಾದ ಸುಖಗಳು (ಉಣ್ಣೋಣ, ತಿನ್ನೋಣ, ಉಡೋಣ, ಕೂಡ್ರೋಣ ಮುಂತಾದವು) ಬಹುತರ ಎಲ್ಲರಿಗೂ ಸರಿ

ಯಾಗಿರುತ್ತವೆಂದೆನ್ನಬಹುದು. ಆದರೆ ಎರಡನೆಯವರು ನಮ್ಮ ಮೇಲೆ ಮಾಡುವ ಪ್ರೀತಿ, ನಾವು ಎರಡನೆಯವರ ಮೇಲೆ ಮಾಡುವ ಪ್ರೀತಿ, ಅದೇ ಮೇರೆಗೆ ಪರರಿಂದ ನಾವು ಹೊಂದುವ ಮಾನ, ನಮ್ಮಿಂದ ಪರರಿಗೆ ಸಿಕ್ಕುವ ಮಾನ ಇವುಗಳಿಂದುಂಟಾಗತಕ್ಕ ಸುಖಗಳು ಎಲ್ಲರಿಗೂ ಸರಿಯಾಗುವಂತೆ ಮಾಡಲಿಕ್ಕೆ ಬರುವದಿಲ್ಲ-ಉದಾಹರಣಾರ್ಥವಾಗಿ ಎರಡನೆಯವರನ್ನು ಸಂತೋಷ ಪಡಿಸತಕ್ಕ ಗುಣವನ್ನು ತೆಗೆದುಕೊಳ್ಳೋಣ. ಈ ಗುಣವು ಕೆಲವರಲ್ಲಿ ಹೆಚ್ಚಿರುತ್ತದೆ; ಕೆಲವರಲ್ಲಿ ಕಡಿಮೆ ಇರುತ್ತದೆ. ಈ ಗುಣವು ಕಡಿಮೆ ಇದ್ದ ಮನುಷ್ಯನು ಈ ಗುಣವು ಹೆಚ್ಚಿದ್ದ ಮನುಷ್ಯನ ದ್ವೇಷ ಮಾಡದೆ ಇರಲಾರನು. ಯಾವನಿಗೆ, ತನ್ನನ್ನು ಜನರು ತಿರಸ್ಕರಿಸುತ್ತಾರೆಂದು ತಿಳಿಯುತ್ತದೋ, ಅವನು ಅವರನ್ನು ಕಂಡು ಮತ್ಸರಪಡದೆ ಇರಲಾರನು; ಮತ್ತು ತನ್ನನ್ನು ಜರಿಯುವ ಜನರ ಸಹವಾಸದಲ್ಲಿರುವ ಪ್ರಸಂಗವು ದುರ್ದೈವದಿಂದ ಬಂತೆಂದರೆ ತೀರಿತು ಹೋಯಿತು; ಅವನ ದ್ವೇಷವೂ, ಮತ್ಸರವೂ, ದುಷ್ಟಬುದ್ಧಿಯೂ ದ್ವಿಗುಣಿತವಾಗುತ್ತವೆ. ಇಲ್ಲಿರುವ ಜನರು ತಮಗೆ ಈ ಆನಂದ ಗುಹೆಯಲ್ಲಿರುವದು ಬೇಸರವಾಗಿದ್ದಾಗ್ಯೂ ಹೊಸಬರನ್ನು ಇಲ್ಲಿ ಬರುವದಕ್ಕಾಗಿ ಮನವೊಲಿಸುತ್ತಾರೆ; ಆನಂದಗುಹೆಯು ಒಗ್ಗಿ ಇಲ್ಲದ ದೊಡಿಸ್ತನವನ್ನು ಹೇಳುತ್ತಾರೆ; ಆನಂದ ಗುಹೆಯು ದುಃಖಮಯವಾಗಿದ್ದಾಗ್ಯೂ ಸೌಖ್ಯದ ಆಗರವೆಂದು ಹೊರಗಿನವರಿಗೆ ಇಲ್ಲಿರುವವರು ಹೇಳುತ್ತಾರೆ; ಇದಕ್ಕೆ ಅವರ ದುಷ್ಟತನ, ಮತ್ಸರ ಬುದ್ಧಿ, ಇವೇ ಕಾರಣ. ಒಬ್ಬರೇ ಕೂತು ಕೂತು ಬೇಸರವಾಗಿರುತ್ತದೆ; ದಿನಾಲು ಒಂದೇ ತರದ ಮನೋರಂಜನೆಯಿಂದ ಮನಸ್ಸು ದಣಿದು ಹೋಗಿರುತ್ತದೆ; ಇಲ್ಲಿದ್ದ ಜನರ ಕೂಡ ವೇಳೆಯು ಹೋಗದ ಹಾಗಾಗುತ್ತದೆ; ಆದ್ದರಿಂದ ಕೆಲವು ದಿನಗಳ ಮಟ್ಟಿಗಾದರೂ ಹೊಸತರದಿಂದ ಮನೋರಂಜನೆ ಮಾಡಿಕೊಳ್ಳುವದಕ್ಕಾಗಿ ಇಲ್ಲಿರುವವರು ಹೊಸ ಜನರನ್ನು ಒಳಗೆ ಕರೆದುಕೊಳ್ಳುತ್ತಾರೆ ತಾವು ಮೊದಲು ತಮ್ಮ ಮೂಢತನದಿಂದ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿರುವರು; ಆದರೆ ಎರಡನೆಯವರು ಸ್ವಾತಂತ್ರ್ಯ ಸುಖವನ್ನನುಭೋಗಿಸುವದನ್ನು ನೋಡಿ ಇವರು ಅಸೂಯೆ ಬಡುತ್ತಾರೆ. ಇಂಥ ಮತ್ಸರದ ಸ್ವಭಾವವುಳ್ಳ ಜನರಿಗೆ ಇಡೀ ಜಗತ್ತಿನೊಳಗಿನ ಜನರನ್ನು ಈ ಆನಂದಗವಿಯಲ್ಲಿ ತಂದು ಹಾಕುವ ಸಾಮರ್ಥ್ಯ ಉಂಟಾದರೆ ಒಳ್ಳೇ ಸಂತೋಷದಿಂದ ಇವರು ಆ ಕೆಲಸವನ್ನು ಕೈಕೊಳ್ಳುವರು; ಈ ತರದ ದುಷ್ಟಬುದ್ಧಿಯು ತಮ್ಮಲ್ಲಿದ್ದ ಬಗ್ಗೆ ಅವರಿಗೆ ಎಳ್ಳಷ್ಟು ವಿಷಾದವೆನಿಸುವದಿಲ್ಲ"

"ಆದರೆ ಮಹಾಶಯರೇ, ದೇವರ ದಯದಿಂದ ಈ ದೋಷಕ್ಕೆ ನಾನು ಇನ್ನೂ ಗುರಿಯಾಗಿಲ್ಲ. ನನ್ನ ಹೇಳಿಕೆಯು ಮೇಲಿಂದ ಈ ಸ್ಥಳಕ್ಕೆ ಬಂದು ದುಃಖದಲ್ಲಿ

ಬಿದ್ದ ಒಬ್ಬ ಮನುಷ್ಯನು ಸಹ ಇಲ್ಲಿ ಇಲ್ಲ. ವರ್ಷ ವರ್ಷಕ್ಕೆ ಸಾವಿರಾರು ಜನರು ಒಳ್ಳೇ ಪ್ರಯತ್ನಮಾಡಿ ಈ ಸೆರೆಮನೆಯಲ್ಲಿ ಬಂದು ಬೀಳುವದನ್ನು ನೋಡಿ ನನಗೆ ಬಹಳ ಕನಿಕರ ಹುಟ್ಟಿ ವ್ಯಸನವಾಗುತ್ತದೆ. ಆದರೆ ಏನು ಮಾಡಲಿ? ಉಪಾಯವಿಲ್ಲ. ಕಾಯಿದೆಯ ಪ್ರತಿಬಂಧವು ನನಗೆ ಇಲ್ಲದಿದ್ದರೆ ಇಲ್ಲಿಯ ಯಾವತ್ತೂ ದುಃಖಗಳನ್ನು ಜನರಿಗೆ ತಿಳಿಸಿ ಹೇಳಿ, ಈ ಸೆರೆಮನೆಯಲ್ಲಿ ಬಂದುಬೀಳಬೇಡಿರೆಂದು ನಾನು ಅವರಿಗೆ ಉಪದೇಶ ಮಾಡುತ್ತಿದ್ದೆನು ”

ರಾಜಪುತ್ರನು :—“ ಪ್ರಿಯ ಇಮ್ಲಾಕನೇ, ನಾನು ನನ್ನ ಹೊಟ್ಟೆಯೊಳಗಿನ ಮಾತು ನಿನಗೆ ಹೇಳುತ್ತೇನೆ. ಈ ಗವಿಯಲ್ಲಿ ಇದ್ದು ಇದ್ದು ನನಗೆ ಬಹಳ ಬೇಸರಬಂದಿದೆ; ಮತ್ತು ಇಲ್ಲಿಂದ ಪಾರಾಗಿ ಹೋಗಬೇಕೆಂದು ಬಹು ದಿವಸದಿಂದ ನಾನು ಹಂಚಿಕೆ ಹಾಕಹತ್ತಿದ್ದೇನೆ; ನಾನು ಈ ಗವಿಯ ಸುತ್ತಲಿನ ಯಾವತ್ತು ಪರ್ವತಗಳನ್ನು ಹತ್ತಿನೋಡಿದ್ದೇನೆ; ಆದರೆ ಪಾರಾಗಿಹೋಗುವ ಮಾರ್ಗವೇ ದೊರೆಯಲಿಲ್ಲ. ಈ ಸೆರೆಮನೆಯೊಳಗಿಂದ ಪಾರಾಗಿ ಹೋಗುವ ಉಪಾಯವನ್ನು ತೋರಿಸಿಕೊಡು; ನೀನು ನನ್ನಸಂಗಡ ಹೊರಗೆ ಬಾ; ನೀನು ಹೇಳಿದ ಕಡೆಗೆ ನಾನು ತಿರುಗುವೆನು; ನನಗಾಗುವ ಸುಖದುಃಖಗಳಲ್ಲಿ ನೀನು ಪಾಲಗಾರನಾಗು, ಮತ್ತು ನೀನು ಹೇಳಿದ ಮೇರೆಗೆ ಸಂಸಾರದಲ್ಲಿ ನಡೆಯುವ ಒಂದು ಮಾರ್ಗವನ್ನು ಆರಿಸಿ ಅದನ್ನು ಸ್ವೀಕರಿಸುವೆನು. ಸಾರಾಂಶ ನನಗೆ ನೀನು ಎಲ್ಲ ವಿಷಯದಲ್ಲೂ ಗುರುವಾಗು.”

ಇಮ್ಲಾಕ:—“ನೀವು ಆನಂದಗುಹೆಯೊಳಗಿಂದ ಪಾರಾಗಿ ಹೋಗುವದು ಬಹು ಪ್ರಯಾಸದಮಾತು; ಒಂದುವೇಳೆ ಪ್ರಯಾಸಬಟ್ಟು ಹೊರಗೆ ಹೋದಬಳಿಕ ತೀವ್ರವೇ ನಿಮಗೆ ಪಶ್ಚಾತ್ತಾಪವಾದೀತು. ಈಗ ತಮಗೆ ಈ ಗವಿಯ ಹೊರಗಿನ ಜಗತ್ತು ಇಲ್ಲಿರುವ ತಿಳಿಗೊಳದ ನೀರಿನಂತೆ ಶಾಂತವಾದದ್ದೂ, ರಮಣೀಯವಾದದ್ದೂ ಇರುವಂತೆ ತೋರುತ್ತಿರಬಹುದು, ಆದರೆ ನಿಜವಾಗಿ ಅದು ಬಿರುಗಾಳಿಗಳಿಂದ ಕ್ಷುಬ್ಧವಾದಂಥ ಜಲಭ್ರಮಣಗಳಿಂದ ಕುದಿಯುತ್ತಿರುವಂಥ ಸಮುದ್ರದೋಪಾದಿಯಲ್ಲಿ ಭಯಂಕರವಾದದ್ದಿರುತ್ತದೆಂದು ನೀವು ಇಲ್ಲಿಂದ ಹೊರಬಿದ್ದ ಕೂಡಲೆ ನಿಮಗೆ ಕಂಡುಬರುವದು; ಮೇಲೆ ಹೇಳಿದಂತೆ ಸಮುದ್ರ ಸದೃಶವಾದಂಥ ಜಗತ್ತಿನಲ್ಲಿ ಒಮ್ಮೊಮ್ಮೆ ನಾಲ್ಕೂ ಕಡೆಯಲ್ಲಿಯೂ ಎದ್ದ ಕ್ರೌರ್ಯವೆಂಬ ತೆರೆಗಳೊಳಗೆ ತಾವು ಒಂದುವೇಳೆ ಮುಳುಗಿ ಹೋಗಬಹುದು; ಒಮ್ಮೊಮ್ಮೆ ವಿಶ್ವಾಸಘಾತವೆಂಬ ಬಂಡೆಗಲ್ಲುಗಳಿಗೆ ಬಡಿದು ಚೂರುಚೂರಾಗುವ ಪ್ರಸಂಗವು ಬರಬಹುದು ಜಗತ್ತಿನೊಳಗಿನ ಅನ್ಯಾಯ, ಕಪಟ, ಈರ್ಷೆ, ಸ್ಪರ್ಧೆ, ಚಿಂತೆ ಮುಂತಾದವುಗಳ

ಗದ್ದಲದಲ್ಲಿ ಬಿದ್ದಿತೆಂದರೆ, ಆನಂದಗುಹೆಯನ್ನು ಬಿಟ್ಟು ಬಂದದ್ದು ಎಷ್ಟು ಮೂರ್ಖತನವಾಯಿತು ! ಅಲ್ಲಿಯೇ ಸುಮ್ಮನೆ ಯಾಕೆ ಇರಲಿಲ್ಲ ? ಎಂದು ಪಶ್ಚಾತ್ತಾಪವಾಗಿ, ಇನ್ನು ಈ ಜಗತ್ತು ಬೇಡ, ಇಲ್ಲಿಯ ಅನರ್ಥಗಳು ಬೇಡ, ಆನಂದಗುಹೆಯ ಹೊರಗೆ ಬರುವ ಇಚ್ಛೆಯು ಬೇಡೆಂದು ತಮಗೆ ಅನಿಸೀತು. ಇದರ ಬಗ್ಗೆ ಮೊದಲೇ ವಿಚಾರ ಮಾಡುವದು ಒಳ್ಳೇದೆಂದು ನನಗೆ ಕಂಡು ಬರುತ್ತದೆ. ”

ರಾಜಪುತ್ರನು:—“ನಾನು ಮಾಡಿದ ನಿಶ್ಚಯವನ್ನು ತಿರುಗಿಸಲು ಯತ್ನಿಸಬೇಡ. ನೀನು ನೋಡಿದ್ದನ್ನೆಲ್ಲ ನೋಡಬೇಕೆಂಬ ಆತುರವು ನನಗೆ ಬಹಳ ಅದೆ. ಈ ಆನಂದಗುಹೆಯಲ್ಲಿರುವದು ನಿನಗೂ ಬೇಸರ ಬಂದದೆ ಎಂದಮೇಲೆ, ಹೊರಗಿನ (ಜಗತ್ತಿನ) ಸ್ಥಿತಿಯು ಎಷ್ಟು ಕೆಟ್ಟದಿದ್ದರೂ ಇಲ್ಲಿಯಷ್ಟು ಕೆಟ್ಟದಿರಲಿಕ್ಕಿಲ್ಲೆಂಬುವದು ತನಗೆ ತಾನೇ ಸಿದ್ಧವಾಗುತ್ತದೆ. ಆದದರಿಂದ, ಆದದ್ದಾಗಲಿ, ನಾನು ಇಲ್ಲಿಂದ ಹೊರಬಿದ್ದು, ಜಗತ್ತಿನೊಳಗಿನ ಮನುಷ್ಯರ ಬೇರೆ ಬೇರೆ ಸ್ಥಿತಿಗಳನ್ನು ಪ್ರತ್ಯಕ್ಷ ನೋಡಿ, ಆ ಸ್ಥಿತಿಯಲ್ಲಿ ನನಗೆ ಉತ್ತಮವಾಗಿ ತೋರುವ ಸ್ಥಿತಿಯನ್ನು ಆರಿಸಿ, ನನ್ನ ಮನಸ್ಸಿಗೆ ಬಂದರೆ ಅವನ್ನು ಸ್ವೀಕರಿಸುವೆನು. ಇದೇ ನನ್ನ ದೃಢನಿಶ್ಚಯವು. ”

ಇಮ್ಲಾಕ:—“ನಾನು ನಿಮಗೆ ಹೊರಗೆ ಹೋಗಬೇಡಿರೆಂದು ಹೇಳಿದ್ದು ನಿಮ್ಮ ಮನಸ್ಸಿಗೆ ವಿರುದ್ಧವಾದದರಿಂದ ಇದೊಂದು ಪ್ರತಿಬಂಧವಾಯಿತೆಂದು ನಿಮಗೆ ತೋರಬಹುದು; ಅಂದರೆ ಇಲ್ಲಿಂದ ಪಾರಾಗಿ ಹೋಗಲಿಕ್ಕೆ ನನ್ನ ಭಾಷಣಕ್ಕಿಂತಲೂ ಬಹಳ ಬಲವುಳ್ಳ ಅನೇಕ ತೊಂದರೆಗಳುಂಟು. ಇರಲಿ, ತೊಂದರೆಗಳೆಷ್ಟು ಬಂದಾಗ್ಯೂ ಧೈರ್ಯಗುಂದುವದಕ್ಕೆ ನಾನು ಎಂದೂ ಉಪದೇಶ ಮಾಡುವದಿಲ್ಲ. ಯಾಕಂದರೆ ಉದ್ಯೋಗ ಮತ್ತು ಚಾತುರ್ಯ ಇವೆರಡಿದ್ದರೆ ಅಸಾಧ್ಯವಾದ ಸಂಗತಿಯೇ ಜಗತ್ತಿನಲ್ಲಿಲ್ಲ. ”

## ಹದಿಮೂರನೆಯ ಭಾಗ.

### ರಾಸೆಲಾಸನಿಗೆ ಗವಿಯೊಳಗಿಂದ ಪಾರಾಗಿ ಹೋಗುವ ಹಂಚಿಕೆಯು ಗೊತ್ತಾಯಿತು.

ಅನಂತರ ರಾಜಪುತ್ರನು ತನ್ನ ಪ್ರಿಯತಮನಾದ ಇಮ್ಲಾಕನಿಗೆ ವಿಶ್ರಾಂತಿ ತೆಗೆದುಕೊಳ್ಳುವದಕ್ಕೆ ಹೋಗೆಂದು ಹೇಳಿದನು. ಅವನು ಹೇಳಿದ ಸೋಜಿಗದ ಮತ್ತು ಹೊಸ ಹೊಸ ಸಂಗತಿಗಳು ರಾಜಪುತ್ರನ ಮನಸ್ಸಿನಲ್ಲಿ ಪೂರಾ ನೆಲೆಗೊಂಡು

ಮನಸ್ಸು ಚಂಚಲವಾಯಿತು. ಅವನು ಆ ಸಂಗತಿಗಳನ್ನು ಮೇಲೆ ಮೇಲೆ ನೆನಪಿಗೆ ತಂದು, ಚನ್ನಾಗಿ ಮನನ ಮಾಡಿ ತನಗೆ ಬಂದ ಸಂಶಯಗಳ ನಿವಾರಣೆಕ್ಕೋಸ್ಕರ ಸಾವಿರಾರು ಪ್ರಶ್ನೆಗಳನ್ನು ತೆಗೆದು ಮರುದಿನ ಇವಮ್ಲಾಕನು ಬಂದ ಕೂಡಲೆ ಕೇಳ ಬೇಕೆಂದು ಗೊತ್ತುಮಾಡಿದನು.

ಇವಮ್ಲಾಕನ ಗುರುತಾದಂದಿನಿಂದ ರಾಜಪುತ್ರನ ಮನಸ್ಸಿನ ಅಸಮಾಧಾನವು ಎಷ್ಟೋ ಕಡಿಮೆಯಾಯಿತು. ಆತನಿಗೆ ತನ್ನ ಮನಸ್ಸಿನೊಳಗಿನ ಗುಟ್ಟುಗಳನ್ನು ಹೇಳುವದಕ್ಕೆ ಒಬ್ಬ ಮಿತ್ರನು ಸಿಕ್ಕಿದಂತಾಯಿತು ; ಮತ್ತು ತನ್ನ ಉದ್ದೇಶಗಳನ್ನು ಸಿದ್ಧಗೊಳಿಸುವದಕ್ಕೆ ಸಾಕಷ್ಟು ಅನುಭವವು ಆ ಮಿತ್ರನಿಗೆ ಉಂಟೆಂದು ಆತನು ಮನಗಂಡನು. ಇಷ್ಟು ದಿವಸಗಳ ವರೆಗೆ ತನಗೆ ಆದ ದುಃಖಗಳನ್ನು ತನ್ನೊಳಗೆ ತಾನೇ ನುಂಗಿಕೊಳ್ಳಬೇಕಾಗುತ್ತಿತ್ತು. ಇನ್ನು ಮೇಲೆ ಹಾಗೆ ಮಾಡುವ ಅವಶ್ಯಕತೆ ಉಳಿಯಲಿಲ್ಲ. ಇವಮ್ಲಾಕನಂಥ ಮಿತ್ರನ ಸಹವಾಸವಿದ್ದರೆ, ಆನಂದಗುಹೆಯೂ ಕೂಡ, ಸೌಖ್ಯದ ಆಗರವಾಗಬಹುದೆಂದು ಅವನು ತಿಳಿದುಕೊಂಡನು. ಇನ್ನು ಅವನ ( ಇವಮ್ಲಾಕ ) ಕೂಡ ಹೊರಗೆ ಬಂದು ಇಡೀ ಜಗತ್ತಿನಲ್ಲೆಲ್ಲ ತಿರುಗಾಡಿದ ರಂತೂ ತೀರೇಹೋಯಿತು. ಆ ಸೌಖ್ಯದ ಮುಂದೆ ಇಂದ್ರಪದದ ಸೌಖ್ಯವು ಸಹ ಅವನಿಗೆ ತುಚ್ಛವಾಗುವದು.

ಮುಂದೆ ತುಸು ದಿವಸಗಳಲ್ಲಿಯೇ ಆನಂದಗುಹೆಯ ಮಧ್ಯದಲ್ಲಿದ್ದ ಕೆರೆಯೊಳಗಿನ ನೀರು ಇಂಗಿ ನೆಲವು ಒಣಗಿತು. ಆಗ ರಾಜಪುತ್ರನೂ ಇವಮ್ಲಾಕನೂ ಯಾರಿಗೂ ತಿಳಿಯದಂತೆ ಏಕಾಂತದಲ್ಲಿ ಸಂಭಾಷಣ ಮಾಡುವದಕ್ಕಾಗಿ ಇಬ್ಬರೂ ಕೂಡಿ ದಿನಾಲು ತಿರುಗಾಡುತ್ತ ಹೋಗುತ್ತಿದ್ದರು. ಆ ಗವಿಯೊಳಗಿಂದ ಪಾರಾಗಿ ಹೋಗುವ ವಿಚಾರವು ರಾಜಪುತ್ರನ ಮನಸ್ಸಿನಲ್ಲಿ ಯಾವಾಗಲೂ ಮನೆಮಾಡಿ ಕೊಂಡಿತ್ತಾದದರಿಂದ, ಅವರು ತಿರುಗುತ್ತ ತಿರುಗುತ್ತ ಒಂದು ದಿನ ಆ ಗುಹೆಯ ಅಗಸೇಬಾಗಿಲಿನ ಹತ್ತರ ಬಂದಕೂಡಲೆ, ರಾಜಪುತ್ರನು ಆ ಅಗಸೇ ಬಾಗಿಲನ್ನು ಉದ್ದೇಶಿಸಿ ಅಂದನು " ಎಲೈ ಬಾಗಿಲೆ ! ನೀನು ಇಷ್ಟು ಬಲವುಳ್ಳವನೂ, ಮನುಷ್ಯನು ಇಷ್ಟು ಬಲಹೀನನೂ ಯಾಕೆ ಇರಬೇಕು ? "

ಇವಮ್ಲಾಕನು—"ಮನುಷ್ಯನು ದುರ್ಬಲನಲ್ಲ. ಮನುಷ್ಯರಲ್ಲಿರುವ ಜ್ಞಾನ ಶಕ್ತಿಯು ಇತರ ಎಲ್ಲ ಶಕ್ತಿಗಳಿಂದಲೂ ಹೆಚ್ಚಿನದಿರುತ್ತದೆ. ಯಂತ್ರವಿದ್ಯೆದಲ್ಲಿ ನಿಪುಣನಾಗಿದ್ದವನು ಜಡಪದಾರ್ಥಗಳ ಶಕ್ತಿಯನ್ನು ಏನೂ ಲೆಕ್ಕಿಸುವದಿಲ್ಲ ; ಅವುಗಳನ್ನು ನೋಡಿ ಅವನು ನಗುತ್ತಾನೆ. ನಾನು ಈ ಬಾಗಿಲವನ್ನು ಒಂದರಗಳಿಗೆಯೊ

ಳಗೆ ಮುರಿದು ಚಲ್ಲಿಬಿಟ್ಟೇನು ; ಆದರೆ ಆ ಕೆಲಸವು ಮುಚ್ಚುಮರೆಯಿಂದಾಗಲಾರದು. ಆದವರಿಂದ ಇಲ್ಲಿಂದ ಪಾರಾಗಿ ಹೋಗಬೇಕಾದರೆ ಬೇರೊಂದು ಹಂಚಿಕೆಯನ್ನು ಹಾಕಬೇಕು."

ಒಂದಾನೊಂದು ದಿವಸ ಅವರಿಬ್ಬರು ಗುಡ್ಡಗಳ ಬದಿಯಿಂದ ತಿರುಗಾಡುತ್ತಿರುವಾಗ ಆ ಗುಡ್ಡಗಳ ಸುತ್ತಲೂ ಬೆಳೆದ ಗಿಡಗಳ ಗುಂಪಿನಲ್ಲಿ ಸೇರಿಕೊಂಡು ಕುಳಿತಿರುವ ಕೆಲವು ಮೊಲಗಳನ್ನು ನೋಡಿದರು. ಮಳೆಗಾಲದಲ್ಲಿ ಕೆರೆ ತುಂಬಿ ಹೆಚ್ಚಾದ ನೀರು ನಾಲ್ಕೂ ಕಡೆಗೆ ಹರಿದುಹೋಗಿ, ಆ ಮೊಲಗಳ ಗುದ್ದುಗಳಲ್ಲಿ ಸೇರಿದ್ದರಿಂದ; ಅವು ತಮ್ಮ ಗುದ್ದುಗಳನ್ನು ಬಿಟ್ಟುಕೊಟ್ಟು, ಗಿಡಗಳ ಗುಂಪಿನಲ್ಲಿ ಎತ್ತರವಾದ ಸ್ಥಳದಲ್ಲಿ ಮೂರು ಮೂಲೆಯು ಗುದ್ದುಗಳನ್ನು ಮಾಡಿಕೊಂಡು ಅಲ್ಲಿರುತ್ತಿದ್ದವು. ಅವುಗಳನ್ನು ನೋಡಿ ರಾಜಪುತ್ರನಿಗೆ ಇವಲ್ಲಾಕನು ಅಂದನು " ಪಶುಗಳು ತಮ್ಮ ಸ್ವಾಭಾವಿಕವಾದ ಬುದ್ಧಿಯಿಂದ ರಚಿಸಿದ ಯೋಜನೆಗಳನ್ನು ನೋಡಿ ಮನುಷ್ಯರು ಯಂತ್ರ ಮುಂತಾದ ಕಲೆಗಳನ್ನು ಕಲಿತರೆಂದು ಪ್ರಾಚೀನ ಕಾಲದ ಜನರ ಅಭಿಪ್ರಾಯವುಂಟು; ಆದವರಿಂದ ಈ ಮೊಲಗಳ ಗುದ್ದುಗಳನ್ನು ನೋಡಿ ಒಂದಾನೊಂದು ಹೊಸ ಮಾತು ನಾವು ಕಲಿತರೆ ನಮಗೆ ಕೀಳತನ ಬರಲಾರದೆಂದು ನನಗೆ ತೋರುತ್ತದೆ. ಈ ಮೊಲಗಳು ತೋಡಿದ ಗುದ್ದುಗಳಂತೆಯೇ ನಾವು ಗುದ್ದುಗಳನ್ನು (ವಿವರಗಳನ್ನು) ತೋಡುತ್ತ ಹೋದರೆ ನಾವು ಈ ಗವಿಯೊಳಗಿಂದ ಪಾರಾಗಬಹುದೆಂದು ನನಗೆ ತೋರುತ್ತದೆ. ಗುಡ್ಡದ ಮಧ್ಯದಲ್ಲಿ ಅಂದರೆ ಶಿಖರವು ಮುಂದೆ ಹಾಯ್ದು ಇದ್ದ ಭಾಗದಲ್ಲಿ ನಾವು ಕಡಿಯಲಿಕ್ಕೆ ಆರಂಭಮಾಡಿ, ಮೇಲ್ಭಾಗದ ಕಡೆಗೆ ಅಗೆಯುತ್ತ ಹೋದರೆ ಕೆಲಹೊತ್ತಿನ ಮೇಲೆ ಆಚೆಯ ಮಗ್ಗಲಿಗೆ ಆರಪಾರ ತೂತು ಬೀಳಬಹುದು."

ಈ ಯುಕ್ತಿಯನ್ನು ಕೇಳಿ ರಾಜಪುತ್ರನಿಗೆ ಅತಿಶಯ ಆನಂದವಾಯಿತು. ಅವನ ಕಣ್ಣುಗಳಲ್ಲಿ ಒಂದು ವಿಲಕ್ಷಣ ತರದ ಕಾಂತಿಯು ಕಂಗೊಳಿಸಹತ್ತಿತು. ಆ ಯುಕ್ತಿಯು ಒಳ್ಳೇ ಸುಲಭವಾದದ್ದರಿಂದ ಇದು ನಿಸ್ಸಂದೇಹವಾಗಿ ಸಿದ್ಧಿಸಬಹುದೆಂದು ಅವನು ತಿಳಿದುಕೊಂಡನು.

ಆ ಮೇಲೆ ತುಸು ಸಹ ವೇಳೆಯನ್ನು ವ್ಯರ್ಥಗಳೆಯದೆ ಮರುದಿವಸ ಮುಂಜಾನೆ ಅವರಿಬ್ಬರೂ ಕೂಡಿ ಹೊರಗೆ ಹೋಗಲಿಕ್ಕೆ ಯೋಗ್ಯವಾದ ಸ್ಥಳವನ್ನು ಹುಡುಕಲಿಕ್ಕೆ ಒಳ್ಳೇ ತ್ವರೆಯಿಂದ ಹೋದರು. ಅವರು ಬಹು ಶ್ರಮದಿಂದ ಬಿಕ್ಕಟ್ಟಿನ ಸ್ಥಳಗಳ ಮೇಲೆ ಹತ್ತಿ, ಬಂಡೆಗಲ್ಲಿನ ಸಂಧುಗಳಲ್ಲಿಂದಲೂ, ಮುಳ್ಳುಕಂಟೆ

ಗಳಲ್ಲಿಯೂ, ಬಹಳ ಹೊತ್ತು ತಿರುಗಾಡಿದರು. ಆದರೆ ಆ ಹೊತ್ತು ಅವರಿಗೆ ಅವರ ಮನಸ್ಸಿಗೆ ತಕ್ಕ ಸ್ಥಳವು ದೊರೆಯಲಿಲ್ಲ. ಎರಡನೇ ಮೂರನೇ ದಿವಸಗಳ ಇದೇ ಮೇರೆಗೆ ವ್ಯರ್ಥಹೋದವು. ಮೊದಲಿನ ದಿವಸದಂತೆಯೇ ನಿರಾಶೆಯಾಯಿತು. ಆದರೆ ನಾಲ್ಕನೇದಿವಸ ಅವರಿಗೆ ಸುದೈವದಿಂದ ಒಂದು ಮಾರ್ಗವು ದೊರೆಯಿತು. ಗಿಡಗಳ ಗುಂಪಿನಿಂದ ಅದರ ಬಾಯಿಯು ಮುಚ್ಚಿಹೋಗಿತ್ತು. ಅಲ್ಲಿ ಅಗೆದು ಗುಡ್ಡಕ್ಕೆ ಆರಪಾರವಾದಂಥ ಒಂದು ವಿವರವನ್ನು ತೆಗೆಯಬೇಕೆಂದು ನಿಶ್ಚಯಿಸಿದರು.

ಇವ್ಲಾಕನು ಕಲ್ಲು ಒಡೆಯುವದಕ್ಕಾಗಿಯೂ, ಮಣ್ಣು ತುಂಬಿ ಚಲ್ಲುವದಕ್ಕಾಗಿಯೂ ಅವಶ್ಯವಾಗಿರುವ ಹಾರಿ, ಸಲಿಕೆ ಮುಂತಾದ ಆಯುಧಗಳನ್ನು ದೊರಕಿಸಿ, ಅವುಗಳನ್ನು ತೆಗೆದುಕೊಂಡು ಹಿಂದಿನ ದಿನ ನೇಮಿಸಿದ ಸ್ಥಳಕ್ಕೆ ಹೋಗಿ, ಶ್ರಮದ ಕಡೆಗೆ ಲಕ್ಷ ಕೊಡದೆ ಒಳ್ಳೆ ಉತ್ಕಂಠತೆಯಿಂದ ಕೆಲಸಕ್ಕೆ ಆರಂಭಿಸಿದನು. ಕೆಲಸ ಮಾಡಹತ್ತಿ ತುಸು ಹೊತ್ತು ಆದಕೂಡಲೆ ತೀವ್ರವೇ ಅವರಿಗೆ ದಣುವಾಯಿತು. ಮತ್ತು ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ಅವರು ಹರಿತತೃಣಾಚ್ಛಾದಿತವಾದಂಥ ಸ್ಥಳದ ಮೇಲೆ ಕುಳಿತುಕೊಂಡರು. ರಾಜಪುತ್ರನಿಗೆ ಈ ತರದ ಶ್ರಮ ಮಾಡುವ ರೂಢಿ ಇಲ್ಲದ್ದರಿಂದ ಈ ಬಿಕ್ಕಟ್ಟಿನ ಕೆಲಸವನ್ನು ನೋಡಿ ಅವನು ಎದೆಗುಂದಿದನು. ಅದನ್ನು ನೋಡಿ ಅವನಿಗೆ ಇವ್ಲಾಕನು ಅಂದನು. " ಮಹಾರಾಜರೇ ಎದೆ ಕಳ ಕೊಳ್ಳಬೇಡಿರಿ. ಈ ಹೊತ್ತು ಮೊದಲನೇ ದಿವಸವಿದ್ದದರಿಂದ ನಮಗೆ ತೀವ್ರವೇ ದಣುವಾಯಿತು. ನಮಗೆ ಅಭ್ಯಾಸವಾದ ಹಾಗೆ ಹೆಚ್ಚು ಹೆಚ್ಚು ಕೆಲಸಮಾಡುವ ತ್ರಾಣವು ನಮಗೆ ಬರುವದು. ನೋಡಿರಿ, ನಾವು ಈ ಹೊತ್ತು ಏನೂ ಕೆಲಸಮಾಡಿಲ್ಲೆಂದರೂ ಎಷ್ಟೋ ಕೆಲಸವಾಗಿದೆ. ಇದೇ ಮೇರೆಗೆ ಕೆಲಸವು ಸಾಗಿದರೆ ಈ ದ್ವಾರವು ಆರಪಾರಾಗುವದೆಂಬೆನ್ನಲಿಕ್ಕೆ ಏನೂ ಸಂದೇಹವಿಲ್ಲ. ದೊಡ್ಡ ದೊಡ್ಡ ಕೆಲಸಗಳು ಕೇವಲ ಶಕ್ತಿಯಿಂದಲೇ ಆಗುವದಿಲ್ಲ; ಆದರೆ ಬೇಸರಿಯದೆ ಒಂದೇ ಸವನೆ ಉದ್ಯೋಗ (ದೀರ್ಘಪ್ರಯತ್ನ) ಮಾಡುವದರಿಂದ ಆಗುತ್ತವೆ. ತಮ್ಮೆದುರಿಗೆ ಕಾಣಿಸುವ ಅರಮನೆಯ ಕಲ್ಲನ್ನು ಒಂದೊಂದು ಪ್ರತ್ಯೇಕವಾಗಿ ನೋಡಿದರೆ ಆ ಕಲ್ಲುಗಳು ಎಷ್ಟು ಸಣ್ಣವಾಗಿ ತೋರುತ್ತವೆ? ಆದರೆ ಅವೇ ಕಲ್ಲುಗಳು ಏಕತ್ರವಾಗಿರುವದರಿಂದ ಅರಮನೆಯು ಎಷ್ಟು ಎತ್ತರವಾದದ್ದೂ, ಎಷ್ಟು ವಿಸ್ತಾರವಾದದ್ದೂ ಆಗಿರುತ್ತದೆ. ನೋಡಿರಿ! ದಿನಾಗಲು ಬಿಡದೆ ನಿಯಮಿತವಾಗಿ ಮೂರು ತಾಸು ಮನುಷ್ಯನು ನಡೆದರೆ ಏಳು ವರ್ಷಗಳಲ್ಲಿ ಪೃಥ್ವಿಯ ಪರಿಘವನ್ನು ದಾರಿಯನ್ನು ನಡೆಯುವನು. "

ಈ ಮೇರೆಗೆ ಗುಡ್ಡವನ್ನಗಿಯುವ ಕೆಲಸವನ್ನು ದಿನಾಗಲು ಸಾಗಿಸಿದರು. ಕೆಲವು ದಿವಸಗಳು ಸಂದಬಳಿಕ, ಒಂದು ಬಂಡೆಗಲ್ಲಿನಲ್ಲಿ ತನ್ನಿಂದತಾನೇ ಸಿದ್ಧವಾದಂಥಾ

ದ್ದೊಂದು ವಿವರವು ಅಕಸ್ಮಾತ್ತಾಗಿ ಅವರ ದೃಷ್ಟಿಗೆ ಬಿತ್ತು. ಅದನ್ನು ನೋಡಿ ತಮಗೆ ಕೆಲಸದ ಆರಂಭದಲ್ಲಿಯೇ ಉತ್ತಮವಾದ ಶಕುನವಾಯಿತೆಂದು ರಾಜಪುತ್ರನು ಅಂದನು. ಅದನ್ನು ಕೇಳಿ ಇವಮ್ಲಾಕನು—"ರಾಜಪುತ್ರರೇ, ಯುಕ್ತಿಯ ದೃಷ್ಟಿಯಿಂದ ಯೋಗ್ಯ ಕಾಣುವದನ್ನು ಮಾತ್ರ ನಂಬಬೇಕಲ್ಲದೆ ಉಳಿವ ಬೇರೆ ತರದ ಆಶೆ ಇಲ್ಲವೆ, ಅಂಜಿಕೆಗಳನ್ನು ಮನಸ್ಸಿನಲ್ಲಿ ತಂದು ಚಿತ್ತವನ್ನು ಚಂಚಲ ಮಾಡಿಕೊಳ್ಳಬೇಡಿರಿ; ಯಾಕಂದರೆ, ಈಗ ನಿಮಗೆ ಅನುಕೂಲವಾದ ಸಂಗತಿಗಳನ್ನು (ಒಳ್ಳೇ ಶಕುನಗಳನ್ನು) ನೋಡಿ ಸಂತೋಷವಾದರೆ, ಮುಂದೆ ಪ್ರತಿಕೂಲವಾದ ಸಂಗತಿಗಳನ್ನು (ದುಷ್ಟ ಶಕುನಗಳನ್ನು) ನೋಡಿ ನೀವು ಅಂಜಿ ಧೈರ್ಯಗುಂದಬಹುದು. ಹೀಗಾಗಿ ನೀವು ನಿಮ್ಮ ಇಡೀ ಜನ್ಮವನ್ನು ಕೇವಲ ಮೂಢಶ್ರದ್ಧೆಯಲ್ಲಿಯೇ ಕಳೆಯಬಹುದು. ನಾವು ಯಾವದೊಂದು ಕೆಲಸ ಮಾಡುತ್ತಿರುವಾಗ ಏನಾದರೊಂದು ಅನುಕೂಲವಾದ ಸಂಗತಿಯು ಸಂಭವಿಸಿದರೆ ಅದು ಕೇವಲ ಒಳ್ಳೇ ಶಕುನವೆಂದು ತಿಳಿಯದೆ ಆ ಅನುಕೂಲ ಸಂಗತಿಯು ಸಂಭವಿಸಿದ್ದರಿಂದ ನಮ್ಮ ಕೆಲಸವು ಅಷ್ಟುಮಟ್ಟಿಗೆ ಸುಲಭವಾಯಿತೆಂದು ತಿಳಿದುಕೊಳ್ಳಬೇಕು. ಅದು ಸಂಭವಿಸಿದ್ದರಿಂದ ನಮ್ಮ ಕೆಲಸವು ಸಿದ್ಧಿಸುವದಕ್ಕೆ ಒಂದು ಸಬಲ ಕಾರಣವಾಯಿತೆಂದು ಭಾವಿಸಿಕೊಳ್ಳಬೇಕು. ದೃಢನಿಶ್ಚಯದಿಂದ ಪ್ರಯತ್ನಪೂರ್ವಕವಾಗಿ ಕೆಲಸ ಮಾಡುವ ಮನುಷ್ಯನಿಗೆ ಮೊದಲು ಎಂದೂ ಲಕ್ಷಕ್ಕೆ ಬಾರದೆ ಇದ್ದಂಥ ಅನುಕೂಲವಾದ ಸಂಗತಿಗಳು ಎಷ್ಟೋ ಸಾರಿ, ಸಂಭವಿಸಿ ಅವರನ್ನು ಕಡು ಸೋಜಿಗಗೊಳಿಸುತ್ತವೆ. ಎಷ್ಟೋ ಕೆಲಸಗಳು ಮೊದಲು ಪೂರ್ಣತೆಗೆ ಹೋಗಬೇಕಾದರೆ ಬಹು ಬಿಗಿಯಾಗಿ ತೋರುತ್ತವೆ; ಆದರೆ ಅವುಗಳನ್ನು ನಿಜವಾಗಿ ಮಾಡಹತ್ತಿದರೆ ಬಹಳ ಸುಲಭವಿರುತ್ತವೆಂದು ಅನುಭವಕ್ಕೆ ಬರುತ್ತದೆ.

## ಹದಿನಾಲ್ಕನೆಯ ಭಾಗ.

—(೦)—

### ರಾಸೆಲಾಸನಿಗೂ ಇಮ್ಲಾಕನಿಗೂ ಅಕಸ್ಮಾತ್ತಾಗಿ ಮೂರನೆಯವರ ಭೇಟಿಯು.

ಹಿಂದಿನ ಭಾಗದಲ್ಲಿ ವಿವರಿಸಿದ ಮೇರೆಗೆ ಅವರ ಕೆಲಸವು ಸಾಗಿತು. ಕೆಲವು ದಿವಸಗಳು ಸಂದಬಳಿಕ ಆ ಪರ್ವತದೊಳಗಿನ ದ್ವಾರವು ಪರ್ವತದ ಮಧ್ಯದ ವರೆಗೆ ಹೋಯಿತು. ಅದನ್ನು ಕಂಡು ತಮಗೆ ತೀವ್ರವೇ ಆನಂದಗುಹೆಯೊಳಗಿಂದ ಬಿಡುಗಡೆಯಾಗುವದೆಂಬ ಆಶೆಯು ಅವರ ಮನಸಿನಲ್ಲಿ ಹುಟ್ಟಿ ತಾವು ಇದುವರೆಗೆ ಹಗಲಿರುಳು ಮಾಡಿದ ಶ್ರಮದ ಸಾರ್ಥಕ್ಯವಾಯಿತೆಂದು ಅವರು ತಮ್ಮ ಮನಸ್ಸಿನ ಸಮಾ

ಧಾನವನ್ನು ಮಾಡಿಕೊಂಡರು. ಒಂದು ದಿವಸ ರಾಜಪುತ್ರನು ಆ ವಿವರದಲ್ಲಿ ಕೆಲಸ ಮಾಡಿ ದಣಿದು, ಬೈಲಿಗೆ ಬಂದು ಗಾಳಿಗೆ ಮೈಯೊಡ್ಡಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೊರಗೆ ಬಂದನು. ಹೊರಗೆ ಬಂದಕೂಡಲೆ, ತನ್ನ ಸಹೋದರಿಯಾದ ನಿಕಾಯೂ ರಾಜಪುತ್ರಿಯು ತನ್ನೆದುರಿಗೆ ನಿಂತದ್ದು ರಾಜಪುತ್ರನಿಗೆ ಕಾಣಿಸಿತು. ತನ್ನ ತಂಗಿಯನ್ನು ನೋಡಿದ ಕೂಡಲೆ ಅವನು ಗಾಬರಿಯಾದನು. ಏನು ಮಾಡಬೇಕೆಂಬುವದು ತಿಳಿಯದ್ದರಿಂದ ಗೊಂದಲದಲ್ಲಿ ಬಿದ್ದನು. ತಾನು ಮಾಡಿದ ಆಲೋಚನೆಯನ್ನು ಆಕೆಗೆ ಹೇಳಲು ಅವನಿಗೆ ಧೈರ್ಯವು ಸಾಲಲೊಲ್ಲದು; ಇನ್ನು ಮುಚ್ಚಿಕೊಳ್ಳಬೇಕೇ, ಅದೂ ಸಾಧಿಸುವ ಆಶೆ ಕಾಣಲಿಲ್ಲ. ತುಸು ಹೊತ್ತು ವಿಚಾರ ಮಾಡಿ, ತನ್ನ ಗುಪ್ತಾಲೋಚನೆಯನ್ನು ಯಾರಿಗೂ ಹೇಳಲಿಕ್ಕಿಲ್ಲೆಂಬ ಅಭಿವಚನವನ್ನು ಆಕೆಯ ಕಡೆಯಿಂದ ತೆಗೆದುಕೊಂಡು, ಆಕೆಯ ಮೇಲೆ ಪೂರ್ಣ ನಂಬಿಗೆಯನ್ನು ಇಟ್ಟು ಏನೂ ಬಚ್ಚಿಡದೆ ಎಲ್ಲ ಸಂಗತಿಯನ್ನು ಆಕೆಗೆ ಹೇಳಬೇಕೆಂದು ನಿಶ್ಚಯಿಸಿ ಎಲ್ಲವನ್ನೂ ಆಕೆಗೆ ಹೇಳಿದನು.

ರಾಜಪುತ್ರಿಯು—“ ಅಣ್ಣಾ, ನೀವು ಏನೇನು ಮಾಡುತ್ತೀರೆಂಬುವದನ್ನು ಗೊತ್ತು ಹಚ್ಚಬೇಕೆಂಬ ದುಷ್ಟ ಉದ್ದೇಶದಿಂದ ನಾನು ಇಲ್ಲಿಗೆ ಬಂದಿದ್ದೇನೆಂದು ತಿಳಿಯಬೇಡ. ನೀನು ಮತ್ತು ಇಮ್ಲಾಕನು ಪ್ರತಿದಿವಸ ಒಂದೇ ದಾರಿಯಿಂದ (ಇದೇ ದಾರಿಯನ್ನು ಹಿಡಿದು) ಹೋಗುವದನ್ನು ನಾನು ನನ್ನ ಕಿಡಿಕೆಯೊಳಗಿಂದ ಅನೇಕಾವರ್ತಿ ನೋಡಿದೆನು. ಅರಮನೆಗಿಂತಲೂ ಹೆಚ್ಚು ಶಂಪಾದ ಇಲ್ಲವೆ ಯಾವದಾದರೊಂದು ಅಡವೀ ಹೂಗಿಡದ ಸುವಾಸನೆಯಿಂದ ಮನಸ್ಸಿಗೆ ಆಹ್ಲಾದದಾಯಕವಾದ ಒಂದು ಸ್ಥಳವು ನಿಮಗೆ ಗೊತ್ತಾಗಿರಬಹುದು; ಮತ್ತು ಅದರ ಸಲುವಾಗಿಯೇ ನೀವು ದಿನಾಗಲು ಅಲ್ಲಿಗೆ ಹೋಗುತ್ತಿರಬಹುದೆಂದು ನಾನು ತಿಳಿದುಕೊಂಡೆನು ಇದರ ಹೊರ್ತು ಬೇರೆ ಕಲ್ಪನೆಯು ನನ್ನ ಮನಸ್ಸಿನಲ್ಲಿ ಬರಲಿಲ್ಲ. ಮತ್ತು ಈ ಹೊತ್ತು ನಾನು ಇಲ್ಲಿಗೆ ನಿಮ್ಮ ಬೆನ್ನುಹತ್ತಿ ಬಂದದ್ದರ ಉದ್ದೇಶವಾದರೂ ನಿಮ್ಮ ಕೂಡ ಆ ಆನಂದಮಯವಾದ ಸ್ಥಳದಲ್ಲಿ ಕುಳಿತು ನಿಮ್ಮ ಸಂಭಾಷಣದ ಸುಖವನ್ನು ಅನುಭೋಗಿಸಬೇಕೆಂಬದೇ ಹೊರ್ತು ಬೇರೆ ಏನೂ ಇಲ್ಲ. ಸಾರಾಂಶ-ಸಂಶಯು ಬಂದು ನಾನು ನಿಮ್ಮ ಬೆನ್ನುಹತ್ತಿ ಬಂದಿಲ್ಲ; ಆದರೆ ಕೇವಲ ಸ್ನೇಹಭಾವದಿಂದ ಇಲ್ಲಿಗೆ ಬಂದಿದ್ದೇನೆ. ಇಲ್ಲಿ ಬಂದು ನೋಡಲು ನಿಮ್ಮ ಉದ್ದೇಶವು ನನಗೆ ಗೊತ್ತಾಯಿತು. ಇನ್ನು ನಾನೂ ನಿಮ್ಮ ಕೂಡ ಬರುವೆನು. ಅಣ್ಣಾ, ನನಗಾದರೂ ನಿನ್ನಂತೆಯೇ ಈ ಆನಂದ ಗುಹೆಯಲ್ಲಿರುವದು ಬೇಸರ ಬಂದದೆ. ಜಗತ್ತಿನೊಳಗೆ ಜನರು ಏನು ಮಾಡುತ್ತಾರೆ, ಅವರಿಗೆ ಯಾವ ತರದ ಸುಖದುಃಖಗಳಾಗುತ್ತವೆಂಬುವದನ್ನು ತಿಳುಕೊಳ್ಳುವ ಉತ್ಕ

ಟೇಕ್ಕೆಗು ನಿನಗಿಂತಲೂ ನನಗೆ ಹೆಚ್ಚಾಗಿಟೆ. ಆದದರಿಂದ ಈ ಬೇಸರದ ಸ್ಥಳ ವನ್ನು ಬಿಡಿಸಿ ನನ್ನನ್ನೂ ಕರಕೊಂಡು ಹೋಗು. ನೋಡು ಗುಚಿಸೈಚಿತ್ರ್ಯವಿಲ್ಲದ ಇಲ್ಲಿಯ ಶಾಂತತೆಯನ್ನು ನೋಡಿ ನೋಡಿ ನಾನು ತೀರ ಬೇಸತ್ತಿದ್ದೇನೆ; ಇನ್ನು ನೀನೂ ಇಲ್ಲಿಂದ ಹೋದಮೇಲೆ ನಾನು ಇಲ್ಲಿ ಹ್ಯಾಗಿರಬೇಕು? ಈ ಸ್ಥಳವು ನನಗೆ ತೀರ ಅಸಹ್ಯವಾಗುವದು. ಒಂದು ವೇಳೆ ನೀನು ನನ್ನನ್ನು ನಿನ್ನ ಸಂಗಡ ಕರಿಗು ಕೊಂಡು ಹೋಗದಿದ್ದರೆ, ಇಲ್ಲಿಂದ ನಾನು ಹೊರಗೆ ಹೋಗುವದನು. ನೀನು ಪ್ರತಿ ಬಂಧಿಸಲಾರೆ; ಅಂದರೆ ನೀನು ನನ್ನನ್ನು ಬಿಟ್ಟು ಹೋದರೂ ನೀನು ಹೋದಕೂಡಲೆ ಇದೇ ದಾರಿಯಿಂದ ನಾನೂ ಹೊರಗೆ ಹೊರಟು ಹೋಗುವೆನು"

ರಾಜಪುತ್ರನು ತನ್ನ ಉಳಿದ ಅಕ್ಕತಂಗಿಯರಿಗಿಂತಲು ನಿಕಾಯೂ ರಾಜಪುತ್ರಿಯು ಮೇಲೆ ಹೆಚ್ಚು ಪ್ರೀತಿ ಮಾಡುತ್ತಿದ್ದನಾದದರಿಂದ, ಅವಳ ಬಿನ್ನಹಕ್ಕೆ ಅಮಾನ್ಯ ಮಾಡುವವು ಅವನ ಕೈಯಿಂದಾಗಲಿಲ್ಲ. ತಾನಾಗಿಯೇ ಈ ಗುಪ್ತ ಸಂಗತಿಯನ್ನು ತನ್ನ ತಂಗಿಗೆ ಮೊದಲೇ ಹೇಳಿದ್ದರೆ, ಅಣ್ಣನ ನಂಬಿಗೆಯು ತನ್ನ ಮೇಲೆ ಉಂಟೆಂದು ಆಕೆಗೆ ಬಹಳ ಸಂತೋಷವಾಗುತ್ತಿತ್ತು; ಆದರೆ ಮೊದಲು ತಾನು ಹಾಗೆ ಮಾಡದೆ, ಆಕೆ ಬಂದಬಳಿಕ ತಿಳಿಸಿದ್ದರಿಂದ, ಆಕೆಗೆ ತುಸು ವ್ಯಸನವಾಗಿರಬಹುದೆಂದು ತಿಳಿದು ಕೊಂಡು, ಆತನು ತುಸು ವಿಷಾದಪಟ್ಟನು. ಆ ವೇಳೆ ಮೂವರೂ ಕೂಡಿ ಆನಂದ ಗುಹೆಯೊಳಗಿಂದ ಹೊರಗೆ ಹೋಗಬೇಕೆಂದು ನಿಶ್ಚಯಿಸಿದರು ಹಾದಿಯು ( ವಿವ ರವು ) ಪೂರ್ಣವಾಗುವವರೆಗೆ ನಿಕಾಯೂ ರಾಜಪುತ್ರಿಯು, ಇವನ್ನಾನೂ ರಾಜಪು ತ್ರನೂ ಕೆಲಸ ಮಾಡುವಲ್ಲಿಗೆ ಯಾರಾದರೂ ಬೇಕೆಂತ ಇಲ್ಲವೆ ಸಹಜ ಬರುವದನ್ನು ನೋಡಿ ಅವರಿಗೆ ಎಚ್ಚರಿಸಬೇಕೆಂದು ಅವರು ಆಕೆಗೆ ಹೇಳಿದರು.

ಮುಂದೆ ತುಸು ದಿವಸಗಳಲ್ಲಿಯೇ ಅವರ ಕೆಲಸವು ಮುಗಿದು ಆರಪಾರ ತೂತು ಬಿದ್ದದರಿಂದ ಅತ್ತಕಡೆಯ ಬೆಳಕು ಕಾಣಹತ್ತಿತು. ಅವರು ಆ ವಿವರದೊ ಳಗಿಂದ ಪಾರಾಗಿ, ಪರ್ವತದ ಆಚೇಮಗ್ಗಲು ಹೋಗಿ, ಮೇಲೆ ಹತ್ತಿ ನೋಡಲು ಕೆಳಗೆ ನೀಲ ನದಿಯು ಅವರಿಗೆ ಕಾಣಿಸಿತು. ಬಹಳ ಎತ್ತರವಾದ ಪರ್ವತಶಿಖರದ ಮೇಲಿಂದ ನೋಡಿದ್ದರಿಂದ ಆ ನದಿಯ ಪ್ರವಾಹವು ಅವರಿಗೆ ತೀರ ಸಣ್ಣದಾಗಿ ತೋರುತ್ತಿತ್ತು.

ಆ ಪರ್ವತದ ಸುತ್ತಲು ಇದ್ದ ಪ್ರದೇಶವನ್ನು ನೋಡಿ ರಾಜಪುತ್ರನಿಗಾದ ಆನಂದವನ್ನು ವರ್ಣಿಸಲಳವಲ್ಲ. ದೇಶದೇಶಗಳಲ್ಲಿ ತಿರುಗಾಡುವದರಿಂದ ಉಂಟಾ ಗುವ ಆನಂದದ ಅನುಭವವು ಆತನಿಗೆ ಈಗಲೇ ಬಂದಂತಾಯಿತು. ಈ ಮೇರೆಗೆ

ಆತನು ಆನಂದಸಾಗರದಲ್ಲಿ ಮುಳುಗಿಹೋದದರಿಂದ ತಾನು ತನ್ನ ತಂದೆಯ ರಾಜ್ಯ ವನ್ನು ಬಿಟ್ಟು ಪಾರಾಗಿ ಹೋದೆನೆಂದು ಸಹ ತಿಳುಕೊಂಡನು. ರಾಜಪುತ್ರನು ಬಿಡು ಗಡೆ ಹೊಂದಿದ್ದನ್ನು ನೋಡಿ ಇವ್ಲಾಕನಿಗೆ ಆನಂದವಾದಾಗ್ಯೂ ಜಗತ್ತಿನಲ್ಲಿ ಅಪ ರಿಮಿತ ಸುಖವಾಗುತ್ತದೆಂದು ರಾಜಪುತ್ರನಿಗೆ ಇದ್ದ ಭ್ರಮೆಯು ಅವನಿಗಿದ್ದಿಲ್ಲ. ಯಾಕಂದರೆ ಅವನು ಇಡೀ ಜಗತ್ತಿನ ಅನುಭವವನ್ನು ತೆಗೆದುಕೊಂಡಿದ್ದನು. ಜಗ ತ್ತಿನೊಳಗಿನ ಯಾವತ್ತೂ ಗುಣದೋಷಗಳು ಅವನಿಗೆ ಗೊತ್ತಾಗಿದ್ದವು.

ರಾಜಪುತ್ರನು ಇದಕ್ಕೂ ಪೂರ್ವದಲ್ಲಿ ಇಷ್ಟು ವಿಸ್ತಾರವಾದ ಭೂಪ್ರದೇಶ ವನ್ನು ಎಂದೂ ನೋಡಿದ್ದಿಲ್ಲಾದದರಿಂದ ಈಗ ಅಂಥ ಪ್ರದೇಶವನ್ನು ನೋಡಿ ಅವ ನಿಗೆ ಹೇಳಲಸದಳವಾದ ಆನಂದವಾಯಿತು. ಮತ್ತು ತಿರುಗಿ ಆನಂದಗುಹೆಯೊಳಗೆ ಹೋಗಬೇಕೆಂಬ ಇಚ್ಛೆಯೇ ಅವನಿಗಾಗಲಿಲ್ಲ. ಕಡೆಗೆ ತಿರುಗಿ ಗುಹೆಯೊಳಗೆ ಬಂದು ದಾರಿಯು ಪೂರ್ಣವಾಗಿದೆ ಇನ್ನು ನಾವು ಹೊರಗೆ ಹೋಗುವ ಸಿದ್ಧತೆಯನ್ನು ಮಾತ್ರ ಮಾಡುವದು ಉಳದಿರುತ್ತದೆಂದು ತನ್ನ ತಂಗಿಗೆ ಹೇಳಿದನು.

## ಹದಿನೈದನೆಯ ಭಾಗವು.

———:(o):———

ರಾಜಪುತ್ರನೂ ರಾಜಕನ್ನಿಕೆಯೂ ಆನಂದಗುಹೆಯೊಳಗಿಂದ ಹೊರ ಬಿದ್ದು ಅನೇಕ ಸೋಜಿಗದ ಸಂಗತಿಗಳನ್ನು ನೋಡಿದ್ದು.

ರಾಜಪುತ್ರನೂ ರಾಜಕನ್ನಿಕೆಯೂ ವ್ಯಾಪಾರವು ಚನ್ನಾಗಿ ನಡೆಯುವಂಥ ಊರೊಳಗೆ ಮಾರಲಿಕ್ಕೆ ಹೋದರೆ ಸಾವಿರಾರು ರೂಪಾಯಿಗಳ ಬೆಲೆಯನ್ನು ಬಾಳು ವಂಥ ಅನೇಕ ಆಭರಣಗಳನ್ನು ತಮ್ಮ ಸಂಗಡ ತೆಗೆದುಕೊಂಡು, ಅವುಗಳನ್ನು ಇವ್ಲಾಕನ ಹೇಳಿಕೆಯ ಮೇರೆಗೆ ತಮ್ಮ ಮೈಮೇಲಿನ ಬಟ್ಟೆಗಳಲ್ಲಿ ಬಚ್ಚಿಟ್ಟಿದ್ದರು- ಆದದರಿಂದ ದಾರೀ ವೆಚ್ಚಕ್ಕೆ ಬೇಕಾದಾಗ ಅವರಿಗೆ ಸಾಕಷ್ಟು ಹಣ ಸಿಗುತ್ತಿತ್ತು. ಈ ಮೇರೆಗೆ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು, ಹುಣ್ಣಿವೆಯ ದಿವಸ ಎಲ್ಲರೂ ಆ ಆನಂದಗುಹೆಯನ್ನು ಯಾರಿಗೂ ತಿಳಿಯದಂತೆ ಬಿಟ್ಟು ಹೊರಗೆ ಹೊರಟರು. ರಾಜ ಕನ್ನಿಕೆಯು ತನ್ನ ಸಂಗಡ ಒಬ್ಬ ಒಳ್ಳೇ ನಂಬಿಗೆಯುಳ್ಳಂಥ ತನ್ನ ಪ್ರೀತಿಯ ದಾಸಿ ಯನ್ನು ಕರಕೊಂಡು ಬಂದಳು. ಆಕೆಗೆ ಸಹ ತನ್ನ ಯಜಮಾನಿಯು ಯಾವ ಕಡೆಗೆ ಹೋಗುತ್ತಾಳೆಂಬುವದು ಗೊತ್ತಿದ್ದಿಲ್ಲ.

ಅವರೆಲ್ಲರೂ ಆ ವಿವರದೊಳಗಿಂದ ಅಂಬೆಗಾಲಿಡುತ್ತ ಗುಡ್ಡದ ಎರಡನೇ ಮಗ್ಗಲಿನ ಕಡೆಗೆ ಮೆಲ್ಲಮೆಲ್ಲನೆ ಇಳಿಯುಹತ್ತಿದರು. ರಾಜಕನ್ನಿಕೆಯೂ ಆಕೆಯ

ದಾಸಿಯೂ ಎಂದೂ ತಮ್ಮ ಬಿಡಾರವನ್ನು ಬಿಟ್ಟು ಹೊರಬಿದ್ದಿದ್ದಿಲ್ಲ. ಗುಡ್ಡದ ಎರಡನೇ ಮಗ್ಗಲಿಗೆ ಬಂದು ಸುತ್ತಲು ನೋಡಲು, ಎತ್ತ ನೋಡಿದರತ್ತ ವಿಸ್ತೀರ್ಣವಾದ ಪ್ರದೇಶವೇ ಅವರ ದೃಷ್ಟಿಗೆ ಬಿತ್ತು. "ಇಂಥಾ ವಿಸ್ತೀರ್ಣವಾದ ಪ್ರದೇಶದಲ್ಲಿ ನಾವು ಒಂದು ವೇಳೆ ದಾರೀ ತಪ್ಪಿ ಎತ್ತ ಹೋಗುತ್ತೇವೋ, ಕಡೆಗೆ ಈ ವಿಶಾಲವಾದ ಅರಣ್ಯವನ್ನು ದಾಟಿ ಹೋಗುತ್ತೇವೋ, ಇಲ್ಲವೆ ಇಲ್ಲಿಯೇ ನಮ್ಮ ಆಯುಷ್ಯವು ತೀರಿದಂತಾಯಿತೋ ಏನೋ" ಎಂಬ ವಿಚಾರಗಳು ಅವರ ಮನಸ್ಸಿನಲ್ಲಿ ಹುಟ್ಟಿ ಅವರು ಬಹಳ ಅಂಜಿದರು. ಅವರು ಅಂಜಿ ಗಾಬರಿಯಾಗಿ ಮುಂದೆ ಕಾಲಿಡಲೊಲ್ಲರು. ರಾಜಪುತ್ರಿಯು ಅಂದಳು "ಅಣ್ಣಾ, ಮುಂದೆ ಹೋಗುವದಕ್ಕೆ ನನಗೆ ಬಹಳ ಅಂಜಿಕೆ ಬರುತ್ತದೆ. ನಮ್ಮ ದಾರಿಯು ಕೊನೆ ಮುಟ್ಟುವ ಹಾಗೆ ತೋರುವದಿಲ್ಲ; ಮತ್ತು ಈ ವಿಸ್ತಾರವಾದ ಬಯಲೊಳಗೆ ನಾವು ಅತ್ತಿತ್ತ ತಿರುಗುವಾಗ ನಾಲ್ಕೂ ಕಡೆಯಿಂದ ಅರಿಯದ ಜನರು ಬಂದು ನಮ್ಮನ್ನು ಸುತ್ತುಗಟ್ಟಿದರೆ ನಾವು ಏನು ಮಾಡಬೇಕು?" ರಾಜಪುತ್ರನಿಗಾದರೂ ಇದೇ ತರದ ಅಂಜಿಕೆಯು ಹುಟ್ಟಿತ್ತು; ಆದರೆ ಆ ಅಂಜಿಕೆ ಬಂದದ್ದನ್ನು ಹೊರಗೆ ತೋರಿಸುವದು ಪುರುಷನಿಗೆ ಭೂಷಣವಲ್ಲೆಂದು ತಿಳಿದು ಸುಮ್ಮನಿದ್ದನು.

ಅವರ ಅಂಜಿಕೆಯನ್ನು ನೋಡಿ ಇವ್ಲಾನಿಗೆ ನಗೆ ಬಂತು. ಆತನು ಅವರನ್ನು ಹುರಿದುಂಬಿಸಿ ಮುಂದೆ ಕರಕೊಂಡು ಹೋದನು. ಆದರೆ ತಿರುಗಿ ಬರಲಿಕ್ಕೆ ಬಾರದಷ್ಟು ದೂರದವರೆಗೆ ಹೋಗುವತನಕ, ರಾಜಪುತ್ರಿಯು ಮಾತ್ರ, ಹಿಂದಿರುಗಿ ಆನಂದಗುಹೆಗೆ ಹೋಗಬೇಕೋ, ಇಲ್ಲವೆ ಮುಂದೆ ಸಾಗಬೇಕೋ ಎಂಬ ಬಗ್ಗೆ ಯಾವದೂ ನಿಶ್ಚಯ ಮಾಡಲಿಲ್ಲ. ಇನ್ನು ತಿರುಗಿ ಆನಂದಗುಹೆಗೆ ಹೋಗುವದು ಅಸಂಭವವಾದದ್ದೆಂದು ಕಂಡಬಳಿಕ ಮಾತ್ರ, ಆಕೆಯು ಸುಮ್ಮನೆ ಎಲ್ಲರ ಬೆನ್ನುಹತ್ತಿ ನಡೆದಳು.

ಮರುದಿವಸ ಮುಂಜಾನೆ ಅವರು ಹೊಲಗಳಲ್ಲಿ ಮೇಯುವಂಥ ಕುರಿಹಿಂಡುಗಳನ್ನೂ, ಅವುಗಳನ್ನು ಕಾಯಲಿಕ್ಕಿದ್ದ ಕೆಲವು ಕುರುಬರನ್ನೂ ನೋಡಿದರು. ಆ ಕುರುಬರು ಅವರನ್ನು ನೋಡಿ, ಆದರಿಸಿ, ತುಸು ಹಾಲನ್ನೂ, ಕೆಲವು ಹಣ್ಣುಗಳನ್ನೂ ತಂದು ಅವರ ಮುಂದಿರಿಸಿದರು. ರಾಜಪುತ್ರಿಯು ತಾನು ಹೋದ ಹೋದಲ್ಲಿ ಇಳಿದುಕೊಳ್ಳಲಿಕ್ಕೆ ಸುಂದರವಾದ ಅರಮನೆಯೂ, ಉಣ್ಣಲಿಕ್ಕೆ ಉತ್ತಮೋತ್ತಮವಾದ ಪಕ್ವಾನ್ನಗಳೂ ಸಿಕ್ಕುವವೆಂದು ತಿಳಿದುಕೊಂಡಿದ್ದಳು. ಆದರೆ ಈಗ ಅವುಗಳ ಬದಲಾಗಿ ಕೆಲವು ಅಡವೀ ಹಣ್ಣುಗಳನ್ನು ತನ್ನ ಮುಂದಿಟ್ಟಿದ್ದು ನೋಡಿ ಆಕೆಗೆ ಬಹು ಆಶ್ಚರ್ಯವಾಯಿತು. ಆದರೆ ಈಗ ಆಕೆ ನಡೆದು ನಡೆದು ಬಹಳ ದಣಿದದ

ರಿಂದಲೂ, ಅತಿಶಯ ಹಸಿವದರಿಂದಲೂ, ಆಕೆಯು ತುಸು ಹಾಲು ಕುಡಿದು ಕೆಲವು ಹಣ್ಣುಗಳನ್ನು ತಿಂದಳು, ಅವು ಅರಮನೆಯೊಳಗಿನ ಹಣ್ಣುಗಳಿಗಿಂತಲೂ ಮೇಲಾದಂಥವೂ, ಹೆಚ್ಚು ರುಚಿಕರವಾದಂಥವೂ ಇದ್ದವೆಂದು ಆಕೆಗೆ ಕಂಡುಬಂತು.

ರಾಜಪುತ್ರನಿಗೂ ರಾಜಕನ್ನಿಕೆಗೂ ದಾರೀನಡೆದು ಶ್ರಮಗೊಳ್ಳುವ, ಇಲ್ಲವೆ ಕಷ್ಟ ಸೋಸುವ ರೂಢಿ ಇಲ್ಲದ್ದರಿಂದಲೂ, ತಾವು ಆನಂದಗುಹೆಯನ್ನು ಬಿಟ್ಟು ಹೊರಬಿದ್ದದ್ದು ಅಲ್ಲಿಯ ಜನರಿಗೆ ತಿಳಿದಾಗ್ಯೂ ಅವರು ತಮ್ಮನ್ನು ಬೆನ್ನಟ್ಟಲಾರರೆಂಬುವದು ಅವರಿಗೆ ಚನ್ನಾಗಿ ಗೊತ್ತಿದ್ದದರಿಂದಲೂ, ಅವರು ದಿನಾಗಲೂ ತುಸು ತುಸು ದಾರೀ ನಡೆಯುತ್ತ, ಮೆಲ್ಲಮೆಲ್ಲನೆ ಮುಂದೆ ನಡೆದರು (ಸಾಗಿದರು). ತುಸು ದಿವಸಗಳಲ್ಲಿಯೇ ಬಹು ಜನರು ವಾಸಿಸುವ ಪ್ರದೇಶಕ್ಕೆ ಬಂದು ಮುಟ್ಟಿದರು. ತರುವಾಯ ಒಂದು ದೊಡ್ಡ ಪಟ್ಟಣವು ಅವರಿಗೆ ಹತ್ತಿತು. ಆ ಪಟ್ಟಣದೊಳಗಿನ ಜನರ ನಡೆನುಡಿಗಳನ್ನೂ, ಅಲ್ಲಿರುವ ಹಲವು ತರದ ಯೋಗ್ಯತೆಯುಳ್ಳ ಜನರನ್ನೂ, ವಿಧವಿಧದ ಉದ್ಯೋಗಗಳನ್ನೂ, ಬೇರೆ ಅನೇಕ ವಸ್ತುಗಳನ್ನೂ ನೋಡಿ ರಾಜಪುತ್ರನಿಗೂ ರಾಜಕನ್ನಿಕೆಗೂ ಅತಿಶಯ ಆಶ್ಚರ್ಯವಾಯಿತು. ಇಮ್ಲಾಕನಿಗೆ ಇವೆಲ್ಲ ಮೊದಲೇ ಗೊತ್ತಿದ್ದದರಿಂದ ಅವನಿಗೇನೂ ಆಶ್ಚರ್ಯವಾಗಲಿಲ್ಲ. ಆದರೆ ಆ ಹೊಸ ಜನರ (ರಾಜಪುತ್ರ ರಾಜಕನ್ನಿಕೆಯರ) ವಿಸ್ಮಯವನ್ನು ನೋಡಿ ಅವನು ತನ್ನ ಮನಸ್ಸನ್ನು ರಂಜಿಸಿಕೊಳ್ಳುತ್ತಿದ್ದನು. ಇವರು ತಮ್ಮ ಮೂಲ ಸ್ವರೂಪವನ್ನು ಬಚ್ಚಿಟ್ಟು ವೇಷಧಾರಿಗಳಾಗಿ ನಡೆಯುತ್ತಾರೆಂಬ ಸಂಶಯವು ನೋಡುವವರ ಮನಸ್ಸಿನಲ್ಲಿ ಬಾರದಂತೆ ಅವರೆಲ್ಲರೂ ತಮ್ಮ ಉಡಿಗೆತೊಡಿಗೆಗಳನ್ನು ಧರಿಸಿದ್ದರು. ಆದರೂ ರಾಜಪುತ್ರನು ತನ್ನ ಅಪ್ಪಣೆಯ ಮೇರೆಗೆ ಯಾವತ್ತು ಜನರು ನಡಕೊಳ್ಳಬೇಕೆಂದು ಬಯಸುತ್ತಿದ್ದನು; ಮತ್ತು ರಾಜಕನ್ನಿಕೆಯು ತನ್ನನ್ನು ನೋಡಿದ ಕೂಡಲೆ ಎಲ್ಲರೂ ತನಗೆ ನಮಸ್ಕಾರ ಮಾಡಬೇಕೆಂದು ಇಚ್ಛಿಸುತ್ತಿದ್ದಳು. ಆದದರಿಂದ ಇಮ್ಲಾಕನಿಗೆ ಬಹಳ ಎಚ್ಚರದಿಂದ ನಡೆಯಬೇಕಾಗುತ್ತಿತ್ತು. ಅವರು ತಮ್ಮ ಈ ತರದ ಕೃತಿಗಳಿಂದ ತಮ್ಮ ಮೂಲಸ್ವರೂಪವನ್ನು ಹೊರಗೆಡವಬಾರದೆಂದು ಇಮ್ಲಾಕನು ಬಹಳ ಪ್ರಯತ್ನ ಮಾಡುತ್ತಿದ್ದನು. ಸಾಮಾನ್ಯ ಜನರ ನಡೆನುಡಿಗಳು ಅವರಿಗೆ ಚನ್ನಾಗಿ ಗೊತ್ತಾಗಬೇಕೆಂತಲೂ, ಅದರಂತೆ ಅವರೂ ನಡೆಯಲಿಕ್ಕೆ ಕಲಿಯಬೇಕೆಂತಲೂ ಇಮ್ಲಾಕನು ಅವರನ್ನು ಮೊದಲಿನ ಊರಲ್ಲಿಯೇ ಬಹಳ ದಿವಸ ಇಟ್ಟುಕೊಂಡಿದ್ದನು.

ಕೆಲವು ದಿವಸಗಳ ಮುಟ್ಟಿಗೆ ತಾವು ತಮ್ಮ ದೊಡ್ಡಿಸ್ತನವನ್ನು ಒತ್ತಟ್ಟಿಗಿಡಬೇಕೆಂತಲೂ, ಜನರು ಸಭ್ಯತನದಿಂದಲೂ ಔದಾರ್ಯದಿಂದಲೂ ಕೊಟ್ಟಷ್ಟು ಮಾನದಿಂದಲೇ ತಾವು ತೃಪ್ತರಾಗಿರಬೇಕೆಂತಲೂ, ರಾಜಪುತ್ರನಿಗೂ ರಾಜಕನ್ನಿಕೆಗ,

ಕೆಲವು ದಿವಸಗಳ ತರುವಾಯ ತೀರಿದುಬಂತು. ಅಲ್ಲಿಂದ ಅವರು ಸಮುದ್ರ ತೀರದಲ್ಲಿ ರುವದೊಂದು ದೊಡ್ಡ ಬಂದರಕ್ಕೆ ಬಂದರು. ಆ ಬಂದರವು ದೊಡ್ಡದಿದ್ದದರಿಂದ ಅಲ್ಲಿ ಜನರ ಪಟ್ಟಣೆಯು ಬಹಳ ಇತ್ತು, ವ್ಯಾಪಾರವು ಚನ್ನಾಗಿ ನಡೆಯುತ್ತಿತ್ತು. ರಾಜಪುತ್ರ ರಾಜಕನ್ನಿಕೆಯರು ಆ ಬಂದರದೊಳಗಿನ ಗದ್ದಲವನ್ನೂ, ವ್ಯಾಪಾರಸ್ಥರ ಸ್ವಾಭಾವಿಕವಾದ ಅಲ್ಪ ಆವಿಸಯುವನ್ನೂ ತಾಳಿಕೊಳ್ಳದೆ ಇರುವದನ್ನು ನೋಡಿ ಇವ್ಲ್ಲಾಕನು ಅವರಿಗೆ ಹಲವು ತರದ ಉಪದೇಶಗಳನ್ನು ಮಾಡಿ ಅಂಥ ತೊಂದರೆಗಳನ್ನು ಸಹನ ಮಾಡಿಕೊಳ್ಳಲಿಕ್ಕೆ ಬೇಕೆಂದು ಅವರಿಗೆ ಹೇಳಿದನು.

ಹುಟ್ಟಿದಾರಭ್ಯ ರಾಜಪುತ್ರನೂ ಆತನ ತಂಗಿಯೂ ಜಗತ್ತಿನೊಳಗಿನ ಯಾವ ತರದ ಒಡವೆಗಳನ್ನೂ ಎಂದೂ ನೋಡಿದ್ದಿಲ್ಲಾದ್ದರಿಂದ, ಪ್ರತಿಯೊಂದು ಒಡವೆಯನ್ನು ನೋಡಿ ಅವರಿಗೆ ಹೇಳಕೂಡದಷ್ಟು ಆನಂದವಾಯಿತು. ಆದದರಿಂದ ಅವರು ಅದೇ ಬಂದರದಲ್ಲಿ ಬಹಳ ದಿವಸಗಳ ವರೆಗೆ ಇರಬೇಕೆಂದು ಬಯಸಿದರು. ಇದು ಇವ್ಲ್ಲಾಕನಿಗೆ ಬೇಕಾದ ಮಾತಾಗಿತ್ತು. ಯಾಕಂದರೆ ಅವರಿಗೆ ಇನ್ನೂ ಲೌಕಿಕ ವ್ಯವಹಾರವು ಚನ್ನಾಗಿ ಗೊತ್ತಾಗಿದ್ದಿಲ್ಲ. ಇಂಥ ಸ್ಥಿತಿಯಲ್ಲಿ ಅವರನ್ನು ಪರದೇಶಕ್ಕೆ ಕರಕೊಂಡು ಹೋಗಿ, ಅವರನ್ನು ತೊಂದರೆಗಳಿಗೆ ಗುರಿಮಾಡುವದು ಅವನಿಗೆ ಸರಿಬರಲಿಲ್ಲ.

ಕೆಲವು ದಿವಸಗಳ ವರೆಗೆ ಅವರು ಆ ಬಂದರದಲ್ಲಿದ್ದರು. ಆದರೆ ಬಹಳ ದಿವಸಗಳ ವರೆಗೆ ಅಲ್ಲಿಯೇ ಇದ್ದರೆ ಒಂದುವೇಳೆ ಯಾರಾದರೂ ಗುರುತಿನವರು ಕಂಡರೆ, ತಮ್ಮ ಗುಟ್ಟೆಲ್ಲ ಹೊರಬಿದ್ದೀತೆಂಬ ಅಂಜಿಕೆಯು ಇವ್ಲ್ಲಾಕನಿಗೆ ಹುಟ್ಟಿ ಅಲ್ಲಿಂದ ಹೊರಡುವ ದಿವಸವನ್ನು ಗೊತ್ತುಮಾಡಬೇಕೆಂದು ಅವರಿಗೆ ಸೂಚಿಸಿದನು. ಅವರಿಗೆ (ರಾಜಪುತ್ರನಿಗೂ ಆತನ ತಂಗಿಗೂ) ಯಾವ ಕಡೆಗೆ ಹೋಗಬೇಕು? ಯಾವಾಗ ಹೊರಡಬೇಕು? ಹ್ಯಾಗೆ ಹೋಗಬೇಕು? ಮುಂತಾದದ್ದೇನೂ ಗೊತ್ತಿಲ್ಲದ್ದರಿಂದ ಅವರು ಆ ಕೆಲಸದ ಭಾರವನ್ನು ಇವ್ಲ್ಲಾಕನ ಮೇಲೆ ಹಾಕಿಬಿಟ್ಟಿದ್ದರು. ಅವನೇ ಆ ಕೆಲಸವನ್ನು ಮಾಡುತ್ತಿದ್ದನು. ಆದದರಿಂದ ಅವನು ಸುಯೇಜಕ್ಕೆ ಹೋಗುವದೊಂದು ಹಡಗವನ್ನು ಗೊತ್ತುಹಚ್ಚಿ, ತಮ್ಮ ನಾಲ್ವರ ಬಗ್ಗೆ ಸ್ಥಳವನ್ನೂ, ಬಾಡಿಗೆಯನ್ನೂ ನಿರ್ಣಯಿಸಿ, ಹೊರಡುವ ದಿವಸವನ್ನು ಅವರಿಗೆ ತಿಳಿಸಿದನು. ಆ ದಿವಸ ರಾಜಪುತ್ರಿಯು ಹಡಗವನ್ನೇರಲೊಲ್ಲಳು. ಯಾಕಂದರೆ ಆಕೆಯು ಹಡಗವನ್ನು ಅದಕ್ಕೆ ಪೂರ್ವದಲ್ಲಿ ಎಂದೂ ನೋಡಿದ್ದಿಲ್ಲಾದದರಿಂದ ಹಡಗದ ಮೇಲೆ ಹತ್ತುವದಕ್ಕೆ ಅಂಜಿದಳು. ಆಗ ಅನೇಕ ವಿಧದಿಂದ ಆಕೆಗೆ ಅಂಜುವ ಕಾರಣವಿಲ್ಲೆಂದು ಹೇಳಿ, ಇವ್ಲ್ಲಾಕನು ಆಕೆಯನ್ನು ಹಡಗದಲ್ಲಿ ಕುಳ್ಳಿರಿ

ಸಿದನು. ಆ ಹಡಗವು ಸುಖರೂಪವಾಗಿಯೂ ತೀವ್ರವಾಗಿಯೂ ಸುಯೇಜಕ್ಕೆ ಬಂದು ಮುಟ್ಟಿತು. ಸುಯೇಜದಿಂದ ಕಾಲದಾರಿಯಲ್ಲಿ ಪ್ರವಾಸಮಾಡಿ ಅವರು ಕೇರೋ ಪಟ್ಟಣಕ್ಕೆ ಸೇರಿದರು.

## ಹದಿನಾರನೆಯ ಭಾಗವು.

**ಅವರು ಕೇರೋ ಪಟ್ಟಣವನ್ನು ಸೇರಿ ನೋಡಲು ಅಲ್ಲಿಯ ಪ್ರತಿ ಯೊಬ್ಬ ಮನುಷ್ಯನು ಸುಖಿಯಾಗಿದ್ದಂತೆ ಅವರಿಗೆ ತೋರಿತು.**

ಪರಸ್ಪರನ್ನು ಆಶ್ಚರ್ಯಚಕಿತಮಾಡುವಂಥ ಕೇರೋ ಪಟ್ಟಣದ ಸಮೀಪಕ್ಕೆ ಅವರು ಬಂದಕೂಡಲೆ, ಇಮ್ಲಾಕನು, ರಾಜಪುತ್ರನಿಗೆ ಹೇಳಿದನು; "ರಾಜಪುತ್ರರೇ, ಇದೇ ಕೇರೋ ಪಟ್ಟಣವು. ಇದೇ ಪಟ್ಟಣಕ್ಕೆ ಪೃಥ್ವಿಯೊಳಗಿನ ಯಾವತ್ತು ಭಾಗದ ಜನರು ಬರುತ್ತಾರೆ. ಕೆಲವರು ವ್ಯಾಪಾರ ಮಾಡುವ ಉದ್ದೇಶದಿಂದಲೂ, ಬೇರೆ ಕೆಲವರು ಪಟ್ಟಣದ ಶೋಭೆಯನ್ನು ನೋಡುವ ಉದ್ದೇಶದಿಂದಲೂ, ಇಲ್ಲಿಗೆ ಬರುತ್ತಾರೆ. ಈ ಪಟ್ಟಣದಲ್ಲಿ ನೀವು ತರತರದ ಸ್ವಭಾವದ ಜನರನ್ನೂ, ವಿಧವಿಧದ ಉದ್ಯೋಗದಲ್ಲಿ ತೊಡಗಿದ ಮನುಷ್ಯರನ್ನೂ ನೋಡಬಹುದು. ಇಲ್ಲಿ ವ್ಯಾಪಾರಕ್ಕೆ ಹೆಚ್ಚು ಮಾನವಿರುತ್ತದೆ. ಆದದರಿಂದ ನಾನು ವರ್ತಕನಾಗುತ್ತೇನೆ, ಮತ್ತು ನೀವು ಈ ಪಟ್ಟಣದ ಶೋಭೆಯನ್ನೂ ಇಲ್ಲಿಯ ಕೌತುಕಗಳನ್ನೂ ನೋಡಲಿಕ್ಕೆ ಬಂದ ಪ್ರವಾಸಿಕರಂತೆ ಇರ್ರಿ. ನಾವು ಶ್ರೀಮಂತರಿರುತ್ತೇವೆಂಬುವದು ಜನರಿಗೆ ತೀವ್ರವೇ ಗೊತ್ತಾಗಿ, ಯಾವತ್ತು ತರದ ಜನರ ಗುರುತು ನಮಗೆ ಆಗುವದು. ತರುವಾಯ ವಿಧವಿಧದ ಮನುಷ್ಯರೂ ಅವರ ಸ್ಥಿತಿಗಳೂ ನಿಮ್ಮ ದೃಷ್ಟಿಗೆ ಬೀಳುವವು. ನೀವು ಅವುಗಳಲ್ಲಿ ನಿಮ್ಮ ಮನಸಿಗೆ ಬಂದ ಸ್ಥಿತಿಯನ್ನು ಆರಿಸಿಕೊಳ್ಳಬಹುದು. ಅಂದರೆ ನೀವು ಯಾವ ರೀತಿಯಿಂದ ಇಲ್ಲವೆ ಯಾವಸ್ಥಿತಿಯಲ್ಲಿ ಸಂಸಾರ ಮಾಡಿದರೆ ನಿಮಗೆ ಸುಖವಾಗುವ ಸಂಭವ ಕಾಣಿಸುತ್ತದೋ, ಆ ತರದ ಸ್ಥಿತಿಯನ್ನು ನೀವು ಹುಡುಕಿ ತೆಗೆಯಬಹುದು.

ಆನಂತರ ಅವರು ಊರೊಳಗೆ ಬಂದರು. ಆ ಊರೊಳಗಿನ ಗದ್ದಲವನ್ನು ಕೇಳಿ ಅವರ ಕಿವಿಗಳು ಗಡಚಿಕ್ಕಿದವು. ಅಲ್ಲಿಯ ಜನರ ಸಂದಣಿಯನ್ನು ನೋಡಿ ರಾಜಪುತ್ರ, ರಾಜಕನ್ನಿಕೆಯರಿಗೆ ಬಹಳ ತೊಂದರೆಯಾಯಿತು. ಈ ತರದ ತೊಂದರೆಗಳನ್ನು ಲೆಕ್ಕಿಸಬಾರದೆಂದು ಇಮ್ಲಾಕನು ಅವರಿಗೆ ಬೇಕಾದಷ್ಟು ಹೇಳಿದ್ದನು. ಆದರೆ ಬಾಲ್ಯಾಭ್ಯಾಸವು ಎಂದಿಗಾದರೂ ಅಷ್ಟು ತೀವ್ರ ಹೋದೀತೇ?

ದಾರೀ ಹಿಡಿದು ಹೋಗುವಾಗ ತನ್ನನ್ನು ನೋಡಿ ಯಾರೂ ನಮಸ್ಕಾರ ಮಾಡದೆ ಅತಿಶಯ ಕೀಳುಜನರು ಸಹ ಮಾನಮರ್ಯಾದೆಯನ್ನು ಮೀರಿ ವೈಗೆ ವೈ ಹೊಂದಿಸಿ ಹೋಗುವದನ್ನು ನೋಡಿ, ರಾಜಪುತ್ರನಿಗೂ ರಾಜಕನ್ನಿಕೆಗೂ ಸಖೇದಾಶ್ಚರ್ಯವಾಯಿತು. ಕೀಳ ಜನರು ಕೂಡ ತನ್ನ ಸರಿಯಾಗಿ ನಡೆಯುವದನ್ನು ನೋಡಿ ರಾಜಪುತ್ರಿಗೆ ಬಹಳ ಅಸಹ್ಯವಾಯಿತು. ಆಕೆಯು ತಾವಿರುವ ಮನೆಗೆ ಹೋದ ಬಳಿಕ ತನ್ನ ಕೋಣೆಯೊಳಗೆ ಹೋದವಳು ಎಷ್ಟೋ ದಿವಸಗಳವರೆಗೆ ಹೊರಗೆ ಸಹ ಬರಲಿಲ್ಲ. ಆ ಕೋಣೆಯೊಳಗೆ ಆಕೆಯ ಸೇವಕಳಾದ ಪೇಕ್ಯಾ ಮಾತ್ರ ಹೋಗಿ ಆನಂದಗುಹೆಯಲ್ಲಿಯಂತೆ ಆಕೆಯ ಸೇವೆ ಮಾಡುತ್ತಿದ್ದಳು.

ಇಮ್ಲಾಕನು ವ್ಯಾಪಾರದ ಗುಟ್ಟನ್ನು ಚನ್ನಾಗಿ ಅರಿತವನಾಗಿದ್ದನು. ಮರು ದಿನ ಅವನು ಕೆಲವು ಆಭರಣಗಳನ್ನು ಮಾರಿ, ಬಂದ ಹಣದಿಂದ ಒಂದು ಸುಂದರವೂ ಭವ್ಯವೂ ಆದ ಮನೆಯನ್ನು ಬಾಡಿಗೆಗೆ ತಕ್ಕೊಂಡು, ವಿಧವಿಧದ ಸರಕುಗಳನ್ನು ಕೊಂಡುತಂದು, ಜನರ ಮನಸ್ಸು ಒಲಿಯುವಂತೆ ಅವುಗಳನ್ನು ಒಳ್ಳೇ ವ್ಯವಸ್ಥಿತವಾದ ರೀತಿಯಿಂದ ಹೊಂದಿಸಿಟ್ಟನು. ಆದದರಿಂದ ಇವನ್ಯಾರೋ ಒಬ್ಬ ಲಕ್ಷಾಧೀಶ ಸಾವುಕಾರ ವರ್ತಕನಿರುವನೆಂದು ತೀವ್ರವೇ ಜನರ ಗ್ರಹಿಕೆಯಾಯಿತು. ಅವನು ತನ್ನ ಮನೆಗೆ ಬಂದವರ ಕೂಡ ಸಮಯೋಚಿತವಾದಂಥ ಮಧುರ ಮಾತುಗಳನ್ನು ಆಡುತ್ತಿದ್ದನಾದದರಿಂದ ತುಸು ದಿವಸಗಳಲ್ಲಿಯೇ ಅವನಿಗೆ ಅನೇಕ ಜನರ ಗುರುತಾಯಿತು. ಅವನು ಉದಾರನಿದ್ದದರಿಂದ ಆತನ ಆಶ್ರಯವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಸಾವಿರಾರು ಬಡಜನರು ಅವನ ಹತ್ತರ ಬರಹತ್ತಿದರು. ಆತನ ವಿನಯವನ್ನೂ ಸೌಜನ್ಯವನ್ನೂ ನೋಡಿ ಆತನ ಸ್ನೇಹ ಸಂಪಾದಿಸುವದಕ್ಕಾಗಿ ಎಷ್ಟೋ ಜನರು ಹವಣಿಸಲಾರಂಭಿಸಿದರು. ಅವನ ಜೊತೆಗಾರರಿಗೆ (ರಾಜಪುತ್ರ ರಾಜಕನ್ನಿಕೆಯರಿಗೆ) ಆ ದೇಶದ ಭಾಷೆಯ ಜ್ಞಾನವಿದ್ದಿಲ್ಲಾದದರಿಂದ ಮನೆಗೆ ಬಂದ ಜನರೊಳಗೆ ಕೂತು ಮಾತಾಡಲಿಕ್ಕೆ ಬರುತ್ತಿದ್ದಿಲ್ಲ ಆದಕಾರಣ ಅವರ ಅಜ್ಞಾನವು ಹೊರಬೀಳಲಿಲ್ಲ. ಮುಂದೆ ಆ ದೇಶದ ಭಾಷೆಯು ಅವರಿಗೆ ಬಂದಬಂದ ಹಾಗೆ ಅಲ್ಲಿಯ ಜನರ ನಡೆನುಡಿಗಳ ಜ್ಞಾನವು ಅವರಿಗೆ ಹೆಚ್ಚು ಹೆಚ್ಚು ಆಯಿತು.

ಇಮ್ಲಾಕನು ನಾಣ್ಯಗಳ ವಿಷಯಕ್ಕೆ ಅನೇಕ ವ್ಯಾಖ್ಯಾನಗಳನ್ನು ರಾಜಪುತ್ರನಿಗೆ ಹೇಳಿ, ಅವುಗಳ ಸ್ವರೂಪವನ್ನೂ, ಉಪಯೋಗವನ್ನೂ ತಿಳಿಸಿಕೊಟ್ಟ ನಂತರ ಅವನಿಗೆ (ರಾಜಪುತ್ರನಿಗೆ) ಅವುಗಳ ವಿಷಯಕ್ಕೆ ತುಸು ಜ್ಞಾನವಾಯಿತು. ಆದರೆ ಅದೇ ವಿಷಯವನ್ನು ರಾಜಕನ್ನಿಕೆಗೂ ಆಕೆಯ ತೊತ್ತಿಗೂ ಎಷ್ಟಾವರ್ತಿ

ತಿಳಿಸಿ ಹೇಳಿದರೂ ಕಡೆಗೂ ಅವರಿಗೆ ತಿಳಿಯಲಿಲ್ಲ. ವರ್ತಕರು ಚಿನ್ನದ ಮತ್ತು ಬೆಳ್ಳಿಯ ಇಷ್ಟು ಸಣ್ಣ ಸಣ್ಣ ಚೂರುಗಳನ್ನು ತೆಗೆದುಕೊಂಡು ಏನುಮಾಡುತ್ತಿದ್ದಾರಾದೀತು? ಮತ್ತು ಯಾವ ತರದಲ್ಲೂ ಉಪಯೋಗವಿಲ್ಲದಂಥ ಆ ಚೂರುಗಳನ್ನು ತೆಗೆದುಕೊಂಡು ಅವುಗಳ ಬದಲಾಗಿ ಉಪಯುಕ್ತವಾದ ಮತ್ತು ಅವಶ್ಯವಾದ ಪದಾರ್ಥಗಳನ್ನು ಇಷ್ಟು ಉತ್ಕಂಠತೆಯಿಂದ ಯಾಕೆ ಕೊಡುತ್ತಿದ್ದಾರಾದೀತೆಂಬ ಹಲವು ಬಗೆಯ ವಿಚಾರಗಳು ಅವರ ಮನಸ್ಸಿನಲ್ಲಿ ಹುಟ್ಟಿ ಅವರಿಗೆ ಕಡು ಸೋಜಿಗ ವಾಗುತ್ತಿತ್ತು.

ಆ ದೇಶದ ಭಾಷೆಯನ್ನು ಕಲಿಯಲಿಕ್ಕೆ ಅವರಿಗೆ ಎರಡು ವರ್ಷಗಳು ಬೇಕಾದವು. ಆ ಅವಧಿಯಲ್ಲಿ ಇವಲ್ಲಾಕನು ಯಾವತ್ತೂ ತರದ ಸಣ್ಣದೊಡ್ಡ ಪದವಿಗಳುಳ್ಳ ಜನರನ್ನೂ ಅವರ ಸ್ಥಿತಿಗತಿಗಳನ್ನೂ ರಾಜಪುತ್ರ ರಾಜಕನ್ನಿಕೆಯರ ದೃಷ್ಟಿಗೆ ಹಾಕಿದನು. ನಡತೆಯ ಸಂಬಂಧವಾಗಿ ಇಲ್ಲವೆ ಸಂಪತ್ತಿಯ ಸಂಬಂಧವಾಗಿ ವಿಶೇಷ ಆಶ್ಚರ್ಯಕರವಾದ ಸಂಗತಿಗಳು ಯಾರಿಗೆ ಸಂಭವಿಸಿರುತ್ತವೋ, ( ಕೆಲವರಿಗೆ ವಿಲಕ್ಷಣವಾದ ರೀತಿಯಿಂದ ಅಕಸ್ಮಿತವಾಗಿ ಅಪಾರಸಂಪತ್ತಿಯು ಲಾಭವಾಗೋಣ ಮುಂತಾದ ಸಂಗತಿಗಳುಂಟು ) ಅಂಥ ಯಾವತ್ತು ಜನರ ಸ್ನೇಹವನ್ನು ಇವಲ್ಲಾಕನು ಸಂಪಾದಿಸಿದ್ದನು. ದುಂದುಗಾರರ ಮನೆಗಳಿಗೂ, ಮಿತದಿಂದ ವೆಚ್ಚ ಮಾಡುವ ಜನರ ಮನೆಗಳಿಗೂ, ಉದ್ಯೋಗಿಗಳ ಮನೆಗಳಿಗೂ, ಹಾಗೂ ಸೋಮಾರಿಗಳ ಮನೆಗಳಿಗೂ, ವ್ಯಾಪಾರಸ್ಥರ ಮನೆಗಳಿಗೂ ಪಂಡಿತರ ಮನೆಗಳಿಗೂ ಇವಲ್ಲಾಕನು ಮೇಲಿಂದಮೇಲೆ ಹೋಗುತ್ತಿದ್ದನು.

ರಾಜಪುತ್ರನಿಗೆ ಆ ದೇಶದ ಭಾಷೆಯು ಚನ್ನಾಗಿ ಬರಹತ್ತಿತು. ಆನಂತರ ಪರರ ಕೂಡ ಮಾತಾಡಬೇಕಾದರೆ ಎಷ್ಟು ಎಚ್ಚರಿಕೆಯಿಂದ ಇರಬೇಕೆಂಬುವದನ್ನು ಚನ್ನಾಗಿ ಅರಿತುಕೊಂಡು, ಆತನು ಇವಲ್ಲಾಕನ ಕೂಡ ಜನರೊಳಗೆ ಹೋಗಿ ಕೂತುಕೊಳ್ಳಲಿಕ್ಕೂ, ಮಾತಾಡಲಿಕ್ಕೂ ಆರಂಭಿಸಿದನು. ಮನುಷ್ಯರ ವಿದ್ಯಮಾನ ಸ್ಥಿತಿಗಳಲ್ಲಿ ಅತ್ಯುತ್ತಮಸ್ಥಿತಿಯು ಯಾವದೋ, ಅದನ್ನು ಆರಿಸಿಕೊಂಡು ಆ ಸ್ಥಿತಿಯಲ್ಲಿಯೇ ತನ್ನ ಆಯುಷ್ಯವನ್ನು ಕಳೆಯಬೇಕೆಂಬ ಉದ್ದೇಶದಿಂದ ಅವನು ಜನಸಮಾಜದೊಳಗೆ ಹೋಗಹತ್ತಿದನು.

ಕೆಲವು ದಿವಸಗಳ ವರೆಗೆ ಮೇಲೆ ಹೇಳಿದಂಥ ಉತ್ತಮ ಸ್ಥಿತಿಯನ್ನು ಹುಡುಕುತ್ತ ಕುಳಿತುಕೊಳ್ಳುವ ಕಾರಣವೇ ಇಲ್ಲೆಂದು ಅವನು ತಿಳಿದುಕೊಂಡನು, ಯಾಕಂದರೆ ಅವನು ನೋಡಿದ ಜನರೆಲ್ಲರೂ ಕೇವಲ ಸೌಖ್ಯದ ನಿಧಿಯಲ್ಲಿಯೇ ಇದ್ದಂತೆ ತೋರಿದರು. ಅವನು ಹೋದಹೋದಲ್ಲಿ ಆನಂದವೃತ್ತಿಯುಳ್ಳಂಥ-

ಪ್ರೀತಿಯನ್ನು ತೋರಿಸುವಂಥ ಜನರೇ ಅವನ ದೃಷ್ಟಿಗೆ ಬೀಳುವರು. ಅವನು ನೋಡಿದ ಜನರಲ್ಲಿ ಕೆಲವರು ಸಂತೋಷಸಮುದ್ರದಲ್ಲಿ ಮುಳುಗಿ ಆನಂದದಿಂದ ಹಾಡುವರು; ಕೆಲವರು ಸ್ವಸ್ಥಚಿತ್ತದಿಂದ ವಿನೋದಮಾಡುವರು. ಸಾರಾಂಶ ದುಃಖದ ಲವಲೇಶವು ಅವನ ಕಣ್ಣಿಗೆ ಬೀಳಲಿಲ್ಲ. ಇದನ್ನೆಲ್ಲ ನೋಡಿ ಅವನು ವಿಚಾರಿಸಿದ್ದೇನಂದರೆ-- "ಈ ಜಗತ್ತಿನಲ್ಲಿ ಎತ್ತ ನೋಡಿದರತ್ತ ಸಂತೋಷವೇ ಇರುತ್ತದೆ; ಎಲ್ಲ ಜನರಿಗೂ ಅವರವರ ಯೋಗ್ಯತಾನುಸಾರವಾಗಿ ಅವಶ್ಯಕವಾದ ಯಾವತ್ತು ವಸ್ತುಗಳು ಸಿಕ್ಕುತ್ತವೆ; ಯಾವ ವಿಷಯದ ಕೊರತೆಯೂ ಇಲ್ಲ; ಯಾವತ್ತು ಜನರು ಉದಾರರೂ, ಅಂತಃಕರುಣವುಳ್ಳವರೂ ಇರುತ್ತಾರೆ; ಇಷ್ಟೆಲ್ಲ ತರದ ಸುಸ್ಥಿತಿಯು ಈ ಜಗತ್ತಿನಲ್ಲಿದ್ದ ಬಳಿಕ ದುಃಖವು ಜನರಿಗೆ ಎಲ್ಲಿಂದ ಬರಬೇಕು? ಒಬ್ಬನಿಗಾದರೂ ಎಳ್ಳಷ್ಟು ದುಃಖವಾಗುವ ಕಾರಣವಿಲ್ಲ."

ಈ ಮೇರೆಗೆ ಜಗತ್ತಿನೊಳಗಿನ ಎಲ್ಲ ಜನರು ಸುಖಿಗಳಿರುವರೆಂಬ ಭ್ರಾಂತಿಯು ರಾಜಪುತ್ರನ ಮನಸ್ಸಿನಲ್ಲಿ ಹುಟ್ಟಿ ಅವನಿಗೆ ಬಹಳ ಸಂತೋಷವಾಯಿತು. ಆತನ ಭ್ರಾಂತಿಕರವಾದ ವಿಚಾರವನ್ನು ಹೋಗಲಾಡಿಸಲಿಕ್ಕೆ ಇಮ್ಲಾಕನು ಕೂಡಲೆ ಪ್ರಯತ್ನ ಮಾಡಲಿಲ್ಲ. ಯಾಕಂದರೆ ರಾಜಪುತ್ರನಿಗೆ ಜಗತ್ತಿನ ಅನುಭವವು ಇಲ್ಲದ್ದರಿಂದ ಆತನು ನೋಡಿದ್ದೆಲ್ಲ ಅವನಿಗೆ ಅಮೃತಮಯವಾಗಿ ತೋರುತ್ತಿತ್ತು. ಆ ಅಮೃತದಲ್ಲಿ ಸಂಸಾರಸಾಗರದ ದುಃಖವೆಂಬ ಕಾಳಕೂಟ ವಿಷವನ್ನು ಈಗಿನಿಂದಲೇ ಬೆರಿಸಿ ಅವನ ಆಶಾಂಕುರವನ್ನು ಛೇದಿಸಬಾರದು; ಅದರ ಅನುಭವವು ಆತನಿಗೆ ತನಗೆ ತಾನೇ ಬರಬೇಕೆಂದು ವಿಚಾರಮಾಡಿ, ಇಮ್ಲಾಕನು ಸುಮ್ಮನಿದ್ದನು. ಒಂದು ದಿವಸ ತುಸು ವೇಳೆ ಸುಮ್ಮನೆ ಕುಳಿತ ಬಳಿಕ, ರಾಜಪುತ್ರನು ಇಮ್ಲಾಕನಿಗೆ ಅಂದನು "ನನ್ನ ಮಿತ್ರರೆಲ್ಲರೂ ಯಾವಾಗಲೂ ಒಂದೇ ಸವನೆ ಸುಖವನ್ನೇ ಅನುಭೋಗಿಸುತ್ತಾರೆ; ಆದರೆ ನನಗೆ ಮಾತ್ರ ಎಳ್ಳಷ್ಟು ಸುಖವಿಲ್ಲ; ಹೀಗ್ಯಾಕೆ ಆಗುತ್ತಿರಬಹುದು? ಇದರ ಕಾರಣವೇನು? ತಿಳಿಯದು. ಒಳ್ಳೇ ಉತ್ಕಂಠತೆಯಿಂದ ಸಂಪಾದಿಸಿದ ಸುಖೋಪಭೋಗವು ಅಲ್ಪ ಕಾಲದಲ್ಲಿಯೇ ನನಗೆ ಬೇಸರವನ್ನುಂಟುಮಾಡುತ್ತದೆ. ಆನಂದದಿಂದ ವೇಳೆಯನ್ನು ಕಳೆಯುವ ಜನಸಮೂಹದಲ್ಲಿ ನಾನು ಹೋಗಿ ಕೂತುಕೊಳ್ಳುತ್ತೇನೆ; ನಿಜವು; ಆದರೆ ಅಲ್ಲಿ ಸುಖವಾಗಬೇಕೆಂಬ ಹವಣಿಕೆಯಿಂದ ನಾನು ಅಂಥ ಸಮೂಹದಲ್ಲಿ ಹೋಗುವದಿಲ್ಲ; ಆದರೆ ನನ್ನ ದುಃಖವು ತುಸುಮಟ್ಟಿಗಾದರೂ ಮರೆಬೀಳಲಿ ಎಂಬ ಉದ್ದೇಶದಿಂದ ಮಾತ್ರ ಹೋಗುತ್ತೇನೆ. ಅವರ ಸಂಗಡ ಒಮ್ಮೊಮ್ಮೆ ಆನಂದದಿಂದ ನಗುತ್ತೇನೆ. ಆದರೆ ನನಗೆ ಆನಂದವಾಗಿ ನಾನು ನಗುವದಿಲ್ಲ; ನನ್ನ ಔದಾಸೀನ್ಯವನ್ನು ಮುಚ್ಚಿಕೊಳ್ಳುವದಕ್ಕಾಗಿ ಮಾತ್ರ ನಗುತ್ತೇನೆ."

ಇಮ್ಲಾಕನು—"ಪ್ರತಿಯೊಬ್ಬನು ತನ್ನ ಮನಸ್ಸಿನಲ್ಲಿ ಯಾವತರದ ವ್ಯಾಪಾರಗಳು ನಡೆದಿರುತ್ತವೆಯೋ, ಅವುಗಳನ್ನು ಲಕ್ಷಕ್ಕೆ ತಂದು, ಅದೇತರದ ವ್ಯಾಪಾರಗಳು ಪರರ ಮನಸ್ಸಿನಲ್ಲಿಯೂ ನಡೆದಿರುತ್ತವೆಂದು ತರ್ಕಿಸಬಹುದು. 'ನಿಮ್ಮ ಸಂತೋಷವೃತ್ತಿಯು ಕೇವಲ ಕೃತ್ರಿಮವಾದದ್ದಿರುತ್ತದೆಂದು' ನಿಮಗೆ ಗೊತ್ತಿದ್ದ ಮೇಲೆ ಪರರ ಸಂತೋಷವೃತ್ತಿಯಾದರೂ ಅದೇ ತರದ್ದಿರಬಹುದೆಂದು ಊಹಿಸಲಿಕ್ಕೆ ಏನೂ ಪ್ರತ್ಯವಾಯವಿಲ್ಲ. ಜಗತ್ತಿನೊಳಗಿನ ಅಖಿಲ ಪ್ರಾಣಿಗಳು ಮತ್ಸರದ ಮೂರ್ತಿಗಳಾಗಿವೆ. ಒಬ್ಬನಿಗೆ ಒಂದು ತರದ ಲಾಭವಾದರೆ ಅದನ್ನು ಕಂಡು ಪರರು ಕೂಡಲೆ ಮತ್ಸರಪಡುತ್ತಾರೆ. ನಿಜವಾದ ಸುಖಪ್ರಾಪ್ತಿಯು ಎಂದೂ ಆಗುವದಿಲ್ಲೆಂದು ಮನುಷ್ಯನು ಮನಗಾಣಬೇಕಾದರೆ ಅವನಿಗೆ ಬಹಳ ದಿವಸಗಳು ಬೇಕಾಗುವವು. ಪ್ರತಿಯೊಬ್ಬ ಮನುಷ್ಯನು ತನ್ನನ್ನುಳಿದು ಎಲ್ಲರೂ ಸುಖವುಳ್ಳವರಿರುತ್ತಾರೆಂದು ತಿಳಕೊಳ್ಳುತ್ತಾನೆ ; ಮತ್ತು ತನಗೆ ಆ ತರದ ಸುಖವಾಗಬೇಕೆಂಬ ಉತ್ಕಟೇಚ್ಛೆಯು ಆತನ ಮನಸ್ಸಿನಲ್ಲಿ ಯಾವಾಗಲೂ ಜಾಗರೂಕವಾಗಿರುತ್ತದೆ. ಬಹಳ ದೂರ ಯಾಕೆ ? ನಾವು ನಿನ್ನೆ ರಾತ್ರಿ ಹೋಗಿ ಕುಳಿತ ಸಮೂಹದೊಳಗಿನ ಜನರ ವಿಷಯಕ್ಕೇ ವಿಚಾರಮಾಡುವ, ಅಲ್ಲಿ ನೆರೆದ ಪ್ರತಿಯೊಬ್ಬ ಮನುಷ್ಯನ ಆನಂದವನ್ನೂ, ವಿನೋದವನ್ನೂ ನೋಡಿದರೆ, ಚಿಂತೆ ಶೋಕಗಳಿಂದ ವ್ಯಾಪ್ತವಾದ ಮೃತ್ಯುಲೋಕದಲ್ಲಿದ್ದ ಜನರಿಗೆ ದುರ್ಲಭತರವಾದ ಸೌಖ್ಯಗಳು ಅವರಿಗಿದ್ದಂತೆ ಅವರ ಮುಖಮುದ್ರೆಯು ಮೇಲಿಂದ ಕಂಡುಬರುತ್ತಿತ್ತು; ಮೃತ್ಯುಲೋಕದಲ್ಲಿ ವಾಸಿಸುವ ಜನರಿಗಿಂತಲೂ ಹೆಚ್ಚಿನ ಪುಣ್ಯವಂತರೂ, ಭಾಗ್ಯವಂತರೂ ಅದಂಥವರಿಗೆ ಮಾತ್ರ ಆಗತಕ್ಕ ಆನಂದವು ನಿನ್ನೆ ಆ ಸಭೆಯಲ್ಲಿ ನೆರೆದ ಜನರಿಗೆ ಆದಂತೆ ತೋರಿತು. ಆದರೆ ನಾನು ನಿಮಗೆ ನಿಜವಾಗಿ ಹೇಳುವದೇನಂದರೆ, ನಿನ್ನೆ ಆನಂದಪಟ್ಟವನಂತೆ ತೋರುವ ಪ್ರತಿಯೊಬ್ಬ ಮನುಷ್ಯನಿಗೆ ಏಕಾಂತವಾಸದ ಅಂಜಿಕೆಯು ಇತ್ತೇ ಇತ್ತು ; ಅಂದರೆ ಒಬ್ಬನೇ ಒಂದು ಸ್ಥಳದಲ್ಲಿ ಕುಳಿತರೆ ಇಲ್ಲದ ದುಃಖವು ನೆನಪಾಗಿ ಮನಸ್ಸಿಗೆ ಖೇದವಾಗುತ್ತದೆ; ಆ ಖೇದವನ್ನು ದೂರ ಮಾಡುವದಕ್ಕೋಸ್ಕರವಾಗಿಯೇ ಅವರೆಲ್ಲರು ಒತ್ತಟ್ಟಿಗೆ ಒಟ್ಟುಗೂಡಿದ್ದರಲ್ಲದೆ ನಿಜವಾಗಿ ಸುಖವುಳ್ಳ ಮನುಷ್ಯನು ಆ ಸಮೂಹದಲ್ಲಿ ಒಬ್ಬನೂ ಇದ್ದಿಲ್ಲ."

ರಾಜಪುತ್ರನು—"ನನ್ನ ಸಂತೋಷವೃತ್ತಿಯು ಕೃತ್ರಿಮವಾಗಿದ್ದಂತೆ ಪರರ ಸಂತೋಷವೃತ್ತಿಯಾದರೂ ಹಾಗೇ ಇರಬಹುದೆಂದು ನಿಮ್ಮ ಅನ್ವೇಷಣದರ ಮೇಲಿಂದ ನನಗೆ ನಿಜವಾಗಿ ಕಂಡು ಬರುತ್ತದೆ. ಇಡೀ ಮನುಷ್ಯಜಾತಿಗೆ ಇದ್ದ ಸಾಮಾನ್ಯ ದುಃಖಗಳು ಒತ್ತಟ್ಟಿಗಿರಲಿ; ವಿದ್ಯಮಾನ ಮನುಷ್ಯ ಸ್ಥಿತಿಗಳಲ್ಲಿ ಕೆಲವು

ಸ್ಥಿತಿಗಳು ಉಳಿದವುಗಳಿಗಿಂತ ಮೇಲಾದಂಥವಿರುತ್ತವೆ. ಎಲ್ಲ ಒಂದೇಸವನೆ ಇರುವದಿಲ್ಲ. ಅಂದಮೇಲೆ ದುಃಖದ ಅಂಶವು ತೀರ ಕಡಿಮೆ ಇದ್ದಂಥ ಸ್ಥಿತಿಯನ್ನು ಆರಿಸಿ ತೆಗೆಯುವದು ಜಾಣತನವಿರುತ್ತದೆ. ಅಂದರೆ ಜ್ಞಾನಿಗಳು ಇದ್ದ ಸ್ಥಿತಿಗಳೊಳಗೇ ಚಲೋ ಸ್ಥಿತಿಯನ್ನು ತಮ್ಮ ಬುದ್ಧಿಬಲದಿಂದ ಆರಿಸಿ ತೆಗೆಯುವರು."

ಇಮ್ಲಾಕ—"ಸುಖದುಃಖಗಳ ಕಾರಣಗಳು ನಾನಾವಿಧದವೂ, ಅನಿಶ್ಚಿತವಾದಂಥವೂ ಇದ್ದದರಿಂದ ಅವುಗಳ ಶೋಧಮಾಡುವದು ಸುಸಾಧ್ಯವಾದ ಕೆಲಸವಲ್ಲ. ಒಮ್ಮೊಮ್ಮೆ ಯಾವದರಿಂದ ಸುಖವಾಗುತ್ತದೋ ಅದೇ ಕಾರಣದಿಂದ ಮತ್ತೊಮ್ಮೆ ದುಃಖವುಂಟಾಗುತ್ತದೆ. ಕಲ್ಪನೆಗೂ ಕೂಡ ಅಸಾಧ್ಯವಾದ ಆಕಸ್ಮಿಕ ಕಾರಣವು ಸಂಭವಿಸಿ ಒಮ್ಮೊಮ್ಮೆ ವಿಪರೀತ ಪರಿಣಾಮವಾಗುತ್ತದೆ. ಈ ತರದ ಕಾರಣಗಳನ್ನು ಹುಡುಕುತ್ತ ಕುಳಿತುಕೊಳ್ಳುವದು ಎಷ್ಟು ತೊಂದರೆಯುಳ್ಳದ್ದೂ ತೊಡಕುಳ್ಳದ್ದೂ ಇರುತ್ತದೆಂದರೆ, ಮನುಷ್ಯಸ್ಥಿತಿಗಳಲ್ಲಿ ಇಂಥಾದ್ದೊಂದು ಸ್ಥಿತಿಯು ಅತ್ಯುತ್ತಮವಾದದ್ದೂ, ನಿರ್ವಿವಾದವಾದದ್ದೂ (ಚಲೋ ಇಲ್ಲವೆ ಕೆಟ್ಟದು ಎಂಬ ವಾದರಹಿತವಾದದ್ದೂ) ಇರುತ್ತದೆಂದು ನಿಶ್ಚಯಿಸಿ ಅದನ್ನೇ ಸ್ವೀಕರಿಸಬೇಕಾದರೆ ಸಾಯುವ ತನಕ ಆ ಶೋಧವನ್ನು ಮಾಡುತ್ತ ಕುಳಿತಾಗ್ಯೂ ಕಡೆಗೆ ಏನೂ ನಿರ್ಣಯವಾಗುವದಿಲ್ಲ. ಶೋಧ ಮಾಡಿ ಮಾಡಿ ಸತ್ತು ಹೋಗಬೇಕಾಗುವದು."

ರಾಜಪುತ್ರನು:—"ಯಾರ ಉಪದೇಶವನ್ನು ಕೇಳಿ ನಾವು ಆಶ್ಚರ್ಯಚಕಿತರಾಗುತ್ತೇವೋ, ಮತ್ತು ಆ ಉಪದೇಶಕರ ಬಗ್ಗೆ ನಮ್ಮಲ್ಲಿ ಪೂಜ್ಯಬುದ್ಧಿ ಹುಟ್ಟುತ್ತದೋ, ಅಂಥ ಬುದ್ಧಿವಂತರು ತಮಗೆ ಸುಖದಾಯಕವಾದ ಸಂಸಾರದ ಸ್ಥಿತಿಯನ್ನೇ ಅವಲಂಬಿಸಿರುತ್ತಾರೆಂಬುವದು ನಿರ್ವಿವಾದವಾದ ಸಂಗತಿಯು."

ಇಮ್ಲಾಕ ಕವಿಯು:—"ಇಂಥಾದ್ದೊಂದು ಸ್ಥಿತಿಯು ಉತ್ತಮವಾದದ್ದು; ಇದರಲ್ಲಿಯೇ ಆಯುಷ್ಯವನ್ನು ಕಳೆಯಬೇಕೆಂದು ವಿಚಾರ ಮಾಡಿ ನಡೆಯುವ ಜನರು ತೀರಕಡಿಮೆ; ಇಲ್ಲೆಂದರೂ ಸಲ್ಲುವದು. ಈಗ ಬೇರೆ ಬೇರೆ ಸ್ಥಿತಿಯಲ್ಲಿದ್ದ ಜನರು ತಮಗೆ ಪ್ರಾಪ್ತವಾದ ಸ್ಥಿತಿಯನ್ನು ವಿಚಾರಪೂರ್ವಕವಾಗಿ ಆರಿಸಿಕೊಂಡಿರುತ್ತಾರೆಂದು ಅನ್ನಲಾಗದು; ಇಷ್ಟೇ ಅಲ್ಲ ಅವರು ಇಂಥಾದ್ದೊಂದು ಸ್ಥಿತಿಯಲ್ಲಿರಬಾರದೆಂದು ಇಲ್ಲವೆ ಆ ಸ್ಥಿತಿಯು ತಮಗೆ ಪ್ರಾಪ್ತವಾಗಬಾರದೆಂದು ವಿಶ್ವಪ್ರಯತ್ನ ಮಾಡಿದರೂ ಕೂಡ, ಆ ಪ್ರಯತ್ನವು ವ್ಯರ್ಥವಾಗಿ ಅವರಿಗೆ ಬೇಡಾದ ಸ್ಥಿತಿಯು ತಾನೇ ಪ್ರಾಪ್ತವಾಗಿದೆ. ಮತ್ತು ಇದೇ ಕಾರಣದಿಂದ ಪ್ರತಿಯೊಬ್ಬ ಮನುಷ್ಯನು ತನ್ನ ನೆರೆಯವನು ತನಗಿಂತಲೂ ಹೆಚ್ಚು ಸುಖವುಳ್ಳವನಿರುತ್ತಾನೆಂದು ಕಲ್ಪಿಸುತ್ತಾನೆ. ಈ ವಿಚಾರವು ಮನಸ್ಸಿನಲ್ಲಿ ಬಾರದ ಮನುಷ್ಯನು ಸಿಕ್ಕುವದು ಅಪರೂಪ."

ರಾಜಪುತ್ರನು—"ನೀವು ಹೇಳಿದಂತೆ ಮನುಷ್ಯರ ಸ್ಥಿತಿಯು ಇರಬಹುದು. ಆದರೆ ನನ್ನ ಸ್ಥಿತಿಯು ಹಾಗೆ ಇರುವದಿಲ್ಲ. ಇದೊಂದು ಸಂತೋಷಕರವಾದ ಸಂಗತಿಯೇ ಸರಿ. ನಾನು ರಾಜಕುಲದಲ್ಲಿ ಹುಟ್ಟಿರುವದರಿಂದ ನನಗೆ ಉತ್ತಮವಾಗಿ ಕಂಡ ಸ್ಥಿತಿಯನ್ನೇ ಆರಿಸಿಕೊಳ್ಳುವ ಸಾಮರ್ಥ್ಯವು ನನ್ನಲ್ಲುಂಟು; ಮತ್ತು ಜಗತ್ತಿನೊಳಗಿನ ಯಾವತ್ತು ಸ್ಥಿತಿಗಳನ್ನು ನೋಡಲಿಕ್ಕೆ ನನಗೆ ಅನುಕೂಲತೆಯುಂಟು. ಆದದರಿಂದ ನಾನು ಸಾವಕಾಶವಾಗಿ ಚನ್ನಾಗಿ ವಿಚಾರಮಾಡಿ, ಉತ್ತಮ ಸ್ಥಿತಿಯನ್ನು ಶೋಧಿಸಿ ತೆಗೆದು ಅದನ್ನೇ ಸ್ವೀಕರಿಸುವೆನು. ಸುಖವು ಜಗತ್ತಿನೊಳಗೆ ಎಲ್ಲಾದರೂ ಒತ್ತಟ್ಟಿಗೆ ಇರಲಿಕ್ಕೆ ಬೇಕು, ಇದರಲ್ಲೇನೂ ಸಂದೇಹವಿಲ್ಲ.

## ಹದಿನೇಳನೆಯ ಭಾಗವು.

### ರಾಜಪುತ್ರನೂ, ಆನಂದವೂ ಉಲ್ಲಾಸವೂ ಉಳ್ಳ ತರುಣ ಜನರ ಸಮಾಜವೂ.

ಮರುದಿವಸ ಬೆಳಿಗ್ಗೆ ಎದ್ದು ರಾಸೆಲಾಸನು ಸಂಸಾರದೊಳಗಿನ ವಿದ್ಯಮಾನ ಸ್ಥಿತಿಗಳೊಳಗೆ ಉತ್ತಮವಾದ ಸ್ಥಿತಿಯನ್ನು ಗೊತ್ತುಹಚ್ಚಬೇಕೆಂದು ನಿಶ್ಚಯಿಸಿ ಆ ಬಗ್ಗೆ ಪ್ರಯತ್ನ ಮಾಡಹತ್ತಿದನು. ಅವನು ಅಂದದ್ದು "ತಾರುಣ್ಯವೇ ಸುಖೋಪಭೋಗದ ಯೋಗ್ಯಕಾಲವು. ಇಚ್ಛೆಗಳನ್ನು ತೃಪ್ತಿಪಡಿಸುವದೇ ತಮ್ಮ ಆದ್ಯ ಕರ್ತವ್ಯವು ಹೀಗೆಂದು ತಿಳಿದು ಅದೇ ಕೆಲಸದಲ್ಲಿ (ಸುಖಗಳನ್ನನುಭೋಗಿಸುವದರಲ್ಲಿ) ತಮ್ಮ ಇಡೀ ದಿವಸವನ್ನು ಕಳೆಯುವಂಥ ತರುಣ ಜನರ ಸಂಗತಿಯನ್ನು ನಾನು ಹಿಡಿಯುವೆನು" ರಾಜಪುತ್ರನು ಸ್ವತಃ ತರುಣನೂ, ಧನಿಕನೂ ಇದ್ದದರಿಂದ ಮೇಲೆ ಹೇಳಿದಂಥ ತರುಣ ಜನರ ಸಮಾಜದೊಳಗೆ ಕೂಡಿಕೊಳ್ಳುವದು ಅವನಿಗೇನೂ ಕಠಿಣವಾಗಲಿಲ್ಲ. ಆದರೆ ಆ ಸಮಾಜದಲ್ಲಿ ಕೂಡಿದ ನಂತರ ತೀರ ತುಸು ದಿವಸಗಳಲ್ಲಿಯೇ ಅವನು ಬೇಸತ್ತನು. ಯಾಕಂದರೆ, ಆ ಸಮಾಜದಲ್ಲಿ ಸದಾಸರ್ವಕಾಲ ಹುಡುಗಾಟವೇ ನಡೆಯುತ್ತಿತ್ತು, ಅವರ ಸಂಭಾಷಣದಲ್ಲಿ ಜಾಣತನವೂ, ಮಾರ್ಮಿಕತನವೂ ಎಳ್ಳಷ್ಟು ಇರುತ್ತಿದ್ದಿಲ್ಲ. ಏನೂ ಕಾರಣವಿಲ್ಲದೆ ಅವರು ನಗುವರು. ಉಣ್ಣೋಣ, ತಿನ್ನೋಣ ಮುಂತಾದ ಇಂದ್ರಿಯಗಳನ್ನು ತೃಪ್ತಿಪಡಿಸತಕ್ಕಂಥ ಗ್ರಾಮ್ಯ ಸಾಧನಗಳ ಹೊರತು ಮತ್ತೇನೂ ಅವರಿಗೆ ಗೊತ್ತಿದ್ದಿಲ್ಲ. ಉಚ್ಚ ತರದ ಸುಖೋಪಭೋಗಕ್ಕೆ ಅವಶ್ಯವಾದ ಚಾತುರ್ಯ, ಕಲ್ಪನಾಶಕ್ತಿ, ಯುಕ್ತಿಪ್ರಯುಕ್ತಿಗಳು ಮುಂತಾದ ಮನಸ್ಸಿನ ಪ್ರವೃತ್ತಿಗಳು ಅವರ ಕನಸುಗಳಲ್ಲಿ ಸಹ ಬರುತ್ತಿದ್ದಿಲ್ಲ.

ಅವರು ನಿಯಮಿತತನ, ವ್ಯವಸ್ಥೆ, ಕಟ್ಟಳೆ ಮುಂತಾದ ಅತ್ಯವಶ್ಯಕವಾದ ಸದ್ಗುಣಗಳನ್ನು ಉಪಹಾಸ ಮಾಡುತ್ತಿದ್ದರು. ಸಾರಾಂಶ ಅವರ ವರ್ತನವು ಕಾಡಹರದಷ್ಟು ಕೀಳತರವಷ್ಟು ಇತ್ತು. ಆದರೆ ಯಾವನಾದರೊಬ್ಬ ದೊಡ್ಡ ಮನುಷ್ಯನು ಅವರನ್ನು ದಿಟ್ಟಿಸಿ ನೋಡಿದ ಕೂಡಲೆ ಅವರು ಅಂಜುತ್ತಿದ್ದರು; ಮತ್ತು ಯಾವನೊಬ್ಬ ಜಾಣ ಮನುಷ್ಯನು ಅವರನ್ನು ತಿರಸ್ಕರಿಸಿದರೆ ಅವರು ನಾಚಿ ತಲೆಬಾಗಿಸುತ್ತಿದ್ದರು.

ಯಾವ ವರ್ತನಕ್ರಮವನ್ನು ಸ್ವೀಕರಿಸುವದರಿಂದ ತನಗೆ ನಾಚಿಕೆ ಬರುತ್ತದೋ ಅಂಥ ವರ್ತನಕ್ರಮದಿಂದ ಸುಖವು ಎಂದಾದರೂ ಆದೀತೆ? ಎಂದೂ ಆಗಲಿಕ್ಕಿಲ್ಲೆಂದು ರಾಜಪುತ್ರನ ನಿಶ್ಚಯಿಸಿದನು. ಆತನು ತನ್ನ ಮನಸ್ಸಿನೊಳಗೆ ಅಂದದ್ದು" ಮನಸ್ಸಿನಲ್ಲಿ ಯಾವದಾದರೊಂದು ಉದ್ದೇಶವನ್ನು ಕಲ್ಪಿಸಿ, ಆ ಉದ್ದೇಶವನ್ನು ಸಿದ್ಧಿಸುವದಕ್ಕೋಸ್ಕರ ಏನೂ ಪ್ರಯತ್ನ ಮಾಡದಿರುವದೂ, ಮನಸ್ಸಿಗೆ ಬಂದಾಗ ಏನೂ ಕಾರಣವಿಲ್ಲದೆ ಸಂತೋಷಪಡುವದೂ ಇಲ್ಲವೆ ಖೇದಪಡುವದೂ ವಿಚಾರಶಕ್ತಿಯುಳ್ಳ ಮನುಷ್ಯನಿಗೆ ಯೋಗ್ಯವಾದುದಲ್ಲ. ನಿಜವಾದ ಸುಖವು ಅನಿಶ್ಚಿತವಾದುದೂ ನಶ್ವರವಾದುದೂ ಇರಕೂಡದು; ನಿಶ್ಚಿತವಾದುದೂ ಚಿರಕಾಲ ಬಾಳುವಂಥಾದ್ದೂ ಇದ್ದ ಸುಖವೇ ನಿಜವಾದ ಸುಖವು"

ಈ ಮೇರೆಗೆ ರಾಜಪುತ್ರನಿಗೆ ಆ ಸಮಾಜದ ವರ್ತನಕ್ರಮವು ಅಯೋಗ್ಯ ಕಂಡದ್ದರಿಂದ ಆ ಸಮಾಜದಲ್ಲಿ ಹೋಗುವದನ್ನು ಬಿಡಬೇಕೆಂದು ನಿಶ್ಚಯಿಸಿದನು. ಆದರೆ ಆ ತರುಣಜನರ ಸಂಗತಿಯನ್ನು ಬಿಡುವ ಮೊದಲು ಅವರಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಬೇಕೆಂದು ರಾಜಪುತ್ರನ ಮನಸ್ಸಿನಲ್ಲಿ ಬಂತು. ಯಾಕಂದರೆ ಆ ಮಿತ್ರರು ಅವಿಚಾರಿಗಳಿದ್ದಾಗ್ಯೂ ನಿಷ್ಕಪಟಿಗಳೂ, ವಿನಯುಗುಣವುಳ್ಳವರೂ ಇದ್ದದರಿಂದ ಅವರಿಗೆ ಕೇಡಾಗಬಾರದೆಂದು ರಾಜಪುತ್ರನ ಮನಸ್ಸಿತ್ತು. ಒಂದು ದಿನ ರಾಜಪುತ್ರನು ಅವರಿಗೆ ಅಂದನು "ಮಿತ್ರರೇ, ಈಗ ನಾವು ಯಾವ ರೀತಿಯಲ್ಲಿ ನಮ್ಮ ಆಯುಷ್ಯವನ್ನು ವೆಚ್ಚ ಮಾಡುತ್ತೇವೋ ಅದರ ವಿಷಯಕ್ಕೂ, ಮತ್ತು ಇದೇ ವರ್ತನಕ್ರಮವನ್ನು ನಾವು ಮುಂದೆ ಸಾಗಿಸಿದರೆ ಅದರಿಂದ ನಮಗಾಗುವ ಪರಿಣಾಮದ ವಿಷಯಕ್ಕೂ ನಾನು ಚನ್ನಾಗಿ ವಿಚಾರ ಮಾಡಿದ್ದೇನೆ. ವಿಚಾರದ ಅಂತ್ಯದಲ್ಲಿ ನನಗೆ, ಈಗಿನ ನಮ್ಮ ವರ್ತನದಲ್ಲಿ ದೊಡ್ಡ ತಪ್ಪಾಗಿರುತ್ತದೆಂದು ಕಂಡು ಬಂದಿರುತ್ತದೆ ಈಗಿನ ನಮ್ಮ ವರ್ತನದಿಂ ನಮಗೆ ಬಹಳ ಸುಖವಾಗುತ್ತದೆಂದು ನಾವು ತಿಳಿಯುಕೊಳ್ಳುತ್ತೇವೆ; ಆದರೆ ಚನ್ನಾಗಿ ವಿಚಾರಮಾಡಿ ನೋಡಿದರೆ ಅದರಿಂದ ನಮಗೆ ದೊಡ್ಡ ಹಾನಿಯುಂಟಾಗುವದು ಕಂಡುಬರುವದು. ನೋಡಿರಿ, ಮುಪ್ಪಿನಲ್ಲಿ ನಮಗೆ ದುಃಖವೂ ಪಶ್ಚಾತ್ತಾಪವೂ ಆಗದಂತೆ ನಾವು ನಮ್ಮ ತಾರು

ಣ್ಯದ ದಿವಸಗಳನ್ನು ವೆಚ್ಚಮಾಡಬೇಕು. ವಿಚಾರ ಮಾಡದ ಮನುಷ್ಯನಿಗೆ ಜಾಣ ತನವು ಎಂದೂ ಬರಲಾರದು. ಸರ್ವಕಾಲ ವಿನೋದದಲ್ಲಿಯೇ ಹೊತ್ತು ಕಳೆಯುವ ಮನುಷ್ಯನು ಸಾಯುವ ವರೆಗೆ ಅಜ್ಞಾನಿಯಾಗಿಯೇ ಉಳಿಯುವನು. ಅದರಂತೆಯೇ ಮನುಷ್ಯನು ತಿನ್ನುಣ್ಣುವದರಲ್ಲಿ ಅನಿಯಮಿತತನದಿಂದ ನಡೆಯುವದರಿಂದ ತುಸು ಹೊತ್ತು ಅವನಿಗೆ ಆನಂದವಾಗುವದು ನಿಜವು; ಆದರೆ ಅದರಿಂದ ಅವನ ಆಯುಷ್ಯವು ಕಡಿಮೆಯಾಗುವದು; ಇಲ್ಲವೆ ರೋಗಪೀಡಿತನಾಗಿ ಯಾವಾಗಲೂ ದುಃಖದಲ್ಲಿಯೇ ಇರುವನು. ಮಿತ್ರರೇ, ವಿಚಾರಮಾಡಿ ನೋಡಿರಿ; ತಾರುಣ್ಯವು ತುಸುದಿವಸ ಮಾತ್ರವೇ ಇರುವದು; ಚಿರಕಾಲವಿರುವದಿಲ್ಲ. ತಾರುಣ್ಯದ ಮದವು ಮೈಯಲ್ಲಿರುವ ವರೆಗೆ ಈ ತರದ ಸುಖೋಪಭೋಗದಿಂದ ಕ್ಷಣಹೊತ್ತು ಸುಖವಾಗುತ್ತದೆ, ಆದರೆ ಆ ಮದವು ಗಲಿತವಾಗಿ ಹೋದನಂತರ ಇವೇ ಸುಖೋಪಭೋಗಗಳು ಅಸಹ್ಯವಾಗುವವು; ಮತ್ತು ಅವುಗಳಿಂದ ಆನಂದವಾಗುವದಂತೂ ಒತ್ಟಟ್ಟಿಗಿರಲಿ, ಅನಿವಾರ್ಯ ದುಃಖವು ಮಾತ್ರ ನಿಶ್ಚಯವಾಗಿ ಆಗುತ್ತದೆ. ಪರೋಪಕಾರ, ಮತ್ತು ಸಜ್ಜನರಂಥ ಸೂಜ್ಞರ ಸಹವಾಸ ಇವೇ ಮನುಷ್ಯನಿಗೆ ಮುಪ್ಪಿನ ಕಾಲದಲ್ಲಿ ಸೌಖ್ಯವನ್ನುಂಟುಮಾಡುವ ಸಾಧನಗಳು. ಆದದರಿಂದ ಗೆಳೆಯರೇ, ನಾವು ಇನ್ನೂ ಸೆಳವಿಗೆ ಬಿದ್ದಿಲ್ಲ; ಕೆಸರಿನಲ್ಲಿ ಕಾಲು ಸಿಕ್ಕಿಲ್ಲ; ಇಷ್ಟರಲ್ಲಿಯೇ ಹಿಂದೆ ಸರಿದು, ಕೆಸರಿನಲ್ಲಿ ಕಾಲು ಬೀಳದಂತೆ ಎಚ್ಚರಪಡೋಣ; ಮತ್ತು ನಮ್ಮ ತಾರುಣ್ಯವು ತುಸು ದಿವಸಗಳಲ್ಲಿಯೇ ಲಯಹೊಂದುವದೆಂದು ತಿಳಿದುಕೊಂಡು ನಡೆಯೋಣ, ಅಂದರೆ ನಾವು ಜಾಣರು. ಇಲ್ಲದಿದ್ದರೆ ನಮಗೆ ಮುಂದೆ ಪಶ್ಚಾತ್ತಾಪವಾದೀತು. ನಾವು ಈಗಿನ ನಮ್ಮ ಅಮೂಲ್ಯವಾದ ವೇಳೆಯನ್ನು ಅವಿಚಾರದಿಂದ ಕಳೆದುಬಿಟ್ಟರೆ, ಮುಪ್ಪಿನಕಾಲದಲ್ಲಿ ನಮ್ಮ ಈ ಮೂರ್ಖತನದ ಕೃತ್ಯಗಳಿಂದ ನಮಗೆ ವರ್ಣಿಸಲಸದಳವಾದ ದುಃಖವಾದೀತು; ಮತ್ತು ಈ ಹೊತ್ತಿನ ನಮ್ಮ ಅವ್ಯವಸ್ಥಿತ ಆಹಾರ ವಿಹಾರಗಳಿಂದ ನಮ್ಮ ಮೈಯೊಳಗಿನ ಆರೋಗ್ಯವು ಅಳಿದುಹೋಗಿ, ಶಕ್ತಿಯು ಕುಂದಿ, ರೋಗಗಳು ಸೇರಿ, ಸಾಯುವವರೆಗೆ ನಮಗೆ ಬಹಳ ಖೇದವಾದೀತು. ಆಗಿನ ಸ್ಥಿತಿಯು ಬಹು ಭಯಂಕರವಾದೀತು ನೋಡಿರಿ. ”

ರಾಜಪುತ್ರನು ಈ ಪ್ರಕಾರ ಮಾತಾಡಲು ಆ ತರುಣ ಜನರು ಒಬ್ಬರ ಮೋರೆಯನ್ನೊಬ್ಬರು ದಿಟ್ಟಿಸಿ ನೋಡುತ್ತ ತುಸು ಹೊತ್ತು ಸುಮ್ಮನಿದ್ದರು. ತರುವಾಯ ಎಲ್ಲರೂ ಒಮ್ಮೆಲೇ ಕೊಳ್ಳೆಂದು ನಕ್ಕು, ಆ ರಾಜಪುತ್ರನನ್ನು ಹೊರಗೆ ದೂಡಿಬಿಟ್ಟರು.

ರಾಜಪುತ್ರನು ಆ ತರುಣ ಜನರ ಕಲ್ಯಾಣವಾಗಬೇಕೆಂಬ ಸದುದ್ದೇಶದಿಂದ ಕೆಲವು ನಿಜವಾದಂಥ ಉಪದೇಶಪರವಾದ ಮಾತುಗಳನ್ನು ಹೇಳಿದನು. ಆ ಮಾತು

ಗಳನ್ನು ಕೇಳಿ ತಮಗೆ ಅಂಥ ಮಾತು ಹೇಳಿದವನ ಉಪಕಾರಸ್ಮರಿಸಿ, ಅವನಿಗೆ ಕೃತಜ್ಞತೆಯನ್ನು ತೋರಿಸುವದರ ಬದಲಾಗಿ ಅವನನ್ನು ಉಪಹಾಸ ಮಾಡಿದರು. ತನ್ನನ್ನು ಈ ಮೇರೆಗೆ ತಿರಸ್ಕರಿಸಿದ್ದನ್ನು ಕಂಡು ರಾಜಪುತ್ರನಿಗೆ, ತಾನು ಹೇಳಿದ್ದು ಒಳ್ಳೇ ಕೆಲಸದ ಸಲುವಾಗಿಯೇ ಇತ್ತೆಂದು ಪೂರ್ಣ ನಂಬಿಗೆ ಇದ್ದಾಗ್ಯೂ ಬಹಳ ಖೇದವಾಯಿತು. ಆದರೆ ಆ ಖೇದವನ್ನು ಸ್ವಲ್ಪ ವೇಳೆಯಲ್ಲೇ ಮರೆತು ಚಿತ್ತಸ್ವಾಸ್ಥ್ಯವನ್ನು ಪಡೆದು ತನ್ನ ಮುಂದಿನ ಶೋಧದ ಕೆಲಸವನ್ನು ತಿರುಗಿ ಕೈಕೊಂಡನು.

## ಹದಿನೆಂಟನೆಯ ಭಾಗವು.

———o———

### ರಾಜಪುತ್ರನು, ಒಬ್ಬ ಸುಜ್ಞನೂ, ಸುಖಿಯೂ ಆದ ಮನುಷ್ಯನನ್ನು ಕಂಡುಕೊಂಡದ್ದು.

ಒಂದಾನೊಂದು ದಿವಸ ರಾಜಪುತ್ರನು ಒಂದು ದೊಡ್ಡ ದಾರೀ ಹಿಡಿದು ಹೋಗುತ್ತಿರುವಾಗ, ದಾರಿಯಲ್ಲಿ ಒಂದು ವಿಶಾಲವಾದ ಅರಮನೆಯನ್ನು ನೋಡಿದನು. ಆ ಮನೆಗೆ ಅನೇಕ ಬಾಗಿಲುಗಳಿದ್ದವು; ಅವೆಲ್ಲ ತೆರೆದಿದ್ದವು. ಆ ಮನೆಯೊಳಗೆ ಹೋಗಲಿಕ್ಕೆ ಯಾರಿಗೂ ಪ್ರತಿಬಂಧವಿದ್ದಿಲ್ಲಾದದರಿಂದ ಸಾವಿರಾರು ಜನರು ಅಲ್ಲಿ ಹೋಗುತ್ತಿದ್ದರು. ರಾಜಪುತ್ರನೂ ಆ ಜನರ ಕೂಡ ಒಳಗೆ ಹೋಗಿ ನೋಡಲು ಆ ಮನೆಯು ವ್ಯಾಖ್ಯಾನಮಂದಿರವಿರುತ್ತದೆಂದು ಅವನಿಗೆ ಕಂಡುಬಂತು. ಆ ವ್ಯಾಖ್ಯಾನಮಂದಿರದಲ್ಲಿ ಪಂಡಿತರು ಅನೇಕ ವಿಷಯುಗಳ ಮೇಲೆ ವ್ಯಾಖ್ಯಾನ ಕೊಡುತ್ತಿದ್ದರು. ಆ ವ್ಯಾಖ್ಯಾನಗಳನ್ನು ಕೇಳುವದಕ್ಕಾಗಿ ಸಾವಿರಾರು ಜನರು ನೆರೆಯುತ್ತಿದ್ದರು. ರಾಜಪುತ್ರನು ಅಲ್ಲಿಗೆ ಹೋದದಿವಸ ಒಬ್ಬ ದೊಡ್ಡ ಪಂಡಿತನು ಉಚ್ಚಸ್ಥಾನದಲ್ಲಿ ನಿಂತು "ಕಾಮಕ್ರೋಧ ಮೋಹಾದಿ ಷಡ್ರಿಪುಗಳನ್ನು ಅಥವಾ ಮನೋವಿಕಾರಗಳನ್ನು ಹ್ಯಾಗೆ ಗೆಲ್ಲಬೇಕು" ಎಂಬ ವಿಷಯದ ಮೇಲೆ ವ್ಯಾಖ್ಯಾನ ಕೊಡುತ್ತಿದ್ದನು. ವ್ಯಾಖ್ಯಾತನು ವಿಷಯಪ್ರತಿಪಾದನವನ್ನು ಒಳ್ಳೇ ಹುರುಪಿನಿಂದ ಬಹು ಚನ್ನಾಗಿ ಮಾಡುತ್ತಿದ್ದನು. ಆತನ ಮುಖಮುದ್ರೆಯು ಭವ್ಯವಾದದ್ದೂ, ಪೂಜ್ಯಬುದ್ಧಿಯನ್ನು ಹುಟ್ಟಿಸುವಂಥಾದ್ದೂ ಇತ್ತು. ಆತನ ಭಾವವು ಮನೋಹರವಾಗಿತ್ತು; ಆತನ ಶಬ್ದೋಚ್ಚಾರವು ಸ್ಪಷ್ಟವಾದದ್ದೂ, ಸರಳವಾದದ್ದೂ ಇತ್ತು; ಆತನ ಭಾಷಾಶೈಲಿಯು ಪ್ರೌಢವಾದದ್ದೂ, ಸರಸವಾದದ್ದೂ ಇತ್ತು. ಅವನು ಒಳ್ಳೇ ಮನಃಪೂರ್ವಕವಾಗಿ ಅನೇಕ ಸಾಮ್ಯಗಳನ್ನು ಕೊಟ್ಟು ಈ ಮೇರೆಗೆ ಹೇಳಿದನು. "ವಿವೇಕ,

ಮನೋನಿಗ್ರಹ ಮುಂತಾದ ಸದ್ಗುಣಗಳಿಲ್ಲದಿದ್ದರೆ ಕಾಮಕ್ರೋಧಾದಿ ದುರ್ಗುಣಗಳು ಹೆಚ್ಚಾದರೆ, ಮನುಷ್ಯನ ಮನಸ್ಸು ಕೆಟ್ಟು ಅವನು ನೀಚನಾಗುತ್ತಾನೆ; ಅವಿಚಾರವು ದುರ್ವ್ಯಸನದ ಮೂಲಕಾರಣವಾಗಿದೆ. ಅವಿಚಾರವು ಪ್ರಬಲವಾಯಿತೆಂದರೆ, ಅಯೋಗ್ಯ ಮನುಷ್ಯನ ಕೈಯಲ್ಲಿ ರಾಜ್ಯಕಾರಭಾರವನ್ನು ಕೊಟ್ಟರೆ, ಆ ರಾಜ್ಯದಲ್ಲೆಲ್ಲ ಹ್ಯಾಗೆ ಅವ್ಯವಸ್ಥೆಯೂ, ಶಾಂತತಾಭಂಗವೂ, ಗದ್ದಲವೂ ಆಗುತ್ತವೋ, ಹಾಗೆ ನೋಡಿದಲ್ಲೆಲ್ಲ ಗದ್ದಲವೇ ಆಗಿ ಹೋಗುವದು. ಕಾಮಕ್ರೋಧಾದಿ ಬಂಡುಗಾರರು ವಿಶ್ವಾಸಘಾತದಿಂದ ಬುದ್ಧಿಯೆಂಬ ಕೋಟೆಯಲ್ಲಿ ಸೇರಿಕೊಂಡು,, ವಿವೇಕರೂಪನಾದ ಅರಸನ ಆಜ್ಞೆಯನ್ನು ಮೀರಿ, ಮನಬಂದಂತೆ ನಡೆಯಲಿಕ್ಕೆ ಆ ಅರಸನ ಸದ್ಗುಣಗಳೆಂಬ ಚಿಕ್ಕ ಮಕ್ಕಳ ಮನವೊಲಿಸಿ, ರಾಜದ್ರೋಹವನ್ನೆಬ್ಬಿಸುತ್ತಾರೆ. ವಿವೇಕವು (ವಿಚಾರವು) ಸೂರ್ಯನೋಪಾದಿಯಲ್ಲಿರುತ್ತದೆ; ಆದರೆ ಸೂರ್ಯನ ಪ್ರಕಾಶವು ಯಾವಾಗಲೂ ಒಂದೆ ಸವನೆ ಇರುವಂಥಾದ್ದೂ, ಚಿರಕಾಲ ಬಾಳುವಂಥಾದ್ದೂ ಇದ್ದಂತೆಯೇ ವಿವೇಕದಿಂದ ಮನುಷ್ಯನಿಗೆ ಆಗುವ ಸುಖಗಳು ಬಹುಕಾಲ ಇರುತ್ತವೆ. ಅವಿಚಾರವು ಮಿಂಚಿನೋಪಾದಿಯಲ್ಲಿರುತ್ತದೆ; ಅದರ ಪ್ರಕಾಶವು ತುಸು ಹೊತ್ತು ಇದ್ದು ಮತ್ತೊಂದು ಕ್ಷಣದಲ್ಲಿ ಇಲ್ಲದ ಹಾಗಾಗುತ್ತದೆ. ಆದದರಿಂದ ಕ್ಷಣ ಹೊತ್ತು ಕಾಣುವ ದೀಪ್ಯವಾದ ಆ ಪ್ರಕಾಶಕ್ಕೆ ಮರುಳಾಗಿ ಅದರ ಬೆನ್ನುಹತ್ತಿ ನಡೆಯುವ ಮನುಷ್ಯನು ದಾರಿ ತಪ್ಪಿ ಕಡೆಗೆ ನಾಶ ಹೊಂದುತ್ತಾನೆ."

ಆ ಮೇಲೆ ಆತನು ಇಂದ್ರಿಯ ನಿಗ್ರಹವನ್ನು ಮಾಡಲಿಕ್ಕೆ ಬೇರೆ ಬೇರೆ ಶಾಸ್ತ್ರಗಳಲ್ಲಿ ಕಾಲಕಾಲಕ್ಕೆ ಹೇಳಿದ ಉಪಾಯಗಳ ನಿರೂಪಣೆಯನ್ನು ಮಾಡಿ, ಮನೋನಿಗ್ರಹ ಮಾಡಿದ ಮನುಷ್ಯನಿಗಾಗುವ ಸೌಖ್ಯವನ್ನು ಈ ಮೇರೆಗೆ ವಿವರಿಸಿದನು–ಯಾವ ಮನುಷ್ಯನು ಮನವೆಂಬ ಮರ್ಕಟವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾನೋ ಅವನಿಗೆ ಯಾವ ತರದ ಅಂಜಿಕೆಯೂ ಇರುವದಿಲ್ಲ; ಅವನು ಹುಚ್ಚನಂತೆ ಯಾವದಕ್ಕೂ ಆಶೆ ಮಾಡುವದಿಲ್ಲ; ಮತ್ಸರದಿಂದುಂಟಾಗುವ ಯಾವ ತರದ ದುಃಖವೂ ಅವನಿಗಾಗುವದಿಲ್ಲ; ಅವನಿಗೆ ಕೋಪೋದ್ರೇಕವು ಎಂದೂ ಆಗುವದಿಲ್ಲ. ಅವನು ಯಾವಾಗಲೂ ಶಾಂತಮನಸ್ಸಿನವನಾಗಿರುತ್ತಾನೆ. ಸಂಕಟಗಳೊದಗಿದರೆ ಅವನಿಗೆ ಕ್ಷೋಭವಾಗುವದಿಲ್ಲ; ಮತ್ತು ಅವನ ಸಮಾಧಾನವೃತ್ತಿಯು ಬದಲಾಗುವದಿಲ್ಲ. ಆಕಾಶವು ನಿರಭ್ರವಾಗಿರಲಿ ಇಲ್ಲವೆ ಅಭ್ರಾಚ್ಛಾದಿತವಾಗಿರಲಿ, ಶಾಂತವಾಗಿರಲಿ, ಬಿರುಗಾಳಿಗಳಿಂದ ಕ್ಷೋಭಗೊಂಡದ್ದಾಗಲಿ ಸೂರ್ಯನು ಆಕಾಶದಲ್ಲಿಯ ತನ್ನ ಮಾರ್ಗಕ್ರಮಣವನ್ನು ಹ್ಯಾಗೆ ಒಂದೇ ಸವನೆ ನಡಿಸುತ್ತಾನೊ, ಹಾಗೆಯೇ ಮನಸ್ಸನ್ನು ಬಿಗಿ ಹಿಡಿಯಲಿಕ್ಕೆ ಕಲಿತ ಮನುಷ್ಯನು ಸಂಸಾರದೊಳಗಿನ

ಸುಖದುಃಖಗಳನ್ನು ಲೆಕ್ಕಿಸದೆ ಸ್ವಸ್ಥಚಿತ್ತವುಳ್ಳವನಾಗಿರುತ್ತಾನೆ; ಮತ್ತು ಆತನು ಸಂಸಾರದೊಳಗಿನ ಸುಖದುಃಖಗಳಿಂದ ಯಾರ ಮನಸ್ಸು ಕ್ಷುಬ್ಧವಾಗಲಿಲ್ಲವೋ, ಮತ್ತು ಅಜ್ಞಾನಿ ಜನರು ಸುಖವೆಂತಲೂ, ದುಃಖವೆಂತಲೂ ಹೆಸರಿಡುವ ಸಂಗತಿಗಳು ಈಶ್ವರೇಚ್ಛೆಯಿಂದ ಸಂಭವಿಸಿದರೆ, ಅವುಗಳಿಂದ ಯಾರ ಮನಸ್ಸು ವಿಕಾರಹೊಂದ ಲಿಲ್ಲವೋ, ಅಂಥ ಎಷ್ಟೋ ಮನೋನಿಗ್ರಹ ಮಾಡಿದ ದೊಡ ದೊಡ ಜನರ ಉದಾ ಹರಣೆಗಳನ್ನು ಹೇಳಿದ್ದಲ್ಲದೆ, ಶ್ರೋತೃಗಳು ತಮ್ಮ ತಮ್ಮ ಅವಿಚಾರದ (ಅಪಕ್ವ) ಕಲ್ಪನೆಗಳನ್ನು ಬಿಟ್ಟುಬಿಡಬೇಕೆಂತಲೂ, ಮತ್ಸರ ಇಲ್ಲದೆ ದುರ್ದೈವದಿಂದುಂಟಾದ ದುಃಖಗಳೆಂಬ ಬಾಣದ ಪೆಟ್ಟುಗಳನ್ನು ಅಚ್ಚಳಿಯದ ತಾಳ್ಮೆಯಿಂದ ಸಹನಮಾಡಿ ಕೊಳ್ಳಲಿಕ್ಕೆ ಸನ್ನದ್ಧರಾಗಬೇಕೆಂತಲೂ ಈ ಮೇರೆಗೆ ನಡೆಯುವವರಿಗೆ ಇಹ ಪರ ದಲ್ಲಿ ಸೌಖ್ಯವಾಗುವದೆಂತಲೂ, ಈ ಸೌಖ್ಯವನ್ನು ಸಂಪಾದಿಸಿಕೊಳ್ಳುವದು ಪ್ರತಿ ಯೊಬ್ಬನ ಕೈಯಲ್ಲಿರುತ್ತದೆಂತಲೂ ಉಪದೇಶಿಸಿ ತನ್ನ ವ್ಯಾಖ್ಯಾನವನ್ನು ಮುಗಿಸಿದನು.

ರಾಜಪುತ್ರನು ಮೇಲೆ ವಿವರಿಸಿದ ವ್ಯಾಖ್ಯಾತನ ವ್ಯಾಖ್ಯಾನವನ್ನು ಒಳ್ಳೇ ಬುದ್ಧಿವಂತ ದಿವ್ಯ ಸತ್ಪುರುಷನ ಉಪದೇಶವನ್ನು ಎಷ್ಟು ಭಕ್ತಿಪೂರ್ವಕವಾಗಿ ಕೇಳ ಬೇಕೋ ಅಷ್ಟೇ ಭಕ್ತಿಯಿಂದಲೂ, ಏಕಾಗ್ರಚಿತ್ತದಿಂದಲೂ ಕೇಳಿದನು. ವ್ಯಾಖ್ಯಾ ನವು ಮುಗಿದ ಕೂಡಲೆ ಎಲ್ಲರೂ ಆ ವ್ಯಾಖ್ಯಾನಮಂದಿರವನ್ನು ಬಿಟ್ಟು ಹೊರಬಿ ದ್ದರು. ಆದರೆ ರಾಸೆಲಾಸನು ಆ ವ್ಯಾಖ್ಯಾತನು ಬರುವ ವರೆಗೆ ನಿಂತು ಆತನು ಬಾಗಿಲಿಗೆ ಬಂದಕೂಡಲೆ ಆತನ ಹತ್ತರ ಹೋಗಿ ನಮ್ರತೆಯಿಂದ “ಮಹಾರಾಯರೇ ತಾವು ನಿಜವಾದ ಪಂಡಿತರಿರುತ್ತೀರಿ. ಆದರೆ ತಮ್ಮ ದರ್ಶನದ ಅಪೇಕ್ಷೆಯುಳ್ಳ ನನಗೆ ಬೇಕಾದಾಗ ತಮ್ಮ ಬಿಡಾರಕ್ಕೆ ಬರಲು ಅಪ್ಪಣೆಯಾಗಬೇಕು” ಅಂದನು. ರಾಜ ಪುತ್ರನ ಮಾತನ್ನು ಕೇಳಿ ಆ ಪಂಡಿತನು ವಿಚಾರಕ್ಕೊಳಗಾಗಿ ಏನೂ ಉತ್ತರಕೊ ಡದೆ ಸುಮ್ಮನಿದ್ದನು. ಅಷ್ಟರಲ್ಲಿ ರಾಜಪುತ್ರನು ಹಣದಿಂದ ತುಂಬಿದ್ದ ಒಂದು ಚೀಲ ವನ್ನು ಅವನ ಕೈಯಲ್ಲಿಟ್ಟನು. ಆ ಪಂಡಿತನು ಸಂತೋಷದಿಂದಲೂ ಆಶ್ಚರ್ಯ ದಿಂದಲೂ ಭರಿತನಾಗಿ ಆ ಚೀಲವನ್ನು ತೆಗೆದುಕೊಂಡನು.

ಮನೆಗೆ ಬಂದ ಬಳಿಕ ರಾಜಪುತ್ರನು ಇಮ್ಲಾಕನಿಗೆ ಅಂದನು “ಈ ಹೊತ್ತು ನಾನು ಒಬ್ಬ ದೊಡ್ಡ ಮನುಷ್ಯನನ್ನು ನೋಡಿದೆನು. ಮನುಷ್ಯನಿಗೆ ಅವಶ್ಯವಾದ ಯಾವತ್ತು ಜ್ಞಾನವನ್ನು ಕಲಿಸುವ ಸಾಮರ್ಥ್ಯವು ಅವನಲ್ಲಿ ಉಂಟು, ಆತನು ವಿವೇ ಕಿಯೂ, ಧೈರ್ಯವುಳ್ಳವನೂ ಇದ್ದದರಿಂದ ಸಂಸಾರದೊಳಗೆ ಸಂಭವಿಸುವ ಸುಖ ದುಃಖಗಳನ್ನು ಎಳ್ಳಷ್ಟು ಲೆಕ್ಕಿಸುವದಿಲ್ಲ. ಅವನು ಮಾತಾಡಹತ್ತಿದನೆಂದರೆ, ಕೇಳು ವವರೆಲ್ಲರೂ ಏಕಾಗ್ರಚಿತ್ತದಿಂದ ಆತನ ಭಾಷಣವನ್ನು ಕೇಳುತ್ತಾರೆ. ಆತನು ವಿಷ

ಯುಪ್ರತಿಪಾದನವನ್ನು ಮಾಡಹತ್ತಿದನೆಂದರೆ, ಆತನ ಪ್ರತಿಪಾದನಶಕ್ತಿಯನೂ, ಯುಕ್ತಿಪ್ರಯುಕ್ತಿಗಳನ್ನೂ ನೋಡಿ ಎಲ್ಲರಿಗೂ ಕೂಡಲೆ ಸಮಾಧಾನವಾಗುತ್ತದೆ. ಆದದರಿಂದ ನಾನು ಇದೇ ಮನುಷ್ಯನನ್ನು ನನ್ನ ಗುರುವನ್ನಾಗಿ ಮಾಡಿಕೊಳ್ಳುವೆನು. ಆತನಿಂದಲೇ ನಾನು ಯಾವತ್ತು ವಿದ್ಯೆಗಳನ್ನು ಕಲಿತುಕೊಳ್ಳುವೆನು; ಮತ್ತು ಅವನ ನಡೆನುಡಿಗಳಂತೆಯೇ ನಾನು ನಡಿಯುವೆನು."

ಇವ್ಹಾಕನು:— "ರಾಜಪುತ್ರರೇ, ಜನರಿಗೆ ನೀತಿಯ ಉಪದೇಶವನ್ನು ಮಾಡುವಂಥ ಉಪದೇಶಕರನ್ನು ಒಳ್ಳೇ ಆತುರದಿಂದ ಹೊಗಳಬೇಡಿರಿ; ಇಲ್ಲವೆ ಪೂರ್ಣ ವಿಚಾರಮಾಡದೆ ಅವರ ಮೇಲೆ ನಂಬಿಗೆಯುನ್ನಾದರೂ ಇಡಬೇಡಿರಿ. ಕೇವಲ ಅವರ ಭಾಷಣದ ಮೇಲೆಯೇ ವಿಶ್ವಾಸವನ್ನಿಡಲಾಗದು. ಯಾಕಂದರೆ ಮಾತಾಡುವಾಗ ದೇವತೆಗಳ ಹಾಗೆ ಅವರ ವರ್ತನವಿದ್ದಂತೆ ಕಾಣುತ್ತದೆ, ಆದರೆ ನಿಜವಾದ ಅವರ ಆಚರಣವನ್ನು ನೋಡಿದರೆ ಸಾಧಾರಣ ಮನುಷ್ಯರ ಆಚರಣಕ್ಕಿಂತಲೂ ಅವರ ಆಚರಣವು ಶ್ರೇಷ್ಠವಾದದ್ದಿರುವದಿಲ್ಲ."

ಯಾವ ಮನುಷ್ಯನಿಗೆ ತಾನು ಪರರ ಮುಂದೆ ಪ್ರತಿಪಾದಿಸುವ ಪ್ರಮಾಣಗಳ ಸತ್ಯತೆಯು ಮನದಟ್ಟಾಗಿಲ್ಲವೋ ಅಂಥ ಮನುಷ್ಯನು ಆ ಪ್ರಮಾಣವನ್ನು ಒಳ್ಳೇ ಆಢ್ಯತೆಯಿಂದ ಜನರಿಗೆ ಹೇಳುವ ಸಾಹಸವನ್ನು ಹ್ಯಾಗೆ ಮಾಡತೊಡಗುವನೆಂಬ ಸಂಶಯವು ರಾಜಪುತ್ರನಿಗೆ ಬಂತು. ಆದದರಿಂದ ಇವ್ಹಾಕನ ಹೇಳಿಕೆಯು ರಾಜಪುತ್ರನಿಗೆ ನಿಜವಾಗಿ ತೋರಲಿಲ್ಲ. ಕೆಲವು ದಿವಸಗಳ ತರುವಾಯ ರಾಜಪುತ್ರನು ಆ ಪಂಡಿತನ ಮನೆಗೆ ಹೋದನು. ಆದರೆ ಕಾವಲುಗಾರನು ಅವನನ್ನು ಒಳಗೆ ಹೋಗಗೊಡಲಿಲ್ಲ. ಜಗತ್ತಿನಲ್ಲಿ ಹಣದ ಬಲದಿಂದ ಬೇಕಾದಂಥ ಅಸಾಧ್ಯವಾದ ಕೆಲಸಗಳು ಸಹ ಸಾಧ್ಯವಾಗುತ್ತವೆಂಬುವದು ರಾಜಪುತ್ರನಿಗೆ ಚನ್ನಾಗಿ ತಿಳಿದಿತ್ತು. ಆದದರಿಂದ ಅವನು ಒಂದು ಚಿನ್ನದ ನಾಣ್ಯವನ್ನು ಆ ಕಾವಲುಗಾರನಿಗೆ ಕೊಡಲು ಅವನು ಒಳಗೆ ಹೋಗಗೊಟ್ಟನು. ಒಳಹೊಕ್ಕು ನೋಡಲು ಆ ಪಂಡಿತನು ಕತ್ತಲುಳ್ಳ ಕೋಣೆಯಲ್ಲಿ ಉದಾಸೀನನಾಗಿ ಸುಮ್ಮನೆ ಕೂತಿದ್ದನು. ಅತ್ತತ್ತು ಅವನ ಕಣ್ಣುಗಳು ಕೆಂಪಾಗಿದ್ದವು; ಮುಖವು ಬಾಡಿ ನಿಸ್ತೇಜವಾಗಿತ್ತು. ಆ ಪಂಡಿತನು ರಾಜಪುತ್ರನನ್ನು ನೋಡಿ ಅಂದನು "ಮನುಷ್ಯನ ಸಹಾಯವು ಎಳ್ಳಷ್ಟು ಉಪಯೋಗ ಬೀಳದ ಸಮಯದಲ್ಲಿಯೇ ನೀವು ಬಂದಿರಲ್ಲ. ಈ ಹೊತ್ತು ನನಗೆ ಸಂಭವಿಸಿದ ದುಃಖದ ನಿವಾರಣಕ್ಕೆ ಯಾವ ತರದ ಮಾರ್ಗವೂ ಇಲ್ಲದಂತಾಗಿದೆ. ನಾನು ಈ ಹೊತ್ತು ಯಾವದರ ಬಗ್ಗೆ ದುಃಖಪಡುತ್ತೇನೋ ಅದು ಏನು ಮಾಡಿದ್ವರೂ ತಿರುಗಿ ಬರುವಹಾಗಿಲ್ಲ. ನನಗೆ ಒಬ್ಬಳೇ ಮಗಳಿದ್ದಳು. ಆಕೆಯು

ಮೇಲೆ ನನ್ನ ಪ್ರೀತಿಯು ಬಹಳ ಇತ್ತು. ಆಕೆಯು ನಿನ್ನೆ ರಾತ್ರಿ ಜ್ವರಬಂದು ತೀರಿಕೊಂಡಳು. ಈಗ ನಾನು ಪರದೇಶಿಯಾಗಿದ್ದೇನೆ. ನನ್ನ ಅಭ್ಯುದಯವೂ, ಉದ್ದೇಶಗಳೂ, ನನ್ನ ಆಶೆಗಳೂ ಈ ಹೊತ್ತು ಲಯಹೊಂದಿದಂತಾದವು. ಈ ಜಗತ್ತಿನೊಳಗೆ ನನಗೆ ಇನ್ನು ಯಾರೂ ಉಳಿಯಲಿಲ್ಲ."

ರಾಜಪುತ್ರನು:—"ಪಂಡಿತರೇ, ಮನುಷ್ಯರು ಸಾಯತಕ್ಕವರೇ; ಅಂದಮೇಲೆ ಇಂಥ ಮನುಷ್ಯನು (ಆಪ್ತನು ಸಹ) ಸತ್ತನೆಂಬ ಸುದ್ದೀ ಕೇಳಿದಾಗ್ಯೂ ಜಾಣರಿಗೆ ಆಶ್ಚರ್ಯವಾಗಬಾರದು. ನಿಜವಾದ ಪಂಡಿತರು ಇಂಥ ದುಃಖಗಳನ್ನು ಎಂದೂ ಲೆಕ್ಕಿಸುವದಿಲ್ಲ. ಸಾವು ಎಲ್ಲರಿಗೂ ಉಂಟು; ಅದು ಎಲ್ಲರ ಬೆನ್ನು ಹತ್ತಿರುತ್ತದೆ. ಪ್ರತಿಯೊಂದು ಕ್ಷಣಕ್ಕೆ ಸಾವು ಬರುವ ಸಂಭವವಿರುತ್ತದೆ. ಆದದರಿಂದ ಪ್ರತಿಯೊಬ್ಬನು ಅದಕ್ಕೆ ಸಿದ್ಧನಾಗಿಯೇ ಇರಬೇಕು. ಇದೇ ಯೋಗ್ಯವು."

ಪಂಡಿತನು:—" ತಮ್ಮಾ, ನೀನು ಇನ್ನೂ ಸಣ್ಣವನು. ಸ್ವಜನ ವಿಯೋಗದಿಂದುಂಟಾಗುವ ದುಃಖದ ಅನುಭವವು ಇನ್ನೂ ನಿನಗೆ ಗೊತ್ತಾಗಿಲ್ಲ; ಆದದರಿಂದ ನೀನು ಹೀಗೆ ಮಾತಾಡುತ್ತಿ."

ರಾಜಪುತ್ರನು:—" ಹಾಗಾದರೆ ತಾವು ಆ ದಿವಸ ಒಳ್ಳೇ ಆಧ್ಯತೆಯಿಂದಲೂ, ಆಸುವಿನಿಂದಲೂ ಹೇಳಿದ ಉಪದೇಶವನ್ನು ಇಷ್ಟರಲ್ಲಿಯೇ ಮರೆತು ಬಿಟ್ಟಿರೋ? ಬಂದ ಸಂಕಟಗಳಿಗೆ ಎದೆಗೊಟ್ಟು ನಿಲ್ಲುವ ಸಾಮರ್ಥ್ಯವು ಜ್ಞಾನಿಗೆ ಇಲ್ಲವೋ? ಪಂಡಿತರೇ ವಿಚಾರಮಾಡಿರಿ; ಕಣ್ಣಿಗೆ ಕಾಣಿಸುವ ಯಾವತ್ತು ಪದಾರ್ಥಗಳು (ಬಾಹ್ಯ ವಿಷಯಗಳು) ನಾಶ ಹೊಂದತಕ್ಕಂಥವೇ ಇರುತ್ತವೆ. ಶಾಶ್ವತವಾದಂಥವೂ ಸತ್ಯವಾದಂಥವೂ ಯಾವವೆಂದರೆ ಸತ್ಯವು, ಸಾರಾಸಾರ ಜ್ಞಾನವು (ವಿವೇಕವು.)"

ಪಂಡಿತನು:—" ಸತ್ಯವೂ, ವಿವೇಕವೂ ನನಗೆ ಈಗ ಏನು ಸಮಾಧಾನವನ್ನು ಹೇಳುವವು? ಈ ಹೊತ್ತಿನಲ್ಲಿ ಅವುಗಳಿಂದ ನನಗೇನು ಪ್ರಯೋಜನವಿರುವದು? ಸತ್ತು ಹೋದ ನನ್ನ ಮಗಳು ಇನ್ನು ತಿರುಗಿ ಬಾರಳೆಂದು ಮಾತ್ರ ಸತ್ಯವೂ ವಿವೇಕವೂ ಹೇಳಬಲ್ಲವು, ಇದಕ್ಕೂ ಹೆಚ್ಚಿನ ಸಮಾಧಾನವನ್ನು ಅವು ನನಗೇನು ಹೇಳ್ಯಾವು?"

ರಾಜಪುತ್ರನ ಅಂತಃಕರಣವು ಕೋಮಲವಾದ್ದರಿಂದ ದುಃಖದಿಂದ ಪೀಡಿತನಾದ ಪಂಡಿತನಿಗೆ ವಿರೋಧವಾದ ಮಾತುಗಳನ್ನಾಡಿ ಆತನ ದುಃಖವನ್ನು ಮತ್ತಿಷ್ಟು ಹೆಚ್ಚಿಸುವದು ಅವನ ಮನಸ್ಸಿಗೆ ಬರಲಿಲ್ಲ. ಅವನು ಅಲ್ಲಿಂದ ಸುಮ್ಮನೆ ಹೊರಗೆ ಬಂದನು. ಆದರೆ ಕೇವಲ ಶಬ್ದಪಾಂಡಿತ್ಯದ ಮೇಲೆಯೂ, ವ್ಯರ್ಥವಾದ ವಾಗ್ಜಾಲದ ಮೇಲೆಯೂ, ಪೂರ್ವ ಸಿದ್ಧತೆಯಿಂದ ಗೊತ್ತು ಮಾಡಿದ ಸವಿಕಟ್ಟಾದ-

ಭಾಷಣದ ಮೇಲೆಯೂ ಎಂದೂ ನಂಬಿಗೆಯನ್ನಿಡಬಾರದೆಂಬದು ಪೂರ್ಣವಾಗಿ ಆತನ ಮನಸ್ಸಿನಲ್ಲಿ ಬಿಂಬಿಸಿತು.

## ಹತ್ತೊಂಬತ್ತನೆಯ ಭಾಗವು.

### ಅಡವಿಗಳಲ್ಲಿ ವಾಸಿಸುವ ಕುರುಬರ ಸ್ಥಿತಿಯ ಅಲ್ಪವರ್ಣನವು.

ರಾಜಪುತ್ರನು ಸಂಸಾರದೊಳಗಿನ ಸ್ಥಿತಿಗಳಲ್ಲಿ ಎಲ್ಲಕ್ಕೂ ಉತ್ಕೃಷ್ಟವಾದ ಸ್ಥಿತಿಯನ್ನು ಹುಡುಕಿ ತೆಗೆಯುವ ತನ್ನ ಕೆಲಸವನ್ನು ಹಾಗೇ ಮುಂದೆ ಸಾಗಿಸಿದನು. ಹಿಂದಿನ ಭಾಗದಲ್ಲಿ ವಿವರಿಸಿದಂತೆ ರಾಜಪುತ್ರನಿಗೆ ನಿರಾಶೆಯಾದರೂ ಕೂಡ, ಆತನ ಶೋಧದೃಷ್ಟಿಯು ಅಚ್ಚಳಿಯದೆ ಮುಂಚಿನಂತೆಯೇ ಇತ್ತು. ಒಂದು ದಿವಸ ಆತನು ತನ್ನ ಕೆಲಸವನ್ನು ಒಳ್ಳೇ ಹುರುಪಿನಿಂದ ಮಾಡುತ್ತಿರುವಾಗ, ನೀಲನದಿಯ ತೀರ ಕೆಳಗಡೆಯ ತಡಸಲದ ಹತ್ತರ ಒಬ್ಬ ಜೋಗಿಯು ಇರುತ್ತಾನೆಂತಲೂ, ಆತನು ದೊಡ್ಡ ಸಾಧು ಇರುತ್ತಾನೆಂತಲೂ, ಆತನ ಕೀರ್ತಿಯು ಎಲ್ಲ ಕಡೆಯಲ್ಲಿಯೂ ಹಬ್ಬಿರುತ್ತದೆಂತಲೂ ರಾಜಪುತ್ರನಿಗೆ ತಿಳಿಯಿತು. ಸಂಸಾರದಲ್ಲಿ ದುರ್ಲಭವಾದ ಸುಖಪ್ರಾಪ್ತಿಯು ಏಕಾಂತವಾಸದಲ್ಲಿಯಾದರೂ ಸಿಕ್ಕುತ್ತದೋ ಏನೋ ಎಂಬುದನ್ನು ತಿಳುಕೊಳ್ಳುವದಕ್ಕಾಗಿಯೂ, ವಯೋವೃದ್ಧನೂ ತಪೋವೃದ್ಧನೂ ಎಂದು ಹೆಸರು ಪಡೆದಂಥ ಜೋಗಿಯು ಇಹಲೋಕದೊಳಗಾಗುವ ದುಃಖವನ್ನು ದೂರ ಮಾಡುವ, ಇಲ್ಲವೆ ಅದನ್ನು ಧೈರ್ಯದಿಂದ ಸಹನಮಾಡುವ ಅಪೂರ್ವ ಯುಕ್ತಿಯನ್ನೇನಾದರು ಹೇಳುತ್ತಿದ್ದರೆ ಅದನ್ನು ಕೇಳಿಕೊಂಡು ಬರುವವಕ್ಕಾಗಿಯೂ ತಾನೂ ಆ ಜೋಗಿಯ ದರ್ಶನಕ್ಕೆ ಹೋಗಬೇಕೆಂದು ನಿಶ್ಚಯಿಸಿದನು.

ಇಮ್ಲಾಕನೂ, ರಾಜಕನ್ನಿಕೆಯೂ ರಾಜಪುತ್ರನ ಕೂಡ ಜೋಗಿಯ ದರ್ಶನಕ್ಕೆ ಒರುವದಕ್ಕೆ ಒಡಂಬಟ್ಟರು. ಅವಶ್ಯವಾದ ಸಿದ್ಧತೆಯನ್ನು ಮಾಡಿಕೊಂಡು ಅವರೆಲ್ಲರೂ ಹೊರಟರು. ಅವರ ದಾರಿಯು ಹೊಲಗಳೊಳಗಿಂದ ಹಾಯ್ದು ಹೋಗಿತ್ತು. ಆ ಹೊಲಗಳಲ್ಲಿ ಕುರುಬರು ತಮ್ಮ ಕುರಿಗಳನ್ನು ಮೇಯಿಸುತ್ತ ನಿಂತಿದ್ದರು. ಆಡುಮರಿಗಳೂ ಕುರಿಮರಿಗಳೂ ಅತ್ತಿಂದಿತ್ತ ಇತ್ತಿಂದತ್ತ ಒಳ್ಳೇ ಆನಂದದಿಂದ ಹಾರಾಡುತ್ತಿದ್ದವು. ಅವುಗಳನ್ನು ನೋಡಿ ಇಮ್ಲಾಕನು ರಾಜಪುತ್ರನಿಗೆ ಅಂದನು “ಕುರುಬರು ತಮ್ಮ ಕುರಿಗಳನ್ನು ಮೇಯಿಸುತ್ತ ಯಾವಾಗಲೂ ಶಾಂತ ಚಿತ್ತವುಳ್ಳವರಾಗಿಯೂ, ನಿರುಪದ್ರವ ಪ್ರಾಣಿಗಳಾಗಿಯೂ ಇರುತ್ತಾರೆಂದು

ಪ್ರಾಚೀನ ಕವಿಗಳು ಇವರ ವರ್ಣನವನ್ನು ಬಹು ಸರಸಾಗಿ ಮಾಡಿರುತ್ತಾರೆ. ಈಗ ಮಧ್ಯಾಹ್ನವಾಗಿ ಬಿಸಿಲು ಬಲಿತವೆ. ಆದುದರಿಂದ ನಾವು ನಾಲ್ಕು ಗಳಿಗೆ ಈ ಕುರು ಬರ ದಡ್ಡಿಗಳಲ್ಲಿ ಕುಳಿತು, ಅವರ ಕೂಡ ಎರಡು ಮಾತಾಡಿ, ಬಿಸಿಲು ತಗ್ಗಿಸಿಕೊಂಡು ಮುಂದಕ್ಕೆ ಹೋಗುವ. ಅವರ ಕೂಡ ಸಂಭಾಷಣ ಮಾಡುವದರಿಂದ ನಮ್ಮ ಎರಡು ಕೆಲಸಗಳಾಗುವವು. ಒಂದನೆಯದು ನಮಗೆ ಕೆಲವು ಹೊತ್ತು ವಿಶ್ರಾಂತಿ ಸಿಕ್ಕಂತಾಗುತ್ತದೆ; ಎರಡನೆಯದು ನಾವು ಯಾವ ಶೋಧನ ಸಲುವಾಗಿ ಹೊರಟಿ ರುತ್ತೇವೊ ಅದು ಕುರುಬರಲ್ಲಿಯೇ ಸಿಕ್ಕುವ ಹಾಗೆ ಅದೆಯೋ ಏನೋ ಎಂಬುದು ತಿಳಿದಂತಾಗುವದು-"

ಇವನ್ನೆಲ್ಲ ಕನ ಮಾತಿಗೆ ಎಲ್ಲರೂ ಒಪ್ಪಿಕೊಂಡು, ಆ ಕುರುಬರ ದಡ್ಡಿಯಲ್ಲಿ ಹೋಗಿ ಕುಳಿತು, ತುಸು ಹಣವನ್ನು ಅವರಿಗೆ ಕೊಟ್ಟು, ಅವರನ್ನು ಆನಂದಗೊಳಿಸಿ ಸುಲಭವಾದ ಪ್ರಶ್ನಗಳನ್ನು ಮಾಡಿ, ಈ ಮೇರೆಗೆ ಅವರನ್ನು ಕೇಳಿದರು:- "ನಿಮ್ಮ ಸ್ಥಿತಿಯು ನಿಮಗೆ ಹ್ಯಾಗೆ ಅನಿಸುತ್ತದೆ? ಈ ಸ್ಥಿತಿಯು ನಿಮಗೆ ಸುಖಕರವಾಗಿ ತೋರುತ್ತದೊ? ಇಲ್ಲವೆ ದುಃಖದಾಯಕವಾಗಿರುತ್ತದೊ? ಈ ಬಗ್ಗೆ ನಿಮಗೆ ಬಂದ ಅನುಭವವನ್ನು ನಮಗೆ ಹೇಳಿರಿ." ಆ ಕುರುಬರು ದಡ್ಡರೂ, ಅಜ್ಞಾನಿಗಳೂ ಇದ್ದದರಿಂದ, ಅವರಿಗೆ ತಮ್ಮ ಸ್ಥಿತಿಯೊಳಗಿನ ಸುಖವು ಯಾವದು? ದುಃಖವು ಯಾವದು? ಇದೇ ಗೊತ್ತಿದ್ದಿಲ್ಲ; ಮತ್ತು ಅವರ ಮಾತುಗಳು ಅಸ್ಪಷ್ಟವಾದಂಥವೂ, ವಿಸಂಗತವಾದಂಥವೂ ಇದ್ದದರಿಂದ, ಅವರ ಮನಸ್ಸಿನೊಳಗಿನ ಭಾವವು ಯಾರಿಗೂ ತಿಳಿಯಲೊಲ್ಲದು. ಆದರೂ ಅವರಿಗೆ ತಮ್ಮ ಸ್ಥಿತಿಯು ಬಗ್ಗೆ ಬೇಸರುಂಟಾಗಿರುವ ದೆಂತಲೂ, ತಾವು ಎಲುವು ಸಣ್ಣವಾಡಿ ದುಡಿದದ್ದರ ಫಲವನ್ನು ಶ್ರೀಮಂತ ಜನರು ಸ್ವಸ್ಥ ಕೂತಲ್ಲಿಯೇ ಕುಳಿತು ಅನುಭೋಗಿಸುತ್ತಾರೆಂದು ತಿಳುಕೊಂಡು ಅವರು ಅಸಂತುಷ್ಟರಾಗಿರುವರೆಂತಲೂ, ಶ್ರೀಮಂತರ ಬಗ್ಗೆ ಅವರ ಮನಸ್ಸಿನಲ್ಲಿ ದ್ವೇಷಭಾ ವವು ಹುಟ್ಟಿರುವದೆಂತಲೂ, ಅವರ ಮಾತಿನ ಮೇಲಿಂದ ಎಲ್ಲರಿಗೂ ಸ್ಪಷ್ಟವಾಗಿ ಕಂಡುಬರುವ ಹಾಗಿತ್ತು.

ಆ ಕುರುಬರ ಮಾತುಗಳನ್ನು ಕೇಳಿ, ರಾಜಕನ್ನಿಕೆಯು ಒಳ್ಳೇ ಆವೇಶದಿಂದ ಅಂದಳು. ಇಂಥ ಹೊಟ್ಟೆಕಿಚ್ಚುಳ್ಳ ಕಾಡುಜನರ ಸಂಗತಿಯು ನನಗೆ ಕ್ಷಣಹೊತ್ತು ಸಹ ಬೇಡ. ಈ ಹೊತ್ತು ನಾನು ನೋಡಿದಂಥ ಹಳ್ಳಿವಾಡದ ಸುಖದ ಮಾದರಿಗ ಳನ್ನು ಇನ್ನೊಮ್ಮೆ ನೋಡಬೇಕೆಂಬ ಇಚ್ಛೆಯು ನನಗೆ ಇನ್ನು ಮುಂದೆ ಎಂದೂ ಆಗಲಿಕ್ಕಿಲ್ಲ. ಪ್ರಾಚೀನ ಕವಿಗಳು ಈ ತರದ ಆಯುಷ್ಯಕ್ರಮದಲ್ಲಿ ನಾನಾಪ್ರಕಾ ರದ ಸುಖಗಳಿರುತ್ತವೆಂದು ಮಾಡಿದ ವರ್ಣನವು ಬೊಡ್ಡಿಯಿಂದ ತುದಿತನಕ ಸುಳ್ಳೇ

ಇರುತ್ತದೆಂದು ನಾನು ಅನ್ನಲಾರೆನು. ಅದೇ ಮೇರೆಗೆ ತೋಟಗಳಲ್ಲಿಯೂ, ಹೊಲ ಗಳಲ್ಲಿಯೂ, ಇರುವದರಿಂದ ಮನುಷ್ಯನಿಗೆ ಉಂಟಾಗುವ ಶಾಂತತೆಯೂ, ಸೌಖ್ಯವೂ, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ನಾಗರಿಕರಿಗೂ ಕೂಡ ಪ್ರಾಪ್ತವಾಗ ಲಾರವ. ಆದದರಿಂದ ಸುಶೀಲರಾದಂಥ, ಚತುರರಾದಂಥ ಸಖಿಗಳೊಡನೆ ಒಂದು ಹಳ್ಳಿಯೊಳಗೆ ವಾಸಮಾಡಿ, ಅವರನ್ನು ಕೂಡಿಕೊಂಡು ತೋಟದೊಳಗೆ ಆಡ್ಡಾಡಿ, ನನ್ನ ಕೈಯಿಂದ ಹಚ್ಚಿದ ಹೂಗಿಡಗಳ ಹೂವುಗಳನ್ನು ಕೊಯ್ಯುತ್ತಲೂ, ನಾನು ಸಾಕಿ ಜೋಕೆಮಾಡಿದ ಕುರಿಮರಿಯು ಮೈಮೇಲೆ ಕೈಯಾಡಿಸುತ್ತಲೂ, ಹಳ್ಳದ ದಂಡೆಯಲ್ಲಿರುವ ಒಂದು ದೊಡ್ಡ ಗಿಡದ ನೆರಳೊಳಗೆ ಕುಳಿತು ನನ್ನ ಗೆಳತಿಯರೊಳಗೆ ಒಬ್ಬಳಿಗೆ ಒಂದು ಸುರಸವಾದ ಗ್ರಂಥವನ್ನು ಓದಹೇಳಿ, ಮೆಲ್ಲಮೆಲ್ಲನೆ ಅಡ್ಡಾಡುತ್ತ ಆ ವಾಚನವನ್ನು ಕೇಳುತ್ತಲೂ, ಆನಂದದಿಂದ ಹೊತ್ತುಗಳೆಯುವ ಸುದಿನವ ಒಮ್ಮೆ ಲೊಮ್ಮೆ ಬಂದೀತೆಂಬ ಆಶೆಯು ನನಗುಂಟು."

## ಇಪ್ಪತ್ತನೆಯ ಭಾಗವು.

### ಸಂಪತ್ತಿಯಿಂದುಂಟಾಗುವ ಸಂಕಟವು.

ಮರುದಿವಸ ಮುಂಜಾನೆ ಅವರು ದಾರೀ ಹಿಡಿದು ನಡೆಯುವಲ್ಲಿ ಮಧ್ಯಾನ್ಹ ವಾಗಿ ಬಿಸಿಲು ಬಲಿಯಲು, ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ಅತ್ತಿತ್ತ ನಿವಾತ ವಾದ ಸ್ಥಳವನ್ನು ಹುಡುಕಹತ್ತಿದರು. ತುಸು ದೂರ ಹೋದ ಕೂಡಲೆ ಅವರಿಗೆ ಒಂದು ಗಿಡಗಳ ಗುಂಪು ಕಾಣಿಸಿತು. ಆ ಗುಂಪಿನ ಹತ್ತರ ಬಂದು ನೋಡಲು, ಸಮೀಪದಲ್ಲಿಯೇ ಮನುಷ್ಯರ ವಾಸಸ್ಥಾನಗಳಿದ್ದಂತೆ ತೋರಿತು. ಆ ಗುಂಪಿನೊಳ ಗೆ ಬಹಳ ದಟ್ಟಾದ ನಡುನಡುವಿನ ಗಿಡಗಳನ್ನು ಒಳ್ಳೇ ಜಾಗರೂಕತನದಿಂದ ಕಡಿದು ಹಾಕಿ ಅಡ್ಡಾಡಲಿಕ್ಕೆ ದಾರಿಯನ್ನು ಮಾಡಿದ್ದರು. ಅಡ್ಡಾಡುವವರಿಗೆ ನೆರಳಾಗಬೇ ಕೆಂದು ಎದುರಿನ ಗಿಡಗಳ ಟೊಂಗೆಗಳನ್ನು ಬೊಗ್ಗಿಸಿ, ಆ ಟೊಂಗೆಗಳನ್ನು ಬೇರೆ ಗಿಡಗಳ ಟೊಂಗೆಗಳೊಳಗೆ ಒಳ್ಳೇ ಚಾತುರ್ಯದಿಂದ ತೊಡಕಿಸಿದ್ದರು ಗಿಡಗಂಟೆಗ ಳಿಲ್ಲದ ಸ್ಥಳಗಳಲ್ಲಿ ಅಲ್ಲಲ್ಲಿಗೆ ಕಟ್ಟೆಗಳನ್ನು ಕಟ್ಟಿ, ಅವುಗಳ ಮೇಲೆ ಹೂವಿನ ಗಿಡಗಳ ನ್ನು ಹಚ್ಚಿದ್ದರು. ಹಾವಿನೋಪಾದಿಯಲ್ಲಿ ಹೋಗಿರುವ ಆ ದಾರಿಗುಂಟ ಒಂದು ಸಣ್ಣ ಹೊಳೆಯು ಹರಿಯುತ್ತಿತ್ತು. ಆ ಹೊಳೆಯು ನಡುನಡುವೆ ಅಗಲಾಗಿಯೂ ತುಸು ಆಳವಾಗಿಯೂ ಇತ್ತು; ಕೆಲವೆಡೆಯಲ್ಲಿ ಸಣ್ಣ ಸಣ್ಣ ಕಲ್ಲುಗಳ ರಾಶಿಯನ್ನು ಹಾಕಿದ್ದದರಿಂದ ಅದರ ಪ್ರವಾಹವು ಆ ರಾಶಿಗೆ ಬಡೆದು ಸಪ್ಪಳಮಾಡುತ್ತ ಹರಿ ಯುತ್ತಿತ್ತು.

ಕನಸುಮನಸ್ಸಿನಲ್ಲಿ ಸಹ ನೋಡದಂಥ ರಮಣೀಯವಾದ ಸ್ಥಳವನ್ನು ಅಕಸ್ಮಾತ್ತಾಗಿ ನೋಡಿದ್ದರಿಂದ ಅವರಿಗೆ ಬಹಳೇ ಆಶ್ಚರ್ಯವಾಯಿತು. ಅವರು ಬಹು ಮೆಲ್ಲಮೆಲ್ಲನೆ ಆ ಗಿಡಗಳಗುಂಟ ಹೋಗುತ್ತ, "ಇಂಥ ನಿರ್ಜನವಾದ ಅಡವಿಯಲ್ಲಿ ಈ ತರದ ಮನೋಹರವಾದ ದಾರಿಯನ್ನು ಮಾಡಲಿಕ್ಕೆ ಯಾವ ಪುಣ್ಯಾತ್ಮನಿಗೆ ವೇಳೆ ಸಿಕ್ಕಿದ್ದೀತು? ಯಾವ ನರಪುಂಗವನು ತನ್ನ ಚಾತುರ್ಯವನ್ನು ಈ ಕೆಲಸ ಕ್ಕೋಸ್ಕರ ವೆಚ್ಚ ಮಾಡಿದ್ದಾನಾದೀತು? " ಎಂದು ತರ್ಕಿಸುತ್ತ ನಡೆದರು.

ತುಸು ದೂರ ಹೋಗುವಷ್ಟರಲ್ಲಿಯೇ ಮಧುರವಾದ ಗಾಯನದ ಸುಸ್ವರವು ಅವರಿಗೆ ಕೇಳಬಂತು; ತೋಪುಗಳೊಳಗೆ ನೃತ್ಯಮಾಡುವ ತರುಣ ಸ್ತ್ರೀಪುರುಷರು ಅವರ ದೃಷ್ಟಿಗೆ ಬಿದ್ದರು. ಮತ್ತೆ ತುಸು ಮುಂದೆ ಹೋದಕೂಡಲೆ ಒಂದು ಎತ್ತರವಾದ ಸ್ಥಳದ ಮೇಲೆ ಕಟ್ಟಿದ್ದೊಂದು ಭವ್ಯವಾದ ಅರಮನೆಯು ಅವರಿಗೆ ಕಾಣಿಸಿತು. ಆ ಅರಮನೆಯ ಸುತ್ತಲು ಗಿಡಗಳು ಕಿಷ್ಕಿಂಧವಾಗಿ ಬೆಳೆದಿದ್ದವು. ಪೂರ್ವದೇಶದೊಳಗಿನ ಜನರ ಆದರಾತಿಥ್ಯದ ನೇಮಗಳಿಗನುಸರಿಸಿ, ಬೇಕಾದವರಿಗೆ ಆ ಅರಮನೆಯೊಳಗೆ ಹೋಗಲಪ್ಪಣೆಯಿತ್ತು. ಆದ್ದುದರಿಂದ ಅವರು ಆ ಅರಮನೆಯೊಳಗೆ ಹೋದಕೂಡಲೆ, ಅವರನ್ನು ನೋಡಿ, ಆ ಮನೆಯ ಯಜಮಾನನು ಔದಾರ್ಯದಿಂದಲೂ, ತನ್ನ ಸಂಪತ್ತಿಗೆ ಶೋಭಿಸುವಂಥ ಆದರದಿಂದಲೂ, ಅವರನ್ನು ಸತ್ಕರಿಸಿದನು.

ಆ ಅರಮನೆಯ ಯಜಮಾನನು ಒಳ್ಳೇ ಚತುರನೂ, ಗುಣಜ್ಞನೂ ಇದ್ದನು. ಇವರ ಮುಖಲಕ್ಷಣದ ಮೇಲಿಂದ ಇವರು ಸಾಧಾರಣ ಅತಿಥಿಗಳಲ್ಲೆಂದು ತಿಳಿದುಕೊಂಡು, ಇವರ ಯೋಗ್ಯತೆಗನುಸರಿಸಿ, ಇವರ ಊಟ ಉಪಚಾರಗಳನ್ನು ಒಳ್ಳೇ ವೈಭವದಿಂದ ಮಾಡಿಸಿದನು. ಅವನು ಇವಲ್ಲ್ಲಕನ ವಾಕ್ಪಟುತ್ವವನ್ನು ಚಿತ್ತಗೊಟ್ಟು ಆಲಿಸಿದನು; ಮತ್ತು ರಾಜಕನ್ನಿಕೆಯ ಪ್ರೌಢವಾದ ಮರ್ಯಾದೆಯನ್ನೂ, ವಿನಯವನ್ನೂ, ನೋಡಿ ಆಕೆ ಕುಲೀನಸ್ತ್ರೀ ಇರುತ್ತಾಳೆಂದು ತಿಳಿದುಕೊಂಡು, ಆಕೆಯ ಬಗ್ಗೆ ಅವನ ಮನಸ್ಸಿನಲ್ಲಿ ಆದರವುಂಟಾಯಿತು. ಊಟವಾದ ಬಳಿಕ ಅವರು ಮುಂದೆ ಹೋಗುವದಕ್ಕೆ ಆ ಯಜಮಾನನ ಅಪ್ಪಣೆಯನ್ನು ಕೇಳಲು, ಆತನು ಅವರಿಗೆ ಕೈಮುಗಿದು ದಯಮಾಡಿ ಒಂದು ದಿವಸ ತನ್ನ ಮನೆಯಲ್ಲಿ ಇದ್ದು ಹೋಗಬೇಕೆಂದು ವಿನಯದಿಂದ ಬೇಡಿಕೊಂಡನು. ಮರುದಿವಸವಾದರೂ ಆತನು ಪುನಃ ಅವರಿಗೆ ಮತ್ತೊಂದು ದಿವಸ ತನ್ನಲ್ಲಿರಬೇಕೆಂದು ಆಗ್ರಹ ಮಾಡಿದನು. ಈ ಮೇರೆಗೆ ಎರಡು ಮೂರು ದಿವಸ ಅಲ್ಲಿ ನಿಂತದ್ದರಿಂದ ಅವರವರ ಸ್ನೇಹವು ಬೆಳೆದು, ಒಬ್ಬರೊಬ್ಬರ ಮೇಲೆ ನಂಬಿಗೆಯುಂಟಾಗಿ, ಅವರು ತಮ್ಮತಮ್ಮ ಮನಸ್ಸು ಬಿಚ್ಚಿ ಮಾತಾಡಹತ್ತಿದರು.

ಅವರು ಅಲ್ಲಿ ಇದ್ದಾಗ, ಆ ಯಜಮಾನನ ಸೇವಕರೆಲ್ಲರು ಆನಂದವೃತ್ತಿಯಲ್ಲಿರುವದನ್ನೂ, ಸುತ್ತಲು ದೃಷ್ಟಿ ಹರಿಯುವ ವರೆಗೆ ನೋಡಿದತ್ತೆಲ್ಲ ಚಂದವಾಗಿ ಕಾಣುವ ಅಪೂರ್ವ ವನಶೋಭೆಯನ್ನೂ ಮನೆಯೊಳಗೂ ಹೊರಗೂ ನೋಡಿದತ್ತೆಲ್ಲ ದೃಷ್ಟಿಗೋಚರವಾಗುವ ಸಂತೋಷವನ್ನೂ ನೋಡಿ, ರಾಜಪುತ್ರನು ತಾನು ಹುಡುಕುತ್ತಿರುವ ಸಂಪೂರ್ಣ ಸಂಸಾರಸುಖವು ಅಲ್ಲಿರುತ್ತದೆಂದು ತಿಳಿದುಕೊಂಡನು. ಆಗ ಆತನು ಆ ಯಜಮಾನನಿಗೆ ಅಂದನು:—“ಮಹಾರಾಯರೆ, ತಾವು ಧನ್ಯರೂ, ಕೃತಾರ್ಥರೂ ಇದ್ದೀರಿ. ಯಾಕಂದರೆ ತಮಗೆ ಸಂಸಾರಸಂಬಂಧದ ಸಂಪೂರ್ಣ ಸುಖವು ಸದಾ ಸಮೃದ್ಧವಾಗಿದೆ. ಇವನ್ನು ನೋಡಿ ನಮಗೆ ಪರಮಾನಂದವಾಗುತ್ತದೆ.” ರಾಜಪುತ್ರನ ಮಾತುಗಳನ್ನು ಕೇಳಿ, ಆ ಮನೆಯ ಯಜಮಾನನು ಬಿಸುಸುಯ್ದು ಅಂದನು:-

“ರಾಜಪುತ್ರರೇ, ಹೊರಗಿನ ನನ್ನ ಸ್ಥಿತಿಯನ್ನು ನೋಡುವ ಪ್ರತಿಯೊಬ್ಬ ಮನುಷ್ಯನಿಗೆ ತಮಗೆ ತೋರಿದಂತೆಯೇ ನಾನು ಒಳ್ಳೇ ಕೃತಾರ್ಥನೆಂದು ಕಂಡುಬರುತ್ತದೆ. ಆದರೆ ಹೊಳೆಯುವದೆಲ್ಲ ಹೊನ್ನಲ್ಲೆಂಬ ಗಾದೆಯಂತೆ ನನ್ನ ಅಂತಃಸ್ಥಿತಿಯು ಬಾಹ್ಯಸ್ಥಿತಿಯಿಂದ ತೀರ ಭಿನ್ನವಾಗಿದೆ.. ಚನ್ನಾಗಿ ವಿಚಾರಮಾಡಿ ನೋಡಿದರೆ, ನನ್ನಂಥ ದುರ್ದೈವಿ ಪ್ರಾಣಿಯು ಈ ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ. ನನ್ನ ಹತ್ತರ ಇರುವ ನನ್ನ ಐಶ್ವರ್ಯವೇ ನನಗೆ ಮುಳುವಾಗಿದೆ. ಇಜಿಪ್ತ ದೇಶದ ಒಡೆಯನು ನನಗೆ ಕಡುವೈರಿಯಾಗಿದ್ದಾನೆ. ನನ್ನ ಸಂಪತ್ತನ್ನೂ, ಯಾವತ್ತು ಜನರು ನನ್ನ ಮೇಲೆ ಪ್ರೀತಿಮಾಡುವದನ್ನೂ ನೋಡಿ, ಅವನಿಗೆ ಸಹನವಾಗುವದಿಲ್ಲ. ನನ್ನ ಸಂಪತ್ತನ್ನು ಕಸುಕೊಳ್ಳಬೇಕೆಂದು ಅವನ ಮನಸ್ಸಿನಲ್ಲಿ ಬಹಳ ಇರುತ್ತದೆ. ಆದರೆ ಈ ದೇಶದೊಳಗಿನ ರಾಜಪುತ್ರರ ಆಶ್ರಯವು ನನಗೆ ಇದ್ದದರಿಂದ ನಾನು ಇದುವರೆಗೆ ಪಾರಾಗಿದ್ದೇನೆ. ಆದರೂ ದೊಡ್ಡವರ ಸ್ನೇಹವು ಒಂದೇ ಸವನೆ ಇರುವದಿಲ್ಲ. ಈ ಹೊತ್ತು ಸ್ನೇಹಮಾಡಿದ್ದವರೇ ನಾಳೆ ಶತ್ರುಗಳಾಗುತ್ತಾರೆ. ಈಗ ನನ್ನ ಸ್ನೇಹಿತರಾದ ರಾಜಪುತ್ರರೇ ನನ್ನ ಸಂಪತ್ತಿಗೆ ಆಶೆಮಾಡಿ ಇಜಿಪ್ತ ದೇಶದ ಒಡೆಯನನ್ನು ಕೂಡಿಕೊಂಡು ನನ್ನನ್ನು ಹಾಳು ಮಾಡ್ಯಾರೆಂಬ ಚಿಂತೆಯು ನನಗೆ ಯಾವಾಗಲೂ ಹತ್ತಿರುತ್ತದೆ. ಇವನ್ನೆಲ್ಲ ವಿಚಾರಮಾಡಿ ನಾನು ನನ್ನ ಎಲ್ಲ ಸಂಪತ್ತನ್ನು ಎಷ್ಟೋ ದಿವಸಗಳ ಪೂರ್ವದಲ್ಲಿಯೇ ದೂರದೇಶಕ್ಕೆ ಕಳುಹಿಬಿಟ್ಟಿದ್ದೇನೆ. ಏನಾದರು ತುಸು ಹೆಚ್ಚುಕಡಿಮೆಯಾದದ್ದು ನನಗೆ ಕಂಡುಬಂದ ಕೂಡಲೆ, ನಾನೂ ಅಲ್ಲಿಗೆ ಹೋಗುವ ಸಿದ್ಧತೆಯಲ್ಲಿಯೇ ಇರುತ್ತೇನೆ. ನಾನು ಇಲ್ಲಿಂದ ಹೋದ ಕೂಡಲೆ ನನ್ನ ಶತ್ರುಗಳು ನನ್ನ ಈ ಅರಮನೆಯಲ್ಲಿ ಬಂದು ಬೇಕಾದ ಹಾಗೆ ಗೊಂದಲ ಹಾಕುವರು, ಇಷ್ಟು

ದಿವಸಗಳ ವರೆಗೆ ಕಷ್ಟಬಟ್ಟು ಬೆಳೆಸಿದ ಉಪವನದ ಸುಖೋಪಭೋಗವನ್ನು ಮನಸ್ಸಿಗೆ ಬಂದಂತೆ ಮಾಡಿಕೊಳ್ಳುವರೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಬಂದು ನನಗೆ ಪರಮ ವಿಷಾದವಾಗುತ್ತದೆ."

ಅವರೆಲ್ಲರೂ, ಆ ಯಜಮಾನನ ಸಂಕಟವನ್ನು ಕೇಳಿ ದುಃಖಪಟ್ಟರು; ಮತ್ತು ಅವನಿಗೆ ದೇಶತ್ಯಾಗಮಾಡುವ ಪ್ರಸಂಗ ಬಂದದ್ದು ನೋಡಿ, ಅವರಿಗೆ ವಿಷಾದವಾಯಿತು. ಈ ಅನ್ಯಾಯವನ್ನು ಕೇಳಿ ರಾಜಪುತ್ರಿಗಂತೂ ಮಿತಿಮೀರಿ ದುಃಖವಾಯಿತು; ಮತ್ತು ಸಿಟ್ಟಿನಿಂದ ಅಲ್ಲಿ ನಿಲ್ಲಲಾರದೆ ಆಕೆಯು ತನ್ನ ಕೋಣೆಗೆ ಹೋದಳು. ಮುಂದೆ ಮತ್ತೆ ಕೆಲವು ದಿವಸಗಳ ವರೆಗೆ ಅವರು ಆ ಅರಮನೆಯಲ್ಲಿದ್ದು ಆದರಾತಿಥ್ಯವನ್ನು ಸ್ವೀಕರಿಸಿ ಜೋಗಿಯನ್ನು ಹುಡುಕುತ್ತ ಮುಂದೆ ನಡೆದರು.

## ಇಪ್ಪತ್ತೊಂದನೆಯ ಭಾಗವು

### ಏಕಾಂತವಾಸದ ಸುಖವು—ಜೋಗಿಯ ಜೀವನವೃತ್ತಾಂತವು.

ಅವರು ಒಕ್ಕಲಿಗರನ್ನು ಕುರಿತು ಆ ಜೋಗಿಯು ಇರುವ ಸ್ಥಳವನ್ನು ಕೇಳುತ್ತ ಕೇಳುತ್ತ ಹೊರಟ ಮೂರನೆಯ ದಿವಸ ಆ ಜೋಗಿಯ ಮಠಕ್ಕೆ ಬಂದು ಮುಟ್ಟಿದರು. ಗುಡ್ಡದ ಒಂದು ಮಗ್ಗಲಿಗಿರುವದೊಂದು ಗವಿಯೇ ಆ ಜೋಗಿಯ ಮಠವಾಗಿತ್ತು. ಆ ಮಠದ ಸುತ್ತಲೂ, ಮೇಲೆಯೂ ತಾಡವೃಕ್ಷಗಳು ಬೆಳೆದಿದ್ದವು. ಈ ಮಠದಿಂದ ನೀಲ ನದಿಯ ತಡಸಲವು ಸಾಕಷ್ಟು ದೂರ ಇತ್ತು. ಆದುದರಿಂದ ಆ ತಡಸಲದ ಸಪ್ಪಳವು ತೀರ ಮಂದವಾಗಿ ಆದರೂ ಒಂದೇ ಸವನೆ ಯಾವಾಗಲೂ ಕೇಳಬರುತ್ತಿತ್ತು. ಈ ಮಂದವಾದ ಸಪ್ಪಳದಿಂದ ಮನಸ್ಸಿಗೆ ತೊಂದರೆಯುಂಟಾಗದೆ, ಚಿತ್ತವೃತ್ತಿಯು ಏಕಾಗ್ರವಾಗಿ ಮನನ ಮಾಡಲಿಕ್ಕೆ ಅನುಕೂಲವಾಗಿತ್ತು. ಒಮ್ಮೊಮ್ಮೆ ಗಾಳಿ ಬೀಸಿ, ತಾಡವೃಕ್ಷಗಳನ್ನು ಅಲ್ಲಾಡಿಸಹತ್ತಿದಾಗಂತೂ ಮೇಲೆ ಹೇಳಿದ ಸ್ಥಿತಿಯು ವಿಶೇಷ ಆನಂದದಾಯಕವಾಗುತ್ತಿತ್ತು. ಗುಡ್ಡದಲ್ಲಿ ಸೃಷ್ಟಿಕ್ರಮಕ್ಕನುಸರಿಸಿ ತನ್ನಿಂದ ತಾನೇ ಉಂಟಾದ ಗವಿಯಲ್ಲಿ ಕೃತ್ರಿಮ ಸಾಧನಗಳಿಂದ ಅನೇಕ ಬೇರೆಬೇರೆ ಭಾಗಗಳು ಮಾಡಲ್ಪಟ್ಟಿದ್ದವು. ಆ ಜೋಗಿಯು ಆಯಾ ಭಾಗಗಳನ್ನು ಬೇರೆ ಬೇರೆ ಕೆಲಸಗಳಿಗಾಗಿ ಉಪಯೋಗಿಸುತ್ತಿದ್ದನು. ಆ ದಾರಿಯಿಂದ ಹೋಗುವ ದಾರಿಕಾರರಿಗೆ ಹಾದಿಯಲ್ಲಿ ಹೊತ್ತುಮುಳುಗಿ, ಮುಂದೆ ಹೋಗಲಿಕ್ಕೆ ಬಾರದಷ್ಟು ಕತ್ತಲಾದರೆ, ಇಲ್ಲವೆ ಒಮ್ಮಿಂದೊಮ್ಮೆ ಬೀಸಿದ ಬಿರುಗಾಳಿಗಳಿಂದಲೂ, ಮಳೆಯಿಂದಲೂ ದಾರಿ ಕಟ್ಟಾದರೆ, ಮುಂದೆ ಹೋಗಲಿಕ್ಕೆ ಬಾರದಂತಾಗಿ ಇಳಿದು

ಕೊಳ್ಳುವದಕ್ಕೆ ಅಲ್ಲಿಗೆ ಬಂದರೆ, ಆ ಜೋಗಿಯು ಅವರಿಗೆ ಇಂಬುಗೊಡುತ್ತಿದ್ದನು.

ಅವರು ಆ ಮಠದ ಸಮೀಪಕ್ಕೆ ಬಂದು ನೋಡಲು, ಆ ಜೋಗಿಯು ತನ್ನ ಮಠದ ಬಾಗಿಲ ಮುಂದೆ ಒಂದು ಬಾಕು ಹಾಕಿ, ಅವರ ಮೇಲೆ ಮೂರುಸಂಜೆಯ ತಂಪು ಹವೆಯನ್ನು ತೆಗೆದುಕೊಳ್ಳುತ್ತ ಕುಳಿತಿದ್ದನು. ಆತನ ಒಂದು ಮಗ್ಗಲಿಗೆ ಒಂದು ಪುಸ್ತಕವೂ, ಕಾಗದ ಲೆಕ್ಕಣಿಕೆಗಳೂ ಇದ್ದವು; ಮತ್ತೊಂದು ಮಗ್ಗಲಿಗೆ ನಾನಾತರದ ಆವುತಗಳಿದ್ದವು (ಕೊಡ್ಲಿ, ಕುಡಗೋಲು, ಸಲಿಕೆ ಮುಂತಾದವು). ಆ ಜೋಗಿಯು ಇವರನ್ನು ಇನ್ನೂ ನೋಡಿದ್ದಿಲ್ಲ ಅಷ್ಟರಲ್ಲಿ ರಾಜಪುತ್ರಿಯು ಆತನ ಮುಖವನ್ನು ನೋಡಿ ತನ್ನ ಜತೆಗಾರರಿಗೆ ಅಂದಳು:—" ಇವನ ಮುಖವನ್ನು ನೋಡಿದರೆ, ಇವನಿಗೆ ನಿಜವಾದ ಸುಖಪ್ರಾಪ್ತಿಯಾದಂತೆ ತೋರುವದಿಲ್ಲ. ಇಲ್ಲವೆ ಸುಖಪ್ರಾಪ್ತಿಯನ್ನು ಮಾಡಿಕೊಳ್ಳುವ ಮಾರ್ಗವನ್ನಾದರೂ ಎರಡನೆಯವರಿಗೆ ತೋರಿಸಿ ಕೊಡುವಷ್ಟು ಸಾಮರ್ಥ್ಯವೂ ಇವನಲ್ಲಿದ್ದಂತೆ ಕಾಣುವದಿಲ್ಲ."

ತರುವಾಯ ಅವರೆಲ್ಲರು ಜೋಗಿಯ ಹತ್ತಿರ ಬಂದು, ಅವನಿಗೆ ಸಾಷ್ಟಾಂಗ ನಮಸ್ಕರಿಸಿದರು. ಜೋಗಿಯಾದರೂ ತಿರುಗಿ ಅವರಿಗೆ ನಮಸ್ಕರಿಸಿದನು. ಜೋಗಿಯು ನಮಸ್ಕರಿಸುವ ರೀತಿಯನ್ನು ನೋಡಿದರೆ ಅವನು ಮೊದಲು ದೊಡ್ಡದೊಡ್ಡ ಜನರಲ್ಲಿ ವರ್ತಿಸಿದವನಿರಬೇಕೆಂದು ಸ್ಪಷ್ಟವಾಗಿ ಕಂಡುಬರುವ ಹಾಗಿತ್ತು. ಅವನು ಅವರನ್ನು ನೋಡಿ ಅಂದನು:—" ಮಕ್ಕಳಿರಾ,! ನೀವು ದಾರಿತಪ್ಪಿ ಇಲ್ಲಿ ಬಂದಿದ್ದರೆ, ಈ ಮಠದಲ್ಲಿ ನಿಮಗೆ ರಾತ್ರಿಯ ಊಟ ಉಡಿಗೆ, ಹಾಸಿಕೊಳ್ಳಲಿಕ್ಕೆ ಹಾಸಿಗೆ ಹುಸ್ಪಡಿ ಬೇಕಾದದ್ದು ಸಿಗುವದು ; ಮನುಷ್ಯನಿಗೆ ಅವಶ್ಯಕವಾದ ಯಾವತ್ತು ಒಡವೆಗಳು ಇಲ್ಲಿರುತ್ತವೆ ಆದರೆ ರಾಜಮಂದಿರದಂತೆ ನಾನಾತರದ ಸುಖೋಪಭೋಗದ ಒಡವೆಗಳು ಮಾತ್ರ ಇಲ್ಲಿ ಇಲ್ಲ ; ಮತ್ತು ನನ್ನಂಥ ಜೋಗಿಯ ಮಠದಲ್ಲಿ ಅಂಥ ವಸ್ತುಗಳ ಅಪೇಕ್ಷೆಯನ್ನಾದರೂ ನೀವು ಮಾಡಲಿಕ್ಕಿಲ್ಲ."

ಈ ಮೇರೆಗೆ ತಮ್ಮ ಆದರಸತ್ಕಾರವನ್ನು ಮಾಡಿದ್ದರಿಂದ ಎಲ್ಲರೂ ಆ ಜೋಗಿಯ ಉಪಕಾರವನ್ನು ನೆನಿಸಿದರು. ಮಠದೊಳಗಿನ ನಿರ್ಮಲವಾದ ಸ್ಥಳವನ್ನೂ, ವಸ್ತುಗಳನ್ನು ವ್ಯವಸ್ಥಿತವಾಗಿ ಇಟ್ಟದ್ದನ್ನೂ, ನೋಡಿ ಅವರಿಗೆ ಬಹಳ ಸಂತೋಷವಾಯಿತು. ಆ ಜೋಗಿಯು ಅವರಿಗೆ ತಿನ್ನಲಿಕ್ಕೆ ಮಾಂಸವನ್ನೂ ಕುಡಿಯಲಿಕ್ಕೆ ಮದ್ಯವನ್ನೂ ಕೊಟ್ಟು, ತಾನು ಹಣ್ಣುಹಂಪಲಗಳನ್ನು ತಿಂದು ನೀರು ಕುಡಿದನು. ಆತನ ಭಾಷಣವು ಹಾಸ್ಯರಸವಿರಹಿತವಾಗಿದ್ದರೂ ಆನಂದವನ್ನುಂಟು ಮಾಡುವಂಥಾದ್ದೂ, ಪರಮಾರ್ಥಪರವಾಗಿದ್ದರೂ, ಮತಾಭಿಮಾನರಹಿತವಾದದ್ದೂ ಇತ್ತು. ಆತನ ಗುಣವನ್ನೂ, ವೃತ್ತಿಯನ್ನೂ ನೋಡಿ ಎಲ್ಲರ ಮನಸ್ಸಿನಲ್ಲಿ

ಅವನ ಬಗ್ಗೆ ಪೂಜ್ಯಬುದ್ಧಿಯು ಹುಟ್ಟಿತು. ರಾಜಕನ್ನಿಕೆಗೆ, ತಾನು ಮೊದಲು ವಿಚಾರ ಮಾಡದೆ ಆತನಿಗೆ ಹೆಸರಿಟ್ಟ ಬಗ್ಗೆ ಬಹಳ ಪಶ್ಚಾತ್ತಾಪವಾಯಿತು.

ಕಟ್ಟಕಡೆಗೆ ಇವ್ಹಾಕನು ಈ ಮೇರೆಗೆ ಅಂದನು:—"ಮಹಾರಾಜರೇ ತಮ್ಮ ಸ್ಥಿತಿಯು ಇಂಥಾದ್ದು ಇದ್ದದರಿಂದಲೇ ತಮ್ಮ ಕೀರ್ತಿಯು ಇಷ್ಟು ದೂರ ಹಬ್ಬಿದೆ, ಇದರಲ್ಲಿನೂ ಆಶ್ಚರ್ಯವಿಲ್ಲ. ನಾವು ಕೇರೋ ಪಟ್ಟಣದಲ್ಲಿರುತ್ತೇವೆ. ತಮ್ಮ ಕೀರ್ತಿಯನ್ನು ಕೇಳಿ, ತಮ್ಮ ದರ್ಶನಕ್ಕಾಗಿ ಇಲ್ಲಿಯ ತನಕ ಬಂದಿರುತ್ತೇವೆ. ಈ ಜಗತ್ತಿನಲ್ಲಿ ಸಂಸಾರದೊಳಗಿನ ಉತ್ತಮ ವಿಧದ ಸ್ಥಿತಿಯನ್ನು ಹುಡುಕಿ ಅದನ್ನು ಸ್ವೀಕರಿಸಬೇಕೆಂದು ಈ ತರುಣ ಮನುಷ್ಯನೂ, ಈ ಚಿಕ್ಕ ಕನ್ನಿಕೆಯೂ ಬಯಸುತ್ತಾರೆ. ತಾವು ದಯಮಾಡಿ ತಮಗೆ ಬಂದ ಅನುಭವದ ಮೇಲಿಂದ ಇವರಿಗೇನಾದರೂ ಹೇಳಬೇಕೆಂದು ಬೇಡಿಕೊಳ್ಳುತ್ತೇನೆ."

ಆ ಜೋಗಿಯು ಉತ್ತರ ಕೊಟ್ಟನು:—"ಒಳ್ಳೇ ರೀತಿಯಿಂದ ನಡೆಯುವವನಿಗೆ ಪ್ರತಿಯೊಂದು ತರದ ಸ್ಥಿತಿಯೂ ಒಳ್ಳೇದೇ. ಇನ್ನು ಸರ್ವೋತ್ಕೃಷ್ಟವಾದ ಸ್ಥಿತಿಯ ವಿಷಯಕ್ಕಂದರೆ, ದುಃಖವನ್ನುಂಟು ಮಾಡುವ ದೃಶ್ಯ ಕಾರಣಗಳನ್ನೆಲ್ಲ ದೂರ ಮಾಡಬೇಕೆಂಬದೊಂದೇ ನಿಯಮವನ್ನು ನಾನು ಬಲ್ಲೆನು; ಹೆಚ್ಚಿನದನ್ನು ಅರಿಯೆನು."

ರಾಜಪುತ್ರನು:—"ಸರ್ವಸಂಗಪರಿತ್ಯಾಗಮಾಡಿ ಏಕಾಂತಸ್ಥಾನದಲ್ಲಿಯೇ ಸದಾ ವಾಸಮಾಡುವವನು ಯಾವತ್ತು ತರದ ದುಃಖಗಳ ನಿವಾರಣವನ್ನು ಮಾಡಬಲ್ಲನೆಂದು ತಾವೇ ತಮ್ಮ ಉದಾಹರಣದಿಂದ ಜಗಿಗೆ ತೋರಿಸಹತ್ತಿರುತ್ತೀರಿ."

ಜೋಗಿಯು:—"ನಾನು ಈ ಏಕಾಂತವಾಸದಲ್ಲಿರಹತ್ತಿ ಹದಿನೈದು ವರ್ಷಗಳಾದವು ಆದರೆ ನನ್ನಂತೆಯೇ ಉಳಿದವರು ಈ ಏಕಾಂತವಾಸವನ್ನು ಸ್ವೀಕರಿಸಬೇಕೆಂದು ನಾನು ಬಯಸುವದಿಲ್ಲ. (ಅಂದರೆ ನಾನು ಏಕಾಂತವಾಸದಲ್ಲಿದ್ದದ್ದು ನೋಡಿ ಜನರು ನನ್ನಂತೆ ನಡೆಯಬೇಕೆಂದು ನನ್ನ ಅಪೇಕ್ಷೆ ಇಲ್ಲ.) ನಾನು ತರುಣನಿದ್ದಾಗ ದಂಡಿನೊಳಗೆ ಒಬ್ಬ ಸಿಪಾಯಿಯಾಗಿದ್ದೆನು. ಏರುತ್ತೇರುತ್ತ ದಂಡಿನೊಳಗಿನ ದೊಡ್ಡ ಅಧಿಕಾರಿಯಾದೆನು. ಒಂದುವೇಳೆ ನನ್ನ ದೊಡ್ಡ ದಂಡನ್ನು ತೆಗೆದುಕೊಂಡು ಅನೇಕ ವಿಸ್ತೀರ್ಣವಾದ ಪ್ರದೇಶಗಳನ್ನು ದಾಟಿಹೋಗಿ, ಅನೇಕ ದೇಶಗಳನ್ನು ಸ್ವಾಧೀನ ಮಾಡಿಕೊಂಡೆನು. ದೊಡ್ಡ ದೊಡ್ಡ ಯುದ್ಧಗಳನ್ನು ಮಾಡಿ ಶತ್ರುಗಳನ್ನು ಸೋಲಿಸಿದೆನು. ಹಲವು ಮುತ್ತಿಗೆಗಳನ್ನು ಹಾಕಿ ಕಠಿಣವಾದ ಕೋಟೆಗಳನ್ನು ತೆಗೆದುಕೊಂಡೆನು. ಈ ಮೇರೆಗೆ ನಾನು ನನ್ನ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತಿದ್ದಾಗ್ಯೂ, ಸೇನಾಪತಿಯ ಕೆಲಸವು ತೆರವು ಬಿದ್ದಾಗ ಅದನ್ನು ನನಗೆ ಕೊಡದೆ,

ನನ್ನ ಕೆಳಗಿನ ಒಬ್ಬ ಚಿಕ್ಕ ಮನುಷ್ಯನಿಗೆ ಕೊಟ್ಟಿದ್ದರಿಂದ ನನ್ನ ಮನಸ್ಸಿಗೆ ಬಹಳ
ವಿಷಾದವಾಗಿ ಕೆಲಸವನ್ನು ಬಿಟ್ಟುಕೊಟ್ಟೆನು. ನನ್ನ ತಾರುಣ್ಯವು ಅಳಿದು ಹೋಗಿ,
ಮುಪ್ಪಿನ ಕಳೆಯು ಏರಹತ್ತಿತು. ಆದುದರಿಂದ ಮೋಹಜಾಲಗಳಿಂದಲೂ, ಭೇದ
ಭಾವಗಳಿಂದಲೂ, ದುಃಖದಿಂದಲೂ ತುಂಬಿತುಳುಕುವಂಥ ಭವಸಾಗರವನ್ನು ದಾಟ
ಬೇಕೆಂದು ಆಲೋಚಿಸಿ, ಏಕಾಂತವಾಸದಲ್ಲಿದ್ದು ಮುಪ್ಪಿನ ದಿವಸಗಳನ್ನು ಕಳೆಯ
ಬೇಕೆಂದು ನಿಶ್ಚಯಿಸಿ ಇಲ್ಲಿಗೆ ಬಂದೆನು. ಹಿಂದಕ್ಕೊಮ್ಮೆ ಆದ ಯುದ್ಧದಲ್ಲಿ ನಾನು
ಸೋಲಲು, ಶತ್ರುಗಳು ನನ್ನನ್ನು ಬೆನ್ನಟ್ಟಿದರು; ಆಗ ನಾನು ಅವರ ಕಣ್ಣುತಪ್ಪಿಸಿ
ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಈ ಗವಿಯಲ್ಲಿ ಬಂದು ಅಡಿಗಿಕೊಂಡಿದ್ದೆನು.
ಆದುದರಿಂದ ಇದೇ ಗವಿಯಲ್ಲಿ ನನ್ನ ಆಯುಷ್ಯದ ಉಳಿದ ದಿವಸಗಳನ್ನು ಕಳೆಯ
ಬೇಕೆಂದು ಗೊತ್ತುಮಾಡಿ ಇಲ್ಲಿಗೆ ಬಂದೆನು. ಆ ಮೇಲೆ ಕೆಲವು ಶಿಲ್ಪಿಗರನ್ನು ಹಚ್ಚಿ,
ಗವಿಯಲ್ಲಿ ಅನೇಕ ಕೋಣೆ ಮುಂತಾದ ಭಾಗಗಳನ್ನು ಮಾಡಿಸಿ, ನನ್ನ ನಿರ್ವಾಹಕ್ಕೆ
ಅವಶ್ಯವಾದ ಯಾವತ್ತು ಪದಾರ್ಥಗಳನ್ನು ಸಂಗ್ರಹಮಾಡಿಕೊಂಡು ಇಲ್ಲಿರ
ಹತ್ತಿದೆನು."

"ಜಲಪರ್ಯಟಣ ಮಾಡುವಾಗ ಸಮುದ್ರವು ಬಿರುಗಾಳಿಯಿಂದ ಉಕ್ಕೇರಿ,
ಹಡಗವು ಈಗ ಒಡೆಯುತ್ತದೋ, ಇನ್ನೊಂದು ಗಳಿಗೆಗೆ ಒಡೆಯುತ್ತದೋ, ಇಲ್ಲವೆ
ಮುಳುಗಿಹೋಗುತ್ತದೋ ಎಂಬ ಚಿಂತೆಯಲ್ಲಿ ಮಗ್ನನಾದ ಅಂಬಿಗನಿಗೆ ಅಕಸ್ಮಾ
ತ್ತಾಗಿ ಒಂದು ಬಂದರವು ಸಿಕ್ಕರೆ ಅವನಿಗೆ ಹ್ಯಾಗೆ ಅಪರಿಮಿತ ಆನಂದವಾಗುತ್ತದೋ
ಹಾಗೆ, ಅನೇಕ ವರ್ಷಗಳನ್ನು ದಂಡಿನ ಗದ್ದಲದಲ್ಲಿಯೂ, ಕಾಳಗಗಳ ಗೊಂದಲ
ದಲ್ಲಿಯೂ ಕಳೆದ ನನಗೆ ಈ ನಿವಾತವಾದ ವಿಶ್ರಾಂತಿ ಸ್ಥಳವು ಒಮ್ಮೆಲೆ ಸಿಕ್ಕದ್ದ
ರಿಂದ ನನಗೆ ಪರಮಾನಂದವಾಯಿತು. ಈ ಹೊಸ ನೋಟದಿಂದ ಕೆಲವು ದಿವಸಗಳ
ವರೆಗೆ ಮಾತ್ರ ನನಗೆ ಆನಂದವಾಯಿತು ಆ ಮೇಲೆ ಬೇಸರ ಬರಹತ್ತಿತು. ಅನಂತರ
ನಾನು ಈ ಕೊಳ್ಳದಲ್ಲಿ ಬೆಳೆಯುವ ಗಿಡಗಂಟೆಗಳನ್ನೂ ಬಂಡೆಗಲ್ಲುಗಳೊಳಗಿಂದ
ಸಂಗ್ರಹಿಸಿಟ್ಟ ಖನಿಜ ಪದಾರ್ಥಗಳನ್ನೂ ನೋಡಿ, ಅವುಗಳಲ್ಲಿರುವ ಗುಣದೋಷಾ
ದಿಗಳನ್ನು ಗೊತ್ತುಹಚ್ಚುವದರಲ್ಲಿ ವೇಳೆಯನ್ನು ಕಳೆಯಹತ್ತಿದೆನು. ಕೆಲವು ವರ್ಷ
ಗಳಾದ ಮೇಲೆ ಅದೂ ಬೇಸರಾಯಿತು. ನನಗೆ ಈಗ ಮನೋರಂಜನ ಮಾಡಿಕೊಳ್ಳ
ಲಿಕ್ಕೆ ಮಾರ್ಗವೇ ಇಲ್ಲದಂತಾಗಿದೆ. ಕೆಲವು ದಿವಸಗಳಿಂದ ನನ್ನ ಚಿತ್ತವು ಚಂಚಲ
ವಾಗಿ ಮನಸ್ಸಿಗೆ ಸಮಾಧಾನವೆನಿಸುವದಿಲ್ಲ. ಮಾತಾಡಿ ಹೊತ್ತುಗಳೆಯಬೇಕೆಂದರೆ
ಯಾರೂ ಇಲ್ಲ; ಮತ್ತು ಮನೋರಂಜನೆ ಮಾಡಿಕೊಳ್ಳುವ ಸಾಧನಗಳೂ ಇಲ್ಲ.
ಆದುದರಿಂದ ಒಬ್ಬನೇ ಕೂತೆನೆಂದರೆ ನಾನಾವಿಧದ ಸಂಶಯಗಳು ಬಂದು ನನ್ನ

ಬುದ್ಧಿಗೆ ವ್ಯಾಮೋಹ ಉಂಟಾಗುತ್ತದೆ, ಮತ್ತು ಹಲವು ತರದ ಅಪ್ರಯೋಜಕವಾದ ವಿಚಾರತರಂಗಗಳು ಮನಸ್ಸಿನಲ್ಲಿ ಬಂದು, ಮನಸ್ಸು ತೊಂದರೆಯಲ್ಲಿ ಬೀಳುತ್ತದೆ. ಸತ್ಕೃತ್ಯಗಳನ್ನು ಮಾಡುವ ಪ್ರಸಂಗ ಬಂದಾಗ ಆ ಪ್ರಸಂಗಗಳನ್ನು ವ್ಯರ್ಥ ಹೋಗಗೊಡದ ಹೊರತು ದುಷ್ಕೃತ್ಯಗಳಿಂದ ದೂರ ಇರುವದು ನನ್ನ ಕೈಯಿಂದಾಗಲಿಲ್ಲೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಬಂತೆಂದರೆ ನನಗೆ ನಾಚಿಕೆ ಬರುತ್ತದೆ. (ಅಂದರೆ ಸತ್ಕೃತ್ಯಗಳನ್ನು ಮಾಡುವ ಪ್ರಸಂಗಗಳನ್ನು ವ್ಯರ್ಥ ಹೋಗಗೊಟ್ಟದ್ದರಿಂದಲೇ ದುಷ್ಕೃತ್ಯಗಳು ನನ್ನ ಕೈಯಿಂದಾಗಲಿಲ್ಲೆಂಬ ಭಾವ) ನಾನು ಪಾರಮಾರ್ಥ ಜ್ಞಾನವನ್ನು ಸಂಪಾದಿಸಬೇಕೆಂಬ ಸದಿಚ್ಛೆಯಿಂದ ಈ ಏಕಾಂತವಾಸವನ್ನು ಸ್ವೀಕರಿಸಿಲ್ಲ. ಆದರೆ ನಶ್ವರವಾದ ಜಗತ್ತಿನೊಳಗಿನ ಸಂಸಾರಸಂಬಂಧದ ದ್ವೇಷಬುದ್ಧಿಯಿಂದ ಪ್ರೇರಿತನಾಗಿ ಈ ಏಕಾಂತವಾಸವನ್ನು ಸ್ವೀಕರಿಸಿರುತ್ತೇನೆಂದು ನನಗೆ ಈಗ ಕಂಡುಬರಹತ್ತಿದೆ ನಾನು ಉದ್ಯೋಗಹೀನನಾಗಿರುವದರಿಂದ ಮೂರ್ಖತನದ ಅನೇಕ ವಿಚಾರಗಳ ಗೊಂದಲವು ನನ್ನ ಮನಸಿನಲ್ಲಿ ಯಾವಾಗಲೂ ನಡೆದಿರುತ್ತದೆ. ಆ ವಿಚಾರಗಳ ಕಡೆಗೆ ದುರ್ಲಕ್ಷ ಮಾಡಬೇಕೆಂದರೆ ಆಗುವದಿಲ್ಲ. ಈ ಏಕಾಂತವಾಸವನ್ನು ಸ್ವೀಕರಿಸಿದಂದಿನಿಂದ ನನಗೆ ಲಾಭಕ್ಕಿಂತಲೂ ಹಾನಿಯೇ ಬಹಳ ಆಗಿದೆ ಎಂಬ ವಿಚಾರವು ಮನಸಿನಲ್ಲಿ ಬಂದು ನನಗೆ ವಿಷಾದವಾಗುತ್ತದೆ. ಏಕಾಂತವಾಸದಲ್ಲಿ ಒಬ್ಬನೆ ಇದ್ದ ನನಗೆ ಜಗತ್ತಿನೊಳಗಿನ ದುಷ್ಟ ಜನರ ಸಹವಾಸವು ತಪ್ಪಿ, ದುರ್ಗುಣಗಳು ಸೇರುವ ಅಂಜಿಕೆ ಇರುವದಿಲ್ಲೆಂದು ಕೆಲವರು ಅನ್ನಬಹುದು; ಆದರೆ ಒಂದು ವೇಳೆ ದುರ್ಗುಣಗಳ ಅಂಜಿಕೆ ತಪ್ಪಿದರೂ, ಜಗತ್ತಿನೊಳಗಿನ ಸಜ್ಜನರಾದ ಜ್ಞಾನಿಗಳ ಸಂಭಾಷಣದಿಂದಲೂ, ಅವರ ಉಪದೇಶದಿಂದಲೂ, ಆಗತಕ್ಕ ಲಾಭಗಳು ಏಕಾಂತವಾಸದಲ್ಲಿದ್ದ ನನಗೆ ಆಗುವದಿಲ್ಲ. ಇದೇನು ಕಡಿಮೆತರದ ಹಾನಿಯೆ? ಜನರ ಸಹವಾಸದಲ್ಲಿರುವವನಿಗೆ ಲಾಭ ಹೆಚ್ಚೋ ಹಾನಿ ಹೆಚ್ಚೋ ಎಂಬ ಬಗ್ಗೆ ನಾನು ವಿಚಾರ ಮಾಡಹತ್ತಿ ಬಹಳ ದಿವಸಗಳಾದವು ಕಡೆಗೆ ಜನರಲ್ಲಿರುವವನಿಗೇ ಲಾಭ ಹೆಚ್ಚು ಎಂದು ಈಹೊತ್ತು ನಿರ್ಣಯವಾಗಿದೆ. ಆದದರಿಂದ ನಾನು ನಾಳೆ ಇಲ್ಲಿಂದ ಹೊರಟು ಊರೊಳಗೆ ಹೋಗಬೇಕೆಂದು ಗೊತ್ತುಮಾಡಿದ್ದೇನೆ. "ಸರ್ವಸಂಗಪರಿತ್ಯಾಗಮಾಡಿ ಏಕಾಂತವಾಸವನ್ನು ಸ್ವೀಕರಿಸುವವನಿಗೆ ಪಾರಮಾರ್ಥ ಜ್ಞಾನದ ಕಡೆಗೆ ಲಕ್ಷ ಹತ್ತುವದೋ ಇಲ್ಲೋ ಎಂಬ ಬಗ್ಗೆ ಸಂಶಯವುಂಟು; ಆದರೆ ಜನರೊಳಗಿರುವದರಿಂದ ಉಂಟಾಗುವ ಸುಖಕ್ಕೆ ಮಾತ್ರ ಅವನು ನಿಶ್ಚಯವಾಗಿ ಎರವಾಗುತ್ತಾನೆ."

ಆ ಜೋಗಿಯ ನಿಶ್ಚಯವನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ತರುವಾಯ ಅವರು ಅವನನ್ನು ಕೇರೋ ಪಟ್ಟಣಕ್ಕೆ ಕರೆದ.ಕೊಂಡು ಹೋಗುತ್ತೇವೆಂದು

ಅವನಿಗೆ ಹೇಳಿದರು. ಅನಂತರ ಅವನು ತಾನು ಅಡವಿಯಲ್ಲಿ ಹುಗಿದಿಟ್ಟ ಯಾವತ್ತು ಹಣವನ್ನು ತೆಗೆದುಕೊಂಡು ಅವರ ಕೂಡ ಹೊರಟನು. ಕೇರೋ ಪಟ್ಟಣವು ಸಮೀಪಕ್ಕೆ ಬಂದಬಂದ ಹಾಗೆ ಅವನು ಬಣ್ಣಿಸಲಸದಳವಾದ ಆನಂದದಿಂದ ಆ ಪಟ್ಟಣವನ್ನು ನೋಡಹತ್ತಿದನು.

## ಇಪ್ಪತ್ತೆರಡನೆಯ ಭಾಗವು.

### ಸೃಷ್ಟಿಯ ನಿಯಮದಂತೆ ನಡೆಯುವವನ ಸುಖವು.

ಕೇರೋ ಪಟ್ಟಣದಲ್ಲಿ ಕೆಲವು ವಿದ್ವಾಂಸರು ನಿಯಮಿತ ವೇಳೆಗೆ ಒತ್ತಟ್ಟಿಗೆ ಒಂದು ಸಭೆಯಲ್ಲಿ ಒಟ್ಟುಗೂಡುತ್ತಿದ್ದರು; ಬಹಳ ಹೊತ್ತು ಕೆಲಸ ಮಾಡಿ ದಣಿದಂಥ ಮನಸ್ಸನ್ನು ತುಸು ವಿಶ್ರಾಂತಿಗೊಳಿಸುವದೂ, ಮತ್ತು ತಮ್ಮ ವಿಚಾರಗಳನ್ನು ಎರಡನೆಯವರ ವಿಚಾರಗಳಿಗೆ ಸರಿಹಚ್ಚಿ ನೋಡಿ ಯಾವ ವಿಚಾರಗಳು ಗ್ರಾಹ್ಯವಾದಂಥವು ಯಾವ ವಿಚಾರಗಳು ಅಗ್ರಾಹ್ಯವಾದಂಥವು ಎಂಬುವದನ್ನು ಗೊತ್ತು ಹಚ್ಚುವದೂ ಈ ಸಭೆಯ ಮುಖ್ಯೋದ್ದೇಶವಾಗಿತ್ತು. ಈ ಸಭೆಗೆ ರಾಜಪುತ್ರನು ಮೇಲಿಂದಮೇಲೆ ಹೋಗುತ್ತಿದ್ದನು. ಆ ವಿದ್ವಾಂಸರ ನಡೆನುಡಿಗಳು ತುಸುಹುಂಬತನದವು ಇದ್ದಾಗ್ಯೂ ಅವರ ಸಂಭಾಷಣವು ಕೇಳುವವರ ಜ್ಞಾನವನ್ನು ಹೆಚ್ಚಿಸುವಂಥಾದದ್ದು, ಅವರ ವಾದವಿವಾದಗಳು ಮಾರ್ಮಿಕತನದವೂ ಇರುತ್ತಿದ್ದವು. ಒಮ್ಮೊಮ್ಮೆ ಮಾತ್ರ ಅವರು ವಾದವಿವಾದ ಮಾಡಹತ್ತಿದರೆಂದರೆ, ಮಾತಿನ ಭರದಲ್ಲಿ, ಮೂಲ ವಿಷಯವನ್ನು ಒತ್ತಟ್ಟಿಗೆ ಬಿಟ್ಟು, ಬೇಕಾದ ವಿಷಯದ ಮೇಲೆ ಮಾತಾಡುತ್ತಿದ್ದರು. ಇದೇ ಮೇರೆಗೆ ಇನ್ನೂ ಕೆಲವು ದುರ್ಗುಣಗಳು ಅವರಲ್ಲಿದ್ದವು. ಉದಾಹರಣಾರ್ಥ ಪ್ರತಿಒಬ್ಬ ವಿದ್ವಾಂಸನು ತಾನು ಅಂದದ್ದೇ ಬ್ರಹ್ಮವಾಕ್ಯವೆಂದು ತಿಳಿದು ಯಾವತ್ತು ಜನರೂ ಅದನ್ನು ಮನ್ನಿಸಬೇಕೆಂತಲೂ, ಎರಡನೆಯವರ ಮಾತು ಸುಳ್ಳಾಗಿ ಅವರ ಮಾನಖಂಡನವಾಗಬೇಕೆಂತಲೂ ಬಯಸುತ್ತಿದ್ದನು.

ಈ ಸಭೆಯಲ್ಲಿ ರಾಜಪುತ್ರನು ತಾನು ನೋಡಿದ ಜೋಗಿಯ ವಿಷಯಕ್ಕೆ ಅಲ್ಲಿ ನೆರೆದ ಜನರಿಗೆ ಅಂದನು “ ಪೂರ್ಣ ವಿಚಾರ ಮಾಡಿ, ಏಕಾಂತವಾಸವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿ, ಅದನ್ನು ಅಂಗೀಕರಿಸಿ, ಎಷ್ಟೋ ವರ್ಷಗಳ ವರೆಗೆ ತನ್ನ ನಿಶ್ಚಯದಂತೆ ನಡೆದು, ಜನರಲ್ಲಿ ಕೀರ್ತಿಯನ್ನು ಸಂಪಾದಿಸಿ, ಕಟ್ಟಕಡೆಗೆ ತಾನು ಮೊದಲು ಉತ್ತಮ ಮಾರ್ಗವೆಂದು ಗೊತ್ತು ಮಾಡಿದ ಮಾರ್ಗಕ್ಕೇ ದೂಷಣವಿಟ್ಟು ಆ ಜೋಗಿಯು ಅದನ್ನು ಬಿಟ್ಟು ಬಿಟ್ಟನು ; ಇದನ್ನು ನೋಡಿ ನನಗೆ

ಸರ್ಖೇದಾಶ್ಚರ್ಯವಾಗುತ್ತದೆ." ಈ ವಿಷಯದ ಮೇಲೆ ಆ ಸಭೆಯಲ್ಲಿ ವಾದವಿವಾದ ನಡೆದು ಬೇರೆ ಬೇರೆ ಜನರು ತಮ್ಮ ಅಭಿಪ್ರಾಯವನ್ನು ಬೇರೆಬೇರೆಯಾಗಿ ಹೇಳಿದರು. ಆ ಜೋಗಿಯು ಮೊದಲು ಚನ್ನಾಗಿ ವಿಚಾರ ಮಾಡದೆ ಆ ಮಾರ್ಗವನ್ನು ಸ್ವೀಕರಿಸಿದನಾದದರಿಂದ ತನ್ನ ನಿಶ್ಚಯದಂತೆ ಕಡೆತನಕ ನಡೆಯುವದು ಅವನಿಂದಾಗದೆ ಅವನು ದುಃಖಕ್ಕೊಳಗಾದನು ; ಇದು ಅವನ ಮೂರ್ಖತನಕ್ಕೆ ತಕ್ಕ ಶಾಸನವೇ ಸರಿಯೆಂದು ಕೆಲವರು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಆ ಜೋಗಿಯು ಕೇವಲ ಕಪಟಪಟು ಇರುವನೆಂದು ಆ ವಿದ್ವಾಂಸರಲ್ಲೊಬ್ಬನು ಒಳ್ಳೇ ಆವೇಶದಿಂದ ಒದರಿ ಹೇಳಿದನು. ಜನಸಮಾಜದಲ್ಲಿದ್ದು ಜನರ ಹಿತದ ಕೆಲಸವನ್ನು ಮಾಡುವದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿರುತ್ತದೆ; ಈ ಕರ್ತವ್ಯವನ್ನು ಬಿಟ್ಟು, ಆ ಜೋಗಿಯು ಒಬ್ಬನೇ ಅರಣ್ಯದಲ್ಲಿರಲಿಕ್ಕೆ ಹೋದದ್ದು ಅನ್ಯಾಯವೇ ಎಂದು ಕೆಲವರು ತಮ್ಮ ಅಭಿಪ್ರಾಯವನ್ನಿತ್ತರು. ಜನಸಮಾಜದ ಹಿತದ ಕೆಲಸವನ್ನು ಮಾಡುವದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಿದ್ದಾಗ್ಯೂ ಮನುಷ್ಯನು ಸಾಯುವ ವರೆಗೆ ಅದೇ ಕೆಲಸವನ್ನು ಮಾಡಲಿಕ್ಕೆ ಬೇಕೆಂದೆನ್ನಲಾಗದು; ನಿಯಮಿತ ಕಾಲದ ವರೆಗೆ ಅವನು ಆ ಕೆಲಸವನ್ನು ಮಾಡಿದರೆ ಅವನು ಜನರ ಋಣಮುಕ್ತನಾಗುತ್ತಾನೆ; ಆ ಮೇಲೆ ಏಕಾಂತವಾಸವನ್ನು ಅಂಗೀಕರಿಸಿ, ತನ್ನ ಆಯುಷ್ಯಕ್ರಮದಲ್ಲಿ ತಾನು ಮಾಡಿದ ಯಾವತ್ತು ಕೃತ್ಯಗಳನ್ನು ಮನಸ್ಸಿಗೆ ತಂದು ತನ್ನ ಜನ್ಮ ಸಾರ್ಥಕ್ಯದ ಬಗ್ಗೆ ವಿಚಾರ ಮಾಡುವ ಮನುಷ್ಯನು ಜನರ ಹಿತದ ಕಡೆಗೆ ದುರ್ಲಕ್ಷ ಮಾಡಿದನೆಂದೆನ್ನಲಾಗದೆಂದು ಹಲವರು ತಮ್ಮ ಅಭಿಪ್ರಾಯವನ್ನು ಹೇಳಿದರು.

ರಾಜಪುತ್ರನು ಆ ಜೋಗಿಯ ವೃತ್ತಾಂತವನ್ನು ಹೇಳುವಾಗ ಆ ಸಭೆಯಲ್ಲಿದ್ದ ಒಬ್ಬ ಪಂಡಿತನು ಉಳಿದವರಿಗಿಂತಲೂ ಹೆಚ್ಚು ಆಸ್ಥೆಯಿಂದ ಕೇಳುತ್ತಿದ್ದನು. ಅವನು ಅದನ್ನೆಲ್ಲ ಚನ್ನಾಗಿ ಕೇಳಿದ ತರುವಾಯ ಅವನು ಜನರಿಗೆ ಅಂದನು " ಆ ಜೋಗಿಯು ತುಸು ದಿವಸಗಳಲ್ಲಿಯೇ ಪುನಃ ಏಕಾಂತವನ್ನು ಬಯಸಿ ಅರಣ್ಯಕ್ಕೆ ಹೋಗುವನು; ಮತ್ತೆ ಕೆಲವು ದಿವಸಗಳ ತರುವಾಯ ಏಕಾಂತವಾಸವನ್ನು ಬಿಟ್ಟು ಜನರೊಳಗೆ ಬಂದು ಕೂಡುವನು. ಈ ಪ್ರಕಾರ ಅವನ ಸ್ಥಿತಿಯು ಅಬಾಧಿತವಾಗಿ ನಡೆಯುವದು. ಇನ್ನು ನಡುವೆ ಅವನು ಸತ್ತರೆ ಇಲ್ಲವೆ ನಾಚಿಕೊಂಡರೆ ಆ ಮಾತು ಬೇರೆ. ಮನುಷ್ಯನ ಮನಸ್ಸಿನ ಧರ್ಮವೇ ಹಾಗಿರುತ್ತದೆ. ಆಶಾಪಿಶಾಚವು ಮನುಷ್ಯರ ಅಂತಃಕರಣವನ್ನು ಸಂಪೂರ್ಣವಾಗಿ ಆಕ್ರಮಿಸಿರುತ್ತದೆ. ಇಷ್ಟವಸ್ತುವಿನ ಪ್ರಾಪ್ತಿಗೋಸ್ಕರ ಅನೇಕಾವರ್ತಿ ಮಾಡಿದ ಪ್ರಯತ್ನಗಳೆಲ್ಲ ತೀರ ನಿಷ್ಫಲವಾಗಿ

ಹೋಗಿದ್ದರೂ, ಪುನಃ ಯತ್ನಮಾಡಿ ಅದನ್ನು ದೊರಕಿಸಬೇಕೆಂಬ ಆಶೆಯು ನಷ್ಟವಾಗುವದಿಲ್ಲ. ಮತ್ತೊಂದು ಮಾತೇನಂದರೆ, ವಿದ್ಯಮಾನ ಸ್ಥಿತಿಯಲ್ಲಿ—ಆ ಸ್ಥಿತಿಯು ಒಳ್ಳೆಯದೇ ಇರಲಿ, ಕೆಟ್ಟದೇ ಇರಲಿ—ಪ್ರತಿಯೊಬ್ಬ ಮನುಷ್ಯನಿಗೆ ಒಂದಿಲ್ಲೊಂದು ದುಃಖವು ಇದ್ದಂತೆ ತೋರುತ್ತದೆಂಬ ಸಂಗತಿಯು ಎಲ್ಲರಿಗೂ ಸಮ್ಮತವಾದದ್ದೇ ಸರಿ. ಆದರೆ ಆ ಸ್ಥಿತಿಯು ದುಃಖದಾಯಕವಿರುತ್ತದೆಂದು ಅದನ್ನು ಬಿಟ್ಟು ಬೇರೊಂದು ಸ್ಥಿತಿಯನ್ನು ಒಬ್ಬ ಮನುಷ್ಯನು ಸ್ವೀಕರಿಸಿದನೆಂದು ನಾವು ಕುಸು ಹೊತ್ತು ತಿಳುಕೊಳ್ಳೋಣ. ಆ ಮನುಷ್ಯನಿಗೆ ಎರಡನೇ ಸ್ಥಿತಿಯಾದರೂ ಸುಖದಾಯಕವಾಗುತ್ತದೇನು? ಇಲ್ಲ. ಆ ಸ್ಥಿತಿಯಲ್ಲಿಯೂ ಅವನಿಗೆ ದುಃಖವು ತೋರಬರುತ್ತದೆ. ಮೊದಲನೇ ಸ್ಥಿತಿಯೇ ಎರಡನೇದಕ್ಕಿಂತ ಉತ್ತಮವಾದದ್ದೆಂದು ಅವನಿಗೆ ಕಂಡುಬಂದು, ಮತ್ತೆ ಮುಂಚಿನ ಸ್ಥಿತಿಯನ್ನೇ ಬಯಸುತ್ತಾನೆ. ಸಾರಾಂಶ—ಮುಂಚಿನ ಸ್ಥಿತಿ ಇರುವ ವರೆಗೆ ಅದು ದುಃಖದಾಯಕವಿರುತ್ತದೆಂದು ಮನಸ್ಸಿನ ಗ್ರಹಿಕೆಯಾಗುತ್ತದೆ. ದುಃಖದಾಯಕವದೆ ಎಂದು ಅದನ್ನು ಬಿಟ್ಟುಬಿಟ್ಟರೆ ಕೆಲವು ದಿವಸಗಳ ತರುವಾಯ ಅದೇ ಸುಖದಾಯಕವಾಗಿ ತೋರುತ್ತದೆ. ಮನುಷ್ಯನ ಮನೋಧರ್ಮವೇ ಹಾಗಿರುತ್ತದೆ. ಆಶೆಯು ಎಂದೂ ತಪ್ಪುವದಿಲ್ಲ. ಆದರೆ ಈಗೀಗ ಮನುಷ್ಯನ ಸ್ಥಿತಿಯು ಸುಧಾರಿಸುತ್ತ ನಡೆದದೆ. ಕೆಲವು ವರ್ಷಗಳ ನಂತರ ಮನುಷ್ಯನ ಅತಿತೃಷೆಯು ಕಡಿಮೆಯಾಗುವ ವೇಳೆ ಬರುವದು. ಅಂದರೆ ಎಲ್ಲರೂ ಇದ್ದ ಸುಖದಲ್ಲಿಯೇ ತೃಪ್ತಿಹೊಂದುವರು. ಇನ್ನು ಒಬ್ಬನು ತನ್ನ ಮೂರ್ಖತನದಿಂದ ದುಃಖಕ್ಕೆ ಒಳಗಾದರೆ ಆ ಮಾತು ಬೇರೆ.

ಈ ಮೇರೆಗೆ ಮಾತಾಡುವದನ್ನು ಒಳ್ಳೇ ಆತುರದಿಂದ ಕೇಳುತ್ತಿರುವ ಮತ್ತೊಬ್ಬ ಪಂಡಿತನು ಅಂದನು “ ನೀವು ಮನುಷ್ಯನ ಆಶೆಯು ಕಡಿಮೆಯಾಗುವ ವೇಳೆಯು ಕೆಲವು ದಿವಸಗಳ ನಂತರ ಬಂದೀತೆಂದು ಹೇಳಿದಿರಿ. ಆದರೆ ಅದ್ಯಾಕೆ? ಜ್ಞಾನವುಳ್ಳ ಜನರಿಗೆ ಆ ವೇಳೆಯು ಬಂದು ಈಗ ಎಷ್ಟೋ ದಿವಸಗಳಾದವು. ಈಗ ಜಗತ್ತಿನೊಳಗಿನ ಜನರು ದುಃಖಬಡುವ ಕಾರಣವಿಲ್ಲ. ಈಗ ದುಃಖಬಡುವ ಜನರಿದ್ದರೆ ಅವರು ಕೇವಲ ತಮ್ಮ ಮೂಢತನದಿಂದಲೇ ದುಃಖಬಡುತ್ತಾರೆಂದೆನ್ನಬಹುದು. ಬೇರೆ ಏನೂ ಕಾರಣವಿಲ್ಲ. ದಯೆಯುಳ್ಳ ಪರಮೇಶ್ವರನು ಸುಖವೆಂಬ ಪದಾರ್ಥವು ಎಲ್ಲರಿಗೂ ಪ್ರಾಪ್ತವಾಗುವ ಹಾಗೆ ಮಾಡಿಟ್ಟಿದ್ದಾನೆ; ಆ ಸುಖವನ್ನು ಯಾವ ಮಾರ್ಗದಿಂದ ಸಂಪಾದಿಸಬೇಕೆಂದು ಚಿಂತೆಮಾಡುತ್ತ ಕುಳಿತುಕೊಳ್ಳುವದು ದಡ್ಡತನವೇ ಸರಿ. ಸೃಷ್ಟಿಕರ್ತನು ಹಾಕಿಕೊಟ್ಟ ನಿಯಮಗಳಂತೆ ನಡೆಯುವದೇ ಸುಖಸಾಧನದ ರಾಜಮಾರ್ಗವು. ಆ ನಿಯಮಗಳನ್ನು

ನುಸರಿಸಿ ನಡೆದರೆ ಸುಖವು ನಿಸ್ಸಂದೇಹವಾಗಿ ಸಿಕ್ಕುವದು. ಈ ನಿಯಮಗಳು ಎಲ್ಲ ಕಡೆಯಲ್ಲಿಯೂ ಯಾವಾಗಲೂ ಒಂದೇಸಮನೆ ಇರುತ್ತವೆ. ಇವುಗಳಲ್ಲಿ ದೇಶಕಾಲ ವರ್ತಮಾನದಿಂದ ಏನೂ ಹೆಚ್ಚುಕಡಿಮೆಯಾಗುವದಿಲ್ಲ. ಈ ನಿಯಮಗಳನ್ನು ಯಾರೂ ಅಭ್ಯಾಸಮಾಡಿ ಪಾಠಮಾಡುವ ಅವಶ್ಯವಿಲ್ಲ. ಹುಟ್ಟಿದ ಕೂಡಲೆ ಪ್ರತಿಯೊಬ್ಬನ ಹೃತ್ಪಟಲದ ಮೇಲೆ ಅವುಗಳು ದೇವರಿಂದಲೇ ಬರೆಯಲ್ಪಟ್ಟಿರುತ್ತವೆ. ಅವುಗಳನ್ನು ಕಲಿಯುವ ಬಗ್ಗೆ ಗುರುಮಂತ್ರದ ಅಗತ್ಯವಿಲ್ಲ. ಈ ನಿಯಮಗಳಂತೆ ತಪ್ಪದೆ ನಡೆಯುವವನಿಗೆ ಆಶಾಭಂಗದಿಂದ ಇಲ್ಲವೆ, ಇಚ್ಛೆಗಳು ಪೂರ್ಣವಾಗದೆ ಇರುವದರಿಂದುಂಟಾಗುವ ತೊಂದರೆಗಳಿಂದ ದುಃಖವು ಎಂದೂ ಆಗಲಾರದು. ಅವನ ಹತ್ತರಿದ್ದ ವಸ್ತುಗಳು ಹೋದರೆ ಅವನಿಗೆ ಸುಖವಾಗುವದಿಲ್ಲ. (ಅಂದರೆ ವಸ್ತುಗಳು ಹೋದರೆ ಇಲ್ಲವೆ ಬಂದರೆ ಅವನ ಸಮಾಧಾನವೃತ್ತಿಯಲ್ಲಿ ಏನೂ ಹೆಚ್ಚುಕಡಿಮೆಯಾಗುವದಿಲ್ಲ.) ವಸ್ತುಸ್ಥಿತಿಯು ಬದಲಾದಂತೆ ವಸ್ತುಸ್ಥಿತಿಯ ಅನುರೋಧದಿಂದ ಅವನು ಪ್ರಯತ್ನಮಾಡುತ್ತಾನೆ. ಇಲ್ಲವೆ ಸುಮ್ಮನೆ ಕೂಡ್ರುತ್ತಾನೆ. ಉಳಿದ ಜನರು ಭ್ರಾಮಕವಾದ ಲಕ್ಷಣಗಳಿಂದಾಗಲಿ, ತಿಳಿಯಲಸಾಧ್ಯವಾದ ತರ್ಕಶಾಸ್ತ್ರಜ್ಞಾನದಿಂದಾಗಲಿ, ತಮ್ಮ ಶ್ರೇಷ್ಠತ್ವವನ್ನು ಮೆರಸಿದರೆ ಮೆರಸಲಿ ಕಿಲ್ಲರೇಕೆ. ಜ್ಞಾನಿಯು ಅದನ್ನು ಲೆಕ್ಕಿಸುವದಿಲ್ಲ. ಸುಲಭವಾದ ಸಾಧನಗಳಿಂದ ಅವರು ಜೀವಿಸಲಿಕ್ಕೆ ಕಲಿಯಬೇಕು. ವನದೊಳಗಿನ ಚಿಗರಿ ಮುಂತಾದ ಪ್ರಾಣಿಗಳನ್ನು, ಗಿಡಗಳ ಮೇಲಿನ ಪಕ್ಷಿಗಳನ್ನು ನೋಡಿರಿ. ಈ ಪಶುಪಕ್ಷಿಗಳು ಸ್ವಾಭಾವಿಕವಾಗಿ ತಮಗೆ ಆದ ಪ್ರೇರಣೆಗಳಂತೆ ವರ್ತಿಸುತ್ತವೆ. ಅವು ತಮ್ಮತಮ್ಮ ಮಾರ್ಗದರ್ಶಕ ಆಜ್ಞೆಯ ಮೇರೆಗೆ ನಡೆಯುತ್ತವೆ. ಅದರಿಂದ ಅವು ಯಾವಾಗಲೂ ಸೌಖ್ಯದಿಂದಿರುತ್ತವೆ. ಅವುಗಳನ್ನು ನೋಡಿ ನಾವು ಶುಷ್ಕ ವಾದವಿವಾದ ಮಾಡುವದನ್ನು ಬಿಟ್ಟು, ಸೃಷ್ಟಿನಿಯಮಗಳ ಸ್ವಾಭಾವಿಕವಾದ ಪ್ರೇರಣೆಗಳಿಗನುಸರಿಸಿ ನಡೆಯಲಿಕ್ಕೆ ಕಲಿಯಬೇಕು. ಎದೇ ಸೀಳಿದರೆ ಮೂರು ಅಕ್ಷರ ಸಹ ಇಲ್ಲದವರು ಒಳ್ಳೇ ಹೆಮ್ಮೆಯಿಂದಲೂ, ಡೌಲಿನಿಂದಲೂ ಜಗತ್ತಿನಲ್ಲಿ ಸುಖವಾಗಬೇಕಾದರೆ ಮನುಷ್ಯನು ಹಾಗೆ ನಡೆಯಬೇಕು, ಹೀಗೆ ನಡೆಯಬೇಕೆಂದು ಅಸಂಖ್ಯ ವ್ಯರ್ಥವಾದ ಮತ್ತು ಕಾಲ್ಪನಿಕ ಉಪದೇಶಗಳನ್ನು ಹೇಳುವರು. ಆದರೆ ಸೋಜಿಗದ ಮಾತೇನಂದರೆ, ಆ ಉಪದೇಶಕರಿಗೆ ತಾವು ಮಂದಿಗೆ ಹೇಳುವ ಉಪದೇಶದ ಮರ್ಮವೇ ತಿಳಿದಿರುವದಿಲ್ಲ. ಮತ್ತು ತಮ್ಮ ಉಪದೇಶದಂತೆ ಅವರ ಆಚರಣೆ ಇರುವದಿಲ್ಲ. ಇಂಥ ಉಪದೇಶಗಳನ್ನೆಲ್ಲ ಒತ್ತಟ್ಟಿಗಿಟ್ಟು, ಸೃಷ್ಟಿಯ ನಿಯಮಗಳಿಗನುಸರಿಸಿ ನಡೆದರೆ ಮನುಷ್ಯನಿಗೆ ಸುಖವಾಗುವದು;

ಇಲ್ಲದಿದ್ದರೆ ಸುಖವಾಗಲಾರದು. ಸಾರಾಂಶ, ಸೃಷ್ಟಿಯ ಸಂಕೇತಗಳನ್ನು ಉಲ್ಲಂಘಿಸೋಣವೆಂದರೆ ಸುಖಕ್ಕೆ ಎರವಾಗೋಣವೆಂದು ತಿಳಿಯತಕ್ಕದ್ದು."

ಈ ಮೇರೆಗೆ ಮಾತಾಡಿ, ಆ ಪಂಡಿತನು ಒಳ್ಳೇ ಶಾಂತಮುದ್ರೆಯನ್ನು ತಾಳಿ ತನ್ನ ಸುತ್ತಲೂ ನೋಡಹತ್ತಿದನು; ಮತ್ತು ಬೋಧಕಾರನೆಂಬ ಸದ್ಗುಣವು ತನ್ನಲ್ಲಿ ಉಂಟೆಂಬ ಮನವರಿಕೆಯಿಂದ ಅವನಿಗೆ ಅತ್ಯಾನಂದವಾದಂತೆ ಅವನ ಮುಖ ಲಕ್ಷಣದಿಂದ ತೋರಿಬಂತು.

ರಾಜಪುತ್ರನು ಒಳ್ಳೆ ವಿನಯದಿಂದ ಆ ಪಂಡಿತನಿಗೆ ಅಂದನು "ಮಹಾರಾಯರೇ, ಉಳಿದ ಜನರಂತೆ ನೀ ನನಗಾದರೂ ಸುಖವಾಗಬೇಕೆಂದು ನನ್ನ ಅಪೇಕ್ಷೆಯುಂಟು. ಆದದರಿಂದ ತಾವು ಇಷ್ಟರವರೆಗೆ ಮಾತಾಡಿದ್ದನ್ನೆಲ್ಲ ಏಕಾಗ್ರ ಚಿತ್ತದಿಂದ ಕೇಳಿದ್ದೇನೆ. ತಮ್ಮಂಥ ಶ್ರೇಷ್ಠ ಪಂಡಿತರು ಇಷ್ಟು ಆಗ್ರಹಪೂರ್ವಕವಾಗಿ ಹೇಳುವಂಥ ಸಿದ್ಧಾಂತವು ನಿಃಸಂಶಯವಾಗಿ ನಿಜವಾದದ್ದಾಗಿರಲಿಕ್ಕೆ ಬೇಕು. ಆದರೆ ಸೃಷ್ಟಿಯ ನಿಯಮಕ್ಕನುಸರಿಸಿ ನಡೆಯುವದೆಂದರೇನೆಂಬದನ್ನು ದಯಮಾಡಿ ನನಗೆ ಹೇಳಬೇಕು."

ಆ ಪಂಡಿತನು "ನಿಮ್ಮಂಥ ನಮ್ರ ಮತ್ತು ಶಾಂತಸ್ವಭಾವದ ತರುಣಜನರ ಪ್ರಶ್ನೆಗಳಿಗೆ, ನನಗೆ ಗೊತ್ತಿದ್ದ ಮಟ್ಟಿಗೆ ಉತ್ತರಗಳನ್ನು ಕೊಡಲಿಕ್ಕೆ ನಾನು ಸದಾ ಸಿದ್ಧನಿದ್ದೇನೆ. ಸೃಷ್ಟಿಯ ನಿಯಮಗಳಿಗೆ ಅನುಸರಿಸಿ ಇಲ್ಲವೆ ಸ್ವಾಭಾವಿಕವಾದ ಪ್ರೇರಣೆಗಳಂತೆ ನಡೆಯೋಣವೆಂದರೆ, ಕಾರ್ಯಕಾರಣಭಾವಗಳ ಗುಣ ಮತ್ತು ಅವುಗಳ ಪರಸ್ಪರ ಸಂಬಂಧ ಇವುಗಳ ವಿಚಾರಮಾಡಿ ಅವುಗಳ ಅನುರೋಧದಂತೆ ನಡೆಯಬೇಕು. ಯಾವತ್ತು ಪ್ರಾಣಿಗಳಿಗೆ ಸುಖವಾಗಬೇಕೆಂದು ಪರಾತ್ಪರನಾದ ಪರಮೇಶ್ವರನು ಯೋಜಿಸಿಟ್ಟ ಯುಕ್ತಿಗಳಿಗನುಸರಿಸಿ, ನಮ್ಮ ಕೃತ್ಯಗಳಿರಬೇಕು; ಮತ್ತು ವಿದ್ಯಮಾನ ವಸ್ತುಸ್ಥಿತಿಗೆ ಅನುಸರಿಸಿ ನಮ್ಮ ವರ್ತನವಿರಬೇಕು."

ಈ ಉತ್ತರದ ಅರ್ಥವು ರಾಜಪುತ್ರನಿಗೆ ಏನೂ ತಿಳಿಯಲಿಲ್ಲ. ಆ ಪಂಡಿತನ ಪ್ರತಿಪಾದನವನ್ನು ಹೆಚ್ಚೆಚ್ಚು ಕೇಳಿದ ಹಾಗೆ ರಾಜಪುತ್ರನ ಮನಸ್ಸು ಹೆಚ್ಚೆಚ್ಚು ಗೊಂದಲದಲ್ಲಿ ಬೀಳಹತ್ತಿತು. ಆದದರಿಂದ ಆ ಪಂಡಿತನಿಗೆ ಹೆಚ್ಚಿನ ಪ್ರಶ್ನೆಗಳನ್ನು ಕೇಳದೆ, ಆತನು ಹೇಳಿದ್ದೆಲ್ಲ ತಿಳಿಯಿತೆಂಬುವವನ ಹಾಗೆ ಗೋಣುಹಾಕಿ ಸುಮ್ಮನಿದ್ದನು. ಆ ಪಂಡಿತನು ಮಾತ್ರ ರಾಜಪುತ್ರನಿಗೆ ತನ್ನ ಮಾತು ತಿಳಿಯಿತೆಂತಲೂ ಉಳಿದ ಸಭಾಸದರನ್ನು ತಾನು ಮಾತಿನಲ್ಲಿ ಸೋಲಿಸಿದೆನೆಂಬಲೂ ತಿಳಿದುಕೊಂಡು

ಅಲ್ಲಿಂದ ಹೊರಟುಹೋದನು. ವಿದ್ಯಮಾನ ಸ್ಥಿತಿಗೆ ಅನುಸರಿಸಿ ತಾನು ನಡೆದೆನೆಂಬ ಸಂತೋಷದ ಚಿಹ್ನಗಳು ಆತನ ಮುಖಕಮಲದಲ್ಲಿ ಕಂಗೊಳಿಸುತ್ತಿದ್ದವೆಂದು ನೋಡುವವರಿಗೆ ಅವನ ಮೋರೆಯು ಮೇಲಿಂದ ಕಂಡುಬರುವಂತೆ ಇತ್ತು.

## ಇಪ್ಪತ್ತಮೂರನೆಯ ಭಾಗವು.

### ಲೋಕಸ್ಥಿತಿಯ ಪರೀಕ್ಷಣ ಮಾಡುವ ಕೆಲಸವನ್ನು ರಾಜಪುತ್ರನೂ, ರಾಜಕನ್ನಿಕೆಯೂ ತಮ್ಮತಮ್ಮೊಳಗೆ ಹಂಚಿಕೊಂಡದ್ದು.

ರಾಜಪುತ್ರನು ಬಹಳ ಚಿಂತಾಗ್ರಸ್ತನಾಗಿ ಮರಳಿ ಮನೆಗೆ ಬಂದನು. ಇನ್ನು ಮುಂದೆ ಏನು ಮಾಡಬೇಕೆಂಬುದು ಅವನಿಗೆ ತಿಳಿಯಲೊಲ್ಲದು. ಆತನು ಇಷ್ಟು ದಿವಸಗಳ ವರೆಗೆ ಮಾಡಿದ ಶೋಧದಿಂದ, "ಜ್ಞಾನಿಗಳಿಗೂ ಸುಖಪ್ರಾಪ್ತಿಯ ಮಾರ್ಗವು ಗೊತ್ತಾಗಿಲ್ಲ, ಅಜ್ಞಾನಿಗಳಿಗೂ ಆ ಮಾತು ಗೊತ್ತಾಗಿಲ್ಲ" ಎಂಬ ಸಂಗತಿಯು ಮಾತ್ರ ತಿಳಿಯಿತಲ್ಲದೆ ಹೆಚ್ಚಿನದೇನೂ ಅವನಿಗೆ ಲಾಭವಾಗಲಿಲ್ಲ. ಆದರೂ ಆತನು ಇನ್ನೂ ಚಿಕ್ಕವನಿದ್ದದರಿಂದ ಅವನು ಪೂರ್ಣ ನಿರಾಶೆಯುಳ್ಳವನಾಗಲಿಲ್ಲ. ಆತನು ತನ್ನೊಳಗೆ ಅಂದದ್ದು "ಏನೂ ಚಿಂತೆ ಇಲ್ಲ; ಇನ್ನೂ ಬೇಕಾದಷ್ಟು ಕಾಲವದೆ; ಈಗಲೇ ಸುಖಪ್ರಾಪ್ತಿಯಾಗುವದಿಲ್ಲೆಂದು ತಿಳಿದು ನಿರಾಶೆಹೊಂದುವ ಕಾರಣವಿಲ್ಲ; ಇನ್ನೂ ಶೋಧಮಾಡೋಣ; ಅನುಭವ ತೆಗೆದುಕೊಳ್ಳೋಣ; ಅಂದರೆ ಸುಖಪ್ರಾಪ್ತಿಯ ಮಾರ್ಗವು ಒಂದಿಲ್ಲೊಂದು ಕಡೆಯಲ್ಲಿ ನಿಶ್ಚಯವಾಗಿ ದೊರೆಯುವದು." ಆತನು ಈ ಮೇರೆಗೆ ವಿಚಾರಮಾಡಿ ತನ್ನ ಆಲೋಚನೆಗಳನ್ನೂ, ತನಗೆ ಬಂದ ಸಂಶಯುಗಳನ್ನೂ, ಇಮ್ಲಾಕನಿಗೆ ತಿಳಿಸಿದನು. ಆದರೆ ಇಮ್ಲಾಕನು ರಾಜಪುತ್ರನ ಸಂಶಯುಗಳ ನಿವಾರಣ ಮಾಡುವದರ ಬದಲಾಗಿ ಹೆಚ್ಚಿನ ಸಂಶಯುಗಳನ್ನು ತೆಗೆದನು. ಇದು ರಾಜಪುತ್ರನ ಮನಸ್ಸಿಗೆ ಒರಲಿಲ್ಲ. ತನ್ನ ಸಂಶಯುಗಳ ನಿವಾರಣಮಾಡುವವರು ಸಿಗದ್ದರಿಂದ ಅವನಿಗೆ ಬಹಳ ಅಸಮಾಧಾನವಾಯಿತು. ಆದದರಿಂದ ಅಂದಿನಾರಭ್ಯ ಆತನು ತನ್ನ ತಂಗಿಯ ಬಳಿಗೆ ಬಂದು ತನ್ನ ಸಂಶಯುಗಳನ್ನು ಆಕೆಗೆ ತಿಳಿಸಿ, ಮನಸು ಬಿಚ್ಚಿ ಆಕೆಯ ಕೂಡ ಮಾತಾಡಹತ್ತಿದನು. ಸುಖಪ್ರಾಪ್ತಿಯ ಇಚ್ಛೆಯು ಆಕೆಗೂ ಇವನಂತೆಯೇ ಪ್ರಬಲವಾಗಿತ್ತು. ಆದದರಿಂದ ಆಕೆಯು ರಾಜಪುತ್ರನು ಇದುವರೆಗೆ ಸುಖಪ್ರಾಪ್ತಿಗೋಸ್ಕರ ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾಗಿ ಹೋಗಿದ್ದರೂ, ಮುಂದೆ ಎಂದಾದರೂ ಆ ಪ್ರಯತ್ನಗಳಿಗೆ ಯಶಬಂದು ಸುಖವು ನಿಶ್ಚಯವಾಗಿ ದೊರಕುವದು; ನಿರಾಶೆಯುಳ್ಳವನಾಗಬೇಡೆಂದು ಅವನಿಗೆ ಧೈರ್ಯಕೊಡುತ್ತಿದ್ದಳು.

ಆಕೆಯು ಅವನಿಗೆ ಅಂದಳು "ಅಣ್ಣಾ, ನಮಗೆ ಸಂಸಾರದ ಅನುಭವವು ಇನ್ನೂ ಏನೂ ಬಂದಿಲ್ಲ. ಸಂಸಾರದಲ್ಲಿ ನಮ್ಮ ಗಣನೆಯು ದೊಡ್ಡವರಲ್ಲಿಯೂ ಇಲ್ಲ, ಸಣ್ಣವರಲ್ಲಿಯೂ ಇಲ್ಲ. ನಮ್ಮ ದೇಶದಲ್ಲಿ ನಾವು ಅರಸುಮನೆತನದವರಿದ್ದಾಗ್ಯೂ ನಿಜವಾದ ಅರಸುತನದ ಅಧಿಕಾರವು ನಮಗೇನೂ ಇದ್ದಿಲ್ಲ. ಈ ದೇಶದಲ್ಲಿ ಬಂದಂದಿನಿಂದ ಇಲ್ಲಿಯ ಜನರ ನಡೆನುಡಿಗಳನ್ನು ನಾವು ಹೊರಗಿನಿಂದ ನೋಡಿದ್ದರೂ, ಅವರು ತಮ್ಮ ತಮ್ಮ ಮನೆಗಳಲ್ಲಿ ಯಾವ ಪ್ರಕಾರ ನಡೆಯುತ್ತಾರೆಂಬುವದು ನಮಗೆ ಗೊತ್ತಿಲ್ಲ. ಈ ಸಂಗತಿಯಲ್ಲಿ ಇವಪ್ಲಿಕನು ನಮಗೆ ಅನುಕೂಲನಾಗಿಲ್ಲ. ಸಂಸಾರದಲ್ಲಿ ಸುಖವಿಲ್ಲೆಂದು ಅವನು ಒಮ್ಮೆ ನಮಗೆ ಹೇಳಿದ್ದಾನೆ. ಇನ್ನು ನಾವು ಚನ್ನಾಗಿ ಶೋಧ ಮಾಡಿದರೆ, ಎಲ್ಲಿಯಾದರೂ ಸುಖವಿದ್ದದ್ದು ನಮಗೆ ತೋರಿ ಬಂದರೆ ತಾನು ಹೇಳಿದ ಮಾತು ಸುಳ್ಳಾಗುತ್ತದೆಂದು ಅವನು ನಮಗೆ; ಈ ದೇಶದ ಜನರ ವರ್ತನಗಳನ್ನು ತಿಳಿಯಕೊಳ್ಳಲಿಕ್ಕೆ ನೆರವಾಗಲೊಲ್ಲನೆಂದು ನನಗೆ ತೋರುತ್ತದೆ. ಆದದರಿಂದ ಈ ಕೆಲಸವನ್ನು ನಾವು ನಮ್ಮೊಳಗೆ ಹಂಚಿಕೊಳ್ಳೋಣ. ಶ್ರೀಮಂತರೂ, ಅಧಿಕಾರಿಗಳೂ ಆದ ದೊಡ್ಡದೊಡ್ಡ ಜನರು ದರ್ಬಾರಿನಲ್ಲಿ ಹ್ಯಾಗೆ ನಡೆಯುತ್ತಾರೆ? ಅವರಿಗೆ ಯಾವ ತರದ ಸುಖಗಳಾಗುತ್ತವೆಂಬದರ ಶೋಧವನ್ನು ನೀನು ಕೈಕೊಳ್ಳು; ಮತ್ತು ಮಧ್ಯಮ ಸ್ಥಿತಿಯ ಜನರು ತಮ್ಮ ಕುಟುಂಬದಲ್ಲಿ ಹ್ಯಾಗೆ ವರ್ತಿಸುತ್ತಾರೆ? ಅವರಿಗೆ ಯಾವತರದ ಸೌಖ್ಯಗಳಾಗುತ್ತವೆಂಬದರ ಶೋಧವನ್ನು ನಾನು ಕೈಕೊಳ್ಳುತ್ತೇನೆ. ಐಶ್ವರ್ಯವಂತರಿಗೆ ತಮ್ಮ ಐಶ್ವರ್ಯದ ಬಲದಿಂದಲೂ, ಅಧಿಕಾರಿಗಳಿಗೆ ತಮ್ಮ ಅಧಿಕಾರದ ಯೋಗದಿಂದಲೂ ಅನೇಕ ಜನರ ಕಲ್ಯಾಣ ಮಾಡುವ ಸಾಮರ್ಥ್ಯವು ಇರುತ್ತದೆ; ಆದದರಿಂದ ನಿಜವಾದ ಸುಖವು ಅವರಿಗೆ ಆಗುತ್ತಿರಬಹುದು; ಇಲ್ಲವೆ ಅಗಣಿತ ಸಂಪತ್ತು ಇಲ್ಲದ್ದರಿಂದ ಮಹಾ ಕಾರ್ಯಗಳನ್ನು ಮಾಡಬೇಕೆಂಬ ಮಹತ್ವಾಕಾಂಕ್ಷೆಯು ಯಾರ ಮನಸ್ಸಿನಲ್ಲಿ ವಾಸಿಸುವದಿಲ್ಲವೋ, ಉಂಡುಡುವದಕ್ಕೆ ಸಾಕಷ್ಟು ಇದ್ದದರಿಂದ ಸಂಸಾರ ಸಂಬಂಧವ ಸಂಕಟಗಳೂ, ದಾರಿದ್ರ್ಯದಿಂದುಂಟಾಗುವ ದುಃಖವೂ. ಯಾರ ಕನಸುಮನಸ್ಸಿನಲ್ಲಿ ಸಹ ಬರುವದಿಲ್ಲವೋ ಅಂಥ ಮಧ್ಯಮ ಸ್ಥಿತಿಯ ಜನರಲ್ಲಿ ನಿಜವಾದ ಸುಖವಿರಬಹುದು, ಆದದರಿಂದ ಅದನ್ನು ನಾವು ಪ್ರತ್ಯಕ್ಷ ಅನುಭವದಿಂದ ಪರೀಕ್ಷಿಸಿ ನೋಡೋಣ."

# ಇಪ್ಪತ್ತನಾಲ್ಕನೆಯ ಭಾಗವು.

## ರಾಜಪುತ್ರನು ದೊಡ್ಡ ಸ್ಥಿತಿವಂತರಿಗಾಗುವ ಸುಖಗಳ ಪರೀಕ್ಷೆ ಮಾಡಿದ್ದು.

ರಾಜಪುತ್ರನಿಗೆ ತನ್ನ ತಂಗಿಯ ಹಂಚಿಕೆಯನ್ನು ಕೇಳಿ ಬಹಳ ಆನಂದವಾಯಿತು. ಅವನು ಆಕೆಯನ್ನು ಇದರ ಬಗ್ಗೆ ಒಳಿತಾಗಿ ಹೊಗಳಿದನು. ಮರುದಿನ ಉತ್ತಮವಾದ ಉಡಿಗೆಗಳನ್ನು ತೊಟ್ಟುಕೊಂಡು, ಅನೇಕ ಸೇವಕರೊಂದಿಗೆ ಅಲ್ಲಿದ್ದ ತುರ್ಕ ದೇಶದ ಬಾದಶಹನ ಮುಖ್ಯ ಸುಭೇದಾರನ ಭೆಟ್ಟಿಯ ಸಲುವಾಗಿ ಅವನ ದರ್ಬಾರಿಗೆ ಹೋದನು. ರಾಜಪುತ್ರನ ಐಶ್ವರ್ಯವನ್ನೂ, ಆತನ ವೈಭವವನ್ನೂ, ನೋಡಿ ಆ ದರ್ಬಾರಿನ ಜನರು ಅವನಿಗೆ ಬಹುಮಾನಮಾಡಿದರು. ಅವನಾರೋ ಒಬ್ಬ ರಾಜಪುತ್ರನಿದ್ದು ಪರದೇಶಗಳನ್ನೂ, ಅಲ್ಲಿಯ ಜನರನ್ನೂ ನೋಡಿ ಅವರ ಸ್ನೇಹಸಂಪಾದಿಸಬೇಕೆಂತಲೂ, ಮುಖ್ಯ ಸುಭೇದಾರನ ಕೂಡ ಸಂಭಾಷಣ ಮಾಡಬೇಕೆಂತಲೂ, ಇಲ್ಲಿಗೆ ಬಂದಿರುವನೆಂದು ಅವರು ತಿಳಿದುಕೊಂಡರು.

ಯಾವನಿಗೆ ಎಲ್ಲ ಜನರು ಒಳ್ಳೇ ಮಾನಕೊಡುತ್ತಾರೋ, ಯಾವನ ಬಾಯಿಯಿಂದ ಹೊರಟ ಪ್ರತಿಯೊಂದು ಮಾತನ್ನು ಎಲ್ಲ ಜನರು ಶಿರಸಾವಂದ್ಯವಾಗಿ ಮಾಡಿಕೊಂಡು ನಡೆಯುತ್ತಾರೋ, ಯಾವನ ಅಪ್ಪಣೆಯನ್ನು ಇಡೀ ಪ್ರಾಂತದವರು ಕೇಳುತ್ತಾರೋ, ಅಂಥ ಮನುಷ್ಯನಿಗೆ ನಿಜವಾದ ಸುಖಪ್ರಾಪ್ತಿಯಾಗಿರಲಿಕ್ಕೆ ಬೇಕೆಂದು ಮೊದಲು ರಾಜಪುತ್ರನು ನಂಬಿದನು. ಅವನು ತನ್ನೊಳಗೆ ಅಂದುಕೊಂಡದ್ದೇನಂದರೆ—"ಚಾತುರ್ಯದಿಂದಲೂ, ಜಾಣತನದಿಂದಲೂ, ರಾಜ್ಯದ ವ್ಯವಸ್ಥೆಯನ್ನು ಕಾಯ್ದಿಟ್ಟು, ಸಾವಿರಾರು ಜನರ ಕಲ್ಯಾಣಮಾಡುವದರಿಂದ ಮನುಷ್ಯನಿಗೆ ಆಗುವಷ್ಟು ಆನಂದವು ಮತ್ತಾವದರಿಂದಲೂ ಆಗುವದಿಲ್ಲ. ಈ ತರದ ಆನಂದವಾಗಬೇಕಾದರೆ ಎಲ್ಲ ಜನರ ಮೇಲೆ ತನ್ನ ಅಧಿಕಾರವು ನಡೆಯುತ್ತಿರಲಿಕ್ಕೆಬೇಕು. ಆದರೆ ಈ ತರದ ಅಧಿಕಾರವು ಪ್ರತಿಯೊಂದು ರಾಷ್ಟ್ರದೊಳಗೆ ಒಬ್ಬನಿಗೆ ಮಾತ್ರ ಇರುತ್ತದೆ; ಬಹಳ ಜನರಿಗೆ ಇರುವ ಸಂಭವವು ಕಡಿಮೆ, ಇಲ್ಲಿಂದರೂ ಚಿಂತೆ ಇಲ್ಲ. ಇದರ ಮೇಲಿಂದ ಸ್ಪಷ್ಟವಾಗಿ ಕಂಡುಬರುವದೇನಂದರೆ, ಸಾರ್ವಭೌಮಾಧಿಕಾರವು ಇದ್ದ ಮನುಷ್ಯನಿಗೆ ಆಗುವ ಸೌಖ್ಯದಿಂದ ತೀರ ಭಿನ್ನವಾದ ಮತ್ತು ಎಲ್ಲರಿಗೂ ಪ್ರಾಪ್ತವಾಗುವಂಥ ಬೇರೊಂದು ಸುಖವು ಇರಲಿಕ್ಕೆ

ಬೇಕು. ಯಾಕಂದರೆ ಆ ತರದ ಸುಖವು ಇಲ್ಲದಿದ್ದರೆ, ಒಬ್ಬನ ಸುಖಕ್ಕಾಗಿ ಲಕ್ಷಾವಧಿ ಜನರು ಅವನ ಅಧಿಕಾರದೊಳಗೆ ಎಂದೂ ಇರಲಾರರು."

ಈ ತರದ ಕಲ್ಪನೆಗಳು ಮೇಲಿಂದ ಮೇಲೆ ಆತನ ಮನಸ್ಸಿನಲ್ಲಿ ಬಂದು ಅವನಿಗೆ ಅನೇಕ ಸಂಶಯುಗಳು ಬರುತ್ತಿದ್ದವು. ಆದರೆ ಆ ಸಂಶಯುಗಳ ನಿವೃತ್ತಿ ಮಾತ್ರ ಆಗುತ್ತಿದ್ದಿಲ್ಲ. ರಾಸೆಲಾಸನು ದರ್ಬಾರಿನೊಳಗಿನ ಜನರಿಗೆ ಅನೇಕವಾದ ಕಾಣಿಕೆಗಳನ್ನು ಕೊಟ್ಟದ್ದರಿಂದಲೂ, ಅವರ ಕೂಡ ಸವಿಮಾತುಗಳನ್ನು ಆಡಹತ್ತಿದ್ದರಿಂದಲೂ, ಆ ಜನರ ಸಹವಾಸವು ಆತನಿಗೆ ಬಹಳವಾಯಿತು. ಈ ಮೇರೆಗೆ ವಿಶೇಷ ಸಲಿಗೆ ಆದ ತರುವಾಯು ಅವರ ಕೂಡ ಸಂಭಾಷಣ ಮಾಡುತ್ತಿರುವಾಗ ಅವನಿಗೆ ಕೆಳಗೆ ವಿವರಿಸಿದಂತೆ ಕಂಡುಬಂತು.

ದೊಡ್ಡ ಅಧಿಕಾರದ ಮೇಲಿರುವ ಪ್ರತಿಯೊಬ್ಬ ಕಾಮಗಾರನು ಉಳಿದ ಯಾವತ್ತು ಅಧಿಕಾರಿಗಳ ದ್ವೇಷಮಾಡುತ್ತಾನೆ; ಉಳಿದ ಯಾವತ್ತು ಅಧಿಕಾರಿಗಳು ಅವನ (ಆ ಕಾಮಗಾರನ) ದ್ವೇಷಮಾಡುತ್ತಾರೆ. ಈ ಕಾಮಗಾರರು ಎರಡನೆಯುವರನ್ನು ಮುಳುಗಿಸುವದಕ್ಕಾಗಿ ಗುಪ್ತಾಲೋಚನೆಗಳನ್ನುಮಾಡೋಣ, ತಮ್ಮ ನಾಶಕ್ಕೋಸ್ಕರ ಎರಡನೆಯುವರು ಮಾಡಿದ ಗುಪ್ತಾಲೋಚನೆಗಳನ್ನು ಬೈಲಿಗೆ ಹಾಕೋಣ, ಎರಡನೆಯುವರನ್ನು ಸಂಕಟದೊಳಗೆ ತರೋಣ, ಎರಡನೆಯುವರ ಸಂಕಟದೊಳಗಿಂದ ತಾವು ಪಾರಾಗೋಣ, ಬಣಗಳನ್ನುಂಟುಮಾಡೋಣ, ವಿಶ್ವಾಸಘಾತ ಮಾಡೋಣ ಮುಂತಾದ ವ್ಯಾಪಾರಗಳಲ್ಲಿ ಯಾವಾಗಲೂ ನಿಮಗ್ನರಾಗಿರುತ್ತಾರೆ. ಮುಖ್ಯ ಸುಭೇದಾರನ ಹತ್ತರಿದ್ದ ಎಲ್ಲ ಜನರು ಆತನು ಮಾಡುವ ಕಾರ್ಯಗಳನ್ನು ತಿಳಿದು ಕೊಂಡು, ಅವುಗಳನ್ನು ಬಾದಶಹನಿಗೆ ತಿಳಿಸುವದಕ್ಕಾಗಿಯೇ ಅವನ ಹತ್ತರ ಇರುತ್ತಾರೆ. ಎಲ್ಲರೂ ಆ ಸುಭೇದಾರನನ್ನು ಜರಿಯುತ್ತಾರೆ; ಆತನ ತಪ್ಪುಗಳನ್ನು ಹುಡುಕಿ ತೆಗೆಯುವದಕ್ಕೆ ಹಗಲಿರಳು ಕಣ್ಣೊಳಗೆ ಎಣ್ಣೆಹಾಕಿಕೊಂಡು ಕಾಯುತ್ತ ಕೊಂಡು ಕುಳಿತಿರುತ್ತಾರೆ. ಇತ್ಯಾದಿ.

ಕಟ್ಟಕಡೆಗೆ ಒಂದು ದಿವಸ ಬಾದಶಹನು ಮೊದಲಿನ ಸುಭೇದಾರನ ಮೇಲೆ ಯಾವದೋ ಕಾರಣದಿಂದ ಸಿಟ್ಟಾಗಿ, ಆತನನ್ನು ಕೆಲಸದಿಂದ ತೆಗೆದುಹಾಕಿ ಎರಡನೆಯುವನನ್ನು ಆತನ ಸ್ಥಳದಮೇಲೆ ನೇಮಿಸಿದನು. ಆ ಹೊಸ ಸುಭೇದಾರನು ಬಂದಕೂಡಲೆ ಹಳೆ ಸುಭೇದಾರನನ್ನು ಹಿಡಿದು, ಸೆರೆಯಲ್ಲಿಟ್ಟು ಆತನ ಕಾಲೊಳಗೆ ಸಂಕೋಲೆಗಳನ್ನು ಹಾಕಿ, ಆತನನ್ನು ಕಾನಸ್ಟಂಟನೋಪಲ್ ಪಟ್ಟಣಕ್ಕೆ ಒಯ್ದರು. ಮುಂದೆ ಅವನ ಗತಿ ಏನಾಯಿತೆಂಬದು ತಿಳಿಯಲಿಲ್ಲ.

ರಾಜಪುತ್ರನು ಮೇಲೆ ವಿವರಿಸಿದ ಸಂಗತಿಯನ್ನೆಲ್ಲ ತನ್ನ ತಂಗಿಗೆ ಹೇಳಿ ಈ ಮೇರಿಗೆ ಅಂದನು—' 'ತಂಗಿಯೇ, ಸುಭೇದಾರನಿಗೆ ಆದ ಗತಿಯ ಮೇಲಿಂದ ನಾವು ಏನು ತಿಳಿದುಕೊಳ್ಳಬೇಕು? ಅಧಿಕಾರದಿಂದ ಸುಖವಾಗುತ್ತದೆನ್ನಬೇಕೋ? ದುಃಖವಾಗುತ್ತದೆನ್ನಬೇಕೋ? ಒಬ್ಬನ ಕೈಕೆಳಗಿರುವ ಅಧಿಕಾರಿಗೆ ಸುಖವಾಗಲಿಕ್ಕಿಲ್ಲ. ಆದರೆ ಸಾರ್ವಭೌಮಾಧಿಕಾರವುಳ್ಳವನಿಗೆ ಮಾತ್ರ ನಿಜವಾದ ಸುಖವಾಗುತ್ತದೆನ್ನಬಹುದೊ ? ಅಂದ ಮೇಲೆ ಅಂಥ ಅಧಿಕಾರಿಗೆ ಸುಖವಾಗುತ್ತದೆಂದು ಗ್ರಹಿಸಿದರೆ, ಇಡೀ ತುರ್ಕಸ್ತಾನದಲ್ಲಿ ಸುಲ್ತಾನನಿಗೆ ಮಾತ್ರ ಸುಖವುಂಟು ಎಂದು ತಿಳುಕೊಳ್ಳಬಹುದೊ? ಇಲ್ಲವೆ ಸುಲ್ತಾನನಿಗೂ ಕೂಡ ತನ್ನ ಗುಪ್ತ ಶತ್ರುಗಳು ತನ್ನಘಾತವನ್ನು ಯಾವ ವೇಳೆಯಲ್ಲಿ ಮಾಡ್ಯಾರೆಂಬ ಅಂಜಿಕೆಯು ಉಂಟಾಗಿ, ಅವನೂ ದುಃಖದಲ್ಲಿರಬಹುದೊ?"

ಮುಂದೆ ಕುಸು ದಿವಸಗಳಲ್ಲಿಯೇ ಎರಡನೇ ಸುಭೇದಾರನೂ ಪದಚ್ಯುತ ಮಾಡಲ್ಪಟ್ಟನು. ಅವನನ್ನು ಇಷ್ಟು ದೊಡ್ಡ ಅಧಿಕಾರಕ್ಕೆ ನೇಮಿಸಿದ ಸುಲ್ತಾನನನ್ನು ಅವನ ದಂಡಿನವರು ಕೊಂದುಬಿಟ್ಟರು. ಬೇರೊಬ್ಬನು ಸುಲ್ತಾನನ ಪಟ್ಟವೇರಿದನು. ಅವನ ವಿಚಾರಗಳು ಪೂರ್ವದ ಸುಲ್ತಾನನ ವಿಚಾರಗಳಿಂದ ತೀರ ಭಿನ್ನವಾಗಿದ್ದವು. ಅವನ ಪ್ರೀತಿಯ ಜನರು ಬೇರೆ ಇದ್ದರು. ಅವರನ್ನು ಅವನು ದೊಡ್ಡ ದೊಡ್ಡ ಅಧಿಕಾರದ ಸ್ಥಳಗಳಿಗೆ ನೇಮಿಸಿದನು.

## ಇಪ್ಪತ್ತೈದನೆಯ ಭಾಗವು.

**ರಾಜಕನ್ನಿಕೆಯು ತಾನು ಕೈಕೊಂಡ ಶೋಧವನ್ನು ಒಳ್ಳೇ ಪರಿಶ್ರಮದಿಂದ ಮಾಡಿದಳು, ಆದರೆ ಇಷ್ಟಪ್ರಾಪ್ತಿಯಾಗಲಿಲ್ಲ.**

ರಾಜಪುತ್ರನ ಶೋಧವು ಹಿಂದಿನ ಭಾಗದಲ್ಲಿ ವರ್ಣಿಸಿದಂತೆ ನಡೆದಾಗ, ರಾಜಕನ್ನಿಕೆಯು ಅನೇಕ ಮಧ್ಯಮ ಸ್ಥಿತಿಯ ಕುಟುಂಬದೊಳಗಿನ ಜನರ ಗುರುತು ಮಾಡಿಕೊಂಡಳು. ಸವಿಮಾತುಗಳನ್ನಾಡುವಂಥ, ಕೈಬಿಟ್ಟು ವೆಚ್ಚ ಮಾಡುವಂಥ ಮನುಷ್ಯನಿಗೆ ಬೇಕಾದಾಗ ಬೇಕಾದಂಥ ಮನೆಯಲ್ಲಿ ಆಯಾಸವಿಲ್ಲದೆ ಪ್ರವೇಶವಾಗುತ್ತದೆ. ಈ ನಿಯಮಕ್ಕನುಸರಿಸಿ ರಾಜಪುತ್ರಿಗೆ ಸಹಜವಾಗಿ ಎಲ್ಲ ಕಡೆಗೂ ಹೋಗಲಿಕ್ಕೆ ಅನುಕೂಲವಿತ್ತು. ಅನೇಕ ಕುಟುಂಬಗಳೊಳಗಿನ ಚಿಕ್ಕ ಹೆಣ್ಣು ಮಕ್ಕಳು ಒಳ್ಳೇ ವಿನೋದಿಗಳೂ ಆನಂದವೃತ್ತಿಯುಳ್ಳವರೂ ಇದ್ದರು; ಆದರೆ ನಿಕಾಯಾ ರಾಜಪುತ್ರಿಗೆ ತನ್ನ ಅಣ್ಣನ ಮತ್ತು ಇವಾನ್ಲಕನ ಪ್ರೌಢ ಮತ್ತು ಗಂಭೀ

ಕವಾದ ಭಾಷಣವನ್ನು ಕೇಳಿ ಕೇಳಿ ರೂಢಿ ಬಿದ್ದುಹೋದದರಿಂದ, ಆ ಚಿಕ್ಕಮಕ್ಕಳು ಮಾತಾಡುವಂಥ ಅರ್ಥವಿಲ್ಲದ್ದೂ ವಿನೋದದ ಹಾಗು ಹುಡುಗಾಟದ ಮಾತುಗಳನ್ನು ಕೇಳುತ್ತ ಕೂಡ್ರುವದು ಆಕೆಯು ಮನಸ್ಸಿಗೆ ಬರಲಿಲ್ಲ. ಅವರ ವಿಚಾರಗಳು ಅಪೂರ್ಣವಾದಂಥವೂ, ಅವರ ಇಚ್ಛೆಗಳು ಕೀಳತರದವೂ, ಅವರ ವಿನೋದಗಳು ಕೃತ್ರಿಮವಾದಂಥವೂ ಇದ್ದವು. ಈ ಮೇರೆಗೆ ಅವರ ಸುಖಗಳು ಕೀಳತರದವು ಇದ್ದರೂ ಶುದ್ಧವಾದಂಥವುಗಳಾದರೂ (ಅಂದರೆ ನಿಜವಾದಂಥ, ಬಹುದಿವಸ ಬಾಳುವಂಥ ಸುಖಗಳು) ಇರಬೇಕಾಗಿತ್ತು; ಅದೂ ಇಲ್ಲ. ಅಪ್ರಯೋಜಕವಾದ ಮತ್ತು ಕ್ಷುಲ್ಲಕವಾದ ವಿಷಯಗಳ ಬಗ್ಗೆ ಅವರು ಮೇಲಾಡಿ ಬಡದಾಡುತ್ತಿದ್ದರು; ಒಬ್ಬರೊಬ್ಬರ ದ್ವೇಷವಮಾಡುತ್ತಿದ್ದರು. ಆದದರಿಂದ ಅಮೃತದಲ್ಲಿ ವಿಷ ಬೆರಸಿದಂತೆ ಅವರ ಸುಖಗಳು ದುಃಖಮಿಶ್ರಿತವಾಗಿರುತ್ತಿದ್ದವು. ಅವರು ಯಾವಾಗಲೂ ಸೌಂದರ್ಯದ ಬಗ್ಗೆ ಒಬ್ಬರಿಗೊಬ್ಬರು ಮತ್ಸರಪಡುತ್ತಿದ್ದರು. ಸೌಂದರ್ಯವು ತಮಗೆ ಇಲ್ಲೆಂದು ಖೇದಪಟ್ಟರೆ ಅದು ಬರುವದಿಲ್ಲ, ಇಲ್ಲವೆ ತಮ್ಮ ಸೌಂದರ್ಯವನ್ನು ನೋಡಿ ಪರರು ಹೊಟ್ಟೆಕಿಚ್ಚು ಪಟ್ಟರೆ ಅದು ಎಳ್ಳಷ್ಟು ಕಡಿಮೆಯಾಗುವದಿಲ್ಲೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾಗಿದ್ದರೂ, ಅವರು ಆ ಗುಣದ ಬಗ್ಗೆ ಯಾವಾಗಲೂ ಒಬ್ಬರೊಬ್ಬರ ದ್ವೇಷವಮಾಡುತ್ತಿದ್ದರು. ಅವರಲ್ಲೆಷ್ಟೋ ಹೆಣ್ಣುಮಕ್ಕಳು ತಮ್ಮಂತೆಯೇ ಕೀಳ ತಿಳುವಳಿಕೆಯುಳ್ಳ ತರುಣ ಪುರುಷರ ಮೇಲೆ ಮನಸ್ಸಿಟ್ಟಿದ್ದರು; ಕೆಲವರು ತಮ್ಮ ಪ್ರೀತಿಪಾಶದಿಂದ ಹಲವು ತರುಣರನ್ನು ಬದ್ಧರನ್ನಾಗಿ ಮಾಡಿರುತ್ತೇವೆಂದು ತಿಳಿದುಕೊಳ್ಳುವರು; ಆದರೆ ನಿಜವಾಗಿ ಯಾರ ಪ್ರೀತಿಯೂ ಅವರ ಮೇಲೆ ಇರುತ್ತಿದ್ದಿಲ್ಲ. ಅವರು ತಾವು ಯಾವ ಪುರುಷನ ಮೇಲೆ ಮನಸ್ಸಿಡುತ್ತಾರೋ ಆ ಪುರುಷನು ಸುಶೀಲನೂ, ಜಾಣನೂ, ಸದ್ಗುಣಿಯೂ ಇದ್ದಾನೋ ಇಲ್ಲವೋ ಎಂಬದನ್ನು ವಿಚಾರಮಾಡದೆ ಅವನನ್ನು ಪ್ರೀತಿಸುತ್ತಿದ್ದರಾದದರಿಂದ ಕಡೆಗೆ ಅವರಿಗೆ ದುಃಖವೇ ಆಗುತ್ತಿತ್ತು. (ಅಂದರೆ, ತಳಸೋಸದೆ ಕಟ್ಟಿದ ಮನೆಯು ನೆಲಕ್ಕೆ ಬೀಳುವಂತೆ ಪೂರ್ಣ ವಿಚಾರಮಾಡದೆ ಅವರು ಒಬ್ಬನ ಮೇಲೆ ಪ್ರೀತಿಮಾಡುತ್ತಿದ್ದರಾದದರಿಂದ ಅದರ ಪರಿಣಾಮವು ಅವರಿಗೆ ದುಃಖದಾಯಕವಾಗುವದು ಸಹಜವೇ). ಇನ್ನೊಂದು ಸೋಜಿಗದ ಮಾತೇನೆಂದರೆ, ಅವರ ದುಃಖವೂ ತೀವ್ರವೇ ಅಳಿದುಹೋಗುತ್ತಿತ್ತು. ಅವರ ಸುಖವು ಹ್ಯಾಗೆ ಅಲ್ಪಕಾಲವೇ ಇರುತ್ತಿತ್ತೋ ಹಾಗೇ ದುಃಖವನ್ನಾದರೂ ಅವರು ತೀವ್ರವೇ ಮರೆತುಬಿಡುತ್ತಿದ್ದರು. ಸಾರಾಂಶ, ಸುಖದಿಂದ ಪರಿಣಮಿಸಿದ ಸಂತೋಷವನ್ನೂ, ದುಃಖದಿಂದ ಉದ್ಭವಿಸಿದ ಖೇದವನ್ನೂ ಅವರು ಲೆಕ್ಕಿಸುತ್ತಿದ್ದಿಲ್ಲ. ಅವರು ಬಹಳ ಚಂಚಲಸ್ವಭಾವದವರಿದ್ದದರಿಂದ

ಒಂದೇ ವಿಚಾರವು ಬಹಳ ಹೊತ್ತು ಅವರ ಮನಸ್ಸಿನಲ್ಲಿ ಎಂದೂ ಉಳಿಯುತ್ತಿದ್ದಿಲ್ಲ. ನೀರೊಳಗೆ ಒಂದು ಕಲ್ಲು ಚಲ್ಲಿದರೆ, ಆ ನೀರಿನಲ್ಲಿ ವರ್ತುಲಾಕಾರವಾದ ತೆರೆಗಳು ಹುಟ್ಟುತ್ತವೆ; ಕೂಡಲೆ ಮತ್ತೊಂದು ಕಲ್ಲು ಆ ನೀರಿನಲ್ಲಿ ಚಲ್ಲಿದರೆ ಅದರಿಂದ ಹುಟ್ಟುವ ವರ್ತುಲಗಳು ಮುಂಚಿನ ವರ್ತುಲಗಳನ್ನು ಹ್ಯಾಗೆ ಕೆಡಿಸಿ ಬಿಡುತ್ತವೋ, ಹಾಗೆ ಅವರ ಮನಸ್ಸಿನಲ್ಲಿ ಈಹೊತ್ತು ಒಂದು ವಿಷಯದ ಬಗ್ಗೆ ವಿಚಾರವು ಬಂದು, ಅದರಂತೆ ಕೆಲಸ ಮಾಡುವ ಪ್ರಯತ್ನವನ್ನು ಮಾಡುವಷ್ಟರಲ್ಲಿ ಎರಡನೆಯದೊಂದು ವಿಚಾರವು ಅವರ ತಲೆಯಲ್ಲಿ ಸೇರಿತೆಂದರೆ, ಮೊದಲಿನ ವಿಚಾರವನ್ನು ಅವರು ತೀರ ಮರೆತುಬಿಡುತ್ತಿದ್ದರು.

ರಾಜಪುತ್ರಿಯು ನಿರುಪದ್ರವಿಯಾದ ಪ್ರಾಣಿಗಳ ಕೂಡ ಆಡುವಂತೆ ಆ ಹೆಣ್ಣುಮಕ್ಕಳ ಕೂಡ ಆಡುತ್ತಿದ್ದಳು, ರಾಜಪುತ್ರಿಯು ಪ್ರೌಢಳೂ, ವಯಸ್ಕಳೂ ಇದ್ದು, ತಮ್ಮ ಗೆಳತಿಯಾದ ಬಗ್ಗೆ ಅವರಿಗೆ ಅಭಿಮಾನವೆನಿಸುತ್ತಿತ್ತು. ಆದರೆ ಆಕೆಯ ಸಹವಾಸವು ಅವರಿಗೆ ಬೇಸರವನ್ನುಂಟುಮಾಡುತ್ತಿತ್ತೆಂದು ಆಕೆಗೆ ಕಂಡುಬಂತು.

ಅವರಿಗೆ ಬೇಸರಬಂದಾಗ್ಯೂ, ರಾಜಪುತ್ರಿಯು ಅವರ ಸ್ನೇಹವನ್ನು ಬಿಡಲಿಲ್ಲ. ಯಾಕೆಂದರೆ ಅವರ ನಿಜವಾದ ಮನಃಸ್ಥಿತಿಯನ್ನೂ, ಗೃಹಸ್ಥಿತಿಯನ್ನೂ ತಿಳಿದುಕೊಳ್ಳುವದು ಆಕೆಯ ಮುಖ್ಯ ಉದ್ದೇಶವಾಗಿತ್ತು. ಆಕೆ ಚತುರಳೂ, ವಿನಯವುಳ್ಳವಳೂ ಇದ್ದುದರಿಂದ ಎಲ್ಲರೂ ಆಕೆಯ ಮೇಲೆ ಮಮತೆಯನ್ನು ಮಾಡುತ್ತಿದ್ದರು. ದುಃಖಪೀಡಿತರಾದವರು ಆಕೆಯ ಹತ್ತರ ಬಂದು ತಮ್ಮ ಹೊಟ್ಟೆಯೊಳಗಿನ ಸಂಕಟವನ್ನು ತೋಡಿಕೊಳ್ಳುತ್ತಿದ್ದರು. ತಮ್ಮ ಮನೋರಥವು ತುಸು ದಿವಸಗಳಲ್ಲಿ ಕೈಗೂಡುವದು, ತಮಗೆ ಚಿರಕಾಲ ಸುಖವಾಗುವದೆಂದು ತಿಳಿದುಕೊಂಡ ಹೆಣ್ಣುಮಕ್ಕಳೂ ಆಕೆಯ ಹತ್ತರ ಬಂದು, ತಮ್ಮ ಭವಿಷ್ಯದಾನಂದದಿಂದ ತಮಗೆ ಉಂಟಾಗುವ ಸೌಖ್ಯವನ್ನು ಆಕೆಗೆ ಹೇಳುತ್ತಿದ್ದರು.

ಬೇಸಿಗೆಯ ಕಾಲದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ನೀಲನದಿಯ ದಂಡೆಯ ಮೇಲೆ ಒಂದು ವಿಶ್ರಾಂತಿಗೃಹವನ್ನು ಕಟ್ಟಿಸಿದ್ದರು. ಅಲ್ಲಿ ರಾಜಪುತ್ರನೂ, ರಾಜಕನ್ನಿಕೆಯೂ ದಿನಾಲು ಮೂರೂಸಂಜೆಯಲ್ಲಿ ಒಟ್ಟಿಗೆ ಕೂಡಿ ತಾವು ಇಡೀ ದಿವಸ ಮಾಡಿದ ಕೆಲಸಗಳನ್ನೂ, ತಮಗೆ ಸಂಭವಿಸಿದ ಸಂಗತಿಗಳನ್ನೂ ಒಬ್ಬರಿಗೊಬ್ಬರು ಹೇಳುತ್ತಿದ್ದರು. ಒಂದಾನೊಂದು ದಿವಸ ವಾಡಿಕೆಯಂತೆ ಇಬ್ಬರೂ ಅಲ್ಲಿ ಕುಳಿತಾಗ ರಾಜಪುತ್ರಿಯು ಸಮೀಪದಲ್ಲಿಯೇ ಹರಿಯುವ ನೀಲನದಿಯನ್ನು

ಲಕ್ಷಿಸಿ ಅಂದಳು “ ಎಲೈ ನದರಾಜನೇ ನೀನು ಅನೇಕ ದೇಶಗಳೊಳಗಿಂದ ಹರಿದು ಹೋಗುತ್ತೀ. ಎಷ್ಟೋ ರಾಷ್ಟ್ರಗಳು ನಿನ್ನ ದಂಡೆಯ ಮೇಲೆ ಅವೆ. ಆದರೆ ನೀನು ಯಾವ ದೇಶದಲ್ಲಿ ಹುಟ್ಟಿರುವಿಯೋ, ಆ ದೇಶದ ಅರಸನ ಮಗಳಾದ ನಾನು ಈಗ ಕೇಳುವ ಪ್ರಶ್ನದ ಉತ್ತರವನ್ನು ಕೊಡು. ಆ ಪ್ರಶ್ನೆಯು ಯಾವದೆಂದರೆ—ನಿನ್ನ ಪ್ರವಾಹದ ಗತಿಯಲ್ಲಿ ನಿನಗೆ ಹತ್ತುವ ರಾಷ್ಟ್ರಗಳೊಳಗೆ ದುಃಖದ ಧ್ವನಿಯು ಯಾವ ಮನೆಯಲ್ಲಿ ಕೇಳಬರುವದಿಲ್ಲವೋ ಇಂಥ ಒಂದಾದರೂ ಮನೆಯು ನಿನ್ನ ದೃಷ್ಟಿಗೆ ಬಿದ್ದಿರುವದೋ ? ”

ರಾಜಪುತ್ರಿಯು ಈ ಭಾಷಣವನ್ನು ಕೇಳಿ ರಾಸೆಲಾಸನು ಅಂದನು. “ತಂಗೀ, ಹಾಗಾದರೆ ಓಲಗದಲ್ಲಿಯೂ, ದೊಡ್ಡದೊಡ್ಡ ಅಧಿಕಾರಿಗಳ ಮನೆಗಳಲ್ಲಿಯೂ ಸುಖವಿಲ್ಲೆಂದು ನಾನು ಮನಗಂಡಂತೆಯೇ ಮಧ್ಯಮಸ್ಥಿತಿಯೊಳಗಿರುವ ಜನರೊಳಗೂ ಸುಖವಿಲ್ಲೆಂದು ನಿನಗೆ ಕಂಡುಬಂದಿರುವದೆಂದು ನಿನ್ನ ಮಾತಿನ ಮೇಲಿಂದ ನನಗೆ ತೋರುತ್ತದೆ. ” ರಾಜಪುತ್ರಿಯು ಉತ್ತರ ಕೊಟ್ಟಳು. “ ಸೌಖ್ಯದಶೋಧವನ್ನು ಕೈಕೊಂಡು ನಮ್ಮ ನಮ್ಮ ಕೆಲಸವನ್ನು ಮಾಡತೊಡಗಿದಂದಿನಿಂದ, ನಾನು ಎಷ್ಟೋ ಮಧ್ಯಮ ಸ್ಥಿತಿಯೊಳಗಿನ ಕುಟುಂಬದವರ ಗುರುತುಮಾಡಿಕೊಂಡಿದ್ದೇನೆ. ಅತ್ಯಂತ ಸುಖವುಳ್ಳವರೂ, ಶಾಂತವೃತ್ತಿಯುಳ್ಳವರೂ, ಸಂಪತ್ತುಳ್ಳವರೂ ಇದ್ದದರಿಂದ ದುಃಖದ ಗಾಳಿ ಸಹ ಇರಲಿಕ್ಕಿಲ್ಲೆಂದು ತೋರುವಂಥ ಅನೇಕ ಜನರ ಸ್ನೇಹ ಸಂಪಾದಿಸಿ, ಸೂಕ್ಷ್ಮರೀತಿಯಿಂದ ಶೋಧಮಾಡಿ ನೋಡಲು, ಸಿಡಿಮಿಡಿ ಇಲ್ಲದಂಥ ಶಾಂತವೃತ್ತಿಯನ್ನು ಹೋಗಲಾಡಿಸುವ ತೊಂದರೆ ಇಲ್ಲದಂಥ ಒಂದು ಮನೆಯಾದರೂ ನನ್ನ ದೃಷ್ಟಿಗೆ ಬೀಳಲಿಲ್ಲ. ನೋಡಿದಲ್ಲೆಲ್ಲ ಒಂದಿಲ್ಲೊಂದು ತರದ ದುಃಖವು ಇದ್ದೇ ಇರುತ್ತದೆ. ”

“ಬಡ ಜನರಲ್ಲಿ ಸುಖವು ಇರಲಿಕ್ಕಿಲ್ಲೆಂದು ತಿಳಿದುಕೊಂಡು ನಾನು ಆ ಬಗ್ಗೆ ಅವರಲ್ಲಿ ಶೋಧವನ್ನು ಮಾಡಲಿಲ್ಲ. ಆದರೆ ಉಂಡುಟ್ಟು ಸುಖದಿಂದಿರುವಂತೆ ತೋರುವ ಎಷ್ಟೋ ಜನರು ನಿಜವಾಗಿ ಬಡವರೇ ಇರುತ್ತಾರೆಂದು ನನಗೆ ಕಂಡು ಬಂತು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಡತನವು ಅನೇಕ ರೂಪಗಳನ್ನು ಧರಿಸುತ್ತದೆ. (ದೊಡ್ಡ ಪಟ್ಟಣಗಳಲ್ಲಿರುವ ಬಡವರು ತಮ್ಮ ಬಡತನವನ್ನು ಮುಚ್ಚಿಕೊಳ್ಳುವದಕ್ಕಾಗಿ ಬೇರೆಬೇರೆ ಸೋಗು ಹಾಕಿಕೊಂಡಿರುತ್ತಾರೆ.) ಮನುಷ್ಯನು ತನ್ನ ಬಡತನವನ್ನು ಬಚ್ಚಿಡುವದಕ್ಕಾಗಿ ಒಮ್ಮೊಮ್ಮೆ ಒಳ್ಳೇ ವೈಭವವನ್ನು ತೋರ್ಪಡಿಸುತ್ತಾನೆ; ಒಮ್ಮೊಮ್ಮೆ ತನ್ನ ಆದಾಯ ಮೀರಿ ವೆಚ್ಚಮಾಡಿ ತಾನು ರೊಕ್ಕವುಳ್ಳವನೆಂದು ತೋರಿಸಲು ಯತ್ನಿಸುತ್ತಾನೆ. ಪ್ರತಿಒಬ್ಬನು ತಾನು ಬಡವನೆಂಬದು

ಜನರಿಗೆ ತಿಳಿಯಬಾರದೆಂದು ವಿಶ್ವಪ್ರಯತ್ನ ಮಾಡುತ್ತಾನೆ. ಈ ಮೇರೆಗೆ ಅವನು ತಾನು ಹಾಕಿಕೊಂಡ ಶ್ರೀಮಂತನ ಸೋಗಿಗೆ ಒಪ್ಪುವಂಥ ನಾನಾವಿಧದ ಯುಕ್ತಿಗಳನ್ನು ಯೋಜಿಸುತ್ತಿರುತ್ತಾನೆ ; ಮತ್ತು ಈಹೊತ್ತು ಒಂದು ಯುಕ್ತಿಯಿಂದ ಅವನ ಉದ್ದೇಶವು ಕೈಗೂಡಿತೆಂದರೆ, ಅವನಿಗೆ ಅತ್ಯಾನಂದವಾಗಿ ನಾಳೆ ಯಾವ ಯುಕ್ತಿಯನ್ನು ಯೋಜಿಸಬೇಕೆಂಬ ವಿಚಾರದಲ್ಲಿಯೇ ಅವನ ಇಡೀ ಆಯುಷ್ಯದ ದಿವಸಗಳೆಲ್ಲ ವೆಚ್ಚವಾಗುತ್ತವೆ. ”

“ ಬಡತನದಿಂದುಂಟಾದ ದುಃಖವು ಬಹಳ ಕಡೆಯಲ್ಲಿದ್ದದ್ದು ನನಗೆ ಕಂಡು ಬಂದಾಗ್ಯೂ ಅದರಿಂದ ನನಗೆ ವಿಶೇಷ ಖೇದವಾಗಲಿಲ್ಲ; ಯಾಕೆಂದರೆ ದಾರಿದ್ರ್ಯ ದುಃಖವನ್ನು ಕಳೆಯುವಷ್ಟು ಸಾಮರ್ಥ್ಯವು ನನ್ನಲ್ಲಿತ್ತು. ಆದರೆ ನಾನು ಕೊಡ ಹೋದ ಹಣವನ್ನು ಎಷ್ಟೋ ಜನರು ತೆಗೆದುಕೊಳ್ಳುತ್ತಿದ್ದಿಲ್ಲ. ಅವರು ಒಳ್ಳೇ ಪ್ರಯತ್ನಮಾಡಿ ತಮ್ಮ ಬಡತನವನ್ನು ಮುಚ್ಚಿಕೊಳ್ಳುತ್ತಿದ್ದಾಗ್ಯೂ ನನಗೆ ನನ್ನ ತೀಕ್ಷ್ಣ ದೃಷ್ಟಿಯಿಂದ ಅವರ ಬಡತನವು ಕಾಣುತ್ತಿತ್ತು. ತಮ್ಮ ಬಡತನವು ಬೈಲಿಗೆ ಬಿದ್ದದ್ದನ್ನು ನೋಡಿ, ಅವರಿಗೆ ಎಷ್ಟು ದುಃಖವಾಗುತ್ತಿತ್ತೋ, ಆ ದುಃಖದ ನೂರನೇ ಪಾಲಷ್ಟು ಸುಖವು ಸಹ ನಾನು ಕೊಡುವ ಹಣದಿಂದ ಅವರಿಗೆ ಆಗುತ್ತಿದ್ದಿಲ್ಲ. ಹಣದ ಕೊರತೆಯು ಬಹಳ ಇದ್ದ ಜನರು ನಾನುಕೊಟ್ಟ ಹಣವನ್ನು ತೆಗೆದುಕೊಳ್ಳುತ್ತಿದ್ದರು; ಮತ್ತು ನನ್ನ ಈ ಕೃತ್ಯದ ಬಗ್ಗೆ ಯಾವಾಗಲೂ ನನ್ನ ಉಪಕಾರವನ್ನು ನೆನೆಸುತ್ತಿದ್ದರು. ಮತ್ತೆ ಕೆಲವರು ನಾನು ಕೊಡಹೋದ ಹಣವನ್ನು ತೆಗೆದುಕೊಂಡು ನನ್ನಿಂದ ಪುನಃ ತಮಗೆ ಹೆಚ್ಚಿನ ಹಣ ಸಿಕ್ಕಬೇಕೆಂಬ ಆಶೆಯನ್ನು ತೋರಿಸುತ್ತಿದ್ದಿಲ್ಲ; ಮತ್ತು ಆ ಬಗ್ಗೆ ಉಪಕೃತಿಯ ಮಾತುಗಳನ್ನಾದರೂ ನನ್ನ ಮುಂದೆ ಮಾತಾಡುತ್ತಿದ್ದಿಲ್ಲ. ಆದರೆ ಅವರ ಅಂತಃಕರಣದಲ್ಲಿ ನನ್ನ ಕಲ್ಯಾಣವಾಗಬೇಕೆಂಬ ಸದಿಚ್ಛೆಯು ಇದ್ದಂತೆ ನನಗೆ ಕಂಡುಬರುತ್ತಿತ್ತು.”

## ಇಪ್ಪತ್ತಾರನೆಯ ಭಾಗವು.

### ರಾಜಕನ್ನಿಕೆಯು ತನ್ನ ಭಾಷಣವನ್ನು ಮುಂದೆ ಸಾಗಿಸಿದ್ದು.

ನಿಕಾಯಾ ರಾಜಪುತ್ರಿಯು ತನ್ನ ಅಣ್ಣನು ತನ್ನ ಭಾಷಣವನ್ನು ಮನಮುಟ್ಟಿ ಕೇಳುತ್ತಾನೆಂದು ತಿಳಿದುಕೊಂಡು, ಮತ್ತೆ ಮುಂದೆ ಮಾತಾಡಹತ್ತಿದಳು.

“ಕುಟುಂಬಗಳು ಸಧನವಿರಲಿ. ನಿರ್ಧನವಿರಲಿ, ಹ್ಯಾಗಿದ್ದರೂ ಜಗಳವೂ ವೈಮನಸ್ಯವೂ ಅವುಗಳಲ್ಲಿ ತಪ್ಪದೆ ಇರುತ್ತವೆ. ರಾಜ್ಯವು ಒಂದು ದೊಡ್ಡ

ಕುಟುಂಬವಿರುತ್ತದೆಂದು ಇವ್ಹಾಕಸು ಹೇಳುತ್ತಾನೆ; ಆದದರಿಂದ ಕುಟುಂಬವಾ ದರೂ ಒಂದು ಸಣ್ಣರಾಜ್ಯವಿರುತ್ತದೆಂದು ಅನ್ನಬಹುದು. ಈ ಸಣ್ಣರಾಜ್ಯದ ಕ್ಷಯೂ, ಬಣಗಳೂ, ಅಧಿಕಾರಕ್ರಾಂತಿಗಳೂ ಯಾವಾಗಲೂ ಇರುತ್ತವೆ. ಸಂಸಾರದ ಅನುಭವವು ಇಲ್ಲದೆ ಹೊರಗಿನಿಂದ ನೋಡುವವನಿಗೆ ತಾಯಿತಂದೆಗಳೂ, ಮಕ್ಕಳೂ, ಒಬ್ಬರೊಬ್ಬರ ಮೇಲೆ ಪ್ರೀತಿಮಾಡುತ್ತಿರುತ್ತಾರೆಂದು ಕಾಣಬಹುದು. ಆದರೆ ನಿಜವಾದ ಸಂಗತಿಯು ಹಾಗಿರುವದಿಲ್ಲ. ಹುಡುಗರು ಚಿಕ್ಕವರಿರುವ ತನಕ ಮಾತ್ರ! ತಾಯಿತಂದೆಗಳು ಅವರನ್ನು ಪ್ರೀತಿಸುತ್ತಾರೆ, ಮುಂದೆ ಕುಸು ದಿವಸಗಳಲ್ಲಿಯೇ ಮಕ್ಕಳು ತಾಯಿತಂದೆಗಳಿಗೆ ಎದುರಾಳಿಗಳಾಗಿ ಅವರಗೂಡ ಬಡಿದಾಡಹತ್ತುತ್ತಾರೆ. ಆಮೇಲೆ ಒಬ್ಬರೊಬ್ಬರ ಮೇಲೆ ಉಪಕಾರವನ್ನು ಮಾಡುವದಾದರೆ ಮೊದಲು ಅವರನ್ನು ಚನ್ನಾಗಿ ಜರಿದು, ಆಮೇಲೆ ಉಪಕಾರ ಮಾಡುವರು ಮತ್ಸರಬುದ್ಧಿ ಹುಟ್ಟಿ ಕೃತಜ್ಞತೆಯು ಅಳಿದುಹೋಗುತ್ತದೆ"

"ತಾಯಿತಂದೆಗಳೂ, ಮಕ್ಕಳೂ, ಒಮ್ಮನಸಿನಿಂದ ಎಂದೂ ನಡೆಯುವದಿಲ್ಲ. ಕೆಲವು ಹುಡುಗರು ತಾಯಿತಂದೆಗಳ ಪ್ರೀತಿಯು ತಮ್ಮ ಮೇಲೆಯೇ ಇರಬೇಕಲ್ಲದೆ ಅವರು ಬೇರೊಬ್ಬರನ್ನು ಪ್ರೀತಿಸಬಾರದೆಂದು ಪ್ರಯತ್ನಿಸುತ್ತಾರೆ. ಹೀಗೆ ಮಾಡುವದಕ್ಕೆ ಹುಡುಗರಿಗೆ ಯಾವದಾದರೊಂದು ಕಾರಣವಿರುತ್ತದೆಂದೆನ್ನಬಹುದು. ಆದರೆ ಏನೂ ಕಾರಣವಿಲ್ಲದೆ ತಾಯಿತಂದೆಗಳು ಒಬ್ಬ ಹುಡುಗನ ಮೇಲೆ ಮತ್ತೊಬ್ಬನಿಗಿಂತ ಹೆಚ್ಚು ಪ್ರೀತಿ ತೋರಿಸಿ, ತಮ್ಮ ನೀಚತನವನ್ನು ತೋರ್ಪಡಿಸುತ್ತಾರೆ. ಈಮೇರೆಗೆ ಕೆಲವು ಹುಡುಗರು ತಂದೆಯನ್ನು ಪ್ರೀತಿಸುತ್ತಾರೆ, ಕೆಲವರು ತಾಯಿಯ ಮೇಲೆ ಪ್ರೀತಿ ಮಾಡುತ್ತಾರೆ; ಹೀಗಾಗಿ ಕ್ರಮೇಣ ಮನೆಯಲ್ಲೆಲ್ಲ ಕಪಟವೂ, ಜಗಳವೂ ತಲೆದೋರುತ್ತವೆ."

"ತಾಯಿತಂದೆಗಳ ಮತ್ತು ಮಕ್ಕಳ ಅಭಿಪ್ರಾಯಗಳೂ, ತರುಣರ ಹಾಗೂ ವೃದ್ಧರ ಅಭಿಪ್ರಾಯಗಳೂ ತೀರ ಭಿನ್ನವಾಗಿರುತ್ತವೆ. ಇದು ಸ್ವಾಭಾವಿಕವೇ ಸರಿ ಯಾಕಂದರೆ ಹುಡುಗರು ಚಿಕ್ಕವರಿರುವದರಿಂದಲೂ, ಜಗತ್ತಿನ ಅನುಭವ ಜ್ಞಾನವು ಅವರಿಗೆ ಕಡಿಮೆ ಇರುವದರಿಂದಲೂ, ಅವರ ಆಶೆಯು ಗತಿಯು ಯಾವಾಗಲೂ ಮುಂದೆ ಇರುತ್ತದೆ; ಮತ್ತು ಅನೇಕ ಸಂಗತಿಗಳು ಮುಂದೆ ಸಿದ್ಧಿಗೆ ಹೋಗುವವೆಂದು ಅವರು ತಿಳಿದುಕೊಳ್ಳುತ್ತಾರೆ. ಆದರೆ ವೃದ್ಧ ಮನುಷ್ಯರಿಗೆ ಸಂಸಾರದಲ್ಲಿ ಅನೇಕಾವರ್ತಿ ಆಶಾಭಂಗವಾಗಿರುವದರಿಂದಲೂ, ಜಗತ್ತಿನ ಅನುಭವವು ಅವರಿಗೆ ಚನ್ನಾಗಿ ಇರುವದರಿಂದಲೂ, ಹುಡುಗರಷ್ಟು ಹುರುಪು ಅವರಲ್ಲಿರುವದಿಲ್ಲ. ಈ ಮೇರೆಗೆ ಅವರಿಬ್ಬರ ತಿಳುವಳಿಕೆಯಲ್ಲಿ ಇಷ್ಟೇ ಹೆಚ್ಚುಕಡಿಮೆ ಇರು

ವದು, ಇಬ್ಬರದೂ ತಪ್ಪಲ್ಲ; ಅಲ್ಲದೆ ಆ ಬಗ್ಗೆ ಇಬ್ಬರೂ ದೋಷಾರ್ಹರಲ್ಲ. ವಸಂತಕಾಲದಲ್ಲಿಯು ಮತ್ತು ಚಳಿಗಾಲದಲ್ಲಿಯು ಸೃಷ್ಟಿಯು ವನಶೋಭೆಯೊಳಗೆ ಎಷ್ಟು ಹೆಚ್ಚುಕಡಿಮೆ ಇರುತ್ತದೋ, ಅಷ್ಟೇ ಹೆಚ್ಚುಕಡಿಮೆಗಳು ವೃದ್ಧರ ಮತ್ತು ತರುಣರ ಸಂಸಾರಸುಖದಲ್ಲಿ ಇರುತ್ತವೆ. ವೃದ್ಧರ ಕೆಲವು ಭಾಷಣಗಳು ತರುಣ ಜನರ ಅನುಭವಕ್ಕೆ ತೀರ ವಿಸಂಗತವಾಗಿದ್ದಲ್ಲಿ ವೃದ್ಧರ ಆ ಭಾಷಣದ ಮೇಲೆ ತರುಣರು ವಿಶ್ವಾಸವನ್ನು ಹ್ಯಾಗೆ ಇಡಬೇಕು!!"

"ಇಂಥಾದ್ದೊಂದು ರೀತಿಯಿಂದ ನಡೆಯಬೇಕೆಂದು ವೃದ್ಧರು ತರುಣರಿಗೆ ಉಪದೇಶಿಸುತ್ತಾರೆ. ಆದರೆ ಸ್ವತಃ ತಾವು ಅವರಂತೆ ನಡೆಯುವದಿಲ್ಲ. ಅಂದರೆ ವೃದ್ಧರ ನಡೆಯು ಅವರ ನುಡಿಯಂತೆ ಇರುವದಿಲ್ಲ. ಇದರಿಂದ ಅವರ ಉಪದೇಶದ ಮಹತ್ವವು ಮಕ್ಕಳ ಮನಸ್ಸಿನ ಮೇಲೆ ಬಿಂಬಿಸುವದಿಲ್ಲ. ತಮ್ಮ ಇಷ್ಟಕಾರ್ಯವನ್ನು ಕೈಗೂಡಿಸಿಕೊಳ್ಳುವ ರೀತಿಯಾದರೂ ವೃದ್ಧರದು ಬೇರೆ, ತರುಣರದು ಬೇರೆಯಾಗಿರುತ್ತದೆ.

ವೃದ್ಧ ಮನುಷ್ಯನು ತನ್ನ ಕಾರ್ಯವನ್ನು ಮೆಲ್ಲಮೆಲ್ಲಗೆ ಮಾಡಿ, ಯುಕ್ತಿಯಿಂದ ಅದನ್ನು ಸಿದ್ಧಿಸಬೇಕೆಂದು ಬಯಸುತ್ತಾನೆ; ಆದರೆ ತರುಣನು ತನ್ನ ಕಾರ್ಯವನ್ನು ತನ್ನ ಜಾಣ್ಮೆಯಿಂದಲೂ, ಪರಾಕ್ರಮದಿಂದಲೂ, ಚಾತುರ್ಯದಿಂದಲೂ ಸಿದ್ಧಿಸಿಕೊಳ್ಳುವನೆಂಬ ಹುರುಪುಳ್ಳವನಾಗಿರುತ್ತಾನೆ. ವೃದ್ಧನು ಹಟಕ್ಕೆ ಮಾನಕೊಡುತ್ತಾನೆ; ತರುಣನು ಸದ್ಗುಣವನ್ನು ಮನ್ನಿಸುತ್ತಾನೆ. ವೃದ್ಧ ಮನುಷ್ಯನು ವಿವೇಕತನ, ಧೂರ್ತತನ ಮುಂತಾದ ಸದ್ಗುಣಗಳು ಪ್ರಶಸ್ತವೆಂದು ತಿಳಿದುಕೊಳ್ಳುತ್ತಾನೆ. ತರುಣನು ಔದಾರ್ಯ, ಸಾಹಸ ಮುಂತಾದ ಗುಣಗಳು ಮೇಲಾದವುಗಳೆಂದು ತಿಳಿಯುತ್ತಾನೆ. ತರುಣ ಮನುಷ್ಯನು ತಾನು ಎರಡನೆಯವರ ಕೇಡು ಬಗೆಯುವದಿಲ್ಲಾದ್ದರಿಂದ ಎರಡನೆಯವರಾದರೂ ತನ್ನ ಕೇಡು ಬಗೆಯಲಿಕ್ಕಿಲ್ಲೆಂದು ನಿಶ್ಚಯವಾಗಿ ತಿಳಿದುಕೊಂಡು ಎಲ್ಲರ ಕೂಡ ನಿಷ್ಕಪಟದಿಂದಲೂ, ವಿಶ್ವಾಸದಿಂದಲೂ ನಡಕೊಳ್ಳುತ್ತಾನೆ. ಆದರೆ ವೃದ್ಧ ಮನುಷ್ಯನಿಗೆ ಜಗತ್ತಿನೊಳಗಿನ ದುಷ್ಟ ಜನರ ವಿಶ್ವಾಸಘಾತದಿಂದಲೂ, ಕಪಟದಿಂದಲೂ ಉಂಟಾದ ಕೇಡಿನ ಅನುಭವವು ಚನ್ನಾಗಿ ಬಂದಿರುವದರಿಂದ, ಅವನು ಯಾವಾಗಲೂ ಸಂಶಯಗ್ರಸ್ತನಾಗಿ ಯಾರನ್ನೂ ನಂಬುವದಿಲ್ಲ; ಮತ್ತು ಒಮ್ಮೊಮ್ಮೆ ದುಷ್ಟತನವನ್ನು ಸಹ ಮಾಡುವದಕ್ಕೆ ಪ್ರವೃತ್ತನಾಗುತ್ತಾನೆ. ತರುಣ ಜನರ ಸಾಹಸದ ಗುಣವನ್ನು ನೋಡಿ, ವೃದ್ಧರಿಗೆ ಸಿಟ್ಟು ಬರುತ್ತದೆ. ಆದರೆ ತರುಣರು ವೃದ್ಧರ ಸಂಶಯಗ್ರಸ್ತವಾದ ಸ್ವಭಾವವನ್ನು ನೋಡಿ, ಅವರ ತಿರಸ್ಕಾರ ಮಾಡುತ್ತಾರೆ. ಈ ಮೇರೆಗೆ ಪ್ರತಿಯೊಂದು ವಿಷಯದಲ್ಲೂ

ಅವರಿಬ್ಬರಿಗೆ ವಿರೋಧವು ಹುಟ್ಟುವದರಿಂದ ಒಬ್ಬರೊಬ್ಬರ ಮೇಲಿನ ಪ್ರೀತಿಯು ಬರಬರುತ್ತ ಕಡಿಮೆಯಾಗುತ್ತ ಬರುತ್ತದೆ. ಸ್ವಭಾವತಃ ಒಳ್ಳೇ ನಿಕಟಸಂಬಂಧ ವುಳ್ಳ ತಾಯಿತಂದೆಗಳು ಮತ್ತು ಮಕ್ಕಳು ಪರಸ್ಪರ ಪ್ರೀತಿಮಾಡುವದಕ್ಕೆ ಬದಲಾಗಿ ಒಬ್ಬರೊಬ್ಬರ ದ್ವೇಷಮಾಡಹತ್ತಿದ ಮೇಲೆ ನಾವು ಪ್ರೇಮವನ್ನೂ, ಸಮಾಧಾನ ವನ್ನೂ ಇನ್ನು ಎಲ್ಲಿ ಹುಡುಕಬೇಕು? ”

ರಾಜಪುತ್ರನು ಅನ್ನುತ್ತಾನೆ “ ತಂಗೀ! ಒಂದು ತೀರ ದುರ್ದೈವದ ಕುಟುಂಬ ವನ್ನು ನೀನು ನೋಡಿರಬಹುದು; ಮತ್ತು ಅವರ ಸ್ಥಿತಿಯನ್ನು ನೋಡಿ, ಮಧ್ಯಮ ಸ್ಥಿತಿಯ ಜನರ ಸುಖದ ವಿಷಯಕ್ಕೆ ನಿನ್ನ ಮನಸ್ಸಿನಲ್ಲಿ ಈ ತರದ ಪ್ರತಿಕೂಲವಾದ ಮತ್ತು ಭ್ರಾಂತಿಕರವಾದ ಅಭಿಪ್ರಾಯವು ಉಂಟಾಗಿರಬಹುದೆಂದು ನನಗೆ ತೋರು ತ್ತದೆ, ಅತಿಶಯ ಮಾಯೆಯನ್ನು ತೋರಿಸುವಂಥ, ಒಬ್ಬರೊಬ್ಬರ ಮೇಲೆ ಅತ್ಯಂತ ಮಮತೆಯನ್ನು ಮಾಡುವಂಥ, ತಾಯಿತಂದೆ ಮತ್ತು ಮಕ್ಕಳಲ್ಲಿ ವೈಮನಸ್ಸನ್ನು ಹುಟ್ಟಿಸುವಂಥ ಈ ತರದ ಅನಿವಾರ್ಯ ಮತ್ತು ಸ್ವಾಭಾವಿಕವಾದ ಕಾರಣಗಳಿರ ಬಹುದೆಂಬ ಕಲ್ಪನೆಯು ಸಹ ನನ್ನ ಮನಸ್ಸಿನಲ್ಲಿ ಬರಲಿಲ್ಲವು.” ರಾಜಪುತ್ರಿಯು “ ಅಣ್ಣಾ! ವೈಮನಸ್ಸು ಅನಿವಾರ್ಯವಾದದ್ದು, ಯಾವಾಗಲು ಎಲ್ಲ ಕಡೆಯಲ್ಲಿ ಇರುವಂಥಾದ್ದು ಅದೆ, ಎಂದು ನಾನು ಅನ್ನಲಾರೆನು. ಆದರೆ ವೈಮನಸ್ಸ ವನ್ನು ಹುಟ್ಟಗೊಡದೆ ಇರುವದು ಮಾತ್ರ ಕಠಿಣವದೆ. ಹ್ಯಾಗಿದ್ದರೂ ವೈಮ ನಸ್ಸು ತನ್ನಿಂದ ತಾನೇ ಹುಟ್ಟುತ್ತದೆ. ಒಂದು ಕುಟುಂಬದೊಳಗಿನ ಯಾವತ್ತು ಜನರೂ ಸದ್ಗುಣಿಗಳಿರುವದಿಲ್ಲ. ಸಜ್ಜನ ದುರ್ಜನರ ಬೇಳೆಯು ಒಂದು ಕಡೆ ಬೇಯುವದಿಲ್ಲ. ಮತ್ತು ದುರ್ಜನ ದುರ್ಜನರುವಂತೂ ಎಂದೂ ಕೂಡುವದಿಲ್ಲ. ಸಜ್ಜನರು ಸಹ ಒಮ್ಮೊಮ್ಮೆ ಬಡಿದಾಡುತ್ತಾರೆ. ಯಾಕಂದರೆ, ಎಲ್ಲ ಸಜ್ಜನರ ಪ್ರವೃತ್ತಿಯು ಒಂದೇ ತರದ ಸದ್ಗುಣದ ಕಡೆಗೆ ಇರುವದಿಲ್ಲ. ಮತ್ತು ಕೆಲವರು ಮಿತಿಮೀರಿ ಸದ್ಗುಣಗಳ ಪುಷ್ಟವನ್ನು ಬೆಳಿಸುತ್ತಾರೆ. ಆದರೆ ಸಾಧಾರಣವಾಗಿ ಒಳ್ಳೇ ಮಾನಾರ್ಹರಾದ ತಾಯಿತಂದೆಗಳಿಗೆ ಅವರ ಮಕ್ಕಳು ಯೋಗ್ಯ ಮಾನ ವನ್ನು ಕೊಟ್ಟೇ ಕೊಡುತ್ತಾರೆ. ಯಾಕಂದರೆ ಶುದ್ಧಾಚರಣೆಯಿಂದ ಇದ್ದ ಜನರ ಜಗತ್ತಿನಲ್ಲಿ ಅಪಮಾನವನ್ನು ಎಂದೂ ಹೊಂದಲಾರರು. ”

“ ಮನೆತನದಲ್ಲಿ ಇನ್ನೂ ಎಷ್ಟೋ ದುಃಖಗಳೂ, ತೊಂದರೆಗಳೂ ಉಂಟು. ಕೆಲವರು ತಮ್ಮ ಯಾವತ್ತು ಕೆಲಸಗಳನ್ನು ತಮ್ಮ ಸೇವಕರಿಗೆ ಒಪ್ಪಿಸಿಕೊಟ್ಟಿದ್ದ ರಿಂದ ಅವರು ಆ ಸೇವಕರ ಮಾತು ಕೇಳಿಕೊಂಡು, ಅವರ ಅಂಕಿತರಾಗಬೇಕಾಗು ತ್ತದೆ. ಕೆಲವರಿಗೆ ಶ್ರೀಮಂತರಾದ ಆಪ್ತರೂ ಇಷ್ಟರೂ ಇರುತ್ತಾರೆ; ಅವರನ್ನು

ತೃಪ್ತಿಪಡಿಸೋಣಾಗುವದಿಲ್ಲ; ಸ್ಪಷ್ಟವಾಗಿ "ಮನೆಬಿಟ್ಟು ಹೋಗಿರಿಂದು ಹೇಳಿ ಅವರ ಮನಸ್ಸು ನೋಯಿಸಲಿಕ್ಕೆ ಬರುವದಿಲ್ಲ; ಆದದರಿಂದ ಅವರು ಯಾವಾಗಲೂ ಚಿಂತೆಯಲ್ಲಿರುತ್ತಾರೆ. ಕೆಲವು ಗಂಡಂದಿರು ದುಷ್ಟರೂ, ಸಿಟ್ಟಿನವರೂ. ಎಲ್ಲರೂ ತಮ್ಮ ಆಜ್ಞಾಧಾರಕರಾಗಿರಬೇಕೆಂಬ ತಿಳುವಳಿಕೆಯುಳ್ಳವರೂ ಇರುತ್ತಾರೆ. ಕೆಲವು ಹೆಂಡಂದಿರು ಗಂಡನ ಇಚ್ಛೆವಿರಾರಿ ನಡೆಯುವವರಿರುತ್ತಾರೆ. ಒಳಿತು ಮಾಡುವದಕ್ಕಿಂತಲೂ ಕೇಡು ಮಾಡುವದು ಬಹಳ ಸುಲಭವಿದ್ದದರಿಂದ, ಒಬ್ಬನ ಜಾಣತನದಿಂದಾಗಲಿ, ಸದ್ಗುಣದಿಂದಾಗಲಿ ಜನರಿಗೆ ಆಗುವ ಸುಖಕ್ಕಿಂತ, ದುಷ್ಟ ಮನುಷ್ಯನ ಮೂರ್ಖತನದಿಂದಲೂ, ದುರಾಚರಣದಿಂದಲೂ ಉಂಟಾಗುವ ದುಃಖವು ಹೆಚ್ಚಿರುತ್ತದೆ.

ರಾಜಪುತ್ರನು:— " ಲಗ್ನಮಾಡಿಕೊಳ್ಳುವದರ ಪರಿಣಾಮವು ಹೀಗಿದ್ದರೆ ನಾನು ಮದುವೆ ಮಾಡಿಕೊಂಡು ನನ್ನ ಸುಖದುಃಖವನ್ನು ಸಾಯುವ ವರೆಗೆ ಎರಡನೆಯವರ ಕೈಯಲ್ಲಿ ಕೊಡುವದು ಭಯಂಕರವಾದ ಸಂಗತಿಯೇ ಸರಿ. ಯಾಕಂದರೆ ದುರ್ದೈವದಿಂದ ಒಬ್ಬ ದುಷ್ಟ ಸ್ತ್ರೀಯು ನನ್ನ ಹೆಂಡತಿಯಾದರೆ, ಆಕೆಯು ತಪ್ಪಿನ ಸಲುವಾಗಿ ನಾನು ನನ್ನ ಜನ್ಮವನ್ನೆಲ್ಲ ದುಃಖದಲ್ಲಿಯೇ ಕಳೆಯಬೇಕಾದೀತು. "

ರಾಜಕನ್ನಿಕೆಯು:— " ಅಣ್ಣಾ! ನಿನ್ನಂತೆಯೇ ವಿಚಾರಮಾಡಿ ಲಗ್ನವಾಗದೆ ಒಂಟಿಗರಾಗಿರುವ ಎಷ್ಟೋ ಜನರನ್ನು ನಾನು ನೋಡಿದ್ದೇನೆ; ಆದರೆ ಅದರಿಂದ ಅವರ ಸುಖವು ಹೆಚ್ಚಾದದ್ದು ಮಾತ್ರ ನನಗೆ ಎಲ್ಲಿಯೂ ತೋರಿಬರಲಿಲ್ಲ. ಅಂದರೆ ಒಂಟಿಗರಾಗಿರುವದರಿಂದ ಅವರಿಗೆ ನಿಜವಾದ ಸುಖವಾಗುತ್ತಿದ್ದರೆ ಸಾವಿರಾರು ಜನರು ಅದೇ ಸ್ಥಿತಿಯನ್ನು ಬಯಸುತ್ತಿದ್ದರು. ಆದರೆ ಈಗಿನ ಸ್ಥಿತಿಯು ಹಾಗಿದ್ದಂತೆ ತೋರುವದಿಲ್ಲ. ಇಂಥ (ಒಂಟಿಗರು) ಜನರಿಗೆ ಜಗತ್ತಿನಲ್ಲಿ ಪ್ರೀತಿ ಮಾಡುವವರೂ, ಮಿತ್ರರೂ ಯಾರೂ ಇರುವದಿಲ್ಲಾದದರಿಂದ ಅವರು ಇಡೀ ದಿವಸವನ್ನು ಏನೂ ಕೆಲಸವಿಲ್ಲದೆ ವ್ಯರ್ಥವಾಗಿ ಕಳೆಯುತ್ತಾರೆ; ಯಾವಾಗಲೂ ಉದಾಸೀನರಾಗಿರುತ್ತಾರೆ. ಚಿಕ್ಕಮಕ್ಕಳು ಸಹ ಆಡದಂಥ ಆಟಗಳಲ್ಲಾಗಲಿ, ದುರ್ವ್ಯಸನದ ವಿಚಾರಗಳಲ್ಲಾಗಲಿ ತಮ್ಮ ಇಡೀ ಆಯುಷ್ಯದ ದಿವಸಗಳನ್ನು ಕಳೆಯುತ್ತಾರೆ. ತಾವು ಕೀಳರು, ಜನರೊಳಗೆ ತಮಗೆ ತಕ್ಕ ಮಾನ ದೊರೆಯುವದಿಲ್ಲೆಂಬ ವಿಚಾರವು ಸತತ ಅವರ ಮನಸ್ಸಿನಲ್ಲಿ ವಾಸಮಾಡಿರುತ್ತದೆ. ಆದರಿಂದ ಅವರ ಅಂತಃಕರಣವು ಯಾವಾಗಲೂ ದ್ವೇಷಮಯವಾಗಿರುತ್ತದೆ. ಅವರು ಜನರಿಗೆ ನಿಷ್ಕಾರಣವಾಗಿ ಕುಂದಿಡುತ್ತಾರೆ. ಮನೆಯಲ್ಲಿದ್ದಾಗ ಅವರು ಸಿಡುಕರೂ, ಶೀಘ್ರಕೋಪಿಗಳೂ ಆಗಿರುತ್ತಾರೆ; ಹೊರಗೆ ನಾಲ್ಕು ಜನರೊಳಗಿದ್ದಾಗ ಜನರ

ಗೃಹಕೃತ್ಯದ ಛಿದ್ರಗಳನ್ನು ಹುಡುಕಿ ತೆಗೆಯುವ ಸ್ವಭಾವದವರು ಅಂದರೆ ನಿಷ್ಕಾರಣ ಮತ್ಸರವುಳ್ಳವರಾಗಿರುತ್ತಾರೆ. ಸಂಸಾರ ಸುಖದಿಂದ ಬಹಿಷ್ಕೃತರಾದ ಈ ಜನರು ಪರರಿಗೆ ಆದ ಸುಖವನ್ನು ನೋಡಿ ದುಃಖಬಡುತ್ತಾರೆ. ಪರರ ಸಂತೋಷಾಮೃತದಲ್ಲಿ ವಿಷವನ್ನು ಬೆರಿಸಲಿಕ್ಕೆ ಇವರು ಯಾವಾಗಲೂ ಸಿದ್ಧರಾಗಿರುತ್ತಾರೆ. ಯಾವ ಮನುಷ್ಯನ ಹೃದಯವು ಪರದುಃಖವನ್ನು ಕಂಡು ದ್ರವಿಸುವದಿಲ್ಲವೋ, ಯಾವನ ಸಂಪತ್ತಿಯಿಂದ ಪರರಿಗೆ ಎಳ್ಳಷ್ಟು ಉಪಯೋಗವಾಗುವದಿಲ್ಲವೋ, ಯಾವನ ವಿಪತ್ತನ್ನು ನೋಡಿ ಯಾರೂ ಖೇದಪಡುವದಿಲ್ಲವೋ ಅಂಥ ಮನುಷ್ಯನ ಜನ್ಮವು ನಿರರ್ಥಕವಾದದ್ದೆನ್ನಬಹುದು!! ಇಂಥ ಮನುಷ್ಯನು ತನ್ನ ದಿವಸಗಳನ್ನು ಏಕಾಂತವಾಸದಲ್ಲಿ ಕಳೆಯುತ್ತಾನೆನ್ನುವದಕ್ಕಿಂತ, ನರಜಾತಿಯು ಅವನನ್ನು ಬಹಿಷ್ಕೃತ ಮಾಡಿರುತ್ತದೆಂದು ಹೇಳುವದು ಹೆಚ್ಚು ಉಚಿತವು!! ಸಾರಾಂಶ ಲಗ್ನ ಮಾಡಿಕೊಂಡವನಿಗೆ ಅನೇಕ ತೊಂದರೆಗಳೂ, ಕಷ್ಟಗಳೂ ಒದಗುತ್ತವೆಂಬದು ನಿರ್ವಿವಾದವಾದದ್ದು; ಆದರೆ ಒಂಟಿಗನಿಗಾದರೂ ಸುಖವುಂಟೋ? ಛೇ ಅವನಿಗಂತೂ ಸುಖಲೇಶವೂ ಇಲ್ಲ."

ರಾಸೆಲಾಸನು:— "ಹಾಗಾದರೆ ನಾವು ಇನ್ನು ಮುಂದೆ ಏನು ಮಾಡಬೇಕು? ನಾವು ಹೆಚ್ಚುಹೆಚ್ಚು ವಿಚಾರಮಾಡಿದ ಹಾಗೆ ನಮ್ಮ ಸಂಶಯಗಳು ಹೆಚ್ಚಾಗಿ ಏನು ನಿಶ್ಚಯ ಮಾಡಬೇಕೆಂಬದೇ ತಿಳಿಯಲೊಲ್ಲದು. ವಿಚಾರ ಮಾಡದೆ ಆದದ್ದಾಗಲಿ ಎಂದು ಸುಮ್ಮನೆ ಇರುವವನೇ ಜಾಣನೂ, ಸುಖಿಯೂ ಆಗಿರುವನೆಂದು ನನಗೆ ತೋರುತ್ತದೆ."

## ಇಪ್ಪತ್ತೇಳನೆಯ ಭಾಗವು.

### ದೊಡ್ಡತನದ ಬಗ್ಗೆ ವಿಚಾರ.

ಹಿಂದಿನ ಭಾಗದಲ್ಲಿ ವಿವರಿಸಿದಂತೆ ಸಂಭಾಷಣವು ಕೆಲವು ಹೊತ್ತು ಸಾಗಿತ್ತು. ಸಂಭಾಷಣವು ಮುಗಿದ ಬಳಿಕ ರಾಸೆಲಾಸನು ತನ್ನ ತಂಗಿಯ ಮಾತಿನ ವಿಷಯಕ್ಕೆ ಕೆಲವು ಹೊತ್ತು ವಿಚಾರಮಾಡಿ, ಕಡೆಗೆ ಆಕೆಗೆ ಅಂದನು "ತಂಗೀ, ಮಧ್ಯಮ ಸ್ಥಿತಿಯೊಳಗಿರುವ ಜನರ ಮತ್ತು ಒಂಟಿಗರಾಗಿರುವ ಜನರ ಸುಖದ ಬಗ್ಗೆ ನೀನು ಸೂಕ್ಷ್ಮ ಶೋಧವನ್ನು ಮಾಡಿರುತ್ತೀ, ಇದೇನು ಸುಳ್ಳಲ್ಲ. ಆದರೆ ನೀನು ಪಕ್ಷಾಂಧಳಾಗಿ ಆ ಶೋಧವನ್ನು ಮಾಡಿದಂತೆ ನನಗೆ ಕಾಣುತ್ತದೆ. ಆದದರಿಂದ ಅವರ ಸ್ಥಿತಿಯಲ್ಲಿಲ್ಲದ ದುಃಖಗಳು ನಿನಗೆ ಕಂಡು ಬಂದಿರಬಹುದು. ಇಮ್ಲಾಕನು ಆ ಸ್ಥಿತಿಯೊಳಗಿನ ಜನರಲ್ಲಿರುವ ದೋಷಗಳ ವರ್ಣನೆಯನ್ನು ಒಮ್ಮೆ ನನ್ನಮುಂದೆ

ಮಾಡಿದ್ದಾನೆ. ಆದರೆ ನಿನ್ನ ಈಗಿನ ವರ್ಣನೆಯನ್ನು ಕೇಳಿದರೆ, ಇವನ್ಹಾಕನ ವರ್ಣನೆಯು ಏನೂ ಅಲ್ಲೆಂದು ತೋರುತ್ತದೆ. ನಿನ್ನ ವರ್ಣನೆಯ ಮೇಲಿಂದ ನೋಡಿದರೆ, ನಾವು ಇಷ್ಟು ಕಷ್ಟಪಟ್ಟು ಶೋಧಮಾಡುವ ಸುಖವು ನಮಗೆ ಎಂದೂ ಸಿಕ್ಕಲಾರದೆಂದು ಕಾಣುತ್ತದೆ. ಸಾರಾಂಶ—ನಿನ್ನ ಮಾತು ಕೇವಲ ನಮ್ಮ ಮುಂದಿನ ಆಶಾಭಂಗವನ್ನು ಸೂಚಿಸತಕ್ಕದ್ದಾಗಿರುತ್ತದೆ, ಇರಲಿ. ಇನ್ನು ನನ್ನ ಶೋಧದಲ್ಲಿ ನನಗೆ ಸಂಭವಿಸಿದ ಸಂಗತಿಗಳನ್ನು ಹೇಳುತ್ತೇನೆ ಕೇಳು. ಮನಶ್ಶಾಂತಿಯು (ನಿಜವಾದ ಸುಖವು) ದೊಡ್ಡ ವೈಭವದಿಂದ ಇಲ್ಲವೆ ಅಧಿಕಾರದಿಂದ ಉಂಟಾಗಲಾರದೆಂದು ನಾನು ಮನಗಂಡಿದ್ದೇನೆ. ಯಾವನ ವೈಭವವೂ, ಅಧಿಕಾರವೂ ದೊಡ್ಡವಿರುತ್ತವೋ ಅವನ ಕರ್ತವ್ಯದ ವ್ಯಾಪ್ತಿಯೆಂದರೂ ದೊಡ್ಡದಿರಲಿಕ್ಕೆ ಬೇಕು. ಕರ್ತವ್ಯವು ಬಹಳ ಇದ್ದವನಿಗೆ ಶತ್ರುಗಳ ತಾಪವು ಹೆಚ್ಚು; ಆತನ ಯತ್ನಗಳು ನಿಷ್ಫಲವಾಗುವ ಸಂಭವವೂ ಬಹಳ. ಅನೇಕ ಜನರನ್ನು ತೃಪ್ತಿಪಡಿಸಬೇಕಾದಂಥ, ಮತ್ತು ಅನೇಕ ಜನರ ಮೇಲೆ ಅಧಿಕಾರ ನಡಿಸತಕ್ಕಂಥ ಮನುಷ್ಯನು ತನ್ನ ಯಾವತ್ತು ಕೆಲಸವನ್ನು ತಾನೊಬ್ಬನೇ ಮಾಡಲಾರನು. ಆದ್ದರಿಂದ ಅವನು ತನ್ನ ಕಾರ್ಯನಿರ್ವಾಹದ ಸಲುವಾಗಿ ಕೆಲವು ಸಹಾಯಕರನ್ನು ತೆಗೆದುಕೊಳ್ಳುವನು. ಅವರಲ್ಲಿ ಕೆಲವರು ದುಷ್ಟರೂ ಕಪಟಿಗಳೂ ಆಗಿರುತ್ತಾರೆ; ಕೆಲವರು ಅಜ್ಞಾನಿಗಳೂ, ಮೂರ್ಖರೂ ಆಗಿರುತ್ತಾರೆ; ಕೆಲವರು ತಮ್ಮ ದುಷ್ಟಬುದ್ಧಿಯಿಂದ ಅವನನ್ನು ಅಡ್ಡದಾರಿಗೆ ಒಯ್ಯುತ್ತಾರೆ; ಕೆಲವರು ಅವನ ನಾಶ ಮಾಡ ಹವಣಿಸುತ್ತಾರೆ; ಕೆಲವರು ಅವನ ವಿಶ್ವಾಸಘಾತಮಾಡಲುದ್ಯುಕ್ತರಾಗಿರುತ್ತಾರೆ. ಅವನು ಎಲ್ಲರನ್ನೂ ಸಂತೋಷಪಡಿಸಲಾರನೆಂಬದು ಸಹಜವೆ. ಅವನು ಒಬ್ಬನನ್ನು ಸಂತೋಷಪಡಿಸಿದರೆ ಬೇರೊಬ್ಬನು ಅಸಂತುಷ್ಟನಾಗುತ್ತಾನೆ. ಅವನಿಂದ ಯಾರಿಗೆ ಲಾಭವಾಗುವದಿಲ್ಲವೋ ಅವರು ಆತನು ಬೇಕೆಂದು ತಮ್ಮ ಹಾನಿ ಮಾಡುತ್ತಾನೆಂದು ತಿಳಿದು, ಅವನ ದ್ವೇಷ ಮಾಡಹತ್ತುತ್ತಾರೆ. ಅವನು ಎಲ್ಲರಿಗೂ ಉಪಕಾರ ಮಾಡಲಾರನೆಂಬದು ಸ್ಪಷ್ಟವಾದ ಸಂಗತಿಯೇ ಸರಿ. ಅವನು ಯಾರಿಗೆ ಉಪಕಾರ ಮಾಡುವದಿಲ್ಲವೋ ಅವರು ಅವನ ಮೇಲೆ ಸಿಟ್ಟಾಗುತ್ತಾರೆ; ಅಂದರೆ ಸಿಟ್ಟಾಗುವ ಜನರೇ ಬಹಳ."

ರಾಜಕನ್ನಿಕೆ—"ಯೋಗ್ಯ ಕಾರಣವಿಲ್ಲದೆ ಅಸಂತುಷ್ಟರಾಗಿರುವ ಜನರನ್ನು ನೋಡಿದರೆ ನನಗೆ ಅವರ ಬಗ್ಗೆ ತಿರಸ್ಕಾರ ಬುದ್ಧಿ ಹುಟ್ಟುತ್ತದೆ. ಅಂಥ ಅಸಂತೋಷವನ್ನು ಯಾವಾಗಲು ತಿರಸ್ಕರಿಸುವ ಸಾಮರ್ಥ್ಯವು ನನಗೆ ಇರಬೇಕೆಂತಲೂ ಅಂಥ ಅಸಂತುಷ್ಟ ಜನರನ್ನು ಶಿಕ್ಷಿಸುವಷ್ಟು ಶಕ್ತಿಯು ನಿನಗೆ ಇರಬೇಕೆಂತಲೂ ನಾನು ಬಯಸುತ್ತೇನೆ."

ರಾಜಪುತ್ರನು--"ಅಧಿಕಾರಿಯು ಒಳ್ಳೇ ನ್ಯಾಯದಿಂದಲೂ, ದಕ್ಷತೆಯಿಂದಲೂ ಸಾರ್ವಜನಿಕವಾದ (ಜನಸಮೂಹದ) ಕೆಲಸಗಳನ್ನು ನೆರವೇರಿಸುತ್ತಿದ್ದಾಗ್ಯೂ, ಅವನ ಕೈಕೆಳಗಿನ ಜನರೆಲ್ಲರೂ ಸಂತುಷ್ಟರಾಗಿರಲಾರರು. ಒಂದಿಲ್ಲೊಂದು ಕಾರಣದಿಂದ ಕೆಲವು ಜನರು ಅಸಂತುಷ್ಟರಾಗಿರುವರು. ಉದಾಹರಣಾರ್ಥ--ಅಧಿಕಾರಿಯು ಬೇಕಾದಷ್ಟು ಲಕ್ಷ್ಯಪೂರ್ವಕವಾಗಿ ತನ್ನ ಕಾರಭಾರವನ್ನು ನಡಿಸುತ್ತಿದ್ದಾಗ್ಯೂ, ಬಡವನೂ ಅಧಿಕಾರಿಯ ವಿರುದ್ಧಪಕ್ಷದಲ್ಲಿ ಸೇರಿದವನೂ ಆವಂಥ ಮನುಷ್ಯನಲ್ಲಿರುವ ಉತ್ತಮೋತ್ತಮವಾದ ಸದ್ಗುಣಗಳು ಅವನ (ಅಧಿಕಾರಿಯ) ಪ್ರತ್ಯಯಕ್ಕೆ ಬರುವದಿಲ್ಲ. ಮತ್ತು ಅಧಿಕಾರಿಯು ಬೇಕಾದಷ್ಟು ಬಲಾಢ್ಯನಿದ್ದಾಗ್ಯೂ ತನ್ನ ಕೈಕೆಳಗಿನ ಯಾವತ್ತು ಜನರಿಗೆ ಅವರವರ ಯೋಗ್ಯತೆಗೆ ಸರಿಯಾದ ಮಾನವನ್ನು ಅವರಿಗೆ ತಪ್ಪದೆ ಕೊಡಲಾರನು. ಯಾವ ಮನುಷ್ಯನಿಗೆ ತನ್ನ ಯೋಗ್ಯತಾನುಸಾರ ಮಾನ ದೊರೆಯುವದಿಲ್ಲವೋ ಅವನು ಆ ಅಧಿಕಾರಿಯ ಕಾರಭಾರವನ್ನು ನೋಡಿ ಅಸಂತುಷ್ಟನಾಗಿರುವದು ಸ್ವಾಭಾವಿಕವಾಗಿದೆ. ಒಬ್ಬ ಕಡಿಮೆ ಯೋಗ್ಯತೆಯುಳ್ಳ ಮನುಷ್ಯನಿಗೆ ಒಂದು ದೊಡ್ಡ ಅಧಿಕಾರವು ಪ್ರಾಪ್ತವಾದರೆ, ಅವನಿಗಿಂತಲೂ ದೊಡ್ಡ ಯೋಗ್ಯತೆಯುಳ್ಳ ಜನರು, ಅದು (ಅಧಿಕಾರವು) ಅವನಿಗೆ ಕೇವಲ ಅಧಿಕಾರಿಯ ಪಕ್ಷಪಾತದಿಂದ ಇಲ್ಲವೆ ಆತನ ಸ್ವಚ್ಛಂದವೃತ್ತಿಯಿಂದ ಸಿಕ್ಕಿತೆಂದು ತಿಳಿದುಕೊಳ್ಳುತ್ತಾರೆ. ಅಧಿಕಾರಿಯು ಬೇಕಾದಷ್ಟು ದೊಡ್ಡ ಮನಸ್ಸಿನವನೂ, ನಿಷ್ಪಕ್ಷಪಾತಿಯೂ, ಗುಣಗ್ರಾಹಿಯೂ ಇದ್ದಾಗ್ಯೂ, ತನ್ನ ಕೈಯಲ್ಲಿರುವ ಯಾವತ್ತು ಮಹತ್ವದ ಉದ್ಯೋಗಗಳನ್ನು ಯಾವಾಗಲೂ ಒಂದೇ ನಿಶ್ಚಿತವಾದ ನಿಯಮದಿಂದ ಯೋಗ್ಯತೆಯನ್ನು ಪರೀಕ್ಷಿಸಿ, ಪೂರ್ಣ ನ್ಯಾಯದಿಂದ ಯೋಗ್ಯ ಜನರಿಗೇ ಕೊಡುವನೆಂದು ತಿಳಿದುಕೊಳ್ಳುವದು ತುಸು ದಡ್ಡತನವೇ ಸರಿ. ಒಮ್ಮೊಮ್ಮೆ ಮೋಹಕ್ಕೊಳಗಾಗಿ, ಒಮ್ಮೊಮ್ಮೆ ಮಿತ್ರರ ಹೇಳಿಕೆಯ ಮೇಲಿಂದ ಅವನು ಯೋಗ್ಯತೆ ಇಲ್ಲದ ಜನರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಡುವನು; ಒಮ್ಮೊಮ್ಮೆ ಯಾವನಿಂದ ತನಗೆ ಎಳ್ಳಷ್ಟು ಉಪಯೋಗವಾಗುವ ಸಂಭವವಿಲ್ಲವೋ ಅಂಥ ಮನುಷ್ಯನನ್ನು ದೊಡ್ಡ ಯೋಗ್ಯತೆಗೆ ಏರಿಸಿ, ಅವನನ್ನು ತನ್ನ ಪ್ರೀತಿಪಾತ್ರನನ್ನಾಗಿ ಮಾಡಿಕೊಳ್ಳುವನು; ತನ್ನ ಪ್ರೀತಿಯ ಜನರಲ್ಲಿ ಎಲ್ಲತರದ ಸದ್ಗುಣಗಳೂ ಇರುತ್ತವೆಂದು ಅವನು ಕಲ್ಪಿಸುವನು. ಒಮ್ಮೊಮ್ಮೆ ಕೆಲವು ಜನರ ಪೂರ್ವಕೃತ ಉಪಕಾರವನ್ನು ಸ್ಮರಿಸಿ, ಅವರಲ್ಲಿ ಏನೂ ಯೋಗ್ಯತೆ ಇಲ್ಲದಿದ್ದರೂ, ಕೇವಲ ಅವರ ಮುಂಚಿನ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವದಕ್ಕಾಗಿಯೇ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡುವನು. ಅಂದರೆ ಒಮ್ಮೊಮ್ಮೆ ಮಿತ್ರರ ಹೇಳಿಕೆಗೂ,

ಒಮ್ಮೊಮ್ಮೆ ಲಂಚದ ಆಶೆಗೂ, ಒಮ್ಮೊಮ್ಮೆ ಮುಖಸ್ತುತಿಗೂ, ಒಮ್ಮೊಮ್ಮೆ ಬಿಸರಿ ಹೀನಸೇವೆಗೂ, ಮರುಳಾಗಿ ಅಯೋಗ್ಯ ಜನರಿಗೆ ದೊಡ್ಡ ಅಧಿಕಾರಗಳನ್ನು ಕೊಡುತ್ತಾನೆ."

"ಅನೇಕ ಕೆಲಸಗಳನ್ನು ಮಾಡುವ ಮನುಷ್ಯನು ತಪ್ಪುಗಳನ್ನು ಮಾಡೇ ಮಾಡುತ್ತಾನೆ, ಮತ್ತು ಆ ತಪ್ಪಿನಿಂದುಂಟಾದ ಫಲವನ್ನು ಅವನು ಅನುಭೋಗಿಸಲೇ ಬೇಕಾಗುತ್ತದೆ. ಒಂದುವೇಳೆ ಅವನು ತಪ್ಪಿಲ್ಲದೆ ಎಲ್ಲ ಕೆಲಸಗಳನ್ನು ಬಹಳ ಚನ್ನಾಗಿ ಮಾಡುತ್ತಾನೆಂದು ಕಲ್ಪಿಸಿದರೂ, ಅವನ ಕೃತ್ಯವನ್ನು ಒಳಿತೆನ್ನುವವರೂ, ಕೆಟ್ಟದೆನ್ನುವವರೂ ಹಲವರು ಇದ್ದೇಇರುತ್ತಾರೆ. ದುರ್ಜನರು ಸುಮ್ಮಸುಮ್ಮನೆ ಅವನ ಮೇಲೆ ತಪ್ಪು ಹೊರಿಸಿ, ಅವನ ದ್ವೇಷಮಾಡುತ್ತಾರೆ; ಒಮ್ಮೊಮ್ಮೆ ಸಜ್ಜನರು ಸಹ ತಪ್ಪು ತಿಳುವಳಿಕೆಯಿಂದ ಅವನ ಕೃತ್ಯಗಳಿಗೆ ಹೆಸರಿಡುತ್ತಾರೆ."

"ಅಂದಮೇಲೆ ನಿಜವಾದ ಸುಖವು ದೊಡ್ಡ ಜನರಲ್ಲಿರುವದಿಲ್ಲೆಂದು ಸ್ಪಷ್ಟವಾಗುತ್ತದೆ. ಅದು ರಾಜಮಂದಿರಗಳನ್ನೂ, ಸಿಂಹಾಸನಗಳನ್ನೂ ಬಿಟ್ಟು ದೂರ ಹೋಗಿರುತ್ತದೆ. ಅಲ್ಪಸಂತೋಷಿಯಾದ ಅಪ್ರಸಿದ್ಧ ಬಡವನ ಗುಡಿಸಲವೇ ಅದರ ಮುಖ್ಯ ವಾಸಸ್ಥಾನವಾಗಿರುತ್ತದೆಂದು ನನಗೆ ತೋರುತ್ತದೆ. ಯಾಕಂದರೆ, ಯಾವ ಮನುಷ್ಯನು ತನ್ನ ಶಕ್ತಿಮೀರಿದಂಥ ಕೆಲಸವನ್ನು ಎಂದೂ ಮಾಡುವದಿಲ್ಲವೋ, ಯಾವನು ತಾನು ಮಾಡತಕ್ಕಂಥ ಯಾವತ್ತು ಕೆಲಸಗಳನ್ನು ಸ್ವತಃ ಮಾಡಬಲ್ಲನೋ, ಇಲ್ಲವೆ ಎರಡನೆಯವರನ್ನು ಕೆಲಸಕ್ಕೆ ಹಚ್ಚಿದ್ದರೆ ಅವರು ಮಾಡುವ ಕೆಲಸವನ್ನು ಮನಮುಟ್ಟಿ ನೋಡುತ್ತಾನೋ, ಯಾವನು ಮೊದಲು ಜನರನ್ನು ಚನ್ನಾಗಿ ಪರೀಕ್ಷಿಸಿ, ಅವರ ಮೇಲೆ ನಂಬಿಗೆ ಇಡುತ್ತಾನೋ, ಯಾವನನ್ನು ಜನರು ಆತನ ಅಂಜಿಕೆಯಿಂದಾಗಲಿ, ಇಲ್ಲವೆ ದ್ರವ್ಯಲೋಭದಿಂದಾಗಲಿ, ವಂಚಿಸುವದಿಲ್ಲವೋ ಆ ಮನುಷ್ಯನಿಗೆ ಸದಾಸರ್ವಕಾಲ ಸಮಾಧಾನವೂ ಸೌಖ್ಯವೂ ಯಾಕೆ ಇರಲಿಕ್ಕಿಲ್ಲ? ಅವನ ಸೌಖ್ಯಕ್ಕೆ ಪ್ರತಿಬಂಧ ಮಾಡುವವರು ಯಾರು? ನಿಜವಾದ ಸುಖವನ್ನು ಅನುಭೋಗಿಸುವವನು ಅವನೇ. ಇಂಥ ಮನುಷ್ಯನು ಪರರ ಮೇಲೆ ಪ್ರೀತಿ ಮಾಡುತ್ತಾನೆ, ಪರರು ಅವನನ್ನು ಪ್ರೀತಿಸುತ್ತಾರೆ. ಇಂಥವನಿಗೆ ಪ್ರೀತಿಸುವದು, ಪ್ರೀತಿಸಲ್ಪಡುವದು, ಸದುಣಿಯಾಗಿರುವದು ಮತ್ತು ಸುಖಿಯಾಗಿರುವದು ಈ ಕೆಲಸಗಳ ಹೊರತು ಬೇರೆ ಕೆಲಸವೇ ಇರುವದಿಲ್ಲೆಂದು ನನಗೆ ತೋರುತ್ತದೆ"

ರಾಜಕನ್ನಿಕೆಯು ಅಂದಳು "ಪೂರ್ಣ ಸದಾಚಾರದಿಂದ ನಡೆಯುವವನಿಗೆ ಸಂಪೂರ್ಣ ಸೌಖ್ಯವು ತಪ್ಪದೆ ಉಂಟಾಗುತ್ತದೆಂಬ ನಿರ್ಣಯವನ್ನು ಈ ಜಗತ್ತಿನಲ್ಲಿ ಮಾಡುವದು ಬಹು ಕಷ್ಟವು. ಮನುಷ್ಯನ ಸದಾಚಾರದ ಮಾನದಿಂದ

ಅವರಿಗೆ ಸುಖವಾಗುವದಿಲ್ಲೆಂದು ನಿಃಸಂಶಯವಾಗಿ ಹೇಳಬಹುದು. ಸಜ್ಜನರೂ ದುರ್ಜನರೂ ಒಂದೇ ಸವನೆ ಆಧಿಭೌತಿಕ ದುಃಖಗಳನ್ನು, ಯಾವತ್ತು ರಾಜಕೀಯ ಸಂಕಟಗಳನ್ನು ಅನುಭೋಗಿಸಬೇಕಾಗುತ್ತದೆ. ಬರಗಾಲದಲ್ಲಿ ಸಜ್ಜನರೂ ದುರ್ಜನರೂ ಕೂಡೇ ಉಪವಾಸ ಬೀಳಬೇಕಾಗುತ್ತದೆ. ರಾಜ್ಯದಲ್ಲಿ ಬಣಗಳುಂಟಾದರೆ ಅವುಗಳ ಬಡಿದಾಟದಲ್ಲಿ ಇಬ್ಬರ ಹಾನಿಯು ಒಂದೇ ಸವನಾಗುತ್ತದೆ. ಜಲಪರ್ಯಟನ ಮಾಡುವಾಗ ಸಮುದ್ರದಲ್ಲಿ ಬಿರುಗಾಳಿ ಹುಟ್ಟಿ, ಹಡಗವು ಮುಳುಗಹತ್ತಿದರೆ, ಆ ಹಡಗವೊಳಗಿನ ಸಜ್ಜನರೂ ಸಾಯುತ್ತಾರೆ, ದುರ್ಜನರೂ ಸಾಯುತ್ತಾರೆ. ದೇಶದ ಮೇಲೆ ಪರಚಕ್ರ ಬಂದರೆ, ಸಜ್ಜನರೂ ಕೇಡಿಗೊಳಗಾಗುತ್ತಾರೆ, ದುರ್ಜನರೂ ಕೇಡಿಗೊಳಗಾಗುತ್ತಾರೆ. ಸದಾಚರಣದಿಂದ ನಡೆಯುವವನಿಗೆ ಆಗುವ ಮುಖ್ಯ ಲಾಭವು ಯಾವದೆಂದರೆ-ಅವನ ಅಂತಃಕರಣವು ನಿರ್ಮಲವಿರುವದರಿಂದ ಅವನ ಮನಸ್ಸು ಅವನನ್ನು ತಿನ್ನುವದಿಲ್ಲ; ಮತ್ತು ತನ್ನ ಸದಾಚರಣದ ಯೋಗದಿಂದ ಮುಂದೆ ತನಗೆ ಅತ್ಯಂತ ಸೌಖ್ಯವಾಗುವದೆಂಬ ವಿಚಾರವು ಅವನ ಮನಸ್ಸಿನಲ್ಲಿ ಬಂದು ಅವನಿಗೆ ಒಳ್ಳೇ ಸಮಾಧಾನವಾಗುತ್ತದೆ. ಅದರಿಂದ ಈ ಸಂಸಾರದಲ್ಲುಂಟಾಗುವ ಎಂಥ ಸಂಕಟಗಳನ್ನಾಗಲಿ ತಾಳಿಕೊಳ್ಳುವಷ್ಟು ಸಹನಶೀಲತೆಯು ಅವನಲ್ಲಿ ಹುಟ್ಟುತ್ತದೆ. ಸಹನಶೀಲತೆ ಹುಟ್ಟಬೇಕಾದರೆ ಅವನು ದುಃಖಗಳನ್ನು ಅನುಭೋಗಿಸಲಿಕ್ಕೇ ಬೇಕೆಂಬದು ನಿರ್ವಿವಾದದ ಮಾತೆಂಬದನ್ನು ಮರೆಯಲಾಗದು."

## ಇಪ್ಪತ್ತೆಂಟನೆಯ ಭಾಗವು.

ರಾಸೆಲಾಸ ಮತ್ತು ನಿಕಾಯಾ ಇವರ ಭಾಷಣವು ಮುಂದೆ ಸಾಗಿದ್ದು.

ರಾಜಪುತ್ರನುಃ—"ತಂಗೀ! ಸಾಧಾರಣ ಜನರ ಸಂಸಾರದ ಅನೇಕ ಪ್ರಕಾರಗಳಲ್ಲಿ ಗುಣಗಳು ಯಾವವು? ದೋಷಗಳು ಯಾವವು? ಎಂಬ ಸಂಗತಿಯನ್ನು ವಿಚಾರ ಮಾಡುವ ಪ್ರಸಂಗದಲ್ಲಿ ಇಡೀ ಜಗತ್ತಿನ ಮೇಲೆ ಸಂಭವಿಸತಕ್ಕವು, ರಾಜ್ಯಕ್ರಾಂತಿ ಮುಂತಾದ ಅತಿಶಯ ದುಃಖವನ್ನುಂಟು ಮಾಡುವ ಸಂಗತಿಗಳ ಉದಾಹರಣೆಯನ್ನು ಕೊಟ್ಟೆ. ಅದರಿಂದ ನಿನ್ನ ಭಾಷಣದಲ್ಲಿ ಅತಿಶಯೋಕ್ತಿಯ ದೋಷವುಂಟಾಯಿತೆಂದು ನನಗೆ ತೋರುತ್ತದೆ; ಯಾಕಂದರೆ ನೀನು ಹೇಳಿದ ದುಃಖಗಳ ವರ್ಣನೆಯು ಕೇವಲ ಪುಸ್ತಕಗಳಲ್ಲಿಯೇ ಜನರಿಗೆ ದೃಷ್ಟಿಗೋಚರವಾಗುತ್ತದಲ್ಲದೆ ಸಂಸಾರದಲ್ಲಿ ಪ್ರತ್ಯಕ್ಷ ಅನುಭವಕ್ಕೆ ಬರುವದಿಲ್ಲ. ಮತ್ತು ಈ ತರದ ಅರಿಷ್ಟಗಳು ಬಹಳ ಭಯಂಕರವಿರುವದರಿಂದ ದಯೆಯುಳ್ಳ ಪರಮೇಶ್ವ

ರನು ಅವುಗಳ ಪ್ರಸಂಗವನ್ನು ಜನರ ಮೇಲೆ ಕ್ವಚಿತ್ತಾಗಿಯೇ ತರುತ್ತಾನೆ. ಸಂಸಾರದಲ್ಲಿ ಅನುಭವಕ್ಕೆ ಬಾರದಂಥ ದುಃಖಗಳನ್ನು ಕೇವಲ ಕಲ್ಪನೆಯಿಂದ ಯೋಚಿಸಿ, ಅವುಗಳ ಬಗ್ಗೆ ಖೇದಪಡುತ್ತ ಕೂಡ್ರುವದು ಉಚಿತವಲ್ಲ. ಕೆಲವು ಜನರು ಕ್ಷುಲ್ಲಕವಾದ ಕಾರಣಗಳ ಮೇಲಿಂದ (ಹಿಂದೆ ಜೆರುಸಲೇಮಕ್ಕೆ ಧರ್ಮಯುದ್ಧ ಕ್ರೋಸ್ಕರ ಮುತ್ತಿಗೆಗಳನ್ನು ಹಾಕಿದಂತೆ) ಪರದೇಶದ ಅರಸರು ದಾಳಿ ಮಾಡುತ್ತಾರೆಂತಲೂ, ಬರಗಾಲವು ಬೀಳುತ್ತದೆಂತಲೂ, ಪಿಡುಗು ಹುಟ್ಟುವದೆಂತಲೂ, ಒಳ್ಳೇ ವಾಕ್ಪಟುತ್ವದಿಂದ ಅಜ್ಞಾನಿ ಜನರಿಗೆ ಹೇಳಿ ಅವರನ್ನು ಅಂಜಿಸುತ್ತಾರೆ. ಈ ತರದ ಅವರ ವರ್ಣನವೂ ಅವರ ಅತಿಶಯೋಕ್ತಿಯೂ ನನ್ನ ಮನಸ್ಸಿಗೆ ಎಳ್ಳಷ್ಟು ಬರುವದಿಲ್ಲ. ಈ ಮೇರೆಗೆ ಮುಗ್ಧ ಜನರನ್ನು ಅಂಜಿಸುವದು ಒಳ್ಳೇ ಭೂಷಣವೆಂದು ಅವರು ತಿಳಿದುಕೊಳ್ಳುತ್ತಾರೆ. ಆದರೆ ಅವರ ಅಪ್ರಯೋಜಕವಾದ ಮತ್ತು ಭೀತಿಯನ್ನು ಬೀರುವ ಭಾಷಣವು ಏನೂ ಉಪಯೋಗಕರವಲ್ಲವೆಂದು ನನಗೆ ಕಾಣುತ್ತದೆ."

"ನಿಶ್ಚಯವಾಗಿ ಸಂಭವಿಸತಕ್ಕಂಥ, ಅನಿವಾರ್ಯವಾದ ಆಧಿಭೌತಿಕ ಸಂಕಟಗಳು ಸಂಭವಿಸಿ ಇಡಿ ದೇಶವೆಲ್ಲ ಹಾಳಾಗಿ ಹೋಗುವಾಗ್ಯೆ ಮನುಷ್ಯನ ವಿಚಾರಶಕ್ತಿಯನ್ನು ಯಾರು ಕೇಳುವರು? ಅವನು ವಿಚಾರಮಾಡಲಿ, ಮಾಡದಿರಲಿ, ಆಗತಕ್ಕ ಸಂಗತಿಯು ಆಗೇ ಆಗುತ್ತದೆ. ಅವನು ಬಂದ ಸಂಕಟಗಳನ್ನು ಅನುಭೋಗಿಸಲಿಕ್ಕೆ ಬೇಕು. ಆದರೆ ಈ ಮಹಾ ಸಂಕಟಗಳಿಂದ ಜನರಿಗೆ ಎಷ್ಟು ಭಯ ತೋರುತ್ತದೋ ಅಷ್ಟು ದುಃಖವು ಅವರಿಗೆ ಆಗುವದಿಲ್ಲೆಂಬುದು ಸ್ಪಷ್ಟವದೆ. ಯಾಕಂದರೆ ಅಂಥ ಮಹಾ ಸಂಕಟದಲ್ಲಿ ಸಾವಿರಾರು ಜನರು ಕಣ್ಣುಮುಚ್ಚಿ ಕಣ್ಣು ತೆರೆಯುವದರೊಳಗೆ ಮಹಾ ಮೃತ್ಯುವಿನ ಬಾಯಿಯಲ್ಲಿ ಪಟಪಟನೆ ಬೀಳುವಾಗ ದುಃಖಬಡುವದಕ್ಕೆ ಅವಕಾಶವು ಎಲ್ಲಿಯದು? ಇದೇ ಮಾತು ರಾಜಕೀಯ ಸಂಕಟಗಳಿಗೂ ಹತ್ತುತ್ತದೆ. ಹ್ಯಾಗಂದರೆ ಅರಸನು ಕ್ರೂರನಿರಲಿ, ಶಾಂತನಿರಲಿ, ಅವನ ಸೈನ್ಯವು ವೈರಿಗಳನ್ನು ಗೆದ್ದು, ಅವರ ಬೆನ್ನು ಹತ್ತಿರಲಿ, ಇಲ್ಲವೆ ಸೋತು ಓಡಿ ಹೋಗುತ್ತಿರಲಿ, ಹ್ಯಾಗಿದ್ದರೂ ಸಾಧಾರಣ ಜನರ ಸುಖದುಃಖಗಳಲ್ಲಿ ಏನೂ ಹೆಚ್ಚು ಕಡಿಮೆಯಾಗುವದಿಲ್ಲ. ತಾರುಣ್ಯದಲ್ಲಿ, ಊರ್ಜಿತಾವಸ್ಥೆಯಲ್ಲಿ, ಮುಪ್ಪಿನಲ್ಲಿ, ಮತ್ತು ನೀಚಾವಸ್ಥೆಯಲ್ಲಿ ಇರುವಂಥ ಸಾವಿರಾರು ಜನರಿಗೆ ಸಂಸಾರಸಂಬಂಧದ ಕೆಲವು ಕ್ಷುಲ್ಲಕ ಸಂಕಟಗಳಲ್ಲದೆ ಬೇರೆ ಸಂಕಟಗಳು ಅವರ ಕನಸುಮನಸ್ಸಿನಲ್ಲಿ ಸಹ ಬರುವದಿಲ್ಲ. ರಾಜ್ಯದಲ್ಲಿ ಬೇಕಾದಂಥ ಹೆಚ್ಚುಕಡಿಮೆಗಳಾಗಲಿ, ಆಗದಿರಲಿ, ರಾಯಭಾರಿಗಳು ಪರದೇಶದಲ್ಲಿ ಸಂಧಿವಿಧಾನ (ಒಪ್ಪಂದ) ಮುಂತಾದ ರಾಜಕಾರ್ಯಗ

ಳಲ್ಲಿ ತೊಡಗಿರಲಿ, ತೊಡಗದೆ ಇರಲಿ, ಕಮ್ಮಾರನು ತನ್ನ ಉದ್ಯೋಗವನ್ನು ಎಡೆಬಿಡದೆ ನಡಿಸಿರುತ್ತಾನೆ ; ಒಕ್ಕಲಿಗನು ವಾಡಿಕೆಯಂತೆ ತನ್ನ ಹೊಲ ಹರಗುತ್ತಾನೆ; ಜೀವಧಾರಣಕ್ಕೆ ಅವಶ್ಯವಾದ ಒಡವೆಗಳು ಅವರಿಗೆ ದಿನದಂತೆ ಬೇಕಾಗುತ್ತವೆ; ಮತ್ತು ಅವು ದೊರಕಿಸಲ್ಪಡುತ್ತವೆ ; ಋತುಗಳು ತಮ್ಮ ವಾಡಿಕೆಯ ಕೆಲಸಗಳನ್ನು ತಪ್ಪದೆ ಮಾಡುತ್ತವೆ ; ಇದರಲ್ಲೇನೂ ಹೆಚ್ಚುಕಡಿಮೆಯಾಗುವದಿಲ್ಲ. ”

“ ಯಾವ ಸಂಗತಿಯು ಎಂದೂ ಸಂಭವಿಸುವದಿಲ್ಲವೊ, ಮತ್ತು ಸಂಭವಿಸುವಾಗ ಅದರ ಮುಂದೆ ಮನುಷ್ಯನ ವಿಚಾರವೇನೂ ನಡೆಯುವದಿಲ್ಲವೊ, ಅಂಥ ಸಂಗತಿಯ ವಿಷಯಕ್ಕೆ ವಿಚಾರಮಾಡುವದನ್ನು ಇನ್ನುಮೇಲೆ ಬಿಟ್ಟುಬಿಡೋಣ. ಸೃಷ್ಟ ಪದಾರ್ಥಗಳ ನಿಯಮಗಳಲ್ಲಿ ಹೆಚ್ಚುಕಡಿಮೆ ಮಾಡುವದು, ಇಲ್ಲವೆ ರಾಜ್ಯವ್ಯವಸ್ಥೆಯು ಈ ತರವಾಗಿರಬೇಕೆಂದು ಗೊತ್ತುಮಾಡುವದು ನಮ್ಮ ಕೈಯೊಳಗಿನ ಮಾತಲ್ಲ. ನಮ್ಮಂಥ ಸಾಧಾರಣ ಮನುಷ್ಯರು 'ಹ್ಯಾಗೆ ವರ್ತಿಸಬೇಕು, ಯಾವ ರೀತಿಯಿಂದ ನಡೆದರೆ ಹಿತವಾಗುವದು, ಹ್ಯಾಗೆ ನಡೆದರೆ ಲಾಭವಾಗುವದು, ಯಾವ ರೀತಿಯಿಂದ ನಡೆದರೆ ಹಾನಿಯಾಗುವದು, ಮುಂತಾದ್ದರ ಬಗ್ಗೆ ಚನ್ನಾಗಿ ವಿಚಾರಮಾಡಿ ಪ್ರತಿಯೊಬ್ಬನು, ತನ್ನ ಸ್ಥಿತಿಯನ್ನನುಸರಿಸಿ-ಆ ಸ್ಥಿತಿಯು ಬೇಕಾದಷ್ಟು ಕೀಳತರದ್ದು ಇರಬಲ್ಲದೇಕೆ— ತನ್ನ ಹಿತವನ್ನು ಮಾಡಿಕೊಳ್ಳಬೇಕು. ತನ್ನ ಕೈಲಾದಮಟ್ಟಿಗೆ ಪ್ರತಿಯೊಬ್ಬನು ಪರೋಪಕಾರವನ್ನು ಮಾಡಬೇಕು. ಇದೇ ಮನುಷ್ಯನ ಕರ್ತವ್ಯವು. ”

“ ಲಗ್ನಮಾಡಿಕೊಳ್ಳುವದು ಮನುಷ್ಯನ ಸ್ವಭಾವಕ್ಕೆ ಅನುಸರಿಸಿಯೇ ಇರುತ್ತದೆ. ಸ್ತ್ರೀಪುರುಷರು ಪರಸ್ಪರ ಜತೆಗಾರರಾಗಿರಬೇಕೆಂದು ಸೃಷ್ಟಿಯ ನಿಯಮವಿದ್ದಂತೆ ತೋರುತ್ತದೆ. ಆದದರಿಂದ ವಿವಾಹವು ಮನುಷ್ಯನ ಸುಖಪ್ರಾಪ್ತಿಗೆ ಮುಖ್ಯ ಸಾಧನವಾಗಿರುವದೆಂದು ನನಗೆ ಕಂಡುಬರುತ್ತದೆ. ”

ರಾಜಕನ್ನಿಕೆಯು ಅಂದಳು—“ ಮನುಷ್ಯನಿಗೆ ದುಃಖದಾಯಕವಾದ ಅನೇಕ ಸಂಗತಿಗಳೊಳಗೆ ಲಗ್ನವೂ ಒಂದಾಗಿರುತ್ತದೆಂದು ನನಗೆ ತೋರುತ್ತದೆ. ನನ್ನ ಶೋಧದಲ್ಲಿ ನನಗೆ ಕಂಡುಬಂದದ್ದೇನಂದರೆ— ಒಂದುಕಡೆ ಗಂಡಹೆಂಡರ ಸ್ವಭಾಗಳು ವಿರುದ್ಧವಾಗಿರುವದರಿಂದಾಗಲಿ, ಇಲ್ಲವೆ ಅವರ ತಿಳುವಳಿಕೆಗಳು ತೀರ ಭಿನ್ನವಿರುವದರಿಂದಾಗಲಿ, ಅವರಿಬ್ಬರ ನಡುವೆ ಕದನವೆಸಗುತ್ತದೆ; ಮತ್ತೊಂದು ಕಡೆ ಇಬ್ಬರೂ ಸದ್ಗುಣಿಗಳಿರುತ್ತಾರೆ; ಆದರೆ ಅವರ ಸದ್ಗುಣಗಳು ಕೇವಲ ವಿಪರೀತವಾಗಿರುತ್ತವೆ. ಮತ್ತೊಂದು ಕಡೆ ಇಬ್ಬರೂ ಚನ್ನಾಗಿ ನಡೆಯುತ್ತಿದ್ದಾಗ್ಯೂ ಒಮ್ಮೊಮ್ಮೆ ಅವರಿಬ್ಬರದು ತಾಳಬೀಳುವದಿಲ್ಲ. ಬೇರೊಂದು ಕಡೆ ಕನಸುಮನಸ್ಸಿ

ನಲ್ಲಿ ಸಹ ಇಲ್ಲದಂಥ ಅಕಲ್ಪಿತ ಕಾರಣಗಳಿಂದ ಆಜನ್ಮ, ಅವರಲ್ಲಿ ದ್ವೇಷಭಾವವು ಉಂಟಾಗುತ್ತದೆ. ಈ ಮೇರೆಗೆ ಗಂಡಹೆಂಡರಲ್ಲಿ ಜಗಳವನ್ನುಂಟುಮಾಡುವ ನಾನಾ ಪ್ರಕಾರದ ಕಾರಣಗಳು ಮನಸ್ಸಿನಲ್ಲಿ ಬಂದವೆಂದರೆ ನನಗೆ ಬಹಳ ಖೇದವಾಗುತ್ತದೆ. ಮತ್ತು ಅನೇಕ ದೇಶಗಳೊಳಗಿನ ಶಾಸ್ತ್ರಜ್ಞರು ಲಗ್ನವು ಶಾಸ್ತ್ರಸಮ್ಮತವಲ್ಲ; ಆದರೆ ಶಾಸ್ತ್ರಕರ್ತರು ಲಗ್ನಮಾಡಿಕೊಳ್ಳಲಿಕ್ಕೆ ತಮ್ಮ ಅನುಜ್ಞೆಯನ್ನು ಮಾತ್ರ ಕೊಟ್ಟಿರುತ್ತಾರೆ. ಅಂದರೆ ಒಂಟಿಗನಾಗಿರುವದು ಉತ್ತಮ ಪಕ್ಷ ಆದರೆ ಮನೋನಿಗ್ರಹವನ್ನುಮಾಡಲಾರದವರು ಮಾತ್ರ ಲಗ್ನಮಾಡಿಕೊಳ್ಳಬೇಕು. (ಲಗ್ನ ಮಾಡಿಕೊಳ್ಳುವದು ಕೇವಲ ಗೌಣಪಕ್ಷವು)—ಎಂದು ಹೇಳುವ ಮಾತು ನನಗೆ ನಿಜವಿದ್ದಂತೆ ತೋರುತ್ತದೆ."

ರಾಸೆಲಾಸನು ಅಂದನು—"ತಂಗೀ! ಇದೇ ಈಗ ಲಗ್ನ ಮಾಡಿಕೊಳ್ಳದೆ ಒಂಟಿಗನಾಗಿರುವದು ಬಹಳ ದುಃಖದಾಯಕವಾದದ್ದೆಂದು ನೀನು ಹೇಳಲಿಲ್ಲವೆ? ಅದನ್ನು ಇಷ್ಟರಲ್ಲಿಯೇ ಮರೆತುಬಿಟ್ಟೆಯೇನು? ಇನ್ನು ಎರಡೂ ಸ್ಥಿತಿಗಳು (೧ ಲಗ್ನ ಮಾಡಿಕೊಳ್ಳುವದು ೨ ಮಾಡಿಕೊಳ್ಳದೆ ಇರುವದು) ದುಃಖದಾಯಕವಿರಬಹುದು; ಆದರೆ ಅವೆರಡರಲ್ಲಿ ಒಂದು ಮತ್ತೊಂದಕ್ಕಿಂತ ದುಃಖದಾಯಕವಾಗಿರಲಾರದು. ಒಂದಕ್ಕೊಂದು ವಿರುದ್ಧವಾದ ತಪ್ಪು ತಿಳುವಳಿಕೆಗಳು ಮನಸ್ಸಿನಲ್ಲಿ ಸೇರಿದವೆಂದರೆ ಅವೆಲ್ಲ ಒಂದಕ್ಕೊಂದು ತಾಕಲಾಡಿ, ತಮಗೆ ತಾವೇ ನಾಶ ಹೊಂದಿ, ಸತ್ಯಪ್ರವೇಶಕ್ಕೆ ಮಾರ್ಗವನ್ನುಂಟು ಮಾಡುತ್ತವೆಂದು ನನ್ನ ಬುದ್ಧಿಗೆ ತೋರುತ್ತದೆ."

ರಾಜಕನ್ನಿಕೆಯು ಅಂದಳು—"ಅಣ್ಣಾ! ನಾನು ಮುಂಚೆ ಆಡಿದ ಮಾತಿನಲ್ಲಿಯೂ, ಈಗ ಆಡಿದ ಮಾತಿನಲ್ಲಿಯೂ ವಿರೋಧವಿರುತ್ತದೆಂದು ನೀನು ತೋರಿಸಿದಿ. ಆದರೆ ಆ ವಿರೋಧವು, ನನಗೆ ಆ ವಿಷಯದ ಪೂರ್ಣ ಜ್ಞಾನವಿಲ್ಲದ್ದರಿಂದಲೇ ಉಂಟಾಗಿದೆ. ಹೀಗಿದ್ದು ಕೇವಲ ನನ್ನ ಮಾತಿನಲ್ಲಿ ವಿರೋಧವಿರುತ್ತದೆಂಬದರ ಮೇಲಿಂದಲೇ ನನ್ನ ಮಾತು ಸುಳ್ಳು ಇರುತ್ತದೆಂಬ ಅನುಮಾನವನ್ನು ನೀನು ತೆಗೆದೀಯೆಂದು ನನಗೆ ಎಂದೂ ತೋರಿರಲಿಲ್ಲ. ಅತಿ ವಿಸ್ತಾರವಾದಂಥ ಮತ್ತು ಅನೇಕ ಭಾಗಗಳುಳ್ಳಂಥ ಪದಾರ್ಥವನ್ನು ಒಮ್ಮೆಲೇ ನೋಡುವದು ಕಣ್ಣಿಗೆ ಹ್ಯಾಗೆ ಅಸಾಧ್ಯವೋ, ಹಾಗೆ ತಿಳಿದುಕೊಳ್ಳುವದಕ್ಕೆ ಮನಸ್ಸಿಗೂ ಅಸಾಧ್ಯವೇ ಸರಿ. ಒಂದು ವಿಷಯವು ಸಂಪೂರ್ಣವಾಗಿ ನಮಗೆ ಕಂಡರೆ ಇಲ್ಲವೆ ಅದು ನಮ್ಮ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಿದರೆ ಮಾತ್ರ, ಅದರ ಬೇರೆ ಬೇರೆ ಭಾಗಗಳಲ್ಲಿರುವ ಗುಣದೋಷಗಳ ಜ್ಞಾನವು ಸ್ಪಷ್ಟವಾಗಿ, ಗ್ರಾಹ್ಯಾಗ್ರಾಹ್ಯಗಳ ನಿರ್ಣಯವು ಚನ್ನಾಗಿ

ಆಗುತ್ತದೆ. ಆದರೆ ಲಗ್ನ ಮಾಡಿಕೊಳ್ಳುವದರಿಂದ ಇಲ್ಲವೆ ಮಾಡಿಕೊಳ್ಳದಿರುವದರಿಂದ ಉಂಟಾಗುವ ಸುಖದುಃಖಗಳು, ಅನೇಕ ಸಂಗತಿಗಳಿಗೆ ಸಂಬಂಧಿಸಿರುವದರಿಂದ ಅವುಗಳ ಯಥಾರ್ಥ ಜ್ಞಾನವು ಅನುಭವಿಕ ಜನರಿಗೂ ಕೂಡ ಆಗುವ ಸಂಭವವಿಲ್ಲ. ಇಂಥ ವಿಚಾರ ಮಾಡಬೇಕಾದರೆ ಒಮ್ಮೆಲೇ ಸಂಪೂರ್ಣ ವಿಷಯದ ಬಗ್ಗೆ ವಿಚಾರಮಾಡದೆ, ಆ ವಿಷಯದಲ್ಲಿ ಅನೇಕ ಭಾಗಗಳನ್ನು ಕಲ್ಪಿಸಿ, ಬೇರೆಬೇರೆ ಭಾಗದ ವಿಷಯಕ್ಕೆ ವಿಚಾರಮಾಡಿದರೆ ಮಾತ್ರ, ಆ ವಿಷಯದ ಜ್ಞಾನವು ನಮಗೆ ಚನ್ನಾಗಿ ಆಗುವದು. ಮತ್ತು ಆಯಾ ಭಾಗದ ಬಗ್ಗೆ ವಿಚಾರ ಮಾಡುವಾಗ ಒಮ್ಮೆ ಒಂದು ಭಾಗವು ಮನಸ್ಸಿಗೆ ಗ್ರಾಹ್ಯವಾಗಿ ತೋರುತ್ತದೆ; ಮತ್ತೊಮ್ಮೆ ಬೇರೊಂದು ಭಾಗವು ಗ್ರಾಹ್ಯವಾಗಿ ತೋರುತ್ತದೆ. ಈ ತರದ ಸ್ಥಿತಿಯು ದೊಡ್ಡದೊಡ್ಡ ಪಂಡಿತರಿಗೂ ಸಹ ಆಗುತ್ತದೆ; ಅಂದಮೇಲೆ ಜಗತ್ತಿನ ಅನುಭವವು ಏನೂ ಇಲ್ಲದಂಥ ನಮಗೆ ಈ ತರದ ಸ್ಥಿತಿಯು (ಅಂದರೆ ಒಮ್ಮೆ ಲಗ್ನ ಮಾಡಿಕೊಂಡರೆ ದುಃಖವುಂಟಾಗುತಲೂ, ಮತ್ತೊಮ್ಮೆ ಒಂಟಿಗನಾಗಿರುವದು ದುಃಖದಾಯಕವೆಂತಲೂ) ಪ್ರಾಪ್ತವಾದರೆ ಆಶ್ಚರ್ಯವೇನು? ರಾಜನೀತಿ, ನೀತಿಶಾಸ್ತ್ರ ಮುಂತಾದ ಗಹನವಾದಂಥ ವಿಷಯಗಳ ವಿಚಾರಮಾಡುವಾಗ, ಆ ವಿಷಯಗಳ ಪೂರ್ಣ ಜ್ಞಾನವು ಒಮ್ಮೆಲೇ ನಮಗೆ ಆಗದ್ದರಿಂದ, ನಮ್ಮ ಅಭಿಪ್ರಾಯಗಳಲ್ಲಿಯೂ, ಎರಡನೆಯವರ ಅಭಿಪ್ರಾಯಗಳಲ್ಲಿಯೂ, ಹ್ಯಾಗೆ ವಿರೋಧ ಉಂಟಾಗುತ್ತದೋ, ಹಾಗೆ ಒಮ್ಮೊಮ್ಮೆ ನಮ್ಮ ಸ್ವಂತದ ಎರಡು ಅಭಿಪ್ರಾಯಗಳಲ್ಲಿ ಸಹ ವಿರೋಧ ಉಂಟಾಗುವ ಸಂಭವವಿರುತ್ತದೆ. ಆದರೆ ಅದೇ ಸಂಖ್ಯಾಶಾಸ್ತ್ರದಲ್ಲಿ (ಗಣಿತ, ಭೂಮಿತಿ) ಇಡೀ ವಿಷಯದ ಆಕಲನವು ಎಲ್ಲರಿಗೂ ಒಂದೇ ಸವನೆ ಆಗುವದರಿಂದ ಅವರ ವಿಷಯಕ್ಕೆ ಎಲ್ಲರ ಅಭಿಪ್ರಾಯಗಳು ಒಂದೇ ತರದವು ಇರುತ್ತವೆ. ವಿರೋಧವು ಎಂದೂ ಉಂಟಾಗುವದಿಲ್ಲ."

ರಾಜಪುತ್ರನು ಅಂದನು:—ತಂಗೀ! ಮೊದಲೇ ನಾವು ದುಃಖಗಳಲ್ಲಿ ಮುಳುಗಿದ್ದೇವೆ. ನಾವು ಜಗಳಾಡಿ ಆ ದುಃಖಗಳಲ್ಲಿ ಮತ್ತೊಂದು ದುಃಖವನ್ನು ಕೂಡಿಸುವದು ಯೋಗ್ಯವಲ್ಲ. ಯಾಕಂದರೆ ನನ್ನ ಮಾತನ್ನು ಸೋಲಿಸುವದಕ್ಕಾಗಿ ನೀನು, ಇಲ್ಲವೆ ನಿನ್ನ ಮಾತನ್ನು ಸೋಲಿಸುವದಕ್ಕಾಗಿ ನಾನು, ಈ ಉದ್ದೇಶದಿಂದ ನಾವು ಇಲ್ಲಿಗೆ ಬಂದಿಲ್ಲ. ಆದರೆ ನಿಜವಾದ ಸುಖವು ಎಲ್ಲಿರುತ್ತದೆಂಬದನ್ನು ಹುಡುಕುವದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಕ್ಷುಲ್ಲಕವಾದ ವಾಗ್ವಾದವನ್ನು ಮಾಡುವದರಿಂದೇನಾಗುವದು? ನಮ್ಮ ಯತ್ನವು ಸಿದ್ಧಿಸಿದರೆ ನಮ್ಮಿಬ್ಬರಿಗೆ ಸಮವಾಗಿ ಸುಖವೂ, ನಮ್ಮ ಪ್ರಯತ್ನವು ಸಿದ್ಧಿಸದಿದ್ದರೆ ನಮ್ಮಿಬ್ಬರಿಗೆ ಸಮವಾಗಿ ದುಃಖವೂ ಉಂಟಾಗು

ತ್ತವೆ. ಆದದರಿಂದ ನಾವು ಒಬ್ಬರಿಗೊಬ್ಬರು ಬಡದಾಡದೆ ಸಹಾಯರಾಗೋಣ. ಲಗ್ನಮಾಡಿಕೊಳುವದರಿಂದ ಮನುಷ್ಯನಿಗೆ ಕೆಲವು ದುಃಖಗಳುಂಟಾಗುತ್ತವೆ, ಇಷ್ಟೇಕಾರಣದಿಂದ ಲಗ್ನಮಾಡಿಕೊಳ್ಳುವದು ಉತ್ತಮವಲ್ಲೆಂದು ನೀನು ಹೇಳುತ್ತಿ. ಇದು ನಿನ್ನ ತಪ್ಪು ತಿಳುವಳಿಕೆ ಇರುತ್ತದೆಂದು ನನಗೆ ತೋರುತ್ತದೆ. ಯಾಕಂದರೆ ನೀನೇ ನೋಡು, ನಿನ್ನ ಮಾತು ನಿಜವೆಂದು ತಿಳಿದರೆ ಮನುಷ್ಯ-ಜೀವಿತ್ವದಲ್ಲಿಯೂ! ಕೆಲವು ಅನಿವಾರ್ಯವಾದ ಕೇಡುಗಳಿರುತ್ತವಾದದರಿಂದ ಜೀವವು ಈಶ್ವರದತ್ತವಾದದ್ದಲ್ಲೆಂದು ನೀನು ಅಂದಂತಾಗುವದು. ಲಗ್ನಮಾಡಿಕೊಳ್ಳದಿದ್ದರೆ ಜಗತ್ತಿನೊಳಗೆ ಜನರಾದರೂ ಹ್ಯಾಗೆ ಹೆಚ್ಚಾದಾರು? ಜಗತ್ತೆಲ್ಲ ಹಾಳು ಬಿದ್ದೀತು.

ರಾಜಪುತ್ರಿಯು ಉತ್ತರಕೊಟ್ಟಳು. "ಜಗತ್ತಿನಲ್ಲಿ ಜನರು ಹ್ಯಾಗೆ ಹೆಚ್ಚಾದಾರೆಂಬ ಚಿಂತೆಯು ನನಗೇಕೆ? ನೀನೂ ಆ ಚಿಂತೆಯನ್ನು ಮಾಡುವ ಕಾರಣವಿಲ್ಲ. ನಾವಿಬ್ಬರು ಲಗ್ನಮಾಡಿಕೊಳ್ಳುವದು ಉತ್ತಮವಾದದ್ದಲ್ಲೆಂದು ಗೊತ್ತುಮಾಡಿದರೆ ನಮ್ಮ ಮಾತಿನ ಮೇಲೆ ನಂಬಿಗೆಯನ್ನಿಟ್ಟು ಈಗ ಜಗತ್ತಿನಲ್ಲಿದ್ದ ಜನರು ಲಗ್ನಮಾಡಿಕೊಳ್ಳುವದನ್ನು ಬಿಟ್ಟಾರು, ಅವರು ಹಾಗೆ ಮಾಡಿದರೆ ಜಗತ್ತೆಲ್ಲ ಮುಳುಗಿ ಹೋದೀತು ಎಂಬ ಅಂಜಿಕೆಯು ನನಗೆ ಎಳ್ಳಷ್ಟಿಲ್ಲ. ಇಡೀ ಜಗತ್ತಿನ ಅವಶ್ಯಕತೆಯು ನಮಗೆ ಬೇಕಾಗಿಲ್ಲ; ನಮ್ಮಷ್ಟಕ್ಕೆ ನಾವು ವಿಚಾರ ಮಾಡಿದರೆ ಸಾಕು."

## ಇಪ್ಪತ್ತೊಂಬತ್ತನೆಯ ಭಾಗವು.

### ಲಗ್ನ ವಿಷಯದ ವಾದವು ಮುಂದೆ ಸಾಗಿದ್ದು.

ರಾಸೆಲಾಸನು ಅನ್ನುತ್ತಾನೆ:—"ತಂಗೀ! ಇಡೀ ವರ್ಗಕ್ಕೆ ಹಿತಕರವಾದದ್ದು, ಆ ವರ್ಗದ ಪ್ರತಿಯೊಂದು ಭಾಗಕ್ಕೆ ಹಿತಕರವಾಗಿರಲಿಕ್ಕೆಬೇಕೆಂದು ಸಾಧಾರಣ ನಿಯಮವದೆ. ಇದೇ ಮೇರೆಗೆ ಲಗ್ನಮಾಡಿಕೊಳ್ಳುವದು ಮನುಷ್ಯವರ್ಗಕ್ಕೆ ಹಿತಕರವಿರುವದೆಂದ ಮೇಲೆ ಪ್ರತಿಯೊಬ್ಬ ವ್ಯಕ್ತಿಗೂ (ಮನುಷ್ಯನಿಗೂ) ಅದು ಹಿತಕರವಾಗಿರಲಿಕ್ಕೆಬೇಕು. ಹೀಗಿರದಿದ್ದರೆ ವಾಡಿಕೆಯು ಅನಿವಾರ್ಯವಾದಂಥ ಕರ್ತವ್ಯವು ಪರಪೀಡೆಗೆ ಕಾರಣವಿರುವದೆಂದು ಹೇಳಿದಂತಾಗುವದು. ಹ್ಯಾಗಂದರೆ, ಮನುಷ್ಯವರ್ಗದೊಳಗಿನ ಅನೇಕ ಜನರ ಸುಖದ ಸಲುವಾಗಿ ಬೇರೆ ಕೆಲವರು ಯಾವಾಗಲೂ ದುಃಖವನ್ನು ಅನುಭೋಗಿಸಬೇಕಾಗುವದು. (ಹೀಗಾದರೆ ಸೃಷ್ಟಿಕರ್ತನ ವ್ಯವಸ್ಥೆಗೆ ಕುಂದುಬರುವದೆಂಬ ಅರ್ಥ.) ಲಗ್ನಮಾಡಿಕೊಳ್ಳೋಣ, ಮತ್ತು

ಒಂಟಿಗನಾಗಿರೋಣ ಈ ಎರಡು ಸ್ಥಿತಿಗಳನ್ನು ಪರಿಶೀಲಿಸಿ ನೋಡಿ ನೀನು ತೆಗೆದ ಸಿದ್ಧಾಂತವೇನೆಂದರೆ:—ಒಂಟಿಗನಾದವನಿಗೆ ದುಃಖವು ತಪ್ಪದೆ ಆಗುತ್ತದೆ; ಲಗ್ನ ಮಾಡಿಕೊಂಡವನಿಗೆ ಕೆಲವು ಪ್ರಸಂಗಗಳಲ್ಲಿ ದುಃಖವುಂಟಾದರೂ ಆ ದುಃಖವನ್ನು ದೂರಮಾಡಲಿಕ್ಕೆ ಹಲವು ಸಾಧನಗಳಿರುತ್ತವೆ." ಒಂಟಿಗನಿಗೆ ಉಂಟಾಗುವ ದುಃಖಗಳನ್ನು ಹೋಗಲಾಡಿಸುವದು ಅಸಾಧ್ಯವು. ವಿವೇಕದಿಂದಲೂ, ಜಾಣತನದಿಂದಲೂ, ಒಳ್ಳೇ ವಿಚಾರಮಾಡಿ ಲಗ್ನಮಾಡಿಕೊಂಡರೆ ಅದರಿಂದ ನಿಶ್ಚಯವಾಗಿ ಸುಖವಾಗುವದೆಂದು ನಾನು ಖಂಡಿತವಾಗಿ ಅನ್ನದಿರಲಾರೆನು. ಕೆಲವು ಜನರು ವಿವಾಹದಿಂದ ಸುಖವಾಗುವದಿಲ್ಲೆಂದು ಸುಮ್ಮನೆ ಗುಣಗುಟ್ಟುತ್ತಾರೆ. ಆದರೆ ಸುಖವಾಗದಿರುವದರ ಮೂಲಕಾರಣವನ್ನು ಹುಡುಕಹೋದರೆ ಕೇವಲ ಅವರ ಮೂರ್ಖತನವೇ ಅವರ ದುಃಖಕ್ಕೆ ಮೂಲಕಾರಣವಾಗಿರುತ್ತದೆಂದು ಕಂಡು ಬರುತ್ತದೆ. ಯಾಕಂದರೆ ಅವರು ತಾರುಣ್ಯದ ಭರದಲ್ಲಿ ನೆಟ್ಟಗೆ ವಿಚಾರ ಮಾಡದೆ ಲಗ್ನಮಾಡಿಕೊಳ್ಳುತ್ತಾರೆ; ಆಗ ಅವರ ವಿಚಾರವು ಪರಿಪಕ್ವವಾಗಿರುವದಿಲ್ಲ; ಕಾಮವಾಸನೆಯು ಪ್ರಬಲವಾಗಿರುತ್ತದೆ; ಒಳ್ಳೆಯದು ಯಾವದು? ಕೆಟ್ಟದು ಯಾವದು? ಎಂಬದರ ನಿರ್ಣಯಮಾಡುವ ಸಾಮರ್ಥ್ಯವು ಅವರಲ್ಲಿರುವದಿಲ್ಲ; "ದೂರದೃಷ್ಟಿ" ಎಂದರೇನೆಂಬದು ಅವರ ಕನಸಿನಲ್ಲಿ ಸಹ ಗೊತ್ತಿರುವದಿಲ್ಲ; ತಮ್ಮ ವಿಚಾರಗಳು ತಮ್ಮ ಭಾವೀಪತ್ನಿಯ ವಿಚಾರಗಳು, ಸ್ವಭಾವ, ತಿಳುವಳಿಕೆ, ವರ್ತನೆ ಆಚರಣ ಮುಂತಾದವುಗಳು ಒಂದೇ ತರದವು ಇವೆಯೋ ಭಿನ್ನವಾಗಿವೆಯೋ ಎಂಬದರ ಬಗ್ಗೆ ತುಸು ಸಹ ವಿಚಾರಮಾಡುವದಿಲ್ಲ; ಈ ತರದ ಅವ್ಯವಸ್ಥಿತವಾದ ಲಗ್ನದಿಂದ ದುಃಖವುಂಟಾದರೆ ಅದೇನಾಶ್ಚರ್ಯ? ದುಃಖವುಂಟಾಗದಿದ್ದರೆ ಮಾತ್ರ ಅರಿದು."

"ಲಗ್ನವು ಕೂಡಿಬರುವ ಸಾಧಾರಣವಾದ ರೀತಿಯು ಮುಂದೆ ವಿವರಿಸಿದಂತೆ ಇರುತ್ತದೆ. ಒಬ್ಬ ತರುಣ ಪುರುಷನೂ, ಒಬ್ಬ ತರುಣ ಸ್ತ್ರೀಯೂ, ದೈವಯೋಗದಿಂದ ಒತ್ತಟ್ಟಿಗೆ ಕೂಡುತ್ತಾರೆ; ಇಲ್ಲವೆ ಹಾಗೆ ಕೂಡುವ ಪ್ರಸಂಗವನ್ನು ತರುತ್ತಾರೆ. ಆಮೇಲೆ ಅವರಿಬ್ಬರು ಒಬ್ಬರೊಬ್ಬರನ್ನು ಓರೆನೋಟದಿಂದ ನೋಡುತ್ತಾರೆ. ಶಿಷ್ಟಸಂಪ್ರದಾಯಾನುಸಾರವಾಗಿ ನಮಸ್ಕಾರ ಮುಂತಾದ ಉಪಚಾರಗಳಾಗುತ್ತವೆ. ಇಷ್ಟಾದ ಬಳಿಕ ಅವರು ಮನೆಗೆ ಹೋಗುತ್ತಾರೆ. ಮನೆಗೆ ಹೋದಮೇಲೆ ಅವರು ತರುಣರೂ, ಅಜ್ಞಾನಿಗಳೂ, ಇರುವದರಿಂದಲೂ, ಮನೋರಂಜನ ಮಾಡಿಕೊಳ್ಳುವದಕ್ಕೆ ಹೆಚ್ಚಿನ ಸಾಧನಗಳಿಲ್ಲದ್ದರಿಂದಲೂ, ಈ ಹೊಸ ಸ್ನೇಹದಿಂದಲೇ ತಮಗೆ ಒಳ್ಳೇ ಸುಖವಾಗುವದೆಂದು ತಿಳಿದುಕೊಂಡು,

ಅದರ ವಿಷಯಕ್ಕೆ ವಿಚಾರ ಮಾಡುತ್ತ ಕೂಡ್ರುತ್ತಾರೆ. ಕಡೆಗೆ ತಮ್ಮಿಬ್ಬರ ಲಗ್ನವಾದರೆ ತಮಗೆ ಚಿರಕಾಲ ಸುಖವಾಗಿ ತಮ್ಮ ಜನ್ಮ ಸಾರ್ಥಕ್ಯವಾಗುತ್ತದೆ; ಇಲ್ಲದಿದ್ದರೆ ತಮ್ಮ ಜನ್ಮವು ವ್ಯರ್ಥವೆಂದು ತಿಳಿದುಕೊಳ್ಳುತ್ತಾರೆ. ತರುವಾಯ ಅವರಿಬ್ಬರ ವಿವಾಹವಾಗುತ್ತದೆ. ಆದರೆ ಕೆಲವು ದಿವಸಗಳಲ್ಲಿಯೇ ಅವರ ಅನ್ಯೋನ್ಯನ್ಯ ಪ್ರೇಮವು ಇಲ್ಲದಂತಾಗುತ್ತದೆ. ಆಗ ತಾವು ಚೆನ್ನಾಗಿ ವಿಚಾರ ಮಾಡದೆ ಲಗ್ನ ಮಾಡಕೊಂಡೆವೆಂದು ಅವರಿಗೆ ತಿಳಿಯುತ್ತದೆ; ಆದರೆ ಆಗ ತಿಳಿದು ಏನು ಪ್ರಯೋಜನವು? ಅವರು ದುಃಖದಲ್ಲಿಯೇ ತಮ್ಮ ಆಯುಷ್ಯವನ್ನು ಕಳೆಯುತ್ತಾರೆ; ಮತ್ತು ತಮ್ಮ ಅವಿಚಾರಕ್ಕೆ ಹೆಸರಿಡದೆ ದೈವವನ್ನೇ ನಿಂದಿಸುತ್ತಾರೆ."

ಈ ತರದ ಅಲ್ಪವಯಸ್ಸಿನಲ್ಲಾಗುವ ವಿವಾಹಗಳ ಪರಿಣಾಮವೇನಂದರೆ, ಮಕ್ಕಳು ತಾಯಿತಂದೆಗಳಿಗೆ ಎದುರಾಳಿಗಳಾಗುತ್ತಾರೆ. ತಂದೆಯು ಸಂಸಾರ ಸುಖಕ್ಕೆ ಬೇಸತ್ತು ಅದನ್ನು ಬಿಟ್ಟುಬಿಡುವ ಪೂರ್ವದಲ್ಲಿಯೇ ಆತನ ಜೋಡಿಗೆ ಮಗನು ಸಂಸಾರ ಸುಖಾನುಭವವನ್ನು ತೆಗೆದುಕೊಳ್ಳಲಿಕ್ಕೆ ಸಿದ್ಧನಾಗುತ್ತಾನೆ. ಒಂದೇ ವಸ್ತುವಿನ ಬಗ್ಗೆ ಪರಸ್ಪರ ಹೋರಾಟವು ನಡಿಯುಹತ್ತಿತೆಂದರೆ ಒಬ್ಬರಿಗೂ ಪೂರ್ಣ ಸುಖವಾಗುವದಿಲ್ಲ. ಆದದರಿಂದ ಮಗನಿಗೂ ತಂದೆಗೂ ವಿರೋಧವುಂಟಾಗುತ್ತದೆ. ಇದೇವೇಳೆಗೆ ತಾಯಿಯು ತಾರುಣ್ಯದ (ಮುಬ್ಬು) ಮದವು ಗಲಿತವಾಗಿರುವದಿಲ್ಲ. ಆಕೆಯು ಒನಪು ಇನ್ನೂ ಕಡಿಮೆಯಾಗಿರುವದಿಲ್ಲ. ಆಕೆಯ ಒಯ್ಯಾರವು ಇನ್ನೂ ಹೋಗಿರುವದಿಲ್ಲ, ಇಷ್ಟರಲ್ಲಿಯೇ ಮಗಳು ತಾಯಿಯ ಜೋಡಿಗೆ ಬರುತ್ತಾಳೆ- ಇದು ಆಕೆಗೆ ಸಹನವಾಗುವದಿಲ್ಲ. ಪ್ರತಿಬ್ಬಳು ತನಗೆ ಎದುರಾಳಿಗಳಾರೂ ಇರಬಾರದೆಂತಲೂ, ತಾನೊಬ್ಬಳೇ ಇರಬೇಕೆಂತಲೂ ಬಯಸುತ್ತಾಳೆ. ಹೀಗಾಗಿ ಇಬ್ಬರಲ್ಲಿಯೂ ದ್ವೇಷಭಾವವು ನೆಲೆಗೊಳ್ಳುತ್ತದೆ.

"ಲಗ್ನಸಂಬಂಧವು ಅವಸಾನಪರ್ಯಂತವಾಗಿ ಇರುವದರಿಂದ ಚನ್ನಾಗಿ ವಿಚಾರಮಾಡಿ ಮಾಡಿಕೊಳ್ಳಬೇಕು. ಈ ಕೆಲಸಕ್ಕೆ ಅವಸರವು ಉಪಯೋಗವಿಲ್ಲ. ಅವಸರಮಾಡದೆ ಪೂರ್ಣ ವಿಚಾರದಿಂದಲೂ, ವಿವೇಕದಿಂದಲೂ ಲಗ್ನ ಮಾಡಿಕೊಂಡರೆ ಮೇಲೆ ಹೇಳಿದ ತೊಂದರೆಗಳಾವವೂ ಉಂಟಾಗದೆ ಪೂರ್ಣ ಸೌಖ್ಯವಾಗುವದು. ತಾರುಣ್ಯದಲ್ಲಿ ಮನುಷ್ಯನವೃತ್ತಿಯು ಉಲ್ಹಾಸಕರವಾದದ್ದೂ ಆನಂದಮಯವಾದದ್ದೂ ಇದ್ದದರಿಂದ ಅವನು ಒಂಟಿಗನಿದ್ದಾಗ್ಯೂ ತನ್ನ ವೇಳೆಯನ್ನು ಸಂತೋಷದಿಂದ ಕಳೆಯಬಹುದು. ತುಸು ತಡೆದು ಲಗ್ನವಾಗುವದರಿಂದ ಮತ್ತೊಂದು ಲಾಭವೇನಂದರೆ, ಲಗ್ನಮಾಡಿಕೊಳ್ಳುವವನು ಪ್ರೌಢನೂ, ಜಗತ್ತಿನೊಳಗಿನ ಅನೇಕ ಸಂಗತಿಗಳನ್ನು ಅರಿತವನೂ, ಅನುಭವಿಕನೂ,

ಜಾಣನೂ ಆಗಿರುವದರಿಂದ ಅವನ ಬುದ್ಧಿಯು ಪರಿಪಕ್ವವಾಗಿರುತ್ತದೆ. ಆದದ್ದ ರಿಂದ ಹೆಚ್ಚು ಶೋಧಮಾಡಲಿಕ್ಕೂ ಹೆಚ್ಚು ಜಾಣತನದಿಂದ ಸದ್ಗುಣಿಯಾದ ಹೆಂಡತಿಯನ್ನು ಹುಡುಕುವದಕ್ಕೂ ಅವನಿಗೆ ಅನುಕೂಲವಾಗುತ್ತದೆ. ಒಂದು ವೇಳೆ ಮೇಲೆ ವಿವರಿಸಿದ ಲಾಭಗಳೇನೂ ಆಗದಿದ್ದರೂ ತಾಯಿತಂದೆಗಳು ಒಳ್ಳೇ ಮುದುಕರಾಗಿರುವದರಿಂದಲೂ, ಅವರ ಸಂಸಾರದ ಹಂಬಲವು ಕಡಿಮೆಯಾಗಿರು ವದರಿಂದಲೂ, ಮಕ್ಕಳ ಮತ್ತು ತಾಯಿತಂದೆಗಳ ನಡುವೆ ವಿರೋಧವುಂಟಾಗುವ ದಿಲ್ಲೆಂಬ ಸಂಗತಿಯು ನಿರ್ವಿವಾದವಾದದ್ದು."

ನಿಕಾಯೂ ಅಂದಳು "ತರ್ಕದಿಂದ ಕಂಡುಹಿಡಿಯಲಸಾಧ್ಯವಾದಂಥ, ಮತ್ತು ಅನುಭವಹೀನರಾದ ನಮಗೆ ಗೊತ್ತಿಲ್ಲದಂಥ ಸಂಗತಿಗಳ ಬಗ್ಗೆ ಎರಡನೇಯವರು ಹೇಳಿದ ಪ್ರಮಾಣಗಳನ್ನೇ ನಾವು ಮನ್ನಿಸಲಿಕ್ಕೆಬೇಕು. ತಡವಾಗಿ ಲಗ್ನಮಾಡಿ ಕೊಂಡ ದಂಪತಿಗಳಿಗೆ ಅಷ್ಟು ಸುಖವಾಗುವದಿಲ್ಲೆಂದು ಜನರು ಅನ್ನುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಲಗ್ನಮಾಡುವದು ಹಿತಕರವೋ ದೊಡ್ಡವರಾದ ಬಳಿಕ ಲಗ್ನಮಾಡು ವದು ಹಿತಕರವೋ ಎಂಬುದನ್ನು ನಿಶ್ಚಯಿಸುವದು ಬಹು ಮಹತ್ವದ ಸಂಗತಿಯಾ ಗಿರುತ್ತದೆ. ಆದದರಿಂದ ನಾನು ಒಳ್ಳೇ ಚತುರರೂ, ದೂರದೃಷ್ಟಿಯುಳ್ಳವರೂ, ಬಹಳ ಬಲ್ಲವರೂ, ಅನುಭವಿಕರೂ ಆದ ಎಷ್ಟೋ ಜನರ ಮುಂದೆ ಈ ವಿಷಯದ ಪ್ರಸ್ತಾಪವನ್ನು ತೆಗೆದು, ಅದರ ಬಗ್ಗೆ ಅವರ ಅಭಿಪ್ರಾಯಗಳನ್ನು ಕೇಳಿನೋಡಿ ದ್ದೇನೆ. ಒಟ್ಟಿಗೆ ಎಲ್ಲರ ಅಭಿಪ್ರಾಯಗಳನ್ನು ವಿಚಾರಿಸಿ ನೋಡಲಾಗಿ, ಪ್ರೌಢವಿ ವಾಹವು ಹಿತಕರವಾದದ್ದೂ, ಸುಖದಾಯಕವಾದದ್ದೂ, ಅಲ್ಲೆಂದು ತೋರಿಬಂತು. ಅವರು ಅಂದದ್ದೇನಂದರೆ:—ಇಂಥಾದ್ದೊಂದು ರೀತಿಯಿಂದ ನಡೆಯಬೇಕೆಂದು ಗೊತ್ತುಮಾಡಿದಂಥ, ತಮ್ಮ ಅಭಿಪ್ರಾಯಗಳು ಇಂಥವು ಇರಬೇಕೆಂದು ನಿಶ್ಚಯಿಸಿ ದಂಥ, ನಿಕಟವಾದ ಸ್ನೇಹಸಂಬಂಧವನ್ನು ಮಾಡಿದಂಥ, ಆಯುಷ್ಯದಲ್ಲಿಯ ತಮ್ಮ ವರ್ತನಕ್ರಮವು ಈ ತರದ್ದು ಇರಬೇಕೆಂದು ನಿರ್ಧಾರ ಮಾಡಿದಂಥ, ಬಹಳ ದಿವಸಗಳ ವರೆಗೆ ಮನಬಂದಂತೆ ಸುಖೋಪಭೋಗಗಳನ್ನು ತೆಗೆದುಕೊಂಡಂಥ, ಪ್ರೌಢ ಸ್ತ್ರೀಪುರುಷರು ಲಗ್ನಮಾಡಿಕೊಂಡು, ತಮ್ಮ ಜನ್ಮದ ಸುಖವನ್ನು ಒಬ್ಬರ ಕೈಯಲ್ಲೊಬ್ಬರು ಕೊಡುವದು ಬಹು ಗಂಡಾಂತರದ ಸಂಗತಿಯು."

"ಜಗತ್ತಿನಲ್ಲಿ ಸ್ವತಂತ್ರತೆಯಿಂದ ನಡೆಯಲಪೇಕ್ಷಿಸುವ ಇಬ್ಬರು ಮನುಷ್ಯರ ವರ್ತನಕ್ರಮವು ಒಂದೇ ತರದ್ದು ಎಂದೂ ಇರಲಾರದು. ಒಮ್ಮೆ ಒಂದು ಬಗೆಯ ಬಳಕೆಯಿಂದ (ಚಟದಿಂದ) ಮನುಷ್ಯನಿಗೆ ಸುಖವಾಗಹತ್ತಿತೆಂದರೆ ಅವನು ಆ ಬಳಿ ಕೆಯನ್ನು ಎಂದೂ ಯಾರ ಸಲುವಾಗಿಯೂ ಬಿಡುವದಿಲ್ಲ, ಚಿಕ್ಕಂದಿನಲ್ಲಿ ಮನು.

ಷ್ಯನ ಒಲವು ಇಂಥಾದ್ದರ ಕಡೆಗೇ ಇರುತ್ತದೆಂದು ನಿಶ್ಚಯಿಸಲಿಕ್ಕೆ ಬರುವದಿಲ್ಲ. ಆದರೆ ಪ್ರೌಢವಯಸ್ಸಿನಲ್ಲಿ ಅವನ ಒಲವು ನಿಶ್ಚಯ ಸ್ವರೂಪವನ್ನು ಹೊಂದುತ್ತದೆ; ಅವನು ಒಂದು ನಿಶ್ಚಿತವಾದ ಮಾರ್ಗದಿಂದ ನಡೆಯಹತ್ತುತ್ತಾನೆ ; ಮತ್ತು ದೃಢ ನಿಶ್ಚಯದಿಂದ ಆ ಮಾರ್ಗವನ್ನೇ ಹಿಡಿದು ಹೋಗುವದರಿಂದ ಅವನಿಗೆ ಆನಂದವಾಗುತ್ತದೆ. ಆದದರಿಂದ ಆ ಮಾರ್ಗವನ್ನು ಬಿಡುವದು ಅವನಿಗೆ ಸೇರುವದಿಲ್ಲ ; ಒತ್ತಾಯದಿಂದ ಅವನ್ನು ಬಿಡಲಿಕ್ಕೆ ಪ್ರಯತ್ನ ಮಾಡಬೇಕಾದರೆ ಅವನಿಗೆ ನಾಚಿಕೆ ಬರುತ್ತದೆ. ಇನ್ನು ಪ್ರೌಢ ವಯಸ್ಸಿನಲ್ಲಿ ಲಗ್ನಮಾಡಿಕೊಂಡ ಸ್ತ್ರೀಪುರುಷರು ಒಬ್ಬರಿಗೊಬ್ಬರು ಯೋಗ್ಯ ಮಾನ ಕೊಡಬೇಕೆಂದು ಬಯಸಬಹುದು. ಆದರೆ ಅವರ ಅಪೇಕ್ಷೆಯಂತೆ ಕಾರ್ಯವು ಮಾತ್ರ ಆಗುವದಿಲ್ಲ. ಯಾಕಂದರೆ ಅವರ ಸ್ವಭಾವಗಳು ಮುಂಚಿತವಾಗಿಯೇ ಸಿದ್ಧವಾಗಿ ಹೋಗಿರುತ್ತವೆ ; ಪರಸ್ಪರ ಪ್ರೀತಿ ಕೂಡಬೇಕಾದರೆ ಪ್ರತಿ ಒಬ್ಬರ ಸ್ವಭಾವದಲ್ಲಿ ಅವಶ್ಯವಾಗಿ ಆಗತಕ್ಕ ಬದಲು ಅವರ ಸ್ವಭಾವದಲ್ಲಿ ಆಗುವದಿಲ್ಲ. ಬಹಳ ದಿವಸ ರೂಢವಾದ ಚಟಗಳನ್ನು ಬಿಟ್ಟುಕೊಡುವದು ಬಹು ಕಠಿಣವದೆ. ಚಿಕ್ಕಂದಿನಿಂದ ರೂಢವಾದ ಚಟವನ್ನು ಬಿಟ್ಟುಕೊಡುವದಕ್ಕೆ ಪ್ರಯತ್ನಮಾಡುವ ಮನುಷ್ಯನ ಯತ್ನಗಳೆಲ್ಲ ನಿಷ್ಫಲವಾಗುತ್ತವೆ. ಅಂದಮೇಲೆ ತನ್ನ ಹಿತದ ಸಲುವಾಗಿ ತನ್ನ ಪೂರ್ವದ ಸ್ವಭಾವವನ್ನು ಬಿಡದವನು ಪರರ ಹಿತದ ಇಲ್ಲವೆ ಸೌಖ್ಯದ ಸಲುವಾಗಿ ಅವನ್ನು ಬಿಡುವನೆ? ಅಸಂಭವವು. ”

ಈ ಮೇರೆಗೆ ಮಾತಾಡುತ್ತಿರುವ ರಾಜಪುತ್ರಿಯು ಮಾತು ಮುಗಿಯುವದಕ್ಕಿಂತ ಮೊದಲೇ ರಾಜಪುತ್ರನು—“ ತಂಗೀ, ಸತಿಪತಿಯರನ್ನು ಆರಿಸುವಾಗ ಅವಶ್ಯವಾಗಿ ಲಕ್ಷದಲ್ಲಿಡತಕ್ಕ ಸಂಗತಿಯನ್ನು ನೀನು ತೀರ ಮರೆತಂತೆ ಕಾಣುತ್ತದೆ. ನಾನಂತೂ ಲಗ್ನಮಾಡಿಕೊಳ್ಳಬೇಕಾದರೆ ಎಲ್ಲಕ್ಕೂ ಮುಂಚೆ ನಾನು ಮದುವೆಮಾಡಿಕೊಳ್ಳತಕ್ಕ ಸ್ತ್ರೀಯು ವಿವೇಕದಿಂದ ನಡೆಯುವಂಥವಳು ಇದ್ದಾಳೋ, ಇಲ್ಲವೋ, ಎಂಬದನ್ನು ತಿಳಿದುಕೊಂಡು ಆ ಮೇಲೆ ಉಳಿದ ಮಾತಿನ ಬಗ್ಗೆ ವಿಚಾರಮಾಡುವೆನು. ”

ನಿಕಾಯಾ ಅಂದಳು—“ ದೊಡ ದೊಡ್ಡ ತತ್ವಜ್ಞಾನಿಗಳು ಸಹ ಸಂಸಾರ ಸಂಬಂಧದ ಸಂಗತಿಗಳ ಬಗ್ಗೆ ವಿಚಾರಮಾಡುವಾಗ, ಇದೇ ಮೇರೆಗೆ ಮೋಸ ಹೋಗುತ್ತಾರೆ. ನಿತ್ಯದ ವ್ಯವಹಾರದೊಳಗಿನ ( ಸಂಸಾರದೊಳಗಿನ ) ಎಷ್ಟೋ ವಿಷಯಗಳ ನಿರ್ಣಯವನ್ನು ಯುಕ್ತಿಪ್ರಯುಕ್ತಿಗಳಿಂದ ಎಂದೂ ಮಾಡಲಿಕ್ಕೆ ಬರುವದಿಲ್ಲ. ಕೆಲಕೆಲವು ವಿಷಯಗಳ ಬಗ್ಗೆ ಸೂಕ್ಷ್ಮಶೋಧ ಸಹ ಮಾಡಲಿಕ್ಕೆ ಬರುವಂತೆ ಇರುವದಿಲ್ಲ. ಇಂಥಲ್ಲಿ ಯಾವನಾದರೊಬ್ಬ ಪಂಡಿತನು ತರ್ಕಶಾಸ್ತ್ರದ ನಿಯ

ಮುಗಳಿಗನುಸರಿಸಿ, ಆ ವಿಷಯುಗಳ ಬಗ್ಗೆ ವಿಚಾರಮಾಡಹತ್ತಿದರೆ, ಅವನು ಜನರಲ್ಲಿ ಕೇವಲ ಉಪಹಾಸಕ್ಕೆ ಮಾತ್ರ ಗುರಿಯಾಗುತ್ತಾನೆ. ಕೆಲಕೆಲವು ಕೃತ್ಯಗಳನ್ನು ಮಾಡುವದು ಅತಿ ಅವಶ್ಯವಿರುತ್ತದೆ; ಆದರೆ ಅವುಗಳ ಬಗ್ಗೆ ವಾದವಿವಾದ ಮಾತ್ರ ಮಾಡಲಿಕ್ಕೆ ಬರುವಂತೆ ಇರುವದಿಲ್ಲ. ಆಷ್ಟ್ಯಾಕೆ, ವಿಚಾರಮಾಡಿ ನೋಡು; ಯಾವತ್ತು ಮನುಷ್ಯರು ತಮ್ಮ ತಮ್ಮ ಸಣ್ಣ ದೊಡ್ಡ ಕರ್ತವ್ಯಕರ್ಮಗಳನ್ನು ಮಾಡುತ್ತಾರೆ. ಆದರೆ ಆ ಕರ್ತವ್ಯಕರ್ಮಗಳನ್ನು ಮಾಡುವಾಗ ಅವು ಸಣ್ಣವಿರಲಿ, ದೊಡ್ಡವಿರಲಿ, ಅವುಗಳ ಸಾಧಕಬಾಧಕ ಪ್ರಮಾಣಗಳ ಬಗ್ಗೆ ವಿಚಾರಮಾಡಿ, ಅವುಗಳನ್ನು ಆ ಮೇರೆಗೆ ಜರಗಿಸುವ ಜನರು ಎಷ್ಟು ಮಂದಿ ಹೊರಟಾರು? ಬೆಳಿಗ್ಗೆ ಎದ್ದ ಕೂಡಲೆ ಈ ಹೊತ್ತು ಯಾವ ಯಾವ ಕೆಲಸವನ್ನು ಮಾಡಬೇಕು? ಯಾವದರಿಂದ ಲಾಭವಾಗುವದು? ಯಾವದರಿಂದ ಹಾನಿಯಾಗುವದು? ಎಂಬ ಬಗ್ಗೆ ವಾದವಿವಾದ ಮಾಡಿ, ಇಲ್ಲವೆ ವಿಚಾರಮಾಡಿ ಗೃಹಕೃತ್ಯದ ಅತಿಶಯ ಕ್ಷುಲ್ಲಕವಾದ ಸಂಗತಿಗಳನ್ನು ನೆರವೇರಿಸುವ ದಂಪತಿಗಳು ಬಹಳ ದುರ್ದೈವಿಗಳೆಂತಲೂ, ಅವರಷ್ಟು ದೈವಹೀನರು ಜಗತ್ತಿನೊಳಗೆ ಯಾರೂ ಇರಲಿಕ್ಕಿಲ್ಲೆಂತಲೂ ನಾನು ತಿಳಿಯುತ್ತೇನೆ."

"ತಡಮಾಡಿ ಲಗ್ನಮಾಡಿಕೊಂಡರೆ ತಾಯಿತಂದೆಗಳಿಗೆ ಒಂದು ಲಾಭವಾಗುತ್ತದೆ. ಅದಾವದೆಂದರೆ ಮಕ್ಕಳು ಚಿಕ್ಕವರಿರುವದರಿಂದ ತಾಯಿತಂದೆಗಳ ಸಂಸಾರ ಸುಖವನ್ನು ನೋಡಿ ಅಸೂಯಪಡುವದಿಲ್ಲ. (ಅಂದರೆ ತಾಯಿತಂದೆಗಳಿಗೆ ಮಕ್ಕಳ ಸ್ಪರ್ಧೆಯು ತಪ್ಪುವದು.) ಆದರೆ ಈ ಲಾಭದ ಹಿಂದೆ ಹಾನಿಯೂ ಉಂಟು. ಪ್ರೌಢವಯಸ್ಸಿನಲ್ಲಿ ಲಗ್ನಮಾಡಿಕೊಂಡ ತಾಯಿತಂದೆಗಳು ತಮ್ಮ ಮಕ್ಕಳು ಚಿಕ್ಕವರೂ ಅಜ್ಞಾನಿಗಳೂ ಇರುವಾಗಲೇ ದೈವಯೋಗದಿಂದ ಮರಣ ಹೊಂದಿದರೆ ಆ ಮಕ್ಕಳ ಪರಿಪಾಲನದ ಭಾರವು ಕೇವಲ ಅನ್ಯಜನರ ಮೇಲೆ ಬೀಳುವದು. ಇನ್ನು ಮಕ್ಕಳ ಲಾಲನ ಪೋಷಣಗಳನ್ನೂ ತಾಯಿತಂದೆಗಳಂತೆ ಯಾರೂ ಮಾಡಲಾರರೆಂಬ ಸಂಗತಿಯು ಎಲ್ಲರಿಗೂ ಗೊತ್ತಿದ್ದದ್ದೇ ಸರಿ. ಈ ತರದ ಕಲ್ಪನೆಗಳು ಅವರ ಮನಸ್ಸಿನಲ್ಲಿ ಬಂದು, ಅವರಿಗೆ ಖೇದವಾಗಬಹುದು. ಒಂದುವೇಳೆ ಮಕ್ಕಳು ದೊಡ್ಡವರಾಗುವ ತನಕ ತಾಯಿತಂದೆಗಳು ಬದುಕುವರೆಂದು ಕಲ್ಪಿಸಿದಾಗ್ಯೂ, ಆ ಮಕ್ಕಳು ಪ್ರೌಢರಾಗಿ, ವಿದ್ಯಾಭ್ಯಾಸವನ್ನು ಕಲಿತು, ಸೌಖ್ಯದಿಂದ ಸಂಸಾರ ಮಾಡುವದನ್ನು ಅವರು ನೋಡಲಿಕ್ಕಿಲ್ಲೆಂಬದು ನಿರ್ವಿವಾದವಾದ ಮಾತು."

"ತಡಮಾಡಿ ಲಗ್ನಮಾಡಿಕೊಂಡವರಿಗೆ ಅವರ ಮಕ್ಕಳ ಅಸೂಯದ ಇಲ್ಲವೆ ಸ್ಪರ್ಧೆಯ ಅಂಜಿಕೆ ಇರುವದಿಲ್ಲೆಂದು ಮೇಲೆ ಹೇಳಿರುತ್ತದಷ್ಟೆ. ಇದರ

ಯನ್ನು ವ್ಯರ್ಥವಾಗಿ ಕಳೆಯುತ್ತೀರಿ. ಇಷ್ಟರಲ್ಲಿ ನೀವು ಎಷ್ಟೋ ಕಾಲವನ್ನು ವ್ಯರ್ಥ ಹೋಗಲಾಡಿಸಿರುತ್ತೀರಿ. ಆ ಕಳೆದು ಹೋದ ದಿವಸಗಳಲ್ಲಿ ಸಿಗತಕ್ಕ ಸುಖೋಪಭೋಗಗಳಿಗಂತೂ ನೀವು ಎರವಾದಿರಿ. ಇದೊಂದೇ ಪಟ್ಟಣದಲ್ಲಿ ನೀವು ಇರಹತ್ತಿ ಎಷ್ಟು ದಿವಸಗಳಾದವು ನೋಡಿರಿ! ಈ ಪಟ್ಟಣವು ಎಷ್ಟು ದೊಡ್ಡದಿದ್ದರೂ, ಬಗೆಬಗೆಯ ಜನರು ಇಲ್ಲಿ ವಾಸಿಸುತ್ತಿದ್ದರೂ, ಇನ್ನುಮೇಲೆ ಇಲ್ಲಿ ನೋಡತಕ್ಕಂಥ ಇಲ್ಲವೆ ಕೇಳತಕ್ಕಂಥ ಹೊಸ ಹೊಸ ಚಮತ್ಕಾರಗಳು ಏನೂ ಉಳಿದಿಲ್ಲ. ನೀವು ಈಗ ಯಾವ ದೇಶದಲ್ಲಿರುತ್ತೀರೆಂಬ ಸ್ಮೃತಿಯೋ ನಿಮ್ಮ ಮೈಮೇಲೆ ಇದ್ದಂತೆ ತೋರುವದಿಲ್ಲ. ಈ ದೇಶದ (ಮಿಸರದೇಶ) ಜನರು ಪೂರ್ವಕಾಲದಲ್ಲಿ ಒಳ್ಳೇ ಪರಾಕ್ರಮಿಗಳೂ, ವಿದ್ವಾಂಸರೂ ಇದ್ದರೆಂಬ ಬಗ್ಗೆ ಖ್ಯಾತಿಯುಂಟು. ಇಡೀ ಜಗತ್ತನ್ನು ದೈದೀಪ್ಯಮಾನ ಮಾಡುವಂಥ ವಿದ್ಯಾಧಿದೇವಿಯಾದ ಸರಸ್ವತಿಯು ಆದಿಮಂದಿರವು ಇದೇ ದೇಶದಲ್ಲಿರುತ್ತದೆ. ವಿದ್ಯದಲ್ಲಿ ಹೆಸರು ಪಡೆದವರು ಮೊದಲು ಇದೇ ದೇಶದ ಜನರು. ಸೃಷ್ಟಪದಾರ್ಥಗಳು ಮನುಷ್ಯನ ಸುಖೋಪಭೋಗಕ್ಕೆ ಉಪಯೋಗ ಬೀಳುವಂತೆ ಮಾಡುವ ಕಲಾಕೌಶಲ್ಯವೂ, ಪರಸ್ಪರರು ಪರಸ್ಪರರ ಉಪಯೋಗಕ್ಕೆ ಬೀಳುವ ನಿಯಮಗಳನ್ನು ಮಾಡುವ ಲೋಕವ್ಯವಸ್ಥೆಯೂ (ಲೋಕಮರ್ಯಾದೆ) ಮೊದಲು ಇದೇ ದೇಶದಲ್ಲಿ ಹುಟ್ಟಿದವು. ಇವುಗಳ ಮೂಲ ಇತಿಹಾಸವು ಇದೇ ದೇಶದಲ್ಲಿ ಸಿಕ್ಕುತ್ತದಲ್ಲದೆ ಈ ದೇಶದ ಆಚೆಕಡೆಗೆ ಏನೂ ಸಿಕ್ಕುವದಿಲ್ಲ."

"ಬಹು ವಿಖ್ಯಾತರೂ, ಪರಾಕ್ರಮಿಗಳೂ, ಆದ ಈ ದೇಶದ ಜನರು ಕಟ್ಟಿದ ಕೆಲವು ಭವ್ಯವಾದ ನೆಲಗೋಪುರಗಳು ಇನ್ನೂ ಅವೆ. ಅವುಗಳನ್ನು ನೋಡಿದ ಕೂಡಲೆ ಆ ಜನರು ಅದ್ಭುತ ಉದ್ಯೋಗಿಗಳೂ, ಒಳ್ಳೇ ಕುಶಲರೂ ಇದ್ದರೆಂದು ಸ್ಪಷ್ಟವಾಗಿ ತೋರುವಂತೆ ಅದೆ. ಈ ನೆಲಗೋಪುರಗಳು ಬಹು ವಿಶಾಲವಾಗಿರುತ್ತವೆ. ಇಡೀ ಜಗತ್ತಿನಲ್ಲಿ ಜಾಣರೂ, ಕುಶಲರೂ ಎಂದು ಶಟೆಶಟದು ಬೀಳುವ ಯುರೋಪದ ಜನರು ಸಹ, ಈ ಗೋಪುರಗಳನ್ನು ನೋಡಿ ತಲೆದೂಗಿ, ಈ ತರದ ಕೆಲಸಗಳು ತಮ್ಮಿಂದಾಗಲಾರವೆಂತಲೂ, ತಮ್ಮ ಕೆಲಸಗಳು ಈ ಕೆಲಸಗಳನ್ನು ಸರಿಗಟ್ಟಲಾರವೆಂತಲೂ ಒಪ್ಪಿಕೊಳ್ಳುತ್ತಾರೆ. ಅರ್ವಾಚೀನ ಶಿಲ್ಪಿಗಳು ಈ ಗೋಪುರಗಳನ್ನೇ ಮಾದರಿಗಳನ್ನಾಗಿ ಮಾಡಿಕೊಂಡು ಇವುಗಳೊಳಗಿನ ಕೌಶಲ್ಯವನ್ನು ಕಲಿಯುವದಕ್ಕಾಗಿಯೂ, ತಮ್ಮ ಕೆಲಸಗಳಲ್ಲಿ ಆ ಕೌಶಲ್ಯವನ್ನು ಉಪಯೋಗಿಸುವದಕ್ಕಾಗಿಯೂ ಯತ್ನಿಸುತ್ತಾರೆ. ಸರ್ವಭಕ್ಷಕನಾದ ಕಾಲನ ದವಡೆಯೊಳಗಿಂದ ಈಗ್ಯೂ ಅರ್ಧಮರ್ಧ ಉಳಿದ ಈ ಪ್ರಾಚೀನ ಜನರ

ಗೋಪುರಗಳನ್ನು ನೋಡಲು, ಒಳ್ಳೇ ಕ್ರಮಪಟ್ಟು ಕಟ್ಟಿದ ಈ ತರದ ಎಷ್ಟೋ ಗೋಪುರಗಳನ್ನೂ, ಅವುಗಳ ಭಾಗಗಳನ್ನೂ ಆ ನಿರ್ದಯನಾದ ಕಾಲನು ಭಕ್ಷಿಸಿರುವನೆಂಬ ಕಲ್ಪನೆಯು ನೋಡುವವರ ಮನಸ್ಸಿನಲ್ಲಿ ಬರುವದು.

ರಾಸೆಲಾಸನು—"ಕಲ್ಲುಗಳ ರಾಶಿಗಳನ್ನೂ, ಮಣ್ಣಿನ ಗುಡ್ಡೆಗಳನ್ನೂ ನೋಡಬೇಕೆಂಬ ಆಕಾಂಕ್ಷೆಯು ನನಗೆ ಎಳ್ಳಷ್ಟು ಇಲ್ಲ. ನನ್ನ ಶೋಧವು ಮನುಷ್ಯನ ವಿಷಯಕ್ಕೆ ಇರುತ್ತದೆ. ಹರಕುಮುರಕು ಗುಡಿಗಳ ಹಾಳಾಗಿ ಉಳಿದ ಭಾಗಗಳನ್ನು ಎಣಿಸುವದಕ್ಕಾಗಿಯೂ, ಇಲ್ಲವೆ ಮುಚ್ಚಿ ಹೋದ ನಗರ, ಕಾಲುವೆ ಮುಂತಾದವುಗಳ ಶೋಧಹಚ್ಚುವದಕ್ಕಾಗಿಯೂ ನಾನು ಈ ದೇಶಪರ್ಯಟನವನ್ನು ಕೈಕೊಂಡಿಲ್ಲ. ಆದರೆ ಈಗ ಈ ಜಗತ್ತಿನಲ್ಲಿ ವಾಸಮಾಡುವ ಜನರ ವಿದ್ಯಮಾನ ಸ್ಥಿತಿಯನ್ನು ನೋಡಬೇಕೆಂಬ ಉದ್ದೇಶದಿಂದಲೇ ನಾನು ಈ ದೇಶಪರ್ಯಟನವನ್ನು ಮಾಡಲಾರಂಭಿಸಿದ್ದೇನೆ."

ರಾಜಕನ್ನಿಕೆ—"ಜಗತ್ತಿನಲ್ಲಿ ಈಗ ಸದ್ಯಕ್ಕೆ ನಮ್ಮ ದೃಷ್ಟಿಗೆ ಗೋಚರವಾಗುವ ಯಾವತ್ತು ಪದಾರ್ಥಗಳ ಬಗ್ಗೆ ಮಾತ್ರ ನಾವು ಚನ್ನಾಗಿ ವಿಚಾರಮಾಡಬೇಕು; ಮತ್ತು ಆ ಪ್ರಕಾರ ವಿಚಾರಮಾಡುವದು ಈಗ ತಕ್ಕದ್ದಾಗಿದೆ. ಪ್ರಾಚೀನ ಕಾಲದ ದೊಡ್ಡದೊಡ್ಡ ಜನರ ಪರಾಕ್ರಮಗಳನ್ನೂ, ಅವರು ಮಾಡಿಟ್ಟ ಮಹಾಕೃತ್ಯಗಳನ್ನೂ ತೆಗೆದುಕೊಂಡು ನಮಗೇನು ಮಾಡತಕ್ಕದ್ದದೆ? ಹಿಂದೆ ಆಗಿ ಹೋದ ಕಾಲವು ಇನ್ನು ಮೇಲೆ ತಿರುಗಿ ಬರುವಹಾಗಿಲ್ಲ; ಮತ್ತು ಆಗಿನ ಶೂರ ಜನರ ವರ್ತನಕ್ರಮವು ಹ್ಯಾಗಿದ್ದರೂ, ಈಗಿನ ಜನರ ವರ್ತನಕ್ರಮದಿಂದ ತೀರ ಭಿನ್ನವಾಗಿರಲಿಕ್ಕೆ ಬೇಕು. ಇಂಥ ಸಂಗತಿಗಳನ್ನು ತಿಳಿದುಕೊಂಡು ನಮಗೇನು ಮಾಡುವದದೆ?"

ಇಮ್ಲಾಕ ಕವಿಯು—"ನಾವು ಯಾವದಾದರೊಂದು ಸಂಗತಿಯನ್ನು ಚನ್ನಾಗಿ ಅರಿತುಕೊಳ್ಳಬೇಕಾದರೆ, ಆ ಸಂಗತಿಯಿಂದುಂಟಾಗುವ ಪರಿಣಾಮಗಳನ್ನು ಅರಿತುಕೊಳ್ಳಲಿಕ್ಕೆಬೇಕು. ನಮಗೆ ಮನುಷ್ಯನ ವಿಷಯಕ್ಕೆ ಪೂರ್ಣ ಜ್ಞಾನವಾಗಬೇಕಾದರೆ, ನಾವು ಅವನು ಮಾಡಿಟ್ಟ ಕೃತ್ಯಗಳನ್ನು ನೋಡಲಿಕ್ಕೆ ಬೇಕು. ಅಂದರೆ ಆ ಕೃತಿಗಳನ್ನು ಮಾಡಲಿಕ್ಕೆ ಅವನಿಗೆ ಪ್ರವೃತ್ತಿಯನ್ನುಂಟುಮಾಡಿದ ಕಾರಣಗಳೂ, ಅವುಗಳನ್ನ ಜರಗಿಸುವದಕ್ಕೆ ಉತ್ತೇಜನಕೊಟ್ಟ ಪ್ರಬಲವಾದ ಮನೋವೃತ್ತಿಗಳೂ ನಮಗೆ ತಿಳಿಯುವವು. ವಿದ್ಯಮಾನಸ್ಥಿತಿಯು ಚನ್ನಾಗಿ ತಿಳಿಯಬೇಕಾದರೆ ಅದರ ಪೂರ್ವಕಾಲದ ಸ್ಥಿತಿಯು ಹ್ಯಾಗಿತ್ತೆಂಬದನ್ನು

ತಿಳಿದುಕೊಳ್ಳುವದು ಅತ್ಯವಶ್ಯವದೆ. ಯಾಕಂದರೆ, ಯಾವದಾದರೊಂದು ಒಡವೆಯು ಚಲೋದು ಇಲ್ಲವೆ ಕೆಟ್ಟದು ಎಂದು ಅದಕ್ಕೆ ಹೆಸರಿಡಬೇಕಾದರೆ ಆ ಒಡವೆಯನ್ನು ಬೇರೊಂದು ಒಡವೆಗೆ ಸರಿಹಚ್ಚಿ ನೋಡಲಿಕ್ಕೆಬೇಕು. ಅಂದಮೇಲೆ ಈಗಿನ ಸ್ಥಿತಿಯು ಕೆಟ್ಟದು ಇಲ್ಲವೆ ಚಲೋದು ಅನ್ನಬೇಕಾದರೆ ಅದರ ಹಿಂದಿನ ಸ್ಥಿತಿಯ ಬಗ್ಗೆ ನಾವು ವಿಚಾರಮಾಡಲಿಕ್ಕೆಬೇಕು. ಮುಂದೆ ಆಗುವ ಸ್ಥಿತಿಯು ನಮಗೆ ತಿಳಿಯುವದಿಲ್ಲಾದದರಿಂದ ವಿದ್ಯಮಾನಸ್ಥಿತಿಯನ್ನು ಭವಿಷತ್‌ಸ್ಥಿತಿಗೆ ಸರಿಹಚ್ಚಿ ನೋಡುವದು ಅಸಂಭವವು. ನಿಜವಾಗಿ ವಿಚಾರಿಸಿ ನೋಡಿದರೆ, ವಿದ್ಯಮಾನಸ್ಥಿತಿಯ ವಿಷಯಕ್ಕೆ ಯಾರೂ, ಎಂದೂ, ಏನೂ ವಿಚಾರಮಾಡುವದಿಲ್ಲ. ಯಾಕಂದರೆ ಎಲ್ಲರ ಮನಸ್ಸು ಹಿಂದೆ ಆಗಿಹೋದ ಮಾತಿನ ನೆನಪು ತೆಗೆಯುವದರಲ್ಲಿಯೂ, ಭಾವಿಸ್ಥಿತಿಯ ಬಗ್ಗೆ ವಿಚಾರಮಾಡುವದರಲ್ಲಿಯೂ ತೊಡಗಿರುತ್ತದೆ. ಆನಂದ, ದುಃಖ, ಪ್ರೀತಿ, ದ್ವೇಷ, ಆಶೆ, ಅಂಜಿಕೆ, ಇವೇ ಮನುಷ್ಯನ ಮುಖ್ಯವಾದ ಮನೋವೃತ್ತಿಗಳು. ಇನ್ನು ಹಿಂದೆ ಸಂಭವಿಸಿದ ಮಾತಿನ ವಿಷಯಕ್ಕೆ ಮಾತ್ರ ಆನಂದವೂ ದುಃಖವೂ ಆಗುತ್ತವೆ. ಆಶೆಯೂ ಅಂಜಿಕೆಯೂ ಮುಂದೆ ವರ್ತಿಸಬಹುದಾದ ಮಾತಿನ ವಿಷಯಕ್ಕೆ ಉಂಟಾಗುತ್ತವೆ; ಅಂದರೆ ಆನಂದದುಃಖಗಳು ಭೂತಸ್ಥಿತಿಗಳೂ, ಆಶಾಭಯಗಳು ಭವಿಷ್ಯತ್‌ಸ್ಥಿತಿಗಳೂ ಆಗಿರುತ್ತವೆ. ಪ್ರೀತಿದ್ವೇಷಗಳಾದರೂ ಭೂತಸ್ಥಿತಿಗಳೇ, ಅಂದರೆ ಪ್ರೀತಿದ್ವೇಷಗಳುಂಟಾಗಬೇಕಾದರೆ ಹಿಂದೆ ವರ್ತಿಸಿದ ಸಂಗತಿಗಳೇ ಅವುಗಳಿಗೆ ಕಾರಣವಾಗಿರಲಿಕ್ಕೆಬೇಕು. ಯಾಕಂದರೆ ಕಾರಣವು ಕಾರ್ಯದ ಪೂರ್ವದಲ್ಲಿ ಸಂಭವಿಸಿರಲಿಕ್ಕೆಬೇಕು."

"ವಿದ್ಯಮಾನಸ್ಥಿತಿಯು ಹಿಂದೆ ಆಗಿಹೋದ ಸ್ಥಿತಿಯ ಪರಿಣಾಮವಿರುತ್ತದೆ. ಅಂದಮೇಲೆ ಈಗ ನಮ್ಮ ಸ್ಥಿತಿಯು ಚನ್ನಾಗಿದ್ದು ನಮಗೆ ಸುಖವಾಗುತ್ತಿದ್ದರೆ, ಆ ಸುಖದ ಕಾರಣಗಳಾವವು? ಮತ್ತು ದುಃಖವಾಗುತ್ತಿದ್ದರೆ ಆ ದುಃಖದ ಕಾರಣಗಳಾವವು? ಎಂಬದನ್ನು ತಿಳಿದುಕೊಳ್ಳಬೇಕಾದರೆ ನಾವು ಹಿಂದೆ ಆಗಿಹೋದ ಸ್ಥಿತಿಯ ಬಗ್ಗೆ ಚಲೋ ವಿಚಾರಮಾಡಿ ಅದನ್ನು ತಿಳಿದುಕೊಳ್ಳಲಿಕ್ಕೆಬೇಕು. ನಾವು ಕೇವಲ ಸ್ವಾರ್ಥಪರಾಯಣರಾಗಿದ್ದಾಗ್ಯೂ ಇತಿಹಾಸದ ಜ್ಞಾನವನ್ನು ಅಂದರೆ ಹಿಂದೆ ಆಗಿಹೋದ ಸಂಗತಿಗಳ ಜ್ಞಾನವನ್ನು ಸಂಪಾದಿಸುವದು ಹಿತಕರವಾದ ಸಂಗತಿಯು. ಪರರ ಹಿತಾಹಿತದ ಸಂಬಂಧವುಳ್ಳಂಥ ಜನರಿಗಂತೂ ಇತಿಹಾಸ ಜ್ಞಾನವು ಅವಶ್ಯವಾಗಿ ಗೊತ್ತಿರಲಿಕ್ಕೆಬೇಕು. ಅವರು ಆ ಜ್ಞಾನವನ್ನು ಸಂಪಾದಿಸಿಕೊಳ್ಳದಿದ್ದರೆ ಅವರು ದೊಡ್ಡದೊಂದು ಅನ್ಯಾಯಮಾಡಿದಂತಾಗುತ್ತದೆ. ಜ್ಞಾನಸಂಪಾದನ ಮಾಡಿಕೊಳ್ಳುವ ಸಾಧನವಿಷ್ಟು ಬೇಕಂತ ತಿಳಿದೂ

ತಿಳಿದು ಅಜ್ಞಾನಿಯಾಗಿರುವವನು ದೋಷಕ್ಕೆ ಪಾತ್ರನು; ಮತ್ತು ಅವನ ಅಜ್ಞಾನದಿಂದುಂಟಾದ ಕೇಡಿಗೆ ಅವನೇ ಹೊಣೆಗಾರನು ”

“ಇತಿಹಾಸದಲ್ಲಿ ಅನೇಕ ಉಪಯುಕ್ತವಾದ ಸಂಗತಿಗಳಿರುತ್ತವೆ; ಆದರೆ ಆ ಎಲ್ಲ ಸಂಗತಿಗಳೊಳಗೆ ಮನುಷ್ಯರ ಮನಸ್ಸುಗಳು ಹ್ಯಾಗೆ ವಿಕಸಿತವಾದವು? ಜನರು ಹೆಚ್ಚುಹೆಚ್ಚು ಜ್ಞಾನಸಂಪನ್ನರು ಹ್ಯಾಗೆ ಆದರು? ಅವರಲ್ಲಿ ವಿದ್ಯವು ಹ್ಯಾಗೆ ಹುಟ್ಟಿತು? ವಿದ್ಯಾವೃದ್ಧಿಯು ಹ್ಯಾಗಾಯಿತು? ಕಲಾಕೌಶಲ್ಯಗಳು ಹ್ಯಾಗೆ ಉತ್ಪವಿಸಿದವು? ಅವು ಹ್ಯಾಗೆ ಸುಧಾರಿಸಿದವು? ವಿದ್ಯಾಕಲಾಕೌಶಲ್ಯಗಳು ಉತ್ಕರ್ಷಾಪಕರ್ಷವನ್ನು ಹ್ಯಾಗೆ ಹೊಂದಿದವು? (ವಿಚಾರವುಳ್ಳ ಪ್ರಾಣಿಗಳಿಗೆ ಅಂದರೆ ಮನುಷ್ಯರಿಗೆ ಜ್ಞಾನವೇ ಪ್ರಕಾಶವು, ಅಜ್ಞಾನವೇ ಅಂಧಃಕಾರವು) ಮುಂತಾದ ಸಂಗತಿಗಳ ಜ್ಞಾನವು ಎಲ್ಲಕ್ಕೂ ಉಪಯೋಗವುಳ್ಳದ್ದು ಅತ್ಯವಶ್ಯವಾದದ್ದು ಇರುತ್ತದೆ. ಅರಸರಿಗೆ ದೊಡ್ಡ ದೊಡ್ಡ ಯುದ್ಧಗಳ ಮತ್ತು ರಾಜ್ಯಕ್ರಾಂತಿಗಳ ಜ್ಞಾನವು ಹೆಚ್ಚು ಅವಶ್ಯವಾದದ್ದು, ಉಪಯುಕ್ತವಾದದ್ದು, ಇದ್ದಾಗ್ಯೂ ವಿದ್ಯಾಕಲಾಕೌಶಲ್ಯಗಳ ಉದಯ ಅವುಗಳ ಅಭಿವೃದ್ಧಿ ಅವುಗಳ ಕಾರಣಗಳನ್ನು ತಿಳಿದುಕೊಳ್ಳುವದು ಅವರಿಗೆ ಅವಶ್ಯವಿಲ್ಲೆಂದೆನ್ನಕೂಡದು. ಯಾಕಂದರೆ, ಯೋಗ್ಯರೀತಿಯಿಂದ ರಾಜ್ಯಭಾರದ ಕಾರ್ಯಗಳನ್ನು ನೆರವೇರಿಸುವದು ಹ್ಯಾಗೆ ಅವರ ಕರ್ತವ್ಯವೋ ಹಾಗೇ ತಮ್ಮ ಮನಸ್ಸು-ಧಾರಣೆಮಾಡುವುದೂ, ಜ್ಞಾನಸಂಪಾದಿಸಿಕೊಳ್ಳುವದೂ, ಬುದ್ಧಿಯನ್ನು ವಿಕಸಿತ ಮಾಡುವದೂ ಅವರ ಪವಿತ್ರವಾದ ಕರ್ತವ್ಯವೇ ಆಗಿರುತ್ತದೆ.”

“ಒಳ್ಳೆ ಉಪದೇಶಕ್ಕಿಂತಲೂ ಉದಾಹರಣೆಯು ಹೆಚ್ಚು ಪರಿಣಾಮವುಳ್ಳದ್ದು. ಅಂದರೆ ಉದಾಹರಣೆಯಿಂದ ಯಾವದಾವದೊಂದು ಮಾತಿನ ಜ್ಞಾನವು ತತ್ಕಾಲಕ್ಕೆ ಹ್ಯಾಗಾಗುತ್ತದೋ, ಹಾಗೆ ಬರೇ ಉಪದೇಶದಿಂದ ಆ ಮಾತಿನ ಜ್ಞಾನವಾಗುವದಿಲ್ಲ. ಶೂರನಾಗಬೇಕಾದರೆ ಬರೇ ಯುದ್ಧದ ಸಂಗತಿಗಳನ್ನು ಕೇಳಿ ಉಪಯೋಗವಿಲ್ಲ; ಅವನು ರಣಾಂಗಣದಲ್ಲಿ ಹೋಗಿ ಯುದ್ಧಮಾಡಲಿಕ್ಕೆ ಬೇಕು; ಅಂದರೆ ಶೌರ್ಯವು ಅವನಲ್ಲಿ ಬರುವದು. ಚಿತ್ರ ತೆಗೆಯುವವನು ಸ್ವತಃ ಅನೇಕ ಚಿತ್ರಗಳ ಮಾದರಿಗಳನ್ನು ತೆಗೆಯಲಿಕ್ಕೆ ಬೇಕು; ಅಂದರೆ ಮಾತ್ರ ಚಿತ್ರಕಲೆಯು ಆತನಿಗೆ ಬರುವದು. ಚಿತ್ರ ತೆಗೆಯುವ ನಿಯಮಗಳನ್ನಷ್ಟೇ ಕಲಿಯುವದರಿಂದ ಆ ಕಲೆಯು ಯಾರಿಗೂ ಸಾಧ್ಯವಾಗಲಾರದು. ಮತ್ತೊಂದು ಲಕ್ಷದಲ್ಲಿಡತಕ್ಕ ಸಂಗತಿಯೇನಂದರೆ—ಶೌರ್ಯ ಮುಂತಾದ ಮಹಾಕೃತ್ಯಗಳು ಕ್ವಚಿತವಾಗಿ ನಮ್ಮ ದೃಷ್ಟಿಗೆ ಬೀಳುತ್ತವೆ. ಆದರೆ ಕಲೆಗಳ ಮಾತು ಹಾಗಲ್ಲ. ಕಲೆಗಳು ನಿರಿನಿರಿ

ಸಿದ ಅದ್ಭುತ ಚಮತ್ಕಾರಗಳನ್ನು ನೋಡಲಪೇಕ್ಷಿಸುವವನು ಅವುಗಳನ್ನು ಬೇಕಾದಾಗ ಬೇಕಾದಲ್ಲಿ ಬೇಕಾದಷ್ಟು ನೋಡಬಹುದು."

"ಮನುಷ್ಯನು ಯಾವದಾದರೊಂದು ಅಸಾಧಾರಣ ಕೃತ್ಯವನ್ನು ಕಣ್ಣಿನಿಂದ ನೋಡಿದ ಕೂಡಲೆ, ಇಲ್ಲವೆ ಅದರ ವಿಷಯಕ್ಕೆ ವಿಚಾರಮಾಡಿದ ಕೂಡಲೆ ಅವನ ಮನಸ್ಸು ಆಶ್ಚರ್ಯಚಕಿತವಾಗುತ್ತದೆ. ಆದರೆ ಶೋಧಕಬುದ್ಧಿಯು ಮನುಷ್ಯನು ಬರೇ ಆಶ್ಚರ್ಯಚಕಿತನಾಗಿ ಸುಮ್ಮನೆ ಕೂಡ್ರುವದಿಲ್ಲ. ಆ ಕೃತಿಯು ಯಾವ ಉಪಾಯದಿಂದ ಸಿದ್ಧವಾಗಿರಬೇಕೆಂಬ ಆಕಾಂಕ್ಷೆಯು ಅವನಿಗೆ ಹುಟ್ಟಿ, ಅವನು ಆ ಉಪಾಯದ ಶೋಧವನ್ನು ಕೂಡಲೆ ಮಾಡತೊಡಗುತ್ತಾನೆ. ಹೀಗಾಯಿತೆಂದರೆ ಚಮತ್ಕಾರದ ಒಡವೆಯನ್ನು ನೋಡುವದರಿಂದ ಮನುಷ್ಯನಿಗಾಗತಕ್ಕ ಲಾಭಕ್ಕೆ ಆರಂಭವಾಯಿತೆಂದೆನ್ನಬಹುದು. ಈ ಮೇರೆಗೆ ಮೇಲೆ ಹೇಳಿದ ಶೋಧವನ್ನು ಕೈಕೊಂಡವನ ಮನಃಸುಧಾರಣೆಯಾಗಿ, ಅವನ ಜ್ಞಾನವು ಬೆಳೆಯುತ್ತದೆ. ಒಮ್ಮೊಮ್ಮೆ ಈ ತರದ ಶೋಧದಿಂದ ವಿಚ್ಛಿನ್ನವಾದ ಕಲೆಯು ಪುನಃ ಉದಯಕ್ಕೆ ಬರುತ್ತದೆ. ಕಲೆಯು ಸುಧಾರಿಸಿ ಪೂರ್ಣತೆಯನ್ನು ಹೊಂದುತ್ತದೆ. ನಾವು ನಮ್ಮ ವಿದ್ಯಮಾನ ಸ್ಥಿತಿಯನ್ನು, ಹಿಂದೆ ಆಗಿಹೋದ ಸ್ಥಿತಿಗೆ ಸರಿಹಚ್ಚಿ ನೋಡಲು, ಈಗಿನ ಸ್ಥಿತಿಯು ಮುಂಚಿನ ಸ್ಥಿತಿಗಿಂತ ಹೆಚ್ಚು ಚಲೋದು ಇರುವದೆಂದು ನಮಗೆ ಕಂಡುಬಂದರೆ ನಮಗೆ ಆನಂದವಾಗುತ್ತದೆ; ಕೆಟ್ಟದೆಂದು ಕಂಡುಬಂದರೆ ಅದನ್ನು ಸುಧಾರಿಸಬೇಕೆಂಬ ಇಚ್ಛೆಯು ಹುಟ್ಟುತ್ತದೆ. ಯಾವ ರೀತಿಯಿಂದಾದರೂ ಹಿಂದಿನ ಸ್ಥಿತಿಯನ್ನು ತಿಳಿದುಕೊಳ್ಳುವದರಿಂದ ನಮಗೆ ಲಾಭವೇ ಉಂಟು."

ಇವ್ಲಾಕನ ಮಾತುಗಳನ್ನು ಕೇಳಿ ರಾಜಪುತ್ರನು:—"ನಾನು ಈ ದೇಶದಲ್ಲಿ ನೋಡಲಿಕ್ಕೆ ಯೋಗ್ಯವಾದ ಪ್ರತಿಯೊಂದು ವಸ್ತುವನ್ನು ನೋಡಬೇಕೆಂದು ಇಚ್ಛಿಸುತ್ತೇನೆ."

ರಾಜಕನ್ನಿಕೆಯು:—"ನಾನು ಒಳ್ಳೇ ಸಂತೋಷದಿಂದ ಪ್ರಾಚೀನಕಾಲದ ಜನರ ನಡೆನುಡಿಗಳನ್ನು ನೋಡಿ ಅವುಗಳಿಂದುಂಟಾಗುವ ಜ್ಞಾನಸಂಪಾದನವನ್ನು ಮಾಡಿಕೊಳ್ಳುವೆನು."

ಇವ್ಲಾಕನು:— "ಇಜಿಪ್ತ ದೇಶದ ಜನರ ಅತಿಶಯ ವೈಭವದ ಮತ್ತು ಅದ್ಭುತ ಉದ್ಯೋಗದ ಲೋಕೋತ್ತರವಾದ ಚಿನ್ಹಗಳು ಅವರು ಕಟ್ಟಿದ ನೆಲಗೋಪುರಗಳೇ. [ಆ ಗೋಪುರಗಳಿಗೆ ಇಂಗ್ರೇಜಿಯಲ್ಲಿ ಪಿರಾಮಿಡ್ ಎಂದೆನ್ನುತ್ತಾರೆ.] ಈ ಗೋಪುರಗಳು ಗುಡ್ಡದಂತೆ ಉನ್ನತವಾದಂಥವೂ, ಬಹಳ ಪ್ರಾಚೀನಕಾಲದವೂ ಇರುತ್ತವೆ. ಅತಿಶಯ ಪುರಾತನದ ಲೇಖಗಳಲ್ಲಿ ಸಹ ಈ ಗೋಪುರ

ಗಳ ಉಲ್ಲೇಖವು ಉಂಟು. ಆ ಲೇಖಗಳಲ್ಲಿ ಇವುಗಳ ಬಗ್ಗೆ ತ್ರೋಟಕವಾದ ವಿಚಾರವುಂಟು. ಇದರ ಮೇಲಿಂದ ನೋಡಲಾಗಿ ಇತಿಹಾಸ ಕಾಲದ ಪೂರ್ವದಲ್ಲಿಯೇ ಈ ಗೋಪುರಗಳು ಕಟ್ಟಲ್ಪಟ್ಟಿರುತ್ತವೆಂದೆನ್ನಬಹುದು. ಈ ಅದ್ಭುತವಾದ ನೆಲಗೋಪುರಗಳೊಳಗೆ ಅತಿಶಯ ದೊಡ್ಡದಾದ ಗೋಪುರವು ಇನ್ನೂ ಚಲೋ ಸ್ಥಿತಿಯಲ್ಲಿರುತ್ತದೆ. ಅದು ಬಹಳ ಹಳೇದಾಗಿದ್ದರೂ ಕಾಲನ ದವಡೆಯೊಳಗಿಂದ ಪಾರಾಗಿ ಅಚ್ಚಳಿಯದೆ ಇದ್ದಕ್ಕಿದ್ದ ಹಾಗೆ ಇರುತ್ತದೆ."

ರಾಜಕನ್ನಿಕೆಯು:—"ಹಾಗಾದರೆ ನಾಳೆ ಮುಂಜಾನೆ ನಾವೆಲ್ಲರೂ ಆ ಗೋಪುರಗಳನ್ನು ನೋಡಲಿಕ್ಕೆ ಹೋಗೋಣ. ನಾನು ಈ ಗೋಪುರಗಳ ವಿಷಯಕ್ಕೆ ಬಹಳ ಕೇಳಿರುತ್ತೇನೆ. ಆದದರಿಂದ ನಾನು ಅವುಗಳನ್ನು ಪ್ರತ್ಯಕ್ಷ ಒಳಗೂ ಹೊರಗೂ ನೋಡುತ್ತೇನೆ. ಅದರ ಹೊರತು ನನಗೆ ಸಮಾಧಾನವಾಗುವದಿಲ್ಲ."

## ಮೂವತ್ತೊಂದನೆಯ ಭಾಗವು.

### ನೆಲಗೋಪುರಗಳನ್ನು ನೋಡಲಿಕ್ಕೆ ಹೋದದ್ದು.

ಆಮೇಲೆ ಮುನ್ನಾದಿವಸ ನಿಶ್ಚಯಿಸಿದಂತೆ ಮರುದಿನ ಅವರು ಗೋಪುರಗಳನ್ನು ನೋಡುವದಕ್ಕೆ ಹೊರಟರು. ಏಕಚಿತ್ತದಿಂದ ಮನದಣಿಯುವ ವರೆಗೆ ಆ ಗೋಪುರಗಳನ್ನು ನೋಡಬೇಕೆಂದು ಅವರು ಗೊತ್ತುಮಾಡಿದ್ದರು. ಆದದರಿಂದ ಅಲ್ಲಿ ಕೆಲವು ದಿವಸ ನಿಲ್ಲಬೇಕಾದೀತೆಂದು ತಿಳಿದು ಅವರು ಡೇರೆ ಮುಂತಾದ ಸಾಮಾನುಗಳನ್ನು ಒಂಟೆಯಮೇಲೆ ಹೇರಿಕೊಂಡು ಹೊರಟರು. ಅವರು ಮೆಲ್ಲ ಮೆಲ್ಲನೆ ಹೋಗುತ್ತ ದಾರಿಯಲ್ಲಿ ನೋಡತಕ್ಕಂಥ ಸ್ಥಳಗಳು ದೃಷ್ಟಿಗೆ ಬಿದ್ದರೆ ಅಡ್ಡದಾರಿಯಿದ್ದರೂ ಅಲ್ಲಿಗೆ ಹೋಗಿ ಆ ಸ್ಥಳಗಳನ್ನು ನೋಡಿ ಮುಂದೆ ಸಾಗುತ್ತಿದ್ದರು. ದಾರಿಯಲ್ಲಿ ಅವರು ಅನೇಕ ಹಾಳಾದ ಪಟ್ಟಣಗಳನ್ನೂ, ಜನರಿಂದ ವಾಸಿಸಲ್ಪಟ್ಟ ಎಷ್ಟೋ ನಗರಗಳನ್ನೂ ನೋಡಿದರು. ಅಲ್ಲಲ್ಲಿಯ ಜನರ ಕೂಡ ಸಂಭಾಷಣ ಮಾಡಿ ಆ ಆ ಜನರ ನಡೆನುಡಿಗಳನ್ನು ಕೇಳುತ್ತಲೂ ಆಯಾದೇಶದ ದಂತಕಥೆಗಳನ್ನು ಆಲಿಸುತ್ತಲೂ ಮುಂದೆ ನಡೆದರು.

ಈ ಮೇರೆಗೆ ಅವರು ಪ್ರವಾಸ ಮಾಡಮಾಡುತ್ತ ಕಟ್ಟಕಡೆಗೆ ದೊಡ್ಡ ಗೋಪುರಕ್ಕೆ ಬಂದು, ಅದರ ವಿಸ್ತಾರವಾದ ತಳವನ್ನೂ, ಗಗನಚುಂಬಿತವಾದ ಎತ್ತರವನ್ನೂ ನೋಡಿ ಆಶ್ಚರ್ಯಚಕಿತರಾದರು. ಇವುಗಳನ್ನು, ಆಚಂದ್ರಾರ್ಕವಾಗಿ ಬಾಳಬೇಕೆಂದು ಪ್ರಾಚೀನ ಇಜಿಪ್ತದೇಶದ ಜನರು ಯಾಕೆ ನಿಶ್ಚಯಿಸಿದರೆಂಬದರ

ಕಾರಣವನ್ನು ರಾಜಪುತ್ರನಿಗೂ, ರಾಜಕನ್ನಿಕೆಗೂ ತಿಳಿಸಿ ಹೇಳಿದನು. ನೆಲಗೋಪುರವು (ಪಿರಮಿಡ್) ಗಜ್ಜರಿಯ ಆಕಾರದೇೂಪಾದಿಯಲ್ಲಿ ತಳದಲ್ಲಿ ಅಗಲಾಗಿಯೂ, ಮೇಲೆ ಹೋದ ಹೋದ ಹಾಗೆ ಇಕ್ಕಟ್ಟಾಗಿಯೂ, ಇರುವದರಿಂದ ಗಾಳಿ ಮಳೆ ಮುಂತಾದ ಸೃಷ್ಟಿಯ ಕಾರ್ಯಗಳಿಂದ ಅದಕ್ಕೆ ಎಳ್ಳಷ್ಟು ಅಪಾಯ ತಟ್ಟುವದಿಲ್ಲ. ಸಹಿಸಲಸಾಧ್ಯವಾದಂಥ ಭೂಕಂಪವೂ ಕೂಡ ಆ ಗೋಪುರಗಳನ್ನು ಅದರಿಸಲಾರದು. ಯಾಕಂದರೆ, ಆ ಗೋಪುರಗಳು ಅಷ್ಟು ಘಟ್ಟಿಯಾದಂಥವು ಇರುತ್ತವೆ. ಅಂಥ ಘಟ್ಟಿಯಾದ ಗೋಪುರಗಳನ್ನು ಸಹ ಅದರಿಸುವಂಥ ಭೂಕಂಪವು ಉಂಟಾದರೆ ಆ ಭೂಕಂಪದಿಂದ ನೆಲಗೋಪುರವೂ ಅದನ್ನು ಧರಿಸುವಂಥ ಮಹಾದ್ವೀಪವೂ ಕೂಡ ಅದರಿಚದರಿ ಹೋಗುವವು.

ಅವರು ಆ ಗೋಪುರದ ಉದ್ದ, ಅಗಲ, ಎತ್ತರ ಮುಂತಾದ ಅಳತೆಗಳನ್ನು ಅಳಿದುನೋಡಿದರು; ನಂತರ ಆ ಗೋಪುರದ ತಳದ ಹತ್ತರವೇ ತಮ್ಮ ಡೇರೆಗಳನ್ನು ಹೊಡೆದರು. ಮರುದಿನ ಆ ಗೋಪುರದ ಒಳಭಾಗವನ್ನು ನೋಡಬೇಕೆಂದು ನಿಶ್ಚಯಿಸಿ, ಅಲ್ಲಿಯ ಸ್ಥಳವನ್ನು ತೋರಿಸುವಂಥ ಕೆಲವು ಮಾರ್ಗದರ್ಶಕರನ್ನು ಗೊತ್ತುಮಾಡಿ, ಹೊರಟರು. ಮೊದಲಿನ ಗವಿಯ ಬಾಯಿಯ ವರೆಗೆ ಹತ್ತಿ ಹೋಗಿ, ಇನ್ನು ಒಳಗೆ ಹೋಗಬೇಕೆಂಬುವಷ್ಟರಲ್ಲಿ ರಾಜಕನ್ನಿಕೆಯ ದಾಸಿಯಾದ ಪೇಕ್ಯೂಅ ಇವಳು ಆ ಗವಿಯಲ್ಲಿ ಹಣಿಕಿಕ್ಕಿ ನೋಡಿ ಅಂಜಿ, ಗಾಬರಿಯಾಗಿ, ಗದಗದ ನಡುಗಹತ್ತಿದಳು. ಆಗ ರಾಜಕನ್ನಿಕೆಯು—" ಪೇಕ್ಯೂಅ, ನಿನಗೆ ಅಂಜಲಿಕ್ಕೇನಾಯಿತು. "

ಪೇಕ್ಯೂಅ ಉತ್ತರ ಕೊಟ್ಟಳು—" ಗುದ್ದಿನೋಪಾದಿಯಲ್ಲಿ ಈ ಗವಿಯ ಬಾಯಿಯು ಬಹಳ ಇಕ್ಕಟ್ಟಾದದ್ದು ಇರುವದರಿಂದಲೂ, ಒಳಗೆ ಕಗ್ಗತ್ತಲೆ ಇರುವದರಿಂದಲೂ, ಅದನ್ನು ನೋಡಿದ ಕೂಡಲೆ ನನಗೆ ಬಹಳ ಅಂಜಿಕೆ ಬರುತ್ತದೆ. ಈ ಗವಿಯಲ್ಲಿ ದೆವ್ವಗಳಿರಬಹುದೆಂದು ನನಗೆ ತೋರುತ್ತದೆ. ಆದದರಿಂದ ಒಳಗೆ ನಾನು ಬರಲಾರೆನು. ಈ ಭಯಂಕರವಾದ ಗವಿಯ ಮೂಲಸ್ಥಯಜಮಾನರು ದೆವ್ವಗಳಾಗಿ ಇಲ್ಲಿರಬಹುದು; ನಾವು ಒಳಹೊಕ್ಕಕೂಡಲೆ ದಿಗ್ಗನೆ ಎದ್ದು ಬಂದು ನಮ್ಮನ್ನು ಒಳಗೆ ಎಳಕೊಂಡು ಹೋಗುವವು; ತಿರುಗಿ ನಮ್ಮನ್ನು ಹೊರಗೆ ಎಂದೂ ಬಿಡಲಿಕ್ಕಿಲ್ಲ " ಈ ಮೇರೆಗೆ ಮಾತಾಡಿ ಆಕೆಯು ತನ್ನ ದೊರೆಸಾನಿಯನ್ನು ಬಿಗಿದಪ್ಪಿಕೊಂಡಳು.

ರಾಜಪುತ್ರನು—"ಎಲೇ ಹುಚ್ಚಿಯೇ, ನಿನಗೆ ದೆವ್ವಗಳ ಅಂಜಿಕೆ ಇರುತ್ತದೆ; ಹೌದಲ್ಲೋ ? ಹಾಗಾದರೆ ದೆವ್ವಗಳಿಂದ ನಿನಗೆ ಎಳ್ಳಷ್ಟು ಅಪಾಯವಾಗದಂತೆ ನಾನು

ನಿನ್ನನ್ನು ಕರೆದುಕೊಂಡು ಹೋಗುವೆನು, ಕಂಡಿಯಾ ? ಸತ್ತವರಿಂದ ಯಾರಿಗೂ, ಎಂದೂ, ಏನೂ ಕೇಡು ತಟ್ಟುವ ಸಂಭವವಿಲ್ಲ. ಮನುಷ್ಯನು ಸತ್ತನಂತರ ಅವನನ್ನು ಒಮ್ಮೆ ನೆಲದೊಳಗೆ ಹುಗಿದಬಳಿಕ ಪುನಃ ಅವನು ಎಂದೂ, ಯಾರಿಗೂ ಕಾಣಿಸುವದಿಲ್ಲ; ತಿಳಿಯಿತೆ ? "

ಇವಸ್ಲಾಕನು ಅಂದನು—"ಸತ್ತವರು ಪುನಃ ಎಂದೂ ಕಾಣಿಸುವದಿಲ್ಲೆಂಬ ಸಿದ್ಧಾಂತವನ್ನು ನಾನು ಎಂದೂ ಮಾಡಲಾರೆನು. ಯಾಕಂದರೆ ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ ಎಲ್ಲರೂ ಸತ್ತವರು ಒಮ್ಮೊಮ್ಮೆ ದೃಷ್ಟಿಗೆ ಬೀಳುತ್ತಾರೆಂದು ನಂಬುತ್ತಾರೆ. ಇಡೀ ಜಗತ್ತಿನೊಳಗಿನ ಜನರು ದೆವ್ವಗಳುಂಟೆಂದು ನಂಬುತ್ತಾರೆಂದ ಮೇಲೆ, ಅವರ ತಿಳುವಳಿಕೆಯು ಕೇವಲ ಸುಳ್ಳಿರುತ್ತದೆಂದು ನಾನು ಅನ್ನಲಾರೆನು. ಜನರು ವಿದ್ವಾಂಸರಿರಲಿ, ಅವಿದ್ವಾಂಸರಿರಲಿ, ಎಂಥವರಿದ್ದರೂ, ಸತ್ತವರು ಪುನಃ ದೃಷ್ಟಿಗೆ ಬೀಳುತ್ತಾರೆಂಬ ಮಾತು ನಿಜವಾದದ್ದಿರುತ್ತದೆಂದು ನಂಬುತ್ತಾರೆ. ಹೀಗೆ ನಂಬದೆ ಇದ್ದ ಜನರೇ ಇಲ್ಲ. ಪೃಥ್ವಿಯೊಳಗಿನ ಸಕಲ ಜನರ ತಿಳುವಳಿಕೆಯು ಯಾವಾಗಲೂ ಒಂದೇ ತರದ್ದಿದ್ದು, ಆ ತಿಳುವಳಿಕೆಯನ್ನೇ ನೆರೆನಂಬಿ ಎಲ್ಲರೂ ನಡೆಯಬೇಕಾದರೆ ಆ ತಿಳುವಳಿಕೆಯಲ್ಲಿ ತಥ್ಯಾಂಶವು ಬಹಳ ಇರಲಿಕ್ಕೆ ಬೇಕು. ಹೀಗೆ ಇರದಿದ್ದರೆ ಎಲ್ಲರೂ ಒಂದೇ ತಿಳಿವಳಿಕೆಯಿಂದ ನಡೆಯಲಾರರು. ಇನ್ನು ಕೆಲ ನಿಂದಕರು ಈ ತಿಳಿವಳಿಕೆಯು ಕೇವಲ ಭ್ರಾಂತಿಕರವಾದದ್ದೆಂದು ಅನ್ನಬಹುದು. ಆದರೆ ಇಷ್ಟರ ಮೇಲಿಂದ ಬಹಳ ಜನರು ಬಹುಕಾಲದಿಂದ ನಂಬಿ, ಆ ನಂಬಿಗೆಯಂತೆ ನಡೆಯುತ್ತ ಬಂದ ತಿಳುವಳಿಕೆಯು ಕೇವಲ ನಿರಾಧಾರವಾದದ್ದು ಎಂದೆನ್ನಲಾಗದು. ಮತ್ತೊಂದು ಮಾತೇನೆಂದರೆ ಬಾಯಿಯಿಂದ ದೆವ್ವ ಇಲ್ಲೆಂದು ಹೇಳುವವರು ದೆವ್ವಕ್ಕೆ ಎಂದೂ ಅಂಜಬಾರದು; ಆದರೆ ಹಾಗೆ ಅನುಭವವು ಇಲ್ಲ. ಬಾಯಿಯಿಂದ ಮಾತ್ರ ದೆವ್ವ ಸುಳ್ಳು ಎಂದು ಒಣಡೌಲು ಬಡಿಯುತ್ತಾರೆ; ದೆವ್ವದ ಹೆಸರು ತೆಗೆದ ಕೂಡಲೆ ಅಂಜಿ ಗದಗದ ನಡುಗಹತ್ತುತ್ತಾರೆ. "

"ಆದಾಗ್ಯೂ ಮೊದಲೇ ಅಂಜಿದಂಥ ಪ್ರೇಕ್ಷ್ಯಾಳ ಈಕೆಯ ಅಂಜಿಕೆಯನ್ನು ಹೆಚ್ಚಿಸಬೇಕೆಂಬ ಇಚ್ಛೆಯು ನನಗಿಲ್ಲ. ಉಳಿದ ಯಾವತ್ತು ಸ್ಥಳಗಳನ್ನು ಬಿಟ್ಟು ಈ ನೆಲಗೋಪುರದಲ್ಲಿಯೇ ಆ ದೆವ್ವಗಳು ಇರುತ್ತವೆನ್ನಲಿಕ್ಕೆ ಏನೂ ಕಾರಣ ಕಾಣಿಸುವದಿಲ್ಲ. ಒಂದು ವೇಳೆ ಅವು ಇಲ್ಲಿದ್ದರೂ, ನಿರಪರಾಧಿಗಳಾದಂಥ ಮತ್ತು ಶುದ್ಧ ಮನಸ್ಸಿನವರಾದಂಥ ನಮಗೆ ತೊಂದರೆಯನ್ನು ಕೊಡಬೇಕೆಂಬ ಇಚ್ಛೆಯು ಇಲ್ಲವೆ ಶಕ್ತಿಯು ಅವುಗಳಿಗೆ ಯಾಕೆ ಉಂಟಾಗಬೇಕೆಂಬದರ ಕಾರಣವೂ ನನಗೆ ತಿಳಿಯ

ಲೊಲ್ಲದು. ನಾವು ಆ ದೆವ್ವಗಳಿಗೆ ಉಪದ್ರವ ಕೊಡುವ ಉದ್ದೇಶದಿಂದ, ಇಲ್ಲವೆ ಅವುಗಳಿಂದೇನಾದರೂ ಕಸುಕೊಂಡು ಹೋಗಬೇಕೆಂಬ ಭಾವನೆಯಿಂದ ಇಲ್ಲಿಗೆ ಬಂದಿಲ್ಲಾ, ಅಂದಮೇಲೆ ಸುಮ್ಮಸುಮ್ಮನೆ ಅವು ನಮ್ಮ ಮೇಲೆ ಯಾಕೆ ಸಿಟ್ಟಾಗ ಬೇಕು! ಹಾಗು ನಮಗೆ ಯಾಕೆ ಉಪದ್ರವ ಕೊಡಬೇಕು! "

ರಾಜಕನ್ನಿಕೆಯು ಅನ್ನುತ್ತಾಳೆ—" ನನ್ನ ಪ್ರೀಯ ಪೇಕ್ಯೂಆ, ಅಂಜಬೇಡ. ನಾನು ನಿನ್ನ ಮುಂದೆ ಹೋಗುತ್ತೇನೆ. ಇವಾಲ್ಲಾಕನು ನಿನ್ನ ಹಿಂದಿನಿಂದ ಬರುವನು ಅಂದಮೇಲೆ ನಿನಗೇತರ ಅಂಜಿಕೆ? ನೀನು ಅಬಿಸೀನಿಯಾ ದೇಶದ ರಾಜಕನ್ನಿಕೆಯು ಸಖಿಯಾಗಿರುತ್ತೀ ಎಂಬದನ್ನು ಮರೆಯಬೇಡ. ಅಂಜುವದು ನಿನಗೆ ತಕ್ಕದ್ದಲ್ಲ. "

ಪೇಕ್ಯೂಆ—" ದೊರೆಸಾನಿಗಳೇ, ನಾನು ತಮ್ಮ ತೊತ್ತು; ತಾವು ಹೇಳಿದ್ದು ನನಗೆ ಶಿರಸಾವಹಾಸ್ಯವು. ತಮ್ಮ ಸಲುವಾಗಿ ನಾನು ನನ್ನ ಪ್ರಾಣವನ್ನು ಸಹ ಕೊಡಲಿಕ್ಕೆ ಸಿದ್ಧಳಿದ್ದೇನೆ. ಆದರೆ ದಯಮಾಡಿ ತಾವು ನನ್ನನ್ನು ಈ ಗವಿಯೊಳಗೆ ನೂಕಿಸಿ ಕೊಲ್ಲಬೇಡಿರಿ; ತಾವು ನನ್ನನ್ನು ಬೇರೆ ಬೇಕಾದ ರೀತಿಯಿಂದ ಕೊಲ್ಲಬಹುದು. ಇನ್ನು ಅಗ್ರಹಮಾಡಿ ಗವಿಯೊಳಗೆ ನನಗೆ ಹೋಗಹೇಳಿದರೆ ನಾನು ತಮ್ಮ ಆಜ್ಞೆ ಮೀರಲಾರದೆ ಒಳಗೆ ಸೇರುವೆನು. ಆದರೆ ಒಮ್ಮೆ ಒಳಗೆ ಹೋದನಂತರ ತಿರುಗಿ ಜೀವದಿಂದ ನಾನು ಹೊರಗೆ ಬರುವದಿಲ್ಲ. ಇದು ನಿಶ್ಚಯವು. "

ರಾಜಕನ್ನಿಕೆಯು ತನ್ನ ದಾಸಿಯು ಬಹಳ ಅಂಜಿರುತ್ತಾಳೆ; ಇನ್ನು ಆಕೆಗೆ ಬುದ್ಧಿವಾದ ಇಲ್ಲವೆ ಸಿಟ್ಟು ಮಾಡುವದು ಲೇಸಲ್ಲೆಂದು ತಿಳಿದು ಆಕೆಯನ್ನು ತಬ್ಬಿಕೊಂಡು ಅಂದಳು:—" ಹಾಗಾದರೆ ಗವಿಯೊಳಗೆ ಹೋಗುವದಕ್ಕೆ ನಾನು ನಿನಗೆ ಆಗ್ರಹಮಾಡುವದಿಲ್ಲ. ನೀನು ತಿರುಗಿ ಹೋಗು, ನಾನು ಬರುವ ವರೆಗೆ ಡೇರಿಯೊಳಗೆ ಕೂತುಕೋ. " ತನ್ನ ದೊರೆಸಾನಿಯ ಮಾತುಗಳನ್ನು ಕೇಳಿ ಪೇಕ್ಯೂಆ ಈಕೆಗೆ ಸಮಾಧಾನವಾಗಲಿಲ್ಲ. ಆಕೆ ರಾಜಕನ್ನಿಕೆಗೆ ವಿನಯಪೂರ್ವಕವಾಗಿ ಬೇಡಿಕೊಂಡದ್ದೇನಂದರೆ—" ದೊರೆಸಾನಿಗಳೇ, ಈ ಭಯಂಕರವಾದ ಗವಿಯೊಳಗೆ ಹೋಗಬೇಡಿರಿ. " ರಾಜಕನ್ನಿಕೆಯು ಉತ್ತರ ಕೊಟ್ಟಳು—" ಉಪದೇಶ ಮಾಡಿ ನಿನ್ನಲ್ಲಿ ಧೈರ್ಯವನ್ನು ಹುಟ್ಟಿಸುವಷ್ಟು ಸಾಮರ್ಥ್ಯವು ನನ್ನಲ್ಲಿಲ್ಲದಿದ್ದರೂ ನಿನ್ನ ಮಾತುಕೇಳಿ ನಾನು ಹೇಡಿ ಆಗಲಾರೆನು; ಇದಲ್ಲದೆ ನಾನು ಯಾವ ಉದ್ದೇಶದಿಂದ ಇಷ್ಟುದೂರ ಬಂದಿದ್ದೇನೋ ಅದನ್ನು ಬಿಟ್ಟುಬಿಡುವದು ನನಗೆ ತಕ್ಕದ್ದಲ್ಲ. "

# ಮೂವತ್ತೆರಡನೆಯ ಭಾಗವು.

## ಅವರು ನೆಲಗೋಪುರದೊಳಗೆ ಹೋದರು.

ಪೇಕ್ಸ್ಯಾಅ ಹಿಂದಿರುಗಿ ಕೆಳಗಿಳಿದು ಡೇರೆಯೊಳಗೆ ಒಂದು ಕುಳಿತಳು. ಉಳಿದವರು ನೆಲಗೋಪುರದಲ್ಲಿಳಿದರು. ಅವರು ಯಾವತ್ತು ಕಡೆಯಲ್ಲಿ ತಿರುಗಾಡಿ, ಸಂಗಮವರೀ ಕಲ್ಲಿನ ಗೋಪುರಗಳನ್ನೂ, ಆ ಗೋಪುರಗಳನ್ನು ಕಟ್ಟಿಸಿದವನ ಪ್ರೇತವನ್ನು ಹಾಕಿಟ್ಟ ಪೆಟ್ಟಿಗೆಯನ್ನೂ ನೋಡಿದರು. ಆ ಮೇಲೆ ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ಅವರು ಒಂದು ವಿಶಾಲವಾದ ಕೋಣೆಯೊಳಗೆ ಕುಳಿತಾಗ ಇಮ್ಲಾಕನು ಅಂದನು.

"ನಾವು ಮನುಷ್ಯನು ರಚಿಸಿದ ಅತ್ಯದ್ಭುತವಾದ ಈ ನೆಲಗೋಪುರವನ್ನು ನೋಡಿ ನಮ್ಮ ಮನಸ್ಸನ್ನು ತೃಪ್ತಪಡಿಸಿದೆವು. ಇದಕ್ಕಿಂತಲೂ ಹೆಚ್ಚಿನ ಮನುಷ್ಯಕೃತಿಯೂ ಇನ್ನೊಂದಿರುತ್ತದೆ. ಅದ್ಯಾವದೆಂದರೆ, ಚೀನದೇಶದ ಗೋಡೆಯು."

"ಈ ಗೋಡೆಯನ್ನು ಯಾಕೆ ಕಟ್ಟಿದರೆಂಬದರ ಕಾರಣವು ಮೇಲೇ ಕಾಣುವಂತೆ ಅದೆ. ಚೀನದೇಶದೊಳಗಿನ ಹಣವುಳ್ಳ, ಆದರೆ ಅಂಜಬುರಕ ಜನರು ತಮಗೆ ತಮ್ಮ ನೆರಿಹೊರೆಯಲ್ಲಿರುವ ಕಾಡುಜನರು ದೇಶದೊಳಗೆ ಬಂದು, ತೊಂದರೆಕೊಡಬಾರದೆಂಬ ಉದ್ದೇಶದಿಂದ ಇಂಥ ಅದ್ಭುತವಾದ ಗೋಡೆಯನ್ನು ಕಟ್ಟಿದರು. ಆ ಕಾಡುಜನರು ಕಲಾಕೌಶಲ್ಯ ಮುಂತಾದ ಹೊಟ್ಟೆಹೊರಕೊಳ್ಳುವ ಬೆಲೆಯುಳ್ಳ ಸಾಧನಗಳನ್ನು ಅರಿತವರಲ್ಲ, ಕಲಾಕೌಶಲ್ಯವನ್ನು ಕಲಿತು, ಉದ್ಯೋಗ ಮಾಡಿ ಆ ಉದ್ಯೋಗದಿಂದ ತಮ್ಮ ಜೀವನಕ್ಕೆ ಅವಶ್ಯವಾದ ಪದಾರ್ಥಗಳನ್ನು ನಿರ್ಮಾಣಮಾಡಿಕೊಳ್ಳುವದಕ್ಕಿಂತ ಅವುಗಳನ್ನು ಸಿದ್ಧಮಾಡಿಟ್ಟಂಥ ಜನರನ್ನು ಪೀಡಿಸಿ, ಅವರಿಂದ ಆ ಪದಾರ್ಥಗಳನ್ನು ಕಸಕೊಂಡು ಹೋಗುವದೇ ಸುಲಭವೆಂದು ತಿಳಿದುಕೊಳ್ಳುತ್ತಿದ್ದರು. ಹದ್ದು ಮುಂತಾದ ಹಿಂಸ್ರಪಕ್ಷಿಗಳು ಕೋಳಿ ಮುಂತಾದ ಪ್ರಾಣಿಗಳ ಮೇಲೆ ಅಕಸ್ಮಾತ್ತಾಗಿ ಒಂದುಬಿದ್ದು ಅವುಗಳನ್ನು ಮುರಿದು ಹ್ಯಾಗ ತಿನ್ನುತ್ತವೋ, ಹಾಗೆ ಆ ಕಾಡುಜನರು ಉದ್ಯೋಗಶೀಲರಾದಂಥ ಚೀನದೇಶದ ಜನರನ್ನು ಪೀಡಿಸಿ, ಅವರ ಜೀವನದ ಒಡವೆಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದದರಿಂದ ಚೀನದವರು ಗೋಡೆಯನ್ನು ಕಟ್ಟಿ, ಆ ಕಾಡುಜನರ ಉಪದ್ರವಗಳಿಂದ ತಮ್ಮನ್ನು ಸಂರಕ್ಷಿಸಿಕೊಂಡರು."

"ಆದರೆ ಅಶ್ರಾಂತ ಶ್ರಮಮಾಡಿ, ಅಗಣಿತ ದ್ರವ್ಯ ವೆಚ್ಚಮಾಡಿ ಪಿರಾಮಿಡ್ (ನೆಲಗೋಪುರ) ಗಳನ್ನು ಯಾಕೆ ಕಟ್ಟಿದರೆಂಬದರ ಕಾರಣವು ಇನ್ನೂ

ಯಾರಿಗೂ ಗೊತ್ತಾಗಿಲ್ಲ. ಕೆಲವರು ಶತ್ರುಗಳಿಂದ ತಪ್ಪಿಸಿಕೊಂಡು ಅಡಗಿಕೊಳ್ಳುವದಕ್ಕಾಗಿ ಈ ಗೋಪುರಗಳನ್ನು ಕಟ್ಟಿರಬಹುದೆಂದು ಅನ್ನುತ್ತಾರೆ. ಆದರೆ ಈ ಗೋಪುರಗಳು ಅತಿಶಯ ಇಕ್ಕಟ್ಟಾದಂಥವು ಇದ್ದದರಿಂದ ಶತ್ರುಗಳ ಕಣ್ಣು ತಪ್ಪಿಸಿ ಒಮ್ಮೆಲೇ ಒಳಗೆ ಹೋಗಲಿಕ್ಕೆ ಬರುವದಿಲ್ಲ. ಕೆಲವರು ಇಜಿಪ್ತ ದೇಶದ ಜನರ ಅಗಣಿತ ಸಂಪತ್ತನ್ನು ಬಚ್ಚಿಡುವದಕ್ಕೆ ಈ ಗೋಪುರವನ್ನು ಕಟ್ಟಿರಬಹುದೆಂದೆನ್ನುತ್ತಾರೆ. ಆದರೆ ಈ ಗೋಪುರಗಳಿಗೆ ವೆಚ್ಚವಾದ ಹಣಕ್ಕಿಂತಲೂ ಅತಿಶಯ ಕಡಿಮೆ ಹಣದಿಂದ ಮತ್ತು ತೀರ ತುಸು ಶ್ರಮದಿಂದ ಸಂಪತ್ತನ್ನು ಬಚ್ಚಿಡುವ ಇಷ್ಟೇ ಭದ್ರವಾದ ಬೇರೊಂದು ಕಟ್ಟಡವನ್ನು ಕಟ್ಟಲಿಕ್ಕೆ ಬರುತ್ತಿತ್ತು. ಅಂದಮೇಲೆ, ಮೇಲೆ ಹೇಳಿದ ಎರಡೂ ಕಾರಣಗಳು ಸಮರ್ಪಕವಾಗಿ ತೋರುವದಿಲ್ಲ. ಅದ್ಭುತವಾದ ಕೃತ್ಯಗಳನ್ನು ಮಾಡಬೇಕೆಂಬ ಪ್ರಬಲ ಇಚ್ಛೆಯು ಕೆಲವರಿಗೆ ಉಂಟಾಗುತ್ತದೆ. ಆ ತರದ ಕೃತ್ಯಗಳನ್ನು ಮಾಡಿದ ಹೊರತು ಅವರ ಮನಸ್ಸಿನ ಸಮಾಧಾನವಾಗುವದಿಲ್ಲ. ಅಂಥ ಜನರು ಕೇವಲ ತಮ್ಮ ಇಚ್ಛೆಯನ್ನು ಪೂರ್ಣಮಾಡುವದಕ್ಕೋಸ್ಕರವೇ ಈ ಗೋಪುರಗಳನ್ನು ಕಟ್ಟಿರಬಹುದೆಂದು ನನಗೆ ತೋರುತ್ತದೆ. ಕೆಲವರು ತಮ್ಮ ಸುಖಕ್ಕೂ ಉಪಯೋಗಕ್ಕೂ ಸಾಧನೀಭೂತವಾದ ಯಾವತ್ತು ಒಡವೆಗಳು ತಮಗೆ ಸಿದ್ಧವಾಗಿದ್ದರೂ, ಕೃತ್ರಿಮೋಪಾಯಗಳಿಂದ ತಮ್ಮ ಇಚ್ಛೆಗಳನ್ನು ಹೆಚ್ಚಿಸುತ್ತಾರೆ. ಇದು ಮನುಷ್ಯ ಸ್ವಭಾವಕ್ಕೆ ಅನುರೂಪವಾದದ್ದೇ ಇರುತ್ತದೆ. ಮನುಷ್ಯನು ತನ್ನ ಉಪಯೋಗದ ಸಲುವಾಗಿ ಮೊದಲು ಮನೆಯನ್ನು ಕಟ್ಟಿಸುವದಕ್ಕೆ ಪ್ರವೃತ್ತನಾಗುತ್ತಾನೆ. ಆದರೆ ಉಪಯೋಗಕ್ಕೆ ತಕ್ಕಷ್ಟು ಮನೆಯಾದ ಕೂಡಲೆ ಅವನು ಅಷ್ಟಕ್ಕೆ ತೃಪ್ತನಾಗಿ ಆ ಕೆಲಸವನ್ನು ಅಲ್ಲಿಗೆ ಬಿಡುವದಿಲ್ಲ. ಕೇವಲ ಶೋಭೆಯ ಸಲುವಾಗಿ ಆ ಮನೆಯಲ್ಲಿ ಹೆಚ್ಚಿನ ವ್ಯವಸ್ಥೆಯನ್ನು ಮಾಡತೊಡಗುತ್ತಾನೆ. ಸಾರಾಂಶ, ತನ್ನ ಸರ್ವಶಕ್ತಿಯು ವೆಚ್ಚವಾಗಿ ಪುನಃ ಹೊಸ ಕೆಲಸಗಳನ್ನು ಮಾಡಬೇಕೆಂಬ ಇಚ್ಛೆಯು ಉಂಟಾಗಬಾರದಂಥ ಅದ್ಭುತ ಕೃತ್ಯಕ್ಕೆ ಅವನು ಕೈಹಾಕುತ್ತಾನೆ. ”

ವಿದ್ಯಮಾನ ಸಂಸಾರಸುಖಗಳು ಮನುಷ್ಯನ ಮನಸ್ಸನ್ನು ತೃಪ್ತಿಪಡಿಸಲಾರವೆಂದು ನನಗೆ ತೋರುತ್ತದೆ. ಇದಕ್ಕೆ ಈ ನೆಲಗೋಪುರಗಳೇ ಮೂರ್ತಿಮಂತವಾದ ಉದಾಹರಣಗಳಾಗಿವೆ. (ಯಾಕಂದರೆ ಮನುಷ್ಯನು ವಿದ್ಯಮಾನ ಸುಖಗಳಿಂದ ತೃಪ್ತನಾಗದೆ ಈ ತರದ ಅದ್ಭುತ ಕೃತ್ಯಗಳನ್ನು ಕೇವಲ ತನಗೆ ಆನಂದವಾಗಬೇಕೆಂಬ ಉದ್ದೇಶದಿಂದಲೇ ಮಾಡುತ್ತಾನೆಂದು ಮೇಲೆ ಹೇಳಿದೆ). ಸಾರ್ವಭೌಮನಾದಂಥ ಅನಿಯರ್ಮದಿತ ಶೌರ್ಯವುಳ್ಳಂಥ, ನಿಜವಾದ ಮತ್ತು ಕೃತ್ರಿಮ ಇಚ್ಛೆ

ಗಳನ್ನು ಪರಿಪೂರ್ಣಮಾಡಿ ಹೆಚ್ಚುಳಿಯುವಷ್ಟು ಹಣವುಳ್ಳಂಥ ಒಬ್ಬ ಅರಸನು ರಾಜ್ಯದಾಡಳಿತವನ್ನು ಜರಗಿಸಿ, ಪರಾಕ್ರಮವನ್ನು ಮಾಡಿ, ದಣಿದು, ಯಾವತ್ತು ಐಹಿಕಸುಖಗಳನ್ನು ಅನುಭವಿಸಿ, ಅವುಗಳಿಗೆ ಬೇಸತ್ತು, ಮುಪ್ಪಿನ ಕಾಲದಲ್ಲಿ ಖಿನ್ನವಾದ ಮನಸ್ಸನ್ನು ರಂಜಿಸುವದಕ್ಕಾಗಿ ಏನಾದರೊಂದು ಅದ್ಭುತ ಕೆಲಸವನ್ನು ಮಾಡಬೇಕೆಂದು ಯೋಚಿಸಿ, ಸಾವಿರಾರು ಜನರನ್ನು ಕೆಲಸಕ್ಕೆ ಹಚ್ಚಿ, ಲಾಭಹಾನಿ ಇಲ್ಲವೆ ಉಪಯುಕ್ತತೆಯ ಬಗ್ಗೆ ಏನೂ ವಿಚಾರಮಾಡದೆ, ಏನಾದರೊಂದು ಕೆಲಸವಾಗಲೆಂದು 'ಈ ಪರ್ವತಪ್ರಾಯವಾದ ನೆಲಗೋಪುರಗಳನ್ನು ಕಟ್ಟಿಸಿರಬಹುದೆಂದುಳ್ಳ ನನಗೆ ತೋರುತ್ತದೆ. ಇದಕ್ಕೂ ಹೆಚ್ಚಿನ ಉದ್ದೇಶವು ನನಗಂತೂ ಕಂಡುಬರುವದಿಲ್ಲ. ದೇವರ ದಯದಿಂದ ಮಧ್ಯಮಸ್ಥಿತಿಯಲ್ಲಿ ಸುಖದಿಂದ ಇದ್ದಾಗ್ಯೂ ಆ ಸ್ಥಿತಿಗೆ ಬೇಸತ್ತಂಥ, ಕೇವಲ ಬಹಿರಂಗದಲ್ಲಿ ಮಾತ್ರ ಆನಂದಮಯವಾಗಿದ್ದಂತೆ ತೋರುವ ಅರಸನ ಐಶ್ವರ್ಯವನ್ನೂ ವೈಭವವನ್ನೂ ಬಯಸುವಂಥ ಅಪಾರ ಸಂಪತ್ತು ಅಮರ್ಯಾದವಾದ ಅಧಿಕಾರ ಇವೆರಡಿದ್ದರೆ ಇಡೀ ಆಯುಷ್ಯವೆಲ್ಲ ಒಳ್ಳೇ ಆನಂದದಲ್ಲಿ ಹೋಗುವದೆಂದು ತಿಳಿಯುವಂಥ ಮನುಷ್ಯನೇ! ಈ ನೆಲಗೋಪುರಗಳನ್ನು ನೋಡಿ ನೀನು ವ್ಯರ್ಥವಾಗಿ ಹೆಚ್ಚಿನ ಸುಖದ ಬೆನ್ನುಹತ್ತಿರುವಿಯೆಂತಲೂ, ಅದು ಕೇವಲ ನಿನ್ನ ಮೂರ್ಖತನವಿರುತ್ತದೆಂತಲೂ ತಿಳಿದುಕೋ"

## ಮೂವತ್ತಮೂರನೆಯ ಭಾಗವು.

### ರಾಜಕನ್ನಿಕೆಗೆ ಆಕಸ್ಮಿಕವಾದ ಸಂಕಟವು ಒದಗಿತು.

ಕೆಲ ಹೊತ್ತಿನ ಮೇಲೆ ಅವರೆಲ್ಲರು ಅಲ್ಲಿಂದ ಎದ್ದು ತಾವು ಮೊದಲು ಹೋದ ದಾರಿಯಿಂದ ತಿರುಗಿ ಆ ಗವಿಯಿಂದ ಹೊರಬಿದ್ದರು. ಬರಬರುತ್ತ ದಾರಿಯಲ್ಲಿ ರಾಜಕನ್ನಿಕೆಯು ತಾನು ಆ ಗವಿಯಲ್ಲಿ ನೋಡಿದ ಕತ್ತಲೆಯುಳ್ಳ ಪ್ರದೇಶ, ರಮಣೀಯವಾದ ಸ್ಥಳ, ದಾರಿಯಲ್ಲಿ ತಮಗುಂಟಾದ ತೊಂದರೆ ಮುಂತಾದ ಚಮತ್ಕಾರವಾದಂಥ ಮತ್ತು ಭಯಂಕರವಾದಂಥ ಸಂಗತಿಗಳನ್ನು ಒಳ್ಳೇ ಮನೋಹರವಾದ ರೀತಿಯಿಂದ ತನ್ನ ಪ್ರಿಯ ದಾಸಿಗೆ ಹೇಳಬೇಕೆಂದು ಯೋಚಿಸುತ್ತ ಮೇಲೆ ಬಂದಳು. ಆದರೆ ಅವರು ತಮ್ಮ ಡೇರೆಗೆ ಬಂದು ನೋಡಲು ಎಲ್ಲ ಸೇವಕರು ಸ್ತಬ್ಧರಾಗಿಯೂ ಖಿನ್ನರಾಗಿಯೂ ಕುಳಿತಿದ್ದರು. ಅಂಜಿಕೆಯಿಂದಲೂ, ನಾಚಿಕೆಯಿಂದಲೂ ಗಂಡಸರು ತಲೆಬೊಗ್ಗಿಸಿಕೊಂಡು ಕುಳಿತಿದ್ದರು, ಹೆಂಗಸರು ಅಳಹತ್ತಿದ್ದರು.

ಆಮೇಲೆ ಅವರು ಏನಾಗಿರಬಹುದೆಂಬದನ್ನು ತರ್ಕಿಸುತ್ತ ಕೂಡ್ರದೆ ಕೂಡಲೆ ಏನಾಯಿತೆಂದು ತಮ್ಮ ಸೇವಕರನ್ನು ಕೇಳಿದರು. ಆಗ ಆ ಸೇವಕರಲ್ಲೋರ್ವನು ಅಂದನು. "ನಾವು ಗವಿಯಲ್ಲಿ ಸೇರಿ ಬಹಳ ದೂರೇನೂ ಹೋಗಿರಲಿಕ್ಕಿಲ್ಲ. ಇಷ್ಟರಲ್ಲಿ ಒಂದು ಅರಬರ ಗುಂಪು ನಮ್ಮನ್ನು ಮುತ್ತಿತು. ನಾವು ತೀರ ತುಸು ಜನರು ಇದ್ದದರಿಂದ ಅವರ ಕೂಡ ಬಡಿದಾಡಲಿಕ್ಕೆ ಅಸಮರ್ಥರಾಗಿದ್ದೆವು; ಮತ್ತು ಅವರು ಒಮ್ಮಿಂದೊಮ್ಮೆ ಬಂದದರಿಂದ ಓಡಿಹೋಗಲಿಕ್ಕೂ ಬರುವಂತೆ ಇದ್ದಿಲ್ಲ. ಆ ಅರಬರು ನಮ್ಮ ಡೇರೆಯಲ್ಲಿ ಹೊಕ್ಕು, ಎಲ್ಲ ಒಡವೆಗಳನ್ನು ತಕ್ಕೊಂಡು, ನಮ್ಮನ್ನು ಒಂಟೆಯ ಮೇಲೆ ಹೇರಿಕೊಂಡು ಹೋಗತಕ್ಕವರು; ಆದರೆ ಇಷ್ಟರಲ್ಲಿ ತುರ್ಕರ ದಂಡು ಬಂತು. ಅರಬರು ತುರ್ಕರನ್ನು ನೋಡಿ ಓಡಿಹೋದರು. ಆದರೆ ಹೋಗುವಾಗ ಪೇಕ್ಯ್ಯಾಳ ಹಾಗೂ ಆಕೆಯ ಇಬ್ಬರು ಸೇವಕರನ್ನು ಒಂಟೆಯ ಮೇಲೆ ಕೂಡ್ರಿಸಿಕೊಂಡು ಹೋದರು. ನಮ್ಮ ಹೇಳಿಕೆಯ ಮೇಲಿಂದ ತುರ್ಕರು ಅರಬರ ಬೆನ್ನುಹತ್ತಿ ಹೋಗಿದ್ದಾರೆ. ಆದರೆ ತುರ್ಕರಿಗೆ ಅರಬರು ಸಿಕ್ಕುವ ಆಶೆಯು ತಿಲಮಾತ್ರವಿಲ್ಲ."

ರಾಜಕನ್ನಿಕೆಯು ಈ ಸುದ್ದಿಯನ್ನು ಕೇಳಿ ಪರಿಪರಿಯಿಂದ ಪ್ರಲಾಪಿಸಿದಳು; ಆಕೆಗೆ ಅತ್ಯಾಶ್ಚರ್ಯವಾಯಿತು. ರಾಜಪುತ್ರನು ಸೇಡು ತೀರಿಸಿಕೊಳ್ಳಬೇಕೆಂಬ ಭರದಲ್ಲಿ ಆ ಕಳ್ಳರ ಬೆನ್ನುಹತ್ತಬೇಕೆಂದು ನಿಶ್ಚಯಿಸಿ, ತನ್ನ ಸಂಗಡ ಬರುವದಕ್ಕೆ ತನ್ನ ಆಳುಗಳಿಗೆ ಅಪ್ಪಣೆಯನ್ನಿತ್ತು, ಕೈಯಲ್ಲಿ ಖಡ್ಗವನ್ನು ತಕ್ಕೊಂಡು ಇನ್ನು ಹೊರಡತಕ್ಕವನು, ಆದರೆ ಇಮ್ಲಾಕನು ಅವನಿಗೆ ಅಂದನು.—"ರಾಜಪುತ್ರರೇ, ಈಗ ನಿಮ್ಮ ಈ ಸಿಟ್ಟಿನ ಇಲ್ಲವೆ ಶೌರ್ಯದ ಯೋಗದಿಂದ ಏನಾದೀತೆಂದು ನೀವು ತಿಳಿಯುತ್ತೀರಿ ? ಯುದ್ಧಮಾಡಲಿಕ್ಕೂ ಓಡಿಹೋಗಲಿಕ್ಕೂ ಕಲಿಸಿ ಸಿದ್ಧಮಾಡಿದಂಥ ಕುದುರೆಗಳ ಮೇಲೆ ಅರಬರು ಕುಳಿತಿರುವರು. ನೀವು ಕೂಡ್ರತಕ್ಕ ಕುದುರೆಗಳೆಂದರೆ ಬರೇ ಭಾರವನ್ನು ಹೊರುವ ಪಶುಗಳು; ಅಂದಮೇಲೆ ನೀವು ಅವರ ಬೆನ್ನುಹತ್ತಿ ಏನು ಮಾಡುವವರು? ನಾವು ಇಲ್ಲಿಂದ ಈಗ ಹೋದರೆ ಒಂದುವೇಳೆ ರಾಜಕನ್ನಿಕೆಯನ್ನು ಕಳಕೊಳ್ಳುವ ಸಂಭವವದೆ; ಆದರೆ ಪೇಕ್ಯ್ಯಾಳ ಸಿಗುವ ಸಂಭವವು ಮಾತ್ರ ಎಳ್ಳಷ್ಟು ಇಲ್ಲ."

ಅಷ್ಟರಲ್ಲಿಯೇ ಅರಬರನ್ನು ಬೆನ್ನಟ್ಟಿ, ಅವರನ್ನು ಹಿಡಿಯಬೇಕೆಂದು ಹೋದ ತುರ್ಕರು ಅವರನ್ನು ಕಾಣದೆ ತಿರುಗಿ ಅಲ್ಲಿಗೆ ಬಂದರು. ಈ ಮೇರೆಗೆ ನಿರಾಶೆಯಾದದ್ದನ್ನು ನೋಡಿ ರಾಜಕನ್ನಿಕೆಗೆ ಅತ್ಯಂತ ದುಃಖವಾಯಿತು. ಆಕೆಯು ಆಕ್ರೋಶಮಾಡಹತ್ತಿದಳು. ರಾಜಪುತ್ರನು ಆ ತುರ್ಕರಿಗೆ "ನೀವು ಎಂಥ ಹೇಡಿಗಳು ! ಅರಬರು ನಿಮಗೆ ಸಿಗಬಾರದೇ? ಅವರು ನಿಮಗೆ ಸಿಗದೆ ಇದ್ದದ್ದು ಅತ್ಯಾಶ್ಚರ್ಯವು"

ಎಂದು ಅವರ ತಿರಸ್ಕಾರ ಮಾಡತಕ್ಕವನಿದ್ದನು, ಆದರೆ ಅಷ್ಟರಲ್ಲಿ ಇವಶ್ಲಾಕನು ಅವನನ್ನು ಬಿಗಿಹಿಡಿದು ಅಂದನು.-“ಈ ತುರ್ಕರಿಗೆ ಆ ಅರಬರು ಸಿಕ್ಕಲಿಲ್ಲ; ಇದೊಂದು ಸುದೈವದ ಸಂಗತಿಯೇ ಸರಿ. ಯಾಕಂದರೆ, ಅವರು ತುರ್ಕರನ್ನು ನೋಡಿದ್ದರೆ, ಪೇಕರ್ಯಾಅ ಇವಳನ್ನೂ ಆಕೆಯ ಸೇವಕರನ್ನೂ ಅಲ್ಲಿಂದಲ್ಲಿಯೇ ಕೊಂದುಹಾಕುತ್ತಿದ್ದರಲ್ಲವೆ ತಿರುಗಿ ಅವರನ್ನು ತುರ್ಕರ ಸ್ವಾಧೀನ ಮಾಡುತ್ತಿದ್ದಿಲ್ಲ.”

# ಮೂವತ್ತನಾಲ್ಕನೆಯ ಭಾಗವು.

## ಅವರೆಲ್ಲರೂ ಪೇಕರ್ಯಾಅ ಇಲ್ಲದೆ ಕೇರೋ ಪಟ್ಟಣಕ್ಕೆ ಬಂದರು.

ಆ ಸ್ಥಳದಲ್ಲಿ ಸುಮ್ಮನೆ ಹೆಚ್ಚುದಿವಸ ನಿಲ್ಲುವದರಿಂದ ಏನೂ ಲಾಭವಿಲ್ಲೆಂದು ತಿಳಿದುಕೊಂಡು ಅವರೆಲ್ಲರು ಅಲ್ಲಿಂದ ಹೊರಟು ಕೇರೋ ಪಟ್ಟಣಕ್ಕೆ ಬಂದರು. ಬರುವಾಗ ದಾರಿಯಲ್ಲಿ ನಾನಾತರದ ವಿಚಾರಗಳು ಅವರ ಮನಸ್ಸಿನಲ್ಲಿ ಬಂದವು. ತಾವು ಆ ಹಾಳುಗೋಪುರಗಳನ್ನು ನೋಡಲಿಕ್ಕೆ ಬಂದದ್ದೇ ತಮ್ಮ ತಪ್ಪೆಂದು ಕೆಲವರೂ, ಹಗಲು ಕಳವುಮಾಡುವಂಥ ಜನರನ್ನು ಸಹ ದಂಡಿಸಲಾರದಷ್ಟು ಸೋಮಾರಿಯಾದ ಅರಸನ ರಾಜ್ಯವು ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೆ! ಎಂದು ಕೆಲವರೂ, ತಾವು ಬರುವಾಗ ಸಾಕಷ್ಟು ಜನ ಸೇವಕರನ್ನು ಕರಕೊಂಡು ಬಾರದೆ ಇದ್ದದ್ದು, ತಮ್ಮ ಮೂರ್ಖತನವೆಂದು ಕೆಲವರೂ, ತಾವು ಸಾಕಷ್ಟು ಎಚ್ಚರದಿಂದಿದ್ದರೆ ಪೇಕರ್ಯಾಅ ಇವಳನ್ನು ಯಾರೂ ತೆಗೆದುಕೊಂಡು ಹೋಗುತ್ತಿದ್ದಿಲ್ಲವೆಂದು ಕೆಲವರೂ ಅನ್ನುತ್ತ ದಾರೀ ನಡೆದರು. ಅವರೆಲ್ಲರೂ ಏನು ಬೇಕಾದದ್ದು ಮಾಡಿ ಪೇಕರ್ಯಾಅ ಇವಳ ಶೋಧಮಾಡಬೇಕೆಂದು ನಿಶ್ಚಯಿಸಿದರು. ಆದರೆ ಆಕೆಯನ್ನು ಗೊತ್ತುಹಚ್ಚುವ ಯೋಗ್ಯ ಮಾರ್ಗವು ಮಾತ್ರ ಯಾರಿಗೂ ಗೊತ್ತಾಗಲಿಲ್ಲ.

ಈ ಮೇರೆಗೆ ವ್ಯರ್ಥವಾದ ಹಂಚಿಕೆಗಳನ್ನು ಹಾಕುತ್ತ ಅವರೆಲ್ಲರೂ ಕೇರೋ ಪಟ್ಟಣಕ್ಕೆ ಬಂದು ಮುಟ್ಟಿದರು. ರಾಜಕನ್ನಿಕೆಯು ತನ್ನ ಅಂತಃಪುರದೊಳಗೆ ಹೋಗಿ ಚಿಂತಾಕ್ರಾಂತಳಾಗಿ ಕುಳಿತುಕೊಂಡಳು. ಆಗ ಆಕೆಯ ತೊತ್ತುಗಳು ಆಕೆಯ ಸಮಾಧಾನಮಾಡುವದಕ್ಕಾಗಿ ಈ ಮೇರೆಗೆ ಅಂದರು- “ದೊರೆಸಾನಿಗಳೇ, ಮನುಷ್ಯಮಾತ್ರರಿಗೆ ಕೆಲವು ಸುಖದ ದಿವಸಗಳೂ, ಕೆಲವು ದುಃಖದ ದಿವಸಗಳೂ ಬಂದೇಬರುತ್ತವೆ. ಯಾವ ಮನುಷ್ಯನೂ ಸದಾಸರ್ವಕಾಲ ಸುಖಿಯಾಗಿರಲಾರನು. ಪೇಕರ್ಯಾಅ ಅನೇಕ ದಿವಸಗಳ ವರೆಗೆ ಸುಖವನ್ನು ಅನುಭೋಗಿಸಿದ್ದಾಳೆ. ಈಗ ಆಕೆಗೆ ಕೆಲವು ದುಃಖದ ದಿವಸಗಳು ಬಂದವೆ. ಇದು ಕೇವಲ ಸ್ವಾಭಾವಿ

ಕವೇ. ಆಕೆ ಎಲ್ಲಿದ್ದರೂ ಸುಖದಿಂದಲೇ ಇರುವಳೆಂದು ನಮಗೆ ತೋರುತ್ತದೆ. ಪೇಕ್ಯ್ರಾಆ ಹೋದವಳು ಹೋಗವಲ್ಲಳೇಕೆ; ಬೇರೊಬ್ಬ ದಾಸಿಯು ತನ್ನ ಕೆಲಸ ವನ್ನು ಆಕೆಯಷ್ಟೇ ದಕ್ಷತೆಯಿಂದಲೂ, ಜಾಗ್ರತೆಯಿಂದಲೂ ಮಾಡುವಳು. "

ರಾಜಕನ್ನಿಕೆಯು ಅವರಿಗೆ ಏನೂ ಉತ್ತರವನ್ನು ಕೊಡಲಿಲ್ಲ. ಆದರೂ ಅವರು ತಮ್ಮ ಸಮಾಧಾನದ ಭಾಷಣವನ್ನು ಪೂರ್ವದಂತೆ ಸಾಗಿಸಿದರು. ರಾಜ ಪುತ್ರಿಯ ಪ್ರಿಯಕರಳಾದ ಪೇಕ್ಯ್ರಾಆ ಹೋದ ಬಗ್ಗೆ ಅವರಿಗೆ ತಿಲಮಾತ್ರ ದುಃಖ ವಾಗಿದ್ದಿಲ್ಲ ಇಷ್ಟೇ ಅಲ್ಲ, ಆಕೆ ಹೋದದ್ದು ಒಂದು ಪರಿಯಿಂದ ಅವರಿಗೆ ಸಮಾ ಧಾನವೇ ಆಗಿತ್ತು.

ಮರುದಿವಸ ರಾಜಪುತ್ರನು ತನಗೆ ಉಂಟಾದ ಹಾನಿಯನ್ನು ಅಲ್ಲಿಯ ಮುಖ್ಯಾಧಿಕಾರಿಗೆ ತಿಳಿಸಿ, ಆ ಹಾನಿಯನ್ನು ತುಂಬಿಸಿಕೊಡುವ ಬಗ್ಗೆ ಪ್ರಾರ್ಥನೆ ಮಾಡಿಕೊಂಡನು. ಆ ಅಧಿಕಾರಿಯು ಆ ಕಳ್ಳರನ್ನು ಶೋಧಿಸಿ, ಅವರನ್ನು ಹಿಡಿದು ತಂದು, ಅವರಿಗೆ ಒಳ್ಳೇ ಶಾಸನಮಾಡುತ್ತೇನೆಂದು ಒಣ ಬಡಿವಾರ ಮಾಡಿದನು. ಆದರೆ ನಿಜವಾಗಿ ಅವನು ಆ ಕಳ್ಳರ ಶೋಧದ ಬಗ್ಗೆ ಏನೂ ಪ್ರಯತ್ನ ಮಾಡ ಲಿಲ್ಲ; ಮತ್ತು ಆ ಕಳ್ಳರ ಬಗ್ಗೆ ಯಾರಿಗೂ ಏನೂ ಗೊತ್ತಿಲ್ಲದ್ದರಿಂದ ಶೋಧ ಹತ್ತುವ ಸಂಭವವೂ ಇದ್ದಿಲ್ಲ.

ಆ ಅಧಿಕಾರಿಯ ಕೈಯಿಂದ ಏನೂ ಆಗುವದಿಲ್ಲೆಂಬ ಕೂಡಲೆ ರಾಜಪುತ್ರ ನಿಗೆ ಕಂಡುಬಂತು. ಅಪರಾಧಗಳಿಗೆ ಎಷ್ಟರ ಮಟ್ಟಿಗೆ ಶಿಕ್ಷೆ ಮಾಡಲಿಕ್ಕೆ ಸಾಮ ರ್ಥ್ಯವಿರುತ್ತದೋ ಅದಕ್ಕಿಂತಲೂ ಹೆಚ್ಚಿನ ಅಪರಾಧಗಳು ಮೇಲಿಮೇಲೆ ಆಗಹ ತ್ತಿದರೆ ಮತ್ತು ನ್ಯಾಯತೀರಿಸಲಶಕ್ಯವಾದ ದುಷ್ಕೃತ್ಯಗಳು ಮೇಲಿಮೇಲೆ ಸಂಭ ವಿಸಹತ್ತಿದರೆ, ಅಧಿಕಾರಿಗಳು ತಮ್ಮ ಮುಂದೆ ಬಂದ ಅಂಥ ಅಪರಾಧಗಳ ಕಡೆಗೆ ದುರ್ಲಕ್ಷಮಾಡುತ್ತಾರೆ; ಅಂದರೆ ಅವುಗಳ ನಿರ್ಣಯದ ಬಗ್ಗೆ ಏನೂ ವಿಚಾರ ಮಾಡದೆ ಮೈಗಳ್ಳರಾಗಿ ಸ್ವಸ್ಥ ಕುಳಿತುಕೊಳ್ಳುತ್ತಾರೆ; ಮತ್ತು ನ್ಯಾಯ ಬೇಡ ಬಂದವನು ಕಣ್ಣುಮರೆಯಾದ ಕೂಡಲೆ ಅಧಿಕಾರಿಯು ಆತನ ವಿನಂತಿಯನ್ನೂ, ಆತನಿಗೆ ಉಂಟಾದ ಅನ್ಯಾಯವನ್ನೂ, ಅದರಿಂದ ಅವನಿಗೆ ತಟ್ಟಿದ ಹಾನಿಯನ್ನೂ ಪೂರ್ಣ ಮರೆತುಬಿಡುತ್ತಾನೆ.

ಪೇಕ್ಯ್ರಾಆ ದಾಸಿಯ ಸುದ್ದೀ ತಿಳಿದುಕೊಳ್ಳುವದಕ್ಕೋಸ್ಕರ ಇವ್ಲಾಕನು ಸ್ವಂತ ರೀತಿಯಿಂದ ( ಅಧಿಕಾರಿಗಳ ಸಹಾಯವಿಲ್ಲದೆ ) ಪ್ರಯತ್ನಮಾಡಹತ್ತಿದನು. ಕೂಡಲೆ, ಅರಬರ ಗುಂಪುಗಳು ವಾಸಿಸುವ ಸ್ಥಳವು ತನಗೆ ಗೊತ್ತುಂಟು. ಆ ಗುಂಪುಗಳ ಮುಖ್ಯಸ್ಥನ ಕೂಡ ತಮ್ಮ ಪತ್ರವ್ಯವಹಾರವು ಸಹ ನಡಿಯುತ್ತದೆಂದು

ಗುಳಿಗೆಯನ್ನು ಉಳ್ಳಿಸುವ ಎಷ್ಟೋ ಜನರು ಇವ್ಹಾನನ ದೃಷ್ಟಿಗೆ ಬಿದ್ದರು. ಅವರು ಪೇಕ್ಸ್ಯಾಳ ಇವಳನ್ನು ಹುಡಿಕಿಕೊಂಡು ಬರುತ್ತೇವೆಂದು ಹೇಳಿದರು. ಅವರಲ್ಲಿ ಕೆಲವರು ದಾರೀ ವೆಚ್ಚಕ್ಕಾಗಿ ತುಸು ಹಣವನ್ನು ಇಸುಕೊಂಡು ಹೋದವರು ತಿರುಗಿ ಮೋರೆಯನ್ನೇ ತೋರಿಸಲಿಲ್ಲ. ಬೇರೆ ಕೆಲವರು ಸುಳ್ಳು ಸುದ್ದಿಗಳನ್ನು ಹೇಳಿ ದುಡ್ಡು ಎಬ್ಬಿಸಿಕೊಂಡು ಹೋದರು. ಹೀಗಾದಾಗ್ಯೂ ರಾಜಕನ್ನಿಕೆಯು ತನ್ನ ಸೇವಕಳ ಶೋಧವನ್ನು ಮಾಡುವ ಹಟವನ್ನು ಬಿಡಲಿಲ್ಲ. ಯಾರಾದರು ಪೇಕ್ಸ್ಯಾಳ ಇವಳ ವಿಷಯಕ್ಕೆ ಏನಾದರು ಹೇಳಿದರೆ ಸಾಕು, ಅದು ಯುಕ್ತವಾದದ್ದೇ ಇರಲಿ, ಅಯುಕ್ತವಾದದ್ದೇ ಇರಲಿ, ಆಕೆ ಅದನ್ನು ಮಾಡೇ ತೀರುವಳು. ಈ ಮೇರೆಗೆ ಪೇಕ್ಸ್ಯಾಳ ಸಿಕ್ಕುವಳೆಂಬ ಆಕೆಯ ಆಶಾಂಕುರವು ದಿನದಿನಕ್ಕೆ ವೃದ್ಧಿಂಗತವಾಗಹತ್ತಿತು. ಒಂದು ಹಂಚಿಕೆಯು ನಿಷ್ಫಲವಾದರೆ ಆಕೆ ಬೇರೊಂದು ಹಂಚಿಕೆಯನ್ನು ಸೂಚಿಸುವಳು. ಅವಳ ಶೋಧಕ್ಕೆ ಹೋದ ಒಬ್ಬ ಮನುಷ್ಯನು ಆಕೆಯನ್ನು ಕಾಣದೆ ತಿರುಗಿ ಬಂದರೆ, ಬೇರೊಬ್ಬ ಮನುಷ್ಯನನ್ನು ಮತ್ತೊಂದು ದಿಕ್ಕಿಗೆ ಕಳಿಸುವಳು.

ಈ ಮೇರೆಗೆ ನಾನಾವಿಧವಾದ ಯತ್ನಗಳು ಇಡೀ ಎರಡು ತಿಂಗಳು ನಡೆದಾಗ್ಯೂ ಪೇಕ್ಸ್ಯಾಳ ಇವಳ ಶೋಧವಾಗಲಿಲ್ಲ. ಈ ಹೊತ್ತು ಸಿಕ್ಕದಿದ್ದರೆ ನಾಳೆ, ನಾಳೆ ಸಿಕ್ಕದಿದ್ದರೆ ನಾಡಿದು ಸಿಕ್ಕಾಳೆಂದು ಒಬ್ಬರಿಗೊಬ್ಬರು ಧೈರ್ಯಕೊಡುತ್ತಿದ್ದರು. ಆದರೆ ಕಡೆಗೆ ಏನೂ ಸಾಧ್ಯವಾಗದ್ದನ್ನು ನೋಡಿ ರಾಜಪುತ್ರಿಗೆ ಅತಿಶಯ ದುಃಖವಾಯಿತು; ಆಕೆಯ ಉತ್ಸಾಹವು ತಗ್ಗಿತು. ಆಕೆಯು ಶೋಕಾಕುಲಳಾಗಿ ತನ್ನನ್ನು ತಾನೇ ಈ ಮೇರೆಗೆ ಹಳಿದುಕೊಂಡಳು. "ಪೇಕ್ಸ್ಯಾಳ ಗವಿಯೊಳಗೆ ಬರುವದಕ್ಕೆ ತನಗೆ ಅಂಜಿಕೆ ಬರುತ್ತದೆಂದು ಅಂದಕೂಡಲೆ ತಿರುಗಿ ಹೋಗಿ ಡೇರೆಯೊಳಗೆ ಕೂಡುಕೊಳ್ಳೆಂದು ನಾನು ಆಕೆಗೆ ಯಾಕೆ ಹೇಳಿದೆನು? ದೃಢನಿಶ್ಚಯ ಮಾಡಿ ನಾನು ಆಕೆಯನ್ನು ನನ್ನ ಸಂಗಡ ಕರೆದುಕೊಂಡು ಹೋಗಿದ್ದರೆ ಈಗ ನನಗೆ ಉಂಟಾದ ಅನರ್ಥವು ಯಾಕೆ ಸಂಭವಿಸುತ್ತಿತ್ತು? ನಾನು ಆಕೆಯ ಮೇಲೆ ಮಿತಿ ಮೀರಿ ಮೋಹ ತೋರಿಸದಿದ್ದರೆ, ಆಕೆಯು ನನ್ನ ಆಜ್ಞೆಯನ್ನು ಎಂದೂ ಮೀರುತ್ತಿದ್ದಿಲ್ಲ; ಮತ್ತೂ ದೆವ್ವಗಳಿಗೆ ಅಂಜುವದಕ್ಕಿಂತಲೂ ಹೆಚ್ಚು ನನಗೆ ಆಕೆ ಅಂಜುತ್ತಿದ್ದಳು. ನಾನು ಸಿಟ್ಟಿನಿಂದ ಆಕೆಯ ಕಡೆಗೆ ನೋಡಿದರೆ ಸಾಕು, ಆಕೆಯು ನಾನು ಹೇಳಿದಂತೆ ಕೇಳುತ್ತಿದ್ದಳು. ಮೂರ್ಖಳಾದ ನಾನು ಆಗ ಬಾಯಿಬಿಚ್ಚಿ ಯಾಕೆ ಮಾತಾಡಲಿಲ್ಲ? ಆಕೆಯ ಮಾತು ನಾನು ಯಾಕೆ ಕೇಳಿದೆನು?"

ರಾಜಪುತ್ರಿಯು ಮಾತು ಕೇಳಿ ಇವಲ್ಲಾಕನು—“ದೊರೆಸಾನಿಗಳೇ, ನೀವು ಸದ್ಗುಣಿಗಳೆಂಬದು ಎಲ್ಲರಿಗೂ ಗೊತ್ತಿದ್ದ ಮಾತು. ದುರ್ದೈವದಿಂದ ನಿಮ್ಮ ಸದ್ಗುಣದಿಂದಲೇ ಈ ದುಃಖಕರ ಪರಿಣಾಮವು ಸಂಭವಿಸಿರುತ್ತದೆ. ಇಷ್ಟರ ಮೇಲಿಂದ ನೀವು ನಿಮ್ಮ ಸದ್ಗುಣಕ್ಕೆ ಹೆಸರಿಟ್ಟು ಅವನ್ನು ದೂಷಿಸಬೇಡಿರಿ. ಪೇಕಲ್ಯಾಆ ಇವಳ ಅಂಜುಬುರಕತನವನ್ನು ನೋಡಿ ನೀವು ದಯಮಾಡಿ ಆಕೆಯನ್ನು ಹಿಂದಕ್ಕೆ ಕಳಿಸಿರಿ; ಇದರಿಂದ ನಿಮ್ಮ ಔದಾರ್ಯವೂ ಸೌಜನ್ಯವೂ ವ್ಯಕ್ತವಾಗುತ್ತವೆ. ಇದರಲ್ಲಿ ನಿಮ್ಮ ದೋಷವಿಲ್ಲ. ನಾವು ನಮ್ಮ ಕರ್ತವ್ಯಕ್ಕನುಸರಿಸಿ ಯೋಗ್ಯರೀತಿಯಿಂದ ನಡೆಯುತ್ತಿರಲು, ಅದರಿಂದೇನಾದರೂ ಕೆಟ್ಟ ಪರಿಣಾಮವು ಸಂಭವಿಸಿದರೆ ಅದಕ್ಕೆ ನಾವು ಹೊಣೆಗಾರರಲ್ಲ. ಯಾಕಂದರೆ, ಈ ಮೇರೆಗೆ ನಡೆಯಬೇಕೆಂದು ನಿಯಮವನ್ನು ಮನುಷ್ಯಮಾತ್ರರಿಗೆ ಹಾಕಿಕೊಟ್ಟಂಥ, ಮತ್ತು ಆ ನಿಯಮಕ್ಕನುಸರಿಸಿ ತಪ್ಪದೆ ನಡೆಯುವವರಿಗೆ ಎಂದೂ ದುಃಖವು ತಟ್ಟಲಿಕ್ಕಿಲ್ಲೆಂದು ಗೊತ್ತುಪಡಿಸಿದಂಥ, ಸರ್ವಶಕ್ತನಾದ ಪರಮೇಶ್ವರನೇ ಆ ಪರಿಣಾಮಕ್ಕೆ ಹೊಣೆಗಾರನು. ಮನುಷ್ಯನಿಗಿಂತಲೂ ಸಾವಿರಾರು ಮಡಿ ಜಾಣನಾದ ಪರಮೇಶ್ವರನ ನಿಯಮಗಳನ್ನು ಉಲ್ಲಂಘಿಸಿ, ನಾವು ಒಣಹೆಮ್ಮೆಗೆ ಒಳಗಾಗಿ, ನಮ್ಮ ಅಲ್ಪವಾದ ಜಾಣತನದಿಂದ ಕ್ಷಣಿಕ ಸುಖಪ್ರಾಪ್ತಿಯ ಬಗ್ಗೆ— ಆ ಸುಖವು ನೈಸರ್ಗಿಕವಾದ್ದಿರಲಿ ಇಲ್ಲವೆ ನೈತಿಕವಿರಲಿ— ಯತ್ನಮಾಡಲು ಆ ಯತ್ನವು ನಿಷ್ಫಲವಾಗಿ ನಮಗೇನಾದರೂ ಕೇಡು ಸಂಭವಿಸಿದರೆ ಮಾತ್ರ, ಆ ಕೇಡಿನ ಬಗ್ಗೆ ಹೊಣೆಗಾರರು ನಾವೇ. (ಅಂದರೆ ಎಲ್ಲಿಯವರೆಗೆ ಯೋಗ್ಯರೀತಿಯಿಂದ ನಡೆಯುತ್ತೇವೋ ಅಲ್ಲಿಯವರೆಗೆ ಉಂಟಾದ ಕೇಡಿಗೆ ಹೊಣೆಗಾರರು ನಾವಲ್ಲ; ಆದರೆ ದೇವರ ನಿಯಮವನ್ನು ಮೀರಿ ನಡೆಯಲು ಆಗ ಉಂಟಾದ ಕೇಡಿಗೆ ಮಾತ್ರ ನಾವು ಹೊಣೆಗಾರರು). ಅಯೋಗ್ಯಮಾರ್ಗವನ್ನವಲಂಬಿಸಿ ಇಚ್ಛಿತಸುಖಪ್ರಾಪ್ತಿಯನ್ನುಂಟು ಮಾಡಿಕೊಳ್ಳುವದು ಅಸಾಧ್ಯವು. ಯಾಕಂದರೆ, ಆ ತಪ್ಪುಮಾರ್ಗದಿಂದ ಚಲೋ ಕೆಲಸವನ್ನು ನೆರವೇರಿಸಬೇಕಾದರೆ ಮನುಷ್ಯನಿಗೆ ಸೃಷ್ಟಿಯೊಳಗಿನ ಸಕಲ ವಸ್ತುಗಳ ಕಾರ್ಯಕಾರಣಭಾವಗಳು ಪೂರ್ಣವಾಗಿ ಗೊತ್ತಿರಲಿಕ್ಕೆಬೇಕು. ಆದರೆ ಇದು ಕೇವಲ ಅಸಂಭವವು. ಆದದರಿಂದ ತಪ್ಪುಮಾರ್ಗದಿಂದ ನಡೆಯಬಾರದು. ನಾವು ಯೋಗ್ಯವಾದ ಮಾರ್ಗವನ್ನವಲಂಬಿಸಿ ನಡೆಯುತ್ತಿರಲು ದುರ್ದೈವದಿಂದ ನಮಗೆ ಕೇಡು ಸಂಭವಿಸಿದರೆ ಸಂಭವಿಸವಲ್ಲದೇಕೆ? ನಾವು ಸರಿಯಾದ ರೀತಿಯಿಂದ ವರ್ತಿಸಿದ್ದೇವೆ; ಆ ವರ್ತನದ ಫಲವು ಈಹೊತ್ತು ನಮಗೆ ದೊರೆಯದಿದ್ದರೂ ಮುಂದೆ ಎಂದಾದರೂ ನಿಶ್ಚಯವಾಗಿ ದೊರೆಯುವದೆಂದು ನಮ್ಮ ಮನಃಸಾಕ್ಷಿಯು ಹೇಳುತ್ತಿರುತ್ತದೆ;

ಅದರಿಂದ ನನ್ನ ಮನಸ್ಸಿಗೆ ಒಂದುತರದ ಸಮಾಧಾನವಿರುತ್ತದೆ. ಆದರೆ ನಾವು ನಮ್ಮ ಜಾಣತನವನ್ನೇ ಮೆರಿಸಿ, ಯೋಗ್ಯ ವರ್ತನವ್ಯಾವದು, ಅಯೋಗ್ಯ ವರ್ತನವ್ಯಾವದೆಂಬದನ್ನು ವಿಚಾರಿಸದೆ, ಅಯೋಗ್ಯ ವರ್ತನದಿಂದಲೇ ನಮ್ಮ ಕಲ್ಯಾಣ ಮಾಡಿಕೊಳ್ಳುವ ಯತ್ನಮಾಡಲು ಒಂದುವೇಳೆ ಆ ಯತ್ನದಲ್ಲಿ ನಮಗೆ ಯಶ ದೊರೆತರೂ ನಮಗೆ ಸುಖವಾಗಲಾರದು. ಯಾಕಂದರೆ, ನಾವು ಅಯೋಗ್ಯರೀತಿಯಿಂದ ವರ್ತಿಸಿದೆವು ಎಂಬ ಮಾತು ನಮ್ಮ ಮನಸ್ಸನ್ನು ಯಾವಾಗಲೂ ತಿನ್ನುತ್ತಿರುತ್ತದೆ. ಒಂದುವೇಳೆ ಆ ಯತ್ನವು ಸಿದ್ಧಿಗೆ ಹೋಗದಿದ್ದರೆ ಮಾತ್ರ ನಮಗೆ ಇಮ್ಮಡಿ ವ್ಯಸನವಾಗುತ್ತದೆ. ವ್ಯರ್ಥವಾಗಿ ಅಯೋಗ್ಯಮಾರ್ಗವನ್ನವಲಂಬಿಸಿವೆವೆಂಬದು ಮೊದಲನೇ ದುಃಖ, ಇಚ್ಛಿತಕಾರ್ಯವು ಸಿದ್ಧಿಗೆ ಹೋಗಲಿಲ್ಲೆಂಬದು ಎರಡನೇ ದುಃಖ; ವ್ಯರ್ಥವಾಗಿ ಅಯೋಗ್ಯ ಮಾರ್ಗವನ್ನು ಅವಲಂಬಿಸಿ ನಡೆದದರಿಂದ ಉಂಟಾದ ದುಃಖವನ್ನೂ ಅಂಥ ಅನ್ಯಾಯದಿಂದ ನಡೆದರೂ ಕೂಡ ಕಾರ್ಯಸಿದ್ಧಿಯಾಗಲಿಲ್ಲೆಂಬ ಕ್ಲೇಶವನ್ನೂ ಅನುಭೋಗಿಸುವಂಥ ಮನುಷ್ಯನಿಗೆ ಯಾವ ತರದ ಸಮಾಧಾನವನ್ನು ಹೇಳಬೇಕೆಂಬುವವನ್ನು ನೀವೇ ವಿಚಾರಿಸಿ ಹೇಳಿರಿ? ಸಮಾಧಾನ ಹೇಳಲಿಕ್ಕೆ ಮಾರ್ಗವೇ ಇಲ್ಲ.

" ರಾಜಕನ್ನಿಕೆಯರೇ ಪ್ರೇಕ್ಷ್ಯ ಇವಳು ನೆಲಗೋಪುರಗಳನ್ನು ನೋಡಬೇಕೆಂದು ಬಯಸಿ ನಿಮ್ಮ ಸಂಗಡ ಹೊರಟಿರಲು, ನೀವು ಒತ್ತಾಯದಿಂದ ಆಕೆಯನ್ನು ದೇವಿಯಲ್ಲಿ ಬಿಟ್ಟು ಹೋದಬಳಿಕ ಕಳ್ಳರು ಆಕೆಯನ್ನು ಕದ್ದುಕೊಂಡು ಹೋಗಿದ್ದರೆ, ಇಲ್ಲವೆ ಆಕೆ ಒಳಗೆ ಬರಲಿಕ್ಕೆ ಒಲ್ಲೆಂದು ಅಳುತ್ತ ಕೂತಿರಲು, ಆಕೆಯನ್ನು ಒತ್ತಾಯದಿಂದ ನೆಲಗೋಪುರದೊಳಗೆ ಕರೆದುಕೊಂಡು ಹೋದಬಳಿಕ ಅಂಜಿಕೆಯಿಂದ ಆಕೆ ಅಲ್ಲಿಯೇ ಸತ್ತುಹೋಗಿದ್ದರೆ ನಿಮಗೆ ಎಷ್ಟು ದುಃಖವೂ ಪಶ್ಚಾತ್ತಾಪವೂ ಆಗುತ್ತಿದ್ದವೆಂಬದನ್ನು ವಿಚಾರಮಾಡಿ ನೋಡಿರಿ? "

ರಾಜಕನ್ನಿಕೆಯರು—" ಹಾಗಾಗಿದ್ದರೆ ನಾನು ಇದುವರೆಗೆ ಬದುಕಿ ಇರುತ್ತಿದ್ದೇ ಇಲ್ಲ. ನಾನು ನನ್ನ ಕ್ರೌರ್ಯವನ್ನು ನೆನೆನೆನಿಸಿ ಭ್ರಾಂತಳಾಗುತ್ತಿದ್ದೆನು; ಇಲ್ಲವೆ ನನ್ನ ಜೀವವು ನನಗೇ ಬೇಡಾಗಿ ನಾನು ಸೊರಗಿ, ಕೊರಗಿ, ಬೆಂದು, ಬೇಗುದಿಗೊಳ್ಳುತ್ತಿದ್ದೆನು "

ಇಮ್ಲಾಕನು " ಹಾಗಾದರೆ, ನಿಮ್ಮ ಸದ್ವರ್ತನದಿಂದ ಇಷ್ಟಾದರೂ ಸಮಾಧಾನವು ನಿಮಗೆ ಉಂಟಾಗಿದೆ. ಇದೇನು ಅಲ್ಪ ಪಾರಿತೋಷಕವೇ? (ಸದ್ಗುಣದ ಬಗ್ಗೆ) ನೀವು ಪಶ್ಚಾತ್ತಾಪಪಡುವ ಕಾರಣವೇ ಇಲ್ಲ."

# ಮೂವತ್ತಯ್ದನೆಯ ಭಾಗವು

## ಪೇಕ್ಯೂಅ ಇವಳ ವಿಯೋಗದಿಂದ ಉಂಟಾದ ರಾಜಕನ್ನಿಕೆಯ ಶೋಕವು.

ಕೆಲವು ದಿವಸಗಳು ಸಂದಬಳಿಕ ರಾಜಕನ್ನಿಕೆಗೆ ಸಖಿಯ ವಿಯೋಗದುಃಖವು ಕಡಿಮೆಯಾಗಹತ್ತಿತು. ತನ್ನ ಅಪರಾಧದಿಂದ ಆ ವಿಯೋಗವು ಉಂಟಾಗಲಿಲ್ಲೆಂಬದೊಂದು ಆಕೆಯ ಸಮಾಧಾನಕ್ಕೆ ದೊಡ್ಡ ಕಾರಣವಾಗಿತ್ತು. ಆಕೆ ಪೇಕ್ಯೂಅ ಇವಳನ್ನು ಆಗಾಗ್ಯೆ ನೆನೆನೆನಸಿ ಖಿನ್ನಳಾಗುವಳು, ಆದರೂ ಮುಂಚಿನಷ್ಟು ಆಕ್ರೋಶವನ್ನು ಮಾಡುತ್ತಿದ್ದಿಲ್ಲ. ಆಕೆ ಮುಂಜಾನೆಯಿಂದ ಸಂಜೆಯ ವರೆಗೆ ಪೇಕ್ಯೂಅ ಮಾಡಿದಂಥ ಕೆಲಸಗಳನ್ನೂ, ಆಕೆ ಆಡಿದಂಥ ಮಾತುಗಳನ್ನೂ ನೆನಪಿಗೆ ತಂದು ಉದಾಸೀನಳಾಗಿ ಕೂಡ್ರುವಳು. ಪೇಕ್ಯೂಅ ಪ್ರೀತಿಸಿದ ಪ್ರತಿಯೊಂದು ಪದಾರ್ಥವು ಎಷ್ಟು ಬೇಕಾದಷ್ಟು ಕ್ಷುಲ್ಲಕವಾದದ್ದಿರವಲ್ಲದೇಕೆ-ಅದರ ನೆನಪು ತೆಗೆದು ಅದರ ಬಗೆ ವಿಚಾರಮಾಡುತ್ತ ಕೂಡ್ರುವಳು. ಇನ್ನುಮೇಲೆ ಆಕೆಯ ಸಮಾಗಮವು ತನಗೆ ಆಗುವದಿಲ್ಲೆಂದು ತಿಳಿದು ಆಕೆಯ ಮಾತುಗಳನ್ನೂ ಆಕೆ ಹೇಳಿದ ಬುದ್ಧಿವಾದವನ್ನೂ ನೆನೆಸಿ ಅಳುವಳು. ಏನಾದರೊಂದು ಕ್ಷುಲ್ಲಕ ಸಂಗತಿಯು ಸಂಭವಿಸಿದರೆ, ಈ ವೇಳೆಯಲ್ಲಿ ಪೇಕ್ಯೂಅ ಇದ್ದರೆ ಆಕೆ ನನಗೆ ಇದರ ಬಗ್ಯೆ ಏನು ಹೇಳುತ್ತಿದ್ದಳೋ ಯಾವ ಯುಕ್ತಿಯನ್ನು ಯೋಜಿಸುತ್ತಿದ್ದಳೊ, ಯಾವತರದ ಬುದ್ಧಿವಾದವನ್ನು ಹೇಳುತ್ತಿದ್ದಳೋ ಎಂದು ತರ್ಕಿಸುತ್ತ ಕೂಡ್ರುತ್ತಿದ್ದಳು.

ರಾಜಕನ್ನಿಕೆಯ ಸೇವೆಯನ್ನು ಮಾಡುವ ಸ್ತ್ರೀಯರಿಗೆ ಆಕೆಯ ನಿಜವಾದ ಮನಸ್ಸಿನ ಒಲವು ಗೊತ್ತಿಲ್ಲದ್ದರಿಂದ, ಆಕೆಯು ಅವರ ಕೂಡ ಮಾತಾಡಬೇಕಾದರೆ ಒಳ್ಳೇ ಎಚ್ಚರಿಕೆಯಿಂದಲೂ, ಮಿತದಿಂದಲೂ ಮಾತಾಡುತ್ತಿದ್ದಳು. ತಾನು ನೋಡಿದ ಚಮತ್ಕಾರವಾದ ಸಂಗತಿಗಳನ್ನು ಹೇಳಿದರೆ, ಅವುಗಳನ್ನು ಕೇಳಿ ಸಂತೋಷಪಡುವಂಥ ಸಖಿಯರು ಯಾರೂ ಇಲ್ಲದ್ದರಿಂದ, ಹೊಸ ಹೊಸ ವಿಷಯಗಳನ್ನು ನೋಡಿ, ಇಲ್ಲವೆ ಕೇಳಿ ಜ್ಞಾನಸಂಪಾದನೆ ಮಾಡಿಕೊಳ್ಳಬೇಕೆಂಬ ಮುಂಚೆ ಇದ್ದ ಆಕೆಯ ಉತ್ಕಟವಾದ ಇಚ್ಛೆಯು ಒರಟರುತ್ತ ತೀರ ಕಡಿಮೆಯಾಗಹತ್ತಿತು. ರಾಸೆಲಾಸನು ಆಕೆಯ ಮನವನ್ನು ರಂಜಿಸುವದಕ್ಕಾಗಿ ನಾನಾವಿಧವಾದ ಯತ್ನಗಳನ್ನು ಮಾಡಿದನು. ಗಾಯನಕಲೆಯನ್ನು ಅರಿತ ಅನೇಕ ಪಂಡಿತರನ್ನು ಕರೆತಂದು ಉತ್ತಮವಾದ ಗಾಯನವನ್ನು ಮಾಡಿಸುವನು. ಆದರೆ ಆಕೆಯು ಗಾಯನವನ್ನು ಕೇಳುತ್ತ

ಕೂತಂತೆ ಮಾತ್ರ ಕಾಣಿಸುವಳು. ಆಕೆಯು ನಿಜವಾದ ಲಕ್ಷವು ಗಾಯನದ ಕಡೆಗೆ ಇರುತ್ತಿದ್ದಿಲ್ಲ. ಆಕೆಗೆ ತರತರದ ಕಲೆಗಳನ್ನು ಕಲಿಸುವದಕ್ಕಾಗಿ ಅನೇಕ ಶಿಕ್ಷಕರನ್ನು ನೇಮಿಸುವನು. ಆಕೆಯು ಅವರು ಹೇಳಿದ ಪಾಠಗಳನ್ನು ಕಲಿಯುವಳು; ಆದರೆ ಆಕೆಯು ಚಿತ್ತವು ಸ್ಥಿರವಿಲ್ಲದ್ದರಿಂದ ಈ ಹೊತ್ತು ಕಲಿಸಿದ ಪಾಠಗಳನ್ನೇ ಪುನಃ ನಾಳೆ ಕಲಿಸಬೇಕಾಗುತ್ತಿತ್ತು. ಆಕೆಗೆ ಯಾತರಿಂದಲೂ ಸಂತೋಷವಾಗುತ್ತಿದ್ದಿಲ್ಲ; ಮತ್ತು ಸುಖಪ್ರಾಪ್ತಿಯನ್ನು ಮಾಡಿಕೊಳ್ಳಬೇಕೆಂಬ ಆಕೆಯು ಮಹಾಕಾಂಕ್ಷೆಯು ಅಳಿದುಹೋಯಿತು. ಆಕೆಯು ಅಣ್ಣನು ಆಕೆಯ ಮನೋರಂಜನೆಗಾಗಿ ಅನೇಕ ಉಪಾಯಗಳನ್ನು ಯೋಜಿಸುವನು. ಆದರೆ ಕ್ಷಣಹೊತ್ತು ಆ ಉಪಾಯಗಳಿಂದ ಆಕೆಯು ಮನೋರಂಜನವಾದಾಗ್ಯೂ ಪುನಃ ಪೇಕ್ಯೂಆ ಇವಳ ವಿಯೋಗ ದುಃಖವೇ ಆಕೆಯು ಕಣ್ಣೆದುರಿಗೆ ಮೂರ್ತಿಮತ್ತಾಗಿ ಬಂದು ನಿಲ್ಲುವದು.

ಪ್ರತಿದಿವಸ ಮುಂಜಾನೆ ಎದ್ದಕೂಡಲೆ ರಾಜಕನ್ನಿಕೆಯು ಇವ್ಹಾಕನಿಗೆ ಪೇಕ್ಯೂಆ ಇವಳ ಶೋಧ ಮಾಡಬೇಕೆಂದು ಪ್ರಾರ್ಥಿಸುವಳು; ಸಂಜೆಯಾದ ಕೂಡಲೆ ತನ್ನ ಸಖಿಯು ವಿಷಯಕ್ಕೆ ಏನು ಸುದ್ದಿಯಿದೆ ? ಆಕೆ ಸಿಗುವ ಸಂಭವವು ಏನಾದರೂ ಉಂಟೋ ? ಹ್ಯಾಗೆ ? ಎಂದು ಕೇಳುವಳು; ಈ ಪ್ರಕಾರದ ಸತ್ಯಪ್ರವು ನಡದೇ ಇತ್ತು. ಆದರೂ ದಿನಾಲು ಪೇಕ್ಯೂಆ ಇವಳ ಶೋಧದ ಸುದ್ದಿಯೇ ಇಲ್ಲ, ಯಾವ ಪ್ರಯತ್ನಕ್ಕೂ ಫಲವಾಗಲೊಲ್ಲದು ಎಂಬ "ನ" ಕಾರವನ್ನೆ ಯಾವಾಗಲು ರಾಜಕನ್ನಿಕೆಗೆ ಹೇಳುವ ಪ್ರಸಂಗ ಬರಹತ್ತಿದ್ದರಿಂದ ಇವ್ಹಾಕನು ರಾಜಕನ್ನಿಕೆಯು ಹತ್ತರ ಹೋಗುವದಕ್ಕೆ ತಪ್ಪಿಸಹತ್ತಿದನು. ರಾಜಕನ್ನಿಕೆಯು ಇವ್ಹಾಕನು ತನ್ನ ಕಡೆಗೆ ಬಾರದ್ದನ್ನು ನೋಡಿ ಒಂದುದಿನ ಆತನನ್ನು ತನ್ನ ಹತ್ತರ ಕರೆಸಿ ಆತನಿಗೆ ಅಂದಳು "ತಾವು ಮುಂಚಿನಂತೆ ನನ್ನ ಹತ್ತರ ಒಂದು ಸುದ್ದಿಯನ್ನು ಹೇಳುವದಿಲ್ಲ. ಹೀಗ್ಯಾಕೆ ಮಾಡುತ್ತೀರಿ? ತಾವು ನನಗೆ ಸಂತೋಷವಾಗುವ ಸುದ್ದಿಯನ್ನು ತಂದು ಹೇಳುವದಿಲ್ಲಾದದರಿಂದ ನಾನು ತಮ್ಮಮೇಲೆ ಸಿಟ್ಟಾಗುತ್ತೇನೆ. ತಾವು ನನ್ನ ಸಖಿಯು ಶೋಧವನ್ನು ಮನಮುಟ್ಟಿ ಮಾಡುವದಿಲ್ಲೆಂದು ನಾನು ಅನ್ನುತ್ತೇನೆಂದು ತಮಗೆ ತೋರಿದರೆ, ಇಲ್ಲವೆ ತಾವು ಹಾಗೆ ತಿಳಿದುಕೊಂಡರೆ ಅದು ತಮ್ಮ ತಪ್ಪೆಂದು ನಾನು ಅನ್ನಬೇಕಾಗುವದು. ಚಲೊ ಸುದ್ದಿ ಹೇಳುವದಿಲ್ಲೆಂದು ನಾನು ಸಿಟ್ಟಾಗುವದಿಲ್ಲ, ಇಲ್ಲವೆ ತಾವು ವೈಗಳ್ಳತನವನ್ನು ಮಾಡುತ್ತೀರೆಂದೂ ಅನ್ನುವದಿಲ್ಲ. ತಾವು ಮುಂಚಿನಂತೆ ನನ್ನ ಕಡೆಗೆ ಮೇಲಿಂದ ಮೇಲೆ ಬರುವದಿಲ್ಲ ಇಷ್ಟೇ. ಇದೇನೂ ಆಶ್ಚರ್ಯದ ಸಂಗತಿಯಲ್ಲ. ಯಾಕಂದರೆ ದುಃಖವುಳ್ಳ ಮನುಷ್ಯನ ಹತ್ತರ ಬರುವದು, ಯಾರಿಗೂ ಬೇಡ, ಅವನಿಂದ ಎಲ್ಲರೂ ದೂರ ಹೋಗಲಿಕ್ಕೆ ಪ್ರಯತ್ನಿಸುತ್ತಾರೆ. ಯಾಕಂ

ದರೆ, ಅವನು ಯಾವಾಗಲೂ ತನ್ನ ಸವಿಾಪಕ್ಕೆ ಬಂದ ಎಲ್ಲರಿಗೂ ತನ್ನ ದುಃಖದ ಸುದ್ದಿಯನ್ನೇ ಹೇಳುತ್ತ ಕೂಡ್ರುವನು. ಅದನ್ನು ಕೇಳುತ್ತ ಯಾರು ಕೂಡ್ರ ಬೇಕು ? ಒಮ್ಮೊಮ್ಮೆ ಆ ಸುದ್ದಿಯಿಂದ ಅವನಿಗೇ ಬೇಸರಬರುತ್ತದೆ; ಅಂದ ಮೇಲೆ ಆತನ ದುಃಖದ ಸುದ್ದಿಯನ್ನು ಕೇಳುವ ಮನುಷ್ಯನಿಗೆ ಬೇಸರಬರುವ ದಂತೂ ಸಹಜವೇ. ದುಃಖಮಯವಾದ ಈ ಸಂಸಾರದಲ್ಲಿ ಸುಖದ ಸುಕಾಲವು ತೀರ ತುಸು ಇರುತ್ತದೆ. ಅಷ್ಟು ಅಲ್ಪಕಾಲವನ್ನೂ ಕೂಡ ಪರರ ದುಃಖ ಕೇಳುವ ದರಲ್ಲಿ ಕಳೆಯುಲಿಕ್ಕೆ ಯಾವನು ಬಯಸ್ಯಾನು ? ಇನ್ನು ತನ್ನ ಕಷ್ಟದಲ್ಲಿ ಮುಳುಗಿ ಹೋದವನಂತೂ ಪರರ ದುಃಖದ ಸುದ್ದಿಯನ್ನೂ ಕೇಳಲಾರನೆಂಬದನ್ನು ನಾನೇನು ಹೇಳಬೇಕು ? ”

“ ಇನ್ನು ತುಸು ದಿವಸಗಳಲ್ಲಿಯೇ ರಾಜಕನ್ನಿಕೆಯಾದ ನಿಕಾಯಾ ಇವಳ ದುಃಖದ ಆರ್ತಸ್ವರವು ಯಾರಿಗೂ ಕೇಳಬರಲಿಕ್ಕಿಲ್ಲ. ಇನ್ನುಮೇಲೆ ಈ ಸಂಸಾರದಲ್ಲಿ ಸುಖದ ಆಶೆಯು ನನಗೆ ಇಲ್ಲ. ಪೃಥ್ವಿಯೊಳಗಿನ ಯಾವತ್ತು ಭ್ರಾಂತಿಕರವಾದ ವಿಷಯಗಳೂ, ಮೋಸಗೊಳಿಸುವ ಸುಖಗಳೂ ನನಗೆ ಬೇಡಾಗಿರುತ್ತವೆ. ಆದದ ರಿಂದ ಸರ್ವಸಂಗಪರಿತ್ಯಾಗಮಾಡಿ, ನಿವಾತ ಸ್ಥಳಕ್ಕೆ ಹೋಗಿ, ಅಲ್ಲಿ ವಾಸಮಾ ಡಬೇಕೆಂತಲೂ, ಅಲ್ಲಿ ಧರ್ಮಕೃತ್ಯಗಳಲ್ಲಿ ವೇಳೆಯನ್ನು ಕಳೆಯಬೇಕೆಂತಲೂ, ಮನಸ್ಸಿನೊಳಗಿನ ದುರ್ಜಯವಾದ ವಿಷಯವಾಸನೆಗಳನ್ನು ನಿರ್ಮೂಲನಮಾಡಿ ಚಿತ್ತಶುದ್ಧಿಯನ್ನು ಮಾಡಿಕೊಂಡು, ಅಖಂಡ ಸುಖದ ಆಗರವಾದಂಥ ನನ್ನ ಪ್ರಿಯಸಖಿಯ ಅಕ್ಷಯ ಸಮಾಗಮವನ್ನು ಮಾಡಿಕೊಡುವಂಥ, ಪರಲೋಕಸಾಧ ನವನ್ನು ಕೈಕೊಳ್ಳಬೇಕೆಂತಲೂ, ನಿಶ್ಚಯಿಸಿದ್ದೇನೆ”

ಇವಾಕನು— “ ನೆರವೇರಿಸಲಶಕ್ಯವಾದ ದೃಢನಿಶ್ಚಯವನ್ನು ಮಾಡಬೇ ಡಿರಿ, ಇಲ್ಲವೆ ಬೇಕೆಂದು ಇಲ್ಲದ ದುಃಖಗಳನ್ನು ಕಲ್ಪಿಸಿ ನಿಮ್ಮ ಜೀವಕ್ಕೆ ಮತ್ತಿಷ್ಟು ತೊಂದರೆಯನ್ನುಂಟು ಮಾಡಿಕೊಳ್ಳಬೇಡಿರಿ. ನೀವು ಏಕಾಂತವಾಸದಲ್ಲಿ ಹೋದ ತುಸು ದಿವಸಗಳಲ್ಲಿಯೇ ಹೇಕ್ಯೂಬ ಇವಳ ವಿಯೋಗ ದುಃಖವು ಮರೆತು ಹೋಗ ಲಾರಂಭಿಸುವದು. ವಿಯೋಗ ದುಃಖವು ಕಡಿಕಡಿಮೆಯಾದ ಹಾಗೆ ಏಕಾಂತ ವಾಸವು ಹೆಚ್ಚೆಚ್ಚು ಬೇಸರವನ್ನುಂಟು ಮಾಡುವದು. ನಿಮಗೆ ಸಖಿಯ ವಿಯೋಗ ದುಃಖವು ಉಂಟಾಗಿದೆ; ಇಷ್ಟೇ ಕಾರಣದ ಮೇಲಿಂದ ಜಗತ್ತಿನೊಳಗಿನ ಉಳಿದ ಯಾವತ್ತು ಸುಖಗಳನ್ನು ಬಿಟ್ಟುಕೊಟ್ಟು ಅರಣ್ಯವಾಸವನ್ನು ಕೈಕೊಳ್ಳುವದು ಯುಕ್ತವಾಗಿ ಕಂಡುಬರುವದಿಲ್ಲ.”

ರಾಜಕನ್ನಿಕೆ—“ ಸಖಿಯ ವಿಯೋಗವಾದಂದಿನಿಂದ ನಾನು ಸುಖದ ಹಂಬ ಲವನ್ನು ತೀರ ಬಿಟ್ಟುಕೊಟ್ಟಿದ್ದೇನೆ. ಪ್ರೀತಿ ಮಾಡಿಸಿಕೊಳ್ಳತಕ್ಕಂಥ, ಮತ್ತು

ವಿಶ್ವಾಸಪಾತ್ರನಾದಂಥ ಮನುಷ್ಯನೇ ಇಲ್ಲದ ಮೇಲೆ ಸುಖದ ಆಶೆಯು ಯಾಕೆ ಬೇಕು? ಮತ್ತು ಯಾವಾತನ ಸರ್ವಸ್ವವೇ ಕಳೆದುಹೋಗಿದೆಯೋ ಆತನಿಗೆ ಇನ್ನೂ ಹೆಚ್ಚು ಕಳೆದುಕೊಳ್ಳುವ ಅಂಜಿಕೆಯಾದರೂ ಏನಿರುವದು? ಮೊದಲೇ ತೀರ ತುಸು ಇರುವಂಥ ಸಂಸಾರಸುಖವು ಮನುಷ್ಯನಿಗೆ ಪ್ರಾಪ್ತವಾಗಬೇಕಾದರೆ ಅವನಲ್ಲಿ ಸಂಪತ್ತು, ಸುಜ್ಞಾನ, ಮತ್ತು ಸದಾಚರಣ, ಇವುಗಳಿರಬೇಕಾಗುತ್ತ ದೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಸಂಪತ್ತಿಯಿಂದ ಸುಖವಾಗ ಬೇಕಾದರೆ ಅದರ ಸದ್ವ್ಯಯವಾಗಲಿಕ್ಕೆಬೇಕು. ಸುಜ್ಞಾನದಿಂದ ಸುಖಪ್ರಾಪ್ತಿಯಾ ಗಬೇಕಾದರೆ ತನಗೆ ಇದ್ದ ಜ್ಞಾನವನ್ನು ಪರರಿಗೆ ಹೇಳಬೇಕು; ಅಂದಮೇಲೆ ನನಗೆ ಸಂಪತ್ತಿಯಿಂದಲೂ, ಸುಜ್ಞಾನದಿಂದಲೂ ಸುಖವಾಗಬೇಕಾದರೆ, ನಾನು ಕೊಟ್ಟ ಸಂಪತ್ತನ್ನು ಸ್ವೀಕರಿಸುವಂಥ, ಮತ್ತು ನಾನು ಹೇಳಿದಂಥ ಜ್ಞಾನವನ್ನು ಗ್ರಹಿಸು ವಂಥ ಮನುಷ್ಯನ ಅಗತ್ಯವಿರುತ್ತದೆ. ನನಗೆ ಯಾರೂ ಇಲ್ಲದ ಮೇಲೆ ಅವುಗ ಳಿಂದ ನನಗೆ ಸುಖವು ಹ್ಯಾಗೆ ಆಗಬೇಕು? ಇನ್ನು ಸದಾಚರಣದಿಂದ ಸುಖವಾಗ ಬೇಕಾದರೆ ಮಾತ್ರ, ಆದರ ಆಚರಣದ ಹೊರತು ಹೆಚ್ಚಿನದೇನೂ ಬೇಕಾಗುವ ದಿಲ್ಲ. ಅಂದರೆ ಅದಕ್ಕೆ ಅನ್ಯರ ಅಪೇಕ್ಷೆ ಇರುವದಿಲ್ಲ. ಅಂದಮೇಲೆ ಅದರ ಸುಖವನ್ನು ಏಕಾಂತದಲ್ಲಿ ಸಹ ಅನುಭವಿಸಬಹುದು; ಜನರೊಳಗೇ ಇರಲಿಕ್ಕೆ ಕಾರಣವಿಲ್ಲ"

ಇವಲ್ಲಾಕನು—"ನಾನು ಈಗ ಏಕಾಂತವಾಸವನ್ನು ಸ್ವೀಕರಿಸಲಿಚ್ಛಿಸುವ ಮನುಷ್ಯನು ಎಷ್ಟು ಸದ್ಗುಣಿಯಾಗಿರುತ್ತಾನೆ, ಇಲ್ಲವೆ ಆತನು ಏಕಾಂತವಾಸ ದಲ್ಲಿರಹತ್ತಿದ ಮೇಲೆ ಆತನ ಸದ್ಗುಣವು ಎಷ್ಟುಮಟ್ಟಿಗೆ ಕೆಟ್ಟುಹೋಗುತ್ತದೆ ಬಗ್ಗೆ ವಾದವಿವಾದವನ್ನು ಮಾಡಲಪೇಕ್ಷಿಸುವದಿಲ್ಲ. ನೀವು ಆ ಧರ್ಮಿಷ್ಠ ಜೋಗಿಯು ಏಕಾಂತವಾಸದ ಬಗ್ಗೆ ಹೇಳಿದ ಸಂಗತಿಯನ್ನು ನೆನಪಿಗೆ ತಂದು ನೋಡಿರಿ. ನಿಮ್ಮ ಸಖಿಯ ವಿಯೋಗ ದುಃಖವು ನಿಮಗೆ ಕಡಿಮೆಯಾದ ಕೂಡಲೆ ಏಕಾಂತ ವಾಸವನ್ನು ಪರಿತ್ಯಜಿಸಿ, ಸಂಸಾರಿಕರೊಳಗೆ ಕೂಡಿಕೊಳ್ಳಬೇಕೆಂಬ ಕಾಂಕ್ಷೆಯು ನಿಸ್ಸಂಶಯವಾಗಿ ನಿಮಗೆ ಆಗುವದು."

ರಾಜಕನ್ನಿಕೆ—"ಆ ಕಾಂಕ್ಷೆಯು ನನಗೆ ಎಂದೂ ಆಗಲಿಕ್ಕಿಲ್ಲ ನಾನು ಒಮ್ಮೆ ಏಕಾಂತವಾಸವನ್ನು ಸ್ವೀಕರಿಸಿದನಂತರ ತಿರುಗಿ ಎಂದೂ ಜನರೊಳಗೆ ಬರಲಿ ಕ್ಕಿಲ್ಲ. ಯಾಕಂದರೆ ನಾನು ಈ ಜಗತ್ತಿನೊಳಗಿನ ದುರ್ಗುಣಗಳನ್ನೂ ಮೂರ್ಖ ತನವನ್ನೂ ಕಣ್ಣೆಚ್ಚು ನೋಡಿದ ಹಾಗೆ, ನನ್ನ ಪ್ರಿಯ ಸಖಿಯ ಔದಾರ್ಯವೂ, ನಿಷ್ಕಾಪಟ್ಯವೂ, ಆಕೆಯ ವಿನಯವೂ, ನಂಬಿಗೆಯೂ, ಅವಳ ಪ್ರೀತಿಯೂ

ಗುಪ್ತಾಲೋಚನೆಗಳನ್ನು ಹೊರಗೆಡಹದೆ ಇರುವ ಸಾಮರ್ಥ್ಯವೂ ಮುಂತಾದ ಆಕೆಯ ಅಪ್ರತಿಮ ಗುಣಗಳು ನೆನಪಾಗಿ ನನಗೆ ಹೆಚ್ಚು ದುಃಖವಾಗುವದಲ್ಲದೆ ಆಕೆಯನ್ನು ಎಂದೂ ಮರೆಯುನು. ”

ಇಮ್ಲಾಕನು— “ರಾಜಕನ್ನಿಕೆಯರೆ, ಅದೇ ಹೊಸದಾಗಿ ಪೃಥ್ವಿಯು ಉತ್ಪನ್ನವಾದಾಗ ಪೃಥ್ವಿಯ ಮೇಲಿನ ಜನರಿಗೆ ರಾತ್ರಿ ಹಗಲುಗಳು ನಿಯಮಿತ ವೇಳೆಗೆ ಸರಿಯಾಗಿ ಆಗುತ್ತವೆಂಬುದು ಇನ್ನೂ ಗೊತ್ತಾಗಿದ್ದಿಲ್ಲ. ಆದದರಿಂದ ಮೊದಲನೇ ದಿವಸ ಹೊತ್ತು ಮುಳುಗಿ ರಾತ್ರಿಯಾದ ಕೂಡಲೆ ಅವರು ಅಂಜಿ ಗಾಬರಿಯಾಗಿ, ಇನ್ನುಮೇಲೆ ಬೆಳಕು ಎಂದೂ ಆಗುವದಿಲ್ಲೆಂದು ತಿಳಿದು ಬಹಳ ಚಿಂತಿಸಹತ್ತಿದರು. ಆಗ ಅವರ ಮನಸ್ಸಿನ ಸ್ಥಿತಿಯು ಹ್ಯಾಗಾಗಿತ್ತೋ ಹಾಗೆ ಅಕಸ್ಮಾತ್ತಾಗಿ ಒಬ್ಬರ ಮೇಲೆ ಒಂದು ಸಂಕಟವು ಬಂದೊದಗಿದರೆ ಅವರ ಮನಸ್ಸಿನ ಸ್ಥಿತಿಯಾದರೂ ಆಗುತ್ತದೆ. ಆ ಜನರು ಇನ್ನು ತಾವು ಬೆಳಕನ್ನು ಕಾಣುವದಿಲ್ಲೆಂದು ನಿಶ್ಚಯವಾಗಿ ತಿಳಿದುಕೊಂಡು ಶೋಕಮಾಡಹತ್ತಿದಂತೆ ಒಮ್ಮಿಂದೊಮ್ಮೆ ಸಂಕಟ ಒದಗಿದವರಿಗೆ ಎತ್ತನೋಡುವದತ್ತ ದುಃಖವೇ ಕಾಣುತ್ತದಲ್ಲದೆ ಸುಖದ ಆಶೆಯೋ ಅವರಿಗೆ ಇರುವದಿಲ್ಲ. ಆದರೆ ಆ ಜನರಿಗೆ ರಾತ್ರಿ ಹೋಗಿ ಹಗಲು ಹ್ಯಾಗೆ ನಿಶ್ಚಯವಾಗಿ ಬಂದಿತೋ ಹಾಗೆ ದುಃಖದ ತರುವಾಯ ಸುಖವು ಬಂದೇಬರುತ್ತದೆ. ಅವರು (ಆ ಜನರು) ರಾತ್ರಿಯಾದ ಕೂಡಲೆ ಇನ್ನು ತಾವು ಹಗಲನ್ನು ಕಾಣುವದಿಲ್ಲಾದದರಿಂದ ತಮ್ಮ ಕಣ್ಣುಗಳಿದ್ದಾದರೂ ಫಲವೇನೆಂದು ಅವುಗಳನ್ನು ಕಿತ್ತುಕೊಂಡಿದ್ದರೆ ಅವರು ಎಷ್ಟು ಮೂರ್ಖತನಕ್ಕೆ ಪಾತ್ರರಾಗುವರೋ, ಅಷ್ಟೇ ಮೂರ್ಖತನಕ್ಕೆ, ಸಂಕಟ ಬಂದಕೂಡಲೆ ಇನ್ನುಮೇಲೆ ಸುಖದ ದಿವಸಗಳನ್ನು ಕಾಣುವದು ದುರ್ಲಭ, ಅಂದಮೇಲೆ ಈ ಪರಿ ದುಃಖಪಡುವದಕ್ಕಿಂತ ಸರ್ವಸಂಗಪರಿತ್ಯಾಗಮಾಡಿ, ಎಲ್ಲಿಯಾದರೂ ಹೋಗಬೇಕೆಂದು ನಿಶ್ಚಯಿಸಿ, ಸುಖದ ಭಾವೀ ಸಾಧನಗಳನ್ನು ನಾಶಮಾಡುವವರೂ ಪಾತ್ರರಾಗುವರು. ನಮ್ಮ ಅವಯವಗಳು ಸದೋದಿತ ಬದಲಾಗುವಂತೆ ನಮ್ಮ ಮನಸ್ಸಾದರೂ ಮೇಲೆ ಮೇಲೆ ಬದಲಾಗುತ್ತಿರುತ್ತದೆ. ಮನಸ್ಸಿನೊಳಗೆ ಒಮ್ಮೆ ಒಂದು ತರದ ಕಲ್ಪನೆಗಳೂ, ವಾಸನೆಗಳೂ, ಮತ್ತೊಮ್ಮೆ ಮತ್ತೊಂದು ತರದ ಕಲ್ಪನೆಗಳೂ, ವಾಸನೆಗಳೂ ಹುಟ್ಟುತ್ತವೆ. ಶರೀರದೊಳಗಿನ ಇಲ್ಲವೆ ಮನಸ್ಸಿನೊಳಗಿನ ಹೆಚ್ಚು ಭಾಗವು ಒಮ್ಮೆಲೇ ನಷ್ಟವಾದರೆ ಎರಡಕ್ಕೂ ಬಹಳ ಹಾನಿಯುಂಟಾಗುತ್ತದೆ ಆದರೆ ಹಾಗಾಗಬಾರದೆಂದು ಸೃಷ್ಟಿಯ ನಿಯಮವದೆ. ಹಾಗೆ ಎಂದೂ ಆಗುವದಿಲ್ಲ. ಸೂಕ್ಷ್ಮರೀತಿಯಿಂದ ಹೆಚ್ಚುಕಡಿಮೆ, ಲಾಭಹಾನಿಗಳು ಯಾವಾಗಲೂ ನಡದೇ ಇರುತ್ತವೆ. ಅವು ಬಹಳ ಸೂಕ್ಷ್ಮವಾಗಿರುವದರಿಂದ ನಮ್ಮ ಲಕ್ಷಕ್ಕೂ

ಅನುಭವಕ್ಕೂ ಬರುವದಿಲ್ಲ. ಇದೇ ಮೇರೆಗೆ ಮನಸ್ಸಿನಲ್ಲಿಯೂ ಕಲ್ಪನೆಗಳ ಅದಲಾ ಬದಲು ಮೇಲಿಂದಮೇಲೆ ಆಗುತ್ತಿರುತ್ತದೆ. ದೂರಿನ ಪದಾರ್ಥಗಳು ಕಣ್ಣಿಗೆ ಹ್ಯಾಗೆ ಸ್ಪಷ್ಟವಾಗಿ ಕಾಣುವದಿಲ್ಲವೋ, ಹಾಗೇ ಆ ಪದಾರ್ಥಗಳ ಗುಣದೋಷಗಳಾದರೂ ಮನಸ್ಸಿಗೆ ಸ್ಪಷ್ಟವಾಗಿ ತಿಳಿಯುವದಿಲ್ಲ. ಕಾಲರೂಪವಾದ ದೊಡ್ಡ ಹೊಳೆಯ ಪ್ರವಾಹದ ಶಳವಿನಗುಂಟ ನಾವು ಮುಂದೆ ಹೋಗುತ್ತಿರುವಾಗ, ನಮ್ಮ ಹಿಂದೆ ಉಳಿದ ಪದಾರ್ಥಗಳೆಲ್ಲ ಮರೆಯಾಗುವದರಿಂದ ನಾವು ಅವುಗಳನ್ನು ತೀವ್ರವೇ ಮರೆತು ಬಿಡುತ್ತೇವೆ; ನಮ್ಮ ಕಣ್ಣೆದುರಿಗೆ ಸಮೀಪಕ್ಕೆ ಬಂದ ಒಡವೆಗಳೆಲ್ಲ ದೊಡ್ಡವಾಗಿಯೂ, ಮಹತ್ವವುಳ್ಳವುಗಳಾಗಿಯೂ ಕಾಣುತ್ತವೆ. ಈ ತರದ ಸೃಷ್ಟಿಯ ಕ್ರಮಕ್ಕನುಸರಿಸಿ ನೀವು ನಡೆಯಬೇಕು. ಆದದರಿಂದ ನೀವು ಜನರೊಳಗೆ ಕೂಡಿಕೊಳ್ಳುವದನ್ನು, ಅವರ ಕೂಡ ಮಾತುಕಥೆಗಳನ್ನಾಡಿ ಆನಂದಬಡುವದನ್ನು ಬಿಟ್ಟುಕೊಟ್ಟು, ಏಕಾಂತವಾಸವನ್ನು ಸ್ವೀಕರಿಸಿ, ಸುಮ್ಮನೆ ಯಾಕೆ ದುಃಖಪಡುತ್ತೀರಿ? ನಾಲ್ಕು ಮಂದಿಯೊಳಗೆ ಆಡ್ಡಾಡಹತ್ತಿದರೆ, ನಿಮ್ಮ ಮನರಂಜನವಾಗಿ ಬರುಬರುತ್ತ ನಿಮ್ಮ ಸಖಿಯ ವಿಯೋಗದಿಂದುಂಟಾದ ದುಃಖವು ಕಡಿಮೆಯಾಗುವದು; ಅನಳಷ್ಟೇ ಜಾಣಳಾದ ಬೇರೊಬ್ಬ ಸಖಿಯು ನಿಮಗೆ ಸಿಗುವಳು ”

ರಾಜಪುತ್ರನು “ತಂಗಿಯೇ, ನಾವು ಈಗ ಯೋಚಿಸಿದ ಯಾವತ್ತು ಉಪಾಯಗಳು ನಿಷ್ಫಲವಾಗುವವರೆಗಾದರೂ ದಯಮಾಡಿ ನಿರಾಶೆಯುಳ್ಳವಳಾಗಬೇಡ. ನಾವು ನಿನ್ನ ಮರ್ತ್ಯವಿಯಾದ ಸಖಿಯ ಶೋಧವನ್ನು ಬಿಡದೆ ಮಾಡಹತ್ತಿದ್ದೇವೆ. ನಮ್ಮ ಕೈಲಾದ ಮಟ್ಟಿಗೆ ಆ ಶೋಧದ ಬಗ್ಗೆ ಮಾಡತಕ್ಕ ಎಲ್ಲ ಏರ್ಪಾಡುಗಳನ್ನು ಮಾಡುತ್ತೇವೆ. ಇಷ್ಟೆಲ್ಲ ಕಾರ್ಯವಾಗಬೇಕಾದರೆ ನಿಕೃಷ್ಟ ಪಕ್ಷಕ್ಕೆ ಒಂದು ವರ್ಷವಾದರೂ ಬೇಕಾದೀತು. ಅಲ್ಲಿಯ ವರೆಗೆ ನೀನು ಹೆಚ್ಚಿನ ವಿಚಾರಮಾಡದೆ, ದುಃಖಬಡದೆ, ಸುಮ್ಮನೆ ಇರುವ ವಚನವನ್ನು, ದಯಮಾಡಿ ಕೊಡು. ”

ರಾಜಕನ್ನಿಕೆಯು ಇಷ್ಟು ವಚನವನ್ನು ಕೊಡುವದು ಉಚಿತವೆಂದು ತಿಳಿದು ಆ ಮೇರೆಗೆ ತನ್ನ ಅಣ್ಣನಿಗೆ ಅಭಿವಚನವನ್ನು ಕೊಟ್ಟಳು. ಪೇಕ್ಸ್ಯಾಟಿ ಸಿಗುವ ಆಶೆಯು ಇವನ್ಹಾಕನಿಗೆ ಎಳ್ಳಷ್ಟು ಇದ್ದಿಲ್ಲ, ಆದರೂ ಒಂದು ವರ್ಷದ ಅವಧಿಯೊಳಗೆ ರಾಜಕನ್ನಿಕೆಯು ಪೇಕ್ಸ್ಯಾಟಿ ಇವಳ ಹಂಬಲವನ್ನು ತುಸುಮಟ್ಟಿಗಾದರೂ ಬಿಡುವಳು; ಏಕಾಂತವಾಸವನ್ನು ಸ್ವೀಕರಿಸಬೇಕೆಂಬ ಆಕೆಯ ಭ್ರಾಂತಿಯೂ ಬಯಲಾಗುವದೆಂದು ತಿಳಿದು, ರಾಜಪುತ್ರನ ಮುಖಾಂತರ ಒಂದು ವರ್ಷದ ಅವಧಿಯನ್ನು ರಾಜಕನ್ನಿಕೆಯಿಂದ ಪಡಕೊಂಡನು.

# ಮೂವತ್ತಾರನೆಯ ಭಾಗವು.

## ರಾಜಪುತ್ರಿಗೆ ಸಖಿಯ ವಿಯೋಗದುಃಖವು ಹೆಚ್ಚೆಚ್ಚು ಆಗಹತ್ತಿತು.

ರಾಜಕನ್ನಿಕೆಯು, ಸಖಿಯ ಶೋಧದ ನಿಮಿತ್ತವಾಗಿ ಇವ್ಲಾಕನೂ, ಆಕೆಯ ಅಣ್ಣನೂ ಎಡೆಬಿಡದೆ ಪ್ರತಿಯೊಂದು ತರದ ಪ್ರಯತ್ನವನ್ನು ಮಾಡತೊಡಗಿದ್ದರಿಂದಲೂ, ತಾನು ಒಂದು ವರ್ಷದವರೆಗೆ ಏಕಾಂತವಾಸವನ್ನು ಸ್ವೀಕರಿಸಲಿಕ್ಕಿಲ್ಲೆಂದು ಅವರಿಗೆ ವಚನವನ್ನಿತ್ತದರಿಂದಲೂ, ಆಕೆಯು ಮುಂಚಿನಂತೆ ಒಬ್ಬಳೇ ಕುಳಿತು, ಉದಾಸೀನಳಾಗಿ ಚಿಂತೆಮಾಡುವದನ್ನು ಬಿಟ್ಟುಕೊಟ್ಟು, ಜನರೊಳಗೆ ಕೂಡಿಕೊಂಡು, ಅವರ ಸುಖದುಃಖಗಳನ್ನು ಕೇಳಿ, ತನ್ನ ಮನವನ್ನು ರಂಜಿಸಿಕೊಳ್ಳಲಾರಂಭಿಸಿದಳು. ಬರಬರುತ್ತ ಆಕೆಯ ವಿಯೋಗದುಃಖವು ತುಸುತುಸು ಕಡಿಮೆಯಾಗಹತ್ತಿತು. ಆದರೂ ರಹಾವ ಸಖಿಯನ್ನು ತಾನು ಎಂದೂ ಮರೆಯಲಿಕ್ಕಿಲ್ಲೆಂದು ನಿಶ್ಚಯಿಸಿದ್ದಳೋ ಅಂಥ ಸಖಿಯ ವಿಸ್ಮರಣವು ಆಕೆಗೆ ಒಮ್ಮೊಮ್ಮೆ ಆದಾಗ ಮಾತ್ರ ಆಕೆ, ತಾನು ಕೇವಲ ಅಧಮಳಿದ್ದುದರಿಂದಲೇ ತನಗೆ ಆ ತರದ ವಿಸ್ಮರಣವಾಗುತ್ತದಲ್ಲದೆ, ಬೇರೊಬ್ಬಳಿಗೆ ಅಂಥ ಸದ್ಗುಣಿಯಾದ ಸಖಿಯ ಮರವು ಎಂದೂ ಆಗಲಿಕ್ಕಿಲ್ಲೆಂದು ತನ್ನನ್ನು ತಾನೇ ಜರಿದುಕೊಳ್ಳುತ್ತಿದ್ದಳು.

ಅನಂತರ ರಾಜಕನ್ನಿಕೆಯು ಒಂದು ನಿಯಮಿತ ವೇಳೆಯನ್ನು ಗೊತ್ತುಮಾಡಿ, ಆ ವೇಳೆಯಲ್ಲಿ ಒತ್ತಟ್ಟಿಗೆ ಹೋಗಿ ಕುಳಿತು, ತನ್ನ ಪ್ರಿಯಸಖಿಯ ಸದ್ಗುಣಗಳನ್ನೂ, ತನ್ನ ಮೇಲಿದ್ದ ಆಕೆಯ ಪ್ರೀತಿಮೋಹಗಳನ್ನೂ ನೆನೆನೆನೆಸಿ ಶೋಕಮಾಡುವಳು. ಆಗ ಅತ್ತತ್ತು ಆಕೆಯ ಕಣ್ಣುಗಳು ಕೆಂಪಗಾಗುವವು; ಆಕೆಯ ಮುಖಕಮಲವು ಕಳೆಗುಂದುವದು; ಔದಾಸೀನ್ಯವು ಅವಳ ಮೋರೆಯಮೇಲೆ ಕಂಡುಬರುವದು. ಈ ಕ್ರಮವು ಕೆಲವು ದಿವಸಗಳವರೆಗೆ ತಪ್ಪದೆ ಸಾಗಿತು. ನಂತರ ಆಕೆಯ ನಿರ್ಬಂಧವು ತುಸುತುಸು ಶಿಥಿಲವಾಗಹತ್ತಿತು. ಅವಸರದ ಕೆಲಸವನ್ನೇನಾದರೂ ಮಾಡುವ ಪ್ರಸಂಗ ಬಂದರೆ, ಆಕೆಯು ಶೋಕಮಾಡಲಿಕ್ಕೆ ಗೊತ್ತುಮಾಡಿದ ವೇಳೆಯನ್ನು ಒಮ್ಮೊಮ್ಮೆ ಮರೆಯುವಳು. ಕೆಲವು ದಿವಸಗಳು ಸಂದನಂತರ, ಸಾಧಾರಣ ಕೆಲಸ ಮಾಡುವ ಪ್ರಸಂಗ ಬಂದರೂ ಕೂಡ, ಅವಳು ತನ್ನ ಸಖಿಯ ಸದ್ಗುಣಗಳನ್ನು ಸ್ಮರಿಸುವ ಸುವೇಳೆಯನ್ನು ಸಹಜವಾಗಿ ಮರೆಯಹತ್ತಿದಳು. ಮತ್ತೆ ಕೆಲವು ದಿವಸಗಳು ಹೋದಬಳಿಕ ಆಕೆಗೆ ತಾನು ಮಾಡಿದ ನಿರ್ಬಂಧದ ನೆನಪು ಸಹ ಉಳಿಯದ ಹಾಗಾಯಿತು. ಮುಂದೆ ಮತ್ತೆ ಹಲವು ದಿವಸಗಳು ಹೋದ ತರುವಾಯ, ಅವಳು ಶೋಕಮಾಡುವ ಕ್ರಮವನ್ನೇ ಬಿಟ್ಟುಕೊಟ್ಟಳು.

ಆದಾಗ್ಯೂ, ತನ್ನ ಸಖಿಯು ವಿಷಯುಕ್ಕೆ ಆಕೆಯು ಮನಸ್ಸಿನಲ್ಲಿದ್ದ, ನಿಜವಾದ ಪ್ರೇಮವೂ, ಮಿತ್ರಭಾವವೂ ಎಳ್ಳಷ್ಟು ಕಡಿಮೆಯಾಗಿದ್ದಿಲ್ಲ, ಸಾವಿರಾರು ಬಾರಿ ಸಾವಿರಾರು ಕಾರಣಗಳಿಂದ ಆ ಸಖಿಯ ನೆನಪು ರಾಜಪುತ್ರಿಗೆ ಮೇಲೆ ಮೇಲೆ ಆಗುವದು; ನಿಜವಾದ ಮಿತ್ರತ್ವದ ಅವಶ್ಯಕತೆ ಇದ್ದಂಥ ಎಷ್ಟೋ ಪ್ರಸಂಗಗಳಲ್ಲಿ ಪೇಕರ್ಸ್ಯಾಲ ಇವಳ ವಿಯೋಗದುಃಖವನ್ನು ಪರಿಯುವದಂತೂ ಒತ್ತಟ್ಟಿಗಿರಲಿ, ಅಂಥ ಪ್ರಸಂಗಗಳಲ್ಲಿ ರಾಜಪುತ್ರಿಯ ದುಃಖವು ಇಮ್ಮಡಿಯಾಗುವದು. ಅವಳು ಇವಾಲ್ಲಾಕನಿಗೆ ಮೇಲೆ ಮೇಲೆ ಪ್ರಾರ್ಥಿಸುವಳು "ಕವಿಗಳೇ, ಆದಷ್ಟು ಯತ್ನಮಾಡಿ ನನ್ನ ಸಖಿಯ ಶೋಧವನ್ನು ಮಾಡಿರಿ; ಈ ಕೆಲಸಕ್ಕೋಸ್ಕರ ದುಡ್ಡಿನ ವೆಚ್ಚವನ್ನು ನೋಡಬೇಡಿರಿ; ಶ್ರಮವನ್ನು ಲೆಕ್ಕಿಸಬೇಡಿರಿ; ಮನುಷ್ಯನಿಗೆ ಸಾಧ್ಯವಾದ ಯಾವತ್ತು ಪ್ರಯತ್ನಗಳನ್ನು ಮಾಡಿರಿ; ಇಷ್ಟು ಆಗಿ ಆಕೆಯ ಶೋಧವಾಗದಿದ್ದರೆ ಉಪಾಯವಿಲ್ಲ. ನಿಕೃಷ್ಟಪಕ್ಷಕ್ಕೆ ನಾವು ಆಕೆಯ ಶೋಧವನ್ನು ಎಲ್ಲ ತರದಿಂದ ಮಾಡಿದೆವೆಂಬ ಮನಸ್ಸಿನ ಸಮಾಧಾನವಾದರೂ ಉಂಟಾಗಲಿ. ಒಳ್ಳೇದು, ಇದಿರಲಿ, ನಾವು ನಿಜವಾದ ಸುಖದ ಶೋಧವನ್ನು ಮಾಡುವ ಕೆಲಸವನ್ನು ಕೈಕೊಂಡೆವು; ಆದರೆ ಅದರಿಂದ ನಮಗೇನು ಲಾಭವಾದಂತಾಯಿತು ? ನಿಜವಾದ ಸುಖವು (ದುಃಖಮಿಶ್ರಿತವಲ್ಲದ ಸುಖವು), ಈ ಜಗತ್ತಿನಲ್ಲಿ ಇಲ್ಲೇ ಇಲ್ಲೆಂಬದು ನನಗೆ ತೋರುತ್ತದೆ. ಅತ್ಯಂತ ಸುಖವನ್ನೀಯುವ ವಸ್ತುವೇ ಅತ್ಯಂತ ದುಃಖಕ್ಕೆ ಕಾರಣವಾಗುವದೆಂದು ನಾನು ಸ್ವಾನುಭವದಿಂದ ಹೇಳುತ್ತೇನೆ. ಅಂದಮೇಲೆ, ನಮ್ಮ ಭಾವಿ ದುಃಖಕ್ಕೆ ಕಾರಣಭೂತವಾದಂಥ, ಮತ್ತು ಕ್ಷಣಭಂಗುರವಾದಂಥ ಸುಖದ ಶೋಧವನ್ನಾದರೂ, ಇನ್ನುಮೇಲೆ ನಾವು ಯಾಕೆ ಮಾಡಬೇಕು ? ಇನ್ನುಮುಂದೆ, ಎಂಥ ಬೇಕಾದ ಉತ್ತಮ ಸದ್ಗುಣವುಳ್ಳ ಮನುಷ್ಯನು ನನ್ನ ದೃಷ್ಟಿಗೆ ಬಿದ್ದಾಗ್ಯೂ, ಎಂಥ ಬೇಕಾದ ಪ್ರಿಯ ಸ್ವಭಾವವುಳ್ಳ ಮನುಷ್ಯನನ್ನು ನಾನು ನೋಡಿದಾಗ್ಯೂ, ಅವರನ್ನು ನಾನು ಎಂದೂ ಲಕ್ಷಕ್ಕೆ ತರುವದಿಲ್ಲ. ಯಾಕಂದರೆ ಈಗ ನನಗೆ ನನ್ನ ಸಖಿಯ ವಿಯೋಗದಿಂದ ದುಃಖವುಂಟಾದಂತೆ ಅವರ ವಿಯೋಗದಿಂದಾದರೂ ದುಃಖವೇ ಉಂಟಾಗುವ ಸಂಭವವಿದೆ."

## ಮೂವತ್ತೇಳನೆಯ ಭಾಗವು.

### ರಾಜಪುತ್ರಿಯ ಸಖಿಯ ಶೋಧದ ಸುದ್ದಿಯು.

ರಾಜಕನ್ನಿಕೆಯು ಇವಾಲ್ಲಾಕನಿಗೂ, ರಾಜಪುತ್ರನಿಗೂ ವಚನಕೊಟ್ಟ ದಿವಸವೇ ಪೇಕರ್ಸ್ಯಾಲ ಇವಳ ಶೋಧದ ಬಗ್ಗೆ ನಾಲ್ಕೂ ದಿಕ್ಕಿಗೆ ಕಳುಹಿಸಿದ ಅನೇಕ

ಸೇವಕರಲ್ಲೊಬ್ಬರ್ವನು ಏಳು ತಿಂಗಳುಗಳಾದ ತರುವಾಯ ತಿರುಗಿ ಬಂದನು. ಅವನು ಅನೇಕ ದೇಶಗಳೊಳಗೆ ಅಡ್ಡಾಡಿದನು. ಎಲ್ಲಿಯೂ ಪೇಕ್ಯ್ಯಾಳ ಇವಳ ಶೋಧವಾಗಲೊಲ್ಲದು. ಕಟ್ಟಕಡೆಗೆ ಅವನು ನ್ಯೂಬಿಯಾ ದೇಶದ ವರೆಗೆ ಹೋದನು. ಅಲ್ಲಿ ಹೋದಮೇಲೆ, ಇಜಿಪ್ತದೇಶದ ಕೊನೆಯ ಭಾಗದಲ್ಲಿ ಒಬ್ಬ ಅರಬ ಸರದಾರನಿರುವನೆಂತಲೂ, ಆತನ ಕೋಟೆಯಲ್ಲಿ ಪೇಕ್ಯ್ಯಾಳ ಹಾಗೂ ಆಕೆಯ ತೊತ್ತುಗಳಿಬ್ಬರು ಇರುವರೆಂತಲೂ, ಆ ಅರಬ ಸರದಾರನು ದಾರಿಕಾರರನ್ನು ಸುಲಿದು ತನ್ನ ಉಪಜೀವನವನ್ನು ಸಾಗಿಸಿಕೊಳ್ಳುತ್ತಿರುವನೆಂತಲೂ, ಆದದರಿಂದ ಪೇಕ್ಯ್ಯಾಳ ಹಾಗೂ ಆಕೆಯ ತೊತ್ತುಗಳ ಬಗ್ಗೆ ೫೦೦ ಹೊನ್ನುಗಳನ್ನು ತೆಗೆದುಕೊಂಡು, ಅವರನ್ನು ಬಿಟ್ಟುಕೊಡಲಿಕ್ಕೆ ಒಪ್ಪಿಗೆಯುಳ್ಳವನಿರುವನೆಂತಲೂ ಅವನಿಗೆ ಸುದ್ದಿಹತ್ತಿತು. ಆದದರಿಂದ ಅವನು ಬಂದು ಆ ಸುದ್ದಿಯನ್ನು ಇವಲ್ಲಾಕನಿಗೆ ತಿಳಿಸಿದನು.

ತನ್ನ ಪ್ರಿಯಸಖಿಯ ಸುದ್ದಿಯನ್ನು ಕೇಳಿ ರಾಜಪುತ್ರಿಗೆ ಆದ ಆನಂದವು ವರ್ಣಿಸಲಳವಲ್ಲ. ಆಕೆಯು ತನ್ನ ಸಖಿಯನ್ನು ಶೀಘ್ರ ಬಿಡಿಸಿಕೊಂಡು ಬರಬೇಕೆಂದು ಅಣ್ಣನಿಗೆ ಪ್ರಾರ್ಥಿಸಹತ್ತಿದಳು. ಆಕೆಯ ಬಿಡುಗಡೆಯು ಸಲುವಾಗಿ ಕೊಡತಕ್ಕ ಹಣವು ತೀರ ತುಸು ಇದ್ದದರಿಂದ ಅಷ್ಟು ಹಣವನ್ನು ಕೊಡಬೇಕೇ, ಕೊಡಬಾರದೇ ಎಂಬ ಬಗ್ಗೆ ಏನೂ ವಾದವಿವಾದ ಇದ್ದಿಲ್ಲ. ಆದದರಿಂದ ರಾಜಕನ್ನಿಕೆಯು, ಆ ಸುದ್ದೀ ತಂದ ಮನುಷ್ಯನ ಕೈಯಲ್ಲಿ ೫೦೦ ಹೊನ್ನುಗಳನ್ನು ಕೊಟ್ಟು ತನ್ನ ಸಖಿಯನ್ನು ಬಿಡಿಸಿಕೊಂಡು ಬರುವದಕ್ಕಾಗಿ ಅವನನ್ನು ಪುನ: ಆ ಅರಬ ಸರದಾರನ ಕಡೆಗೆ ಕಳುಹಬೇಕೆಂದು ಅಂಗಲಾಚಿ ಅಣ್ಣನಿಗೆ ಹೇಳಿಕೊಳ್ಳಹತ್ತಿದಳು. ಆದರೆ, ಇವಲ್ಲಾಕ ಕವಿಯು ಇದಕ್ಕೆ ಒಡಂಬಡಲಿಲ್ಲ. ಯಾಕಂದರೆ, ಆ ಸುದ್ದಿಗಾರನು ತಂದ ಸುದ್ದಿಯು ನಿಜವಾದದ್ದು ಇರುವದೋ ಇಲ್ಲೋ ಎಂಬ ಬಗ್ಗೆ ಅವನಿಗೆ ಸಂಶಯಬಂತು. ಆ ಸುದ್ದಿಯ ಮೇಲೆ ಅವನ ನಂಬಿಗೆ ಕೂಡ್ರಲಿಲ್ಲ. ಆದದರಿಂದ ಹಣವನ್ನು ಕೊಟ್ಟು ಅವನನ್ನು ತಿರುಗಿ ಅರಬ ಸರದಾರನ ಕಡೆಗೆ ಕಳುಹುವದು ಅವನ ಮನಸ್ಸಿಗೆ ಬರಲಿಲ್ಲ. ಇದಲ್ಲದೆ ಆ ಅರಬ ಸರದಾರನು ತನಗೆ ಕಳುಹಿಸಿದ ಹಣವನ್ನು ತೆಗೆದುಕೊಂಡು ಪ್ರಾಮಾಣಿಕತನಕ್ಕನುಸರಿಸಿ ಆ ಸ್ತ್ರೀಯರನ್ನು ಬಿಡುವನೋ ಇಲ್ಲೋ ಎಂಬ ಬಗ್ಗೆ ಇವಲ್ಲಾಕನಿಗೆ ಸಂಶಯ ಬಂತು ಒಂದುವೇಳೆ ಆ ಅರಬ ಸರದಾರನು, ಹಣವನ್ನೂ, ಸ್ತ್ರೀಯರನ್ನೂ ಕೂಡ ತನ್ನ ಕಡೆಗೆ ಇಟ್ಟುಕೊಳ್ಳಬಹುದೆಂದು ಇವಲ್ಲಾಕನಿಗೆ ತೋರಿತು. ದಾರಿಕಾರರನ್ನು ಸುಲಿದು ಹೊಟ್ಟೆತುಂಬಿಕೊಳ್ಳುವಂಥ, ದರಿದ್ರ ಅರಬನ ಕೈಯೊಳಗೆ ತಮ್ಮ ಹಣವನ್ನು ಕೊಡುವದು ಇವಲ್ಲಾಕನಿಗೆ ಉಚಿತವಾಗಿ ಕಾಣಲಿಲ್ಲ. ಇನ್ನು

ಆ ಸರದಾರನನ್ನೇ ತಾವಿದ್ದಲ್ಲಿಗೆ ಕರೆಸುವದೆಂದರೆ ಅದೂ ಅಸಂಭವವಾದ ಮಾತಾಗಿತ್ತು. ಯಾಕೆಂದರೆ ಆ ಸರದಾರನು ತಾನು ಅಲ್ಲಿಗೆ ಬಂದರೆ, ತನ್ನನ್ನು ಅಲ್ಲಿಯ ಅಧಿಕಾರಿಗಳು ಹಿಡಿದುಹಾಕುವರೆಂಬ ಅಂಜಿಕೆಯಿಂದ ಅಲ್ಲಿಗೆ ಬರಲಿಕ್ಕೆ ಒಡಂಬಡಲಿಕ್ಕಿಲ್ಲೆಂದು ಎಲ್ಲರೂ ತಿಳಿದುಕೊಂಡರು.

ಉಭಯ ಪಕ್ಷದವರು ಒಬ್ಬರೊಬ್ಬರ ಮೇಲೆ ನಂಬಿಗೆಯುಳ್ಳವರಿದ್ದರೆ, ಅವರ ಇಷ್ಟಕಾರ್ಯವು ಎಂದೂ ಸಿದ್ಧಿಗೆ ಹೋಗದು. ಇದೇ ಪ್ರಸಂಗವು ಈಗ ಇವರಿಗೆ ಕನಿಗೆ ಬಂದಿತ್ತು. ಕಟ್ಟಕಡೆಗೆ ಇವ್ರಾಹಿಮನು ಒಂದು ಹಂಚಿಕೆಯನ್ನು ತೆಗೆದನು. ಅದೇನಂದರೆ— " ಆ ಸುದ್ದೀ ತಂದ ಮನುಷ್ಯನು ಪುನಃ ಆ ಅರಬ ಸರದಾರನ ಕಡೆಗೆ ಹೋಗಿ, ಅವನಿಗೆ ತನ್ನ ನಂಬಿಗೆಯುಳ್ಳ ಹತ್ತು ಜನ ಕುದುರೆಯ ರಾಹುತರ ಸಂಗಡ ಪೇಕ್ಯೂಲಾ ಹಾಗೂ ಅವಳ ಇಬ್ಬರು ತೊತ್ತುಗಳನ್ನು ಇಜಿಪ್ತದೇಶದ ಉತ್ತರಕ್ಕಿರುವ "ಸೆಂಟ ಆಂಥೋನಿ " ಎಂಬ ಮಠಕ್ಕೆ ಕಳುಹಬೇಕಂತಲೂ ಅದೇ ಮಠಕ್ಕೆ ಇವ್ರಾಹಿಮನ ಕಡೆಯ ಹತ್ತುಮಂದಿ ರಾಹುತರು ಆ ಸರದಾರನಿಗೆ ಕೊಡತಕ್ಕ ಹಣವನ್ನು ತೆಗೆದುಕೊಂಡು ಬರುವರೆಂತಲೂ ಅಲ್ಲಿ ಅರಬರು ಹಣವನ್ನು ತೆಗೆದುಕೊಂಡು ಆ ಸ್ತ್ರೀಯರನ್ನು ಇವ್ರಾಹಿಮನ ಸೇವಕರಿಗೆ ಒಪ್ಪಿಸಬೇಕೆಂತಲೂ ತಿಳಿಸಬೇಕು "

ಈ ಹಂಚಿಕೆಯು ಸಯುಕ್ತಿಕವಾಗಿದ್ದುದರಿಂದ, ಅರಬ ಸರದಾರನು ನಿಃಸಂದೇಹವಾಗಿ ಇದಕ್ಕೆ ಒಪ್ಪಿಕೊಳ್ಳುವನು. ನಾವೂ ತೀವ್ರ ಆ ಮಠಕ್ಕೆ ಹೋಗಬೇಕು; ಇಲ್ಲದಿದ್ದರೆ ತಡವಾದೀತು. ಎಂದು ತಿಳಿದು ರಾಜಪುತ್ರಿಯೂ, ರಾಜಪುತ್ರನೂ, ಇವ್ರಾಹಿಮನೂ, ಸೇವಕರೂ, ಎಲ್ಲರೂ ಆ ಮಠದ ಕಡೆಗೆ ನಡೆದರು. ಆ ಮಠಕ್ಕೆ ಹೋಗಿ ತಲುಪಿದನಂತರ ಇವ್ರಾಹಿಮನು, ಸುದ್ದೀತಂದ ಮನುಷ್ಯನನ್ನು ಸಂಗಡ ಕರೆದುಕೊಂಡು ಆ ಅರಬ ಸರದಾರನ ಕೋಟೆಯ ಕಡೆಗೆ ಹೋಗಹತ್ತಿದನು. ಆಗ ರಾಸೆಲಾಸನು ಇವ್ರಾಹಿಮನ ಕೂಡ ಹೋಗಬೇಕೆಂದು ಬಹಳೇ ಉತ್ಕಂಠಿತನಾಗಿದ್ದನು. ಆದರೆ ರಾಜಪುತ್ರಿಯೂ, ಇವ್ರಾಹಿಮನೂ, ಅವನಿಗೆ ಹೋಗಬೇಡೆಂದು ಹೇಳಿದರು. ಆ ಅರಬ ಸರದಾರನು ತನ್ನ ಮನೆಗೆ ಬಂದ ಜನರನ್ನು ತನ್ನ ದೇಶದ ಪದ್ಧತಿಗನುಸರಿಸಿ, ಒಳ್ಳೇ ರೀತಿಯಿಂದ ಆದರಿಸಿದನು. ಆ ಮೇಲೆ ತೀವ್ರವೇ, ಪೇಕ್ಯೂಲಾ ಹಾಗೂ ಆಕೆಯ ಇಬ್ಬರು ತೊತ್ತುಗಳನ್ನು ಆ ಮಠಕ್ಕೆ ಕಳಿಸಿ, ಪೂರ್ವ ಸಂಕೇತದಂತೆ ಐನೂರು ಹೊನ್ನುಗಳನ್ನು ತೆಗೆದುಕೊಂಡು, ಆ ಸ್ತ್ರೀಯರನ್ನು ಇವ್ರಾಹಿಮನ ವಶಕ್ಕೆ ಕೊಟ್ಟು, ದಾರಿಯಲ್ಲಿ ಅವರಿಗೆ

ಬೇರೆಯುವರ ತೊಂದರೆಯಾಗಬಾರದೆಂದು ಕೇರೋ ಪಟ್ಟಣದ ವರೆಗೆ ಅವರನ್ನು ಕಳುಹಿಸಿ, ತನ್ನ ಊರಿಗೆ ತಿರುಗಿ ಹೋದನು.

ರಾಜಪುತ್ರಿಗೆ ತನ್ನ ಪ್ರಿಯಸಖಿಯ ಸಮಾಗಮವಾದಾಗ ಅವರಿಬ್ಬರಿಗೂ ಆದ ಆನಂದವನ್ನು ವರ್ಣಿಸುವದು ಸುಲಭವಲ್ಲ. ಆ ಆನಂದದ ಭರದೊಳಗೆ ಅವರಿಬ್ಬರೂ ತಮ್ಮ ತಮ್ಮ ಗುಪ್ತದ ಮಾತುಗಳನ್ನು ಒಬ್ಬರಿಗೊಬ್ಬರು ಹೇಳುವದಕ್ಕಾಗಿಯೂ, ತಮ್ಮ ತಮ್ಮ ಪ್ರೀತಿಯ ಆವಿರ್ಭಾವಗಳನ್ನು ತೋರಿಸುವದಕ್ಕಾಗಿಯೂ, ಏಕಾಂತಸ್ಥಾನಕ್ಕೆ ಹೋದರು. ಅಲ್ಲಿ ಎಷ್ಟೋ ಹೊತ್ತಿನ ವರೆಗೆ ಮಾತುಕಥೆಗಳನ್ನಾಡಿ ಅವರಿಬ್ಬರು ಹೊರಗೆ ಬಂದು, ಜನರೊಳಗೆ ಕೂಡಿಕೊಂಡರು. ತರುವಾಯ ರಾಜಪುತ್ರನು— ಅರಬ ಸರದಾರನು ಪೇಕ್ಯೂಅ ಇವಳನ್ನು ಹಿಡಿದು ಒಯ್ದಂದಿನಿಂದ ಆಕೆಗೆ ಪರ್ತಿಸಿದ ಸಂಗತಿಗಳನ್ನು ಸವಿಸ್ತರವಾಗಿ ವರ್ಣಿಸಬೇಕೆಂದು ಆಕೆಗೆ ಅಪ್ಪಣೆಯನ್ನಿತ್ತನು.

## ಮೂವತ್ತೆಂಟನೆಯ ಭಾಗವು.

### ಪೇಕ್ಯೂಅ ದಾಸಿಯ ಸಾಹಸಕೃತ್ಯಗಳು.

ಪೇಕ್ಯೂಅ- "ಯಾವಾಗ ಮತ್ತು ಹ್ಯಾಗೆ ನಾನು ಒಯ್ಯಲ್ಪಟ್ಟೆನೆಂಬದನ್ನು ನಿಮ್ಮ ಸೇವಕರು ನಿಮಗೆ ಈ ಮೊದಲೇ ಹೇಳಿರುವರು. ಒಮ್ಮಿಂದೊಮ್ಮೆ ವರ್ತಿಸಿದ ಈ ಸಂಗತಿಯನ್ನು ನೋಡಿ, ನಾನು ಆಶ್ಚರ್ಯಚಕಿತಳಾದೆನು. ನಾನು ಗಾಬರಿಯಾದದರಿಂದ ನನ್ನ ಮೈಮೇಲೆ ಎಚ್ಚರ ಉಳಿಯಲಿಲ್ಲ. ಎಚ್ಚರದಪ್ಪಿದ ಮೇಲೆ ಅಂಜಿಕೆ ಇಲ್ಲವೆ ದುಃಖದ ಅನುಭವವು ಪ್ರತ್ಯಯಕ್ಕೆ ಹ್ಯಾಗೆ ಬರಬೇಕು? ತುರ್ಕರು ಅರಬರ ಬೆನ್ನು ಹತ್ತಿದ್ದರಿಂದ ಅರಬರು ತಪ್ಪಿಸಿಕೊಳ್ಳುವದಕ್ಕಾಗಿ ಒಳ್ಳೇ ಒತ್ತರದಿಂದ ಕುದುರೆಗಳನ್ನು ಓಡಿಸಹತ್ತಿದರು. ಆ ಗದ್ದಲದಿಂದಂತೂ ನಾನು ತೀರ ಮೈಮರೆತೆನು; ಇದ್ದಷ್ಟು ಎಚ್ಚರ ಸಹ ತಪ್ಪಿಹೋಯಿತು. ಕಡೆಗೆ ತುರ್ಕರು, ಅರಬರು ತಮ್ಮ ಕೈಗೆ ಸಿಗುವದಿಲ್ಲೆಂದು ತಿಳಿದು ಹಿಂದಿರುಗಿದರೋ, ಇಲ್ಲವೆ ಅರಬರಿಗೆ ಅಂಜಿ ಓಡಿಹೋದರೋ ತಿಳಿಯಲಿಲ್ಲ."

"ತಮ್ಮನ್ನು ಬೆನ್ನಟ್ಟಿದ್ದ ತುರ್ಕರು, ತಿರುಗಿ ಹೋದದ್ದನ್ನು ಅರಬರು ನೋಡಿ ಇನ್ನು ತಮಗೇನೂ ಅಂಜಿಕೆ ಇಲ್ಲೆಂದು ತಿಳಿದು, ತಮ್ಮ ವೇಗವನ್ನು ತುಸು ಕಡಿಮೆ ಮಾಡಿದರು. ಗದ್ದಲವು ಕಡಿಮೆಯಾದ ಕೂಡಲೆ ನನಗೆ ತುಸು ಸ್ಮೃತಿ ಬಂತು. ನನ್ನ ಮೈಮೇಲೆ ಸ್ಮೃತಿ ಬಂದ ಬಂತ ಹಾಗೆ ನಾನು ವೈರಿಗಳ ಕೈಯಲ್ಲಿ ಸಿಕ್ಕಿರುವೆ

ನೆಂತಲೂ, ನನ್ನ ಇಷ್ಟಮಿತ್ರರನ್ನು ಬಿಟ್ಟು ಬಂದಿರುವೆನೆಂತಲೂ ತಿಳಿಯಿತು; ಅದರಿಂದ ನನ್ನ ದುಃಸ್ಥಿತಿಯ ಬಗ್ಗೆ ನನಗೆ ಹೆಚ್ಚೆಚ್ಚು ವ್ಯಸನವಾಗಹತ್ತಿತು. ಕೆಲವು ಹೊತ್ತಿನ ತರುವಾಯ, ಅರಬರು ಒಂದು ಚಂದವಾದ ಹುಲ್ಲುಗದ್ದೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ಇಳಿದರು. ಆ ಹುಲ್ಲುಗದ್ದೆಯ ಹತ್ತರವೇ ಒಂದು ಸ್ವಚ್ಛವಾದ ನೀರಿನಿಂದ ತುಂಬಿದ ಹಳ್ಳವು ಹರಿಯುತ್ತಿತ್ತು. ಹಳ್ಳದ ದಂಡೆಯ ಮೇಲೆ ದೊಡ್ಡ ದೊಡ್ಡ ವೃಕ್ಷಗಳಿದ್ದದರಿಂದ ಪಾಂಥಸ್ಥರಿಗೆ ವಿಶ್ರಾಂತಿ ತೆಗೆದುಕೊಳ್ಳುವದಕ್ಕೆ ಅದು ಯೋಗ್ಯವಾದ ಸ್ಥಳವಾಗಿತ್ತು. ಅಲ್ಲಿ ನಮ್ಮನ್ನು ನಮ್ಮ ಕುದುರೆಗಳ ಮೇಲಿಂದ ಇಳಿಸಿ ಒತ್ತಟ್ಟಿಗೆ ನನ್ನನ್ನೂ ನನ್ನ ತೊತ್ತುಗಳನ್ನೂ ಕೂಡ್ರಿಸಿ, ತಮ್ಮಲ್ಲಿದ್ದಂಥ ಫಲಾಹಾರವನ್ನು ನಮಗೆ ಕೊಟ್ಟರು. ನಾನು ನನ್ನ ದಾಸಿಗಳೊಡನೆ ಒತ್ತಟ್ಟಿಗೆ ಕುಳಿತಾಗ ನಮ್ಮನ್ನು ಸಮಾಧಾನ ಮಾಡುವದಕ್ಕಾಗಿ, ಇಲ್ಲವೆ ತೊಂದರೆಕೊಡುವದಕ್ಕಾಗಿ ನಮ್ಮ ಹತ್ತರ ಯಾರೂ ಬರಲಿಲ್ಲ. ಇಲ್ಲಿ ಮಾತ್ರ, ನನ್ನ ಹೊಸ ಸ್ಥಿತಿಯಿಂದ ನನಗುಂಟಾದ ದುಃಖವು ಪೂರ್ಣವಾಗಿ ನನ್ನ ಲಕ್ಷಕ್ಕೆ ಬಂತು. ನನ್ನ ದಾಸಿಗಳು ನನ್ನ ಮೋರೆಯ ಕಡೆಗೆ ನೋಡಿ ಅಳಹತ್ತಿದರು; ತಮ್ಮನ್ನು ಬಿಡಿಸಬೇಕೆಂದು ನನ್ನ ಪ್ರಾರ್ಥನೆ ಮಾಡಹತ್ತಿದರು. ಮುಂದೆ ನಮ್ಮ ಗತಿ ಏನಾಗುವದು? ನಮ್ಮನ್ನು ಎಲ್ಲಿಗೆ ಒಯ್ಯುವರು? ಬಿಡುಗಡೆ ಹೊಂದಬೇಕಾದರೆ ನಮಗೇನಾದರೂ ಮಾರ್ಗವು ಉಂಟೋ? ಇಲ್ಲವೋ? ಎಂಬ ಬಗ್ಗೆ ನನಗೆ ಏನೂ ತಿಳಿಯಲೊಲ್ಲದು. ನಮ್ಮನ್ನು ಹಿಡಿದೊಯ್ಯುವವರು ಕಳ್ಳರೂ, ಕಾಡುಜನರೂ ಇದ್ದದರಿಂದ ಅವರು ನಮ್ಮ ಮೇಲೆ ದಯೆಯನ್ನು ತೋರಿಸುವರೆಂಬ ಮಾತು ಕನಸುಮನಸ್ಸುಗಳಲ್ಲಿ ಸಹ ಬರುವಂತಿದ್ದಿಲ್ಲ. ಇನ್ನು ಕೇವಲ ನ್ಯಾಯಬುದ್ಧಿಯಿಂದಲೇ ಅವರು ನಮ್ಮನ್ನು ಬಿಟ್ಟುಬಿಡಬೇಕಲ್ಲದೆ, ಬೇರೆ ಯಾವ ಕಾರಣದಿಂದಲೂ ಅವರು ನಮ್ಮನ್ನು ಬಂಧಮುಕ್ತ ಮಾಡಲಿಕ್ಕಿಲ್ಲೆಂದು ನಾನು ನಿಶ್ಚಯವಾಗಿ ತಿಳಿದುಕೊಂಡೆನು. ದುಷ್ಟವಾಸನೆಯಿಂದ ಪೀಡಿತರಾಗಿಯಾಗಲಿ, ಇಲ್ಲವೆ ಕ್ರೂರತನದಿಂದಾಗಲಿ, ಅವರು ನಮ್ಮನ್ನು ಕಾಡುವರೆಂದೂ, ಅವರ ಇಚ್ಛೆಗೆ ನಾವು ಪ್ರತಿಬಂಧ ಮಾಡಿದಳೆ, ನಮ್ಮ ಪ್ರಾಣಗಳನ್ನು ತೆಗೆದುಕೊಳ್ಳುವದಕ್ಕೆ ಸಹ ಅವರು ಹಿಂಜರಿಯಲಿಕ್ಕಿಲ್ಲೆಂದೂ ನಾನು ನಿಶ್ಚಯಿಸಿದೆನು. ಆದಾಗ್ಯೂ ನಾನು ನನ್ನ ದುಃಖವನ್ನು ನುಂಗಿಕೊಂಡು, ನನ್ನ ದಾಸಿಗಳನ್ನು ಮುದ್ದಿಸಿ, ಅಂಜಬೇಡಿರೆಂದು ಅವರಿಗೆ ಹೇಳಿದೆನು. ಅವರ ಮೋರೆಯ ಮೇಲೆ ಕೈಯಾಡಿಸಿ ಅವರ ಸಮಾಧಾನಮಾಡಿದೆನು. ಅರಬರು ನಮ್ಮ ಕೂಡ ಚಲೋ ರೀತಿಯಿಂದ ನಡಕೊಳ್ಳುತ್ತಾರೆ; ನಮಗೆ ಯೋಗ್ಯ ಮಾನವನ್ನು ಕೊಡುತ್ತಾರೆ; ಅವರ ಬೆನ್ನುಹತ್ತಿ ಬಂದಿದ್ದ ತುರ್ಕಿ ಜನರು ತಿರುಗಿ ಹೋದದ

ರಿಂದಲೂ, ಇನ್ನು ಮೇಲೆ ಅವರಿಗೆ ಯಾವ ಅಂಜಿಕೆಯೂ ಇಲ್ಲದ್ದರಿಂದಲೂ, ಅವರು ನಮ್ಮ ಜೀವಕ್ಕೇನೂ ಅಪಾಯ ಮಾಡಲಿಕ್ಕಿಲ್ಲ. ಧೈರ್ಯದಿಂದ ಬಂದ ದುಃಖವನ್ನು ಸಹನ ಮಾಡಬೇಕು. ದೇವರ ದಯದಿಂದ ನಮಗೆ ಬಿಡುಗಡೆಯಾದೀ ತೆಂದು ನಾನು ನನ್ನ ತೊತ್ತುಗಳಿಗೆ ಸಮಾಧಾನ ಹೇಳಿದೆನು."

"ಫಲಾಹಾರವು ತೀರಿದ ನಂತರ ಪುನಃ ಪ್ರಯಾಣ ಮಾಡುವ ಹೊತ್ತಾದಾಗ ನನ್ನ ದಾಸಿಗಳು ನನ್ನನ್ನು ಬಿಗಿಯಾಗಿ ಅಪ್ಪಿಕೊಂಡು ತಮ್ಮನ್ನು ಬಿಟ್ಟುಹೋಗಬೇಡೆಂದು ನನ್ನ ಪ್ರಾರ್ಥನೆ ಮಾಡಹತ್ತಿದರು. ಆಗ ನಾನು ಅವರಿಗೆ ಅಂದದ್ದೇನಂದರೆ:- "ನಾವು ಸುಮ್ಮನೆ ನಮ್ಮನ್ನು ಹಿಡಿದೊಯ್ಯುವವರಿಗೆ ತೊಂದರೆಯನ್ನು ಕೊಟ್ಟರೆ ಒಂದು ವೇಳೆ ಅವರು ನಮ್ಮನ್ನು ಸಿಟ್ಟಿನಿಂದ ಇಲ್ಲಿಯೇ ಕೊಂದು ಹಾಕಿದರೆ ನಾವು ಅವರಿಗೇನು ಮಾಡುವೆವು? ಆದದರಿಂದ ಅವರು ಹೇಳಿದಂತೆ ಕೇಳಿಕೊಂಡು ಅವರು ಕರೆದೊಯ್ದಲ್ಲಿಗೆ ನಾವು ಹೋಗಬೇಕು. ಹಾಗಾದರೆ ಹೋಗಿರಿ, ನೀವು ನಿಮ್ಮ ನಿಮ್ಮ ಕುದುರೆಯ ಮೇಲೆ ಕೂತುಕೊಳ್ಳಿರೆಂದು ನಾನು ಹೇಳಿದೆನು ನಾವೆಲ್ಲರೂ ಕುದುರೆಯ ಮೇಲೆ ಕೂತುಕೊಂಡು ನಿರ್ಜನವಾದ ಅಡವಿಯೊಳಗಿಂದ ಹೊತ್ತು ಮುಳುಗುವ ವರೆಗೆ ನಡೆದೆವು; ರಾತ್ರಿಯಾಗಿ ಚಂದ್ರೋದಯವಾಗುವ ಸಮಯಕ್ಕೆ ಒಂದು ಗುಡ್ಡದ ಬುಡಕ್ಕೆ ಬಂದೆವು. ಅಲ್ಲಿ ನಮಗಿಂತಲೂ ಮುಂಚಿತವಾಗಿಯೇ ಕೆಲವು ಅರಬರು ಬಂದು, ಡೇರೆಗಳನ್ನು ಹೊಡೆದು, ಎಲ್ಲ ಒಡವೆಗಳನ್ನು ವ್ಯವಸ್ಥೆಯಿಂದ ಇಟ್ಟು, ಅಗ್ಗಿಷ್ಟಿಕೆಗಳನ್ನು ಹೊತ್ತಿಸಿ, ಕಾಸಿಕೊಳ್ಳುತ್ತ ಕುಳಿತಿದ್ದರು. ಅವರು ನಮ್ಮನ್ನು ನೋಡಿದ ಕೂಡಲೆ ಮುಂದೆ ಬಂದು ನಮ್ಮನ್ನು ಹಿಡಿತಂದ ಸರದಾರನನ್ನು ಕಾಣಿಸಿಕೊಂಡು ಒಳ್ಳೇ ಮಾನದಿಂದ ಅವನನ್ನು ಡೇರೆಯೊಳಗೆ ಕರೆದೊಯ್ದರು. ಅಲ್ಲಿದ್ದ ಯಾವತ್ತರೂ ಆ ಅರಬ ಸರದಾರನನ್ನು ಚನ್ನಾಗಿ ಪ್ರೀತಿಸುವಂತೆ ನಮಗೆ ಕಂಡುಬಂತು.

"ನಮ್ಮನ್ನು ಒಂದು ದೊಡ್ಡ ಡೇರೆಯಲ್ಲಿ ಒಯ್ದು ಕುಳ್ಳಿರಿಸಿದರು. ಅಲ್ಲಿ ಅನೇಕ ಅರಬ ಸ್ತ್ರೀಯರಿದ್ದರು. ಅವರೆಲ್ಲರು ತಮ್ಮ ಗಂಡಂದಿರ ಕೂಡ ಬಂದಿದ್ದರು. ನಾವು ಅಲ್ಲಿ ಹೋದ ಕೂಡಲೆ ಅವರು ತಮ್ಮಲ್ಲಿದ್ದ ಆಹಾರವನ್ನು ತಂದು ನಮ್ಮ ಮುಂದಿರಿಸಿದರು. ನಮಗೇನೂ ಹಸಿವೆ ಇದ್ದಿಲ್ಲ; ಆದರೂ ನಾನು ಉಣ್ಣದಿದ್ದರೆ ನನ್ನ ತೊತ್ತುಗಳೂ ಉಪವಾಸಬೀಳುವರೆಂಬ ಅಂಜಿಕೆಯಿಂದಲೇ ನಾನು ತುಸು ಉಂಡೆನು. ನಾನು ಉಂಡದ್ದು ನೋಡಿ, ನನ್ನ ದಾಸಿಗಳು ತುಸು ಊಟಮಾಡಿದರು. ಊಟವಾದ ಬಳಿಕ ಮಲಗಿಕೊಳ್ಳುವದಕ್ಕಾಗಿ ಅವರು ನಮಗೆ ಒಂದು ದೊಡ್ಡ ಗುಡಾರವನ್ನು ಹಾಸಿಕೊಟ್ಟರು. ನಾನು ದಣಿದು ಬಂದಿದ್ದೆನು; ದುಃಖ

ವಂತೂ ಮಿತಿಮೀರಿ ಆಗಿತ್ತು; ನಿದ್ರೆಹತ್ತಿದ ಕಾಲದಲ್ಲಾದರೂ ದುಃಖವು ಲವಲೇಶವಾದರೂ ಕಡಿಮೆಯಾಗಬಹುದೆಂದು ತಿಳಿದುಕೊಂಡು, ನನ್ನ ಉಡಿಗೆಗಳನ್ನು ತೆಗೆಯುವದೆಂದು ನಾನು ನನ್ನ ತೊತ್ತುಗಳಿಗೆ ಹೇಳಿದೆನು. ನನ್ನ ತೊತ್ತುಗಳು ನನ್ನ ಅಪ್ಪಣೆಯ ಮೇರೆಗೆ ನನ್ನ ಉಡಿಗೆಗಳನ್ನು ಉಚ್ಚಿಡುವದನ್ನೂ ನೋಡಿ ಆ ಅರಬ ಸ್ತ್ರೀಯರಿಗೆ ಆಶ್ಚರ್ಯವಾಯಿತು. ಯಾಕಂದರೆ ನನ್ನ ತೊತ್ತುಗಳು ನನ್ನ ಆಜ್ಞೆಯನ್ನು ಇಷ್ಟು ನಮ್ರತೆಯಿಂದ ಕೇಳಲಿಕ್ಕಿಲ್ಲೆಂದು ಅವರ ತಿಳವಳಿಕೆ ಇದ್ದಂತೆ ನನಗೆ ಕಂಡುಬಂತು. ನನ್ನ ಸೇವಕರು ನನ್ನ ಮೈಮೇಲಿನ ನಿಲುವಂಗಿಯನ್ನು ತೆಗೆಯಲು; ಒಳಗಿನ ಕಾಂತಿಮಯವಾದ ನನ್ನ ಉಡಿಗೆಗಳನ್ನು ನೋಡಿ ಅವರು ಆಶ್ಚರ್ಯಚಕಿತರಾದರು; ಅವರಲ್ಲೋರ್ವಳಂತೂ ಅಂಜುತ್ತಂಜುತ್ತ ನನ್ನ ಉಡಿಗೆಗಳ ಮೇಲಿನ ಕಸೀದೆಗೆ ಕೈಹಚ್ಚಿನೋಡಿದಳು. ಅನಂತರ ಆಕೆ ನಾವಿದ್ದ ಡೇರೆಯ ಹೊರಗೆ ಹೋಗಿ ಮತ್ತೊಬ್ಬ ಸ್ತ್ರೀಯನ್ನು ಕರೆದುಕೊಂಡು ಒಳಗೆ ಬಂದಳು. ಈ ಎರಡನೇ ಸ್ತ್ರೀಯು ಉಳಿದವರಿಗಿಂತ ಹೆಚ್ಚಿನ ಅಧಿಕಾರವುಳ್ಳವಳೂ, ಯೋಗ್ಯತೆಯುಳ್ಳವಳೂ ಇದ್ದಂತೆ ಕಂಡುಬಂತು. ಆಕೆ ಒಳಗೆ ಬಂದು, ತಮ್ಮ ರೀತಿಗನುಸರಿಸಿ, ನನಗೆ ನಮಸ್ಕಾರ ಮುಂತಾದ ಉಪಚಾರಗಳನ್ನು ಮಾಡಿ, ಮತ್ತೊಂದು ಸಣ್ಣ ಡೇರೆಯೊಳಗೆ ನನ್ನನ್ನು ಕರೆದುಕೊಂಡು ಹೋದಳು. ಆ ಡೇರೆಯೊಳಗಿನ ಹಾಸಿಗೆಗಳು ಮುಂಚಿನ ಡೇರೆಯೊಳಗಿನ ಹಾಸಿಗೆಗಳಿಗಿಂತ ಹೆಚ್ಚು ಚಲೋವಿದ್ದವು. ಅಲ್ಲಿ ನಾನೂ ನನ್ನ ತೊತ್ತುಗಳೂ ಮಲಗಿಕೊಂಡು ಸ್ವಸ್ಥಚಿತ್ತದಿಂದ ರಾತ್ರಿಯನ್ನು ಕಳೆದೆವು.”

“ಮರುದಿನ ಮುಂಜಾನೆ ಹಸಿತೃಣಾಚ್ಛಾದಿತವಾದ ನೆಲದ ಮೇಲೆ ನಾನು ಕುಳಿತಿರುವಾಗ ಆ ಅರಬ ಸರದಾರನು ನನ್ನೆಡೆಗೆ ಬಂದನು. ನಾನು ಅವನು ಬಂದಕೂಡಲೆ ಎದ್ದುನಿಂತು; ನಮ್ರತೆಯಿಂದ ಅವನ ಸತ್ಕಾರಮಾಡಿದೆನು. ಆತನೂ ಒಳ್ಳೇ ವಿನಯದಿಂದ ನನಗೆ ನಮಸ್ಕರಿಸಿ ಅಂದನು— “ದೊರೆಸಾನಿಗಳೇ, ನೀವು ನನ್ನ ಕೈಯಲ್ಲಿ ಸಿಕ್ಕಾಗಲೇ, ನನಗೆ ಬಹಳ ಹಣ ಸಿಗುವದು; ನಾನು ಒಳ್ಳೇ ದೈವವಂತನೆಂದು ತಿಳಿದುಕೊಂಡಿದ್ದೆನು. ಆದರೆ ಈ ಹೊತ್ತಂತೂ ನನ್ನ ದೈವಕ್ಕೆ ಎಣೆಯೇ ಇಲ್ಲವೆಂದು ನಾನು ತಿಳಿದುಕೊಳ್ಳುತ್ತೇನೆ. ಯಾಕಂದರೆ, ನೀವು ಸಾಮಾನ್ಯ ಸ್ತ್ರೀಯರಲ್ಲ; ರಾಜಕನ್ನಿಕೆಯರಿರುತ್ತೀರೆಂದು ನನಗೆ ನನ್ನ ಸ್ತ್ರೀಯರು ಹೇಳಿರುವರು.” ನಾನು ಅದಕ್ಕೆ ಪ್ರತಿಯಾಗಿ ಅಂದದ್ದು; “ದೊರೆಗಳೇ, ನಿಮ್ಮ ಸ್ತ್ರೀಯರು ತಾವು ಮೋಸಹೋದದ್ದಲ್ಲದೆ ನಿಮ್ಮನ್ನೂ ಸಹ ಮೋಸಗೊಳಿಸಿದ್ದಾರೆ. ಯಾಕಂದರೆ ನಾನು ರಾಜಕನ್ನಿಕೆಯಲ್ಲ; ನಾನು ದುರ್ದೈವಿಯಾದ

ಪರಸ್ಥಳದ ಒಬ್ಬ ಸಾಮಾನ್ಯ ಸ್ತ್ರೀಯಾಗಿರುತ್ತೇನೆ. ಕೆಲವು ಕಾರಣದ ಸಲುವಾಗಿ ನಾನು ಈ ದೇಶಕ್ಕೆ ಬಂದಿದ್ದೆನು, ಶೀಘ್ರವೇ ನಾನು ಈ ದೇಶವನ್ನು ಬಿಟ್ಟು ಸ್ವದೇಶಕ್ಕೆ ಹೋಗತಕ್ಕವಳಿದ್ದೆನು; ಆದರೆ ಮಾಡುವದೇನು? ದುರ್ದೈವದಿಂದ ನಾನು ಈಗ ಸೆರೆಯಲ್ಲಿ ಸಿಕ್ಕಿರುತ್ತೇನೆ. ನಾನು ಇನ್ನುಮೇಲೆ ನನ್ನ ಇಡೀ ಜನ್ಮವನ್ನು ಈ ಸೆರೆಮನೆಯಲ್ಲಿಯೇ ಕಳೆಯಬೇಕಾಯಿತು. ಆ ಸರದಾರನು ಪುನಃ ಅಂದನು— "ದೊರೆಸಾನಿಗಳೇ, ತಾವು ಯಾರೇ ಇರವಲ್ಲಿರೇಕೆ? ತಮ್ಮ ದೇಶವು ಯಾವದೇ ಆಗವಲ್ಲದೇಕೆ, ತಮ್ಮ ಮತ್ತು ತಮ್ಮ ತೊತ್ತುಗಳ ಉಡಿಗೆತೊಡಿಗೆಗಳ ಮೇಲಿಂದ ನೋಡಲು, ತಾವು ದೊಡ್ಡ ಕುಲದಲ್ಲಿ ಹುಟ್ಟಿದವರೂ, ಶ್ರೀಮಂತರೂ ಇದ್ದಂತೆ ತೋರುತ್ತದೆ. ಬೇಡಿದಷ್ಟು ಹಣವನ್ನು ಕೊಟ್ಟು ಬಿಡುಗಡೆ ಹೊಂದುವಷ್ಟು ಸಾಮರ್ಥ್ಯವನ್ನು ದೇವರು ತಮಗೆ ಕೊಟ್ಟಿರಲು, ತಾವು ಆಜನ್ಮ ಸೆರೆಮನೆಯಲ್ಲಿರುವ ವಿಚಾರವನ್ನು ಯಾಕೆ ಮಾಡಬೇಕು? ನಾನು ಈ ತರದ ಸುಲಿಗೆಗಳನ್ನು ಮಾಡುವ ಕಾರಣವು ದುಡ್ಡು ಕೂಡಹಾಕುವದು; ಇಲ್ಲವೆ ನಿಜವಾಗಿ ಹೇಳುವದೆಂದರೆ, ಒತ್ತಾಯದಿಂದ ನಮ್ಮ ದೇಶವನ್ನು ಕಸಕೊಂಡಂಥ ಜನರಿಂದ ಹಣವನ್ನು ಸುಲಿದು ಕೊಳ್ಳುವದು. ಇದೇ ಮುಖ್ಯ ಉದ್ದೇಶವು. ಈ ದೇಶದ ಸರಳವಾದ ಸರದಾರರೂ, ಒಡೆಯರೂ ಇಸ್ಮಾಯಿಲ ಬಾದಶಹನ ಮಕ್ಕಳು. ಆದರೆ ಈಗ ಈ ದೇಶವನ್ನು ಆಳುವವರು ಒತ್ತಾಯದಿಂದ ಅದನ್ನು ಅವರಿಂದ ಕಸುಕೊಂಡಿದ್ದಾರೆ. ಆದದರಿಂದ ನ್ಯಾಯದಿಂದ ಪ್ರಾಪ್ತವಾಗದೆ ಇದ್ದದ್ದನ್ನು ಕೊಲೆಸುಲಿಗೆಗಳ ರೂಪದಿಂದ ದೊರಕಿಸುವದು ನಮ್ಮ ಪಾಲಿಗೆ ಬಂದಿದೆ. ಇನ್ನು ಯುದ್ಧದ ಭರದಲ್ಲಿ ಯುಕ್ತಾಯುಕ್ತತೆಯ ಭೇದ ಉಳಿಯುವದಿಲ್ಲ. ನಮ್ಮ ಶತ್ರುಗಳನ್ನು ಸಂಹರಿಸುವದಕ್ಕಾಗಿ ಹಿರಿದ ಖಡ್ಗದ ಪ್ರಹಾರವು ಒಮ್ಮೊಮ್ಮೆ ತಮ್ಮಂಥ ನಿರುಪದ್ರವರಾದಂಥ ಮತ್ತು ಅನಾಥರಾದಂಥ ಜನರ ಮೇಲೆ ಬೀಳುತ್ತದೆ. ಅದಕ್ಕೆ ಉಪಾಯವಿಲ್ಲ."

"ನಾನು ಅಂದೆನು— "ನಿಮ್ಮ ಖಡ್ಗದ ಪ್ರಹಾರವು ನನ್ನಂಥ ಅನಾಥಳ ಮೇಲೆ ಬಿದ್ದೀತೆಂಬ ವಿಚಾರವು ನಿನ್ನಿನ ವರೆಗೆ ನನ್ನ ಕನಸುಮನಸಿನಲ್ಲಿ ಸಹ ಇದ್ದಿಲ್ಲ.

ಆ ಸರದಾರನು ಅಂದನು— "ದೊರೆಸಾನಿಗಳೇ, ಬಂದಂಥ ಸಂಕಟಗಳಿಗೆ ಎದುರಾಗಿ ನಿಂತು ಧೈರ್ಯದಿಂದ ಅವುಗಳನ್ನು ತಾಳಿಕೊಂಡು ಹೋಗುವದಕ್ಕೆ ಜಾಣನು ಯಾವಾಗಲೂ ಸಿದ್ಧನಾಗಿರಬೇಕು. ಯಾಕಂದರೆ, ಸಂಕಟಗಳು ಹೇಳಿಕೇಳಿ ಬರುವದಿಲ್ಲ. ವೈರಿಗಳ ಮನಸ್ಸಿನಲ್ಲಿಯೂ ಸಹ ಪೂಜ್ಯಬುದ್ಧಿಯೂ, ದಯೆಯೂ, ಹುಟ್ಟುತ್ತಿದ್ದರೆ ತಮ್ಮಂಥ ಸಜ್ಜನರು ಅವರ ಬಲೆಯಲ್ಲಿ ಎಂದೂ ಸಿಗುತ್ತಿದ್ದಿಲ್ಲ;

ಮತ್ತು ತಮ್ಮಂಥವರಿಗೆ ಯಾವ ತರದ ದುಃಖವೂ ಆಗುತ್ತಿದ್ದಿಲ್ಲ. ಅವರೆ ವಿಪತ್ತುಗಳ ಬಲೆಯಲ್ಲಿ ದುರ್ಜನರೂ, ಸಜ್ಜನರೂ, ಸಣ್ಣವರೂ! ದೊಡ್ಡವರೂ ಎಲ್ಲರೂ ಸರಿಯಾಗಿ ಬೀಳುತ್ತಾರೆ. ಆದದರಿಂದ ತಾವು ಖೇದಪಡಬೇಡಿರಿ. ನಾನು ಅಡವಿಯೊಳಗೆ ತಿರುಗಾಡುವಂಥ ಕ್ರೂರನೂ, ಪರಪೀಡೆಮಾಡುವವನೂ, ಕೀಳನೂ ಅಲ್ಲ. ಪ್ರತಿಷ್ಠಿತ ಜನರ ನಡೆನುಡಿಗಳನ್ನು ನಾನುಬಲ್ಲೆನು. ನಾನು ನಿಮ್ಮ ಬಿಡುಗಡೆಯ ಹಣವನ್ನು ಗೊತ್ತುಪಡಿಸುವೆನು. ತಮ್ಮ ಕೋಪಾಭಿಮಾನಗ ತಮ್ಮ ಆಪ್ತರಲ್ಲಿ ಯಾರಾದರೂ ಬಂದರೆ, ಇಲ್ಲವೆ ತಾವು ಇಲ್ಲಿಂದ ಯಜನನ್ನಾದರೂ ತಮ್ಮ ಆಪ್ತರ ಕಡಿಗೆ ಕಳುಹಿಸಿದರೆ, ಇತ್ತಿಂದತ್ತ, ಅತ್ತಿಂದಿತ್ತ ಹೋಗಿಬರುವ ಅಪ್ಪಣೆಯನ್ನು ಕೊಡುವೆನು; ಮತ್ತು ನಾನು ಈಮೇರೆಗೆ ತಮಗೆ ಕೊಟ್ಟ ವಚನಗಳನ್ನು ಪ್ರಾಮಾಣಿಕತನದಿಂದ ಪಾಲಿಸುವೆನು. ನೀವು ಇದರಲ್ಲೇನೂ ಸಂದೇಹಪಡಬೇಡಿರಿ."

ಪೇಕಮ್ಯಾಅ, ರಾಜಪುತ್ರ ಮುಂತಾದ ಜನರಿಗೆ ಅಂದಳು— "ಈ ಮೇರೆಗೆ ಮಾತಾಡಿದ ಆತನ ವಿನಯಯುಕ್ತವಾದ ಭಾಷಣವನ್ನು ಕೇಳಿ, ನನಗೆ ಬಹಳ ಸಂತೋಷವಾಯಿತೆಂಬವನ್ನು ನಿಮಗೆ ಹೇಳುವ ಅವಶ್ಯವಿಲ್ಲ ಆ ಸರದಾರನು ಬುದ್ಧಿವಂತನು, ದುಡು ಕೊಟ್ಟರೆ ಬೇಕಾದ ಕೆಲಸವನ್ನು ಮಾಡಲು ಸಿದ್ಧನಿರುವನೆಂದು ನನಗೆ ಕಂಡುಬಂದದ್ದರಿಂದ ನನಗೆ ಧೈರ್ಯಬಂತು. ನನ್ನ ಭೀತಿಯು ಹೋಯಿತು. ಯಾಕಂದರೆ, ನನ್ನ ಬಿಡುಗಡೆಯ ಸಲುವಾಗಿ ಎಷ್ಟು ಹಣ ಬಿದ್ದಾಗ್ಯೂ ಅಷ್ಟು ಹಣವನ್ನು ಕೊಡುವವಕ್ಕೆ ದೊರೆಸಾನಿಯಾದ ರಾಜಪುತ್ರಿಯು ಎಂದೂ ಹಿಂದುಗಲಿಕ್ಕಿಲ್ಲೆಂಬ ನನಗೆ ಪೂರ್ಣ ನಂಬಿಗೆ ಇತ್ತು. ಅವನಿಗೆ ನಾನು ಹೇಳಿದೆನು——ಮಹಾರಾಯರೇ, ತಾವು ನನ್ನನ್ನು ಪ್ರೀತಿಯಿಂದ ನಡಿಸಿಕೊಂಡರೆ ನಾನು ತಮ್ಮ ಉಪಕಾರವನ್ನು ಮರೆತು ಎಂದಿಗೂ ಕೃತಘ್ನಳಾಗಲಾರೆನು. ಸಾಧಾರಣ ಸ್ತ್ರೀಯರಿಗೆ ಯೋಗ್ಯವಾದ ಬಿಡುಗಡೆ ಹಣವನ್ನು ತಾವು ಗೊತ್ತುಮಾಡಿದರೆ, ಅದನ್ನು ಕೊಡಲಿಕ್ಕೆ ನನ್ನ ಆಪ್ತರು ಹಿಂಮುಂದೆ ನೋಡಲಿಕ್ಕಿಲ್ಲ. ಆದರೆ ತಾವು, ನಾನು ರಾಜಕನ್ನಿಕೆ ಇರುತ್ತೇನೆಂದು ತಿಳಿದುಕೊಂಡು ನನ್ನ ಬಿಡುಗಡೆಯ ಹಣವನ್ನು ವಿಶೇಷವಾಗಿ ಏರಿಸಬಾರದು. "ನಾನು ಪೂರ್ಣ ವಿಚಾರಮಾಡಿ ನಿಮ್ಮ ಬಿಡುಗಡೆಯ ಹಣವನ್ನು ಗೊತ್ತುಮಾಡುವೆನು" ಎಂದು ನಗುತ್ತ ಹೇಳಿ, ನನಗೆ ನಮಸ್ಕಾರ ಮಾಡಿ ಆತನು ಹೊರಟುಹೋದನು

" ವನು ಹೋದ ಕೂಡಲೆ ಅರಬ ಸ್ತ್ರೀಯರು ನನ್ನ ಹತ್ತರ ಬಂದು ಒಬ್ಬರಿಗಿಂತ ಒಬ್ಬರು ಮೇಲಾಗಿ ನನ್ನ ಸೇವೆಯನ್ನು ಮಾಡತೊಡಗಿದರು. ಬಹಳ ಹೇಳುವದರಿಂದೇನು? ಅವರು ನನ್ನ ತೊತ್ತುಗಳ ಸೇವೆಯನ್ನು ಸಹ ಬಹಳ ಜಾಗ್ರತೆ

ಯಿಂದ ಮಾಡಹತ್ತಿದರು. ತರುವಾಯ ನಾವು ಮೆಲ್ಲಮೆಲ್ಲನೆ ಮುಂದೆ ಸಾಗಿದೆವು. ನಾಲ್ಕನೆಯ ದಿವಸ ಆ ಸರದಾರನು ಬಂದು, “ ನಿಮ್ಮ ಬಿಡುಗಡೆಯು ಸಲುವಾಗಿ ೨೦೦ ಔಂಸ ಬಂಗಾರವನ್ನು ತಕೊಳ್ಳಬೇಕೆಂದು ನಾನು ಗೊತ್ತುಪಡಿಸಿದ್ದೇನೆ ಎಂದು ಹೇಳಿದನು. ನಾನು ಅದಕ್ಕೆ ಒಪ್ಪಿಕೊಂಡದ್ದಲ್ಲದೆ ನನ್ನನ್ನೂ ನನ್ನ ತೊತ್ತುಗಳನ್ನೂ ಚನ್ನಾಗಿ ನಡಿಸಿಕೊಂಡರೆ ೫೦ ಔಂಸ ಬಂಗಾರವನ್ನು ಹೆಚ್ಚಿಗೆ ಕೊಡುವೆನೆಂದು ಅವನಿಗೆ ವಚನಕೊಟ್ಟೆನು. ” “ಇದುವರೆಗೆ ನನಗೆ ದ್ರವ್ಯದ ಪ್ರಭಾವವು ಗೊತ್ತಿದ್ದಿಲ್ಲ, ಈಗ ಚನ್ನಾಗಿ ಗೊತ್ತಾಯಿತು. ನಾನು ೫೦ ಔಂಸು ಬಂಗಾರವನ್ನು ಹೆಚ್ಚಿಗೆ ಕೊಡುತ್ತೇನೆಂದು ಹೇಳಿದ ಹೊತ್ತಿನಿಂದ ಆ ಅರಬರ ಗುಂಪಿಗೆ ನಾನೇ ಒಡತಿಯಾದೆನು. ಎಲ್ಲರೂ ನನ್ನ ಅಪ್ಪಣೆಯನ್ನು ಪಾಲಿಸಹತ್ತಿದರು. ನನ್ನ ಅಪ್ಪಣೆಯ ಮೇರೆಗೆ ಪ್ರವಾಸದ ಕಾರ್ಯಕ್ರಮವು ಮಾಡಲ್ಪಡಹತ್ತಿತು. ನಾನು ಹೇಳಿದ ಸ್ಥಳದಲ್ಲಿ ಡೇರೆಗಳನ್ನು ಹೊಡೆಯುತ್ತಿದ್ದರು. ಈಗ ನಮಗೆ ಒಂಟೆಗಳೂ ಬೇರೆ ಅನುಕೂಲ ವಸ್ತುಗಳೂ ಸಿಕ್ಕವು. ನನ್ನ ದಾಸಿಗಳು ಯಾವಾಗಲೂ ನನ್ನ ಹತ್ತರ ಇರುತ್ತಿದ್ದರು ಮತ್ತು ನಾವು ಯಾವಾಗಲೂ ಪ್ರವಾಸದಲ್ಲಿಯೇ ನಿಮಗ್ನರಾಗಿರುವಂಥ ಅರಬರ ನಡೆನುಡಿಗಳನ್ನು ನೋಡುತ್ತಲೂ, ಆ ದೇಶದಲ್ಲಿ ಅಲ್ಲಲ್ಲಿಗೆ ವಿಪುಲವಾಗಿದ್ದ ಸುಂದರವಾದಂಥ, ಭವ್ಯವಾದಂಥ ಗುಡಿ ಹಾಗು ಅರಮನೆಗಳ ಅವಶೇಷಗಳನ್ನು ನೋಡುತ್ತಲೂ ನಮ್ಮ ಮನೋರಂಜನೆ ಮಾಡಿಕೊಳ್ಳುತ್ತಿದ್ದೆವು.

“ ಆ ಅರಬನು ಅಜ್ಞಾನಿಯೂ, ನಿರಕ್ಷರಕುಕ್ಷಿಯೂ ಆಗಿದ್ದಿಲ್ಲ. ಆತನಿಗೆ ಹಲವು ತರದ ವಿದ್ಯೆಗಳು ಅವಗತವಿದ್ದವು. ಜ್ಯೋತಿಃಶಾಸ್ತ್ರವನ್ನೂ ಅವನು ಅರಿತವನಾಗಿದ್ದನು. ಆತನು ನಕ್ಷತ್ರಗಳ ಗತಿಯ ಮೇಲಿಂದಲೂ, ಹೋಕಾಯಂತ್ರದ ಸಹಾಯದಿಂದಲೂ ಮಾರ್ಗಕ್ರಮಣ ಮಾಡುತ್ತಿದ್ದನು. ಮತ್ತು ಯಾವ ಯಾವ ಸ್ಥಳಗಳಲ್ಲಿ ನೋಡತಕ್ಕಂಥ ಯಾವ ಯಾವ ಕಟ್ಟಣೆಗಳಿರುತ್ತವೆಂಬದು ಅವನಿಗೆ ಚನ್ನಾಗಿ ಗೊತ್ತಿತ್ತು. ಒಂದು ದಿವಸ ಮಾತಿಗೆಮಾತು ಹೊರಟಾಗ ಅವನು ಅಂದನು ‘ ಯಾವ ಸ್ಥಳದಲ್ಲಿ ಜನರ ವ್ಯವಹಾರವು ಕಡಿಮೆ ಇರುತ್ತದೋ, ಯಾವಸ್ಥಳಕ್ಕೆ ಹೋಗುವದು ಅಶಕ್ಯವಿರುತ್ತದೋ ಅಂಥ ಸ್ಥಳಗಳಲ್ಲಿರುವ ಪ್ರಾಚೀನ ಕಟ್ಟಣೆಗಳು ಒಳ್ಳೇ ಸ್ಥಿತಿಯಲ್ಲಿರುತ್ತವೆ; ಅವು ಚಿರಕಾಲ ಅಚ್ಚಳಿಯದೆ ಇದ್ದಕ್ಕಿದ್ದ ಹಾಗಿರುತ್ತವೆ. ಆದರೆ ಒಮ್ಮೆ ದೇಶಕ್ಕೆ ಹ್ರಾಸಕಾಲವು ಒದಗಿ ಅದು ಹಾಳಾದಮೇಲೆ ಅಲ್ಲಿ ಜನರು ಹೆಚ್ಚೆಚ್ಚು ಇದ್ದ ಹಾಗೆ ಆ ದೇಶದಲ್ಲಿಯ ದೊಡ್ಡ ದೊಡ್ಡ ಕಟ್ಟಣೆಗಳ ನಾಶವು ಹೆಚ್ಚು ತೀವ್ರ ಆಗುತ್ತದೆ. ಯಾಕಂದರೆ, ಜನರು ತಮ್ಮ ಮನೆಯ ಗೋಡೆಗಳನ್ನು ಕಟ್ಟುವದಕ್ಕೆ ಬೇಕಾದ ಕಲ್ಲುಗಳನ್ನು ಕಣಿಗಳೊಳಗಿಂದ ಅಗಿಸು

ತಂದು, ಹೊಡಿಸಿ, ತಯಾರಮಾಡುವ ತೊಂದರೆಗೆ ಬೀಳದೆ, ಅರಮನೆಗಳ ಗೋಡೆಯೊಳಗೆ ಇದ್ದ ಕಲ್ಲುಗಳನ್ನೇ ತೆಗೆದುಕೊಳ್ಳುವರು. ಹೀಗಾಗುವದರಿಂದ ಗುಡಿಗಳೂ, ಅರಮನೆಗಳೂ ಅಲ್ಪಕಾಲದಲ್ಲಿಯೇ ಅಳಿದುಹೋಗುವವು. ಗೋದಲೆಗಳನ್ನೂ, ಕೋಣೆಗಳನ್ನೂ ಕಟ್ಟಲಿಕ್ಕೆ ಸಹ ಅರಮನೆಗಳೊಳಗಿನ, ಚಂದವಾದ ಕರೆಕಲ್ಲುಗಳನ್ನೂ, ಅಮೃತಶಿಲೆಗಳನ್ನೂ (ಸಂಗಮರಮರಿಕಲ್ಲು) ಕೂಡ ತೆಗೆದುಕೊಳ್ಳಲಿಕ್ಕೆ ಜನರು ಹಿಂದುಮುಂದೆ ನೋಡುವದಿಲ್ಲ. ”

## ಮೂವತ್ತೊಂಬತ್ತನೆಯ ಭಾಗವು-

### ಪೇಕ್ಯೂಲಿ ಇವಳ ಮಾತು ಮುಂದೆ ಸಾಗಿದ್ದು

ಪೇಕ್ಯೂಲಿ ಅನ್ನುತ್ತಾಳೆ:—ಈ ಮೇರೆಗೆ ನಾವು ಅನೇಕ ದಿವಸಗಳ ವರೆಗೆ ಅಡವಿಯೊಳಗೆ ತಿರುಗಾಡಿದೆವು. ಆ ಅರಬನು ತೋರಿಕೆಯಲ್ಲಿ ಮಾತ್ರ ನನ್ನ ಮನೋರಂಜನೆಯ ಸಲುವಾಗಿಯೇ ತಾನು ತಿರುಗಾಡುವನೆಂದು ಹೇಳುವನು; ಆದರೆ ಹೀಗೆ ತಿರುಗಾಡುವದರಲ್ಲಿ ಅವನದೇನಾದರೂ ಉದ್ದೇಶವಿದ್ದಂತೆ ನನಗೆ ತೋರಿತು. ಸಿಟ್ಟಿನಿಂದಲೂ, ಔದಾಸೀನ್ಯದಿಂದಲೂ ಏನೂ ಲಾಭವಿಲ್ಲ; ಸುಮ್ಮನೆ ಮನಸ್ತಾಪ ಮಾತ್ರ ಆಗುತ್ತದೆಂದು ವಿವೇಕ ಮಾಡಿಕೊಂಡು, ಆದಷ್ಟು ನೋಡಿ ಸಂತೋಷವೃತ್ತಿಯನ್ನು ಸ್ವೀಕರಿಸುವದೇ ವಾಸಿಯೆಂದು ನಾನು ಪೂರ್ಣ ತಿಳಿದುಕೊಂಡೆನು. ಆದರಿಂದ ನನ್ನ ಮನಸ್ಸಿಗೆ ಶಾಂತತೆಯುಂಟಾಯಿತು. ಆದಾಗ್ಯೂ ನನ್ನ ಜೀವದ ಗೆಳತಿಯಾದ ನಿಕಾಯಾ ರಾಜಪುತ್ರಿಯ ನೆನಪು ಕ್ಷಣಕ್ಷಣಕ್ಕೆ ಆಗುವದು. ನಾನು ಹೊಸಹೊಸ ಚಮತ್ಕಾರಗಳನ್ನೂ, ಜನರನ್ನೂ, ಸ್ಥಳಗಳನ್ನೂ ನೋಡಿ ಹಗಲು ನನ್ನ ಮನವನ್ನು ರಂಜಿಸಿಕೊಳ್ಳುತ್ತಿದ್ದೆನು. ಆದರೆ ರಾತ್ರಿಯಾದ ಕೂಡಲೆ, ನನಗೆ ಇತ್ತಕಡೆಯ ನೆನಪು ಆಗಿ ಚಿತ್ತಸ್ವಾಸ್ಥ್ಯವು ಅಳಿದುಹೋಗಿ, ಮನಸ್ಸಿಗೆ ವರ್ಣಿಸಲಸದಳವಾದ ದುಃಖವಾಗುತ್ತಿತ್ತು. ನನ್ನ ದಾಸಿಯರು ತಮ್ಮ ಚಿಂತೆಯ ಭಾರವನ್ನು ನನ್ನ ಮೇಲೆ ಹಾಕಿಬಿಟ್ಟಿದ್ದರು. ಅರಬರು ನನ್ನನ್ನು ಮರ್ಯಾದೆಯಿಂದ ನಡಿಸಿಕೊಳ್ಳುವದನ್ನೂ, ನನ್ನನ್ನು ಸಂತೋಷಪಡಿಸಲಿಕ್ಕೆ ಮಾಡುವ ಅವರ ಯತ್ನಗಳನ್ನೂ ನೋಡಿ ಛಂದಿನಿಂದ ನನ್ನ ತೊತ್ತುಗಳ ಔದಾಸೀನ್ಯವೂ, ಮನಸ್ತಾಪವೂ ಇಲ್ಲದಂತಾದವು. ಅವರು ತಮ್ಮ ವೇಳೆಯನ್ನು ಆನಂದದಿಂದ ಕಳೆಯಹತ್ತಿದರು. ಅವರ ಆನಂದವೃತ್ತಿಯನ್ನು ನೋಡಿ ನನಗೆ ಸಂತೋಷವಾಗುತ್ತಿತ್ತು; ಮತ್ತು ಅವರು ನನ್ನಮೇಲೆ ತಮ್ಮ ಪೂರ್ಣ ನಂಬಿಗೆ ಇಟ್ಟದ್ದು ನೋಡಿ ನನಗೆ ಒಂದು ತರದ ಹುರುಪು ಹುಟ್ಟಿ

ತ್ತಿತ್ತು. ಆ ಅರಬ ಸರದಾರನು ಕೇವಲ ದ್ರವ್ಯಪ್ರಾಪ್ತಿಯ ಸಲುವಾಗಿಯೇ ಅಡವಿ ಅಡವಿ ತಿರುಗಾಡುತ್ತಾನೆಂದು ನನಗೆ ತಿಳಿದಂದಿನಿಂದ ನನ್ನ ಮನಸ್ಸಿನೊಳಗಿನ ಭೀತಿಯು ತೀರ ಇಲ್ಲದಂತಾಯಿತು. ದ್ರವ್ಯಲೋಭವಾದರೂ ಒಂದು ದುರ್ಗುಣವೇ ಸರಿ; ಆದರೂ ಆ ದುರ್ಗುಣ-ವಿದ್ದ ಮನುಷ್ಯನನ್ನು ಒಲಿಸಿಕೊಳ್ಳುವದು ಬಹು ಸುಲಭ; ಯಾಕಂದರೆ ಅತನು ಬೇಡಿದಷ್ಟು ದುಡ್ಡು ಕೊಟ್ಟರೆ ಸಾಕು; ಕೂಡಲೆ ಅವನು ಒಲೆಯುತ್ತಾನೆ. ಆದರೆ ಉಳಿದ ದುರ್ಗುಣಗಳ ಮಾತು ಹಾಗಲ್ಲ. ಉದಾಹರಣಾರ್ಥವಾಗಿ ಇಬ್ಬರು ಗರ್ವಿಷ್ಠ ಇರುವರೆಂದು ಕಲ್ಪಿಸುವ ಒಬ್ಬನಿಗೆ ಒಂದು ಸೇರಿದರೆ ಎರಡನೆಯವನಿಗೆ ಅದರ ನೆರಳು ಸಹ ಬೇಡಾಗುತ್ತದೆ. ಅಂದ ಮೇಲೆ ಅಂಥ ಜನರನ್ನು ಒಲಿಸಿಕೊಳ್ಳುವದು ಎಷ್ಟು ಕಠಿಣವಾದದ್ದು ನೋಡಿರಿ! ದ್ರವ್ಯಲೋಭಿಯ ಮಾತು ಬೇರೆ. ಅತನು ಬೇಡಿದಷ್ಟು ಹಣವನ್ನು ಕೊಟ್ಟರೆ ತೀರಿತು. ಅತನು ಬೇಕಾದ ಕೆಲಸವನ್ನು ಬೇಕಾದಾಗ ಮಾಡಲಿಕ್ಕೆ ಒಂಟಿ ಕಾಲಿನಮೇಲೆ ಸಿದ್ಧನಾಗಿರುತ್ತಾನೆ."

"ಕೆಲವು ದಿನಗಳ ತರುವಾಯ ನಾವು ಆ ಅರಬ ಸರದಾರನ ಮನೆಗೆ ಬಂದು ಮುಟ್ಟಿದೆವು. ಅವನ ಮನೆಯು ನೀಲ ನದಿಯ ಒಂದು ನಡುಗಡ್ಡೆಯಲ್ಲಿರುತ್ತದೆ. ಅದು ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು ವಿಶಾಲವಾದದ್ದೂ, ಭದ್ರವಾದದ್ದೂ ಇರುತ್ತದೆ ನೀಲನದಿಯು ಉಷ್ಣಕಟಿಬಂಧದಲ್ಲಿರುತ್ತದೆಂದು ನನಗೆ ಹೇಳಿದರು. ಮನೆಗೆ ಬಂದು ಮುಟ್ಟಿದನಂತರ ಅರಬ ಸರದಾರನು ನನ್ನೆಡೆಗೆ ಬಂದು ಅಂದನು.—"ಅನ್ನನವರೇ, ತಾವು ಅನೇಕ ದಿವಸಗಳ ವರೆಗೆ ಪ್ರವಾಸಮಾಡಿ ಮಾಡಿ ದಣಿದಿರುವಿರಿ. ಆದದ ರಿಂದ ಕೆಲವು ವಾರಗಳ ವರೆಗೆ ತಾವು ಇಲ್ಲಿ ಸ್ವಸ್ಥವಾಗಿರಬೇಕು. ಈ ಮನೆಯು ತಮ್ಮದೇ ಇರುತ್ತದೆ. ಎಲ್ಲರೂ ತಾವು ಹೇಳಿದಂತೆ ಕೇಳಿಕೊಂಡಿರುವರು. ನನ್ನ ಉಪಜೀವನದ ಮುಖ್ಯ ಸಾಧನವು ಯುದ್ಧವು. ಆದದರಿಂದ ಇಂಥ ಅಪ್ರಸಿದ್ಧವಾದ ಸ್ಥಳದಲ್ಲಿ ನಾನು ಮನೆಮಾಡಿರುತ್ತೇನೆ. ಬೇಕಾದಾಗ ಯಾರಿಗೂ ತಿಳಿಯದೆ ನಾನು ಇಲ್ಲಿಂದ ಹೊರಬೀಳುತ್ತೇನೆ. ಮತ್ತು ಬೆನ್ನು ಹತ್ತಲ್ಪಡುವ ಅಂಜಿಕೆ ಇಲ್ಲದೆ ಸುರಕ್ಷಿತವಾಗಿ ಇಲ್ಲಿಗೆ ಬಂದು ಮುಟ್ಟುತ್ತೇನೆ. ಇಲ್ಲಿ ತಾವು ನಿರ್ಭೀತರಾಗಿರಿ. ಇಲ್ಲಿ ಸುಖೋಪಭೋಗದ ಒಡವೆಗಳು ತುಸು ಇರುತ್ತವೆ. ಆದರೆ ಇಲ್ಲಿ ಅಂಜಿಕೆ ಮಾತ್ರ ಯಾವ ತರದ್ದೂ ಇಲ್ಲ" ಅತನು ಈ ಮೇರೆಗೆ ಮಾತಾಡಿ ನನ್ನನ್ನು ಅಂತಃಪುರದಲ್ಲಿ ಕರಕೊಂಡು ಹೋಗಿ, ಬಹು ಬೆಲೆಯುಳ್ಳ ಬಾಳುವ ಮಂಚದ ಮೇಲೆ ನನ್ನನ್ನು ಕೂಡ್ರಿಸಿ, ನೆಲಮುಟ್ಟಿ ಮುಜರೆ ಮಾಡಿ ಹೊರಟುಹೋದನು."

“ ಆ ಅರಬ ಸರದಾರನ ಹೆಂಡರು ನನ್ನನ್ನು ನೋಡಿದ ಕೂಡಲೆ, ಈಕೆ ಒಬ್ಬಳು ತಮ್ಮ ಎದುರಾಳಿಯಾಗಿ ಬಂದಳೆಂದು ತಿಳಿದು ನನ್ನ ದ್ವೇಷ ಮಾಡಹತ್ತಿದರು. ಆದರೆ ಕುಸು ವೇಳೆಯಲ್ಲಿಯೇ, ನಾನು ಅವರ ಎದುರಾಳಿಯಲ್ಲ ಆದರೆ ನಾನೊಬ್ಬ ಕುಲೀನ ಸ್ತ್ರೀಯಳಿರುತ್ತೇನೆ; ಹಣದ ಸಲುವಾಗಿ ನನ್ನನ್ನು ತಂದು ಇಟ್ಟಿದ್ದಾರೆ ಎಂದು ಅವರಿಗೆ ತಿಳಿಯಿತು. ಅನಂತರ ಅವರು ನನ್ನನ್ನು ಹೀಯಾಳಿಸುವದನ್ನು ಬಿಟ್ಟಿದ್ದಲ್ಲದೆ ಒಬ್ಬರಿಗಿಂತಲು ಒಬ್ಬರು ಮೇಲಾಡಿ ನನ್ನ ಸೇವೆ ಮಾಡಹತ್ತಿದರು. ”

“ ಈ ಮೇರೆಗೆ ಬಿಡುಗಡೆಯಾಗುವ ಸಂಭವವು ಹೆಚ್ಚೆಚ್ಚು ಕಾಣಿಸಹತ್ತಿದ ಹಾಗೆ ನನಗೆ ಹೆಚ್ಚು ಧೈರ್ಯವುಂಟಾಯಿತು. ಆ ಪ್ರದೇಶವು ನೂತನವಾದದ್ದು ಇದ್ದದರಿಂದ ಅಲ್ಲಿಯ ಹೊಸ ಚಮತ್ಕಾರಗಳನ್ನು ನೋಡಿ ನಾನು ನನ್ನ ಮನವನ್ನು ರಂಜಿಸಿಕೊಳ್ಳುತ್ತಿದ್ದೆನು. ನಾವು ಇದ್ದ ಮನೆಯು ಮೇಲುಪ್ಪರಿಗೆಯು ಬಹಳ ಎತ್ತರ ವಾದದ್ದು ಇದ್ದ ಮೂಲಕ ಆ ಉಪ್ಪರಿಗೆಯ ಮೇಲೆ ನಿಂತು ನೋಡುವವರಿಗೆ ಬಹಳ ದೂರಿನ ಸೃಷ್ಟಿಚಮತ್ಕಾರವು ದೃಷ್ಟಿಗೆ ಬೀಳುವದು; ಅಂಕಡೊಂಕಾಗಿ ಹರಿಯುತ್ತ ಹೋಗುವ ನೀಲನದಿಯು ಬಹಳ ದೂರದ ವರೆಗೆ ಕಾಣಿಸುವದು. ನಾನು ಅವುಗಳನ್ನು ನೋಡಿ ನನ್ನ ವೇಳೆಯನ್ನು ಕಳೆಯುವೆನು. ಹಗಲು ಸೂರ್ಯಪ್ರಕಾಶದಿಂದ ಶೋಭಾಯಮಾನವಾದ ಯಾವತ್ತು ಒಡವೆಗಳನ್ನು ನೋಡುವೆನು. ನಾನು ಮುಂಚೆ ನೋಡದೆ ಇದ್ದ ಎಷ್ಟೋ ಹೊಸ ವಸ್ತುಗಳನ್ನು ಅಲ್ಲಿ ನೋಡಿದೆನು. ಜನರ ದಟ್ಟಣೆ ಇಲ್ಲದಲ್ಲಿ ನೀಲನದಿಯೊಳಗೆ ದೊಡ್ಡ ದೊಡ್ಡ ಮೊಸಳೆಗಳೂ, ನೀರ್ಗುದುರೆಗಳೂ ಹೇರಳವಾಗಿರುವವು. ಅವು ಮನುಷ್ಯರಿಗೆ ಏನೂ ಅಪಾಯ ಮಾಡುವದಿಲ್ಲೆಂದು ನನಗೆ ಗೊತ್ತಿದ್ದರೂ ನಾನು ಅವುಗಳಿಗೆ ಬಹಳ ಅಂಜುವೆನು. ಆ ದೇಶದಲ್ಲಿ ಪ್ರವಾಸ ಮಾಡಿದಂಥ ಎಷ್ಟೋ ಯುರೋಪದ ಪ್ರವಾಸಿಕರು ನೀಲನದಿಯಲ್ಲಿ ಜಲಮನುಷ್ಯರೂ, ಜಲದೇವತೆಗಳೂ ಇರುತ್ತವೆಂದು ಹೇಳುತ್ತಾರೆಂದು ಇವ್ಹಾಕನು ನನಗೊಮ್ಮೆ ಹೇಳಿದ್ದನು. ಅದರಿಂದ ನಾನು ಆ ಅರಬನಿಗೆ ಅಂಥ ದೇವತೆಗಳೂ, ಮನುಷ್ಯರೂ ಎಲ್ಲಿರುತ್ತಾರೆಂದು ಕೇಳಲು, ಅವನು ನನ್ನ ಹುಚ್ಚುತನಕ್ಕೆ ನಕ್ಕು ಅಂದನು. “ ಆ ತರದ ಮನುಷ್ಯರೂ ದೇವತೆಗಳೂ ಇಲ್ಲಿ ಇಲ್ಲ. ಯುರೋಪದ ಪ್ರವಾಸಿಕರು ಹೇಳುವ ಮಾತೆಲ್ಲ ಬುಡದಿಂದ ಸುಳ್ಳಿರುತ್ತದೆ. ”

“ ಆ ಸರದಾರನಿಗೆ ಜ್ಯೋತಿರ್ವಿದ್ಯೆಯ ಅಭಿರುಚಿಯು ಬಹಳ ಇತ್ತು. ಆತನು ಪ್ರತಿದಿವಸ ರಾತ್ರಿ ಗೊತ್ತುಮಾಡಿದ ಒಂದು ಸ್ಥಳದಲ್ಲಿ ನಕ್ಷತ್ರಗಳನ್ನು ನೋಡುತ್ತ ಕೂಡ್ರುವನು. ಆತನು ದಿನಾಗಲು ನನ್ನನ್ನು ತನ್ನ ಸಂಗಡ ಕರೆದುಕೊಂಡು ಹೋಗಿ, ಉಪ್ಪರಿಗೆಯ ಮೇಲೆ ಕೂಡ್ರಿಸಿಕೊಂಡು, ನಕ್ಷತ್ರಗಳ ಹೆಸರುಗಳನ್ನೂ,

ಅವುಗಳು ತಿರುಗುವ ಕ್ರಮವನ್ನೂ, ಹೇಳುವನು. ಆ ವಿದ್ಯೆಯಲ್ಲಿ ನನ್ನ ಆಸಕ್ತಿ ಇಲ್ಲದಿದ್ದಾಗ್ಯೂ ಆತನ ಸಂತೋಷಕ್ಕಾಗಿ ನಾನು ಆತನು ಹೇಳುವದನ್ನೆಲ್ಲ ಚಿತ್ತಗೊಟ್ಟು ಆಲಿಸುವವಳಂತೆ ತೋರ್ಪಡಿಸುತ್ತಿದ್ದೆನು. ಆತನಿಗೆ ಆ ವಿದ್ಯೆಯ ಅಭಿಮಾನವು ಬಹಳ ಇತ್ತು. ನನಗೂ ಎರಡನೆಯ ಯಾವ ಕೆಲಸವೂ ಇಲ್ಲದ್ದರಿಂದ ಅವನು ಹೇಳುವದನ್ನೆಲ್ಲ ಕೇಳುತ್ತ ಕೂಡ್ರುವೆನು. ಆದದರಿಂದ ನನ್ನ ಹೊತ್ತು ಸಹಜವಾಗಿ ಹೋಗುತ್ತಿತ್ತು. ದಿನಾಗಲು ಹಗಲು ನೋಡಿದ್ದನ್ನೇ ನೋಡಿ ನನಗೆ ಬೇಸರ ಬರಹತ್ತಿತು. ಆದದರಿಂದ ರಾತ್ರಿ ನಕ್ಷತ್ರಗಳನ್ನು ನೋಡಿ ಆ ಬೇಸರವನ್ನು ಕಳೆದುಕೊಳ್ಳುತ್ತಿದ್ದೆನು. ಒಮ್ಮೊಮ್ಮೆ ನನ್ನ ಪ್ರಿಯ ಸಖಿಯಾದ ನಿಶಾಯಾ ರಾಜಕನ್ನಿಕೆಯ ನೆನಪಾಯಿತೆಂದರೆ, ಈಗ ಆಕೆ ಏನು ಮಾಡುತ್ತಿದ್ದಾಳು? ಏನು ಮಾತಾಡುತ್ತಿದ್ದಾಳು? ಎಂಬ ವಿಚಾರಗಳಲ್ಲಿ ಮಗ್ನಳಾಗಿ ಆಕಾಶದ ಕಡೆಗೆ ದಿಟ್ಟಿಸಿ ನೋಡುತ್ತ ಕುಳಿತುಕೊಳ್ಳುತ್ತಿದ್ದೆನು. ಆಗ ಅಲ್ಲಿಯ ಜನರೆಲ್ಲರು ನಾನು ಒಳ್ಳೇ ಲಕ್ಷಪೂರ್ವಕವಾಗಿ ನಕ್ಷತ್ರಗಳನ್ನು ನೋಡುತ್ತೇನೆಂದು ತಿಳಿದುಕೊಳ್ಳುವರು; ಆದರೆ ನಿಜವಾಗಿ ವಿಚಾರ ಮಾಡಿದರೆ ನನ್ನ ಮನಸ್ಸೆಲ್ಲ ಇತ್ತ ಕಡೆಗೇ ಇರುತ್ತಿತ್ತು. ಕೆಲವು ದಿವಸಗಳ ತರುವಾಯ ಆ ಸರದಾರನು ಪುನಃ ತನ್ನ ವಾಡಿಕೆಯ ಮೇರೆಗೆ ಹೊರಗೆ ಹೋದನು. ಆಗ ನಾನು ನನ್ನ ದಾಸಿಗಳನ್ನು ನನ್ನ ಹತ್ತರ ಕೂಡ್ರಿಸಿಕೊಂಡು, ನಾವು ಅರಬರ ಕೈಯೊಳಗೆ ಅಕಸ್ಮಿತವಾಗಿ ಸಿಕ್ಕ ಸಂಗತಿಯ ಬಗ್ಗೆಯೂ, ಇಲ್ಲಿಂದ ಪಾರಾಗಿ ಹೋದ ಮೇಲೆ ನಮಗೆ ಆಗುವ ಆನಂದದ ಬಗ್ಗೆಯೂ ವಿಚಾರ ಮಾಡುವದರಲ್ಲಿ ನಮ್ಮ ವೇಳೆಯನ್ನು ಕಳೆಯಹತ್ತಿದೆವು."

ರಾಜಕನ್ನಿಕೆಯು ಅಂದಳು—“ ಏನೇ, ಆ ಅರಬ ಸರದಾರನ ಸ್ತ್ರೀಯರು ಅಲ್ಲಿದ್ದರಷ್ಟೇ. ಅವರ ಕೂಡ ಸ್ನೇಹ ಬೆಳಿಸಿ, ನಿನ್ನ ಸುಖದುಃಖಗಳನ್ನು ಅವರಿಗೆ ಹೇಳಿ, ಅವರ ಸುಖದುಃಖಗಳನ್ನು ನೀನು ಕೇಳಿ, ನಿನ್ನ ಮನರಂಜನೆಯನ್ನು ಯಾಕೆ ಮಾಡಿಕೊಳ್ಳುತ್ತಿದ್ದಿಲ್ಲ? ಏನಾದರೂ ಕೆಲಸ ಮಾಡಿ ಇಲ್ಲವೆ ಯಾವದಾದರೊಂದು ಆಟವನ್ನಾಡಿ ಅವರು ತಮ್ಮ ವೇಳೆಯನ್ನು ಕಳೆಯುತ್ತಿದ್ದಿಲ್ಲವೋ? ನಿನಗೆ ಮಾತ್ರ ಹೊತ್ತುಹೋಗುತ್ತಿದ್ದಿಲ್ಲೆಂದು ಅನ್ನುತ್ತೀ ಅದ್ಯಾಕೆ? ಆ ಅರಬ ಸ್ತ್ರೀಯರು ತಮ್ಮ ಇಡೀ ಜನ್ಮವನ್ನು ಒಂದೇ ತರದ ಸ್ಥಿತಿಯಲ್ಲಿ ಸಂತೋಷದಿಂದ ಕಳೆಯುತ್ತಾರೆಂದ ಮೇಲೆ, ನೀನು ಕೆಲವು ತಿಂಗಳುಗಳವರೆಗಾದರೂ ಆ ಸ್ಥಿತಿಯಲ್ಲಿ ಇರಲಾರದ ಹಾಗೆ ಆದೆಯಾ? ಅವರಿಗೆ ಅವರ ಸ್ಥಿತಿಯಲ್ಲಿ ಹೆಚ್ಚುಕಡಿಮೆ ಆಗುವ ಸಂಭವವೇ ಇದ್ದಿಲ್ಲ. ಆದರೆ ತುಸು ದಿವಸಗಳಲ್ಲಿಯೇ ನೀನು ಆ ಸ್ಥಿತಿಯಿಂದ ಪಾರಾಗುವ

ಸಂಭವವಿತ್ತು. ಅಂತಮೇಲೆ ಮುಂದಿನ ಆಶೆಯಿಂದಾದರೂ ನೀನು ನಿನ್ನ ಸಮಾಧಾನವನ್ನು ಯಾಕೆ ಮಾಡಿಕೊಳ್ಳುತ್ತಿದ್ದಿಲ್ಲ?

ಪೇಕ್ಯ್ಯಾಅ ಉತ್ತರ ಕೊಟ್ಟಳು:—"ರಾಜಕನ್ನಿಕೆಯೇ, ಆ ಸ್ತ್ರೀಯರ ಆಟಗಳೂ, ಅವರ ಮನರಂಜನೆಯ ಮಾರ್ಗಗಳೂ, ಕೇವಲ ಹುಡುಗಾಟದವಿದ್ದವು. ಪ್ರೌಢ ಮತ್ತು ವಿಚಾರಸಂಪನ್ನರಾದಂಥವರಿಗೆ ಅವರ ಆಟಗಳೂ, ಅವರ ಮನರಂಜನೆಯ ಮಾರ್ಗಗಳೂ ಎಂದೂ ಸೇರವು. ಅವರ ಯಾವತ್ತೂ ಆಟಗಳ ಪರ್ಯವಸಾನವು ಶಾರೀರಕ ವ್ಯಾಪಾರಗಳಲ್ಲಿಯೇ ಆಗುತ್ತಿತ್ತು; ಅಂದರೆ ಅವರ ಆಟಗಳಿಂದ ಶಾರೀರಕ ಶಕ್ತಿಗಳಷ್ಟೇ ಬೆಳೆಯುತ್ತಿದ್ದವಲ್ಲದೆ ಮನಃಸುಧಾರಣೆಯು ಕಿಂಚಿತ್ತಾದರೂ ಆಗುತ್ತಿದ್ದಿಲ್ಲ. ಇಂಥ ಆಟಗಳಿಂದ ನಮ್ಮಂಥವರ ಮನರಂಜನೆಯು ಹೇಗಾಗಬೇಕು? ಇದಲ್ಲದೆ ನನ್ನ ಯಾವತ್ತು ಲಕ್ಷವು ಕೇರೋ ಪಟ್ಟಣದ ಕಡೆಗೆ ಇರುತ್ತಿತ್ತು. ಸಾಕಿದ ಪಕ್ಷಿಗಳು ತಮ್ಮ ಪಂಜರದೊಳಗೆ ಒಂದು ತಂತಿಯಿಂದ ಮತ್ತೊಂದು ತಂತಿಗೆ ಹಾರಾಡುವಂತೆ ಆ ಸ್ತ್ರೀಯರು ಒಂದು ಕೋಣೆಯಿಂದ ಮತ್ತೊಂದು ಕೋಣೆಯೊಳಗೆ ಹೋಗುತ್ತಿರುವರು; ಇಲ್ಲವೆ ಹುಲ್ಲುಗದ್ದೆಯಲ್ಲಿ ಆನಂದದಿಂದ ಕುಣಿದಾಡುವ ಕುರಿಮರಿಗಳಂತೆ ಅವರು ಕುಣಿದಾಡುವರು; ಒಮ್ಮೊಮ್ಮೆ ಒಬ್ಬಳು ಕೆಳಗೆ ಬಿದ್ದು ಎರಡನೆಯವರನ್ನು ಗಾಬರಿಗೊಳಿಸುವದಕ್ಕಾಗಿ ತನಗೆ ಗಾಯವಾಯಿತೆಂದು ಸುಳ್ಳೇ ಒದರುವಳು; ಇಲ್ಲವೆ ಒಬ್ಬಳು ಅಡಗಿಕೊಂಡಳೆಂದರೆ ಎಲ್ಲರೂ ಕೂಡಿ ಅವಳನ್ನು ಹುಡುಕುವರು; ಒಮ್ಮೊಮ್ಮೆ ನದಿಗಳ ಪ್ರವಾಹದಗುಂಟ ಹರಿದು ಹೋಗುವ ಕಟ್ಟಿಗೆ, ಎಲೆ, ಮುಂತಾದ ಹಗುರಾದ ಪದಾರ್ಥಗಳನ್ನು ನೋಡುತ್ತ ಕೂಡ್ರುವರು; ಒಮ್ಮೊಮ್ಮೆ ಆಕಾಶದ ಕಡೆಗೆ ನೋಡುತ್ತ ಚಿತ್ರವಿಚಿತ್ರವಾದ ಮೋಡಗಳನ್ನು, ಅವುಗಳ ಆಕಾರಗಳನ್ನೂ ನೋಡುತ್ತ ಕುಳಿತುಕೊಳ್ಳುವರು; ಇವೇ ಅವರ ಮನರಂಜನದ ಮಾರ್ಗಗಳು.

"ಅವರ ಮುಖ್ಯ ಉದ್ಯೋಗವು ಹೊಲಿಗೆಯ ಕೆಲಸ. ಈ ಕೆಲಸದಲ್ಲಿ ಒಮ್ಮೊಮ್ಮೆ ನಾನೂ ನನ್ನ ತೊತ್ತುಗಳೂ ಅವರಿಗೆ ನೆರವಾಗುತ್ತಿದ್ದೆವು. ಆದರೆ ಹೊಲಿಗೆಯ ಕೆಲಸದಲ್ಲಿ ತೊಡಗಿದಾಗ ನನ್ನ ಬೆರಳುಗಳು ಮಾತ್ರ ಆ ಕೆಲಸವನ್ನು ಮಾಡುತ್ತಿದ್ದವು; ನನ್ನ ಮನಸ್ಸೆಲ್ಲ ಮತ್ತೊಂದು ವಿಷಯದ ಕಡೆಗೆ ಇರುತ್ತಿತ್ತೆಂದು ನಿಮಗೆ ನಾನು ಹೇಳಲವಶ್ಯವಿಲ್ಲ. ನನ್ನ ಪರಮ ಪ್ರಿಯ ಸಖಿಯಾದ ನಿಕಾಯಾ ರಾಜಕನ್ನಿಕೆಯ ವಿಯೋಗದುಃಖಾಗ್ನಿಯಿಂದ ಬೆಂದ ನನ್ನ ಮನಸ್ಸು ರೇಸಿಮೆಯ ಹೂವುಗಳನ್ನು ತೆಗೆಯುವದರಿಂದ ಸಮಾಧಾನವನ್ನು ಹ್ಯಾಗೆ ಹೊಂದಬೇಕು!"

"ಇದಲ್ಲದೆ ಆ ಸ್ತ್ರೀಯರ ಕೂಡ ಸಂಭಾಷಣ ಮಾಡುವದರಿಂದ ತುಸು ಸಹ ಮನರಂಜನವಾಗುವಂತಿದ್ದಿಲ್ಲ. ಯಾಕಂದರೆ ಅವರು ಕೇವಲ ಅಜ್ಞಾನಿಗಳಾಗಿದ್ದುದರಿಂದ ಅವರು ಏನು ಸಂಭಾಷಣ ಮಾಡ್ಯಾರು? ಚಿಕ್ಕಂದಿನಿಂದ ಈ ಅಪ್ರಸಿದ್ಧವಾದ ಸ್ಥಳದೊಳಗೇ (ಒಂದು ತರದ ಸೆರೆಮನೆಯೊಳಗೆ) ಕಾಲಕಳೆದಂಥ ಆ ಸ್ತ್ರೀಯರಿಗೆ ಹೊರಗಿನ ವಸ್ತುಗಳ ಜ್ಞಾನವಾದರೂ ಇರುವ ಸಂಭವವು ಹ್ಯಾಗೆ? ಜ್ಞಾನವಾಗುವದಂತೂ ಇರಲಿ, ಅವರು ಹೊರಗಿನ ವಸ್ತುಗಳನ್ನಾದರೂ ನೋಡುವ ಬಗೆ ಹ್ಯಾಗೆ? ಇದಲ್ಲದೆ ಅವರಿಗೆ ಓದಲಿಕ್ಕೂ ಬರೆಯಲಿಕ್ಕೂ ಬರುತ್ತಿದ್ದಿಲ್ಲ. ಆದರಿಂದ ನಾನಾತರದ ಗ್ರಂಥಗಳನ್ನು ಓದುವದರಿಂದ ಉಂಟಾಗುವ ಜ್ಞಾನಕ್ಕೆ ಅವರು ಎರವಾಗಿದ್ದರು; ಸಾರಾಂಶ—ಅವರ ಕಣ್ಣಿಗುರಿಗೆ ಬೀಳುವ ಕೆಲವು ನಿಯಮಿತ ವಸ್ತುಗಳ ಜ್ಞಾನವು ಮಾತ್ರ ಅವರಿಗೆ ಇತ್ತಲ್ಲದೆ ಹೆಚ್ಚಿನ ಜ್ಞಾನದ ಗಂಧವೇ ಅವರಿಗಿದ್ದಿಲ್ಲ, ಎಷ್ಟೋ ಒಡವೆಗಳ ಹೆಸರು ಸಹ ಅವರಿಗೆ ಗೊತ್ತಿದ್ದಿಲ್ಲ. ಬಹಳ ಹೇಳುವದೇನು? ತಿಂಬುಂಬುವ ಮತ್ತು ಉಡುವ ತೊಡುವ ಕೆಲವು ಒಡವೆಗಳ ಜ್ಞಾನದ ಹೊರತು ಬೇರೆ ಏನೂ ಅವರಿಗೆ ಗೊತ್ತಿದ್ದಿಲ್ಲ. ಅವರೆಲ್ಲರೂ ನಾನು ಒಳ್ಳೇ ಜಾಣಳೆಂದು ತಿಳಿದು ತಮ್ಮದೇನಾದರು ಜಗಳತೋಟಿಗಳಿದ್ದರೆ ಅವುಗಳನ್ನು ಬಿಡಿಸಬೇಕೆಂದು ನನಗೆ ಹೇಳುವರು. ನಾನು ನನ್ನ ಕೈಲಾದ ಮಟ್ಟಿಗೆ ನ್ಯಾಯಬುದ್ಧಿಯಿಂದ ಅವರ ಜಗಳಗಳನ್ನು ತೀರಿಸುತ್ತಿದ್ದೆನು. ನಾನು ಒಬ್ಬರೊಬ್ಬರ ನ್ಯಾಯವನ್ನು ಬೇರೆಬೇರೆಯಾಗಿ ಕೇಳುತ್ತ ಕೂತರೆ ನನಗೆ ಬೇಸರ ಬರುವವರೆಗೆ ಅವರು ಹೇಳೇ ಹೇಳುತ್ತಿದ್ದರು. ಈ ಕಾರಣದ ಸಲುವಾಗಿ ನಾನು ಆ ಗೊಡವಿಗೇ ಹೋಗುತ್ತಿದ್ದಿಲ್ಲ; ಅಷ್ಟರಪೂರ್ತಿ ಕೇಳಿಕೊಂಡು ನ್ಯಾಯತೀರಿಸುತ್ತಿದ್ದೆನು. ಅವರ ಜಗಳಗಳಾದರೂ ತೀರ ಕ್ಷುಲ್ಲಕ ಕಾರಣಗಳಿಂದುಂಟಾಗುತ್ತಿದ್ದವು; ಆದದರಿಂದ ಆ ಕಾರಣಗಳನ್ನು ನಾನು ಪೂರ್ಣ ಕೇಳುತ್ತ ಕೂಡ್ರುತ್ತಿದ್ದಿಲ್ಲ."

ರಾಸೆಲಾಸನು ಅಂದನು:—"ನಿನ್ನ ಹೇಳಿಕೆಯು ಮೇಲಿಂದ ನೋಡಿದರೆ ಆ ಅರಬ ಸರದಾರನು ಒಳ್ಳೇ ವಿದ್ವಾಂಸನೂ, ಚತುರನೂ ಇದ್ದಂತೆ ತೋರುತ್ತದೆ. ಅಂದಮೇಲೆ ಅಂಥವನಿಗೆ ಇಂಥ ಅಜ್ಞಾನಿಗಳಾದಂಥ, ಪಶುಸಮಾನರಾದಂಥ ಸ್ತ್ರೀಯರು ಹ್ಯಾಗೆ ಸೇರುತ್ತಿದ್ದರು? ಅವನ ಮನರಂಜನೆಯಾದರೂ ಹ್ಯಾಗಾಗುತ್ತಿತ್ತು? ಅದಿರಲಿ. ಆ ಸ್ತ್ರೀಯರ ಸೌಂದರ್ಯವಾದರೂ ಅಪ್ರತಿಮವಾದದ್ದೊ, ವರ್ಣಿಸತಕ್ಕಂಥಾದ್ದೊ ಇತ್ತೋ?

ಪೇಕ್ಕೂಅ ಉತ್ತರ ಕೊಟ್ಟಳು:—"ಮಹಾರಾಯರೇ, ಅವರೆಲ್ಲರೂ ಸುಂದರಾಂಗನೆಯರೇ ಇದ್ದರು. ಆದರೆ ಚತುರ ಮತ್ತು ಮಾರ್ಮಿಕ ಪುರುಷನ ಚಿತ್ತ

ವೃತ್ತಿಯನ್ನು ಆನಂದಗೊಳಿಸಲಿಕ್ಕೆ ಅವಶ್ಯವಾದ ಬುದ್ಧಿಚಾಂಪಲ್ಯವೂ, ಮನಸ್ಸಿನ ದೊಡ್ಡಸ್ತನವೂ ಅವರಲ್ಲಿಲ್ಲದ್ದರಿಂದ ಅವರ ಸೌಂದರ್ಯಕ್ಕೆ ಒಂದು ತರದ ಕುಂದು ಬಂದಂತಾಗಿತ್ತು. ಒಬ್ಬ ಮನುಷ್ಯನು ಹೋಗುತ್ತಿರುವಾಗ ದಾರಿಯಲ್ಲಿ ಒಂದು ಚಂದ ಮತ್ತು ಚಮತ್ಕಾರವಾದ ಹೂವನ್ನು ಕಂಡರೆ, ಅವನು ಅದನ್ನು ಕೊಯ್ದು ವಾಸನೆಯನ್ನು ನೋಡಿ ಜೇಸತ್ತಮೇಲೆ ಹ್ಯಾಗೆ ಚಲ್ಲಿಬಿಡುವನೋ ಹಾಗೆ ಆ ಅರಬ ಸರದಾರನು ಆ ಸ್ತ್ರೀಯರ ಕೂಡ ನಡಕೊಳ್ಳುತ್ತಿದ್ದನು. ನಿಷ್ಕಪಟ ಸ್ನೇಹದಿಂದಲೂ, ಸಹವಾಸದಿಂದಲೂ ಉಂಟಾಗತಕ್ಕ ಸುಖಗಳು ಅವರ ಸ್ನೇಹದಿಂದ ಆತನಿಗೆ ಉಂಟಾಗುತ್ತಿದ್ದಿಲ್ಲ. ಅವರು ಆತನ ಸುತ್ತಲು ಆಡಹತ್ತಿದರೆ ಆತನ ಮನಸ್ಸು ಯಾರ ಕಡೆಗೂ ಎಳೆಸುತ್ತಿದ್ದಿಲ್ಲ. ಅವರೆಲ್ಲರು ಆತನ ಮನಸ್ಸನ್ನು ತಮ್ಮ ಕಡೆಗೆ ಎಳೆದುಕೊಳ್ಳಲಿಕ್ಕೆ ಒಳ್ಳೇ ಅಸೂಯಾಪೂರ್ವಕವಾಗಿ ಪ್ರಯತ್ನಮಾಡಹತ್ತಿದರೆ, ಆತನು ಅವರೆಲ್ಲರನ್ನು ಧಿಕ್ಕರಿಸಿ ಅಲ್ಲಿಂದ ಹೊರಟುಹೋಗುವನು. ಅವರು ಜ್ಞಾನಹೀನರಾಗಿದ್ದದರಿಂದ ಅವರ ಸಂಭಾಷಣದಿಂದ ಸಂಸಾರತಾಪವು ಲವಲೇಶ ಕಡಿಮೆಯಾಗುತ್ತಿದ್ದಿಲ್ಲ. ಯೋಗ್ಯತಾಯೋಗ್ಯತೆ, ಗುಣಾವಗುಣ, ಸತ್ಯಾಸತ್ಯ ಇವುಗಳಲ್ಲಿರುವ ಭೇದವು ಅವರಿಗೆ ಗೊತ್ತಿದ್ದಿಲ್ಲಾದ್ದರಿಂದ ಅವರು ತೋರಿಸುವ ಪ್ರೀತಿಯ ಬಗ್ಗೆ ಆ ಅರಬ ಸರದಾರನ ಮನಸ್ಸಿನಲ್ಲಿ ಅಭಿಮಾನವೂ ಉಪಕಾರಬುದ್ಧಿಯೂ ಎಳ್ಳಷ್ಟೂ ಹುಟ್ಟುತ್ತಿದ್ದಿಲ್ಲ. ತನ್ನನ್ನುಳಿದು ಬೇರೆ ಪುರುಷರ ಮುಖವನ್ನು ಸಹ ನೋಡದೆ ಇದ್ದಂಥ ಅರಬ ಸ್ತ್ರೀಯರ ಮುಗುಳುನಗೆಗೂ, ಅವರ ಓರೆನೋಟಕ್ಕೂ ಮರುಳಾಗುವ ಪ್ರಸಂಗವು ಆ ಸರದಾರನಿಗೆ ಬರುತ್ತಿದ್ದಿಲ್ಲ. ಯಾವ ಸ್ತ್ರೀಯರ ಪ್ರೇಮವು ನಿಷ್ಕಪಟವಾದದ್ದಿರುವದಿಲ್ಲವೋ, ಮತ್ತು ಯಾರು ಪುರುಷನನ್ನು ಸಂತೋಷಪಡಿಸುವದಕ್ಕಲ್ಲ, ಆದರೆ ತಮ್ಮ ಸವತೆಯರ ಮನಸ್ಸನ್ನು ನೋಯಿಸಬೇಕೆಂಬ ಉದ್ದೇಶದಿಂದ ಪುರುಷನ ಮೇಲೆ ಪ್ರೇಮ ತೋರಿಸುತ್ತಾರೋ ಅಂಥ ಪ್ರೇಮದ ಬಗ್ಗೆ ಅರಬ ಸರದಾರನ ಮನಸ್ಸಿನಲ್ಲಿ ಉಪಕಾರ ಬುದ್ಧಿಯು ಹ್ಯಾಗೆ ಹುಟ್ಟಬೇಕು? (ಪರಸ್ಪರ ನಿಷ್ಕಪಟ ಪ್ರೇಮವಿಲ್ಲೆಂಬ ಭಾವವು) ಏನೂ ಕೆಲಸವಿಲ್ಲದಾಗ ವೇಳೆಯನ್ನು ಕಳೆಯುವದಕ್ಕಾಗಿ ಆತನು ಆ ಸ್ತ್ರೀಯರ ಹತ್ತರ ಬರುವನು. ಅವರ ಕೂಡ ಆಡುವನು; ಅವರ ಕೂಡ ಮಾತಾಡುವನು; ಇದೇ ಪರಸ್ಪರರ ಪ್ರೀತಿಯು. ಒಬ್ಬನು ತನಗೆ ಬೇಡಾದಂಥ ಮತ್ತು ಯಾವದರಿಂದ ತನಗೆ ಯಾವ ತರದ ಅಂಜಿಕೆಯೂ ಆಶೆಯೂ ಸುಖವೂ ದುಃಖವೂ ಇಲ್ಲವೋ ಅಂಥ ಒಡವೆಯ ಮೇಲೆ ಯಾವ ತರದ ಮಮತೆಯನ್ನು ಮಾಡುತ್ತಾನೋ ಆ ತರದ ಮಮತೆಯನ್ನು ಆ ಅರಬ ಸರದಾರನು ತನ್ನ ಸ್ತ್ರೀಯರ ಮೇಲೆ ಮಾಡುತ್ತಿದ್ದನು. "

ಈ ವೇಳೆಗೆ ಹೇಳಿದ ಪೇಕ್ಯೂಆ ದಾಸಿಯು ಮಾತುಗಳನ್ನು ಕೇಳಿ ಇವಾನ್ಲ ಕನು ಅವಳಿಗೆ ಅಂದನು. "ಹಾಗಾದರೆ ನೀನು ಅಲ್ಲಿಂದ ಇಷ್ಟು ಸುಲಭವಾಗಿ ಪಾರಾಗಿ ಬಂದಿರುವಿ; ಅಂತಮೇಲೆ ನೀನು ಕೇವಲ ದೈವಶಾಲಿಯೇ ಸರಿ. ಯಾಕಂದರೆ ನಿನ್ನ ಹೇಳಿಕೆಯು ಮೇಲಿಂದ ಆ ಅರಬ ಸರದಾರನಿಗೆ ಚತುರ ಮತ್ತು ಜಾಣ ಮನುಷ್ಯರ ಕೊರತೆಯು ಬಹಳ ಇತ್ತು. ಅಂಥವನ ಕೈಯ್ಯಲ್ಲಿ ನಿನ್ನಂಥವಳು ಅನಾಯಾಸವಾಗಿ ಸಿಕ್ಕಿದ್ದೆ. ಅಂದಮೇಲೆ ನಿನ್ನ ಚಾತುರ್ಯ ಮತ್ತು ರಸಭರಿತವಾದ ಸಂಭಾಷಣವು ಅವನಿಗೆ ಅಮೃತಭೋಜನವೇ ಆಗಿದ್ದೀತು; ನಿನ್ನನ್ನು ಇಷ್ಟು ಸಹಜವಾಗಿ ಬಿಟ್ಟಿದ್ದು ಆಶ್ಚರ್ಯವಲ್ಲವೇ?"

ಪೇಕ್ಯೂಆ ಉತ್ತರ ಕೊಟ್ಟಳು:— "ಮಹಾರಾಜರೆ, ತಮ್ಮಂತೆ ನನಗೂ ಆ ಅರಬ ಸರದಾರನು ನನ್ನನ್ನು ಬಿಡುವನೋ ಇಲ್ಲೋ ಎಂಬ ಬಗ್ಗೆ ಸಂಶಯುವೇ ಇತ್ತು. ಅವನು ನನ್ನನ್ನು ಬಿಡಬೇಕೋ ಬಿಡಬಾರದೋ ಎಂಬ ಬಗ್ಗೆ ಒಳ್ಳೇ ವಿಚಾರದೊಳಗೆ ಬಿದ್ದಿದ್ದನು ಯಾಕಂದರೆ ಬಿಡುಗಡೆಯ ಹಣವನ್ನು ತೆಗೆದುಕೊಂಡು ನನ್ನನ್ನು ಬಿಟ್ಟುಕೊಡುವ ವಚನವನ್ನು ಕೊಟ್ಟಾಗ್ಯೂ ನನ್ನ ಸುದ್ದಿಯನ್ನು ಕೇರೋ ಪಟ್ಟಣಕ್ಕೆ ತಿಳಿಸುವದಕ್ಕಾಗಿ ಒಬ್ಬ ಮನುಷ್ಯನನ್ನು ಕಳುಹಿಸಿಕೊಡಬೇಕೆಂದು ನಾನು ಅವನಿಗೆ ಬೇಡಿಕೊಂಡ ಸರತಿಗೊಮ್ಮೆ ಒಂದಿಲ್ಲೊಂದು ನೆವಹೇಳಿ ಮನುಷ್ಯನನ್ನು ಕಳಿಸುವದಕ್ಕೆ ತಡಮಾಡುತ್ತಿದ್ದನು. ನಾನು ಅವನ ಕೈಯ್ಯಲ್ಲಿ ಸಿಕ್ಕಿದ್ದೆನು. ನಾನು ಅಲ್ಲಿ ಹೋದನಂತರ ಅವನು ಅನೇಕಾವರ್ತಿ ನೆರೆಹೊರೆಯ ಪ್ರದೇಶಗಳೊಳಗೆ ಹೋಗಿ ದಾರಿಕಾರರನ್ನು ಸುಲಿದು ಹಣ ತರುವದಕ್ಕಾಗಿ ಹೋಗಿದ್ದನು. ಆ ದಾಳಿಗಳಲ್ಲಿ ಅವನಿಗೆ ಸಾಕಷ್ಟು ಹಣವು ಸಿಕ್ಕಿದ್ದರೆ ಒಂದು ವೇಳೆ ಆವನು ನನ್ನನ್ನು ಬಿಡುತ್ತಿದ್ದೇ ಇಲ್ಲ. ದಾಳಿಯಿಂದ ತಿರುಗಿ ಬಂದ ಕೂಡಲೆ ನನ್ನ ಹತ್ತರ ಬಂದು ತನಗೆ ಸಂಭವಿಸಿದ ಯಾವತ್ತು ಸಂಗತಿಗಳನ್ನು ನನಗೆ ಹೇಳುತ್ತಿದ್ದನು; ಮತ್ತು ನಾನು ಆ ಸಂಗತಿಗಳನ್ನು ಕೇಳಿ ನನಗೆ ತಿಳಿದಮಟ್ಟಿಗೆ ಏನಾದರೂ ಮಾತಾಡಿದರೆ, ಅತನು ನನ್ನ ಮಾತುಗಳನ್ನು ಚಿತ್ತಗೊಟ್ಟು ಆಲಿಸುವನು. ಆತನು ಯಾವಾಗಲೂ ನನ್ನ ಕೂಡ ಒಳ್ಳೇ ಮಮತೆಯಿಂದ ನಡೆದುಕೊಳ್ಳುತ್ತಿದ್ದನು; ನನ್ನ ಮರ್ಯಾದೆಯನ್ನು ಚನ್ನಾಗಿ ಕಾಯುತ್ತಿದ್ದನು; ಒಳ್ಳೇ ಹುರುಪಿನಿಂದಲೂ, ಪ್ರೀತಿಯಿಂದಲೂ ನನಗೆ ಜ್ಯೋತಿಃಶಾಸ್ತ್ರವನ್ನು ಕಲಿಸುತ್ತಿದ್ದನು. ನನ್ನ ಪತ್ರಗಳನ್ನು ನನ್ನ ಮಿತ್ರರ ಕಡೆಗೆ ಎಂದು ಕಳಿಸಿಕೊಡುವಿರಿ? ಎಂದು ಒಳ್ಳೇ ಒತ್ತಾಯದಿಂದ ಕೇಳಿದರೆ, ಮತ್ತೂ ನೀವು ನನ್ನ ಕೆಲಸವನ್ನು ಮನಮುಟ್ಟಿ ಮಾಡುವದಿಲ್ಲೆಂದು ಖಿನ್ನತೆಯನ್ನು ತೋರಿಸಿದರೆ

ಅವನು "ದೊರೆಸಾನಿಗಳೇ, ನಾನು ಒಮ್ಮೆ ತಮ್ಮನ್ನು ಬಿಟ್ಟುಕೊಡುವೆನೆಂಬ ವಚನ ಕೊಟ್ಟಿದ್ದೇನೆ. ನಾನು ಕೊಟ್ಟ ಮಾತನ್ನು ತಿರುಗಿಸುವ ಮನುಷ್ಯನಲ್ಲ. ತಾವು ಸ್ವಸ್ಥಚಿತ್ತದಿಂದ ಇರ್ರಿ; ಸುಸು ದಿವಸಗಳಲ್ಲಿಯೇ ತಾವು ತಮ್ಮ ಮಿತ್ರರ ಕಡೆಗೆ ಕಳಿಸಲ್ಪಡುವಿರಿ." ಎಂದು ಸವಿಮಾತುಗಳನ್ನಾಡಿ ನನ್ನ ಸಮಾಧಾನ ಮಾಡುತ್ತಿದ್ದನು. ಆದರೆ ನಾನು ಪುನಃ ಪುನಃ ಅವನಿಗೆ ನನ್ನ ಬಿಡುಗಡೆಯ ಬಗ್ಗೆ ಕೇಳಹತ್ತಿದರೆ, ಯೋಗ್ಯ ಉತ್ತರವನ್ನು ಕೊಡಲಾರದೆ ತನಗೆ ಅಗತ್ಯದ ಕೆಲಸವುಂಟೆಂದು ಸುಳ್ಳೇ ಹೇಳಿ ತನ್ನ ಪರಿವಾರದೊಡನೆ ಹೊರಟುಹೋಗುತ್ತಿದ್ದನು. ಹೋಗುವಾಗ ಮನೆಯಲ್ಲಿರುವ ಯಾವತ್ತು ಜನರ ಮೇಲೆ ನನ್ನನ್ನು ಅಧಿಕಾರಿಯಾಗಿ ನೇಮಿಸಿ, ನಾನು ಹೇಳಿದಂತೆ ಎಲ್ಲರೂ ಕೇಳಬೇಕೆಂದು ಅವರಿಗೆ ತಿಳಿಸಿ ಹೋಗುತ್ತಿದ್ದನು. ಈ ಮೇರೆಗೆ ನನ್ನನ್ನು ಬಿಟ್ಟುಕೊಡುವದಕ್ಕೆ ಅವನು ತಿಳಿದೂ ತಿಳಿದೂ ದಿವಸಗತ ಮಾಡಹತ್ತಿದ್ದನ್ನು ನೋಡಿ ನನಗೆ ಬಹಳ ದುಃಖವಾಗುತ್ತಿತ್ತು. ನೀವು ನನ್ನ ದಾರಿಯನ್ನು ಅನೇಕ ದಿವಸಗಳವರೆಗೆ ನೋಡಿ, ನನ್ನ ಗೊತ್ತು ಹತ್ತದ್ದರಿಂದ ನನ್ನನ್ನು ಮರೆತು, ಕೇರೋ ಪಟ್ಟಣವನ್ನು ಬಿಟ್ಟು ಎಲ್ಲಿಯಾದರೂ ಹೋಗಬಹುದು, ಮತ್ತು ದುರ್ದೈವದಿಂದ ಹಾಗಾದರೆ ನಾನು ಆಜನ್ಮ ನೀಲನದಿಯ ಧಡದಲ್ಲಿರುವ ಒಂದು ಅಪ್ರಸಿದ್ಧವಾದ ನಡುಗಡ್ಡೆಯಲ್ಲಿಯೇ ಇರಬೇಕಾಗುವದೆಂಬ ವಿಚಾರಗಳು ಮನಸ್ಸಿನೊಳಗೆ ಬಂದು ನನಗೆ ಅಪರಿಮಿತ ಖೇದವಾಗುತ್ತಿತ್ತು."

"ಕಟ್ಟಕಡೆಗೆ ಆ ಅರಬನು ನನ್ನನ್ನು ಬಿಡುವದಿಲ್ಲೆಂದು ತಿಳಿದು, ನಿರಾಶೆಯಿಂದ ಖಿನ್ನಳೂ, ಉದಾಸೀನಳೂ ಆಗಿ ಅವನ ಕೂಡ ಮಾತಾಡುವದನ್ನೂ ಮುಂಚಿನಂತೆ ಅವನಿಗೆ ಮರ್ಯಾದೆ ಮಾಡುವದನ್ನೂ ಬಿಟ್ಟುಕೊಟ್ಟೆನು. ಹೀಗಾಗಲು ಅವನು ನನ್ನ ಕೂಡ ಸಂಭಾಷಣ ಮಾಡುವದನ್ನು ಬಿಟ್ಟು, ನನ್ನ ದಾಸಿಗಳೊಡನೆ ಮಾತಾಡಹತ್ತಿದನು. ಅದನ್ನು ನೋಡಿ ನನಗೆ ವಿಷಾದವಾಯಿತು. ಯಾಕಂದರೆ ನನ್ನಮೇಲೆ ಅವನ ಮನಸ್ಸು ಕೂತರೆ ಎಷ್ಟು ಕೇಡಾಗುವ ಸಂಭವವು ಇತ್ತೋ ಅಷ್ಟೇ ಕೇಡು ಅವನು ನನ್ನ ದಾಸಿಗಳ ಮೇಲೆ ಮನಸ್ಸಿಟ್ಟರೆ ಆಗುವದೆಂಬ ಅಂಜಿಕೆಯು ನನಗೆ ಹುಟ್ಟಿತು. ಈ ತರದ ವಿಚಾರಗಳು ನನ್ನ ಮನಸ್ಸಿನೊಳಗೆ ಬಂದದರಿಂದ ನನಗೆ ಬಹಳ ದುಃಖವಾಯಿತು; ಆದರೆ ಈ ದುಃಖವು ಬಹಳ ದಿವಸ ಇರಲಿಲ್ಲ. ಯಾಕಂದರೆ ನಾನು ಮುಂಚಿನಂತೆ ನನ್ನ ಗಂಟಲು ಬಿಚ್ಚಿ ಅವನ ಸಂಗಡ ಪುನಃ ಮಾತಾಡಹತ್ತಲು ಅವನ ಲಕ್ಷವು ನನ್ನ ಕಡೆ ಎಳೆಯಲ್ಪಟ್ಟಿತು. ಮತ್ತು ನನ್ನ ತೊತ್ತುಗಳ ಕಡೆಗೆ ಅವನು ದುರ್ಲಕ್ಷ ಮಾಡಹತ್ತಿದನು.

ಆಮೇಲೆ ನಾನು ಖಿನ್ನಳೂ ಉದಾಸೀನತೆಯುಳ್ಳವಳೂ ಆದದ್ದು ನನ್ನ ಹೆಡ ತನವೇ ಎಂದು ತಿಳಿದುಕೊಂಡೆನು. ”

“ ನಾನು ಆ ಅರಬನ ಕೈಯಲ್ಲಿ ಸಿಕ್ಕು, ಅನೇಕ ದಿವಸಗಳಾಗಿ ಹೋಗಿದ್ದರೂ ಅವನು ನನ್ನ ಬಿಡುಗಡೆಯ ಹಣವನ್ನು ತರುವದಕ್ಕೆ ನಿಮ್ಮ ಕಡೆಗೆ ಮನುಷ್ಯನನ್ನು ಕಳಿಸಿ ಕೊಡಲೊಲ್ಲನು. ಮತ್ತು ನೀವು ಕಳುಹಿಸಿದ ಮನುಷ್ಯನು ನನ್ನ ಹುಡುಕುತ್ತ ಹುಡುಕುತ್ತ ನಾನಿಷ್ಟಲ್ಲಿಗೆ ಬರದಿದ್ದರೆ ಒಂದುವೇಳೆ ಆತನು ನನ್ನನ್ನು ಎಂದೂ ಬಿಡುತ್ತಿದ್ದಿಲ್ಲ. ತನ್ನ ಸೇವಕರನ್ನು ನಿಮ್ಮೆಡೆಗೆ ಕಳುಹಿ ಹಣವನ್ನು ತರಿಸಿಕೊಳ್ಳುವ ಇಚ್ಛೆಯು ಅವನಿಗೆ ಇಲ್ಲದಿದ್ದಾಗ್ಯೂ ಮನೆಗೆ ನಡೆದುಬಂದ ಹಣವನ್ನು ಬಿಟ್ಟು ನನ್ನನ್ನು ಇಟ್ಟುಕೊಳ್ಳುವ ಮನಸ್ಸು ಅವನಿಗಾಗಲಿಲ್ಲ. ಅದರಿಂದ ಒಳ್ಳೇ ಆತುರದೊಡನೆ ಆ ಹಣವನ್ನು ತೆಗೆದುಕೊಂಡು ನನ್ನ ಬಿಡುಗಡೆ ಮಾಡುವ ಸಿದ್ಧತೆಯನ್ನು ಮಾಡಿದನು. ನಾನು ಅಲ್ಲಿಂದ ಹೊರಡುವಾಗ ಆ ಅರಬ ಸ್ತ್ರೀಯರ ಬಳಿಗೆ ಹೋಗಿ, ಅವರಿಗೆ ನಮಸ್ಕರಿಸಿ, ಹೋಗಿಬರುತ್ತೇನೆಂದು ಹೇಳಿದೆನು. ನಾನು ಇಷ್ಟು ದಿವಸ ಅವರ ಕೂಡ ಇದ್ದಾಗ್ಯೂ ನಾನು ಅಲ್ಲಿಂದ ಹೋಗುವದನ್ನು ನೋಡಿ ಅವರಿಗೇನು ಖೇದವಾಗಲಿಲ್ಲ. ”

ಈ ಮೇರೆಗೆ ಪೇಕ್ಯೂಆ ಹೇಳಿದ ವಿವರವನ್ನು ಕೇಳಿ ನಿಯೂಕಾ ರಾಜಕನ್ನಿಕೆಯು ಆಕೆಯನ್ನು ಒಳ್ಳೇ ಪ್ರೇಮದಿಂದ ಬಿಗಿದಪ್ಪಿಕೊಂಡಳು. ರಾಜಪುತ್ರನು ಆಕೆಯ ಬಿಡುಗಡೆಯ ಹಣವಲ್ಲದೆ ೧೦೦ ಔಂಸು ಬಂಗಾರವನ್ನು ಹೆಚ್ಚಿಗೆ ಅವಳಿಗೆ ಕೊಟ್ಟನು. ಆಕೆಯು ಆ ಅರಬನಿಗೆ ೫೦ ಔಂಸು ಬಂಗಾರ ಹೆಚ್ಚು ಕೊಡುತ್ತೇನೆಂದು ಹೇಳಿದ್ದರೂ ರಾಜಪುತ್ರನು ತನಗೆ ಕೊಟ್ಟ ೧೦೦ ಔಂಸುಗಳನ್ನು ಅಂದರೆ ಮತ್ತೆ ೫೦ ಔಂಸು ಬಂಗಾರವನ್ನು ಅವನಿಗೆ ಕೊಟ್ಟು ಕಳುಹಿದಳು.

## ನಾಲ್ವತ್ತನೆಯ ಭಾಗವು.

### ಒಬ್ಬ ವಿದ್ವಾಂಸನ ಚರಿತ್ರವು

ಅವರೆಲ್ಲರೂ ಕೂಡಿ ಕೇರೋ ಪಟ್ಟಣಕ್ಕೆ ತಿರುಗಿ ಬಂದರು. ಮತ್ತೆ ಎಲ್ಲರೂ ಒತ್ತಟ್ಟಿಗೆ ಕೂಡಿದ್ದರಿಂದ ಅವರೆಲ್ಲರಿಗೂ ಅಪರಿಮಿತ ಆನಂದವಾಯಿತು. ಎಷ್ಟೋ ದಿವಸಗಳ ವರೆಗೆ ಅವರು ಒಬ್ಬರನ್ನೊಬ್ಬರು ಅಗಲಿ ಎಲ್ಲಿಯೂ ಹೊರಗೆ ಹೋಗಲಿಲ್ಲ. ಒಂದು ದಿವಸ ರಾಜಪುತ್ರನು ಇಮ್ಲಾಕನಿಗೆ ಅಂದನು. “ ಕವಿಗಳೇ, ಇನ್ನು

ಮೇಲೆ ವಿದ್ಯಾಪರಾಯಣನಾಗಿ ಏಕಾಂತವಾಸವನ್ನು ಸ್ವೀಕರಿಸಿ, ನನ್ನ ಉಳಿದ ಆಯುಷ್ಯವನ್ನು ವಿದ್ಯಾಸಂಪಾದನೆಯಲ್ಲಿಯೇ ಕಳೆಯುಬೇಕೆಂದು ನಿಶ್ಚಯಿಸಿದ್ದೇನೆ."

ಇವ [illegible]ಕನು:—" ಈ ಬಗ್ಗೆ ಪೂರ್ಣ ನಿಶ್ಚಯ ಮಾಡುವದಕ್ಕಿಂತ ಮುಂಚೆ ಈತರದ ಏಕಾಂತವಾಸದಿಂದ ಯಾವ ತರದ ಸುಖದುಃಖಗಳಾಗುವ ಸಂಭವವಿರುತ್ತದೆ? ವಿದ್ಯಾಸಂಪಾದನಕ್ಕಾಗಿ ಏಕಾಂತವಾಸವನ್ನು ಸ್ವೀಕರಿಸಿದಂಥ ಮನುಷ್ಯರ ಅನುಭವವು ಯಾವ ತರದ್ದಿರುತ್ತದೆ? ಎಂಬದರ ಬಗ್ಗೆ ವಿಚಾರಮಾಡಿದರೆ ನೆಟ್ಟಗಾಗುವದು. ನಾನು ಕುಸು ದಿವಸಗಳ ಪೂರ್ವದಲ್ಲಿ ಜ್ಯೋತಿಃಶಾಸ್ತ್ರವನ್ನು ಪೂರ್ಣ ಅರಿತಂಥ ಒಬ್ಬ ಪ್ರಖ್ಯಾತ ವಿದ್ವಾಂಸನ ವೇಧಶಾಲೆಗೆ ಹೋಗಿದ್ದೆನು. ಅವನು ತನ್ನ ಆಯುಷ್ಯದ ೬೦ ವರ್ಷಗಳನ್ನು ಬಾಂದಳದಲ್ಲಿರುವ ನಕ್ಷತ್ರ ಗೋಲಕಗಳ ಗತಿಯು ಯನ್ನು ಪರೀಕ್ಷಿಸುವದರಲ್ಲಿಯೂ ಅವುಗಳ ಸಂಬಂಧದ ನಾನಾವಿಧವಾದ ಗಣಿತಗಳನ್ನು ಮಾಡುವದರಲ್ಲಿಯೂ ಕಳೆದಿದ್ದಾನೆ. ತಿಂಗಳಿಗೊಮ್ಮೆ ಅವನು ತನ್ನ ಕೆಲವು ವಿದ್ವಾಂಸ [illegible] ನ್ನು ಕರೆದು ಅವರಿಗೆ ಆ ತಿಂಗಳಲ್ಲಿ ತಾನು ಮಾಡಿದ ಶೋಧಗಳನ್ನು ಹೇಳುತ್ತಾನೆ. ಅವುಗಳನ್ನು ಕೇಳಿ ಅವರಿಗೆ ಬಹು ಆನಂದವಾಗುತ್ತದೆ. ನಾನು ಒಳ್ಳೇ [illegible], ಆ ವಿದ್ವಾಂಸನ ದರ್ಶನಕ್ಕೆ ಹೋಗಲಿಕ್ಕೆ ಯೋಗ್ಯನೂ ಎಂದು ತಿಳಿದು ಒಬ್ಬ ಗೃಹಸ್ಥನು ನನ್ನನ್ನು ಒಂದು ದಿವಸ ಆ ಜ್ಯೋತಿಷಿಯ ಬಳಿಗೆ ಕರೆದುಕೊಂಡು ಹೋಗಿ, [illegible] ಗುರ್ತು ಮಾಡಿಕೊಟ್ಟನು. ಯಾವ ಮನುಷ್ಯನು ಒಂದೇ ವಿಷ[illegible] ವಿಚಾರದಲ್ಲಿ ಮಗ್ನನಾಗಿ ಆ ವಿಷಯವನ್ನುಳಿದು ಅನ್ಯ ವಿಷಯಗಳ ಬಗ್ಗೆ ಲೇಶವಾದರೂ ವಿಚಾರಮಾಡುವದಿಲ್ಲವೋ, ಅಂಥ ಮನುಷ್ಯನ ಬಳಿಗೆ [illegible] ನಂಥ, ಅನೇಕ ದೇಶಕೋಶಗಳನ್ನು ನೋಡಿದಂಥ, ಚನ್ನಾಗಿ [illegible] ಮನುಷ್ಯನು ಹೋದರೆ ಆ ಮೊದಲನೆಯ ಮನುಷ್ಯನಿಗೆ ಬಹು ಸಂತೋಷವಾಗುತ್ತದೆ. ನಾನು ಆ ವಿದ್ವಾಂಸನ ದರ್ಶನಕ್ಕೆ ಹೋದಾಗ ನನ್ನ [illegible] ಕೇಳಿ [illegible]ಗೂ ಮೇಲೆ ಹೇಳಿದಂತೆ ಸಂತೋಷವಾಯಿತು. ನಾನು ನನ್ನ ಪ್ರ[illegible] ಅವನಿಗೆ ಹೇಳಹತ್ತಿದರೆ, ಅದನ್ನು ಕೇಳಿ ಅವನು ನಗು [illegible] ಆಕಾಶದೊಳಗಿನ ನಕ್ಷತ್ರಗಳ ಮರವು ಅವನಿ [illegible] ಸಂಗತಿಗಳನ್ನು ಕೇಳಬೇಕೆಂಬ ಇಚ್ಛೆಯು ಅ[illegible]

" [illegible] ಸಂಧಿಯನ್ನು ಸಾಧಿಸಿ ಪುನಃ ಅವನ ಬಳಿಗೆ ಹೋ[illegible]. [illegible] ದೈವ[illegible] ನನ್ನನ್ನು ನೋಡಿ ಅವನಿಗೆ ಸಂತೋಷವಾಯಿತು. ನಾನು [illegible]ಗುವದಕ್ಕಿಂತ ಮೊದಲು ಅವನು ಯಾರನ್ನೂ ಸಿಕ್ಕ

ವೇಳೆಯಲ್ಲಿ ಒಳಗೆ ಬರಗೊಡುತ್ತಿದ್ದಿಲ್ಲ. ಮತ್ತು ಯಾರಾದರೂ ಬಂದರೆ ಅವರ ಕೂಡ ಮನಸುಗೊಟ್ಟು ಮಾತಾಡುತ್ತಿದ್ದಿಲ್ಲ. ಆದರೆ ನಾನು ಹೋಗುವದಕ್ಕಾರಂಭವಾದಿ ದಂದಿನಿಂದ ಅವನು ನನ್ನಕೂಡ ಬಾಯಿಬಿಚ್ಚಿ ಮಾತಾಡಹತ್ತಿದನು. ಮತ್ತು ನನಗೆ ಬೇಕಾದಾಗ ಬರಲಿಕ್ಕೆ ಅಪ್ಪಣೆ ಕೊಟ್ಟನು. ನಾನು ಹೋದಹೋದಾಗ ಅವನು ಗಹನವಿಚಾರದಲ್ಲಿ ಕೂತಿರುತ್ತಿದ್ದನು. ಆದರೂ ನಾನು ಹೋದಕೂಡಲೆ ವಿಚಾರ ಮಾಡುವದನ್ನು ಬಿಟ್ಟು ನನ್ನೊಡನೆ ಮಾತಾಡಹತ್ತಿದನು. ಅದರಿಂದ ಅವನಿಗೆ ಆನಂದವಾಗುತ್ತಿತ್ತು. ನಮ್ಮ ಸಂಭಾಷಣದಿಂದ ನಮ್ಮಿಬ್ಬರಿಗೂ ಆನಂದವಾಗ ಹತ್ತಿತು. ಯಾಕಂದರೆ ನನಗೆ ಗೊತ್ತಿದ್ದನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯು ಅವನಿಗಿತ್ತು. ಮತ್ತು ಅವನಿಗೆ ಗೊತ್ತಿದ್ದದ್ದನ್ನು ತಿಳಿದುಕೊಳ್ಳುವ ಅಪೇಕ್ಷೆಯು ನನಗಿತ್ತು. ಹೀಗಾಗಿ ಬರಬರುತ್ತ ಅವನು ನನ್ನ ಮೇಲೆ ಚಲೋ ವಿಶ್ವಾಸ ಇಡ ಹತ್ತಿದನು. ನನಗೂ ಅವನ ಗಹನ ವಿಚಾರಶಕ್ತಿಯನ್ನು ನೋಡಿ ಆಹ್ಲಾದವಾಗ ಹತ್ತಿತು. ಅವನ ಗ್ರಹಣಶಕ್ತಿಯು ವಿಶಾಲವಾದದ್ದೂ, ಸ್ಮರಣಶಕ್ತಿಯು ಅಪ್ರತಿ ಮವಾದದ್ದೂ ಇದ್ದು ಅವನಿಗೆ ಅನೇಕ ವಿಷಯುಗಳ ಜ್ಞಾನವಿರುತ್ತದೆ. ಅವನ ಭಾಷಣವು ವಿಷಯಕ್ಕನುಸರಿಸಿ ಸ್ವಲ್ಪವಾಗಿರುತ್ತದೆ ”

“ ಅವನು ದೊಡ್ಡ ವಿದ್ವಾಂಸನಿರುವನಿಷ್ಟೇ ಅಲ್ಲ; ಪ್ರಾಮಾಣಿಕನೂ ನಿಷ್ಕ ಪಟಿಯೂ, ಪರೋಪಕಾರ ಬುದ್ಧಿಯುಳ್ಳವನೂ ಆಗಿರುತ್ತಾನೆ. ತನ್ನ ಉಪದೇಶ ದಿಂದ ಇಲ್ಲವೆ ತನ್ನ ಹಣವನ್ನು ವೆಚ್ಚಮಾಡುವದರಿಂದ ಬಡಬಗ್ಗರಿಗೆ ಹಿತವೂ, ಕಲ್ಯಾಣವೂ ಆಗುವಂತಿದ್ದರೆ ಅವನು ತನ್ನ ಗಹನವಾದ, ಅತಿಶಯ ಪ್ರೀತಿಕರ ವಾದ ಶಾಸ್ತ್ರೀಯ ಶೋಧವನ್ನು ಸಹ ತುಸುಹೊತ್ತು ಬಿಟ್ಟು, ಉಪದೇಶವನ್ನೂ ಪರೋಪಕಾರವನ್ನೂ ಮಾಡುತ್ತಾನೆ. ತನ್ನ ಉಪದೇಶಾಮೃತಕ್ಕೆ ಇಲ್ಲವೆ ಪರೋ ಪಕಾರಕ್ಕೆ ಆರ್ತರಾಗಿ ಬಂದಂಥವರನ್ನು ಅವನು ಏಕಾಂತಸ್ಥಾನದಲ್ಲಿ ಕುಳಿತಿದ್ದರೂ ಒಳ್ಳೇ ಕೆಲಸದಲ್ಲಿ ತೊಡಗಿದ್ದರೂ ಕೂಡ, ತನ್ನ ಹತ್ತರ ಬರಗೊಡುತ್ತಾನೆ. ಅವನು ಅನ್ನುತ್ತಾನೆ— “ ಸೋಮಾರಿಗಳಾದಂಥ ಉಂಡಾಡಿಗರನ್ನು ನಾನು ಒಳಗೆ ಬರ ಗೊಡದಿದ್ದರೂ ಉಪದೇಶ ಮಾಡಿ ಜನರನ್ನು ಒಳ್ಳೇ ಮಾರ್ಗಕ್ಕೆ ಹಚ್ಚುವ ಪುಣ್ಯ ದಾಯಕ ಸಂಧಿಯನ್ನು ನಾನು ಎಂದೂ ವ್ಯರ್ಥವಾಗಿ ಕಳೆಯುವದಿಲ್ಲ. ಅಂಥ ಜನರು ನನ್ನ ಕಡೆಗೆ ಬಂದರೆ ನಾನು ನನ್ನ ಕೆಲಸವನ್ನು ಬಿಟ್ಟು ಅವರಿಗೆ ಸದುಪ ದೇಶವನ್ನು ಮಾಡುತ್ತೇನೆ. ಮನುಷ್ಯನು ಬೇಕಾದರೆ ಬಾಂದಳದಲ್ಲಿರುವ ನಕ್ಷತ್ರಗಳ ಗತಿಯಬಗ್ಗೆ ವಿಚಾರಮಾಡಬೇಕು; ಅಂದರೆ ಅದನ್ನು ಅವಶ್ಯವಾಗಿ ಮಾಡಬೇ

ಕೆಂದು ಯಾರೂ ಒತ್ತಾಯ ಮಾಡುವದಿಲ್ಲ. ಆದರೆ ಮನುಷ್ಯನು ಸದಾಚಾರಿಯೂ ಸದ್ಗುಣಿಯೂ ಆಗಿರುವದು ಅವನ ಅವಶ್ಯವಾದ ಕರ್ತವ್ಯವು. ಅವನು ಈ ತನ್ನ ಕರ್ತವ್ಯದ ಬಗ್ಗೆ ಜಾಗ್ರತನಾಗಿರದಿದ್ದರೆ ದೋಷಕ್ಕೆ ಪಾತ್ರನಾಗುವನು."

ರಾಜಕನ್ನಿಕೆ—"ಹಾಗಾದರೆ ಇವನೇ ನಿಜವಾದ ಸುಖವುಳ್ಳ ಮನುಷ್ಯನು"

ಇವ್ಲಾಕ— " ನಾನು ಪದೆಪದೇ ಅವನ ದರ್ಶನಕ್ಕೆ ಹೋಗಹತ್ತಿದೆನು. ಅವನ ಸಂಭಾಷಣವನ್ನು ಕೇಳಿ ನನಗೆ ಪರಮಾನಂದವಾಗಹತ್ತಿತು. ಅಂದರೆ ಅವನ ಸಂಭಾಷಣವನ್ನು ಎಷ್ಟು ಕೇಳಿದರೂ ಮನದಣಿಯುತ್ತಿದ್ದಿಲ್ಲ. ಅವನು ಒಳ್ಳೇ ದೊಡ್ಡ ಮನುಷ್ಯನಾಗಿದ್ದರೂ ಗರ್ವರಹಿತನೂ, ವಿನಯಾನ್ವಿತನಾಗಿದ್ದರೂ ಒಣ ಡಂಭಾಚಾರದ ಉಪಚಾರಗಳನ್ನು ತಿರಸ್ಕರಿಸುವಂಥವನೂ, ಯಾವತ್ತು ಗಹನವಾದ ಶಾಸ್ತ್ರೀಯಜ್ಞಾನವನ್ನು ಒಲ್ಲವನಾಗಿದ್ದರೂ ಆ ಜ್ಞಾನವನ್ನು ಪರರಿಗೆ ತೋರಿಸಿ ತನ್ನ ಶ್ರೇಷ್ಠತೆಯನ್ನು ಮೆರಿಸಬೇಕೆಂಬ ಮಹತ್ವಾಕಾಂಕ್ಷೆ ಇಲ್ಲದವನೂ ಆಗಿರುವನು. ರಾಜಕನ್ನಿಕೆಯರೇ, ನಿಮ್ಮಂತೆ ಮೊದಲು ನಾನು ಅವನಂಥ ಆನಂದವುಳ್ಳ ಪುರುಷನು ತ್ರಿಭುವನದೊಳಗೆ ಇರಲಿಕ್ಕಿಲ್ಲೆಂದು ತಿಳಿದುಕೊಂಡಿದ್ದೆನು. ಮತ್ತು ಎಷ್ಟೋಸಾರೆ ನಾನು ಅವನ ಮುಂದೆ " ತಮ್ಮಂಥ ದೈವವಂತರು ಯಾರೂ ಇಲ್ಲ; ದೇವರ ದಯದಿಂದ ತಮಗೆ ಯಾವ ಮಾತಿನ ಕೊರತೆಯೂ ಇಲ್ಲ; ನಿಜವಾದ ಸುಖವನ್ನು ತಾವು ಅನುಭೋಗಿಸುತ್ತಿರುವಿರಿ " ಎಂದು ಅನ್ನುತ್ತಿದ್ದೆನು. ಅದನ್ನವನು ಕೇಳಿ ಕೇಳದವನ ಹಾಗೆ ಸುಮ್ಮನಿರುತ್ತಿದ್ದನು; ಮತ್ತು ನನ್ನ ಮಾತಿಗೆ ಉತ್ತರಕೊಡುವ ಪ್ರಸಂಗವೇ ಬಂದೊದಗಿದರೆ ಮಾತಿನ ಓಘವನ್ನು ಮತ್ತೊಂದು ವಿಷಯದ ಕಡೆಗೆ ಒಯ್ದು ಹಚ್ಚುತ್ತಿದ್ದನು. "

" ಈ ಮೇರೆಗೆ ಅವನನ್ನು ಸಂತುಷ್ಟಪಡಿಸುವದಕ್ಕೆ ನಾನು, ನನ್ನನ್ನು ಸಂತೋಷಪಡಿಸುವದಕ್ಕೆ ಅವನು, ಯಾವಾಗಲೂ ತತ್ಪರರಾಗಿರುತ್ತಿದ್ದೆವು. ಆದರೂ ಸೂಕ್ಷ್ಮರೀತಿಯಿಂದ ನೋಡಲು, ಮನಸ್ತಾಪವನ್ನುಂಟುಮಾಡುವಂಥಾದ್ದೇನಾದರೊಂದು ದುಃಖವು ಅವನಿಗೆ ಇದ್ದಂತೆ ಅವನ ಮುಖಲಕ್ಷಣದ ಮೇಲಿಂದ ಕಂಡುಬರುತ್ತಿತ್ತು. ಒಮ್ಮೊಮ್ಮೆ ಅವನು ಒಳ್ಳೇ ಉತ್ಕಂಠತೆಯಿಂದ ಸೂರ್ಯನ ಕಡೆಗೆ ನೋಡುತ್ತ ಕೂಡ್ರುವನು; ಹಲವು ವೇಳೆ ಮಾತಾಡುವಾಗ ನಡುವೇ ಮಾತಾಡುವದನ್ನು ಬಿಟ್ಟು ಸುಮ್ಮನಾಗುವನು; ನಾವಿಬ್ಬರೇ ಇದ್ದಾಗ ಅವನು ನನ್ನನ್ನು ಚನ್ನಾಗಿ ದಿಟ್ಟಿಸಿ ನೋಡುವನು; ಮತ್ತು ತನ್ನ ಮನಸ್ಸಿನೊಳಗಿನ ಮಾತನ್ನು ನನ್ನ ಮುಂದೆ ಹೇಳಬೇಕೆಂಬ ಇಚ್ಛೆಯು ಅವನಿಗಾದಂತೆ ತೋರುವದು. ಆದರೆ ಅದನ್ನು ನನ್ನ ಮುಂದೆ ಹೇಳಬೇಕೋ ಹೇಳಬಾರದೋ ಎಂಬ ಬಗ್ಗೆ ಇನ್ನೂ ಪೂರ್ಣ ನಿಶ್ಚಯವಾ

ದಂತೆ ಕಂಡುಬರುತ್ತಿದ್ದಿಲ್ಲ. ಒಮ್ಮೊಮ್ಮೆ ನಾನು ನನ್ನ ಮನೆಯಲ್ಲಿರುವಾಗ ಏನೋ ಕೆಲಸವಿದ್ದವನಂತೆ ಈಗಿಂದೀಗ ಬರಬೇಕೆಂದು ನನ್ನನ್ನು ಕರೆಯಕಳುಹಿಸುವನು; ಮತ್ತು ನಾನು ಒಳ್ಳೇ ಲಗಬಗೆಯಿಂದ ಅವನೆಡೆಗೆ ಹೋದರೆ ಆತನು ಏನೂ ವಿಶೇಷ ಸಂಗತಿಯನ್ನು ಹೇಳುತ್ತಿದ್ದಿಲ್ಲ. ಒಮ್ಮೊಮ್ಮೆ ನಾನು ಹೊರಟುನಿಂತರೆ ನನ್ನನ್ನು ಮತ್ತೆ ಕೂಡ್ರಿಸಿಕೊಳ್ಳುವನು; ಆದರೆ ಏನೂ ಮಾತಾಡದೆ ಕೆಲವು ಹೊತ್ತಿನ ಮೇಲೆ ನನಗೆ ಹೋಗಹೇಳುವನು. ”

## ನಾಲ್ವತ್ತೆಂಟನೆಯ ಭಾಗವು.

### ಜ್ಯೋತಿಷಿಯ ದುಃಖದ ಗುಪ್ತ ಕಾರಣವು.

ಇವಶ್ಲಾಕನು—“ಹಿಂದಿನ ಭಾಗದಲ್ಲಿ ವಿವರಿಸಿದಂತೆ ನನ್ನ ಮತ್ತು ಅವನ ಸಖ್ಯವು ಚೆನ್ನಾಗಿ ಕೂಡಿ ಕೆಲವು ದಿವಸಗಳಾದ ನಂತರ, ಆ ವಿದ್ವಾಂಸನಾದ ಜ್ಯೋತಿಷಿಯ ದುಃಖದ ಗುಪ್ತಕಾರಣವು ಒಮ್ಮಿಂದೊಮ್ಮೆ ಬೈಲಿಗೆ ಬಿತ್ತು. ಒಂದುದಿವಸ ನಾನೂ ಅವನೂ ಅವನ ಮನೆಯ ಮೇಲುಪ್ಪರಿಗೆಯ ಮೇಲೆ ಕುಳಿತುಕೊಂಡು, ಬೃಹಸ್ಪತಿಯ ಒಂದು ಉಪಗ್ರಹಕ್ಕೆ ಹತ್ತಿದ ಗ್ರಹಣದ ಮೋಕ್ಷಕಾಲವನ್ನು ನಿರೀಕ್ಷಿಸುವದಕ್ಕಾಗಿ ಆಕಾಶದ ಕಡೆಗೆ ನೋಡುತ್ತಿದ್ದೆವು. ಅಷ್ಟರಲ್ಲಿ ಆಕಾಶವೆಲ್ಲ ಮೋಡವು ಮುಸುಕಿ ನಮ್ಮ ಇಚ್ಛೆಯು ಸಿದ್ಧಿಗೆ ಹೋಗಲಿಲ್ಲ. ಕತ್ತಲೆಯಲ್ಲಿ ಕೆಲವು ಹೊತ್ತು ಏನೂ ಮಾತಾಡದೆ ಕೂತಬಳಿಕ ಆ ಜ್ಯೋತಿಷಿಯು ನನಗೆ ಅಂದನು—“ಎಲೈ ಇವಶ್ಲಾಕನೇ, ನೀನು ನನ್ನ ಮಿತ್ರನಾದಂದಿನಿಂದ ನಾನು ಕೃತಾರ್ಥನಾಗಿರುತ್ತೇನೆ. ಜ್ಞಾನಹೀನನ ಪ್ರಾಮಾಣಿಕತನವು ನಿಷ್ಪ್ರಯೋಜನವಾದದ್ದು; ಆದರೆ ಜ್ಞಾನಿಯಾಗಿದ್ದು ಅವನಲ್ಲಿ ಪ್ರಾಮಾಣಿಕತನವು ಇರದಿದ್ದರೆ ಮಾತ್ರ ಭಯಂಕರವಾದ ಸಂಗತಿಯೇ ಸರಿ. ನಂಬಿಗೆಯುಳ್ಳ ಮನುಷ್ಯನಲ್ಲಿ ಅವಶ್ಯವಾಗಿರತಕ್ಕ ಪರೋಪಕಾರ ಬುದ್ಧಿ, ಎಲ್ಲ ಮಾತಿನ ಅನುಭವ, ಧೈರ್ಯ, ಸಹನಶೀಲತೆ ಮುಂತಾದ ಎಲ್ಲ ಗುಣಗಳು ನಿನ್ನಲ್ಲುಂಟು. ನಾನು ಬಹಳ ದಿವಸದಿಂದ ಒಂದು ಮಹತ್ವದ ಕೆಲಸವನ್ನು ಮಾಡುತ್ತ ಬಂದಿದ್ದೇನೆ. ಆ ಕೆಲಸದ ಭಾರವನ್ನು ವಹಿಸಲಿಕ್ಕೆ ಯೋಗ್ಯನಾದ ಮನುಷ್ಯನು ನನಗೆ ಇದುವರೆಗೆ ಸಿಕ್ಕಿದ್ದಿಲ್ಲ; ಈಗ ನೀನು ಸಿಕ್ಕಿರುವಿ. ನಾನು ಇನ್ನು ಬಹಳ ದಿವಸ ಬದುಕತಕ್ಕವನಲ್ಲ. ಶರೀರಧರ್ಮಕ್ಕನುಸರಿಸಿ ನನಗೆ ಬಂದ ಮುಪ್ಪು, ಅಶಕ್ತತೆ ಮತ್ತು ಶರೀರವೇದನೆ ಮುಂತಾದವುಗಳ ಮೂಲಕವಾಗಿ ನಾನು ವಹಿಸಿದ ಕೆಲಸವನ್ನು ಬಿಡುವ ಪ್ರಸಂಗ ಬಂದರೆ ಆ ಕೆಲಸದ ಭಾರವನ್ನು ನಿನ್ನ ತಲೆಯ ಮೇಲೆ ಹೊರಿಸಿಬಿಟ್ಟರೆ ನನಗೆ ಬಹಳ ಸಂತೋಷವಾದೀತು.”

ಅವನ ಮಾತನ್ನು ಕೇಳಿ ಅವನು ನನಗೆ ಬಹುಮಾನ ಮಾಡಿದನೆಂದು ತಿಳಿದು ಕೊಂಡು ನಾನು ಅವನಿಗೆ ಅಂದೆನು, “ ಮಹಾರಾಯರೇ, ಯಾವ ಮಾತಿನಿಂದ ತಮಗೆ ಸುಖವಾದೀತೋ ಅದೇ ನನ್ನ ಸುಖ; ತಾವು ಹೇಳಿದಂತೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ”

ಆಗ ಅವನು ಅಂದನು-“ಎಲೈ ಇಮ್ಲಾಕನೇ, ನನ್ನ ಮಾತು ಕೇಳು. ನಾನು ಹೇಳುವ ಮಾತು ನಿನಗೆ ನಿಜವಾಗಿದ್ದಂತೆ ತೋರಲಿಕ್ಕಿಲ್ಲ; ಒಂದುವೇಳೆ ನೀನು ಆ ಮಾತನ್ನು ನಂಬಲಿಕ್ಕಿಲ್ಲ. ಆದರೆ ಅದು ಕೇವಲ ಸತ್ಯವದೆ. ಈಗ ಐದು ವರ್ಷಗಳಿಂದ ನಾನು ಹವೆಯ ನಿಯಮನವನ್ನು ಮಾಡುವ, ಹಾಗು ಋತುಗಳನ್ನು ಆಯಾ ದೇಶಗಳಿಗೆ ಸರಿಯಾಗಿ ಹಂಚಿಕೊಡುವ ಕೆಲಸವನ್ನು ಮಾಡುತ್ತ ಬಂದಿದ್ದೇನೆ. ಸೂರ್ಯನು ನನಗೆ ಅಂಕಿತನಾಗಿ ನಾನು ಹೇಳಿದಂತೆ ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ಹೋಗುತ್ತಾನೆ; ಮೋಡಗಳು ನನ್ನ ಆಜ್ಞೆಯ ಮೇರೆಗೆ ಮಳೆಗರೆಯುತ್ತವೆ; ಶೀತವಾಯು ನನ್ನ ಮಾತು ಕೇಳಿ ಉಸ್ಕಿರುತ್ತದೆ. ನಾನು ಬೃಹಲ್ಲುಬ್ಧಕನ (dog star) ಸಿಟ್ಟನ್ನು ಕುಗ್ಗಿಸಿದ್ದೇನೆ; ಮಕರವೃತ್ತದ ಸೊಕ್ಕು ಮುರಿದಿದ್ದೇನೆ. ( ಮಕರ ರಾಶಿಯ ಶಕ್ತಿಯನ್ನು ಕಡಿಮೆ ಮಾಡಿದ್ದೇನೆ. ) ಆದರೆ ಗಾಳಿ ಮಾತ್ರ ನನ್ನ ಮಾತು ಕೇಳುವದಿಲ್ಲ; ಬಿರುಗಾಳಿಗಳಿಂದ ಸಾವಿರಾರು ಜನರು ಅಳಿದುಹೋಗಿದ್ದಾರೆ; ಅಲ್ಲಿ ನನ್ನ ಯತ್ನಸಾಗುವದಿಲ್ಲ; ಯಾಕೆಂದರೆ, ಗಾಳಿಯು ನನ್ನ ಆಜ್ಞೆಗೆ ಒಳಗಾಗಲೊಲ್ಲದು. ನಾನು ಈ ಮಹತ್ವದ ಕೆಲಸವನ್ನು ಕೇವಲ ನ್ಯಾಯಬುದ್ಧಿಯಿಂದಲೇ ಮಾಡಿದ್ದೇನೆ. ಪೃಥ್ವಿಯ ಮೇಲಿನ ಯಾವತ್ತು ರಾಷ್ಟ್ರಗಳಿಗೆ ಮಳೆಯನ್ನೂ ಬಿಸಿಲನ್ನೂ ಸರಿಯಾಗಿ ಹಂಚಿಕೊಟ್ಟಿದ್ದೇನೆ. ನಾನು ಮೋಡಗಳನ್ನು ಒಂದೇ ಕಡೆಯಲ್ಲಿ ಇರಮಾಡಿದ್ದರೆ, ಇಲ್ಲವೆ ಸೂರ್ಯನನ್ನು ವಿಷುವೃತ್ತದ ಒಂದು ಮಗ್ಗಲಿಂದ ಮತ್ತೊಂದು ಮಗ್ಗಲಿಗೆ ಹೋಗಗೊಡದಿದ್ದರೆ ಒಂದು ಗೋಲಾರ್ಧದ ಮೇಲಿನ ಜನರ ಅವಸ್ಥೆಯು ಏನಾಗುತ್ತಿತ್ತು! ಅವರ ತೊಂದರೆಗೆ ಪಾರಾವಾರವೇ ಇಲ್ಲದಂತಾಗುತ್ತಿತ್ತು. ”

## ನಾಲ್ವತ್ತೆರಡನೆಯ ಭಾಗವು.

—— (೦) ——

### ಜ್ಯೋತಿಷಿಯು ತನ್ನ ತಿಳಿವಳಿಕೆಯನ್ನು ವಿಸ್ತರಿಸಿ ಹೇಳಿದ್ದು.

“ನಾವು ಕತ್ತಲೆಯ ಕೋಣೆಯಲ್ಲಿ ಕುಳಿತಿದ್ದರೂ, ಅವನು ಹೇಳಿದ ಮಾತು ಕೇಳಿ ನನಗೆ ಆಶ್ಚರ್ಯವಾಯಿತೆಂತಲೂ, ಆ ಮಾತು ಸುಳ್ಳಿರುತ್ತದೆಂದು ನಾನು

ಭಾವಿಸಿಕೊಂಡಿರುವೆನೆಂತಲೂ, ಅವನು ನನ್ನ ಮುಖಲಕ್ಷಣದ ಮೇಲಿಂದ ತಿಳಿದು ಕೊಂಡನು. ಯಾಕಂದರೆ, ತುಸು ತಡೆದು ಅವನು ಪುನಃ ಅಂದನು— "

"ನಾವು ಹೇಳಿದ್ದು ನಿನಗೆ ನಿಜವಿರುವದೆಂದು ತೋರಲಿಲ್ಲೆಂಬದನ್ನು ನೋಡಿ ನನಗೆ ಸಿಟ್ಟು ಬರುವದಿಲ್ಲ; ಇಲ್ಲವೆ ಆಶ್ಚರ್ಯವೂ ಆಗುವದಿಲ್ಲ. ಯಾಕಂದರೆ, ಈ ತರದ ಅಧಿಕಾರವು ಮನುಷ್ಯಜಾತಿಗೆ ನನಗಿಂತಲೂ ಪೂರ್ವದಲ್ಲಿ ಯಾರಿಗೂ ಸಿಕ್ಕಿಲ್ಲ; ಅಂದಮೇಲೆ ನಿನಗೆ ಸಂಶಯವು ಬರುವದು ಸ್ವಾಭಾವಿಕವೇ ಸರಿ. ಇನ್ನು ಈ ಅಧಿಕಾರವು ನನಗೆ ಸಿಕ್ಕದ್ದು ನನ್ನ ಮೇಲೆ ದೇವರ ಪ್ರಸಾದವೆನ್ನಬೇಕೋ ಇಲ್ಲವೆ ಈಶ್ವರಕ್ಷೋಭವೆನ್ನಬೇಕೋ ತಿಳಿಯಲೊಲ್ಲದು. ಈ ಅಧಿಕಾರವು ನನಗೆ ಬಂದಂದಿನಿಂದ ನನಗೆ ಮುಂಚಿನಷ್ಟು ಸೌಖ್ಯವಿಲ್ಲ. ನಾನು ಈ ಕೆಲಸವನ್ನು ಒಳ್ಳೇ ಜಾಗ್ರತೆಯಿಂದಲೂ, ಮನಃಪೂರ್ವಕವಾಗಿಯೂ, ಸದಸದ್ವಿವೇಕ ಬುದ್ಧಿಗ ನುಸರಿಸಿ ಮಾಡುತ್ತೇನೆಂಬ ಸಮಾಧಾನವೇ ಹೊರತು ಬೇರೆ ಇದರಿಂದ ಏನೂ ಲಾಭವಿಲ್ಲ; ಸೌಖ್ಯವಂತೂ ಹೇಳಹೆಸರಿಲ್ಲದಂತಾಗಿದೆ. "

ನಾನು ಅಂದೆನು—" ತಾವು ಈ ಕೆಲಸವನ್ನು ಕೈಕೊಂಡು ಎಷ್ಟು ವರ್ಷಗ ಳಾದವು? "

ಅವನು ಅಂದನು—" ಹತ್ತು ವರ್ಷಗಳ ಪೂರ್ವದಲ್ಲಿ ಅಂತರಿಕ್ಷದೊಳಗಾ ಗುವ ಹೆಚ್ಚುಕಡಿಮೆಗಳನ್ನು ನೋಡುತ್ತ ಕುಳಿತಾಗ, ಋತುಗಳ ನಿಯಮನವನ್ನು ಮಾಡುವಷ್ಟು ಶಕ್ತಿಯು ನನ್ನಲ್ಲುಂಟಾದರೆ ಪೃಥ್ವಿಯ ಮೇಲಿನ ಯಾವತ್ತು ಜನ ರಿಗೆ ಬೇಕಾದ ವಸ್ತುವನ್ನು ಬೇಕಾದಾಗ ಬೇಕಾದಷ್ಟು ಪೂರೈಸಿ ಕೊಡಬಹುದೆಂಬ ವಿಚಾರವು ನನ್ನ ಮನಸ್ಸಿನೊಳಗೆ ಬಂತು. ಈ ವಿಚಾರವು ನನ್ನ ಮನಸ್ಸಿನಲ್ಲಿ ಪೂರ್ಣ ನಟ್ಟಿದ್ದರಿಂದ, ರಾತ್ರಿ ಹಗಲು ನಾನು ಕಲ್ಪನಾತರಂಗಗಳಲ್ಲಿ ಮುಳುಗಿ, ಈ ಹೊತ್ತು ಈ ದೇಶದ ಮೇಲೆ ಮಳೆಗರಿಸಿದೆನು, ನಾಳೆ ಮತ್ತೊಂದು ದೇಶದ ಮೇಲೆ, ಮೂರನೇ ದಿವಸ ಮೂರನೇ ದೇಶದ ಮೇಲೆ ಮಳೆಗರಿಸಿದೆನು; ಮತ್ತು ಮಳೆಗೆ ಸರಿಯಾಗಿ ಬಿಸಲನ್ನು ಕೆಡವಿಸಿದೆನೆಂದು ತಿಳಿದುಕೊಳ್ಳಹತ್ತಿದೆನು. ಆದರೆ ಈ ವರೆಗೆ ಜಗತ್ತಿನ ಹಿತಮಾಡಬೇಕೆಂಬ ಕೇವಲ ಇಚ್ಛೆಯೇ ನನಗೆ ಇತ್ತಲ್ಲದೆ, ಋತುಗಳನ್ನು ನಿಯಮನ ಮಾಡುವ ಅಧಿಕಾರವು ನನಗೆ ಸಿಕ್ಕೀತೆಂಬ ವಿಚಾರವು ನನ್ನ ಕನಸುಮನಸಿನಲ್ಲಿ ಸಹ ಇದ್ದಿಲ್ಲ "

" ಒಂದಾನೊಂದು ದಿವಸ ಬೆಳೆಯಿಂದ ತುಂಬಿದ ಹೊಲಗಳನ್ನು ನೋಡುತ್ತ ಕುಳಿತಿದ್ದೆನು. ಆ ಬೆಳೆಗಳು ಸಾಕಷ್ಟು ಮಳೆ ಇಲ್ಲದ್ದರಿಂದಲೂ, ಉಷ್ಣತೆಯಿಂದಲೂ ಬಾಡಿದ್ದವು. ಆಗ ದಕ್ಷಿಣ ಪರ್ವತದ ಮೇಲೆ ಮಳೆಗರಿಸಿ ನೀಲನದಿಯು ತುಂಬಿ

ಹೊರಚೆಲ್ಲುವ ಹಾಗೆ ಮಾಡುವ ಸಾಮರ್ಥ್ಯವು ನನಗೆ ಇದ್ದರೆ ಬಹಳ ನೆಟ್ಟಗಾಗು ತ್ತಿತ್ತೆಂಬ ವಿಚಾರವುತ್ತ ನನ್ನ ಮನಸ್ಸಿನಲ್ಲಿ ಬಂತು." ಈ ಕಲ್ಪನೆಯು ನನ್ನ ಮನ ಸ್ಸಿನಲ್ಲಿ ಬಂದ ಕೂಡಲೆ ನಾನು ಮಳೆಗರೆಯಬೇಕೆಂದು ಮೋಡಗಳಿಗೆ ಆಜ್ಞಾಪಿಸಿ ದೆನು. ಕೂಡಲೆ ನೀಲನದಿಯು ತುಂಬಿ ಹೊರಚಲ್ಲಿತು. 'ನಾನು ಅಪ್ಪಣೆ ಮಾಡಿದ ಕೂಡಲೆ ನೀಲನದಿಯು ತುಂಬಿ ಹರಿಯಿತೆಂದ ಮೇಲೆ ಮೋಡಗಳು ನನ್ನಪ್ಪಣೆ ಯನ್ನು ಪಾಲಿಸಿದವೆಂದು ನಾನು ತಿಳಿದುಕೊಂಡೆನು."

ನಾನು ಅಂದೆನು—"ನೀವು ನಿಮ್ಮ ಮನಸ್ಸಿನಲ್ಲಿ ಮಳೆಗರೆಯಬೇಕೆಂದು ಮೋಡಗಳಿಗೆ ಅಪ್ಪಣೆಯನ್ನಿತ್ತ ಕೂಡಲೆ ಮಳೆಯಾಗಿ ನೀಲನದಿಗೆ ನೀರು ಬಂದ ವೆಂದು ತಿಳುಕೊಂಡಿರಿ; ಆದರೆ ಬೇರೊಂದು ಕಾರಣದಿಂದ ಹೀಗ್ಯಾಕೆ ಆಗಿರಬಾ ರದು? ನೀಲನದಿಯು ಪ್ರತಿವರ್ಷ ನಿಯಮಿತ ವೇಳೆಗೆ ತುಂಬಿ ಹೊರಚಲ್ಲುತ್ತದೆಂದು ಹೇಳಲಾಗದು. ಕಾಕತಾಲೀಯ ನ್ಯಾಯದಿಂದ ನೀವು ಅಪ್ಪಣೆ ಮಾಡುವ ಕಾಲ ವಲ್ಲಿಯೇ ನೀಲ ನದಿಗೆ ನೀರು ಬರಹತ್ತಿರಬಹುದು."

ಅವನು ಅಂದನು—"ಈ ತರದ ಆಕ್ಷೇಪಗಳು ನನ್ನ ಮನಸ್ಸಿನಲ್ಲಿ ಬರಲಿಲ್ಲ ವೆಂದು ನೀನು ತಿಳಿಯುತ್ತೀಯೇನು? ನನಗೂ ಸಂಶಯಬಂತು. ಮೋಡಗಳು ನನ್ನ ಅಪ್ಪಣೆಯನ್ನು ಪಾಲಿಸಿದವೆಂಬ ನನ್ನ ತಿಳುವಳಿಕೆಯು ದಿಟವೋ, ಸಟಿಯೋ ಎಂಬ ಬಗ್ಗೆ ನಾನು ಪೂರ್ಣ ವಿಚಾರಮಾಡಿದ್ದೇನೆ. ಒಮ್ಮೊಮ್ಮೆ ನನಗೆ ಹುಚ್ಚು ಹಿಡಿದಿರುವದೋ ಏನೋ ಎಂಬ ಸಂಶಯವು ಸಹ ನನ್ನ ಮನಸ್ಸಿನಲ್ಲಿ ಬಂತು. ಆದರೂ ಪೂರ್ಣ ವಿಚಾರಮಾಡಿ ನೋಡಲು, ನನಗೆ ತೋರಿದ್ದೆಲ್ಲ ಸತ್ಯವೇ ಇರುತ್ತದೆಂದು ಮನಗಂಡೆನು. ಹಾಗಿರದಿದ್ದರೆ ನಿನ್ನಂಥ ಮನುಷ್ಯನ ಮುಂದೆ ಇಂಥ ಮಾತನ್ನು ಹೇಳುವ ಗೋಜಿಗೆ ನಾನು ಎಂದೂ ಹೋಗುತ್ತಿದ್ದಿಲ್ಲ. ಮತ್ತು ನಿನಗೆ ನಾನು ಈ ಗುಪ್ತಮಾತು ಹೇಳುವ ಕಾರಣವೇನಂದರೆ, ಅಶಕ್ಯವಾದದ್ದು ಯಾವದು? ಅದ್ಭುತವಾದದ್ದು ಯಾವದು? ಸತ್ಯವಾದದ್ದು ಯಾವದು? ಎಂಬವರ ಸಾರಾಸಾರ ಜ್ಞಾನವು ನಿನಗುಂಟು"

ನಾನು ಅಂದೆನು—"ಯಾವ ಮಾತು ತಮಗೆ ಸತ್ಯವಿರುವದೆಂದು ತಿಳಿದ ದೆಯೋ ಇಲ್ಲವೆ ಯಾವದು ಸತ್ಯವಿರುವದೆಂದು ತಾವು ಮನಗಂಡಿರುವಿರೋ ಆ ಮಾತು ಅವಿಶ್ವಾಸ್ಯ (ನಂಬಲಾರದ್ದು) ವಾದದ್ದೆಂದು ಯಾಕೆ ಅನ್ನುತ್ತೀರಿ?"

ಅವನು ಅಂದನು—"ಯಾಕಂದರೆ, ನಾನು ಹೇಳುವ ಮಾತು ನಿಜವಾದದ್ದಿ ರುತ್ತದೆಂದು ಬಾಹ್ಯಪ್ರಮಾಣಗಳಿಂದ ಸಿದ್ಧಮಾಡಿ ತೋರಿಸಲಾರೆನು. ತರ್ಕ ಶಾಸ್ತ್ರದ ನಿಯಮಗಳನ್ನು ನಾನು ಬಲ್ಲೆನು. ನನ್ನ ಅನುಭವಕ್ಕೆ ಬಂದು ನನಗೆ ನಿಜ

ವಾಗಿ ತೋರಿದ ಸಂಗತಿಯು ಪರರಿಗೂ ಕೂಡ ಹಾಗೇ ತೋರಲಿಕ್ಕೆ ಬೇಕೆಂದು ನನ್ನ ಆಗ್ರಹವಿಲ್ಲ ಯಾಕಂದರೆ, ನಾನು ಆ ಸಂಗತಿಯನ್ನು ಮನಗಂಡಂತೆ ಪರರು ಮನಗಂಡಿರುವದಿಲ್ಲ. ಆದದರಿಂದ ನಾನು ವಾದವಿವಾದವನ್ನು ಮಾಡಿ ಈ ಮಾತನ್ನು ಸಿದ್ಧಮಾಡುವ ಗೋಜಿಗೆ ಹೋಗುವದಿಲ್ಲ. ಈ ಅಧಿಕಾರವು ನನ್ನಲ್ಲುಂಟೆಂಬದನ್ನು ನಾನು ಚನ್ನಾಗಿ ಬಲ್ಲೆನು; ಮತ್ತು ನಾನು ಈ ಅಧಿಕಾರವನ್ನು ಇಲ್ಲಿಯವರೆಗೆ ನಡಿಸಿದ್ದೇನೆ. ಆದರೆ ಮನುಷ್ಯನು ಅಮರನಲ್ಲ; ಮುಪ್ಪಿನಿಂದ ನಾನು ತೀರ ಜೀರ್ಣನಾಗಿದ್ದೇನೆ; ಆದದರಿಂದ ಋತುಗಳ ನಿಯಮನವನ್ನು ಮಾಡುವ ನಾನು ಈ ನಶ್ವರಜಗತ್ತನ್ನು ಬಿಟ್ಟು ಯಾವಾಗ ಹೋದೇನೆಂಬ ನಿಯಮವಿಲ್ಲ. ನನ್ನ ಹಿಂದೆ ಈ ಅಧಿಕಾರವನ್ನು ಯಾರು ನಡಿಸ್ಯಾರೆಂಬ ಚಿಂತೆಯು ನನಗೆ ಬಹಳ ಇತ್ತು ನನಗೆ ಗೊತ್ತಿದ್ದ ಜನರೊಳಗೆ ಯಾರಿಗೆ ಈ ಅಧಿಕಾರವನ್ನೊಪ್ಪಿಸಬೇಕೆಂಬ ವಿಚಾರದಲ್ಲಿ ನಾನು ಇದ್ದೆನು. ಅಷ್ಟರಲ್ಲಿ ಎಲ್ಲ ಗುಣಗಳಿಂದಲೂ ಯೋಗ್ಯನಾದ ನೀನು ದೈವಯೋಗದಿಂದ ನನಗೆ ಸಿಕ್ಕಿದಿ. ನಿನ್ನ ಹೊರತು ಹೆಚ್ಚು ಯೋಗ್ಯತೆಯುಳ್ಳವರಾರೂ ಇಲ್ಲೆಂದು ನಾನು ಮನಗಂಡಿದ್ದೇನೆ.

## ನಾಲವತ್ತುಮೂರನೆಯ ಭಾಗ.

ಜ್ಯೋತಿಷಿಯು ತನ್ನ ರಹಸ್ಯವನ್ನು ಇಮ್ಲಾಕನಿಗೆ ಹೇಳಿದ್ದು.

ಜ್ಯೋತಿಷಿಯು ಅನ್ನುತ್ತಾನೆ “ಇನ್ನು ಮೇಲೆ ನಾನು ನಿನಗೆ ಹೇಳುವದನ್ನು ಚಿತ್ತಗೊಟ್ಟು ಲಾಲಿಸು. ನಾನು ಹೇಳಿದಂತೆ ನೀನು ವರ್ತಿಸಿದರೆ, ಜಗತ್ತಿನ ಕಲ್ಯಾಣ ಮಾಡಿದ ಶ್ರೇಯವು ನಿನಗೆ ಬರುವದು. ನೋಡು, ನಿಯಮಿತ (ಕುಸು) ಜನರ ಹಿತಾಹಿತ ಮಾಡುವ ಭಾರವನ್ನು ವಹಿಸಿದಂಥ ಅರಸನ ಕೆಲಸವು ಬಹು ಕಠಿಣವಿರುತ್ತದೆಂದು ನಾವು ತಿಳಿದುಕೊಳ್ಳುತ್ತೇವೆ. ಪೂರ್ಣ ವಿಚಾರ ಮಾಡಿ ನೋಡಿದರೆ ಅಷ್ಟು ಜನರ ಕಲ್ಯಾಣವು ಸಹ ಅವನಿಂದ ಆಗುವದಿಲ್ಲ. ಆದಮೇಲೆ, ಪೃಥ್ವಿ, ಅಪ್, ತೇಜ, ಮುಂತಾದ ತತ್ವಗಳ ಮೇಲೆ ಅಧಿಕಾರ ನಡಿಸುವಂಥ ಮನುಷ್ಯನ ಕೆಲಸವು ಎಷ್ಟು ಕಠಿಣವಾದದ್ದಿರುತ್ತದೆಂಬದನ್ನು ನೀನೇ ವಿಚಾರಮಾಡಿ ನೋಡು. ಆದದರಿಂದ ಈಗ ನಾನು ಹೇಳುವದನ್ನು ಮನಮುಟ್ಟಿ ಕೇಳು.”

“ನಾನು ಸೂರ್ಯ ಮತ್ತು ಪೃಥ್ವಿ ಇವುಗಳ ವಿಷಯಕ್ಕೆ ಅನೇಕಾವರ್ತಿ ಸೂಕ್ಷ್ಮ ವಿಚಾರ ಮಾಡಿದ್ದೇನೆ; ಮತ್ತು ಅವುಗಳ ವಿದ್ಯಮಾನ ಸ್ಥಿತಿಯನು

ಬದಲಿಸಬೇಕೆಂಬ ವಿಚಾರವು ಸಹ ನನ್ನ ಮನಸ್ಸಿನಲ್ಲಿ ಬಂದು ಹೋಗಿದೆ. ಒಮ್ಮೊಮ್ಮೆ ನಾನು ಪೃಥ್ವಿಯ ಲಕ್ಷವನ್ನು ಒಂದು ಮಗ್ಗಲಿಗೆ ಸರಿಸಿ ಸಹ ನೋಡಿದ್ದೇನೆ; ಒಮ್ಮೊಮ್ಮೆ ಕ್ರಾಂತಿವೃತ್ತದ ಸ್ಥಲಾಂತರವನ್ನು ಮಾಡಿದ್ದೇನೆ. ಏನು ಮಾಡಿದರೂ ಜನರಿಗೆ ಮುಂಚಿನದಕ್ಕಿಂತ ಹೆಚ್ಚಿನ ಸುಖವನ್ನುಂಟುಮಾಡಬೇಕೆಂಬ ನನ್ನ ಯಾವತ್ತು ಪ್ರಯತ್ನಗಳು ವ್ಯರ್ಥವಾಗಿ ಹೋಗಿವೆ. ನನಗೆ ಗೊತ್ತಾದ ಮಟ್ಟಿಗೆ ಸೂರ್ಯ ಮಾಲೆಯಲ್ಲಿರುವ ದೂರದೂರಿನ ಗ್ರಹಗಳ ವಿಚಾರವನ್ನು ಸಹ ಮನಸ್ಸಿನಲ್ಲಿ ತರದೆ, ಬೇಕಾದ ಹೆಚ್ಚುಕಡಿಮೆಗಳನ್ನು ಮಾಡಿದಾಗ್ಯೂ ಕೂಡ, ಒಂದು ಭಾಗಕ್ಕೆ ಹಾನಿಯಾದರೆ ಎರಡನೇ ಭಾಗಕ್ಕೆ ಲಾಭವಾಗಿದೆ ಹೊರತು, ಎಲ್ಲ ಭಾಗಗಳಿಗೂ ಸರಿಯಾಗಿ ಸುಖವು ಆಗಿಲ್ಲ. ಆದದರಿಂದ ನೀನು ವರ್ಷದ ನಿಯಮವನ್ನು ಮಾಡುವಾಗ ಮನಸ್ಸಿಗೆ ಬಂದಂತೆ ಹೆಚ್ಚುಕಡಿಮೆಗಳನ್ನು ಮಾಡುವ ಶಕ್ತಿಯು ಉಂಟೆಂದು ತಿಳಿದು, ಗರ್ವದಿಂದ ಉಬ್ಬಿ ಹಾಗೆ ಮಾಡುವ ಭರಕ್ಕೆ ಬೀಳಬೇಡ; ಋತುಗಳ ಕ್ರಮದಲ್ಲಿ ಹೆಚ್ಚುಕಡಿಮೆಗಳನ್ನು ಮಾಡಿದ್ದುಂಟಾದರೆ ಚಿರಕಾಲ ಹೆಸರು ಉಳಿಯುವದೆಂಬ ವಿಚಾರವನ್ನು ಮನಸ್ಸಿನಲ್ಲಿ ತರಬೇಡ; ಸಂಪೂರ್ಣ ಜಗತ್ತಿಗೆ ಉಂಟಾದ ದುಃಖದ ಉತ್ಪಾದಕನೆಂದು ಪ್ರಸಿದ್ಧಿಗೆ ಬರುವದು ಸುಜ್ಞ ಮನುಷ್ಯನಿಗೆ ಯೋಗ್ಯವಲ್ಲ ; ಶ್ರೇಯವಂತೂ ಅವನಿಗೆ ಬರುವದೇ ಇಲ್ಲ. ಕೈಯಲ್ಲಿ ಸಾಮರ್ಥ್ಯವುಂಟೆಂದು, ಬರೇ ನಿನ್ನ ದೇಶದ ಲಾಭವನ್ನು ಮಾಡಿಕೊಂಡು, ಉಳಿದ ದೇಶಗಳ ಅಕಲ್ಯಾಣವನ್ನು ಮಾಡಬೇಡ ; ಅದು ಸರಿಯಲ್ಲ. ನಿನ್ನ ದೇಶವನ್ನುಳಿದು ಉಳಿದ ಯಾವತ್ತು ದೇಶಗಳ ಮಳೆಯನ್ನು ಕಸಕೊಂಡು ನಿನ್ನ ದೇಶದ ಮೇಲೆ ಮಳೆಗರಿಸಬೇಡ. ನೀಲನದಿಯು ನಿಮಗೆ ಸಾಕಷ್ಟು ನೀರನ್ನು ಪೂರೈಸಿಕೊಡುವದು.”

ಈ ಅಧಿಕಾರವು ನನ್ನ ಕೈಯೊಳಗೆ ಬಂತೆಂದರೆ ನಾನು ಅದನ್ನು ಒಳ್ಳೇ ಜಾಗ್ರತೆಯಿಂದ ನ್ಯಾಯಕ್ಕನುಸರಿಸಿ ನಡಿಸುವೆನೆಂದು ವಚನಕೊಟ್ಟೆನು. ಆಗ ಆತನು ಪ್ರೀತಿಯಿಂದ ನನ್ನನ್ನು ಬಿಗಿದಪ್ಪಿಕೊಂಡು ಅಂದನು—“ಈಗ ನನ್ನ ಚಿತ್ತಕ್ಕೆ ಸ್ವಸ್ಥತೆಯುಂಟಾಯಿತು. ನನಗೆ ಬೇಕಾದಂಥ ಜಾಣನೂ, ಸದ್ಗುಣಿಯೂ ಆದ ನೀನು ನನಗೆ ಸಿಕ್ಕಿ, ನಾನು ನಿನಗೆ ಒಳ್ಳೇ ಸಂತೋಷದಿಂದ ಈ ಮಹತ್ವವಾದ ಅಧಿಕಾರವನ್ನು ಒಪ್ಪಿಸುತ್ತೇನೆ.”

ಈ ಸಂಭಾಷಣವನ್ನೆಲ್ಲ ರಾಜಪುತ್ರನು ಒಮ್ಮನಸ್ಸಿನಿಂದಲೂ, ಗಾಂಭೀರ್ಯದಿಂದಲೂ ಕೇಳಿದನು; ರಾಜಕನ್ನಿಕೆಯು ಈ ಭಾಷಣವನ್ನು ಕೇಳಿ ಮುಗುಳುನಗೆ ನಕ್ಕಳು; ಪೇಕ್ಯೂಆ ಹೊಟ್ಟೆ ನೋಯುವ ಸುದ್ದಿ ಇಲ್ಲದೆ ಹಾಸ್ಯಮಾಡಿದಳು ಇದನ್ನೆಲ್ಲ ಕಂಡು ಇಮ್ಲಾಕನು ಅಂದನು—“ದೊರೆಸಾನಿಗಳೇ, ಸಂಸಾರದಲ್ಲಿ ಇದ

ರಂಥ ( ವಿವೇಚನ ಶಕ್ತಿಯು ಲೋಪದಂಥ ) ವಿಪತ್ತು ಬೇರೆ ಯಾವದೂ ಇಲ್ಲ. ಅದರಿಂದ ಈ ವಿಪತ್ತನ್ನು ನೋಡಿ ನಗುವದು ನಿರ್ದಯತನದ್ದು, ಮೂರ್ಖತನದ್ದು ಇರುತ್ತದೆ. ಆ ಪಂಡಿತನಲ್ಲಿದ್ದ ವಿದ್ವತ್ತು, ಆತನ ಸೌಜನ್ಯ, ಸದ್ಗುಣಗಳು ತೀರ ತುಸು ಜನರಲ್ಲಿರುತ್ತವೆ ; ಅವರೆ ಆತನಿಗೆ ದುರ್ದೈವದಿಂದ ಒದಗಿದ ಸಂಕಟವು (ವಿಪತ್ತು) ಯಾವತ್ತು ಜನರಿಗೆ ಬರುವ ಸಂಭವವಿರುತ್ತದೆ. ಯಾವಾಗ ಯಾವ ತರದ ಪ್ರಸಂಗಗಳು ನಮ್ಮ ಮೇಲೆ ಬಂದಾವೆಂಬ ನಿಯಮವನ್ನು ಹೇಳಲಾಗದು. ಎಲ್ಲ ವಿಪತ್ತುಗಳೊಳಗೆ ವಿವೇಚನಶಕ್ತಿಯು ಲೋಪದಿಂದುಂಟಾಗುವ ವಿಪತ್ತು ಹೆಚ್ಚಿನದು. ''

ಇಮ್ಲಾಕನ ಮಾತು ಕೇಳಿ ರಾಜಕನ್ನಿಕೆಯು ನಗುವದನ್ನು ಬಿಟ್ಟಳು. ಪೇಕ್ವೂಆ ನಾಚಿ ತಲೆ ಕೆಳಗೆ ಮಾಡಿದಳು. ರಾಜಪುತ್ರನಿಗೆ ಆ ಜ್ಯೋತಿಷಿಯ ಸ್ಥಿತಿಯನ್ನು ಕೇಳಿ ಬಹಳ ವ್ಯಸನವಾಯಿತು. ಆತನು ಇಮ್ಲಾಕನನ್ನು—'' ಈ ತರದ ಮನೋವಿಕಾರವು ಯಾರಿಗೆ, ಯಾವಾಗ ಯಾಕೆ ಉಂಟಾಗುತ್ತದೆ ? ಈ ವಿಕಾರವು ಎಲ್ಲರಿಗೂ ಆಗುತ್ತದೊ ? ಹಾಗೆ ಮೇಲೆ ಮೇಲೆ ಆಗುತ್ತದೊ ?'' ಎಂದು ಕೇಳಿದನು.

## ನಾಲ್ವತ್ತನಾಲ್ಕನೆಯ ಭಾಗವು.

### ಮನಃಪೂತ ಕಲ್ಪನೆಗಳ ಭಯಂಕರ ಪರಿಣಾಮವು.

ಇಮ್ಲಾಕನು ಅಂದನು—'' ಪೂರ್ಣ ವಿಚಾರಮಾಡದೆ ಇರುವಂಥ ಮನುಷ್ಯನ ವಿಚಾರಶಕ್ತಿಯು ಪದೇಪದೆ ಕೆಡುತ್ತಿರುತ್ತದೆ. ( ಮನುಷ್ಯನ ಬುದ್ಧಿಗೆ ಯಾವಾಗಲು ಭ್ರಂಶವುಂಟಾಗುತ್ತದೆ) ಎಂದು ಹೇಳುವ ನನ್ನ ಮಾತನ್ನು ಜನರು ನಂಬುವದಿಲ್ಲ. ಅಂದರೆ ಮನುಷ್ಯನ ವಿಚಾರಶಕ್ತಿಯಲ್ಲಿ ಯಾವಾಗಲೂ ಹೆಚ್ಚು ಕಡಿಮೆಗಳಾಗುತ್ತಿರುತ್ತವೆಂದು ಹೇಳಿದರೆ ಆ ಮಾತು ಅವರಿಗೆ ನಿಜವಿದ್ದಂತೆ ತೋರುವದಿಲ್ಲ. ನಾವು (ಒಳ್ಳೇ) ಪೂರ್ಣ ವಿಚಾರಮಾಡಿ ನೋಡಿದರೆ—ಜಗತ್ತಿನೊಳಗಿನ ಯಾವ ಮನುಷ್ಯನ ಮನಸ್ಸೂ ತನ್ನ ಮೂಲ ಸ್ಥಿತಿಯಲ್ಲಿ (ಸ್ವಾಭಾವಿಕ ಸ್ಥಿತಿಯಲ್ಲಿ) ಇರುವದಿಲ್ಲೆಂದು ಕಂಡುಬರುವದು. ಕಲ್ಪನಾತರಂಗಗಳಲ್ಲಿ ಮುಳುಗಿ ವಿವೇಚನಶಕ್ತಿಯನ್ನು ತುಸು ಹೊತ್ತಾದರೂ ಕಳೆದುಕೊಳ್ಳದೆ ಇದ್ದಂಥ, ಮತ್ತು ಇಚ್ಛೆಗೆ ಬಂದಮೇರೆಗೆ ವಿಚಾರಮಾಡದಂಥ ಮನುಷ್ಯನೇ ಜಗತ್ತಿನೊಳಗೆ ಸಿಗುವದಿಲ್ಲ. (ಅಂದರೆ ಪ್ರತಿಯೊಬ್ಬನ ಮನಸ್ಸಿನಲ್ಲಿ — ಅವನು ಲಕ್ಷಾಧೀಶನಿರಲಿ,

ಇಲ್ಲವೆ ಭಿಕ್ಷುಕನಿರಲಿ, ಆತನ ಯೋಗ್ಯತೆ ಮೀರಿ ಇಚ್ಛೆಗಳು ಉತ್ಪನ್ನವಾಗುತ್ತವೆ.) ಜಗತ್ತಿನೊಳಗಿನ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಒಮ್ಮೆಲ್ಲೊಮ್ಮೆ ಮಿಥ್ಯಾ ಕಲ್ಪನೆಗಳು ತಪ್ಪದೆ ಬರುತ್ತವೆ; ಮತ್ತು ಎಂದೂ ಸಂಭವಿಸದಂಥ ಸಂಗತಿಯು ನಿಶ್ಚಯವಾಗಿ ಸಂಭವಿಸುವದೆಂದು ತಿಳಿಯುಕೊಂಡು, ಅವರ ಬಗ್ಗೆ ವ್ಯರ್ಥವಾಗಿ ಆತನು ಆಶೆ ಪಡುತ್ತಾನೆ; ಇಲ್ಲವೆ ಅಂಜುತ್ತಾನೆ. ಮಿಥ್ಯಾಕಲ್ಪನೆಗಳ ಅಧಿಕಾರವು ವಿವೇಚನಶಕ್ತಿಯು ಮೇಲೆ ಕೂತಿತೆಂದರೆ ನಾವು ಅದಕ್ಕೆ ಹುಚ್ಚು ಎಂದೆನ್ನುತ್ತೇವೆ; ಆದರೆ ಕಲ್ಪನೆಯು ಅಬಾಧಿತವಾದ ಅಧಿಕಾರವು ಎಲ್ಲಿಯು ವರೆಗೆ ವಿಚಾರಶಕ್ತಿಯು ಮೇಲಿರುವದಿಲ್ಲವೋ ಅಲ್ಲಿಯು ವರೆಗೆ ನಮಗೆ ಹಿಡಿದ ಹುಚ್ಚು (ಭ್ರಾಂತಿ) ಜನರಿಗೆ ಕಂಡುಬರುವದಿಲ್ಲ. ಆದರೆ ಕಲ್ಪನೆಯ ಅಧಿಕಾರವು ಅನಿವಾರ್ಯವಾಯಿತೆಂದರೆ ಅದು ಮಾತಾಡೋಣ, ನಡೆಯೋಣ ಮುಂತಾದ ವ್ಯಾಪಾರಗಳಲ್ಲಿ ವ್ಯಕ್ತವಾಗುತ್ತದೆ. ಆಗ ಜನರು ನಮಗೆ ಹುಚ್ಚರು (ಭ್ರಾಂತರು) ಎಂದೆನ್ನುತ್ತಾರೆ."

"ಯಾವಾಗಲೂ ಏಕಾಂತವಾಸದಲ್ಲಿ ಕುಳಿತು, ವ್ಯರ್ಥವಾದ ವಿಚಾರಗಳನ್ನು ಮಾಡುವಂಥ ಮನುಷ್ಯನು ಮನೋರಾಜ್ಯಗಳನ್ನು ರಚಿಸುವದರಲ್ಲಿಯೂ, ಕಲ್ಪನಾಸೃಷ್ಟಿಯೊಳಗೆ ನಿಮಗ್ನನಾಗುವದರಲ್ಲಿಯೂ ಅತ್ಯಾನಂದಪಡುತ್ತಾನೆ. ಮನುಷ್ಯನು ಒಬ್ಬನೆ ಕುಳಿತಾಗ ಒಮ್ಮೊಮ್ಮೆ ಅವನಿಗೆ ಏನೂ ಕೆಲಸವಿರುವದಿಲ್ಲ; ಮತ್ತು ಸಂಸಾರ ಸಂಬಂಧದ ವಾಡಿಕೆಯಾದ ವಿಚಾರಗಳನ್ನು ಮಾಡಿಮಾಡಿ ಮನಸ್ಸು ಬೇಸರಗೊಂಡಿರುತ್ತದೆ. ಆಗ ಮನೋರಾಜ್ಯದ ಪ್ರಸ್ತವು ಬೆಳೆಯುತ್ತದೆ. ಇಂದ್ರಿಯಗೋಚರವಾದ ಪದಾರ್ಥಗಳಿಂದ ಸುಖಪಡದ ಮನುಷ್ಯನು ಕೇವಲ ವ್ಯರ್ಥವಾದ ಮತ್ತು ಅಸಂಭಾವ್ಯವಾದ ವಿಚಾರಗಳನ್ನು ಮಾಡುವದರಲ್ಲಿಯೇ ಸಂತೋಷಪಟ್ಟು, ತನ್ನಲ್ಲಿಲ್ಲದ ಸ್ಥಿತಿಯೂ, ಸಾಮರ್ಥ್ಯವೂ ತನ್ನಲ್ಲುಂಟೆಂದು ಭಾವಿಸಿಕೊಳ್ಳುತ್ತಾನೆ. ಯಾಕಂದರೆ, ಮನುಷ್ಯನ ಮನಸ್ಸು ಚಂಚಲವಿರುವದರಿಂದ ಇದ್ದ ಸ್ಥಿತಿಯಲ್ಲಿ ಸುಖದಿಂದಿರುವವನು ಯಾವನು? ಅಂದರೆ ಪ್ರತಿಯೊಬ್ಬ ಮನುಷ್ಯನು ತನ್ನ ಸ್ಥಿತಿಯನ್ನು ಬಿಡು ಮಿಕ್ಕ ಪ್ರತಿಯೊಂದು ಸ್ಥಿತಿಯಲ್ಲಿ ಶಾಶ್ವತವಾದ ಸುಖವುಂಟೆಂದು ಕಲ್ಪಿಸುತ್ತಾನೆ. ಈ ತರದ ಕಲ್ಪನೆಗಳಲ್ಲಿ ಅವನು ನಿಮಗ್ನನಾದನೆಂದರೆ ಅವನ ಸಾರಾಸಾರ ವಿಚಾರವು ಅಳಿದುಹೋಗುತ್ತದೆ; ಮತ್ತು ತಾನು ಇಚ್ಛಿಸುವಂಥ, ಅತಿಶಯ ಪ್ರೀತಿಕರವಾದ ಸ್ಥಿತಿಯು ತನಗೆ ನಿಶ್ಚಯವಾಗಿ ಪ್ರಾಪ್ತವಾಗುವದೆಂದು ತಿಳಿದು, ಆ ಅಲಭ್ಯ ಸುಖದ ಆಶೆಯನ್ನು ಮಾಡುತ್ತಾನೆ; ಮತ್ತು ವ್ಯರ್ಥವಾದ ಅಭಿಮಾನಕ್ಕೆ ಬೀಳುತ್ತಾನೆ. ಭಾವಿಯಾದ ಆನಂದದ ಸುಖಮಯತರಂಗಗಳು ಅವನ ಮನೋಜಲಧಿಯ ಮೇಲೆ ಒಂದರಮೇಲೊಂದು ಅಪ್ಪಳಿಸಹತ್ತುತ್ತವೆ.

ಸೃಷ್ಟಿಯ ನಿಯಮಗಳೂ ಅಪಾರವಾದ ಸಂಪತ್ತಿಯೂ ಕೂಡ ಯಾವ ಸುಖಗಳನ್ನು ಪ್ರಾಪ್ತಮಾಡಿಕೊಡಲಾರವೋ ಅಂಥ ಮನಃಕಲ್ಪಿತವಾದ ಸುಖಗಳಲ್ಲಿಯೇ ಅವನ ಮನಸ್ಸು ರಂಜನವಾಗಿ ಹೋಗುತ್ತದೆ."

"ಕೆಲವು ಕಾಲದ ಮೇಲೆ ಒಂದು ತರದ ನಿಯಮಿತ ವಿಚಾರತರಂಗಗಳು (ವಿಚಾರಮಾಲೆ) ಮನಸ್ಸಿನೊಳಗೆ ದೃಢಗೊಳ್ಳುತ್ತವೆ. ಆಮೇಲೆ ಯಾವತ್ತು ತರದ ಮಾನಸಿಕ (ಜ್ಞಾನವಿಷಯಕ) ಸೌಖ್ಯಗಳು ತುಚ್ಛವಾಗಿ ತೋರುತ್ತವೆ. ಮನಸ್ಸಿಗೆ ಬೇಸರಬಂದರೆ, ಇಲ್ಲವೆ ವಿಚಾರಮಾಲಿಕೆಗೆ ಏನು ಸಾಧನವಿಲ್ಲದಂತಾದರೆ ಪ್ರೀತಿಕರವಾಗಿ ತೋರಿ ಕಡೆಯಲ್ಲಿ ಮಧುರವಾಗಿ ಕಾಣುವ ಸತ್ಯವನ್ನು ಬಿಟ್ಟು, ಮೊದಲು ಸವಿಯಾಗಿ, ತರುವಾಯ ಕಹಿಯಾಗಿ ತೋರುವ ಅಸತ್ಯದ ಕಡೆಗೆ ಎಳಸುತ್ತದೆ. ಬರಬರುತ್ತ ಆ ವಿಚಾರತರಂಗಗಳು ತಮ್ಮ ಅಬಾಧಿತವಾದ ಅಧಿಕಾರವನ್ನು ದೃಢಗೊಳಿಸುತ್ತ ದೃಢಗೊಳಿಸುತ್ತ ಕಡೆಯಲ್ಲಿ ಮನಸ್ಸನ್ನು ಪೂರ್ಣವಾಗಿ ಆಕ್ರಮಿಸುತ್ತವೆ. ಇಷ್ಟಾಯಿತೆಂದರೆ ಭಾಸವಾಗಿ ತೋರುವ ಅಸತ್ಯವು ನಿಜವಿರುತ್ತದೆಂದು ಮನಸ್ಸಿನ ತಿಳುವಳಿಕೆಯಾಗುತ್ತದೆ; ಅಂದರೆ ಸತ್ಯವು ಅಸತ್ಯದಂತೆ, ಅಸತ್ಯವು ಸತ್ಯದಂತೆ ತೋರಹತ್ತುತ್ತವೆ. ಅನಂತರ ಸ್ವಪ್ನಮಯವಾದ ಆನಂದದೊಳಗೆ ಇಲ್ಲವೆ ದುಃಖದೊಳಗೆ ಇಡೀ ಆಯುಷ್ಯದ ದಿವಸಗಳು ಕಳೆದುಹೋಗುತ್ತವೆ."

"ರಾಜಪುತ್ರೀ, ಏಕಾಂತಸ್ಥಾನದಲ್ಲಿ ಕುಳಿತು ಬರೀ ವಿಚಾರಮಾಡುವದರಿಂದ ಉಂಟಾಗುವ ಅನರ್ಥಗಳು ಈ ತರದವು (ಮೇಲೆ ವಿವರಿಸಿದಂಥವು) ಇರುತ್ತವೆ. ನಾವು ಹಿಂದಕ್ಕೆ ಆ ಜೋಗಿಯ ಬಳಿಯಲ್ಲಿ ಹೋದಾಗ್ಗೆ ಅವನು ಏಕಾಂತವಾಸದಿಂದ ಸದ್ಗುಣವೃದ್ಧಿಯಾಗುವದಿಲ್ಲೆಂದು ಹೇಳಿದ್ದನು. ಈಗ ಈ ಜ್ಯೋತಿಷಿಯ ಚರಿತ್ರದ ಮೇಲಿಂದ ನೋಡಿದರೆ ಏಕಾಂತವಾಸದಿಂದ ಜ್ಞಾನವೃದ್ಧಿಯೂ ಆಗುವದಿಲ್ಲೆಂದು ಸಿದ್ಧವಾಗುತ್ತದೆ."

ಪೆಕ್ಯೂಲಿಆ ಅಂದಳು:— "ಇಷ್ಟು ದಿವಸಗಳ ವರೆಗೆ ನಾನು ಅಬಿಸೀನಿಯಾ ದೇಶದ ರಾಜ್ಞಿಯಾಗಿರುವೆನೆಂದು ಕಲ್ಪಿಸುತ್ತಿದ್ದೆನು; ಇನ್ನುಮೇಲೆ ಹಾಗೆ ಎಂದೂ ತಿಳಿದುಕೊಳ್ಳುವದಿಲ್ಲ. ‘ನಾನೊಬ್ಬಳೇ ಇದ್ದಾಗ ನಾನು ರಾಜ್ಞಿ ಇರುವೆನೆಂದು ಕಲ್ಪಿಸಿ, ಅರಮನೆಯೊಳಗೆ ಮಾಡತಕ್ಕ ಸಮಾರಂಭ ಮುಂತಾದವುಗಳನ್ನು ವ್ಯವಸ್ಥೆಗೊಳಿಸುವದರಲ್ಲಿಯೂ, ರಾಜಕಾರ್ಯದ ನಿಯಮಗಳನ್ನು ಸುಧಾರಿಸುವದರಲ್ಲಿಯೂ ಬಲಾಢ್ಯರ ಗರ್ವಹರಣವನ್ನು ಮಾಡುವದರಲ್ಲಿಯೂ, ಬಲಹೀನರ (ಬಡವರ) ಬಿನ್ನಹಗಳನ್ನು ಮಾನ್ಯಮಾಡುವದರಲ್ಲಿಯೂ, ಸುಖದಾಯಕ ಸ್ಥಳಗಳಲ್ಲಿ ಸುಂದ

ರವಾದ ಅರಮನೆಗಳನ್ನು ಕಟ್ಟಿಸುವದರಲ್ಲಿಯೂ, ಪರ್ವತ ಶಿಖರಗಳ್ಮೇಲಿನ ಆನಂದಮಯವಾದ ಉಪವನಗಳೊಳಗೆ ಉತ್ಕೃಷ್ಟವಾದ ಗಿಡಗಳನ್ನು ಹಚ್ಚಿಸುವ ದರಲ್ಲಿಯೂ ಮಗ್ನಳಾಗಿ ಹೋಗುತ್ತಿದ್ದೆನು. ಆ ವಿಚಾರತರಂಗಗಳಲ್ಲಿ ಮಗ್ನಳಾದೆ ನೆಂದರೆ ನೀವಾಯೂ ರಾಜಪುತ್ರಿಯವರು ನನ್ನೆದುರಿಗೆ ಬಂದು ನಿಂತರೂ ಅವರಿಗೆ ಸತ್ಕಾರ ನಮಸ್ಕಾರ ಮುಂತಾದ ಉಪಚಾರಗಳನ್ನು ಮಾಡುವಷ್ಟು ದೇಹಭಾನವು ಸಹ ನನಗೆ ಉಳಿಯುತ್ತಿದ್ದಿಲ್ಲ."

ರಾಜಪುತ್ರಿಯು ಅಂದಳು:— "ಇನ್ನುಮುಂದೆ ನಾನು ಕುರುಬಗಿತ್ತಿಯೂ ಗಿರುವೆನೆಂದು ಎಂದೂ ಕಲ್ಪಿಸಲಿಕ್ಕಿಲ್ಲ. ಕುರುಬರ ಚಿತ್ತಸ್ವಾಸ್ಥ್ಯವನ್ನೂ ಅವರಲ್ಲಿ ರುವ ಬೇರೆ ಅನೇಕ ಸದ್ಗುಣಗಳನ್ನೂ ನೋಡಿ, ಎಲ್ಲರಿಗಿಂತಲೂ ಅವರ ಆಯುಃ ಕ್ರಮವು ನನ್ನ ಮನಸ್ಸಿಗೆ ಬಂತು. ಆದದರಿಂದ ನಾನು ಒಬ್ಬಳೇ ಇದ್ದಾಗ ನಾನು ಕುರುಬಗಿತ್ತಿಯೆಂದು ಭಾವಿಸಿಕೊಂಡ ಕೂಡಲೆ, ನನ್ನ ಮಂದಿರವು ಸಹ ಅಡವಿಯಂತೆ ಭಾಸವಾಗುವದು; ಅಡವಿಯಲ್ಲಿ ಗಾಳಿ ಬಿಡಲು ಒಂದು ತರದ ಸಪ್ಪಳವಾಗುತ್ತ ದಷ್ಟೇ; ಆ ತರದ ಸಪ್ಪಳವು ನನಗೆ ಅರಮನೆಯಲ್ಲಿ ಸಹ ಕೇಳಿಸುವದು; ಕುರಿ ಗಳು ಒದರಿದ ಸಪ್ಪಳವು ಕಿವಿಗೆ ಬೀಳುವದು; ಒಮ್ಮೊಮ್ಮೆ ನಾನು ದಟ್ಟವಾದ ಗಿಡಗಳ ಗುಂಪಿನೊಳಗೆ ಸಿಕ್ಕು ಒದ್ದಾಡುವ ಕುರಿಮರಿಗಳನ್ನು ಮುಕ್ತಮಾಡುವ ದರಲ್ಲಿಯೂ, ಒಮ್ಮೊಮ್ಮೆ ಕುರಿಗಳನ್ನೂ, ಕುರಿಮರಿಗಳನ್ನೂ ಮುರಿದು ತಿನ್ನುವ ಉದ್ದೇಶದಿಂದ ಬಂದ ತೋಳವನ್ನು ನನ್ನ ದೊಣ್ಣೆಯಿಂದ ಇರಿಯುವದರಲ್ಲಿಯೂ ಮಗ್ನಳಾಗುವೆನೆಂದು ಕಲ್ಪಿಸುವೆನು; ಹಳ್ಳಿವಾಡದ ಜನರು ಹೊದ್ದುಕೊಳ್ಳುವಂಥ ಒಂದು ಉಡಿಗೆಯು ನನ್ನಲ್ಲುಂಟು. ನಾನು ಕುರುಬಗಿತ್ತಿ ಎಂಬ ಕಲ್ಪನೆಯನ್ನು ದೃಢಗೊಳಿಸುವದಕ್ಕಾಗಿ ಒಮ್ಮೊಮ್ಮೆ ಆ ಉಡಿಗೆಯನ್ನು ಧರಿಸುವೆನು; ಕುರುಬ ರಂತೆ ಕೊಳಲು ಊದುವೆನು; ಆ ಕೊಳಲಿನ ಇಂಪಾದ ಸ್ವರಕ್ಕೆ ಮರುಳಾಗಿ ಕುರಿಮರಿಗಳು ನನ್ನ ಬೆನ್ನುಹತ್ತಿರುತ್ತವೆಂತಲೂ ಸಹ ನನಗೆ ಭಾಸವಾಗುವದು.

ರಾಜಪುತ್ರನು—"ಯಾವ ಮಿಥ್ಯಾಕಲ್ಪನೆಯಿಂದ ನನಗೆ ಪರಮಾನಂದವಾಗು ತ್ತಿರುವದೋ ಆ ಕಲ್ಪನೆಯು ನಿಮ್ಮಿಬ್ಬರ ಕಲ್ಪನೆಗಳಿಗಿಂತ ಬಲು ವಿಲಕ್ಷಣವಾದದ್ದೂ ಭಯಂಕರವಾದದ್ದೂ ಇರುತ್ತದೆ. ಯಾವತ್ತು ಅನ್ಯಾಯಗಳನ್ನು ನಿರ್ಮೂಲ ಮಾಡುವಂಥ, ಎಲ್ಲ ದುರ್ಗುಣಗಳನ್ನೂ, ದುರ್ವ್ಯಸನಗಳನ್ನೂ, ಹೋಗಲಾಡಿಸು ವಂಥ, ಸಕಲ ಪ್ರಜೆಗಳನ್ನು ಸದಾಸರ್ವಕಾಲ ಸುಖಸಮಾಧಾನಗಳಲ್ಲಿ ನಿಮಗ್ನ ಮಾಡಿ ಬಿಡುವಂಥ, ಒಂದು ನ್ಯೂನರಹಿತವಾದ ಸಾರ್ವಭೌಮ ರಾಜ್ಯವನ್ನು ಸ್ಥಾಪಿ ಸಬೇಕೆಂಬ ಕಲ್ಪನೆಯು ಯಾವಾಗಲೂ ನನ್ನ ಮನಸ್ಸಿನಲ್ಲಿ ಬರುವದು. ಈ

ವಿಚಾರವನ್ನು (ಕಲ್ಪನೆಯನ್ನು) ಪೂರ್ಣತೆಗೆ ಒಯ್ಯುವದಕ್ಕಾಗಿ ನಾನು ನನ್ನ ಮನಸ್ಸಿನಲ್ಲಿ ಅಸಂಖ್ಯ ಯುಕ್ತಿಯನ್ನು ಯೋಚಿಸಿರುವೆನು; ನಾನಾವಿಧದ ಸಾಧಾರಣೆಗಳನ್ನೂ, ಹಲವು ತರದ ಕಟ್ಟಳೆಗಳನ್ನೂ ಮಾಡಿರುವೆನು; ಈ ಕಲ್ಪನೆಯಿಂದ ನನಗೆ ಒಮ್ಮೊಮ್ಮೆ ಅತ್ಯಾನಂದವಾಗುವದು; ಒಮ್ಮೊಮ್ಮೆ ಜೀವಕ್ಕೆ ಬಹು ಕಷ್ಟವಾಗುವದು. ಈ ಕಲ್ಪನಾತರಂಗಗಳಲ್ಲಿ ನಾನು ಮಗ್ನನಾಗಿದ್ದಾಗ ನನ್ನ ತಂದೆ, ಸಹೋದರರು ಮಡಿದರೆಂಬ ದುರ್ವಾರ್ತೆಯನ್ನು ಕೇಳಿ, ನನಗೆ ಸ್ವಲ್ಪ ಸಹ ಖೇದವಾಗಲಿಲ್ಲ; ಆ ಮಾತು ಈಗ ನೆನಪಾದರೆ ನನಗೆ ವ್ಯಸನವಾಗುತ್ತದೆ." (ಅಂದರೆ ವಿಚಾರಗಳಲ್ಲಿ ಮಗ್ನನಾಗಿದ್ದಾಗ ಮರಣದ ವಾರ್ತೆಯನ್ನು ಕೇಳಿದ್ದಾಗ್ಯೂ ಮನಸ್ಸಿಗೆ ವ್ಯಸನವಾಗಲಿಲ್ಲೆಂಬ ಭಾವ)

ಇಮ್ಲಾಕನು—"ಮನೋರಾಜ್ಯದ ಪರಿಣಾಮಗಳು ಈ ತರದವು ಇರುತ್ತವೆ. ಮೊದಲು ಮೊದಲು ಈ ವಿಚಾರಗಳು ಅಸ್ಥಿರವಾಗಿದ್ದಂತೆ ತೋರುತ್ತವೆ. ಆದರೆ ಪದೇಪದೆ ಅವೇ ವಿಚಾರಗಳು ಮನಸ್ಸಿನಲ್ಲಿ ಬರಹತ್ತಿದವೆಂದರೆ ಅವು ಮನಸ್ಸಿನ ಮೇಲೆ ದೃಢಗೊಳ್ಳುತ್ತವೆ; ಕೆಲವು ಕಾಲದ ತರುವಾಯ ಆ ಅಸತ್ಯ ವಿಚಾರಗಳೆಲ್ಲ ಸತ್ಯದಂತೆ ಭಾಸವಾಗುತ್ತವೆ.

## ನಾಲ್ವತ್ತೆಯ್ದನೆಯ ಭಾಗವು

ಒಬ್ಬ ವೃದ್ಧ ಮನುಷ್ಯನ ಕೂಡ ಆದ ಅವರ ಸಂಭಾಷಣವು.

ಮೇಲೆ ವಿವರಿಸಿದಂತೆ ಸಂಭಾಷಣವು ನಡೆದಿರಲು ಹೊತ್ತು ಮುಳುಗಿ ರಾತ್ರಿಯಾಯಿತು. ಆದದರಿಂದ ಅವರೆಲ್ಲರೂ ಮನೆಗೆ ಹೋಗಬೇಕೆಂದು ಹೊರಟರು. ಸ್ವಲ್ಪ ಮುಂದೆ ಬರುವದರೊಳಗಾಗಿ ಚಂದ್ರೋದಯವಾಗಿ, ಚಂದ್ರನ ಕಿರಣಗಳ ಪ್ರಕಾಶವು ನೀಲನದಿಯ ನೀರಿನ ಮೇಲೆ ಬಿದ್ದಿರಲು, ಆ ನೀರಿಗೆ ಒಂದು ತರದ ವಿಲಕ್ಷಣ ಶೋಭೆಯುಂಟಾಗಿತ್ತು. ಆ ಶೋಭೆಯನ್ನು ನೋಡಿ ಆನಂದಪಡುತ್ತ ಆ ನದಿಯಗುಂಟ ಅವರೆಲ್ಲರೂ ಬರುತ್ತಿರುವಾಗ ಸ್ವಲ್ಪ ದೂರದಲ್ಲಿ ಬರುವ ಒಬ್ಬ ವೃದ್ಧ ಮನುಷ್ಯನನ್ನು ನೋಡಿದರು. ರಾಜಪುತ್ರನು ಆ ವೃದ್ಧ ಮನುಷ್ಯನ ಸಂಭಾಷಣವನ್ನು ಪಂಡಿತರ ಸಮಾಜದಲ್ಲಿ ಅನೇಕಾವರ್ತಿ ಕೇಳಿದ್ದನು. ಅವನು ಅಂದನು—" ಅಗೋ, ಅಲ್ಲಿ ಒಬ್ಬ ವೃದ್ಧ ಮನುಷ್ಯನು ಬರುತ್ತಾನೆ; ಅನೇಕ ವರ್ಷಗಳ ವರೆಗೆ ವಿಚಾರಮಾಡಿ ಮನೋವೃತ್ತಿಗಳನ್ನೆಲ್ಲ ಸ್ವಾಧೀನದಲ್ಲಿಟ್ಟುಕೊಂಡಂತೆ ತೋರುತ್ತಾನೆ; ಅವನ ಮುಖಮುದ್ರೆಯು ಶಾಂತವಾಗಿರುತ್ತದೆ.

ನಾವು ಈ ಹೊತ್ತು ರಾತ್ರಿ ಅವನ ಕೂಡ ಮಾತಾಡಿ ಅವನ ವಿಚಾರಗಳನ್ನು ಕೇಳಿ ಕೊಳ್ಳೋಣ; ತನ್ನ ಸ್ವಂತ ಸ್ಥಿತಿಯ ಬಗ್ಗೆ ಅವನ ಅಭಿಪ್ರಾಯವೇನಿರುತ್ತದೆಂಬ ದನ್ನು ತಿಳಿದುಕೊಳ್ಳೋಣ; ಅಂದರೆ ಮನಸ್ತಾಪವು ಯಾರಿಗಾಗುತ್ತದೆ? ತರುಣರಿಗೆ ಮಾತ್ರ ಆಗುತ್ತದೆಯೋ? ವೃದ್ಧರಿಗೆ ಆಗುತ್ತದೋ ಇಲ್ಲವೋ? ಒಂದುವೇಳೆ ತಾರು ಣ್ಯದಲ್ಲಿ ಮನಸ್ತಾಪವು ಉಂಟಾದರೆ ಉಂಟಾಗವಲ್ಲದೇಕೆ? ತಾರುಣ್ಯವಳಿದು ಹೋದಮೇಲೆಯಾದರೂ ಮನಶ್ಯಾಂತಿಯು ಉಂಟಾಗುವ ಆಶೆಯುಂಟೋ ಇಲ್ಲವೋ ಎಂಬ ಬಗ್ಗೆ ಅವನ ಅಭಿಪ್ರಾಯವೇನಿರುತ್ತದೆಂಬದು ಸ್ಪಷ್ಟವಾಗಿ ತಿಳಿ ಬಂದೀತು.

ಈ ಮೇರೆಗೆ ರಾಜಪುತ್ರರು ಮಾತಾಡುವಷ್ಟರಲ್ಲಿ ಆ ವೃದ್ಧ ಮನುಷ್ಯನು ಅವರ ಹತ್ತರ ಬಂದು ಅವರಿಗೆ ನಮಸ್ಕಾರಮಾಡಿದನು. ಅವರು ತಮ್ಮ ಸಂಗಡ ಬರಬೇಕೆಂದು ಅವನಿಗೆ ಹೇಳಿಕೊಂಡರು. ಅಕಸ್ಮಾತ್ತಾಗಿ ಗುರ್ತಾದವರು ಭೆಟ್ಟಿಯಾದರೆ ಹ್ಯಾಗೆ ಅತ್ತಲಾಗಿನ ಇತ್ತಲಾಗಿನ ಮಾತುಕಥೆಗಳು ನಡೆಯು ತ್ತವೋ ಹಾಗೆ ಕೆಲವು ವೇಳೆ ಮಾತುಕಥೆಗಳು ನಡೆದವು. ಆ ವೃದ ಮನು ಷ್ಯನು ಆನಂದಸ್ವಭಾವವುಳ್ಳವನೂ, ಗಳಿಬಿಳಿಯಾಗಿ ಮಾತಾಡುವಂಥವನೂ ಇದ್ದ ದರಿಂದ ಅವನ ಸಂಗಡ ಹೋಗುವವರಿಗೆ ದಾರಿಯ ಶ್ರಮವು ಎಳ್ಳಷ್ಟು ಆಗುತ್ತಿ ದ್ದಿಲ್ಲ. ಅವರು ತನಗೆ ತಕ್ಕ ಮರ್ಯಾದೆ ಮಾಡಿದರೆಂದು ಪ್ರೀತಿಸಿದು, ಅವನು ಅವರ ಸಂಗಡ ಅವರ ಮನೆತನಕ ಹೋದನು. ಅನಂತರ ರಾಜಪುತ್ರರು ಮನೆಯೊಳಗೆ ಬರಬೇಕೆಂದು ಆತನಿಗೆ ಪ್ರಾರ್ಥಿಸಲು ಅವನು ಅವರ ಕೂಡ ಒಳಗೆ ಬಂದನು. ಅವರು ಸನ್ಮಾನಪೂರ್ವಕವಾಗಿ ಆತನನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ ದಾರಿಯಲ್ಲಿ ಆದ ದಣುವನ್ನಾರಿಸಿಕೊಳ್ಳುವದಕ್ಕಾಗಿ ಫಲಹಾರವನ್ನೂ ಮದ್ಯವನ್ನೂ ತಂದು ಅವನ ಮುಂದಿರಿಸಿದರು.

ರಾಜಪುತ್ರಿಯು—“ಮಹಾರಾಯರೇ, ಸಾಯಂಕಾಲದಲ್ಲಿ ತಿರುಗಾಡುವದರಿಂದ ನಮ್ಮಂಥ ತರುಣರೂ ಅಜ್ಞಾನಿಗಳೂ ಆದವರಿಗೆ ಕೇವಲ ಕಲ್ಪನಾತೀತವಾದಂಥ ಸುಖವು ತಮಗಾಗುತ್ತಿರಬಹುದು. ತಾವು ನೋಡುವಂಥ ಯಾವತ್ತು ಒಡವೆಗಳ ಗುಣದೋಷಗಳೂ ಕಾರ್ಯಕಾರಣಗಳ ಭಾವಗಳೂ ತಮಗೆ ಗೊತ್ತುಂಟು. ತಾವು ನದಿಗಳು ಯಾಕೆ ಹರಿಯುತ್ತವೆಂಬದನ್ನೂ, ಗ್ರಹಗಳ ಪ್ರದಕ್ಷಣೆಗೆ ಹತ್ತುವ ಕಾಲಾವಧಿಯನ್ನೂ ಬಲ್ಲಿರಿ. ತಮಗೆ ದೃಷ್ಟಿಗೋಚರವಾಗುವಂಥ ಪ್ರತಿಯೊಂದು ಒಡವೆಯ ಬಗ್ಗೆ ತಮಗೆ ವಿಚಾರಮಾಡಲಿಕ್ಕೆ ಬರುತ್ತದೆ. ಆದದರಿಂದ ಉಳಿದ ಜನರಿಗಿಂತ ತಾವು ಶ್ರೇಷ್ಠರಿರುತ್ತೀರಿ.”

ಆ ವೃದ್ಧ ಮನುಷ್ಯನು ಅಂದನು-“ ತಂಗಿಯೇ, ಉಲ್ಲಾಸವುಳ್ಳ ತರುಣ ಜನರಿಗೆ ಮಾತ್ರ ಪ್ರಾತಃಕಾಲದ ಹಾಗೂ ಸಾಯಂಕಾಲದ ಸಂಚಾರದಿಂದ ಸುಖವಾಗುತ್ತಿರಬಹುದು; ನನ್ನಂಥ ವೃದ್ಧರಿಗೆ ಆ ಸುಖವೇಕೆ ಬೇಕು ! ನನಗೆ ಚಿತ್ತಸ್ವಾಸ್ಥ್ಯವು ಬಂದಿದ್ದರೆ ಸಾಕು. ಜಗತ್ತಿನೊಳಗೆ ನಾನು ನೋಡತಕ್ಕ ಹೊಸ ಒಡವೆ ಈಗ ಯಾವದೂ ಇಲ್ಲ. ನನ್ನ ಸುತ್ತಲೂ ದೃಷ್ಟಿಗೋಚರವಾಗುವಂಥ ವಸ್ತುಗಳನ್ನು ನಾನು ನೋಡಿದ ಕೂಡಲೆ, ಇವೇ ವಸ್ತುಗಳನ್ನು ನಾನು ಇದಕ್ಕೂ ಹೆಚ್ಚು ಸುಖದಿಂದಿದ್ದಾಗ ನೋಡಿರುವೆನೆಂಬ ನೆನಪು ನನಗಾಗುತ್ತದೆ. ವಿಶ್ರಾಂತಿಗಾಗಿ ಒಂದು ಗಿಡದ ಬುಡದಲ್ಲಿ ಕುಳಿತೆನೆಂದರೆ, ಅದೇ ವೃಕ್ಷದ ನೆರಳಲ್ಲಿ ನೀಲ ನದಿಯು ವರ್ಷಕ್ಕೊಮ್ಮೆ ತಪ್ಪದೆ ತುಂಬಿ ದಂಡೆ ಹೊರಚೆಲ್ಲುತ್ತೆಂಬ ಬಗ್ಗೆ ಈಗ ಸತ್ತು ಹೋದ ನನ್ನೊಬ್ಬ ಮಿತ್ರನ ಕೂಡ ನಾನು ಮಾಡಿದ ವಾದವಿವಾದವು ನನಗೆ ನೆನಪಾಗುತ್ತದೆ. ನಾನು ನನ್ನ ಮೋರೆಯನ್ನು ಮೇಲಕ್ಕೆತ್ತಿ ವೃದ್ಧಿಕ್ಷಯಗಳನ್ನು ಹೊಂದುವಂಥ ಚಂದ್ರನನ್ನು ನೋಡಿದ ಕೂಡಲೆ ಈ ನಶ್ವರ ಜಗತ್ತಿನೊಳಗಿನ ಜನರ ಆಯುಷ್ಯದ ಕ್ಷಣಭಂಗುರತೆಯ ವಿಚಾರವು ಮನಸ್ಸಿನಲ್ಲಿ ಬಂದು ವ್ಯಸನವಾಗುತ್ತದೆ. ಆದಿಭೌತಿಕ ಸುಖಗಳಿಂದ ನನಗೆ ಈಗ ಎಳ್ಳಷ್ಟೂ ಆನಂದವಾಗುವದಿಲ್ಲ; ಯಾಕಂದರೆ, ತುಸು ದಿವಸಗಳಲ್ಲಿಯೇ ಈ ಇಹಲೋಕವನ್ನು ಬಿಟ್ಟುಹೋಗುವ ನನಗೆ ಅವುಗಳಿಂದೇನು ಲಾಭವು ? ”

ಇಮ್ಲಾಕನು-“ಐಹಿಕ ವಸ್ತುಗಳಿಂದ ನಿಮಗೆ ಆನಂದವಾಗದಿದ್ದರೂ ಜನ್ಮಕ್ಕೆ ಬಂದ ಹಾಗೆ “ ನಾವು ಜನರ ಕಲ್ಯಾಣವನ್ನು ಮಾಡಿದೆವು; ಜನರೊಳಗೆ ನಮಗೆ ಸನ್ಮಾನ ಸಿಕ್ಕಿತು” ಎಂಬ ವಿಚಾರಗಳು ನಿಮ್ಮ ಮನಸ್ಸಿನಲ್ಲಿ ಬಂದು ನಿಮಗೆ ಆನಂದವಾಗಲಿಕ್ಕೆ ಬೇಕು. ಮತ್ತು ನಿಮ್ಮ ಸತ್ಕೃತ್ಯಗಳ ಬಗ್ಗೆ ಜನರು ನಿಮ್ಮ ಸ್ತುತಿಯನ್ನು ಮಾಡುತ್ತಾರಷ್ಟೇ; ಅದರಿಂದ ನಿಮಗೆ ಸಂತೋಷವಾಗುತ್ತಿರಲಿಕ್ಕೆಬೇಕು. ”

ಆ ಪಂಡಿತನು ಬಿಸುಸುಯ್ದು ಅಂದನು-“ಮನುಷ್ಯನಿಗೆ ವಾರ್ಧಕವು ಪ್ರಾಪ್ತವಾಯಿತೆಂದರೆ ಜನರ ಸ್ತುತಿಯಿಂದ ಅವನಿಗೆ ಸಂತೋಷವಾಗುವದಿಲ್ಲ. ಈಗ ನನಗೆ ಸ್ತುತಿಯ ಅಪೇಕ್ಷೆಯೇ ಇಲ್ಲ. ಯಾಕಂದರೆ, ನನ್ನ ತಾಯಿಯೂ ಇಲ್ಲ; ಹೆಂಡತಿಯೂ ಇಲ್ಲ. ಮಗನ ಸ್ತುತಿಯನ್ನು ಕೇಳಿ ತಾಯಿಗೆ ಸಂತೋಷವಾಗುತ್ತದೆ; ಗಂಡನ ಪ್ರತಿಷ್ಠೆಯನ್ನು ನೋಡಿ ಹೆಂಡತಿಗೆ ಆನಂದವಾಗುತ್ತದೆ. ನನಗೆ ಯಾರೂ ಇಲ್ಲ, ಅಂದಮೇಲೆ ನನ್ನ ಸ್ತುತಿಯಿಂದ ನನಗೇನು ಲಾಭವು? ನನಗೆ ಈಗ ಮಿತ್ರರೂ ಇಲ್ಲ; ಶತ್ರುಗಳೂ ಇಲ್ಲ; ಎಲ್ಲರನ್ನು ಕಳಿಸಿ ನಾನೊಬ್ಬನೆ ಉಳಿದಿದ್ದೇನೆ. ಆವದರಿಂದ ನನಗೆ ಈಗ ಯಾವ ಮಾತೂ ಮಹತ್ವದ್ದು ಎನಿಸುವದಿಲ್ಲ. ತರುಣ ಮನು

ಷ್ಯನಿಗೆ ಮುಂದಿನ ಸುಖದ ಆಶೆಯು ಇರುವದರಿಂದಲೂ, ಅವನು ಬಹಳ ದಿವಸ ಬದುಕುವ ಸಂಭವ ಇರುವದರಿಂದಲೂ ತನ್ನ ಸ್ತುತಿಯಿಂದ ಅವನಿಗೆ ಆನಂದವಾಗುತ್ತದೆ. ಆದರೆ ಮುಪ್ಪಿನಿಂದ ಹಣ್ಣಾದ ನನಗೆ ಜನರ ದ್ವೇಷದಿಂದ ದುಃಖವಾಗುವದಿಲ್ಲ. ಇಲ್ಲವೆ ಅವರು ಸ್ತುತಿಮಾಡಿದರೆ ಅಥವಾ ಸನ್ಮಾನ ಮಾಡಿದರೆ ಅವುಗಳಿಂದ ನನಗೆ ಆನಂದವಾಗುವದಿಲ್ಲ. ನನ್ನಿಂದಲೇ ಜನರಿಗೆ ಆದರೆ ತುಸು ಹಿತವಾದೀತು. ಆದರೆ ಅವರಿಂದ ನನಗೆ ಎಳ್ಳಷ್ಟು ಲಾಭವಿಲ್ಲ. ಸಂಪತ್ತು ಈಗ ನನಗೆ ನಿಷ್ಪ್ರಯೋಜನವಾದದ್ದು; ನನಗೆ ದೊಡ್ಡ ಅಧಿಕಾರವೂ ಬೇಕಾಗಿಲ್ಲ. ನಾನು ನನ್ನ ಆಯುಃಕ್ರಮದ ಸಿಂಹಾವಲೋಕನವನ್ನು ಮಾಡಿದರೆ, ನನ್ನ ಕಲ್ಯಾಣವಾಗುವಂಥ ಅನೇಕ ಉತ್ತಮವಾದ ಪ್ರಸಂಗಗಳನ್ನು ವ್ಯರ್ಥವಾಗಿ ಕಳೆದಿರುವೆನೆಂತಲೂ, ಕೇವಲ ಹುಡುಗಾಟಿಕೆಯಲ್ಲಿ ಬಹಳ ವೇಳೆಯನ್ನು ಹಾಳುಮಾಡಿರುವೆನೆಂತಲೂ, ಸೋಮಾರಿತನದಲ್ಲಿ ನನ್ನ ಆಯುಷ್ಯದ ಎಷ್ಟೋ ದಿವಸಗಳನ್ನು ವ್ಯರ್ಥ ಹೋಗಗೊಡಿಸಿರುವೆನೆಂತಲೂ ಸ್ಪಷ್ಟವಾಗಿ ಕಂಡುಬರುವ ಹಾಗಿದೆ. ಆ ಸಂಗತಿಗಳು ನೆನಪಾದವೆಂದರೆ ನನಗೆ ಬಹು ವಿಷಾದವಾಗುತ್ತದೆ. ನಾನು ಹಲವು ಕೆಲಸಗಳನ್ನು ಕೈಕೊಂಡಿದ್ದು ಅವುಗಳನ್ನೆಲ್ಲ ಅರ್ಧಮರ್ಧ ಮಾಡಿ ಬಿಟ್ಟಿರುವೆನು; ಕೆಲವು ಕೆಲಸಗಳನ್ನು ಮಾಡಲಿಕ್ಕೆ ಆರಂಭ ಸಹ ಮಾಡಲಿಲ್ಲ. ನನ್ನ ಆಯುಃಕ್ರಮದಲ್ಲಿ ಹೀನತರವಾದ ಅಪರಾಧಗಳನ್ನು ಮಾಡಲಿಲ್ಲಾದವರಿಂದ ನನ್ನ ಮನಸ್ಸು ಶಾಂತವಾಗಿರುತ್ತದೆ. ಇದೊಂದು ಲಾಭವೇ ಸರಿ. ಜಗತ್ತಿನೊಳಗಿನ ಸುಖದುಃಖಗಳು ಕ್ಷಣಭಂಗುರವಾದಂಥವು; ಅವುಗಳಿಂದೇನೂ ಲಾಭವಿಲ್ಲೆಂದು ಜ್ಞಾನಿಗಳು ಪದೇಪದೆ ಹೇಳುತ್ತ ಬಂದಿದ್ದರೂ, ಅವುಗಳ ಮೇಲಿನ ನನ್ನ ಆಸಕ್ತಿಯು ಇನ್ನೂ ಕಡಿಮೆಯಾಗುವದಿಲ್ಲ. ಆದರೂ ನಾನು ನನ್ನ ಕೈಲಾದ ಮಟ್ಟಿಗೆ ಅವುಗಳ ಮೇಲಿನ ಲೋಭವನ್ನು ಬಿಡಲಾರಂಭಿಸಿದ್ದೇನೆ. ಒಳ್ಳೇ ಲೀನತೆಯಿಂದ ಸೃಷ್ಟಿಕ್ರಮಾನುಸಾರವಾಗಿ ಇನ್ನುಮೇಲೆ ನನಗೆ ತೀವ್ರವೇ ಬರುವಂಥ ಅಂತ್ಯಕಾಲದ ನಿರೀಕ್ಷಣವನ್ನು ಮಾಡುತ್ತಲಿದ್ದೇನೆ. ಇಹಲೋಕದಲ್ಲಿ ಪ್ರಾಪ್ತವಾಗುವಂಥ ಸ್ಥಿತಿಯೂ, ಇಲ್ಲಿ ದೊರೆಯುವ ಸುಖಗಳೂ, ಈ ಲೋಕದಲ್ಲಿ ನನಗೆ ಸಾಧಿಸಲಸಾಧ್ಯವಾದ ಸದ್ಗುಣಗಳೂ ಪರಲೋಕದಲ್ಲಾದರೂ ನಿಸ್ಸಂದೇಹವಾಗಿ ಪ್ರಾಪ್ತವಾಗುವವೆಂಬ ದೃಢತರ ಆಶೆಯು ನನಗುಂಟು."

ಈ ವೇಳೆಗೆ ಮಾತಾಡಿ ಆ ವೃದ್ಧ ಮನುಷ್ಯನು ಅಲ್ಲಿಂದೆದ್ದು ಹೋದನು. ಅವನ ಭಾಷಣವನ್ನು ಕೇಳಿದಂಥ ರಾಜಪುತ್ರ ಮುಂತಾದವರಿಗೆ ದೀರ್ಘಾಯುಷ್ಯದಿಂದೇನೂ ಹೇಳತಕ್ಕಂಥ ಲಾಭವಿಲ್ಲೆಂದು ಕಂಡುಬಂತು. ಆದರೆ ಆ ಮನುಷ್ಯನ ಮಾತುಕೇಳಿ ನಿರಾಶೆಯುಳ್ಳವರಾಗುವದು ರಾಜಪುತ್ರನ ಮನಸ್ಸಿಗೆ ಬರಲಿಲ್ಲ.

ಯಾಕಂದರೆ, ಮುಪ್ಪಿನಲ್ಲಿ ಮನುಷ್ಯನಿಗೆ ಸುಖವಿರುವದಿಲ್ಲ; ಅವನ ಮನಸ್ಸು ಉದ್ವಿಗ್ನವಾಗಿರುತ್ತದೆ; ಮತ್ತು ಮುಪ್ಪಿನಲ್ಲಿ ಮನುಷ್ಯನಿಗೆ ಸುಖವಾಗಬೇಕಾದರೆ ತಾರುಣ್ಯದಲ್ಲಿ ಅವನಿಗೆ ಅನುಪಮವಾದ ಸೌಖ್ಯವು ಅವಶ್ಯವಾಗಿ ಆಗಿರಲಿಕ್ಕೆಬೇಕು; ಆಯುಷ್ಯದ ಸಂಧ್ಯಾಕಾಲವು (ಮುಪ್ಪು) ಶಾಂತವಾಗಿರಬೇಕಾದರೆ ಮಧ್ಯಾಹ್ನವು (ತಾರುಣ್ಯವು) ಪ್ರಕಾಶಮಯವಾಗಿರಲಿಕ್ಕೆ ಬೇಕೆಂಬ ತತ್ವಗಳು ಅವನ ಮನಸ್ಸಿನ ಮೇಲೆ ಚನ್ನಾಗಿ ದೃಢಗೊಂಡಿದ್ದವು.

ರಾಜಪುತ್ರಿಯು ಅಂದಳು— "ಮುಪ್ಪಿನಲ್ಲಿ ಮನುಷ್ಯನು ಜಗಳಗಂಟನೂ, ಹೊಟ್ಟೆಕಿಚ್ಚಿನವನೂ ಆಗುತ್ತಾನೆ; ಮತ್ತು ಅದೇ ಸಂಸಾರವನ್ನು ಮಾಡಲಾರಂಭಿಸಿದ ತರುಣ ಜನರ ಆಶೆಗಳನ್ನು ಕುಗ್ಗಿಸುವದರಿಂದ ಅವನಿಗೆ ಒಂದುತರದ ಸಂತೋಷ ವಾಗುತ್ತದೆ. ನಾನು ಎಷ್ಟೋ ದುರ್ಬುದ್ಧಿಯುಳ್ಳ ಜನರನ್ನು ನೋಡಿದ್ದೇನೆ. ಕೆಲವರು ತಾವು ಅನುಭೋಗಿಸುವಂಥ ಆಸ್ತಿಯನ್ನೂ ಸುಖೋಪಭೋಗಗಳನ್ನೂ ತಮ್ಮ ವಾರಸದಾರರು ಅನುಭೋಗಿಸಬಾರದೆಂಬ ದುಷ್ಟಬುದ್ಧಿಯುಳ್ಳವರಾಗಿರುತ್ತಾರೆ. ಮುಪ್ಪಿನ ಮನುಷ್ಯನೂ ಇದೇ ವರ್ಗದಲ್ಲಿ ಬರುತ್ತಾನೆ."

ಪೇಕಮ್ಯಾಆ—"ಅವನ ವಯಸ್ಸು ಬಹಳ ಆಗಿರುವದರಿಂದ, ಅವನು ಭ್ರಮಿಷ್ಟನಾಗಿರಬಹುದು; ಇಲ್ಲವೆ ಸಂಸಾರದಲ್ಲಿ ಅವನಿಗೆ ಒಂದು ದೊಡ್ಡ ವಿಪತ್ತು ಒದಗಿರಬಹುದು; ಅದರಿಂದ ಅವನಿಗೆ ಅವನ ಜೀವ ಬೇಸರಾಗಿರಬಹುದು. ತನಗಾದಂತೆಯೇ ಉಳಿದವರಿಗೂ ಆಗಿರಬಹುದೆಂದು ತಿಳಿದುಕೊಳ್ಳುವದು ಮಾನವ ಸ್ವಭಾವವೇ ಇರುತ್ತದೆ."

ಅವರೆಲ್ಲರು ತಮ್ಮತಮ್ಮ ತಿಳುವಳಿಕೆಯ ಮೇರೆಗೆ ತಮ್ಮತಮ್ಮ ಸಮಾಧಾನವನ್ನು ಮಾಡಿಕೊಂಡದ್ದು ನೋಡಿ ಇಮ್ಲಾಕನು ನಕ್ಕನು. ಅವರ ತಿಳುವಳಿಕೆಯಲ್ಲಿರುವ ದೋಷಗಳನ್ನು ತೆಗೆದು ಅವರ ಮನಸ್ಸು ನೋಯಿಸುವದು ಅವನಿಗೆ ಸರಿದೋರಲಿಲ್ಲ. ತಾನು ಅವರಷ್ಟು ಚಿಕ್ಕವನಿರುವಾಗ ತನ್ನ ಮನಸ್ಸಿನಲ್ಲಿಯೂ ತಾನು ಯಾವಾಗಲೂ ಊರ್ಜಿತಸ್ಥಿತಿಯಲ್ಲಿಯೂ ಆನಂದವೃತ್ತಿಯಲ್ಲಿಯೂ ಇರುವೆನೆಂಬ ವಿಚಾರಗಳು ಬರುತ್ತಿದ್ದವೆಂದು ಅವನಿಗೆ ನೆನಪಾಯಿತು. ವಯಃಪರತ್ವದಿಂದ ತನ್ನಿಂದ ತಾನೆ ಅನುಭವಕ್ಕೆ ಬರುವಂಥ ಸಂಗತಿಗಳನ್ನು ಈಗಲೇ ಅವರಿಗೆ ತಿಳಿಸಿ ಅವರ ಮನಸ್ಸನ್ನು ನೋಯಿಸುವದು ಉಚಿತವಲ್ಲೆಂದು ಅವನು ತಿಳಿದುಕೊಂಡನು. ತರುವಾಯ ರಾಜಪುತ್ರಿಯೂ ಆಕೆಯ ತೊತ್ತೂ ವಿಶ್ರಾಂತಿಯ ಸಲುವಾಗಿ ತಮ್ಮ ತಮ್ಮ ಕೋಣೆಗಳೊಳಗೆ ಹೋಗಲುದ್ಯುಕ್ತರಾದರು. ಅವರ ಮನಸ್ಸಿನಲ್ಲಿ ಜ್ಯೋತಿಷಿಯ ಭ್ರಮಿಷ್ಟತನವು ತುಂಬಿಹೋಗಿತ್ತು. ತಮ್ಮತಮ್ಮ ಕೋಣೆಗಳೊಳಗೆ

ಹೋಗುವಾಗ ಅವರು ವಿನೋದದಿಂದ ಇಮಾಕನಿಗೆ ಅಂದರು—" ರಾಯರೇ ಸೂರ್ಯ-ಚಂದ್ರರು ನೀವು ಹೇಳಿದ ಹಾಗೆ ಕೇಳುವರಷ್ಟೆ? ಯಾಕಂದರೆ, ನೀವು ಈಗ ಆ ಅಧಿಕಾರಾರೂಢರಾಗಿರುವಿರಿ. ದಯಮಾಡಿ ನಾಳಿನ ದಿವಸ ಸೂರ್ಯನು ತುಸು ತಡಮಾಡಿ ಉದಯನಾಗುವಂತೆ ಮಾಡಿರಿ; ಅಂದರೆ ನಮಗೆ ನಿದ್ರೆಗೆ ಸಾಕಷ್ಟು ವೇಳೆ ಸಿಗುವದು."

## ನಾಲ್ವತ್ತ್ಮೂರನೆಯ ಭಾಗವು.

### ರಾಜಕನ್ನಿಕೆಯೂ ಪೇಕರ್ಸ್ಯಾಲ ದಾಸಿಯೂ ಜ್ಯೋತಿಷಿಯ ಬಳಿಗೆ ಹೋದದ್ದು.

ರಾಜಕನ್ನಿಕೆಯೂ ಪೇಕರ್ಸ್ಯಾಲದಾಸಿಯೂ ಜ್ಯೋತಿಷಿಯ ಸ್ವಭಾವವು ಪ್ರೀತಿಕರವಾದದ್ದೂ ವಿಲಕ್ಷಣವಾದದ್ದೂ ಇರುವದನ್ನು ಕಂಡು ಆತನ ಬಳಿಗೆ ಹೋಗಿ ಆತನ ಕೂಡ ಸಂಭಾಷಣ ಮಾಡಬೇಕೆಂದು ನಿಶ್ಚಯಿಸಿ, ಹ್ಯಾಗಾದರೂ ಮಾಡಿ ತಮ್ಮನ್ನು ಆ ಜ್ಯೋತಿಷಿಯ ಹತ್ತರ ಕರೆದುಕೊಂಡು ಹೋಗಬೇಕೆಂದು ಇಮ್ಮಾಕನಿಗೆ ಹೇಳಿದರು.

ಈ ಕೆಲಸವು ತುಸು ಬಿಗಿಯಾದದ್ದಿತ್ತು. ಯಾಕಂದರೆ, ಕೇರೋ ಪಟ್ಟಣದಲ್ಲಿ ಯುರೋಪಖಂಡದಿಂದಲೂ ಬೇರೆ ಅನೇಕ ದೇಶಗಳಿಂದಲೂ ಸಾವಿರಾರು ಜನರು ಬಂದಿದ್ದು ಅವರೆಲ್ಲರೂ ಯುರೋಪಖಂಡದೊಳಗಿನ ರೀತಿಗನುಸರಿಸಿ ತಕ್ಕಮಟ್ಟಿಗೆ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಡುತ್ತಿದ್ದಾಗ್ಯೂ, ಆ ಜ್ಯೋತಿಷಿಯು ತನ್ನ ಬಳಿಗೆ ಹೆಂಗಸರನ್ನು ಬರಗೊಡುತ್ತಿದ್ದಿಲ್ಲ. ಆದದರಿಂದ ರಾಜಪುತ್ರಿಯನ್ನೂ ಆಕೆಯ ದಾಸಿಯನ್ನೂ ಅವನ ಬಳಿಗೆ ಕರಕೊಂಡು ಹೋಗುವದು ಅಸಾಧ್ಯವಾಗಿತ್ತು. ಆದರೆ ಅವರು ತಮ್ಮ ಹಟವನ್ನು ಬಿಡಲೊಲ್ಲರು. ಹ್ಯಾಗಾದರೂ ಮಾಡಿ ತಮ್ಮನ್ನು ಕರಕೊಂಡು ಹೋಗಲಿಕ್ಕೆಬೇಕೆಂದು ಇಮ್ಮಾಕನಿಗೆ ಪ್ರಾರ್ಥಿಸಹತ್ತಿದರು; ತಮ್ಮ ಉದ್ದೇಶವು ಕೊನೆಗಾಣಬೇಕೆಂಬ ಬಗ್ಗೆ ಅವರು ಅನೇಕ ಹಂಚಿಕೆಗಳನ್ನು ತೆಗೆಯ ಹತ್ತಿದರು. ಆ ಪಂಡಿತನು (ಜ್ಯೋತಿಷಿಯು) ವಿಪನ್ನಸ್ತ್ರೀಯರು ತನ್ನೆಡೆಗೆ ಬಂದರೆ ಹಣದಿಂದಾಗಲೀ, ಉಪದೇಶದಿಂದಾಗಲಿ ಅವರನ್ನು ಸಮಾಧಾನಪಡಿಸಿ ಕಳುಹುತ್ತಿದ್ದನು. ತಾವು ವಿಪನ್ನಸ್ತ್ರೀಯರೆಂಬ ಮಿಷದಿಂದ ಅವನೆಡೆಗೆ ಹೋಗಬೇಕೆಂದು ಅವರು ಹಂಚಿಕೆ ತೆಗೆದರು. ಆದರೆ ಪೂರ್ಣ ವಿಚಾರಮಾಡಿ ನೋಡಲು ಆ ಹಂಚಿಕೆಯು ಯೋಗ್ಯವಾಗಿ ಕಂಡುಬರಲಿಲ್ಲ. ಯಾಕಂದರೆ, ಹಾಗೆ ಅವನ ಬಳಿಗೆ

ಹೋದದ್ದುಂಟಾದರೆ ಅವನು ತುಸು ಹಣವನ್ನು ಕೊಟ್ಟಾಗಲಿ, ನಾಲ್ಕು ಉಪದೇಶದ ಮಾತುಗಳನ್ನು ಹೇಳಿ ಆಗಲಿ ತನ್ನನ್ನು ಕಳುಹಿಬಿಡುವನು; ಹಾಗಾದರೆ ಅವನ ವಿಶೇಷ ಪರಿಚಯುವಾಗುವದಿಲ್ಲ; ಅವನ ಕೂಡ ಸಂಭಾಷಣ ಮಾಡಲಿಕ್ಕೆ ಸಾಧಿಸುವದಿಲ್ಲೆಂದು ಅವರಿಗೆ ಕಂಡುಬಂತು. ರಾಜಪುತ್ರನು ಇವನ್ನೆಲ್ಲ ಕೇಳಿ ಅಂದನು—“ಈ ಹಂಚಿಕೆಯಂತೂ ನಿಷ್ಪ್ರಯೋಜನವಾದದ್ದೇ ಸರಿ. ಮತ್ತು ನನ್ನ ಸ್ಪಷ್ಟ ಅಭಿಪ್ರಾಯವೇನಂದರೆ—ಸಜ್ಜನನು ದುರ್ಜನರ ಕಪಟಜಾಲವನ್ನು ಲೆಕ್ಕಿಸುವದಿಲ್ಲ, ಇಲ್ಲವೆ ಆ ಕಪಟಗಳು ಅವನಿಗೆ ತಿಳಿಯುವದಿಲ್ಲೆಂಬ ಕಾರಣದಿಂದಲೇ, ಸಣ್ಣ ಕಾರ್ಯಕ್ಕೋಸುಗ ಇಲ್ಲವೆ ದೊಡ್ಡ ಕಾರ್ಯಕ್ಕೋಸುಗ ಅವನನ್ನು ಮೋಸಗೊಳಿಸುವವನು ಇಡೀ ಮನುಷ್ಯಜಾತಿಯನ್ನು ಮೋಸಗೊಳಿಸಿದ ದೋಷಕ್ಕೆ ಪಾತ್ರನಾಗುತ್ತಾನೆ. ಮೋಸ ಹೋದ ಮನುಷ್ಯನು—ಅವನು ಸಜ್ಜನನಿರಲಿ, ದುರ್ಜನನಿರಲಿ—ಯಾವ ಜನರನ್ನೂ ನಂಬುವದಿಲ್ಲ; ಮತ್ತು ಅವನ ಪರೋಪಕಾರ ಬುದ್ಧಿಯು ನಷ್ಟವಾಗುತ್ತದೆ. ಒಬ್ಬ ನೀಚಮನುಷ್ಯನು ಒಬ್ಬ ಜಾಣ ಮನುಷ್ಯನನ್ನು ಮೋಸಗೊಳಿಸಿದರೆ, ಆ ಜಾಣನ ಮನಸ್ಸಿನಲ್ಲಿ ಆ ನೀಚ ಮನುಷ್ಯನ ಬಗ್ಗೆ ತಿರಸ್ಕಾರಬುದ್ಧಿಯು ಹುಟ್ಟುತ್ತದೆ. ಇದೇ ಮೇರೆಗೆ ನೀವು ಆ ಪಂಡಿತನ ಬಳಿಗೆ ವಿಪದ್ಗ್ರಸ್ತರೆಂದು ಹೋದನಂತರ ಅವನಿಗೆ ನಿಮ್ಮ ನಿಜವಾದ ಸ್ವರೂಪವು ತಿಳಿಯಿತೆಂದರೆ ಅವನಿಗೆ ಸಿಟ್ಟು ಬಂದೀತು; ನಿಮ್ಮ ಮೇಲೆ ಅವನ ನಂಬಿಗೆ ಪುನಃ ಎಂದೂ ಕೂಡ್ರಲಿಕ್ಕಿಲ್ಲ; ಜಗತ್ತಿನೊಳಗಿನ ಎಲ್ಲ ಜನರೂ ವಿಶ್ವಾಸಘಾತಕರಿರುವರೆಂಬ ತಿಳುವಳಿಕೆಯು ಅವನ ಮನಸ್ಸಿನಲ್ಲಿ ಹುಟ್ಟಿ, ಒಂದು ವೇಳೆ ಅವನು ಜನರಿಗೆ ಉಪದೇಶವನ್ನೂ ಧರ್ಮಕೃತ್ಯವನ್ನೂ ಮಾಡುವದನ್ನು ಬಿಟ್ಟುಬಿಡಬಹುದು. ಹೀಗಾಯಿತೆಂದರೆ ಮನುಷ್ಯಮಾತ್ರರ ಬಗ್ಗೆ ಅವನ ಮನಸ್ಸಿನಲ್ಲಿ ಹುಟ್ಟಿದ ತಿರಸ್ಕಾರಬುದ್ಧಿಯನ್ನು ಹೋಗಲಾಡಿಸಿ, ಧರ್ಮಕೃತ್ಯವನ್ನು ಮಾಡಬೇಕೆಂಬ ಇಚ್ಛೆಯನ್ನು ಪುನಃ ಅವನ ಮನಸ್ಸಿನಲ್ಲಿ ಹುಟ್ಟಿಸುವದು ಯಾರಿಂದಾದೀತು? ಕಲುಷಿತವಾದ ಆತನ ಮನಸ್ಸನ್ನು ಪ್ರಸನ್ನಮಾಡುವ ಶಕ್ತಿಯು ಯಾರಿಗುಂಟಾದೀತು?”

ಮೇಲೆ ವಿವರಿಸಿದ ರಾಜಪುತ್ರನ ಮಾತಿಗೆ ಯಾರೂ ಏನೂ ಉತ್ತರ ಕೊಡಲಿಲ್ಲ. ಆ ಜ್ಯೋತಿಷಿಯನ್ನು ನೋಡಬೇಕೆಂಬ ಅವರ ಕಾಂಕ್ಷೆಯು ಕಡಿಮೆಯಾದೀತೆಂದು ಇವನ್ಹಾನನಿಗೆ ಆಶೆಯಿತ್ತು. ಆದರೆ ಹಾಗಾಗಲಿಲ್ಲ. ಮರುದಿನ ಪೇಕ್ಯಾ ಆ ದಾಸಿಯು ಅವನ ಬಳಿಗೆ ಬಂದು ಅಂದಳು.—“ಜ್ಯೋತಿಷಿಯ ಬಳಿಗೆ ಹೋಗುವದಕ್ಕಾಗಿ ನಾನು ಒಂದು ಬಹಳ ಚಲೋ ಹಂಚಿಕೆಯನ್ನು ಹುಡುಕಿ ತೆಗೆದಿದ್ದೇನೆ.

ನಾನು ಅರಬನ ಕೈಯಲ್ಲಿ ಸಿಕ್ಕಾಗ ಅವನು ನನಗೆ ಜ್ಯೋತಿಃಶಾಸ್ತ್ರದ ಮೂಲತತ್ವಗಳನ್ನು ಕಲಿಸಿರುವನಷ್ಟೆ. ನಾನು ಆ ಶಾಸ್ತ್ರದ ಹೆಚ್ಚಿನ ಅಭ್ಯಾಸವನ್ನು ಮಾಡಬೇಕೆಂಬ ಇಚ್ಛೆಯಿಂದ ತಮ್ಮ ಕಡೆಗೆ ಬಂದಿರುವೆನೆಂದು ಅವನಿಗೆ ಹೇಳುವೆನು. ರಾಜಪುತ್ರಿಯೂ ನನ್ನ ಸಂಗಡ ಆ ಶಾಸ್ತ್ರವನ್ನು ಕಲಿಯಬೇಕೆಂದು ಬಂದಿರುವಳೆಂದು, ಇಲ್ಲವೆ ಪುರುಷರ ಸನ್ನಿಧಾನಕ್ಕೆ ಒಬ್ಬಳೇ ಸ್ತ್ರೀ ಹೋಗುವದು ವ್ಯವಹಾರವಿರುದ್ಧವಾದದರಿಂದ ನನ್ನ ಜೋಡಿಗೆ ಆಕೆ ಬಂದಿರುವಳೆಂದು ಅವನಿಗೆ ಹೇಳುವೆನು."

ಇವಸ್ಲಾಕನು ಅಂದನು—"ವಿದ್ವಾಂಸರು ತಮಗೆ ಅವಗತವಾದ ಗಹನವಾದ ಶಾಸ್ತ್ರಗಳ ಮೂಲತತ್ವಗಳನ್ನು ಕಲಿಸುವದಕ್ಕೆ ತೀವ್ರವೇ ಬೇಸರಗೊಳ್ಳುತ್ತಾರೆ. ಈ ಸಾಧಾರಣ ನಿಯಮಕ್ಕನುಸಾರವಾಗಿ ಆ ಜ್ಯೋತಿಷಿಯು ನಿಮಗೆ ಜ್ಯೋತಿಃಶಾಸ್ತ್ರದ ಮೂಲತತ್ವಗಳನ್ನು ಕಲಿಸಲಿಕ್ಕೆ ಬೇಸರಗೊಂಡಾನು; ಒಂದುವೇಳೆ ಅವನು ನಿಮಗೆ ಅವನ್ನು ಕಲಿಸಿದಾಗ್ಯೂ ಅವನು ಆ ಶಾಸ್ತ್ರಸಂಬಂಧವಾದ ಬೇರೆ ಅನೇಕ ಸಿದ್ಧಾಂತಗಳನ್ನೂ ತತ್ವಗಳನ್ನೂ ವಿವರಿಸಿ ಹೇಳನು. ಒಂದುವೇಳೆ ಹೇಳಿದಾಗ್ಯೂ ಆ ಸಿದ್ಧಾಂತಗಳೂ, ತತ್ವಗಳೂ ನಿಮಗೆ ಏನೂ ತಿಳಿಯಲಿಕ್ಕಿಲ್ಲ. ಹೀಗಾಯಿತೆಂದರೆ ಅವನು ನಿಮಗೆ ಕಲಿಸಲಿಕ್ಕೆ ತೀವ್ರವೇ ಬೇಸರಗೊಳ್ಳುವನು." ಪೇಕ್ಯಾಅ ಅಂದಳು—"ಆ ಬಗ್ಗೆ ತಾವು ಎಳ್ಳಷ್ಟು ಚಿಂತೆಮಾಡಬೇಡಿರಿ. ನೀವು ನನ್ನನ್ನು ಅವನ ಬಳಿಗೆ ಕರೆದುಕೊಂಡು ಹೋದರೆ ಸಾಕು. ನನಗೆ ಆ ವಿದ್ಯೆಯು ಎಷ್ಟುಮಟ್ಟಿಗೆ ಬರುತ್ತದೆಂಬುದು ನಿಮಗೆಲ್ಲಿ ಗೊತ್ತುಂಟು? ಅವನು ಹೇಳುವದೆಲ್ಲ ಕೇಳಿಕೊಂಡು, ಸುಮ್ಮನೆ ಕೂಡುವೆನು. ನನಗೆಷ್ಟು ಬರುತ್ತದೆಂಬವನ್ನು ಅವನಿಗೆ ತಿಳಿಯಗೊಡುವದಿಲ್ಲ. ಅವನು ಹೇಳಿದ್ದಕ್ಕೆಲ್ಲ ನನ್ನ ಒಪ್ಪಿಗೆ ಕೊಡುತ್ತ ಹೋಗುವೆನು. ಅಂದರೆ ತೀರಿತು"

ಈ ಮೇರೆಗೆ ಆ ಜ್ಯೋತಿಷಿಯ ಬಳಿಗೆ ಹೋಗುವದು ನಿಶ್ಚಯವಾದ ಬಳಿಕ ಇವಸ್ಲಾಕನು ದೂರದೇಶದಿಂದ ಜ್ಞಾನಸಂಪಾದನ ಮಾಡಬೇಕೆಂಬ ಕಾಂಕ್ಷೆಯುಳ್ಳ ಒಬ್ಬ ಸ್ತ್ರೀಯು ತಮ್ಮ ಪ್ರಖ್ಯಾತಿಯನ್ನು ಕೇಳಿ ತಮ್ಮ ಶಿಷ್ಯತ್ವವನ್ನು ಅಂಗೀಕರಿಸಬೇಕೆಂಬ ಇಚ್ಛೆಯಿಂದ ಇಲ್ಲಿಗೆ ಬಂದಿರುವಳೆಂದು ಅವನಿಗೆ ಹೇಳಿದನು. ಜ್ಯೋತಿಷಿಯು ಈ ಅಸಾಧಾರಣವಾದಂಥ, ಅಶ್ರುತಪೂರ್ವವಾದಂಥ ಸುದ್ದಿಯನ್ನು ಕೇಳಿ ಆಶ್ಚರ್ಯಚಕಿತನಾದನು; ಮತ್ತು ಕೆಲವು ಹೊತ್ತು ಸಂಭಾಷಣವಾದ ಮೇಲೆ ಆ ಸ್ತ್ರೀಯನ್ನು ತನ್ನೆಡೆಗೆ ಮರುದಿನ ಕರೆದುಕೊಂಡು ಬರುವದೆಂದು ಇವಸ್ಲಾಕನಿಗೆ ಹೇಳಿದನು. ತರುವಾಯ ಬೆಳಗು ಯಾವಾಗಾದೀತು ಮತ್ತು ತಾನು ಆ ಸ್ತ್ರೀಯನ್ನು ಯಾವಾಗ ನೋಡುವೆನೆಂಬ ಬಗ್ಗೆ ಆತುರಪಡಹತ್ತಿದನು.

ಮರುದಿನ ರಾಜಕನ್ನಿಕೆಯೂ ಪೇಕ್ಸ್ಯಾಅ ದಾಸಿಯೂ ಸಡಗರದಿಂದ ತಮ್ಮ ಉಡಿಗೆಗಳನ್ನು ಉಟ್ಟುಕೊಂಡು, ಇವ್ಲಾಕನನ್ನು ಸಂಗಡ ಕರೆದುಕೊಂಡು, ಆ ಜ್ಯೋತಿಷಿಯ ಬಳಿಗೆ ಹೋದರು. ಅವರು ಒಳ್ಳೇ ವೈಭವದಿಂದ ಸನ್ಮಾನಪೂರ್ವಕವಾಗಿ ತನ್ನೆಡೆಗೆ ಬರುವದನ್ನು ನೋಡಿ ಅವನಿಗೆ ಅತ್ಯಾನಂದವಾಯಿತು. ನಮಸ್ಕಾರ ಮುಂತಾದ ಮೊಟ್ಟಮೊದಲಿನ ಉಪಚಾರಗಳನ್ನು ಮಾಡುವಾಗ ಅವನು ತುಸು ಅಂಜುಬುರುಕನಂತೆಯೂ, ನಾಚಿದವನಂತೆಯೂ ತೋರ್ಪಡಿಸಿದನು. ಆದರೆ ಆ ಉಪಚಾರಗಳೆಲ್ಲ ತೀರಿ ಸಂಭಾಷಣಕ್ಕೆ ಆರಂಭವಾದ ಮೇಲೆ ಅವನು ಒಳ್ಳೇ ಎಚ್ಚರದಿಂದ ಮಾತಾಡಹತ್ತಿದನು. ಅವರ ಸಂಭಾಷಣವನ್ನು ಕೇಳಿದ ಕೂಡಲೆ ಇವ್ಲಾಕನು ಅವರ ವಿಷಯಕ್ಕೆ ತನಗೆ ಹೇಳಿದ ಸಂಗತಿಯೆಲ್ಲ ನಿಜವಾದದ್ದಿರುವದೆಂದು ಅವನು ಮನಗಂಡನು. ಜ್ಯೋತಿಃಶಾಸ್ತ್ರದ ಅಭ್ಯಾಸ ಮಾಡಬೇಕೆಂಬ ಆಕಾಂಕ್ಷೆಯು ನಿಮಗೆ ಯಾಕೆ ಹುಟ್ಟಿತೆಂದು ಅವನು ಪೇಕ್ಸ್ಯಾಅ ದಾಸಿಗೆ ಕೇಳಲು, ಆಕೆಯು ನೆಲಗೋಪುರಗಳನ್ನು ನೋಡಲಿಕ್ಕೆ ಹೋದಾಗಿನಿಂದ ಸಂಭವಿಸಿದ ಯಾವತ್ತು ಸಂಗತಿಯನ್ನು ಒಳ್ಳೇ ಸೌಲಭ್ಯದಿಂದ ಮನೋಹರವಾಗಿ ಹೇಳಿದಳು. ಅವಳ ಇಂಪಾದ ಭಾಷಣವನ್ನು ಕೇಳಿ ಅವನಿಗೆ ವರ್ಣಿಸಲಸದಳವಾದ ಆನಂದವಾಯಿತು. ಆಮೇಲೆ ಅವನು ಜ್ಯೋತಿಃಶಾಸ್ತ್ರದ ಬಗ್ಗೆ ಮಾತಾಡಲಾರಂಭಿಸಿದನು. ಪೇಕ್ಸ್ಯಾಅ ತನಗೆ ಗೊತ್ತಿದ್ದನ್ನೆಲ್ಲ ಒಳ್ಳೇ ಜಾಣ್ಮೆಯಿಂದ ಹೇಳಿದಳು. ಅವಳ ಬುದ್ಧಿಯು ಅಲೌಕಿಕವಾದದ್ದಿರುತ್ತದೆಂದು ಅವನಿಗೆ ತೋರಿತು. ಆದದರಿಂದ ಮೊದಲೇ ಒಳ್ಳೇ ಚನ್ನಾಗಿ ಕಲಿಯಲಾರಂಭಿಸಿದಂಥ ಜ್ಯೋತಿಃಶಾಸ್ತ್ರದ ಅಭ್ಯಾಸವನ್ನು ಪೂರ್ಣ ಮಾಡದೆ ಬಿಡಬೇಡೆಂದು ಆಕೆಗೆ ಅವನು ಆಗ್ರಹಪೂರ್ವಕವಾಗಿ ಹೇಳಿದನು.

ಅವರು ಅವನೆಡೆಗೆ ಪುನಃ ಪುನಃ ಹೋಗಹತ್ತಿದರು; ಅವನೂ ಅವರು ತನ್ನ ಬಳಿಗೆ ಬಂದ ಸರತಿಗೊಮ್ಮೆ ಹೆಚ್ಚೆಚ್ಚು ಅವರಿಗೆ ಮಾನಮಾಡಹತ್ತಿದನು. ಅವರು ಮೇಲೆ ಮೇಲೆ ತನ್ನ ದರ್ಶನಕ್ಕೆ ಬರಬೇಕೆಂತಲೂ ಬಂದನಂತರ ತನ್ನ ಹತ್ತರ ಬಹಳ ಹೊತ್ತು ಸಂಭಾಷಣ ಮಾಡುತ್ತ ಕೂಡ್ರಬೇಕೆಂತಲೂ, ಅವನು ತನ್ನ ಕೈಲಾದಮಟ್ಟಿಗೆ ಅವರ ಮನೋರಂಜನೆಯನ್ನು ಮಾಡಲಿಕ್ಕೆ ಯತ್ನಿಸಹತ್ತಿದನು. ಯಾಕಂದರೆ, ಅವರ ಸಮಾಗಮದಿಂದ ಏಕಾಂತವಾಸದಿಂದುಂಟಾದ ಆತನ ದುರ್ವಿಚಾರಗಳೆಲ್ಲ ದೂರಾಗಿ ಮನಸ್ತಾಪವು ಕಡಿಮೆಯಾಗಿ, ಮನಸ್ಸು ಉಲ್ಲಸಿತವಾಗಲಾರಂಭಿಸಿತು. ಅವರು ಅವನನ್ನು ಬಿಟ್ಟು ಹೋದ ಕೂಡಲೆ ಪುನಃ ಮಾಡಿಕೆಯು ಖುಕುನಿಯುವನದ ಕೆಲಸವನ್ನು ಮಾಡುವ ಹೊತ್ತು ಬಂತೆಂದು ಅವನಿಗೆ ಖೇದವಾಗಹತ್ತಿತು.

ಈ ವೇಳೆಗೆ ರಾಜಪುತ್ರರೂ ಪೆರ್ಕ್ಯೂಆ ದಾಸಿಯೂ ಎಷ್ಟೋ ತಿಂಗಳುಗಳವರೆಗೆ ಅವನ ಸಂಭಾಷಣಾವನ್ನು ಕೇಳುತ್ತಿದ್ದಾಗ್ಯೂ, ತನ್ನಲ್ಲಿ ಅವ್ಯಕ್ತ ಅಧಿಕಾರವು (ಸೂರ್ಯ ಚಂದ್ರ ಮುಂತಾಗಳನ್ನು ನಿಯಮನ ಮಾಡುವ ಶಕ್ತಿ) ಉಂಟೆಂಬ ತಿಳುವಳಿಕೆಯಿಂದ ಉದ್ಭವಿಸಿದ ಅವನ ಭ್ರಾಂತಿಯು ಮುಂಚಿನಂತೆಯೇ ಇರುವದೋ ಕಡಿಮೆಯಾಗಿರುವದೋ ಎಂಬ ಬಗ್ಗೆ ಅವನ ಬಾಯಿಂದ ಒಂದು ಅಕ್ಷರ ಸಹ ಹೊರಡಲೊಲ್ಲದು. ಅವನ ಬಾಯಿಂದ ಏನೂ ಹೊರಬೀಳದ್ದು ನೋಡಿ ಅವರು ಬೇಕೆಂದು ಅನೇಕ ಹಂಚಿಕೆಗಳನ್ನು ಹುಡುಕಿ, ಅವನ ಕೂಡ ಅದೇ ವಿಷಯದ ಬಗ್ಗೆ ಮಾತಾಡಲಾರಂಭಿಸಿದರು. ಆದರೆ ಅವನು ಅವರ ಎಲ್ಲ ಹಂಚಿಕೆಯೊಳಗಿಂದ ಪಾರಾಗಿ ಏನಾದರೊಂದು ಯುಕ್ತಿಯನ್ನು ಹೇಳಿ ಮಾತಿನ ಓಘವನ್ನು ಬೇರೊಂದು ವಿಷಯದ ಕಡೆಗೆ ಒಯ್ಯುತ್ತಿದ್ದನು.

ಅವರವರ ಸಲಿಗೆಯು ಹೆಚ್ಚೆಚ್ಚು ಆದಹಾಗೆ ಅವರು ಅವನನ್ನು ಇಮ್ಲಾಕನ ಮನೆಗೆ ಕರೆದುಕೊಂಡು ಬಂದು ಒಳ್ಳೇ ಸನ್ಮಾನಪೂರ್ವಕವಾಗಿ ಉಪಚರಿಸುವರು. ಬರಬರುತ್ತ ಲೌಕಿಕ (ಪ್ರಾಪಂಚಿಕ) ಸುಖಗಳಿಂದ ಅವನ ಮನಸ್ಸಿಗೆ ಆನಂದವಾಗಹತ್ತಿತು. ಅವನು ಇಮ್ಲಾಕನ ಮನೆಗೆ ಬಹು ಬೇಗ ಬಂದು ತಡಮಾಡಿ ತನ್ನ ಮನೆಗೆ ಹೋಗುವನು; ಒಳ್ಳೇ ಜಾಗ್ರತೆಯಿಂದಲೂ ವಿನಯದಿಂದಲೂ ಅವರ ಕೂಡ ನಡಕೊಳ್ಳುವನು; ತನ್ನ ಅವಶ್ಯಕತೆಯು ಅವರಿಗೆ ಯಾವಾಗಲೂ ಇರಬೇಕೆಂಬ ಉದ್ದೇಶದಿಂದ ಆತನು ಹೊಸ ಹೊಸ ಕಲಾಕೌಶಲ್ಯಗಳ ಜ್ಞಾನವನ್ನು ಅವರಿಗೆ ಮಾಡಿಕೊಡುವನು; ಅವರೆಲ್ಲರು ತಮ್ಮ ಮನರಂಜನೆಗಾಗಿ ಎಲ್ಲಾದರೂ ಹೊರಗೆ ತಿರುಗಾಡ ಹೋದರೆ ತಾನೂ ಅವರ ಕೂಡ ಹೋಗುವನು.

ರಾಜಪುತ್ರನೂ ರಾಜಕನ್ನಿಕೆಯೂ ಅವನು ಜಾಣನೂ, ಪ್ರಾಮಾಣಿಕನೂ ಇರುವನೆಂತಲೂ, ತಾವು ಅವನು ಹೇಳಿದ್ದನ್ನೆಲ್ಲ ನಿರಾತಂಕವಾಗಿ ನಂಬಬಹುದೆಂತಲೂ ಮನಗಂಡರು. ತಾವು ಅವನಿಗೆ ಮಿತಿಮೀರಿ ಮಾಡುವ ಮಾನದಿಂದ ಅವನ ಮನಸ್ಸಿನಲ್ಲಿ ಮಿಥ್ಯಾ ಆಶೆಗಳು (ವಿಪರೀತ ಕಲ್ಪನೆಗಳು) ಹುಟ್ಟ್ಯಾವೆಂದು ತಿಳಿದು ತಾವು ಯಾರಿರುವರು! ಅಲ್ಲಿಗೆ ಬಂದ ಕಾರಣವೇನೆಂಬದನ್ನು ಅವನಿಗೆ ಅರುಹಿ ಸಂಸಾರದೊಳಗೆ ಉತ್ತಮತರದ ಸ್ಥಿತಿ ಯಾವದಿರುವದು ಹೇಳಬೇಕೆಂದು ಅವನಿಗೆ ಬಿನ್ನವಿಸಿದರು.

ಆ ಜ್ಯೋತಿಷಿಯು ಅಂದನು.— "ಈ ಜಗತ್ತಿನಲ್ಲಿ ನಿಮಗೆ ಕಾಣಿಸುವ ಎಲ್ಲ ತರದ ಸಂಸಾರ ಸ್ಥಿತಿಗಳಲ್ಲಿ ಉತ್ತಮವಾದ ಸಂಸಾರ ಸ್ಥಿತಿಯು ಯಾವದೆಂಬದನ್ನು ನಾನು ನಿಮಗೆ ಹೇಳಲಾರೆನು. ನಾನು ಮಾತ್ರ ಬಹಳ ಕೆಟ್ಟಸ್ಥಿತಿಯನ್ನು ಅರಿ

ದ್ದೇನೆ. ನಾನು ವ್ಯರ್ಥವಾದ ಅಭ್ಯಾಸದಲ್ಲಿ ನನ್ನ ವೇಳೆಯನ್ನು ಕಳೆದಿದ್ದೇನೆ. ಆ ಅಭ್ಯಾಸದಿಂದ ನನಗೆ ಆಗತಕ್ಕಷ್ಟು ಅನುಭವಜ್ಞಾನವಾಗಲಿಲ್ಲ; ಸಂಸಾರಸಂಬಂಧಿಯು ಸಾಧಾರಣ ಸುಖಗಳಿಗೂ ಕೂಡ ಎರವಾಗಿ ನಾನು ಜ್ಞಾನಸಂಪಾದನ ಮಾಡಿದೆನು; ಸ್ತ್ರೀಸಮಾಗಮದಿಂದುಂಟಾಗುವ ಕೋಮಲವಾದ ಪ್ರೇಮಕ್ಕೂ, ಗೃಹಸುಖದಿಂದುಂಟಾಗುವ ಆನಂದಕ್ಕೂ ನಾನು ಎರವಾದೆನು. ಬೇರೆ ಪಂಡಿತರಿಗಿಂತ ನನಗೇನೂ ಹೆಚ್ಚು ಶಾಸ್ತ್ರಜ್ಞಾನವು ಆಗಿಲ್ಲ; ಒಂದುವೇಳೆ ಹೆಚ್ಚಿನ ಜ್ಞಾನವು ನನಗಾಗಿರುತ್ತದೆಂದು ಕಲ್ಪಿಸಿದರೆ ಆ ಜ್ಞಾನದಿಂದ ಅಂಜಿಕೆ, ಪುನಸ್ತಾಪ, ಸಂಶಯ ಮುಂತಾದ ಅನಿಷ್ಟಗಳು ನನಗೆ ಪ್ರಾಪ್ತವಾಗಿರುತ್ತವೆ; ಈಗ ನಾನು ಲೋಕವ್ಯವಹಾರಗಳಲ್ಲಿ ನನ್ನ ಮನಸು ಹಾಕಹತ್ತಿದ್ದಾರಭ್ಯ ನನ್ನ ಹೆಚ್ಚಿನ ಜ್ಞಾನವು ಕೇವಲ ಮಿಥ್ಯಾಜ್ಞಾನವಿರುವದೆಂದು ನಾನು ಮನಗಂಡಿರುವೆನು. ಇತ್ತಿತ್ತ ನಾನು ಸ್ವಚ್ಛಂದವೃತ್ತಿಯಿಂದ ನನ್ನ ವೇಳೆಯನ್ನು ಕಳೆಯಹತ್ತಿದಂದಿನಿಂದ ನಾನು ಅವಿಚಾರದ [ಮಿಥ್ಯಾ] ಶೋಧಗಳನ್ನು ಕೈಕೊಂಡು, ಸುಮ್ಮನೆ ಅಪರಿಮಿತ ದುಃಖಕ್ಕೆ ಗುರಿಯಾಗಿರುವೆನೆಂದು ನನಗೆ ತೋರಿ ಬಂದಿರುವದು."

ಈ ಮೇರೆಗೆ ಜ್ಯೋತಿಷಿಯ ಹುಚ್ಚು ತುಸುತುಸು ಕಡಿಮೆಯಾಗುತ್ತಿರುವದನ್ನು ನೋಡಿ ಇವಸ್ಲಾಕನಿಗೆ ಬಹಳ ಆನಂದವಾಯಿತು. ಋತು ನಿಯಮನ ಮಾಡುವ ಅಧಿಕಾರವು ತನ್ನಲ್ಲಿ ಉಂಟೆಂಬ ಆತನ ಬಯಲಭ್ರಾಂತಿಯು ಹೋಗುವವರೆಗೆ ಮತ್ತು ಆತನಿಗೆ ಆತನ ವಾಡಿಕೆಯ ವಿವೇಚನಶಕ್ತಿ [ವಿಚಾರಶಕ್ತಿ] ಪ್ರಾಪ್ತವಾಗುವವರೆಗೆ, ಗ್ರಹಗಳ ಬಗ್ಗೆ ವಿಚಾರಮಾಡಗೊಡಬಾರದೆಂದು ಇವಸ್ಲಾಕನು ನಿಶ್ಚಯಿಸಿದನು.

ಈ ಹೊತ್ತಿನಿಂದ ಆ ಜ್ಯೋತಿಷಿಯು ಅವರ ಜೀವದ ಗೆಳೆಯನಾದನು. ಅವರು ಆಡುವ ಆಟಗಳಲ್ಲಿಯೂ, ಅವರು ಯೋಚಿಸುವ ಯುಕ್ತಿಗಳಲ್ಲಿಯೂ ಅವನ ಅಂಗವಿರುತ್ತಿತ್ತು. ಅವರು ಅವನ ಮಾನವನ್ನು ಚನ್ನಾಗಿ ಕಾಯುತ್ತಿದ್ದರು. ರಾಸೆಲಾಸನಿಗೆ ಜ್ಞಾನಸಂಪಾದನೆಯ ಉತ್ಕಟೇಚ್ಛೆಯು ಇದ್ದದರಿಂದ ಅವನು ಒಂದಿಲ್ಲೊಂದು ವಿಷಯವನ್ನು ಆರಿಸಿ ಅದರ ಬಗ್ಗೆ ಆ ಪಂಡಿತನ ಅಭಿಪ್ರಾಯಗಳನ್ನು ಕೇಳುತ್ತಿದ್ದನು. ಆದದರಿಂದ ಅವರಿಗೆ ಹೊತ್ತೇಸಾಲುತ್ತಿದ್ದಿಲ್ಲ. ಯಾವಾಗಲೂ ಏನಾದರೊಂದು ಕೆಲಸ ಮಾಡುವದರಲ್ಲಿಯೇ ತೊಡಗಿರುತ್ತಿದ್ದರು. ಅವರು ಹೊಸ ಶೋಧಗಳನ್ನೂ, ಪದಾರ್ಥಗಳ ನಿರೀಕ್ಷಣವನ್ನೂ ಮಾಡಿ ಹಗಲು ಕಳೆಯುತ್ತಿದ್ದರು. ಹಗಲು ಮಾಡಿದ ಶೋಧದ ಬಗ್ಗೆ ವಿಚಾರಮಾಡುವದರಲ್ಲಿಯೂ

ಮರುದಿನದ ವಿಷಯಗಳನ್ನು ನಿಯಮಿಸುವದರಲ್ಲಿಯೂ, ರಾತ್ರಿಯನ್ನು ಕಳೆಯುತ್ತಿದ್ದರು. ಒಂದುದಿವಸ ಆ ಪಂಡಿತನು ಇಮ್ಲಾಕನಿಗೆ ಅಂದನು—“ನಾನು ಸಂಸಾರಿಕರೊಳಗೆ ಕೂಡಿಕೊಂಡು ಅವರ ಆನಂದವೃತ್ತಿಯನ್ನು ನೋಡುವದರಲ್ಲಿಯೂ, ನಾನಾತರದ ವಿನೋದದ ಆಟಗಳನ್ನು ಆಡುವದರಲ್ಲಿಯೂ ನನ್ನ ಇಡೀ ದಿವಸವನ್ನು ಕಳೆಯುಹತ್ತಿದಂದಿನಿಂದ, ಸೃಷ್ಟಿಯ ಮೂಲತತ್ವಗಳು ನನ್ನ ಅಂಕಿತದಲ್ಲಿರುತ್ತವೆಂಬ ಒಗ್ಗೆ ನನಗೆ ಇದುವರೆಗೆ ಇದ್ದ ಭ್ರಾಂತಿಯು ಕ್ರಮೇಣ ಕಡಿಮೆಯಾಗಹತ್ತಿದೆ. ಸೂರ್ಯಚಂದ್ರರ ಹಾಗು ಋತುಗಳ ನಿಯಮನ ಮಾಡುವ ಅಧಿಕಾರವು ನನ್ನಲ್ಲಿರುತ್ತದೆಂಬ ಸಂಗತಿಯನ್ನು ಪ್ರತ್ಯಕ್ಷ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸಲಿಕ್ಕೆ ಬರುವಂತೆ ಇಲ್ಲದಿದ್ದಾಗ್ಯೂ, ವಿಚಾರಶಕ್ತಿಗೆ ಕೇವಲ ವಿಪರೀತವಾಗಿ ತೋರುವಂತಿದ್ದಾಗ್ಯೂ ಆ ಅಧಿಕಾರವು ನಿಶ್ಚಯವಾಗಿ ನನ್ನಲ್ಲುಂಟೆಂಬ ನನ್ನ ಗ್ರಹಿಕೆಯು ಒಳ್ಳೇ ದೃಢವಾಗಿತ್ತು. ಆ ಗ್ರಹಿಕೆಯು ಈಗ ತುಸು ಕಡಿಮೆಯಾಗಹತ್ತಿದೆ. ಆದರೂ ಒಮ್ಮೊಮ್ಮೆ ನಾನು ಒಬ್ಬನೇ ಕುಳಿತೆನೆಂದರೆ ಪುನಃ ನನ್ನ ಮುಂಚಿನ ವಿಚಾರಗಳೆಲ್ಲ ನನ್ನ ಮನಸ್ಸಿನೊಳಗೆ ಬಂದು, ನನ್ನ ವಿವೇಚನಶಕ್ತಿಯು ಕುಂಠಿತವಾಗುತ್ತದೆ. ಅಷ್ಟರಲ್ಲಿ ರಾಜಪುತ್ರನು ನನ್ನ ಕೂಡ ಸಂಭಾಷಣ ಮಾಡಹತ್ತಿದರೆ ಇಲ್ಲವೆ ಪೇಕ್ಯೂಆ ನನ್ನ ಬಳಿಗೆ ಬಂದರೆ ಮತ್ತೆ ಆ ವಿಚಾರಗಳೆಲ್ಲ ನಾಶವಾಗುತ್ತವೆ. ದೆವ್ವಕ್ಕೆ ಅಂಜುವವನ ಸ್ಥಿತಿಯಂತೆ ನನ್ನ ಸ್ಥಿತಿಯಿರುತ್ತದೆ. ಅವನು ರಾತ್ರಿ ದೀಪವಿದ್ದದ್ದುಂಟಾದರೆ ಅಂಜುವದಿಲ್ಲ; ಕತ್ತಲೆಯಾಯಿತೆಂದರೆ ದೆವ್ವಗಳುಂಟೆಂಬ ಗ್ರಹಿಕೆಯು ಅವನಿಗಾಗಿ ಅವನು ಅಂಜುತ್ತಾನೆ; ಪುನಃ ದೀಪಹಚ್ಚಿದರೆ ಅವನ ಅಂಜಿಕೆಯು ಹೋಗುತ್ತದೆ. ದೀಪವಿದ್ದಾಗ ಅಂಜಿಕೆ ಯಾಕೆ ಬರುವದಿಲ್ಲ? ದೀಪ ಇಲ್ಲದಾಗ ಅಂಜಿಕೆ ಯಾಕೆ ಬರುತ್ತದೆಂಬ ಬಗ್ಗೆ ಅವನದು ಅವನಿಗೇ ಅರಿದಾಗುತ್ತದೆ. ಅದರಂತೆಯೇ ನಾನೊಬ್ಬನೇ ಆದೆನೆಂದರೆ ನನ್ನ ಮೊದಲಿನ ವಿಚಾರಗಳು ನನ್ನ ಮನಸ್ಸಿನಲ್ಲಿ ಬರುತ್ತವೆ; ನಾಲ್ಕುಜನರೊಳಗೆ ಕೂತರೆ ಆ ವಿಚಾರಗಳು ಬರುವದಿಲ್ಲ. ಒಮ್ಮೊಮ್ಮೆ ನಾನು ನನಗೆ ಒಪ್ಪಿಸಿದಂಥ ಮಹತ್ವವಾದ ಕೆಲಸವನ್ನು ಮಾಡುವದರಲ್ಲಿ ಸೋಮಾರಿಯಾಗಿ, ಬೇಕೆಂದು ಆ ಕೆಲಸ ಮಾಡುವವನ್ನು ಮರೆತು ಕೂತೆನೆಂಬ ದೊಡ್ಡ ಅಪರಾಧಕ್ಕೆ ಗುರಿಯಾಗುವೆನೋ ಏನೋ ಎಂಬ ಬಗ್ಗೆ ಸಂಶಯ ಬರುತ್ತದೆ. ಒಂದು ಸಂಗತಿಯು ಸುಳ್ಳಿರುತ್ತದೆಂದು ನನಗೆ ಗೊತ್ತಿದ್ದರೂ, ನನ್ನ ಅನುಕೂಲತೆಯ ಸಲುವಾಗಿ ಅದು ನಿಜವಾದದ್ದೇ ಇರುತ್ತದೆಂದು ನಾನು ತಿಳಿದರೆ, ಇಲ್ಲವೆ ಗ್ರಹಗಳ ನಿಯಮನ ಮಾಡುವ ಅಧಿಕಾರವು ನನ್ನಲ್ಲುಂಟೋ ಇಲ್ಲವೋ ಎಂಬ ಬಗ್ಗೆ ಸಂಶಯವಿದ್ದಾಗ್ಯೂ ನಾನು

ಸ್ವಾರ್ಥಬುದ್ಧಿಯಿಂದ ಆ ಅಧಿಕಾರವು ನಿಶ್ಚಯವಾಗಿ ನನ್ನಲ್ಲುಂಟೆಂದು ಗ್ರಹಿಸಿದರೆ ಎಂಥ ಭಯಂಕರವಾದ ಅಪರಾಧವನ್ನು ಮಾಡಿದಂತಾಗುವದು!"

ಇವಲ್ಲಾಕನು ಉತ್ತರಕೊಟ್ಟನು—"ಮನುಷ್ಯನಿಗೆ ಇರುವ ಸಕಲ ವ್ಯಾಧಿಗಳಲ್ಲಿ ಮನೋವ್ಯಾಧಿ ( Imagination ) ಇಲ್ಲವೆ ಮನಃಪೂತಕಲ್ಪನೆ–ಎಂಬ ರೋಗವು ಹೆಚ್ಚಿನದು. ಯಾವ ವೈದ್ಯನೂ ಈ ರೋಗವನ್ನು ವಾಸಿಮಾಡಲಾರನು. ಇನ್ನು ಮನುಷ್ಯನಿಗೆ ತಾನು ಒಂದು ದೊಡ್ಡ ಅಪರಾಧವನ್ನು ಮಾಡಿರುವೆನೆಂಬ ತಿಳುವಳಿಕೆಯಿಂದ ಒಡಗೂಡಿದ ಮನೋವ್ಯಾಧಿ ಉಂಟಾದರಂತೂ ತೀರಲೇ ಹೋಯಿತು, ಅಶ್ವಿನೀಕುಮಾರರು ಸಹ ಆ ರೋಗವನ್ನು ನೆಟ್ಟಗೆ ಮಾಡಲಾರರು. ಈ ತರದ ಮನೋವಿಕಾರವು ಉಂಟಾಯಿತೆಂದರೆ, ಕಲ್ಪನೆಯೂ, ಸದಸದ್ವಿವೇಕಶಕ್ತಿಯೂ, ಒಂದರಹಿಂದೊಂದು ಎಡೆಬಿಡದೆ ತೊಂದರೆ ಕೊಡಲಾರಂಭಿಸುತ್ತವೆ.* ಕಲ್ಪನೆಯ ಮೋಹಜಾಲಗಳು ಯಾವವು? ಸದಸದ್ವಿವೇಕ ಬುದ್ಧಿಯ ಆಜ್ಞೆಗಳು ಯಾವವು? ಎಂಬದು ನಮಗೆ ತಿಳಿಯುವದಿಲ್ಲ. ಧರ್ಮಕ್ಕೂ, ನೀತಿಗೂ ವಿರುದ್ಧವಾದ ಕಲ್ಪನೆಗಳು ಹುಟ್ಟಿ, ಮನಸ್ಸಿಗೆ ತೊಂದರೆ ಕೊಡಲು ಯತ್ನಿಸಿದರೆ, ಮನಸ್ಸು ಆ ಕಲ್ಪನೆಗಳಿಗೆ ತನ್ನಲ್ಲಿ ಸ್ಥಾನವನ್ನು ಕೊಡುವದಿಲ್ಲ. ಆದರೆ ಆ ಕಲ್ಪನೆಗಳು ಕರ್ತವ್ಯದೋಪಾದಿಯಲ್ಲಿ ಮನಸ್ಸಿಗೆ ಭಾಸವಾದರೆ, ಅವು ಉದಾಸೀನವಾದ (ದುಃಖದಾಯಕ) ಕಲ್ಪನೆಗಳಿದ್ದಾಗ್ಯೂ ಮನಸ್ಸು ಅವುಗಳನ್ನು ದೂರ ಮಾಡಲರಿಯದು. ಯಾಕಂದರೆ, ಕರ್ತವ್ಯಪರಾಙ್ಮುಖತೆಯಿಂದುಂಟಾಗುವ ದೋಷಕ್ಕೆ ನಮ್ಮ ಮನಸ್ಸು ಅಂಜುತ್ತದೆ. ( ನಾವು ಅಂಜುತ್ತೇವೆ. ) ಇದೇ ಕಾರಣದಿಂದ ಮೂಢಶ್ರದ್ಧೆ

---

* ಮನಃಪೂತ ಕಲ್ಪನೆಯಿಂದ ನನ್ನ ಮನಸ್ಸಿನಲ್ಲಿ ಒಂದು ತರದ ವಿಚಾರತರಂಗಗಳು ಹುಟ್ಟಿದವೆಂದು ಕಲ್ಪಿಸಿರಿ. ನಾನು ಒಬ್ಬ ದೊಡ್ಡ ಅರಸನಿರುವೆನು; ನಾನು ಸದ್ಗುಣಿಯಾಗಿರುವೆನು; ನನ್ನ ರಾಜ್ಯವು ಇನ್ನೂ ಸಣ್ಣದದೆ; ಅದನ್ನು ಬೆಳಸಬೇಕು. ಮುಂತಾದ ಸುಖಮಯವಾದ ವಿಚಾರಗಳು ಬರುವದರೊಳಗಾಗಿ ನನಗೆ ಏನಾದರೊಂದು ಕಾರಣದಿಂದ ಮೈಮೇಲೆ ಸಾಸ್ಯರೆಂಬ ಬಗ್ಗೆ ಸ್ಮೃತಿಬಂದರೆ, ಸದಸದ್ವಿವೇಕಶಕ್ತಿಯು ನನ್ನ ಸುಖಮಯವಾದ ವಿಚಾರಗಳನ್ನು ಹೋಗಲಾಡಿಸಿತೆಂಬ ಬಗ್ಗೆ ಮನಸ್ಸಿಗೆ ವ್ಯಸನವಾಗುವದು; ಪುನಃ ವ್ಯಸನವಾಗುವಷ್ಟರಲ್ಲಿಯೇ ಆ ವಿಚಾರತರಂಗಗಳು ಬಂದರೆ ಮತ್ತೆ ಸುಖವಾಗುವದು. ಇದೇ ಮೇರೆಗೆ ಒಮ್ಮೊಮ್ಮೆ ಮನಸ್ಸಿನಲ್ಲಿ ಅಮಂಗಲವಾದ ಕಲ್ಪನೆಗಳು ಬಂದರೆ ಮನಸ್ಸಿಗೆ ದುಃಖವಾಗುತ್ತದೆ; ಅಷ್ಟರಲ್ಲಿ ವಿಚಾರಶಕ್ತಿಯುಂಟಾದರೆ, ಸುಳ್ಳೇ ನಾನು ದುಃಖಪಟ್ಟೆನೆಂದು ತಿಳಿದು ಸಮಾಧಾನವಾಗುತ್ತದೆ. ಅಂದ ಮೇಲೆ ಕಲ್ಪನೆಯಿಂದ ಒಮ್ಮೊಮ್ಮೆ ಸುಖವಾಗುತ್ತದೆ, ಒಮ್ಮೊಮ್ಮೆ ದುಃಖವಾಗುತ್ತದೆಂಬದು ಸ್ಪಷ್ಟವದೆ. ಭಾ. ಕ.

ಯುಳ್ಳ ಜನರು ಉದಾಸೀನರಾಗಿರುತ್ತಾರೆ; ಮತ್ತು ಔದಾಸೀನ್ಯವುಳ್ಳ ಜನರು ಪ್ರಾಯಶಃ ಮೂಢಭಕ್ತಿಯುಳ್ಳವರಾಗಿರುತ್ತಾರೆ. ”

“ಆದರೆ ಕೇವಲ ಅಂಜಿಕೆಯಿಂದ ನಿಮ್ಮ ಮನಸ್ಸಿನಲ್ಲಿ ಬರುವ ವಿಚಾರಗಳಿಂದ ನಿಮ್ಮ ವಿವೇಚನಶಕ್ತಿಯನ್ನು ಕಳೆದುಕೊಂಡು ಭ್ರಾಂತರಾಗಬೇಡಿರಿ. ನಮಗೆ ನಿಯಮಿಸಿದ ಕರ್ತವ್ಯವನ್ನು ನಾವು ಮಾಡದಿದ್ದರೆ ಮಾತ್ರ ನಾವು ದೋಷಕ್ಕೆ ಪಾತ್ರರಾಗುವೆವು; ಮತ್ತು ಸೃಷ್ಟಿಯ ನಿಯಮನದ ಸಂಬಂಧಿ ಮನುಷ್ಯನ ಕರ್ತವ್ಯವು ತೀರ ತುಸು ಇರುತ್ತದೆ. ವಿಚಾರಮಾಡಿ ನೋಡಿದರೆ ಅಷ್ಟು ಸಹ ಇಲ್ಲೆಂದು ನೀವು ಮನಗಾಣುವಿರಿ. ನೀವು ಕಲ್ಪನಾತರಂಗಗಳಲ್ಲಿ ನಿಮಗ್ನರಾಗಿರುವಾಗ, ನಡುನಡುವೆ ನಿಮಗೆ ವಿವೇಚನ ಶಕ್ತಿಯು ಭಾಸವಾಗುತ್ತದಷ್ಟೇ; ಆ ವಿವೇಚನ ಶಕ್ತಿಯನ್ನು ದೃಢಗೊಳಿಸಿರಿ; ಮಿಥ್ಯಾ ಕಲ್ಪನೆಗಳಲ್ಲಿ ಮುಳುಗಿ ಆ ಶಕ್ತಿಯನ್ನು (ಸದಸದ್ವಿವೇಕ ಬುದ್ಧಿಯನ್ನು) ಹೋಗಲಾಡಿಸಬೇಡಿರಿ. ನಿಮ್ಮದು ನಿಮಗೇ ಅಸತ್ಯವೆಂದು ಭಾಸವಾಗುವಂಥ ಸಂಶಯಯುಕ್ತ ವಿಚಾರಗಳು ನಿಮ್ಮ ಮನಸ್ಸಿನಲ್ಲಿ ಬಂದರೆ ಆ ವಿಚಾರಗಳ ಖಂಡನಮಂಡನ ಮಾಡುವ ಗೋಜಿಗೆ ಹೋಗದೆ, ಕೂಡಲೆ ಬೇರೊಂದು ಕೆಲಸವನ್ನು ಮಾಡತೊಡಗಿರಿ; ಇಲ್ಲವೆ ಪೇಕ್ಯೂಆ ದಾಸಿಯು ಕೂಡ ಮಾತಾಡಲಾರಂಭಿಸಿರಿ. ಇಡೀ ಮನುಷ್ಯಜಾತಿಗೆ ನಿಮ್ಮನ್ನು ಸರಿಹಚ್ಚಿ ನೋಡಿದರೆ ನೀವು ಕೇವಲ ರಜಃಕಣದೋಪಾದಿಯಲ್ಲಿರುವಿರಿ; ಸೃಷ್ಟಿ ನಿಯಮನವನ್ನು ಮಾಡುವಂಥ ಅಲೌಕಿಕ ಅಧಿಕಾರವು ನಿಮಗೆ ಬರಬೇಕಾದರೆ ನಿಮ್ಮಲ್ಲಿ ಅಂಥ ಅಸಾಧಾರಣವಾದ ಯೋಗ್ಯತೆ ಇಲ್ಲೆಂಬದನ್ನೂ, ಇಲ್ಲವೆ ಮನುಷ್ಯನಿಗೆ ಸಹಿಸಲಸಹ್ಯವಾದ ದುಃಖವನ್ನು ಅನುಭೋಗಿಸಬೇಕಾದರೆ ನಿಮ್ಮಲ್ಲಿ ಅಂಥ ದುರ್ಗುಣವು ಇಲ್ಲೆಂಬದನ್ನೂ ಚನ್ನಾಗಿ ಲಕ್ಷದಲ್ಲಿಡಿರಿ. ”

## ನಾಲ್ವತ್ತೇಳನೆಯ ಭಾಗವು.

### ರಾಜಪುತ್ರನು ಒಂದು ಬೇರೊಂದು ವಿಷಯದ ಬಗ್ಗೆ ಸಂಭಾಷಣ ಮಾಡಿದ್ದು.

ಜ್ಯೋತಿಷಿಯು ಅಂದನು “ ಈ ಎಲ್ಲ ವಿಚಾರಗಳು ನನ್ನ ಮನಸ್ಸಿನಲ್ಲಿ ಎಷ್ಟೋ ಆವರ್ತಿ ಬಂದು ಹೋಗಿವೆ; ಆ ವಿಚಾರಗಳ ಬಗ್ಗೆ ಹಲವು ತರದ ನಿರ್ಣಯಗಳನ್ನು ಮಾಡಿದ್ದೇನೆ. ಆದರೆ ನನ್ನ ವಿವೇಚನಶಕ್ತಿಯು ಅನಿವಾರ್ಯವಾದಂಥ, ಅಸಹ್ಯವಾದಂಥ ವಿಚಾರತರಂಗಗಳಿಂದ ಮಲಿನವಾಗಿ ಹೋದದರಿಂದ, ನಾನು

ಮಾಡುವ ನಿರ್ಣಯಗಳಲ್ಲಿ ಸತ್ಯವಾದದ್ದು ಯಾವದು? ಅಸತ್ಯವಾದದ್ದು ಯಾವದೆಂಬದು ನನಗೆ ತಿಳಿಯುತ್ತಿದ್ದಿಲ್ಲ. ನಾನು ಏಕಾಂತವಾಸವನ್ನು ಸ್ವೀಕರಿಸಿ, ಇಲ್ಲದ ಮನೋರಾಜ್ಯಗಳನ್ನು ರಚಿಸಿ, ವ್ಯರ್ಥ ನನ್ನ ಶಾಂತತೆಯ ಭಂಗವನ್ನು ಮಾಡಿಕೊಂಡಿದ್ದೇನೆ. ಏಕಾಂತವಾಸದಲ್ಲಿದ್ದವರು ಉದಾಸೀನರಾಗಿರುತ್ತಾರೆ, ಉದಾಸೀನ ಮನಸ್ಸುಳ್ಳವರು ತಮಗಾದ ದುಃಖಗಳನ್ನು ಪರರಿಗೆ ಹೇಳಲಿಕ್ಕೆ ಹಿಂಜರಿಯುತ್ತಾರೆ. ಆದರೆ ನಾನು ನನಗಾಗುವ ದುಃಖಗಳನ್ನು ಬೇರೆ ನನ್ನ ಹಿತಚಿಂತಕರಿಗೆ ಹೇಳಲಿಕ್ಕೆ ಯಾವಾಗಲೂ ಸಿದ್ಧನಿದ್ದೇನೆ; ಯಾಕಂದರೆ, ತನಗಾದ ದುಃಖಗಳನ್ನು ಮಿತ್ರರಿಗೆ ಹೇಳುವದರಿಂದ ಒಂದುತರದ ಸಮಾಧಾನವಾಗುತ್ತದೆಂಬದನ್ನು ನಾನು ಬಲ್ಲೆನು. ಆದರೆ ಇದುವರೆಗೆ ನನಗೆ ಅಂಥ ಮಿತ್ರರೇ ಸಿಕ್ಕಿದ್ದಿಲ್ಲ, ಈಗ ನನ್ನ ವಿಚಾರಗಳಂತೆಯೇ ವಿಚಾರಗಳುಳ್ಳ ನೀನು ನನಗೆ ದೈವಯೋಗದಿಂದ ಸಿಕ್ಕಿರುವಿ. ನೀನು ಯಾರಿಂದಲೂ ಮೋಸ ಹೋಗತಕ್ಕವನಲ್ಲ; ಬೇರೆಯವರನ್ನು ಮೋಸಗೊಳಿಸುವ ಉದ್ದೇಶವೂ ನಿನ್ನದಿಲ್ಲ. ಇನ್ನುಮೇಲೆ ಕಾಲಾಂತರದಿಂದ ಇದುವರೆಗೆ ಇದ್ದ ನನ್ನ ಭ್ರಾಂತಿಯು ಹೋಗಿ, ನನ್ನ ಖಿನ್ನತೆಯು ಕಡಿಮೆಯಾಗಿ, ನನ್ನ ಉಳಿದ ಆಯುಷ್ಯವು ಸಮಾಧಾನದಿಂದ ಹೋದೀತೆಂದು ನಾನು ಆಶಿಸುತ್ತೇನೆ."

ಇಮ್ಲಾಕನು ಅಂದನು— "ನೀವು ವಿದ್ವಾಂಸರೂ ಸದಾಚಾರಿಗಳೂ ಇರುವದರಿಂದ ನಿಮ್ಮ ಇಚ್ಛೆಯ ಮೇರೆಗೆ ನಿಶ್ಚಯವಾಗಿ ಸುಖವಾಗುವದೆಂಬದಕ್ಕೇನೂ ಸಂದೇಹವಿಲ್ಲ."

ಈ ಮೇರೆಗೆ ಸಂಭಾಷಣವು ನಡೆದಿರಲು, ರಾಸೆಲಾಸನೂ, ರಾಜಪುತ್ರಿಯೂ, ಪೇಕ್ಯೂಆ ದಾಸಿಯೂ ಬಂದ. ನಾಳಿನ ಮನೋರಂಜನಕ್ಕಾಗಿ ಯಾವ ಹೊಸ ಯುಕ್ತಿಯನ್ನು ಯೋಚಿಸಿರುವಿರಿ? ಎಂದು ಕೇಳಿದರು. ನಿಕಾಯಾ ರಾಜಪುತ್ರಿಯು ಅಂದಳು— "ಎಲ್ಲ ಮನುಷ್ಯರು ಸ್ಥಿತ್ಯಂತರದ ಅಪೇಕ್ಷೆಯನ್ನು ಮಾಡುತ್ತಾರೆ. ವಿದ್ಯಮಾನ ಸ್ಥಿತಿಯಿಂದ ಯಾವನಿಗೂ ಸುಖವಾಗುವದಿಲ್ಲ; ತನಗೆ ಇದ್ದ ಸ್ಥಿತಿಯು ಹೋಗಿ, ಬೇರೊಂದು ಸ್ಥಿತಿಯು ಪ್ರಾಪ್ತವಾದರೆ ಅದರಿಂದ ಅಪರಿಮಿತ ಆನಂದವಾಗುವದೆಂದು ಮನುಷ್ಯನು ತಿಳಿಯುತ್ತಾನೆ. ಆದರೆ ಸ್ಥಿತ್ಯಂತರವಾದ ಮೇಲಾದರೂ ಆತನಿಗೆ ಆನಂದವಾಗುತ್ತದೇನು? ಛೆ, ಎಂದೂ ಇಲ್ಲ; ಪುನಃ ಸ್ಥಿತ್ಯಂತರದ ಅಪೇಕ್ಷೆಯು ಇದ್ದೇ ಇರುತ್ತದೆ. ನಾನು ಇನ್ನೂ ಜಗತ್ತಿನೊಳಗಿನ ಯಾವತ್ತೂ ಒಡವೆಗಳನ್ನು ನೋಡಿಲ್ಲ. ಆದದರಿಂದ ನಾನು ಇದುವರೆಗೆ ನೋಡದೆ ಇದ್ದಂಥ ಒಡವೆಯನ್ನು ನೀವು ನಾಳೆ ನನಗೆ ತೋರಿಸಿದರೆ ನನಗೆ ಆನಂದವಾಗುವದು."

ರಾಸೆಲಾಸನು ಅಂದನು—"ಮನುಷ್ಯನ ಸಮಾಧಾನಕ್ಕೆ ವೈಚಿತ್ರ್ಯವೇ ಬೇಕೇ ಬೇಕು. ನೋಡಿರಿ! ಯಾವತ್ತು ತರದ ಆದರೆ ಒಂದೇ ಮಾದರಿಯ ಸುಖೋಪಭೋಗಗಳಿಂದ ಪರಿಪೂರ್ಣವಾದ ಆನಂದಗೃಹವು (Happy valley) ಸಹ ನನಗೆ ಬೇಸರವಾಯಿತು; ಯಾಕಂದರೆ, ಅಲ್ಲಿ ವೈಚಿತ್ರ್ಯವಿದ್ದಿಲ್ಲ. ಆದರೆ ಸೆಂಟ ಆಂಥೋನಿ ಎಂಬ ಮಠದಲ್ಲಿರುವ ಜೋಗಿಗಳು ತಮ್ಮ ಇಡೀ ಆಯುಷ್ಯವನ್ನು ಒಂದೇತರದ ಸುಖದಲ್ಲಿ ಅಲ್ಲ, ಆದರೆ ಕಷ್ಟದಲ್ಲಿ ಸಹ ಒಳ್ಳೇ ಸಮಾಧಾನದಿಂದ ಕಾಲ ಕಳೆಯುವದನ್ನು ನೋಡಿ, ಸುಖಪರಿಪೂರ್ಣವಾದ ಆನಂದಗೃಹಕ್ಕೆ ಸಹ ನಾನು ಬೇಸತ್ತದ್ದು ಕೇವಲ ನನ್ನ ದಡ್ಡತನವೆಂದು ನನಗೆ ಕಂಡುಬಂದು ನನ್ನನ್ನು ನಾನೇ ಹಳಿದುಕೊಂಡೆನು."

ಇಮ್ಲಾಕನು ಅಂದನು— "ಸುಖದಿಂದ ತುಂಬಿದಂಥ ಆನಂದಗೃಹದಲ್ಲಿರುವ ಅಬಿಸೀನಿಯದ ರಾಜಪುತ್ರರಿಗಿಂತಲೂ ಆ ಜೋಗಿಗಳು ತಮ್ಮ ಮಠದಲ್ಲಿ ಹೆಚ್ಚು ಆನಂದದಿಂದ ಇರುತ್ತಾರೆ. ಅವರು ಪ್ರತಿಯೊಂದು ಕೆಲಸವನ್ನು ಸದುದ್ದೇಶದಿಂದಲೇ ಮಾಡುತ್ತಾರೆ. ಅವರು ತಮಗೆ ಅವಶ್ಯವಾದ ಯಾವತ್ತು ಒಡವೆಗಳನ್ನು ಸ್ವಂತ ಶ್ರಮದಿಂದ ದೊರಕಿಸಿಕೊಳ್ಳುತ್ತಾರೆ; ಆದದರಿಂದ ಶ್ರಮಮಾಡಲಿಕ್ಕೆ ಅವರು ಬೇಸರುವದಿಲ್ಲ; ಮತ್ತು ಅವರ ಶ್ರಮಕ್ಕೆ ತಕ್ಕ ಫಲವು ಅವರಿಗೆ ತಪ್ಪದೆ ಸಿಗುತ್ತದೆ. ಅವರು ಒಳ್ಳೇ ಭಕ್ತಿನಿಷ್ಠರಾಗಿ ತಮ್ಮಲ್ಲಿ ಹೆಚ್ಚಿನ ಯೋಗ್ಯತೆಯನ್ನು ತಂದುಕೊಳ್ಳುವದಕ್ಕೆ ಸಿದ್ಧರಾಗಿರುತ್ತಾರೆ. ಅವರು ತಮ್ಮ ವೇಳೆಯ ವಿಭಾಗವನ್ನು ಬಹು ಸರಸಾಗಿ ಮಾಡುತ್ತಾರೆ; ಒಂದು ಕೆಲಸವು ಮುಗಿಯುವದರೊಳಗಾಗಿಯೇ ಮತ್ತೊಂದು ಕೆಲಸಮಾಡುವ ವೇಳೆಯು ಬಂದೊದಗಿರುತ್ತದೆ. ಅದರಿಂದ ನಿರರ್ಥಕವಾದ ಕಲ್ಪನಾತರಂಗಗಳಲ್ಲಿಯೂ, ಸೋಮಾರಿತನದಲ್ಲಿಯೂ ಹೊತ್ತುಕಳೆಯುವ ಪ್ರಸಂಗವು ಅವರಿಗೆ ಬರುವದಿಲ್ಲ. ನಿಯಮಿತ ವೇಳೆಗೆ ನಿಯಮಿತ ಕೆಲಸಮಾಡತಕ್ಕದ್ದೆಂಬ ನಿರ್ಣಯವನ್ನು ಮಾಡಿರುತ್ತಾರೆ; ಮತ್ತು ಆ ಕೆಲಸವನ್ನು ಆ ವೇಳೆಯಲ್ಲಿ ಒಳ್ಳೇ ಆನಂದದಿಂದ ಮಾಡುತ್ತಾರೆ. ಯಾಕಂದರೆ, ತಾವು ಯಾವಾಗಲೂ ಸತ್ಕರ್ಮಗಳನ್ನೇ ಮಾಡುತ್ತಿರುವದರಿಂದ ತಮಗೆ ಅಕ್ಷಯವಾದ ಸುಖಪ್ರಾಪ್ತಿಯು ನಿಶ್ಚಯವಾಗಿ ಆಗುವದೆಂದು ಅವರಿಗೆ ದೃಢವಾದ ನಂಬಿಗೆ ಇರುತ್ತದೆ."

ನಿಕಾಯಾ ಅಂದಳು— "ವಾನಪ್ರಸ್ಥಾಶ್ರಮಿಗಳ ನಿಯಮವು ಗೃಹಸ್ಥಾಶ್ರಮಿಗಳ ನಿಯಮಕ್ಕಿಂತಲೂ ಹೆಚ್ಚು ಪವಿತ್ರವಾದದ್ದೂ, ಪೂರ್ಣವಾದದ್ದೂ ಇರುತ್ತದೆಂದು ನೀವು ತಿಳಿಯುತ್ತೀರೋ? ಅಂದರೆ ವಾನಪ್ರಸ್ಥನಾಗಿ, ಮಠದಲ್ಲಿ ವಾಸಮಾಡಿ, ವ್ರತಪಾಲನ ಮಾಡುವದೇ ಶ್ರೇಯಸ್ಕರವು; ಗೃಹಸ್ಥಾಶ್ರಮಿಯಾಗಿರುವದು

ಶ್ರೇಯಸ್ಕರವಲ್ಲೆಂದು ನಿಮ್ಮ ಅಭಿಪ್ರಾಯವುಂಟೊ? ವಾನಪ್ರಸ್ಥಾಶ್ರಮಿಯು ಗೃಹಸ್ಥನಂತೆ ಅಂತಃಕರಣಪೂರ್ವಕವಾಗಿ ಜನರಿಗೆ ಉಪದೇಶ ಮಾಡಿದರೆ, ವಿಪದ್ಗ್ರಸ್ಥರಿಗೆ ದಾನಧರ್ಮ ಮಾಡಿದರೆ, ಅಜ್ಞಾನಿಗಳಿಗೆ ಜ್ಞಾನದಾನ ಮಾಡಿದರೆ, ತನ್ನ ಉದ್ಯೋಗದಿಂದ ಸಂಸಾರಿಕರಿಗೆ ಸಹಾಯ ಮಾಡಿದರೆ, ಮೋಕ್ಷಸಾಧನ ಮಾಡಿಕೊಂಡಂತೆ ಆಗಲಿಕ್ಕಿಲ್ಲವೋ? ಇನ್ನು ಹೀಗೆ ಮಾಡುವದರಿಂದ ಏಕಾಂತದಲ್ಲಿ ಆತನು ಮಾಡುವ ಕೆಲವು ಶಮದಮಾದಿ ಸದ್ಗುಣಗಳನ್ನು ಬಿಡಬೇಕಾಗುತ್ತದೆ. ಆದರೆ ಅದಕ್ಕೆ ಬದಲಾಗಿ ಆತನ ಸ್ಥಿತಿಗನುಸರಿಸಿ ಆತನಿಗೆ ಅನಪಕಾರವಾದ ಆನಂದಗಳಾಗುತ್ತವೆ."

ಇಮ್ಲಾಕನು ಅಂದನು—"ಈ ಬಗ್ಗೆ ವಿದ್ವಾಂಸರ ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುತ್ತವೆ; ಸದಾಚಾರವುಳ್ಳ ಜನರೂ ಕೂಡ, ನಿರ್ಣಯಮಾಡುವಾಗ್ಗೆ ಭ್ರಾಂತರಾಗಿರುತ್ತಾರೆ. ಆದದರಿಂದ ಇದರ ವಿಷಯಕ್ಕೆ ನಾನು ನಿಶ್ಚಯಾತ್ಮಕವಾಗಿ ಏನೂ ಹೇಳಲಾರೆನು. ಜಗತ್ತಿನಲ್ಲಿ ಗೃಹಸ್ಥನಾಗಿದ್ದು ಸನ್ಮಾರ್ಗದಿಂದ ಸಂಸಾರ ಮಾಡುವವನು ಮಠದಲ್ಲಿರುವ ಸನ್ಯಾಸಿಗಿಂತಲೂ ಶ್ರೇಷ್ಠನು; ಯಾಕಂದರೆ, ಸಂಸಾರ ಪಾಶದೊಳಗೆ ಸಿಕ್ಕು, ಮೋಹಜಾಲಗಳಿಗೆ ಲುಬ್ಧನಾಗದವನು ಬಹಳ ಅಪರೂಪ. ಸಂಸಾರದಲ್ಲಿದ್ದು ಮನೋವಿಕಾರಗಳನ್ನು ಗೆಲ್ಲುವದು ಯಾವನಿಂದಾಗುವದಿಲ್ಲವೋ ಅವನು ಸಂನ್ಯಾಸಿಯಾಗುವದು ಹೆಚ್ಚು ಒಳ್ಳೇದು. ಎಷ್ಟೋ ಜನರಿಗೆ ಪರಹಿತ ಮಾಡುವಷ್ಟು ಶಕ್ತಿ ಇರುವದಿಲ್ಲ; ಮತ್ತು ಪರರು ಅಪಕಾರ ಮಾಡಿದರೆ ಅದಕ್ಕೆ ಪ್ರತಿಬಂಧ ಮಾಡುವಷ್ಟು ತ್ರಾಣವೂ ಅವರಿಗಿರುವದಿಲ್ಲ. ಹಲವರು ಬಡತನಕ್ಕೆ ಬೇಸತ್ತು ಹೋಗಿರುತ್ತಾರೆ, ಬಡತನವನ್ನು ಹೋಗಲಾಡಿಸುವದಕ್ಕೆ ಅವರು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾಗಿ ಹೋಗಿರುವದರಿಂದ, ಅವರು ನಿರಾಶೆಯುಳ್ಳವರಾಗಿ ಸಂಸಾರ ತ್ಯಾಗಮಾಡಲಿಕ್ಕೆ ಸಿದ್ಧರಾಗಿರುತ್ತಾರೆ. ಕೆಲವರು ಮುಪ್ಪಿನಿಂದ ಹಲವರು ಬೇನೆಯಿಂದ ಸಂಸಾರತಾಪಕ್ಕೆ ಬೇಸತ್ತಿರುತ್ತಾರೆ. ಮಠಗಳಲ್ಲಿ (ಆಶ್ರಮಗಳಲ್ಲಿ) ಅಶಕ್ತರಿಗೂ, ಅಂಜುಗುಳಿಗಳಿಗೂ ಸುಖದ ಆಶ್ರಯವು ಸಿಗುತ್ತದೆ; ಶ್ರಾಂತರಿಗೆ ವಿಶ್ರಾಂತಿ ಸಿಗುತ್ತದೆ, ಅನುತಪ್ತರಿಗೆ ವ್ಯತ್ಯಯವಿಲ್ಲದೆ ವಿಚಾರಮಾಡಲಿಕ್ಕೆ ಮಾರ್ಗದೊರೆಯುತ್ತದೆ. ಈಶ್ವರಭಜನವನ್ನೂ, ಪರಲೋಕ ವಿಚಾರಗಳನ್ನೂ ಮಾಡಲಿಕ್ಕೆ ಯೋಗ್ಯವಾದ ಅನುಕೂಲಗಳು ಆಶ್ರಮಗಳಲ್ಲಿರುವದರಿಂದ ಮನುಷ್ಯನ ಮನಸ್ಸಿಗೆ ಒಂದುತರದ ಅನುಪಮೇಯವಾದ ಆನಂದವಾಗುತ್ತದಾದದರಿಂದ ಸರ್ವಸಂಗಪರಿತ್ಯಾಗ ಮಾಡಿ, ತನ್ನಂತೆ ವಿಚಾರಗಳುಳ್ಳಂಥ, ಸದಾಚಾರಿಗಳಾದಂಥ ಭಕ್ತಿನಿಷ್ಠರಾದಂಥ, ಕೆಲವು ಮಿತ್ರರೊಡನೆ ಆಯುಷ್ಯದ ಉಳಿದ ದಿವಸ

ಗಳನ್ನು ಸಂತೋಷದಿಂದಲೂ, ಸಮಾಧಾನದಿಂದಲೂ, ಕಳೆಯಬೇಕೆಂಬ ಇಚ್ಛೆಯು ಜಗತ್ತಿನೊಳಗಿನ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಬರುತ್ತದೆ."

ಪೇಕ್ಯೂಅ ಅಂದಳು— "ಹೀಗೇ ಮಾಡಬೇಕೆಂಬ ವಿಚಾರಗಳು ನನ್ನ ಮನಸ್ಸಿನಲ್ಲಿ ಅನೇಕಾವರ್ತಿ ಬಂದುಹೋಗಿವೆ. ರಾಜಕನ್ನಿಕೆಯು ತಾನು ಇನ್ನೂ ಸಂಸಾರದಲ್ಲಿ ತೊಡಗಿರುವಾಗಲೇ ತನಗೆ ದುರ್ದೈವದಿಂದ ಮರಣಬಂದರೆ ತನ್ನ ಮನಸ್ಸಿನಂತೆ ಆ ಲಿಕ್ಕಿಲ್ಲೆಂದು ಎಷ್ಟೋ ಸಾರೆ ಅಂದಿದ್ದಾಳೆ"

ಇಮ್ಲಾಕನು ಅಂದನು— "ನಾವು ದೋಷರಹಿತವಾದ ಸುಖಗಳನ್ನು ಅನುಭೋಗಿಸಬಹುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ನಿರ್ದೋಷವಾದ ಸುಖಗಳಾವವೆಂಬದನ್ನು ಇನ್ನೂ ಗೊತ್ತುಪಡಿಸತಕ್ಕದ್ದದೆ. ನಿಕಾಯಾ ರಾಜಪುತ್ರಿಯು ಕಲ್ಪಿಸುವ ಸುಖಗಳಲ್ಲಿ ಯಾವ ಸುಖವೂ ಸ್ವತಃ ಕೆಟ್ಟದು ಇಲ್ಲ; ಆದರೆ ಆ ಸುಖದ ಪರಿಣಾಮದ ಮೇಲಿಂದ ಅದು ಕೆಟ್ಟದೋ ಚಲೋದೋ ಎಂಬದು ಗೊತ್ತಾಗುತ್ತದೆ. ಅಂದರೆ ಒಂದುತರದ ಸುಖವು ಕೆಟ್ಟದು ಅಥವಾ ಚಲೋದು ಎಂದೆನ್ನಬೇಕಾದರೆ ನಾವು ಆ ಸುಖದಿಂದ ಆಗುವ ಪರಿಣಾಮಗಳನ್ನು ನೋಡಬೇಕು; ಪರಿಣಾಮವು ಚಲೋದಿದ್ದರೆ ಆ ಸುಖವು ಚಲೋದು; ಇಲ್ಲದಿದ್ದರೆ ಕೆಟ್ಟದು. ಈ ಲೋಕವು ಕ್ಷಣಭಂಗುರವಾದದ್ದಿರುತ್ತದೆ. ದೇವರು ನಮ್ಮನ್ನು ಕೇವಲ ಪರೀಕ್ಷಾರ್ಥವಾಗಿ ಇಲ್ಲಿಟ್ಟಿದ್ದಾನೆ; ನಾವು ಸದಾಚಾರಿಗಳಾಗಿದ್ದರೆ ನಮಗೆ ಪರಲೋಕವು ತೀವ್ರ ದೊರೆಯುವದು; ಇಹಲೋಕದ ಕ್ಷಣಭಂಗುರವಾದ ಸುಖಗಳಿಗೆ ನಾವು ಮೋಹಿತರಾಗದೆ, ಇಲ್ಲಿ ಹೆಚ್ಚು ದಿವಸಗಳನ್ನು ಕಳೆಯದೆ ಇದ್ದರೆ ಪರಲೋಕವು ನಮಗೆ ಹೆಚ್ಚು ಸಮೀಪವಾಗುವದು; ಆ ಪರಲೋಕದಲ್ಲಿ ಅಕ್ಷಯವಾದ ಸುಖವು ಅನಂತಕಾಲದ ವರೆಗೆ ಇರುವದು; ಆದರೆ ನಾವು ಇಲ್ಲಿಯ ಸುಖಕ್ಕೆ ಮೋಹಿತರಾಗಿ ಇಹಲೋಕವನ್ನೇ ಬಯಸಹತ್ತಿದರೆ ನಿರ್ದೋಷವಾದ ಸುಖದ ಪರಿಣಾಮವು ಕೆಟ್ಟದ್ದಾಯಿತೆಂದೆನ್ನಬಹುದು. ದೇಹದಂಡನೆಯು ಪರಲೋಕಪ್ರಾಪ್ತಿಗೇನೂ ಸಾಧನವಾಗುವದಿಲ್ಲ; ಆದರೆ ದೇಹದಂಡನೆ ಮಾಡುವವನು ಇಂದ್ರಿಯಗಳ ಮೋಹಜಾಲಕ್ಕೊಳಗಾಗುವದಿಲ್ಲ. ನಾವೆಲ್ಲರು ಒಳ್ಳೇ ಉತ್ಕಟದಿಂದ ಇಚ್ಛಿಸುವ ಪರಲೋಕದಲ್ಲಿ ನಿರ್ಭಯವಾದ ಸುಖವೂ, ಅಬಾಧಿತವಾದ ಸುರಕ್ಷತೆಯೂ ಇರುವವು."

ಈ ಮೇರೆಗೆ ಮಾತಾಡಿದ ಇಮ್ಲಾಕನ ಮಾತುಕೇಳಿ ರಾಜಪುತ್ರಿಯು ಸುಮ್ಮನಾದಳು. ರಾಸೆಲಾಸನು ಜ್ಯೋತಿಷಿಗೆ ಅಂದನು— "ನನ್ನ ತಂಗಿಯು ಸರ್ವಸಂಗ ಪರಿತ್ಯಾಗ ಮಾಡಬೇಕೆಂದು ಬಯಸುತ್ತಾಳೆ. ಆದರೆ ಆಕೆಯು ಇದು

ವರೆಗೆ ನೋಡದೆ ಇದ್ದಂಥ ಹೊಸ ಸಂಗತಿಯನ್ನೇನಾದರೂ ಆಕೆಗೆ ತೋರಿಸಿ ಆಕೆಯ ಮನಸ್ಸನ್ನು ತಿರುಗಿಸಲಿಕ್ಕೆ ಬರುವಂತೆ ಇಲ್ಲವೋ? ”

ಆ ಜ್ಯೋತಿಷಿಯು ಅಂದನು— “ ನಿಮ್ಮ ಶೋಧಕಬುದ್ಧಿಯೂ, ಜ್ಞಾನಸಂಪಾದನೇಚ್ಛೆಯೂ ಬಹಳ ಉತ್ಕಟವಾಗಿರುವದರಿಂದ ನಿಮಗೆ ದಿನಾಗಲು ಹೊಸ ಚಮತ್ಕಾರಗಳನ್ನು ತೋರಿಸುವದು ಬಹು ಬಿಗಿಯಾಗಿರುತ್ತದೆ. ಜೀವಂತರಾದ ಮನುಷ್ಯರಿಂದ ನಿಮ್ಮ ಮನೋರಂಜನೆಯನ್ನು ಮಾಡುವದು ಆಗದ್ದರಿಂದ ನಾನು ಈ ಹೊತ್ತು ನಿಮಗೆ ಪ್ರೇತಗಳನ್ನು ತೋರಿಸಿ ನಿಮ್ಮನ್ನು ಆನಂದಗೊಳಿಸುವೆನು. ಇಲ್ಲಿಯ ಪ್ರಾಚೀನ ಪ್ರೇತಸ್ಥಾನವು ನೋಡತಕ್ಕದ್ದಿರುತ್ತದೆ; ಆ ಸ್ಥಾನದಲ್ಲಿ ಇಲ್ಲಿಯ ಪುರಾತನ ಜನರ ಪ್ರೇತಗಳು ಇರುತ್ತವೆ; ಅವುಗಳಿಗೆ ಸುಗಂಧ ದ್ರವ್ಯಗಳನ್ನು ಹಚ್ಚಿಟ್ಟಿರುವದರಿಂದ ಅವು ಕೊಳೆಯದೆ ಇನ್ನೂ ಇದ್ದ ಕಿದ್ದ ಹಾಗೇ ಇರುತ್ತವೆ.

ರಾಸೆಲಾಸನು ಅಂದನು—“ಪ್ರೇತಗಳನ್ನು ನೋಡುವದರಿಂದ ನಮಗೆ ಯಾವ ತರದ ಆನಂದವಾದೀತೆಂಬದು ನನಗೆ ತಿಳಿಯಲೊಲ್ಲದು. ಆದರೂ ಈ ಹೊತ್ತು ನೋಡತಕ್ಕಂಥಾದ್ದು ಬೇರೆ ಏನೂ ಇಲ್ಲದ್ದರಿಂದ ಅವುಗಳನ್ನೇ ನೋಡೋಣ. ನಾನು ವೇಳೆಯನ್ನು ವ್ಯರ್ಥವಾಗಿ ಕಳೆಯಬಾರದೆಂಬ ಉದ್ದೇಶದಿಂದ ಒಮ್ಮೊಮ್ಮೆ ನಿರರ್ಥಕವಾದ ವಿಚಾರಗಳನ್ನು ಮಾಡುತ್ತ ಕೂಡ್ರುತ್ತಿರುತ್ತೇನೆ; ಈ ಹೊತ್ತಿನ ಮನೋರಂಜನವೂ ಇದೇ ವರ್ಗದಲ್ಲಿ ಬರುವದು. ಅವರು ತಮ್ಮ ರಕ್ಷಣೆಗಾಗಿ ಕೆಲವು ರಾಹುತರನ್ನು ಗೊತ್ತುಮಾಡಿ. ಮರುದಿವಸ ಆ ಪ್ರೇತಸ್ಥಾನಗಳನ್ನು ನೋಡುವದಕ್ಕೆ ಹೊರಟರು. ಆ ಗೋರಿಗಳೊಳಗೆ ಹೋಗುವಾಗ ರಾಜಪುತ್ರಿಯು ತನ್ನ ಪೇಕಯ್ಯಾ ದಾಸಿಗೆ ಅಂದಳು— “ ನಾವು ಈ ಹೊತ್ತು ಪುನಃ ಪ್ರೇತಗಳಿರುವ ಸ್ಥಳಕ್ಕೆ ಹೋಗುತ್ತೇವೆ; ನೀನು ನಮ್ಮೊಡನೆ ಬರಲಿಕ್ಕೊಲ್ಲೆಂಬದನ್ನು ನಾನು ಬಲ್ಲೆನು. ನಾವೆಲ್ಲರು ತಿರಗಿಬರುವವರೆಗೆ ನೀನು ಸುಖವಾಗಿ ಇಲ್ಲೇ ಇರು. ” ಪೇಕಯ್ಯಾ ಅಂದಳು “ ಛೆ, ಈ ಸಾರೆ ನಾನು ಹಿಂದೆ ಎಂದೂ ಉಳಿಯಲಿಕ್ಕಿಲ್ಲ. ನಾನು ನಿನ್ನ ಹಾಗು ರಾಜಪುತ್ರನ ನಡುವೆ ಇರುವೆನು.

ಆಮೇಲೆ ಅವರೆಲ್ಲರು ಅಂಕಡೊಂಕಾದ ದಾರಿಯಿಂದ ಭೂಮಿಯ ಕೆಳಗಿರುವ ವಿವರಗಳಲ್ಲಿ ಸೇರಿದರು. ಅಲ್ಲಿ ಅವರ ಇಕ್ಕಡೆಗಳಲ್ಲಿ ಪ್ರೇತಗಳು ಸಾಲಾಗಿ ಇಡಲ್ಪಟ್ಟಿದ್ದವು. ಅವುಗಳನ್ನು ನೋಡಿ ಅವರೆಲ್ಲರೂ ಆಶ್ಚರ್ಯಪಟ್ಟರು.

# ನಾಲತ್ತೆಂಟನೆಯ ಭಾಗವು.

(ಆತ್ಮಸ್ವರೂಪದ ಬಗ್ಗೆ ಇವಮ್ಲಾಕನ ಸಂಭಾಷಣವು.)

ರಾಸೆಲಾಸನು ಅಂದನು "ಕೆಲವು ಜನಾಂಗದವರು ಪ್ರೇತಗಳನ್ನು ಸುಟ್ಟು ಬಿಡುತ್ತಾರೆ; ಬೇರೆ ಕೆಲವರು ಅವುಗಳನ್ನು ಹುಗಿದುಬಿಡುತ್ತಾರೆ. ಪ್ರೇತಗಳ ಸಂಬಂಧವಾಗಿ ಯೋಗ್ಯವಾದಂಥ ಅಂತ್ಯವಿಧಿಗಳು ತೀರಿದ ನಂತರ ಆವಷ್ಟು ತೀವ್ರ ಅವು ತಮ್ಮ ಕಣ್ಣು ಮರೆಯಾಗಬೇಕೆಂದು ಎಲ್ಲರೂ ಬಯಸುತ್ತಾರೆ; ಈ ಬಗ್ಗೆ ಎಲ್ಲ ಜನಾಂಗದವರು ಒಂದೇ ಅಭಿಪ್ರಾಯವುಳ್ಳವರಿರುತ್ತಾರೆ. ಆದರೆ ಇಜಿಪ್ತ ದೇಶದ ಜನರು ಮಾತ್ರ ಅಪರಿಮಿತ ಹಣವನ್ನು ವೆಚ್ಚ ಮಾಡಿ, ತಮ್ಮ ಜನರ ಪ್ರೇತಗಳನ್ನು ಕಾಯ್ದಿಡುತ್ತಾರೆ; ಇವರ ಕಾರಣವೇನಿರಬಹುದು! "

ಇಮ್ಲಾಕನು ಅಂದನು—" ಯಾವ ಕಾರಣದಿಂದ ಒಂದು ಸಾಂಪ್ರದಾಯವು ರೂಢವಾಗಿರುತ್ತದೋ ಆ ಕಾರಣವು ನಷ್ಟವಾದರೂ ಆ ಸಾಂಪ್ರದಾಯವು ಪೂರ್ವದಂತೆಯೇ ರೂಢಿಯಲ್ಲಿರುತ್ತದೆ. ಆದದರಿಂದ ಪ್ರೇತಗಳ ವ್ಯವಸ್ಥೆಯ ಬಗ್ಗೆ ಪ್ರಾಚೀನ ಜನರ ಸಂಪ್ರದಾಯದ ಮೂಲವನ್ನು ಶೋಧಮಾಡಹೋದರೆ ಅದು ಬಹುಶಃ ಗೊತ್ತಾಗುವದಿಲ್ಲ. ಮೂಢಶ್ರದ್ಧೆಯುಳ್ಳ ಜನರು ಮಾಡುವ ಪ್ರೇತಗಳ ಅಂತ್ಯವಿಧಿಯ ಮೂಲವನ್ನು ಶೋಧಿಸುವದಂತೂ, ನಿರರ್ಥಕವೇ ಸರಿ; ಯಾಕಂದರೆ ಯಾವ ವಿಧಿಗಳು ಬುದ್ಧಿವಂತರಿಗೆ ಮಾನ್ಯವಾಗಿರುವದಿಲ್ಲವೋ, ಆ ವಿಧಿಗಳು ಸಮಂಜಸವಾಗಿರುವ ಬಗೆ ಹ್ಯಾಗೆ?

ಇಜಿಪ್ತ ದೇಶದ ಜನರು ತಮ್ಮ ಆಪ್ತೇಷ್ಟರ ಹಾಗು ಮಿತ್ರರ ಪ್ರೇತಗಳು ತೀವ್ರವೇ ಕೆಟ್ಟುಹೋಗಬಾರದೆಂಬ ಮೋಹದಿಂದಲೇ ಅವುಗಳಿಗೆ ಸುಗಂಧದ್ರವ್ಯವನ್ನು ಹಚ್ಚಿ, ಅವುಗಳನ್ನು ಬಹಳ ಜೋಕೆಯಿಂದ ಕಾಯ್ದಿಡುತ್ತ ಬಂದಿರಬಹುದೆಂದು ನನಗೆ ತೋರುತ್ತದೆ. ಆದರೆ ಎಲ್ಲರ ಪ್ರೇತಗಳನ್ನು ಈ ಮೇರೆಗೆ ಕಾಯ್ದಿಡಹತ್ತಿದ್ದರೆ, ಪ್ರೇತಸ್ಥಾನಗಳೇ ಬಹಳ ಹೆಚ್ಚಾಗಿ ಜೀವಂತರಾದ ಜನರಿಗೆ ಇರುವದಕ್ಕೆ ಭೂಮಿಯು ಸಾಲದೆ ಹೋಗುತ್ತಿತ್ತು. ಆದದರಿಂದ ಶ್ರೀಮಂತರ ಹಾಗು ಸನ್ಮಾನಿತರ ಪ್ರೇತಗಳನ್ನು ಮಾತ್ರ ಕಾಯ್ದಿಟ್ಟು, ಉಳಿದವರ ಪ್ರೇತಗಳ ಅವಸ್ಥೆಯು ಸೃಷ್ಟಿಯ ಕ್ರಮಕ್ಕನುಸರಿಸಿ ಆವದ್ದಾಗಲಿ ಎಂದು ಹಾಗೇ ಬಿಟ್ಟುಬಿಡುತ್ತಿರಬಹುದೆಂದು ನನಗೆ ಕಾಣಿಸುತ್ತದೆ. "

“ ಪಂಚಭೂತಾತ್ಮಕ ಶರೀರವು ಅಚ್ಛಳಿಯದೆ ಇರುವ ಮಟ್ಟಿಗೆ ಆತ್ಮನು ಆ ಶರೀರವನ್ನು ಬಿಟ್ಟು ಹೋಗುವದಿಲ್ಲೆಂದು ಇಜಿಪ್ತ ದೇಶದ ಜನರ ಸಾಧಾರಣ ತಿಳುವಳಿಕೆ ಇರುವದರಿಂದ ಅವರು ಶರೀರಕ್ಕೆ ಮರಣ ಬರಬಾರದೆಂಬ ಉದ್ದೇಶದಿಂದಲೇ ಈ ಮೇರೆಗೆ ಪ್ರೇತಗಳನ್ನು ಕಾಯ್ದಿಡುವರೆಂದು ಕೆಲವರು ಅನ್ನುತ್ತಾರೆ. ”

ನಿಕಾಯಾ ರಾಜಪುತ್ರಿಯು ಅಂದಳು– “ ಆತ್ಮದ ವಿಷಯಕ್ಕೆ ಜಾಣರೆಂದು ಹೆಸರು ಪಡೆದ ಇಜಿಪ್ತ ದೇಶದ ಜನರ ವಿಚಾರಗಳು ಇಷ್ಟು ಮೂಢತನದವು ಇದ್ದವೋ? ಪಂಚಭೂತಾತ್ಮಕ ಶರೀರದ ವಿಯೋಗವಾದ ಮೇಲೆ ಆತ್ಮನು ಅಲ್ಲಿ ಹಾಗೇ ಇರುತ್ತಿದ್ದರೆ ಆ ಶರೀರದ ವ್ಯಾಪಾರಗಳಿಂದ ಅದಕ್ಕೆ ಲಾಭಹಾನಿಗಳೇನು?

ಜ್ಯೋತಿಷಿಯು ಅಂದನು—“ಇಜಿಪ್ತ ಜನರ ಕಾಲಕ್ಕೆ ಅಜ್ಞಾನವೆಂಬ ಕಗ್ಗತ್ತಲೆಯು ಎಲ್ಲ ಕಡೆಯಲ್ಲಿ ಮುಸುಗಿತ್ತು; ಆ ಕತ್ತಲೆಯನ್ನು ಓಡಿಸುವಂಥ ತತ್ವಜ್ಞಾನವೆಂಬ ಪ್ರಕಾಶವು ಅದೇ ಬೀಳಹತ್ತಿತ್ತು. ಆದದರಿಂದ ಆಗಿನ ಕಾಲದ ಇಜಿಪ್ತ ದೇಶದ ಜನರ ಆತ್ಮಸಂಬಂಧವಾದ ತಿಳುವಳಿಕೆಯು ತಪ್ಪಾಗಿರಬಹುದೆಂದು ನನಗೆ ತೋರುತ್ತದೆ. ಆದರೆ ಈಗ ಜ್ಞಾನವೆಂಬ ಪ್ರಕಾಶವು ಎಲ್ಲ ಕಡೆಯಲ್ಲಿಯೂ ಪ್ರಜ್ವಲಿಸುತ್ತಿದ್ದಾಗ್ಯೂ, ಆತ್ಮದ ನಿಜವಾದ ಸ್ವರೂಪ ಜ್ಞಾನದ ಬಗ್ಗೆ ವಾದವಿವಾದವು ಇನ್ನೂ ನಡದೇ ಇರುತ್ತದೆ. ಕೆಲವರು ಆತ್ಮನು ಜಡವಸ್ತು ಇರುತ್ತದೆಂದು ಅನ್ನುತ್ತಾರೆ; ಆದರೆ ಅವರೇ ಆತ್ಮನು ಅಮರವಾಗಿದ್ದಿರುತ್ತದೆಂದೂ ಅನ್ನುತ್ತಾರೆ.

ಇವಾನ್ಹೋಕನು ಅಂದನು–“ಕೆಲವು ಜನರು ಆತ್ಮನು ಜಡವಿರುತ್ತದೆಂದು ಅನ್ನುತ್ತಾರೆಂಬದನ್ನು ನಾನು ಬಲ್ಲೆನು; ಆದರೆ ಲೇಶಮಾತ್ರ ವಿಚಾರಶಕ್ತಿಯುಳ್ಳ ಮನುಷ್ಯನು ಈ ತರದ ವಿಧಾನವನ್ನು ಮಾಡಲಿಕ್ಕಿಲ್ಲ. ಎಲ್ಲ ವಿದ್ವಾಂಸರು ಪೂರ್ಣ ವಿಚಾರ ಮಾಡಿ ಮನಸ್ಸು ಅಜಡವಾಗಿರುತ್ತದೆಂದು ಸಿದ್ಧಮಾಡಿದ್ದಾರೆ; ಬುದ್ಧಿವಂತರ ವಿಚಾರಗಳ ಮೇಲಿಂದಲೂ, ಎಲ್ಲ ಶಾಸ್ತ್ರಗಳ ಸಿದ್ಧಾಂತಗಳ ಮೇಲಿಂದಲೂ ವಿಚಾರಿಸಿ ನೋಡಿದರೆ ಜಡ (ಅನಾತ್ಮ) ವಸ್ತುವಿಗೆ ಚೇತನಾಶಕ್ತಿ (ಸಚೇತನತ್ವ) ಇರುವದಿಲ್ಲೆಂದು ನಿರ್ವಿವಾದ ಸಿದ್ಧವಾಗುತ್ತದೆ. ”

“ ಜಡ ವಸ್ತುವಿಗೆ ವಿಚಾರಸಾಮರ್ಥ್ಯವು ಉಂಟೆಂತಲೂ, ಪ್ರತಿಯೊಂದು ಪರಮಾಣು ವಿಚಾರಶಕ್ತಿಯುಳ್ಳ ಪ್ರಾಣಿಯಾಗಿರುತ್ತದೆಂತಲೂ ಯಾರೂ ಎಂದೂ ಹೇಳಿರುವದಿಲ್ಲ. ಆದರೂ ಜಡವಸ್ತುವಿನ ಒಂದು ಭಾಗವು ಮಾತ್ರ ಅಚೇತನವಾದದ್ದಿರುತ್ತದೆಂದು ತಿಳಿದರೆ, ಆ ವಸ್ತುವಿನ ಯಾವ ಭಾಗವು ಸಚೇತನವಾದದ್ದಿರುತ್ತದೆಂದು ನಾವು ತಿಳಿದುಕೊಳ್ಳಬೇಕು? ಆಕಾರ, ಜಡತ್ವ, ಗತಿ, ಗತಿಯ ದಿಕ್ಕು ಮುಂತಾದವುಗಳಲ್ಲಿ ಮಾತ್ರ ಒಂದು ಜಡಪದಾರ್ಥವು ಮತ್ತೊಂದರಿಂದ ಭಿನ್ನವಾಗಿ

ರುತ್ತದೆ. ಆದರೆ ಇವುಗಳೊಳಗೆ (ಆಕಾರ ಮುಂತಾದವು) ಯಾವದಕ್ಕೆ ಅಥವಾ ಯಾವವುಗಳ ಸ್ಥಿತ್ಯಂತರಕ್ಕೆ ಚೇತನಾಶಕ್ತಿಯು ಇರುವ ಸಂಭವವದೆ? ಎಲ್ಲ ಜಡ ವಸ್ತುಗಳು ದುಂಡಗಾಗಿ ಇಲ್ಲವೆ ಚೌರಸಾಕೃತಿಯಾಗಿ, ಘನರೂಪವಾಗಿ ಅಥವಾ ರಸರೂಪವಾಗಿ, ದೊಡ್ಡವು ಇಲ್ಲವೆ ಸಣ್ಣವು, ಮಂದಗತಿಯುಳ್ಳವು ಅಥವಾ ತೀವ್ರ ಗತಿಯುಳ್ಳವು ಇರುತ್ತವೆ. ಇವೇ ಜಡದ್ರವ್ಯಗಳ ಅಸ್ತಿತ್ವದ ಲಕ್ಷಣಗಳು. ಆದರೆ ಈ ಎಲ್ಲ ಲಕ್ಷಣಗಳು ಚೇತನಾಶಕ್ತಿಯಿಂದ ಬಹಳ ಭಿನ್ನವಾಗಿರುತ್ತವೆ. ಜಡದ್ರವ್ಯಕ್ಕೆ ಸಚೇತನತ್ವವಿರುವದಿಲ್ಲೆಂದು ಗೊತ್ತಾಗಿ ಹೋಗಿದೆ; ಇನ್ನು ಅದಕ್ಕೆ ಸಚೇತನತ್ವವು ಉಂಟಾಗಬೇಕಾದರೆ ಅದರಲ್ಲೇನಾದರೂ ಸ್ಥಿತ್ಯಂತರವಾಗಲಿಕ್ಕೆ ಬೇಕು; ಆದರೆ ಯಾವತ್ತು ತರದ ಸ್ಥಿತ್ಯಂತರಗಳು ಚೇತನಾಶಕ್ತಿಯಿಂದ ತೀರ ಭಿನ್ನವಾಗಿರುತ್ತವೆ. ಅಂದರೆ ಜಡದ್ರವ್ಯಕ್ಕೂ ಚೇತನಾಶಕ್ತಿಗೂ ಏನೂ ಸಂಬಂಧವಿರುವದಿಲ್ಲ."

ಜ್ಯೋತಿಷಿಯು ಅಂದನು—"ಜಡಾತ್ಮವಾದಿಗಳು ನಮಗೆ ಗೊತ್ತಿಲ್ಲದಂಥ ಕೆಲವು ಗುಣಗಳು ಜಡದ್ರವ್ಯದಲ್ಲಿರಬಹುದೆಂದು ಅನ್ನುತ್ತಾರೆ."

ಇವ್ಹಾಳನು ಅಂದನು—"ಯಾವ ಮನುಷ್ಯನು, ತನಗೆ ಕೆಲವೊಂದು ವಸ್ತು ಗೊತ್ತಿಲ್ಲೆಂಬ ಕಾರಣದಿಂದಲೇ, ಗೊತ್ತಿದ್ದಂಥ ವಸ್ತುವಿನ ವಿಷಯಕ್ಕೆ ಸಹ ವಿರುದ್ಧವಾದಂಥ ವಿಧಾನಮಾಡುತ್ತಾನೋ, ಮತ್ತು ಯಾವನು ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿಕೊಂಡಂಥ ಮಾತು ಅನ್ಯಥಾ ಇರಬಹುದೆಂದು ಕೇವಲ ಕಲ್ಪನೆಯಿಂದಲೇ ಹೇಳುತ್ತಾನೋ ಆ ಮನುಷ್ಯನಲ್ಲಿ ವಿಚಾರಶಕ್ತಿಯು ತಿಲಮಾತ್ರ ಇಲ್ಲೆಂದು ನಿಃಸಂದೇಹವಾಗಿ ಹೇಳಬಹುದು. ದ್ರವ್ಯವು ಜಡವಾದದ್ದೂ, ವಿಕಾರರಹಿತವಾದದ್ದೂ, ಅಚೇತನವಾದದ್ದೂ ಇರುತ್ತದೆಂಬದನ್ನು ಮಾತ್ರ ನಾವೆಲ್ಲರು ಬಲ್ಲೆವು; ಇದಕ್ಕೂ ಹೆಚ್ಚು ಅದರ ವಿಷಯಕ್ಕೆ ನಮಗೇನೂ ಗೊತ್ತಿಲ್ಲ: ಇನ್ನು ನಮಗೆ ಈ ದ್ರವ್ಯದಲ್ಲಿರಬಹುದಾದ ಇನ್ನೂ ಕೆಲವು ಗುಣಗಳು ಗೊತ್ತಿಲ್ಲೆಂಬದರ ಮೇಲಿಂದಲೇ ಇದರಲ್ಲಿರುವ ಅನುಭವಸಿದ್ಧವಾದ ಜಡತ್ವ, ವಿಕಾರ, ಅಚೇತನತ್ವ ಮುಂತಾದ ಗುಣಗಳೂ ಸಹ ಇಲ್ಲೆಂದು ಅನ್ನಹೋದರೆ ಮನುಷ್ಯನ ವಿಚಾರಶಕ್ತಿಯೇ ಕುಂಠಿತವಾದಂತಾಗುವದು; ವಿಚಾರಶಕ್ತಿಯ ಆಟವೇ ನಡೆಯಲಿಕ್ಕಿಲ್ಲ. ನಾವು ನಮಗೆ ಗೊತ್ತಿಲ್ಲದಂಥ ಸಂಗತಿಯ ಮೇಲಿಂದ ಗೊತ್ತಿದ್ದಂಥ ಸಂಗತಿಯ ನಿರ್ಣಯ ಮಾಡಹತ್ತಿದರೆ, ಸರ್ವಜ್ಞನಾದ ಈಶ್ವರನು ಸಹ ನಿಶ್ಚಿತವಾದ ನಿರ್ಣಯವನ್ನು ಮಾಡಲಾರನು; ಅಂದಮೇಲೆ ನಮ್ಮಂಥ ಮನುಷ್ಯರ ಪಾಡೇನು?"

ಜ್ಯೋತಿಷಿಯು ಅಂದನು—"ಈ ತರದ ಹೆಮ್ಮೆಯ ವಿಧಾನವನ್ನು ಮಾಡಿ ಸೃಷ್ಟಿಕರ್ತನ ಶಕ್ತಿಯ ನಿರ್ಬಂಧಮಾಡೋಣ ಬೇಡ. (ಅಂದರೆ ಸರ್ವಜ್ಞನಾದ

ಈಶ್ವರನಿಂದಲೂ ನಿಶ್ಚಿತವಾದ ನಿರ್ಣಯವನ್ನು [ಮಾಡಲಾಗಲಿಕ್ಕಿಲ್ಲೆಂದು] ಹಿಂದೆ ಹೇಳಿರುವದಷ್ಟೇ. ಹಾಗೆ ನಾವು ಅಂದರೆ [ಸೃಷ್ಟಿಕರ್ತನ ಶಕ್ತಿಯು ಕಡಿಮೆ] ಇರುತ್ತದೆಂದು ಹೇಳಿದ ದೋಷಕ್ಕೆ ಪಾತ್ರರಾಗುವೆವು. ಕಾರಣ ಹಾಗೆ ನಾವು [ಪಾತ್ರರಾಗೋಣ ಬೇಡ.)

ಇವನ್ಲಾಕ ಕವಿಯು ಉತ್ತರ ಕೊಟ್ಟನು– "ನಾವು ಹೀಗೆಂದರೆ ಸರ್ವಶಕ್ತಿಯುಳ್ಳ ಈಶ್ವರನ ಶಕ್ತಿಯು ಅಲ್ಪವಿರುವದೆಂದು ಹೇಳಿದಂತಾಗುವದಿಲ್ಲ. ನಾವು ಒಂದು ವಿಧಾನವು ಬೇರೊಂದು ವಿಧಾನಕ್ಕೆ ಅಸಂಗತವಾಗಿರುವದೆಂತಲೂ, ಒಂದೇ ಸಿದ್ಧಾಂತವು ಒಂದೇ ಕಾಲಕ್ಕೆ ದಿಟವಾದದ್ದೂ ಸಟಿಯಾದದ್ದೂ ಇರಲಾರದೆಂತಲೂ, ಒಂದೇ ಸಂಖ್ಯೆಯು ಸಮವಾದದ್ದೂ ವಿಷಮವಾದದ್ದೂ ಇರಲಾರದೆಂತಲೂ, ಸಚೇತನತ್ವಕ್ಕೆ ಯೋಗ್ಯವಿರದಂಥ ದ್ರವ್ಯಕ್ಕೆ ಸಚೇತನತ್ವವನ್ನು ಕೊಡುವದು ಯಾರಿಂದಲೂ ಆಗಲಿಕ್ಕಿಲ್ಲೆಂತಲೂ ಅಂದರೆ ಈಶ್ವರನ ಅನಂತಶಕ್ತಿಯು ಅಲ್ಪವಾಗಿರುತ್ತದೆಂದು ಹ್ಯಾಗೆ ಹೇಳಿದ ಹಾಗಾಯಿತು?

ರಾಜಕನ್ನಿಕೆಯು ಅಂದಳು– "ಈ ಪ್ರಶ್ನೋತ್ತರಗಳ ಉಪಯೋಗವೇನೂ ಅಷ್ಟು ಇದ್ದಂತೆ ನನಗೆ ತೋರುವದಿಲ್ಲ. ಅದಿರಲಿ, ನನ್ನ ಮನಸ್ಸಿಗೆ ಸಮಾಧಾನವಾಗುವಂತೆ ನೀವು ಆತ್ಮವು ಅಜಡವಾಗಿರುತ್ತದೆಂಬದನ್ನು ಸಿದ್ಧಮಾಡಿರುವಿರಿ. ಆದರೆ ಆತ್ಮವು ಅಜಡವಿರುತ್ತದೆಂದು ಹೇಳಿದ್ದರಿಂದ ಅದು ಅವಿನಾಶಿ ಸಹ ಇರುತ್ತದೆಂದು ಹೇಳಿದ ಹಾಗಾಯಿತೋ? ಇಲ್ಲವೋ? ಎಂಬದನ್ನು ನನಗೆ ಹೇಳಿರಿ."

ಇವನ್ಲಾಕನು ಅಂದನು– "ಅಜಡವಸ್ತುವಿನಲ್ಲಿರುವ ಗುಣಗಳು ನಮಗೆ ಗೊತ್ತಿಲ್ಲ. ಆದರೆ ಅದರಲ್ಲಿ ಯಾವ ಗುಣಗಳೂ ಇಲ್ಲೆಂಬದನ್ನು ನಾವು ಬಲ್ಲೆವು; ಆದದರಿಂದ ಅದು ಅವಿನಾಶಿ ಇರುತ್ತದೋ ಇಲ್ಲವೋ ಎಂಬದನ್ನು ನಿಶ್ಚಿತವಾಗಿ ನಾವು ಹೇಳಲಾರೆನು. ಯಾವ ಕಾರಣದಿಂದ ಇಲ್ಲವೆ ಕಾರಣಗಳಿಂದ ಜಗತ್ತಿನೊಳಗಿನ ಎಲ್ಲ ನಶ್ವರ (ಅರ್ಥಾತ್ ಜಡ) ಪದಾರ್ಥಗಳು ನಾಶಹೊಂದುತ್ತವೆಯೋ, ಆ ಕಾರಣ ಅಥವಾ ಕಾರಣಗಳು ಅಜಡ ವಸ್ತುವಿಗೆ (ಒಂದೂ) ಇರುವದಿಲ್ಲಾದದರಿಂದ ಅದು ಅನಂತಕಾಲ ಇರುವಂಥಾದ್ದೂ, ಅವಿನಾಶಿಯಾದಂಥಾದ್ದೂ ಇರಬಹುದೆಂದು ತೋರುತ್ತದೆ. ಪದಾರ್ಥವು ನಾಶಹೊಂದಬೇಕಾದರೆ, ಅದರ ಘಟಕಗಳು ಬೇರೆಬೇರೆಯಾಗುತ್ತವೆ. ಅದರ ಪರಿಮಾಣುಗಳು ವಿಭಕ್ತವಾಗುತ್ತವೆ. ಆದರೆ ಯಾವದು ಪರಮಾಣುಘಟಿತವಲ್ಲ, ಮತ್ತು ಯಾವದರ ಘಟಕಗಳು ಬೇರೆಬೇರೆಯಾಗುವ ಸಂಭವವು ಎಂದೂ ಇಲ್ಲ, ಅಂಥ ಅಜಡ ವಸ್ತುವಿಗೆ ವಿಕಾರವೂ, ನಾಶವೂ ಉಂಟೆಂದು ನಾವು ಹ್ಯಾಗೆ ಕಲ್ಪಿಸಬೇಕು?"

ರೂಸೆಲಾಸನು ಅಂದನು—"ಸ್ಥೂಲತ್ವ (ವ್ಯಾಪ್ತಿ) ವಿರಹಿತ ವಸ್ತು ಇರುವ ಬಗೆಯಾದರೂ ಹ್ಯಾಗೆ? ಈ ತರದ ವಸ್ತು ಇರುವದೆಂಬ ಕಲ್ಪನೆಯೇ ನನ್ನ ಮನಸ್ಸಿನಲ್ಲಿ ಬರಲೊಲ್ಲದು. ಸ್ಥೂಲತ್ವವಿದ್ದ ಪದಾರ್ಥಕ್ಕೆ ಪರಮಾಣುಗಳಿರಲಿಕ್ಕೆ ಬೇಕು. ಪರಮಾಣುಗಳಿದ್ದ ಪದಾರ್ಥವು ನಾಶಹೊಂದುತ್ತದೆಂದು ನೀವೇ ಒಪ್ಪಿಕೊಳ್ಳುತ್ತೀರಿ."

ಇಮ್ಲ್ಯಾಕನು ಅಂದನು—"ರಾಜಪುತ್ರರೇ, ನಿಮ್ಮ ಮನಸ್ಸಿನಲ್ಲಿ ಬರುವ ಕಲ್ಪನೆಗಳ ವಿಷಯವಾಗಿ ತುಸು ವಿಚಾರಮಾಡಿ ನೋಡಿರಿ; ಅಂದರೆ ನಾನು ಹೇಳುವ ಮಾತು ನಿಮಗೆ ವಿಲಕ್ಷಣವಾಗಿ ತೋರಲಿಕ್ಕಿಲ್ಲ; ಮತ್ತು ಸ್ಥೂಲತ್ವವಿರಹಿತ ಪದಾರ್ಥಗಳು ಇರುತ್ತವೆಂದು ನೀವು ಮನಗಾಣುವಿರಿ. ದೃಶ್ಯಸ್ಪೃಶ್ಯ ಪದಾರ್ಥಗಳು ಎಷ್ಟು ನಿಜವಾಗಿರುತ್ತವೆಯೋ ಅಷ್ಟೇ ಕಲ್ಪಿತಪದಾರ್ಥಗಳೂ ನಿಜವಾಗಿರುತ್ತವೆ; ಹೀಗಿದ್ದಾಗ್ಯೂ ಕಾಲ್ಪನಿಕ ಪದಾರ್ಥವು ಸ್ಥೂಲತ್ವರಹಿತವಾದದ್ದಿರುತ್ತದೆ. ನೀವು ನೆಲಗೋಪುರದ (Pyramid) ಬಗ್ಗೆ ವಿಚಾರಗಳನ್ನು ಮನಸ್ಸಿನಲ್ಲಿ ತಂದರೆ ಆ ಗೋಪುರದ ತದ್ರೂಪವಾದ ಚಿತ್ರವು ನಿಮ್ಮ ಮನಸ್ಸಿನಲ್ಲಿ ಮೂಡುವದು; ಹಾಗೆಯೇ ಒಂದು ಧಾನ್ಯದ ಕಾಳಿನ ಬಗ್ಗೆ ಕಲ್ಪನೆಯು ನಿಮ್ಮ ಮನಸ್ಸಿನಲ್ಲಿ ಬಂದರೆ, ಆ ಕಾಳಿನ ತದ್ರೂಪ ಚಿತ್ರವು ನಿಮ್ಮ ಮನಸ್ಸಿನಲ್ಲಿ ಮೂಡುವದಷ್ಟೇ; ಆದರೆ ನೆಲಗೋಪುರದ ಚಿತ್ರವು ನಿಮ್ಮ ಮನಸ್ಸಿನಲ್ಲಿ ಮೂಡಬೇಕಾದರೆ ಅದಕ್ಕೆ ಎಷ್ಟು ಹೆಚ್ಚು ಸ್ಥಳವು ಬೇಕಾಗಿತ್ತು? ಹಾಗೂ ಕಾಳಿನ ಚಿತ್ರವು ಮೂಡಲಿಕ್ಕೆ ಎಷ್ಟು ಕಡಿಮೆ ಸ್ಥಳವು ಬೇಕಾಗಿತ್ತೆಂಬದನ್ನು ನೀವು ಹೇಳಬಲ್ಲಿರೋ? ಸಹಜವೇ ಈ ಪ್ರಶ್ನದ ಉತ್ತರವು "ಇಲ್ಲ" ಎಂಬದೇ ಯಾವಾಗಲೂ ಇರುವದು. ಅಂದರೆ ಮನಸ್ಸಿನಲ್ಲಿ ಯಾವ ವಸ್ತುವಿನ ಬಗ್ಗೆ ಕಲ್ಪನೆ ಬರುತ್ತದೋ ಆ ವಸ್ತುವಿನ ಪ್ರತಿಬಿಂಬವು, ಅದು ದೊಡ್ಡದಿರಲಿ ಸಣ್ಣದಿರಲಿ, ಮನಸ್ಸಿನಲ್ಲಿ ಮೂಡುತ್ತದೆ. ಇನ್ನು ನೆಲಗೋಪುರದ ಕಲ್ಪನೆಯ ಪರಮಾಣುಗಳು ಎಷ್ಟಿರುವವು? ಮತ್ತು ಕಾಳಿನ ಕಲ್ಪನೆಯ ಪರಿಮಾಣುಗಳು ಎಷ್ಟಿರುವವೆಂಬವನ್ನು ನೀವು ಹೇಳಬಹುದೋ? ಅರ್ಥಾತ್ ಕಲ್ಪನೆಯ ಪರಿಮಾಣುಗಳೇ ಹೊರಡಲಿಕ್ಕಿಲ್ಲ. ಪರಿಮಾಣುಗಳು ಇಲ್ಲವೆಂದ ಮೇಲೆ ಕಲ್ಪನೆಯೂ ಇಲ್ಲೆಂದು ಹೇಳಿದಂತಾಯಿತೋ? ಇಲ್ಲ. ಹಾಗಾದರೆ ಸ್ಥೂಲತ್ವರಹಿತ ಕಲ್ಪನೆಯು ನಿಮ್ಮ ಮನಸ್ಸಿನಲ್ಲಿ ಬರುತ್ತದೆಂದು ಹೇಳಿದ ಹಾಗಾಗಲಿಲ್ಲವೇ? ಯಾಕಂದರೆ, ಕಾರ್ಯದ ಧರ್ಮಗಳೇ ಕಾರಣದ ಧರ್ಮಗಳು; ವಿಚಾರದ ಧರ್ಮಗಳೇ ವಿಚಾರಶಕ್ತಿಯ ಧರ್ಮಗಳು.

ನಿಕಾಯಾ ಅಂದಳು—"ಯಾವ ಸರ್ವಶಕ್ತಿಯುಳ್ಳ ದೇವರು ಆತ್ಮವನ್ನು ಹುಟ್ಟಿಸುವನೋ ಅವನು ಅದನ್ನು ನಾಶಪಡಿಸಬಹುದು."

ಇವನ್ಲಾಕನು ಅಂದನು—"ದೇವರು ಆತ್ಮವನ್ನು ನಿಸ್ಸಂದೇಹವಾಗಿ ನಾಶಮಾಡಬಹುದು; ಯಾಕಂದರೆ, ಎಂಥ ಬೇಕಾದಂಥ ಅವಿನಾಶಿ ವಸ್ತು ಇದ್ದರೂ, ಅದರಲ್ಲಿ ಅನಂತಕಾಲ ಬಾಳುವ ಶಕ್ತಿಯು ತನ್ನಿಂದ ತಾನೇ ಬರುವದಿಲ್ಲ. ಆದರೆ ಆ ಶಕ್ತಿಯು ಅದಕ್ಕೆ ಆ ಸರ್ವಶ್ರಾಣಿಯಾದ ಪರಮೇಶ್ವರನಿಂದಲೇ ಕೊಡಲ್ಪಡುತ್ತದೆ.

ಯಾವ ವಿಕಾರದಿಂದ ಇಲ್ಲವೆ ಯಾವ ಕಾರಣಗಳಿಂದ ಜಡದ್ರವ್ಯವು ನಷ್ಟವಾಗುತ್ತದೊ, ಅಂಥ ವಿಕಾರವು ಅಥವಾ ಕಾರಣಗಳು ಆತ್ಮಕ್ಕೆ ಇರುವದಿಲ್ಲಾದದರಿಂದ ಆತ್ಮವು ಅಮರ ಮತ್ತು ಅನಂತಕಾಲ ಬಾಳುವಂಥಾದ್ದು ಇರುತ್ತದೆಂದು ಶಾಸ್ತ್ರಗಳು ಹೇಳುತ್ತವೆ; ಶಾಸ್ತ್ರಗಳು ಇದಕ್ಕೂ ಹೆಚ್ಚು ಏನೂ ಹೇಳಲಾರವು. ಯಾವ ಪರಮಾತ್ಮನಿಂದ ಆತ್ಮವು ಹುಟ್ಟಿಸಲ್ಪಟ್ಟಿತೋ' ಆತನು ಅದನ್ನು ನಾಶಪಡಿಸುವನೋ ಇಲ್ಲವೋ ಎಂಬದನ್ನು ಪಾಮರರಾದ ನಾವು ಹೇಳಲಾರೆವು."

ಈ ಮೇರೆಗೆ ಸಂಭಾಷಣವಾದ ನಂತರ, ಅವರೆಲ್ಲರೂ ಕೆಲವು ಹೊತ್ತು ಸ್ತಬ್ಧರಾಗಿ ಏನೂ ಮಾತಾಡದೆ ನಿಂತುಕೊಂಡರು. ಆಮೇಲೆ ರಾಜಪುತ್ರನು ಅಂದನು— "ಈ ಪ್ರೇತಸ್ಥಾನದಿಂದ ನಾವು ಇನ್ನು ಹೊರಗೆ ಹೋಗೋಣ ಯಾವನಿಗೆ ತಾನು ಅಮರನೆಂಬದೂ ಆತ್ಮವು ಚಿತ್‌ಸ್ವರೂಪವಾದದ್ದೂ, ಅನಂತಕಾಲದವರೆಗೆ ಬಾಳುವಂಥಾದ್ದೂ, ಅವಿನಾಶಿಯಾದದ್ದೂ ಇರುವದೆಂದು ಗೊತ್ತಿಲ್ಲವೋ ಅವನಿಗೆ ಈ ಭಯಂಕರವಾದ ಪ್ರೇತಮಂದಿರಗಳು ಎಷ್ಟು ಉದಾಸವಾಗಿ ಭಾಸವಾಗುತ್ತಿರಬಹುದು? ಇಲ್ಲಿ ಪ್ರೇತರೂಪದಿಂದಿರುವ ಪುರಾತನ ಕಾಲದ ಜ್ಞಾನಿಗಳೂ, ಅರಸರೂ, ಇಹಲೋಕದ ಜೀವಿತವು ತೀರ ಕ್ಷಣಭಂಗುರವಾದದ್ದಿರುತ್ತದೆಂಬ ತತ್ವವನ್ನು ಯಾವಾಗಲೂ ಲಕ್ಷದಲ್ಲಿಡಬೇಕೆಂದು ನಮಗೆ ಎಚ್ಚರಿಸುತ್ತಾರೆ; ಮತ್ತು ಅವರೂ ಜಗತ್ತಿನೊಳಗೆ ಸಂಸಾರದೊಳಗಿನ ಉತ್ತಮತರವಾದ ಸ್ಥಿತಿಯಾವದೆಂಬ ಶೋಧಮಾಡುವದರಲ್ಲಿ ತೊಡಗಿದಾಗಲೇ ಮೃತ್ಯುವಿನ ಬಾಯಿಯಲ್ಲಿ ಬಿದ್ದಿದ್ದಾರು"

ರಾಜಪುತ್ರಿಯು ಅಂದಳು— "ಸಂಸಾರದೊಳಗೆ ಉತ್ತಮಸ್ಥಿತಿ ಯಾವದೆಂಬವರ ಶೋಧವನ್ನು ಮಾಡುವದು ನನಗೆ ಈಗ ಏನೂ ಮಹತ್ವದ್ದೆನಿಸುವದಿಲ್ಲ. ಇನ್ನು ಮೇಲೆ ನಾನು ಮರಣದ ನಂತರ ಆಗುವ ಅನಂತ ಸುಖದುಃಖಗಳ ವಿಷಯಕ್ಕೆ ಮಾತ್ರ ವಿಚಾರಮಾಡುವೆನು."

ಆಮೇಲೆ ಅವರೆಲ್ಲರೂ ಆ ಪ್ರೇತಸ್ಥಾನವನ್ನು ಬಿಟ್ಟು ಹೊರಗೆ ಬಂದರು; ಮತ್ತು ರಾಹುತರೊಡನೆ ಸುರಕ್ಷಿತವಾಗಿ ಕೇರೋಪಟ್ಟಣಕ್ಕೆ ಬಂದು ಮುಟ್ಟಿದರು.

# ನಾಲ್ವತ್ತೊಂಬತ್ತನೆಯ ಭಾಗವು.

ಹೀಗಿರುವಾಗ ನೀಲ ನದಿಯು ತುಂಬಿ ಹೊರಚಲ್ಲುವ ಸಮಯವು ಒದಗಿತು. ಅವರು ಪ್ರೇಕ್ಷಸ್ಥಾನಗಳನ್ನು ನೋಡಿ ಕೇರೋಪಟ್ಟಣಕ್ಕೆ ತಿರುಗಿಬಂದು ಕೆಲವು ದಿವಸಗಳಾದ ಬಳಿಕ ನೀಲನದಿಯು ನೀರು ಏರಹತ್ತಿತು.

ಕೇರೋ ಪಟ್ಟಣದೊಳಗಿನ ಪ್ರದೇಶವೆಲ್ಲ ಜಲಮಯವಾಗಿ ಹೋದದರಿಂದ ಅವರಿಗೆ ಹೊರಗೆ ಹೋಗಲಿಕ್ಕೆ ಮಾರ್ಗವೇ ಕಟ್ಟಾಯಿತು; ಆದದರಿಂದ ಅವರು ಮನೆಯಲ್ಲಿಯೇ ಇರಬೇಕಾಯಿತು. ಆಗ ಅವರು ತಾವು ನೋಡಿದಂಥ ಭಿನ್ನ ಭಿನ್ನ ಸಂಸಾರಸ್ಥಿತಿಗಳಲ್ಲಿರುವ ಗುಣದೋಷಗಳನ್ನು ಒಂದಕ್ಕೊಂದು ಸರಿಹಚ್ಚಿ ನೋಡುವದರಲ್ಲಿಯೂ, ಭಾವೀ ಸುಖದ ಬಗ್ಗೆ ಹಂಚಿಕೆಗಳನ್ನು ಹಾಕುವದರಲ್ಲಿಯೂ ಹೊತ್ತುಗಳೆಯಹತ್ತಿದರು.

ಅರಬ ಸರದಾರನು ಪೇಕ್ಯೂಆ ಇವಳನ್ನು ಸೆಂಟ ಆಂಥೋನಿ ಎಂಬ ಮಠಕ್ಕೆ ಕರೆದುಕೊಂಡು ಬಂದು, ಆಕೆಯನ್ನು ರಾಜಪುತ್ರಿಯ ವಶಕ್ಕೆ ಕೊಟ್ಟನೆಂದು ಹಿಂದೆ ಹೇಳಿರುವದಷ್ಟೆ; ಆ ಮಠದಲ್ಲಿ ಕೆಲವು ಭಕ್ತಿನಿಷ್ಠರಾದ ಕನ್ನಿಕೆಯರಿಗೆ ಆಶ್ರಯಕೊಟ್ಟು, ತಾನು ಆ ಮಠಕ್ಕೆ ಅಧಿಕಾರಿಯಾಗಿ ಆನಂದದಿಂದ ಕಾಲ ಕಳೆಯಬೇಕೆಂದು ಆಕೆಯು ಬಯಸಹತ್ತಿದಳು. ಆಕೆ ನಿರರ್ಥಕವಾದ ಆಶೆಯನ್ನು ಬಿಟ್ಟುಕೊಟ್ಟಳು. ಸುಖದ ಬೆನ್ನುಹತ್ತಿ ಆಕೆ ತೀರ ಬೇಸತ್ತು ಹೋದದ್ದರಿಂದ ಯಾವದಾದರೊಂದು ನಿರಂತರ ಸಮಾಧಾನವನ್ನೀಯುವ ಸ್ಥಿತಿಯಲ್ಲಿ ದೇವರು ತನ್ನನ್ನು ಇಡಬೇಕೆಂದು ಆತನನ್ನು ಬೇಡಿಕೊಳ್ಳಲಾರಂಭಿಸಿದಳು.

ಜಗತ್ತಿನೊಳಗಿನ ಯಾವತ್ತು ವಸ್ತುಗಳಲ್ಲಿ ಜ್ಞಾನವೇ ಅತ್ಯುತ್ತಮವಾದದ್ದಿರುವದೆಂದು ರಾಜಪುತ್ರಿಗೆ ಕಂಡುಬಂತು. ತಾನು ಮೊದಲು ಯಾವತ್ತು ಶಾಸ್ತ್ರಗಳನ್ನು ಕಲಿತು, ಸ್ತ್ರೀಶಿಕ್ಷಣಕ್ಕೋಸ್ಕರ ಒಂದು ಶಿಕ್ಷಣಾಲಯವನ್ನು ಸ್ಥಾಪಿಸಿ ಆ ಶಿಕ್ಷಣಾಲಯಕ್ಕೆ ತಾನು ಅಧ್ಯಕ್ಷಳಾಗಿ, ವೃದ್ಧಸ್ತ್ರೀಯರ ಕೂಡ ಸಂಭಾಷಣ ಮಾಡಿ, ತರುಣ ಸ್ತ್ರೀಯರಿಗೆ ವಿದ್ಯಾದಾನವನ್ನು ಮಾಡಿ, ಜ್ಞಾನ ಸಂಪಾದನ ಮಾಡುವದರಲ್ಲಿಯೂ, ಜ್ಞಾನದಾನ ಮಾಡುವದರಲ್ಲಿಯೂ ತನ್ನ ಯಾವತ್ತು ವೇಳೆಯನ್ನು ವೆಚ್ಚಮಾಡಿ ತನ್ನ ಶಿಕ್ಷಣಾಲಯದಲ್ಲಿರುವ ಯಾವತ್ತೂ ಸ್ತ್ರೀಯರನ್ನು ಬುದ್ಧಿವಂತರನ್ನಾಗಿಯೂ ಭಕ್ತಿನಿಷ್ಠರನ್ನಾಗಿಯೂ ಮಾಡಿಬಿಡಬೇಕೆಂಬ ಉತ್ಕಟವಾದ ಇಚ್ಛೆಯು ಆಕೆಯ ಮನಸ್ಸಿನಲ್ಲಿ ಹುಟ್ಟಿತು.

ಒಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿ, ಆ ರಾಜ್ಯದ ಎಲ್ಲ ಕಾರಭಾರವನ್ ತಾನೇ ಮಾಡಬೇಕೆಂತಲೂ, ಆ ರಾಜ್ಯದ ಯಾವತ್ತು ಭಾಗಗಳನ್ನು ತನ್ನ (ಸ್ವಂತ ಕಣ್ಣುಗಳಿಂದಲೇ ನೋಡಬೇಕೆಂತಲೂ ರಾಜಪುತ್ರನು ಇಚ್ಛಿಸಿದನು. ಆದ ತನ್ನ ರಾಜ್ಯದ ಮೇರೆ ಇಂತಿಷ್ಟೆಂದೂ, ಪ್ರಜೆಗಳ ಸಂಖ್ಯೆ ಇಂತಿಷ್ಟೆಂದೂ ನಿಶ್ಚಿ ವಾಗಿ ಗೊತ್ತುಪಡಿಸುವದು ಅವನಿಂದಾಗಲೊಲ್ಲದು. [ಅವನು ತನ್ನ ರಾಜ್ಯ ಮೇರೆಯನ್ನೂ, ಪ್ರಜೆಗಳ ಸಂಖ್ಯೆಯನ್ನೂ, ಮೇಲಿಂದ ಮೇಲೆ ಹೆಚ್ಚಿಸುತ್ತಿದ್ದನು.

ಇಮ್ಲಾಕನೂ ಜ್ಯೋತಿಷಿಯೂ ತಾವು ಇಂಥಾದ್ದೊಂದು ನಿಯಮಿತವಾ ಸ್ಥಿತಿಯಲ್ಲಿರಬೇಕೆಂದು ಬಯಸದೆ [ಸೃಷ್ಟಿಯು ಕ್ರಮಕ್ಕನುಸರಿಸಿ ತಪ್ಪು ಸ್ಥಿತಿಯು ಆದದ್ದಾಗಲೆಂದು ತಿಳಿದು ಸುಮ್ಮನಿದ್ದರು.

ಅವರ ಮನಸ್ಸಿನೊಳಗೆ ಹುಟ್ಟಿದ ಕಲ್ಪನಾತರಂಗಗಳಲ್ಲಿ ಒಂದೂ ಪೂರ್ಣ ತೆಗೆ ಹೋಗುವ ಸಂಭವವಿಲ್ಲೆಂದು ಅವರು ಪೂರ್ಣ ಮನಗಂಡರು. ಅವರು ಇನ್ ಮುಂದೆ ಏನು ಮಾಡಬೇಕೆಂಬ ಬಗ್ಗೆ ಕೆಲವು ಹೊತ್ತು ವಿಚಾರಮಾಡಿ, ನೀ ನದಿಯ ಮಹಾಪೂರವು ಇಳಿದ ಬಳಿಕ ಮತ್ತೆ ಅಬಿಸೀನಿಯಾ ದೇಶಕ್ಕೆ ಹೋಗಬೆ ಕೆಂದು ನಿಶ್ಚಯಿಸಿದರು.

ಸಮಾಪ್ತ.

Printed by M. K. Joshi at the Karnatak Printing Works, Dharwar